D. K. B'S

STANDARD DICTIONARY

(COPIOUSLY ILLUSTRATED)

CONTAINING MORE THAN 40,000 WORDS AND REFERENCES
WITH IDIOMS AND TECHNICAL TERMS

ENGLISH - ENGLISH - KANNADA

Pronouncing and Explanatory with Compound Phrases, Colloquialisms, Words & Phrases from Latin, Greek and Modern Foreign Languages, Prefixes and Suffixes (for Word Building in High School Standards), Notable Names in Fiction, Legend and Mythology, Tables of Measures, Time, Numbers, Medical and Mathematical Signs and Symbols, Tables of Temperature, High Blood Pressure, forms for letters, Etc. Etc.

WITH GLOSSARY OF TECHNICAL TERMS

In the "New Indian Constitution," Politics, Radio & Electricity, Philosophy, Chemistry, Physics, Botany and Zoology.

COMPILED BY

LATE—D. K. BHARADVAJ, VAIDYAGURU

Reg. Medical Practitioner (BOMBAY)

REVISED BY

SRI G. SACHIDANANDAN, M.A., B.Sc.

Eighth Revised and Enlarged Edition in 1963

PUBLISHER:
B. G. SANKESHWAR
GADAG. (S. RLY.)
Branches:—HUBLI & BANGALORE.

PRINTED BY
T. K. Gopal Chetty & Sons
SREE KALANIDHI PRESS,
CHICKPET, BANGALORE CITY.

* * *

All Rights Reserved
by The Publisher

* * *

(Latest Authentic and
Revised Edition)

BY
Sri G. SACHIDANANDAN
M.A., B.SC.

* * *

EIGHTH REVISED &
ENLARGED EDITION

1963

* *

TRAL FOOD TECHNOLOGICAL RESEARCH INSTITU
LIBRARY

ಪರಿವರ್ಧಿತ ಮತ್ತು ಸಚಿತ್ರ ಎಂಟನೆಯ ಮುದ್ರಣ (೧೯೬೩)

ತಿದ್ದಿ ಬೆಳೆಸಿಪ ಏಳನೆಯ ಮುದ್ರಣದಲ್ಲಿ ಹೊಸದಾಗಿ ಸೇರಿಸಿದ ಸುಮಾರು 4,000 ಹೊಸಪದಗಳ ಜೊತೆಗೆ ಈ ಮುದ್ರಣದಲ್ಲಿ ಸುಮಾರು 3,500 ಹೊಸ ಪದಗಳನ್ನು ಸೇರಿಸಲಾಗಿದೆ. ಅದಲ್ಲದೆ ಇದನ್ನು ವಿದ್ಯಾರ್ಥಿಗಳಿಗೂ, ಭಾಷಾಬೋಧಕರಿಗೂ ಹೆಚ್ಚು ಉಪಯೋಗಿಯಾಗುವಂತೆ ಮಾಡಲು 800 ಕ್ಕಿಂತಲೂ ಹೆಚ್ಚು ಚಿತ್ರಗಳನ್ನು ಕೊಡಲಾಗಿದೆ. ಚಿತ್ರಗಳನ್ನು ಆರಿಸುವುವರಲ್ಲಿ ಅನೇಕ ಇಂಗ್ಲೀಷ್ ಮತ್ತು ಜರ್ಮನ್ ಭಾಷೆಯ ಸಚಿತ್ರ ನಿಘಂಟುಗಳಿಂದ ಸಹಾಯ ಪಡೆಯಲಾಗಿದೆ. ಈ ಕೋಶವನ್ನು ತಿದ್ದಿ ಬೆಳೆಸಲು ಸಹಾಯಮಾಡಿದ ಶ್ರೀ ಜಿ. ಸಚ್ಚಿದಾನಂರ್ದ ಎಂ.ಎ., ಬಿ.ಎ. (ಆನರ್ಸ್), ಬಿ.ಎಸ್‌ಸಿ. ಅವರಿಗೂ, ಚಿತ್ರಗಳನ್ನು ಅಂದವಾಗಿಯೂ, ಬಹಳ ಅಲ್ಪ ಕಾಲಾವಧಿಯಲ್ಲಿಯೂ ಬರೆದುಕೊಟ್ಟ ಶ್ರೀ ಹನಸೋಗೆ, ಅವರಿಗೂ ನಾನು ಕೃತಜ್ಞನಾಗಿದ್ದೇನೆ.

ಪುಸ್ತಕ ಮುದ್ರಣವಾಗುತ್ತಿದ್ದ ಮಧ್ಯದಲ್ಲಿ ಮುದ್ರಕರಾದ ಶ್ರೀ ಟಿ. ಕೆ. ಗೋಪಾಲಚೆಟ್ಟಿಯವರು ಅಕಸ್ಮಾತ್ತಾಗಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇನೆ. ಸರ್ವಶಕ್ತನಾದ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ ! ಅವರು ನಿಧನ ಹೊಂದಿದರೂ ಅವರ ಮಕ್ಕಳಾದ ಶ್ರೀ ಟಿ. ಜಿ. ರಾಘವೇಂದ್ರ ಅವರು ಧೈರ್ಯಗೆಡದೆ ಮುದ್ರಣ ಕಾರ್ಯವನ್ನು ಸಕಾಲಕ್ಕೆ ಮುಗಿಸಿಕೊಟ್ಟು ನಮಗೆ ಮಾಡಿದ ಉಪಕಾರ ಚಿರಸ್ಮರಣೀಯ.

ಗದಗ, ಬಿ. ಜಿ. ಸಂಕೇಶ್ವರ,
೧೦—೩—೧೯೬೩ ಪ್ರಕಾಶಕರು.

ತಿದ್ದಿ ಬೆಳೆಸಿದ ಆರನೆಯ ಮುದ್ರಣ (೧೯೫೦)

ಇದುವರೆಗೆ ಪ್ರಕಟವಾಗಿರುವ ಇದೇ ಬಗೆಯ ಬೇರೆ ಇಂಗ್ಲಿಷ-ಕನ್ನಡ ಕೋಶಗಳಿಗಿಂತ ಇದನ್ನು ವಿದ್ಯಾರ್ಥಿಗಳಿಗೆ, ಭಾಷಾಭ್ಯಾಸಿಗಳಿಗೆ ಹೆಚ್ಚು ಉಗಯೋಗಿಯಾಗುವಂತೆ ಮಾಡಬೇಕೆಂದು ನಮ್ಮ ಪ್ರಯತ್ನವು ನಡೆದಿರುವುದು, ಈ ನಿಘಂಟನ್ನು ಉಪಯೋಸುತ್ತಿರುವವರಿಗೆ ತಿಳಿದ ವಿಚಾರ. ತಿಳಿಯದವರು ಈ ನಿಘಂಟಿನಲ್ಲಿ Come, Do, Face ; Fall; Fly; Go, ಇತ್ಯಾದಿ ಪದಗಳಿಗೆ ನಾವು ಕೊಟ್ಟಿರುವ ಅರ್ಥಗಳನ್ನು ಇತರ ನಿಘಂಟಿನಲ್ಲಿರುವ ಅದೇ ಪದಗಳಿಗೆ ಕೊಟ್ಟಿರುವ ಅರ್ಥಗಳೊಂದಿಗೆ ಹೋಲಿಸಿ ನೋಡಿದರೆ ಅವರಿಗೆ ಇದರ ವೈಶಿಷ್ಟ್ಯವು ಸ್ಪಷ್ಟವಾಗಿ ವ್ಯಕ್ತವಾಗುವುದು.

ಭಾರತವು ಸ್ವತಂತ್ರವಾದ ಬಳಿಕ ಹೊಸರಾಜ್ಯಾಂಗ ನಿಯಮ ನಿರ್ಮಾಣವಾಯಿತು. ವಿಜ್ಞಾನದ ವಿವಿಧ ಶಾಖೆಗಳಲ್ಲಿ ಹಿಂದೀ ಮತ್ತು ಆಯಾ ಪ್ರಾಂತೀಯ ಭಾಷೆಗಳಲ್ಲಿಯೇ ಗ್ರಂಥಗಳನ್ನು ರಚಿಸಿ ಪ್ರಕಟಿಸುವ ಪ್ರಯತ್ನ ನಡೆಯಲಾರಂಭಿಸಿದೆ. ಅದಕ್ಕಾಗಿ ಅನೇಕ ಪಾರಿಭಾಷಿಕ ಪದಗಳು ನಮ್ಮ ದೈನಿಕ, ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳಲ್ಲಿ ಬರಲಾರಂಭಿಸಿವೆ. ಅದನು ಲಕ್ಷ್ಯದಲ್ಲಿಟ್ಟು ಈ ಮುದ್ರಣದಲ್ಲಿ ಸುಮಾರು ೨,೫೦೦ ಪಾರಿಭಾಷಿಕ ಪದಗಳಿಗೆ ಆಗುವ ಹೊಸ ಅರ್ಥಗಳನ್ನು ಕೊಡಲಾಗಿದೆ. ಭಾಷಾಭ್ಯಾಸಕ್ಕಾಗಿ ಇಂಗ್ಲಿಷ ಪತ್ರಿಕೆಗಳನ್ನು ಓದುವವರು, ಶಾಲೆಯ ವಿದ್ಯಾರ್ಥಿಗಳು ಮೊದಲಾದವರಿಗೆ ಅನುಕೂಲವಾಗುವಂತೆ, ನಿತ್ಯದ ಬಳಕೆಯಲ್ಲಿ ಬರುವ ರಾಜನೀತಿ, ರಸಾಯನ ಶಾಸ್ತ್ರ, ಆಕಾಶವಾಣಿ, ಭೌತಶಾಸ್ತ್ರ, ತತ್ವಶಾಸ್ತ್ರಾದಿಗಳ ಪಾರಿಭಾಷಿಕ ಪದಗಳನ್ನು ಆಯಾ ಶಾಸ್ತ್ರದ ಶೀರ್ಷಿಕೆಯಲ್ಲಿ ಪ್ರತ್ಯೇಕವಾಗಿ ಕೊನೆಯಲ್ಲಿ ಕೊಡಲಾಗಿದೆ. ಇದ

ಲ್ಲದೆ ನಿಘಂಟನ್ನು ತಿದ್ದುವಾಗ, ಕೆಲವು ಪದಗಳಿಗೆ ಹೊಸದಾಗಿ ಪ್ರಾಪ್ತವಾಗಿರುವ ಪಾರಿಭಾಷಿಕ ಅರ್ಥಗಳನ್ನು ಅಲ್ಲಲ್ಲಿ ಸೇರಿಸಲಾಗಿದೆ. ಇದರಿಂದ ಈ ನಿಘಂಟಿನಲ್ಲಿ ಈಗ ಸುಮಾರು ೨೮,೦೦೦ ಪದಗಳಿಗೆ ಅರ್ಥ ದೊರೆಯುವಂತಾಗಿರುವುದು. ಈ ವೈಶಿಷ್ಟ್ಯವನ್ನು ಪ್ರಕೃತಲ್ಲಿ ಕೇವಲ ನಮ „ಡಿ. ಕೆ. ಬಿ. ಸ್ಟಾಂಡರ್ಡ್ ಡಿಕ್‌ಷನರಿ” ಯಲ್ಲಿ ಮಾತ್ರ ಕಾಣಬಹುದು. ಕನ್ನಡಿಗರ ಪ್ರೋತ್ಸಾಹ ದೊರೆತಂತೆ ಈ ವೈಶಿಷ್ಟ್ಯವೂ ಸ್ಥಿರವಾಗಿ ಬೆಳೆಯುತ್ತ ಹೋಗುವುದೆಂದು ಪ್ರತ್ಯೇಕ ಹೇ ಬೇಕಾಗಿಲ್ಲ.

ಈ ನವೀನ ಮುದ್ರಣಕಾರ್ಯದಲ್ಲಿ ಸಹಕರಿಸಿದ ಚಿ|| ಡಿ. ಬಿ. ಹರೀಂದ್ರ, ಬಿ.ಎಸ್‌ಸಿ. ಬಿ. ಟಿ., ಅವರ ಉಪಕಾರ ಸ್ಮರಣೀಯ. ಬೇರೆ ಬೇರೆ ಪಾರಿಭಾಷಿಕ ಕೋಶಗಳ ಕರ್ತರಿಗೂ ನನ್ನ ವಂದನೆಗಳು.

೫—೭—೧೯೫೦

ಡಿ. ಕೆ. ಭಾರದ್ವಾಜ

ಐದನೆಯ ಮುದ್ರಣ

ಹಿಂದಿನ ಮುದ್ರಣವನ್ನು ಪರಿಶೋಧಿಸಿ ಮುದ್ರಿಸಿದ ಆವರ್ತನೆ ಇದು.

೨೧—೮—೧೯೪೯

ಡಿ. ಕೆ. ಭಾರದ್ವಾಜ

ನಾಲ್ಕನೆಯ ಮುದ್ರಣ

ಈ ಮುದ್ರಣದಲ್ಲಿ ಹಿಂದಿನ ಮುದ್ರಣದಲ್ಲಿ ಕಂಡುಬಂದ ಮುದ್ರಣದೋಷಗಳನ್ನು ತಿದ ಲಾಗಿದೆ. ಈ ಮುದ್ರಣದಲ್ಲಿ ಮುದ್ರಣದೋಷಗಳನ್ನು ತಿದ್ದಲು ನೆರವಾದ ಶ್ರೀ|| ಡಿ. ಬಿ ಹರೀಂದ್ರ, ಬಿ. ಎಸ್‌ಸಿ, ಆಯುರ್ವೇದಭಿಷಕ್, ಅವರಿಗೆ ವಂದನೆಗಳು ಸಲ್ಲಬೇಕಾಗಿವೆ. ಇದ ಮುದ್ರಣದಲ್ಲಿ ತೀವ್ರ ಆಸಕ್ತಿ ವಹಿಸಿ, ಅಂದವಾಗಿ ಮುದ್ರಿಸಿರುವ ಕಳಾನಿಧಿ ಪ್ರೆಸ್ಸಿನ ಪ್ರೊಪ್ರೈಟರ ಶ್ರೀ ಟಿ. ಕೆ. ಕೃಷ್ಣಸ್ವಾಮಿಶೆಟ್ಟರ ಮಗ ಶ್ರೀ ಟಿ. ಕೆ. ಆನಂದಶೆಟ್ಟರವರಿಗೂ ವಂದನೆಗಳ ಸಲ್ಲಬೇಕಾಗಿವೆ.

೩೧—೭—೧೯೪೮

ಡಿ. ಕೆ. ಭಾರದ್ವಾಜ

ಹೊಸ ಮುದ್ರಣ ಪರಿಚಯ

ಈ ಮೊದಲು ೧೯೪೦ ರಲ್ಲಿ ಕೇವಲ ೧೪,೦೦೦ ಇಂಗ್ಲಿಷ್ ಪದಗಳಿಗೆ, ೧೯೪೩ ರಲ್ಲಿ ಸುಮಾರು ೧೭,೦೦೦ ಇಂಗ್ಲಿಷ್ ಪದಗಳಿಗೆ ಇಂಗ್ಲಿಷ್‌ಮತ್ತು ಕನ್ನಡ ಅರ್ಥಕೊಡುವ ಡಿಕ್‌ಶನ ಗಳು ನನ್ನ ಸಂಪಾದಕತ್ವ ಮತ್ತು ಹೆಸರಿನಲ್ಲಿ ಇಬ್ಬರು ಪ್ರಕಾಶಕರಿಂದ ಪ್ರಕಟಿತವಾದವು. ಅದನ ತಿದ್ದಿ ಬೆಳೆಸುವ ಅಧಿಕಾರವನ್ನು ಸ್ವಲಾಭಕ್ಕಾಗಿ ಪ್ರಕಾಶಕರು ನನಗೆ ವಹಿಸಿಕೊಡಲಿಲ್ಲ. ನಿತ್ಯವೂ ಬೆಳೆಯುತ್ತಿರುವ ಸಾಹಿತ್ಯಕ ಮತ್ತು ವೈಜ್ಞಾನಿಕ ಪ್ರಪಂಚದಲ್ಲಿ ಸಾವಿರಾರು ಹೊಸ ಶಬ್ದಗಳ ಸಾಹಿತ್ಯದಲ್ಲಿ ಸೇರುತ್ತಲಿವೆ. ಅವುಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಸಂಗ್ರಹಿಸಿ, ಪ್ರತಿಮುದ್ರಣ ದಲ್ಲಿಯೂ ಸೇರಿಸಿ ತಿದ್ದಿ ಬೆಳೆಸುವ ಸ್ವಾತಂತ್ರ್ಯವಿರುವ ನಿಘಂಟನ್ನು ರಚಿಸಿ ವಿದ್ಯಾರ್ಥಿಗಳಿ ಹೆಚ್ಚು ಉಪಯುಕ್ತವಾಗಿ ಮಾಡಬೇಕೆಂಬ ನನ್ನ ಆಶೆಯು ಈ “ಸ್ಟಾಂಡರ್ಡ್ ಡಿಕ್‌ಶನರಿ ರೂಪ ತಾಳಿತು. ಇದರಲ್ಲಿ ೨೫,೦೦೦ ಪದಗಳಿಗೆ ಅರ್ಥ, ಸಾವಿರಾರು ಪದವೃಂದ (idioms ಗಳಿಗೆ ಆಗುವ ವಿವಿಧಾರ್ಥಗಳನ್ನೂ ಕೊಡಲಾಗಿದೆ. ಕ್ರಮೇಣ ಅದನ್ನು ಬೆಳೆಸುವ ಇಚ್ಛೆಯು ಇದೆ. ಆದ್ದರಿಂದ ಅಧಿಕೃತವಾಗಿ ನನ್ನಿಂದ ರಚಿತವಾದ ಈ “ಸ್ಟಾಂಡರ್ಡ್ ಡಿಕ್‌ಶನರಿಗೆ ಕನ್ನಡಿಗರು ಪ್ರೋತ್ಸಾಹವಿತ್ತರೆ ಕ್ರಮೇಣ ಇದರ ಆಕಾರವನ್ನೂ, ಶಬ್ದಸಂಗ್ರಹವನ್ನೂ ಬೆಳೆಸ ವೆನು. ಈ ಮುದ್ರಣದಲ್ಲಿ ೨೦೦ ಹೊಸಪದಗಳನ್ನೂ, ಅಂತ್ಯದಲ್ಲಿ ೨೫ ಪುಟ ಹೊಸ ವಿಷಯಗಳನ್ನೂ ಸೇರಿಸಿದೆ.

ಬಸವನಗುಡಿ, ಬೆಂಗಳೂರು.

ಡಿ. ಕೆ. ಭಾರದ್ವಾಜ

ಮೊದಲಮಾತು (ಮೊದಲ ಮುದ್ರಣ)

ಅನೇಕ ವರ್ಷಗಳಿಂದ "ಆಕ್ಸ್‌ಫರ್ಡ್" ಮತ್ತು "ಛೇಂಬರ್ಸ್" ಡಿಕ್ಷನರಿಗಳ ಮಾರ್ಗದಲ್ಲಿ ಇಂಗ್ಲಿಷ್ ಭಾಷಾಭ್ಯಾಸಿಗಳು ಮತ್ತು ಶಾಲೆಯ ವಿದ್ಯಾರ್ಥಿಗಳಿಗಾಗಿ ಒಂದು ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟನ್ನು ಬರೆಯಬೇಕೆಂಬ ಬಯಕೆ ಇದ್ದಿತು. ಬಂಡವಾಳಗಾರರ ಮತ್ತು ಶ್ರಮಜೀವಿಗಳ ನಿತ್ಯ ಸಂಗ್ರಾಮದಲ್ಲಿ ಶ್ರಮಜೀವಿಯ ಬಯಕೆಯು ನೆರವೇರುವುದು ಸುಲಭಸಾಧ್ಯವಲ್ಲವೆಂಬುದು ಲೇಖಕ ವರ್ಗದವರಿಗೆ ತಿಳಿಯದ ವಿಚಾರವಲ್ಲ. ಬಂಡವಾಳದ ಪ್ರಭಾವದಿಂದ ಶ್ರಮಜೀವಿಗೆ ಭವ್ಯವಾದ ಭವಿಷ್ಯತ್ತಿನ ಆಶೆಯನ್ನು ತೋರಿ, ತನಗೆ ಬೇಕಾದ ರೀತಿಯಲ್ಲಿ ದುಡಿಸಿಕೊಂಡು, ತನ್ನ ಕಾರ್ಯವು ಕೈಗೂಡಿದ ಬಳಿಕ ಆ ಶ್ರಮಜೀವಿಯ ಕೈಬಿಡುವುದು ನಮ್ಮ ದೇಶದ ಬಂಡವಾಳದ ಪ್ರಭುತ್ವದವರ ಸ್ವಭಾವವಾಗಿದೆ. ಆದ್ದರಿಂದ ಅಂಥ ಕೃತಿಗಳನ್ನು ತಿದ್ದಿ ಬೆಳಿಸಿ, ಅದರ ಅಭಿವೃದ್ಧಿಯನ್ನು ನೋಡುವ ಸುಯೋಗವು ಈ ನಿಘಂಟುಕಾರನಿಗೆ ಇಂದು ದೊರೆತು ಈ "ಇಂಗ್ಲಿಷ್-ಇಂಗ್ಲಿಷ್-ಕನ್ನಡ ಸ್ಟಾಂಡರ್ಡ್ ಡಿಕ್ಷನರಿ"ಯು ಇತರ ಪ್ರಸಿದ್ಧ ಇಂಗ್ಲಿಷ್-ಇಂಗ್ಲಿಷ್ ನಿಘಂಟುಗಳ ಕ್ರಮವನ್ನನುಸರಿಸಿ ಹೊರಬಿದ್ದಿರುವುದು. ಇದರ ಮುಂದಿನ ಮುದ್ರಣಾವರ್ತನೆಗಳನ್ನೆಲ್ಲಾ ತಿದ್ದಿ, ಹೆಚ್ಚು ವಿಷಯಗಳಿಂದ ಬೆಳೆಸಿ ಅದು ವಿದ್ಯಾರ್ಥಿವರ್ಗಕ್ಕೆ ಹೆಚ್ಚು ಹೆಚ್ಚು ಉಪಯುಕ್ತವಾಗುವಂತೆ ಮಾಡುವ ಪೂರ್ಣ ಸ್ವಾತಂತ್ರ್ಯವನ್ನು ಈ ನಿಘಂಟುಕಾರನೆ ಕಾದಿಟ್ಟುಕೊಂಡಿರುವನು. ಈ ದೃಷ್ಟಿಯಿಂದ ಕನ್ನಡಿಗರ ಪ್ರೋತ್ಸಾಹವು ದೊರೆತಂತೆ, ಈ ನಿಘಂಟಿನ ರೂಪವು ಕ್ರಮೇಣ ದೊಡ್ಡದಾಗುತ್ತ ಹೋಗುವುದೆಂದು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಮೂಲ ಸ್ವಾತಂತ್ರ್ಯವನ್ನು ಲೇಖಕನಿಗೆ ಉಳಿಸಿಕೊಟ್ಟಿರುವ ಹುಬ್ಬಳ್ಳಿ ಶ್ರೀ ಬಸವೇಶ್ವರ ಬುಕ್ ಡಿಪೋ ಮಾಲೀಕರಾದ ಶ್ರೀ ಬಿ. ಜಿ. ಸಂಕೇಶ್ವರ ಅವರಿಗೆ ಈ ಲೇಖಕನು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಾಗಿದೆ.

ಸುಪ್ರಸಿದ್ಧ "ಆಕ್ಸ್‌ಫರ್ಡ್ ಇಂಗ್ಲಿಷ್-ಇಂಗ್ಲಿಷ್" ನಿಘಂಟಿನಿಂದ, ವಿದ್ಯಾರ್ಥಿಗಳಿಗೆ ಅವರ ನಿತ್ಯಪಾಠದಲ್ಲಿ ಬರುವ ಸುಮಾರು ೨೪,೦೦೦ ಇಂಗ್ಲಿಷ್ ಪದಗಳನ್ನಾರಿಸಿ ಪದಗಳಿಗೆ ಮತ್ತು ಆ ಪದಗಳನ್ನು ಬೇರೆ ಪದಗಳೊಂದಿಗೆ ಸೇರಿಸಿ ಆಗುವ ಇಂಗ್ಲಿಷ್ ಪದವೃಂದಗಳಿಗೆ (idioms) ಆಗುವ ವಿವಿಧಾರ್ಥಗಳನ್ನು ಇಂಗ್ಲಿಷಿನಲ್ಲಿ ಮತ್ತು ಕನ್ನಡದಲ್ಲಿ ಆಯಾ ಪದಗಳ ಮುಂದೆಯೇ ಕೊಡಲಾಗಿದೆ. ಹೈಸ್ಕೂಲುಗಳ ಐದನೆಯ ಫಾರಂ ಮತ್ತು ಆರನೆಯ ಸ್ಟ್ಯಾಂಡರ್ಡ್ ತರಗತಿಯಲ್ಲಿ ವಿಧಿಸಿರುವ ಪದರಚನೆಯ ಪಾಠಕ್ಕೆ ಅನುಕೂಲಿಸುವಂತೆ, ಇದರಲ್ಲಿ ಆದಿಪ್ರತ್ಯಯ, ಅಂತ್ಯಪ್ರತ್ಯಯಗಳ (prefixes and suffixes) ದೊಡ್ಡ ಪಟ್ಟಿಯನ್ನೂ ಉದಾಹರಣೆಗಳ ಸಹಿತ ಕೊಡಲಾಗಿದೆ. ಪ್ರಸಿದ್ಧ ಪಾಶ್ಚಾತ್ಯ ಕಾದಂಬರಿ, ಕಥೆ, ಪುರಾಣಗಳಲ್ಲಿ ಬರುವ ಹೆಸರುಗಳ ಸಂಕ್ಷಿಪ್ತ ಪರಿಚಯವನ್ನೂ ಇಂಗ್ಲಿಷ್ ಲೇಖಕರಲ್ಲಿ ಸಾಮಾನ್ಯ ಬಳಕೆಯಲ್ಲಿರುವ ಲ್ಯಾಟಿನ್, ಗ್ರೀಕ್, ಫ್ರೆಂಚ್, ಜರ್ಮನ್, ಇಟಾಲಿಯನ್ ಪದಗಳ ಮತ್ತು ನಾಣ್ಣುಡಿಗಳ ಅರ್ಥಗಳನ್ನೂ, ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆನಿಸಿರುವ ವಿವಿಧ ತೂಕ, ಅಳತೆ, ಕಾಲ, ಗಣಿತಶಾಸ್ತ್ರ ವೈದ್ಯಶಾಸ್ತ್ರಗಳ ಸಂಕೇತಗಳ ವಿವರಣೆ ಮೊದಲಾದವುಗಳನ್ನೂ ಕೊನೆಯಲ್ಲಿ ಕೊಡಲಾಗಿದೆ. ಕನ್ನಡಿಗರಿಂದ ಇದಕ್ಕೆ ಪ್ರೋತ್ಸಾಹ ದೊರೆತಂತೆ ಇದನ್ನು ಹೆಚ್ಚು ಉಪಯುಕ್ತವಾಗುವಂತೆ ಮಾಡಲೆತ್ನಿಸುವೆನು. ಇದಕ್ಕಾಗಿ ಶಿಕ್ಷಕವರ್ಗದವರಿಂದ, ತಜ್ಞರಿಂದ ಬರುವ ಸೂಕ್ತ ಸಲಹೆಗಳನ್ನು ಅತ್ಯಾದರದಿಂದ ಸ್ವೀಕರಿಸಲಾಗುವುದು.

ಈ ನಿಘಂಟಿನ ಹಸ್ತಪ್ರತಿಯನ್ನು ತಯಾರಿಸಲು ಉತ್ಸಾಹದಿಂದ ನೆರವಾದ ಶ್ರೀ ಕೆ. ಎಸ್. ಶ್ರೀಕಂಠಶಾಸ್ತ್ರಿ, ಡಿ. ಬಿ. ಹರೀಂದ್ರ, ಶ್ರೀ ಕೆ. ಕೆಸ್. ಶಾಂತಾದೇವಿ, ಶ್ರೀ ಡಿ. ಬಿ. ವಸಂತಾದೇವಿ ಇವರುಗಳ ಸಹಾಯವು ಸ್ಮರಣೀಯವಾಗಿದೆ. ಅದರಂತೆ ನಾನು ಉಪಯೋಗಿಸಿಕೊಂಡಿರುವ "ಆಕ್ಸ್‌ಫರ್ಡ್" "ಚೇಂಬರ್ಸ್" "ಮೆಕ್‌ಮಾರ್ಡೀಸ್ ಈಡಿಯಮ್" "ಡಿಕ್‌ಶನರಿ ಆಫ್ ಫ್ರೇಜಸ್ ಎಂಡ್ ಫೇಬಲ್ಸ್" ಮೊದಲಾದ ವಿವಿಧ ಇಂಗ್ಲಿಷ್ ನಿಘಂಟು ಕರ್ತರುಗಳಿಗೆ ನನ್ನ ವಂದನೆಗಳು ಸಲ್ಲಬೇಕಾಗಿದೆ.

ಯುದ್ಧದ ದೆಸೆಯಿಂದ ಮುದ್ರಣ, ಬೈಂಡಿಂಗ್, ಕಾಗದಾದಿಗಳ ಬೆಲೆಯು ಒಂದಕ್ಕೆ ನಾಲ್ಕರಷ್ಟು, ಆರರಷ್ಟು ಏರಿದರೂ, ಸಾಧ್ಯವಿಲ್ಲದಷ್ಟು ಸುಲಭ ಬೆಲೆಯಲ್ಲಿಯೇ ಈ ಪುಸ್ತಕ ದೊರೆಯುವಂತೆ ಮಾಡಿರುವ ಪ್ರಕಾಶಕ ಶ್ರೀ ಬಿ. ಜಿ. ಸಂಕೇಶ್ವರ ಅವರಿಗೆ ಕನ್ನಡಿಗರು ಕೃತಜ್ಞರಾಗಿರಬೇಕಾಗಿದೆ. ಯುದ್ಧಶಾಸನ ಕಾರಣದಿಂದ ನಮಗೆ ಸರ್ಕಾರದವರಿಂದ ದೊರೆತ ಬಣ್ಣದ ಕಾಗದದಲ್ಲಿಯೇ ಇದನ್ನು ಮುದ್ರಿಸಬೇಕಾಗಿ ಬಂದುದರಿಂದ ನಾಡಿನವರು ಕ್ಷಮಿಸುವರೆಂದು ನಂಬಲಾಗಿದೆ.

ಇತಿ

ಬಸವನಗುಡಿ, ಬೆಂಗಳೂರು
೨–೧೦–೧೯೪೪

ಕನ್ನಡಿಗರಡಿಯಾಳು,
ಡಿ. ಕೆ. ಭಾರದ್ವಾಜ.

ಶಿಕ್ಷಕರಿಗೆ ಸೂಚನೆ

ಪ್ರಪಂಚದ ಪ್ರತಿಯೊಂದು ಭಾಷೆಯೊಳಗಿನ ಶಬ್ದಗಳಲ್ಲಿ ಸಿದ್ಧ ಮತ್ತು ಸಾಧಿತಎಂಬೆರಡು ಮುಖ್ಯ ಭೇದಗಳಿರುವುವು. ಇತರ ಶಬ್ದದಿಂದ ಹುಟ್ಟದೆ ತಾವೇ ಸಿದ್ಧವಾದವುಗಳು ಸಿದ್ಧಶಬ್ದಗಳು. ಇವಕ್ಕೆ ಬೇರೆ ಬೇರೆ ಪ್ರತ್ಯಯಗಳು ಹತ್ತಿ ಹುಟ್ಟುವ ಹೊಸ ಶಬ್ದಗಳು ಸಾಧಿತ ಶಬ್ದಗಳು. ಹೊಸ ಶಬ್ದಗಳನ್ನು ಸಿದ್ಧಮಾಡುವ ಕ್ರಮಕ್ಕೆ ಶಬ್ದರಚನೆ (word building) ಎಂದು ಹೆಸರು. ಹೈಸ್ಕೂಲ್ ತರಗತಿಗಳಲ್ಲಿ ಈ ಪದರಚನೆಯ ಕ್ರಮವನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು. ಅದಕ್ಕಾಗಿ ಈ ನಿಘಂಟಿನಲ್ಲಿ ಕೊನೆಯ ಆದಿಪ್ರತ್ಯಯ ಮತ್ತು ಅಂತ್ಯಪ್ರತ್ಯಯಗಳ ಪಟ್ಟಿಯನ್ನು ಕೊಡಲಾಗಿದೆ.

ವಿದೇಶೀಯ ಅಕ್ಷರ ಮತ್ತು ಪದಗಳ ಉಚ್ಚಾರಣೆಗಳನ್ನು ಸರಿಯಾದ ಕನ್ನಡ ಅಕ್ಷರಗಳಿಂದ ತಿಳಿಸುವುದು ಕಷ್ಟವಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಸ್ವರಗಳೆನಿಸಿಕೊಂಡಿರುವ A, E, I, O, U. ಮತ್ತು W, Y ಎಂಬಕ್ಷರಗಳಿಗೆ ಸಂದರ್ಭಾನುಸಾರ ಬೇರೆಬೇರೆ ಉಚ್ಚಾರಣೆಗಳುಂಟಾಗುವುವು. ಆದ್ದರಿಂದ ಹೊಸದಾಗಿ ಕಲಿಯುವವರಿಗೆ ಸಾಧಾರಣ ಕಲ್ಪನೆಯಾದರೂ ಆಗಬೇಕೆಂದು ಈ ನಿಘಂಟಿನಲ್ಲಿ ಕನ್ನಡ ಉಚ್ಚಾರಣೆಗಳನ್ನು ಕೊಡುವ ಪ್ರಯತ್ನ ಮಾಡಲಾಗಿದೆ. ಅದಕ್ಕಾಗಿ A ಮತ್ತು O ಗಳ ಉಚ್ಚಾರದಲ್ಲಿ ಸಂದರ್ಭಾನುಸಾರ ಉಂಟಾಗುವ ಬದಲಾವಣೆಯನ್ನು ಸೂಚಿಸುವುದಕ್ಕಾಗಿ ಅ, ಆ, ಎಂಬ ಸಂಕೇತಗಳನ್ನು ಉಪಯೋಗಿಸಲಾಗಿದೆ. ಇವುಗಳಲ್ಲಿ "ಆ" ಮತ್ತು "ಓ" ಗಳ ಮಧ್ಯ ಧ್ವನಿಯ ಉಚ್ಚಾರಣೆಯುಂಟಾಗುತ್ತದೆ. ಉದಾಹರಣೆ "Cat" ಎಂಬುದನ್ನು "ಕೇಟ್" ಎಂದು ಅಥವಾ "ಕ್ಯಾಟ್" ಎಂದು ಉಚ್ಚರಿಸದೆ "ಕಾಟ್" ಎಂದು ಉಚ್ಚರಿಸಬೇಕು.

ನಮ್ಮ ದೇಶದ ವಿವಿಧ ಪ್ರಾಂತೀಯ ಪ್ರಭೇದಾನುಸಾರವಾಗಿ ಇಂಗ್ಲಿಷ್ ಸಂಯುಕ್ತಾಕ್ಷರಗಳನ್ನು ಉಚ್ಚರಿಸುವ ವಿಧಾನಗಳನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ. ಈ ನಿಘಂಟಿನಲ್ಲಿ ಸಾಮಾನ್ಯ ಉಚ್ಚಾರಣೆಯನ್ನು "ಆಕ್ಸ್‌ಫರ್ಡ್ ಡಿಕ್ಶನರಿ"ಗೆ ಅನುಸಾರವಾಗಿ ಮುದ್ರಿಸಲಾಗಿದೆ. ಬೇಕಾದವರು ಇವುಗಳಲ್ಲಿ ಬೇಕಾದ ಉಚ್ಚಾರಣೆಯನ್ನು ಆರಿಸಿಕೊಳ್ಳಬಹುದು.

ವಿಷಯ ಸೂಚಿಕೆ

ಮುನ್ನುಡಿ ... . (iii)
ಶಿಕ್ಷಕರಿಗೆ ಸೂಚನೆ .... (vi)
ಸಂಯುಕ್ತಾಕ್ಷರ ಉಚ್ಚಾರ .... (vii)
ಈ ನಿಘಂಟಿನಲ್ಲಿ ಉಪಯೋಗಿಸಿರುವ ಸಂಕೇತಗಳು .... (viii)
Dictionary ಇಂಗ್ಲಿಷ್–ಇಂಗ್ಲಿಷ್-ಕನ್ನಡ ನಿಘಂಟು .... 1—960
Prefixes with copious examples 968
Suffixes ,, ,, ... 969
Words & Phrases from Latin; Greek and Modern Foreign Languages 978
List of Abbreviations 988
Tables of different weights 994
,, ,, measures 995
Metric measures & weights (in British terms) 996
Sizes of paper & books 998
Circular & Angular measure 998
Principal moneys of the world 999
Roman Numerals 1000
Mathematical signs.... 1000
Symbols used in Medicine & Pharmacy 1000
Tables of temperature, height, blood-pressure, etc. 1002
Goods, Scriptures, &c., of different Religions 1003
Forms for ordinary letters 1004
Technical Terms in Indian Constitution 1006
,, ,, Politics 1016
,, ,, Radio & Electricity 1019
,, ,, Philosophy 1022
,, ,, Mathematics 1029
,, ,, Chemistry 1034
,, ,, Physics 1039
,, ,, Botany 1046
,, ,, Zoology 1049
Idioms and Phrases.... 1054

ಸಂಯುಕ್ತಾಕ್ಷರಗಳ ಉಚ್ಚಾರ

au=ಆ (maul) ay=ಎ (say) ea; ee=ಈ (mean, meet), oa=ಓ (Boat) ey=ಇ (donkey) ture=ಚರ್, ಟ್ಯೂರ್, oi, y, ie, ಅಯ್, ಐ, ಆಇ, ow, ou, ಅಉ, ಔ, wh, v, ವ್ಹ, ai, ಏಯ್, ಏ sion, tion ಷನ್, ಶನ್, rh ರ್ಹ, ರ 'sion' as in vision ಝನ್, ಜ್ಹನ್.

ಕೆಲವು ಪದಗಳಿಗೆ ಅರ್ಥಕೊಡುವಾಗ"...............ಂತೆ ಇರುವ" ಎಂದಿರುವೆಡೆಗಳಲ್ಲಿ ಚುಕ್ಕಿಗಳ ಬದಲಾಗಿ ವಾಕ್ಯಾರ್ಥಕ್ಕನುಗುಣವಾಗಿ ಬೇರೆ ಪದಗಳನ್ನು ಸೇರಿಸಿಕೊಳ್ಳಬೇಕು. "ಪುನಃಬರು,—ಆಗಮಿಸು"ಎಂದು ಗೀಟುಹಾಕಿರುವೆಡೆಗಳಲ್ಲಿ "ಪುನಃ"ಎಂಬ ಪದವನ್ನು ಸೇರಿಸಿ ಓದಿಕೊಳ್ಳಬೇಕು. ಅದರಂತೆಯೇ ವಿವಿಧ ವ್ಯಾಕರಣ ರೂಪಗಳನ್ನೂ ಪದಗಳ ವಿವರಣೆಯನ್ನೂ ಅಂತ್ಯದಲ್ಲಿ ಕೊಡಲಾಗಿದೆ. ಉದಾ—"Intimate-tion" ಎಂದು ಕೊಟ್ಟಿರುವೆಡೆಯಲ್ಲಿ ನಾಮ ಪದರೂಪವು tion ಎಂದಿರುವಲ್ಲಿ Intimation ಎಂದಾಗುವುದು ಎಂದು ತಿಳಿಯಬೇಕು.

ಈ ನಿಘಂಟಿನಲ್ಲಿ ಉಪಯೋಗಿಸಿರುವ ಸಂಕೇತಾಕ್ಷರಗಳು

a,a., adjective (s)
abbr/eviation
act/ive
adj/ective
adv/orb
alg/ebra
anal/ogy
anat/omy
arch/aic
archaeol/ogy
arith/metic
astro/nomy
astrol/ogy
attrib/utive
bibl/ical
biol/ogy
boh/emian
bot/any
c/entenary
chem/istry
coll/ectively
colloq/uial(ly)
conj/unction
contempt/uously
n. nn. noun (s)
naut/ical
nav/al
nom/inative
pl/ural
poet/ical
pol/itics
crick/et
deriv/ative
dial/ect
dim/inutive
diplom/acy
dynam/ics
E/nglish
eccl/esiastical
electr/icity
eth/ics
ety/mology
euphem/ism
ex/ample
fem/inine
geo/graphy
geol/ogy
geom/etry
his/tory
inde/clinable
int/erjection
interrog/ative
irreg/ular
i. & t. intransitive & transitive
prep/osition
pron/oun
pros/ody
usu/ally
ult/imately
v. vv. verb (s)
v. aux.verb auxiliary
joc/ose/ular
lit/eral (ly)
log/ic
math/ematics
mech/anics
med/icine
metaph/orical
metaphy/sics
metrology
mil/itary
min/eralogy
mod/ern
mus/ic
mytho/logy
epi/cs
philos/ophy
photog/raphy
phys/ics
physiol/ogy
sl/ang
tr/ansitive
tech/nical
theol/ogy
t. & i. transitive intransitive
v. impers/verb impersonal
vi.verb intransitive
voc/ative
vulg/ar
yd. yds./yard (s)
zool/ogy

ENGLISH - ENGLISH - KANNADA

STANDARD DICTIONARY

A

1 (ಎ, ಅ) The first letter and vowel in the English and most other alphabets. ಇಂಗ್ಲಿಷ್ ಮತ್ತು ಇತರ ಅನೇಕ ವರ್ಣಮಾಲೆಗಳ ಮೊದಲನೇ ಅಕ್ಷರ ಮತ್ತು ಸ್ವರ.

2 (ಎ) n. as a note in music, is the major Sixth of the Scale of C. " ಧ ", ಸಪ್ತಸ್ವರಗಳಲ್ಲಿ ಆರನೆಯದು.

3 An, (ಎ, ಅನ್) n. one but no matter which. (ಯಾವುದಾದರೂ) ಒಂದು, ಒಬ್ಬ, ಒಬ್ಬಾನೊಬ್ಬ.

1 (ಎಒನ್) a. of first rate. ಅತ್ಯುತ್ತಮ, ಶ್ರೇಷ್ಠ.

4 (ಎ) (as a prefix) against. ವಿರೋಧಾರ್ಥದಲ್ಲಿ. as atheist, apathy. ಕ್ರಿಯಾಸೂಚಕ. in the act of doing something (asinging, adoing, agoing).

5 (ಅ) prep. (as a prefix) in, on, as asleep, afield, twice aday, afoot. ಮೇಲೆ,-ಲ್ಲಿ. (See prefixes in the end).

ard'vark (ಆರ್ಡ್‌ವಾರ್ಕ್) African ant-bear. ಆಫ್ರಿಕಾ ದೇಶದ ಕರಡಿ.



Aardvark.

ard'wolf (ಆರ್ಡ್‌ವುಲ್ಫ್) n. the " Earth wolf " of South Africa. ಆಫ್ರಿಕಾಖಂಡದ ತೋಳ.

Aaron (ಏ ರಾ ನ್) n. the first high priest of the Jews. ಯೆಹೂದ್ಯರ ಪ್ರಧಾನ ಪುರೋಹಿತ.

Aaron'ic(ಅರಾನಿಕ್)a.of the Jewish high priest. ಯೆಹೂದಿ ಪುರೋಹಿತನ.

Aaron's beard (ಅರನ್ಸ್ ಬಿಅರ್ಡ್)n. species of plants grown in pots. ಕುಂಡಗಳಲ್ಲಿ ಬೆಳೆಸುವ ಒಂದು ರೀತಿಯ ಸಸ್ಯಗಳು.

A'aronsrod (ಅರನ್ಸ್‌ರಾಡ್) n. a rod having one serpent twined round it cut out in stone on the front of a building. ವಿಘ್ನನಿವಾರಕ ಹಾವುಗೋಲು.

Ab (ಅಬ್) n. eleventh month of the Jewish year. ಯೆಹೂದ್ಯರ ವರ್ಷದ ಹನ್ನೊಂದನೆಯ ತಿಂಗಳು.

Aba (ಅಬಾ) n. woollen cloth of Syria. ಸಿರಿಯಾ ದೇಶದ ಉಣ್ಣೆಯವಸ್ತ್ರ.

Abaca (ಅಬಾಕಾ) n. The hemp of manilla. ಫಿಲಿಫೈನ್ಸ್ ದ್ವೀಪದ ಮನಿಲ್ಲಾ ನಗರದ ಸಣಬು.

Aback' (ಅಬಾಕ್)adv.(on back)by surprise, behind. ಹಠಾತ್ತಾಗಿ, ಹಿಂದಕ್ಕೆ. be taken aback, be taken by surprise. ಆಶ್ಚರ್ಯಚಕಿತನಾಗು, ವಿಸ್ಮಯಗೊಳ್ಳು, ಬೆರಗಾಗು, ಬೆಚ್ಚು.

Abaction (ಅಬಾಕ್ಷನ್) n. stealing of a number of cattle at one time. ಒಂದೇಸಾರಿ ಅನೇಕ ದನಗಳನ್ನು ಕಳುವಿಕೆ.

Ab'acus (ಅಬಾಕಸ್) (pl. Abaci) a counting frame. ಲೆಕ್ಕದ ಮಣಿ ಚೌಕಟ್ಟು.



Abacus

Abaddon (ಅಬೆಡಾನ್) n. hell, the devil. ಪಾತಾಳ, ನರಕ, ಪಿಶಾಚಿ.

Abaft' (ಅಬಾಫ್ಟ್) adv. and prep. behind, in stern part of ship. ಹಿಂದುಗಡೆ, ಹಡಗಿನ ಹಿಂದೆ.

Abalone (ಆಬೆಲೋನ್) n. shell from which mother of pearl is made. ಮುತ್ತಿನ ಚಿಪ್ಪು.

Aban'don (ಅರ್ಬಾರ್ಡ) vt. give up, forsake. ಬಿಟ್ಟುಬಿಡು, ತೊರೆ. n. carelessness, freedom from manners, ಸ್ವಚ್ಛಂದ. a·oneself to, give oneself up to (feeling). ವಶನಾಗು.

Aban'doned (ಅರ್ಬಾರ್ಡಡ್) a. given up entirely in vice, very wicked, forsaken. ದುರ್ಮಾರ್ಗಿ, ಅಡಿಭಂಡ, ಭ್ರಷ್ಟ, ಪರಿತ್ಯಕ್ತ, ಹೀನ.

Abandonee(ಅಬಾಂಡನೀ) n. underwriter to whom a shipwreck has been abandoned. ಹಡಗುಗಳ ವಿಮಾ ವ್ಯಾಪಾರಿ.

Aban'donment (ಅರ್ಬ್ಯಾರ್ಡಮೆಂಟ್) n. state of being given up, complete surrender of self. ಪರಿತ್ಯಾಗ, ವಶನಾಗೋಣ, ಆತ್ಮೋತ್ಸರ್ಗ. abandonment of worldly connections. ವಿರಕ್ತಿ, ಸನ್ಯಾಸ, ಆತ್ಮಾರ್ಪಣೆ.

Abase' (ಅಬೇಸ್) vt. cast down, to humble. ಕಡೆಗಣಿಸು, ಹೀನೈಸು, ನಾಚಿಸು, ತಗ್ಗಿಸು, ಅವಮಾನಪಡಿಸು.

Abase'ment (ಅಬೇಸ್‌ಮೆಂಟ್) n state of humiliation. ಮಾನಭಂಗ, ಅವಮಾನ.

Abash' (ಅಬಾಷ್)vt. give a feeling of shame to. ನಾಚಿಕೆಗೊಳಿಸು, ನಾಚಿಸು

Abashed' (ಅಬಾಶ್ಡ್) a. confused with shame or fear, disconcerted. ಲಜ್ಜಿತ, ನಾಚಿದ.

Abash'ment (ಅಬಾಶ್‌ಮೆಂಟ್) n confusion from shame or fear ನಾಚಿಕೆ, ಲಜ್ಜೆ, ಮುಖ ಮುರಿಯುವಿಕೆ.

Abask (ಅಬಾಸ್ಕ್)a. in warm light ಬಿಸಿಲು ಕಾಯಿಸಿಕೊಳ್ಳುತ್ತ.

Abatable (ಅಬೇಟಬ್‌ಲ್) a. able t be reduced. ಕಡಿಮೆ ಮಾಡಲು ಆಗುವ

Abate' (ಅಬೇಟ್) vt. i. make, ge less ; (law) put a stop to. ಕಡಿಮೆ ಮಾಡು, ಕಡಿಮೆಯಾಗು, ತಗ್ಗಿಸು, ಕಡೆಗಣಿಸು, ನಿಲ್ಲಿಸು, ಉಡುಗು, ಹಿಂಗು.

Abate'ment (ಅಬೇಟ್‌ಮೆಂಟ್) n reduction; decrease, ಕಡಮೆಯಾಗುವುದು, ಇಳಿಯುವಿಕೆ, ತಗ್ಗುವಿಕೆ.

Ab'atis, **Abattis** (ಅಬಟಿಸ್)n. rampart of trees felled. ಮರಗಳ ಬೇಲಿ

Abattoir (ಅಬಟ್ವಾರ್) n. a publi slaughter-house. ಕಸಾಯಿಖಾನೆ, ಪಶ ಗಳನ್ನು ಆಹಾರಕ್ಕಾಗಿ ವಧಿಸುವ ಮನೆ.

Aba'ture (ಅಬಟೂರ್) n. trail of beast which is chased. ಬೇ ಮೃಗದ ಹೆಜ್ಜೆ ಜಾಡು.

Abb (ಅಬ್) n. woof or weft yarn ನೇಯ್ಗೆಯುವನ ಹಾಸು ಅಥವಾ ಹೊಕ್ಕು.

Ab'ba (ಆಬಾ) n. father. ಅಪ್ಪ, ತಂದೆ

Abba'cy (ಆಬಸಿ) n. position of a abbot. ಮಠಾಧಿಕಾರಿ, ಮಠಾಧಿಪತ್ಯ.

Abbatial (ಅಬೇಷಲ್)a. pertainin to an abbey. ಮಠ ಸಂಬಂಧಿ.

Ab'be (ಅಬೆ) n. see abb'ey.

Abbe'ss (ಅಬೆಸ್) n. a lady who is head of a convent. ಮಹಂತೆ, (ಮಠ) ವಿಹಾರಪಾಲಿಕೆ, ಮಠಾಧಿಕಾರಿಣಿ.

Abb'ey (ಅ ಬೆ) n house, buildings of order of religion ; great church. (ಕ್ರೈಸ್ತ ವಿರಕ್ತರ) ಮಠ, ದೊಡ್ಡ ವಿಹಾರ.



Abbey

Abb'ot (ಅಬಟ್) n. the head of a monastery. ಮಠಾಧಿಕಾರಿ, ಮಠಪತಿ.

Abbre'viate (ಅ ಬ್ರೀ ವಿ ಏ ಟ್) vt. shorten, make brief ಸಂಕ್ಷೇಪಿಸು, ಕಿರಿದುಮಾಡು, ಸಂಕೇತಾಕ್ಷರದಲ್ಲಿ ಬರೆ.

Abbrev'iation (ಅಬ್ರೀವಿಏಶನ್) n. shortened form. ಸಂಕೇತಾಕ್ಷರ.

Abbre'viator (ಅಬ್ರೀವಿಏಟರ್) n. one who shortens. ಸಂಕ್ಷೇಪಿಸುವವ.

Abbreviature (ಅಬ್ರೀವಿಏಚರ್) n. shortening, contraction. ಸಂಕ್ಷೇಪ, ಕಡಿಮೆ ಮಾಡಿದುದು.

A. B. C. (ಎ.ಬಿ.ಸಿ.) n. the alphabet ; an elementary book. ವರ್ಣಮಾಲೆ, ಓನಾಮಮಾಲೆ, ಬಾಲಬೋಧೆ.

Abdal (ಅ ಬ್ ಡ ಲ್) n. a dervish. ದರವೇಶ.

Abderian (ಅಬ್ಡರಿಯನ್) a. given to laughter. ನಗಿಸುವ.

Abdicant (ಅಬ್ಡಿಕ್ಯಾಂಟ್)a. renouncing. ತ್ಯಾಗಮಾಡುವ.

Ab'dicate (ಅಬ್ಡಿಕೇಟ್) vt. i give up formally office or dignity, ಅಧಿಕಾರ (ಹಕ್ಕು) ಬಿಟ್ಟುಬಿಡು, ರಾಜ್ಯ ತ್ಯಜಿಸು.

Ab'dication (ಅಬ್ಡಿಕೇಶನ್)n formal renunciation. ರಾಜ್ಯ ತೊರೆಯುವುದು, ಸಿಂಹಾಸನತ್ಯಾಗ, ಪದವಿತ್ಯಾಗ.

Ab'dicator (ಅಬ್ಡಿಕೇಟರ್) n. one who renounces formally; abdicant. ಸಿಂಹಾಸನ ತ್ಯಾಗ ಮಾಡುವವ.

Abdiel (ಅಬ್ಡಿಯೆಲ್) n. God's servant, angel. ದೇವದೂತ, ಈಶ್ವರಾನುಚರ.

Abditory (ಅಬ್ಡಿಟರಿ) n. a place or box where valuables are kept. ತಿಜೋರಿ, ಬೆಲೆಬಾಳುವ ವಸ್ತುಗಳ ಸಂಗ್ರಹಸ್ಥಳ.

Abdomen (ಅಬ್ಡೋಮೆನ್) n. belly, the viceral cavity. ಹೊಟ್ಟೆ, ಉದರ, ಜಠರ.

Abdo'minal (ಅ ಬ್ಡಾ ಮಿ ನ ಲ್) a. relating to abdomen. ಹೊಟ್ಟೆಯ, ಉದರದ, ಜಠರ ಸಂಬಂಧಿ.

Abdominous (ಅ ಬ್ಡೋ ಮಿ ನ ಸ್) a. potbellied. ಡೊಳ್ಳುಹೊಟ್ಟೆಯ, ಕಪದೇಹವುಳ್ಳ.

Abduce (ಅಬ್ಡ್ಯೂಸ್) vt to separate one part from another. ಒಂದು ಭಾಗವನ್ನು ಇನ್ನೊಂದು ಭಾಗದಿಂದ ಬೇರ್ಪಡಿಸು.

Abducent (ಅಬ್ಡ್ಯೂಸೆಂಟ್) a. having the property of drawing away. ಹಿಂದಕ್ಕೆ ಎಳೆಯುವ ಶಕ್ತಿಯುಳ್ಳ, ಆಕರ್ಷಕ.

Abduct' (ಅಬ್ಡಕ್ಟ್) vt. take away by force or fraud. ಅಪಹರಿಸು, ಅಸಾಮಿ ಕಳವುಮಾಡು

Abduc'tion (ಅಬ್ಡಕ್ಶನ್) n. the carrying away, esp of a person by fraud or force. (ಅಸಾಮಿ) ಅಪಹರಣ.

Abduc'tor (ಅಬ್ಡಕ್ಟರ್) n. one guilty of abduction. ಅಪಹರಿಸುವವ, ಮನುಷ್ಯ ಚೋರ, ಅಪಹಾರಕ.

Abeam (ಅ ಬೀ ಮ್) adv. on the abreast. ಹಡಗಿನ ಉದ್ದಕ್ಕೆ, ಹಡಗಿನ ಎದೆ ಸಮನಾಗಿ.

Abeced'arian (ಏಬಿಸಿಡೇರಿಯನ್) a. rudimentary. ಪ್ರಾಥಮಿಕ, ಪ್ರಾರಂಭದ.

n. beginner. ಓನಾಮ ಕಲಿಯುವವನು.

Abed′ (ಅಬೆಡ್) adv. in bed. ಹಾಸಿಗೆಯಲ್ಲಿ, ರೋಗದಿಂದ ಮಲಗಿರುವ.

Aberrance (ಅಬರೆನ್ಸ್) n. deviation from right path. ಸನ್ಮಾರ್ಗದಿಂದ ಸ್ಖಲನ.

Aberrate (ಅಬೆರೇಟ್) vi. to wander from the right path. ದಾರಿತಪ್ಪು, ಅಲೆದಾಡು.

Aberra′tion (ಅ̆ಬೆರೇಶನ್) n. deviation from the right path. ನೀತಿಮಾರ್ಗತ್ಯಾಗ; ಅಪಗತಿ, ಪದಭ್ರಷ್ಟತೆ. a. of mind. ಚಿತ್ತಭ್ರಮೆ, ಬುದ್ಧಿಭ್ರಮಣೆ.

Abe′rrant (ಅಬರೆಂಟ್) a. wandering from the right path. ದಾರಿತಪ್ಪಿದ.

Abet′ (ಅಬೆಟ್) vt. to help in evil things. (ಕೆಟ್ಟ ಕೆಲಸಕ್ಕೆ) ನೆರವಾಗು; ದುರ್ಬೋಧಿಸು, ಚಿತಾವಣೆ ಮಾಡು.

Abet′ment (ಅಬೆಟ್‌ಮೆಂಟ್) n. act of abetting, ದುರ್ಬೋಧನೆ, ಚಿತಾವಣೆ.

Abett′or (ಅಬೆಟ್ಟರ್) n. one who abets. ಕೆಟ್ಟಕೆಲಸಮಾಡಲು ನೆರವಾದವನು.

Abey′ance (ಅಬೆಅನ್ಸ್) n. a state of suspension. ಮುಂದಕ್ಕೆ ತಳ್ಳುವುದು, ಅಮಾನತ, ಸದ್ಯಕ್ಕೆ ಹಾಗೆ ಇಡೋಣ; ತಡೆಗಡೆ.

Abhor′ (ಅಬ್‌ಹಾರ್) vt. have feeling of hate or disgust for. ಹೇಸು, ಹೇವರಿಸು, ರೋಸು, ಅಸಹ್ಯಪಡು.

Abho′rrence (ಅಬ್‌ಹಾರೆನ್ಸ್) n. very great hatred. ಅಸಹ್ಯ, ತಿರಸ್ಕಾರ, ದ್ವೇಷ, ಹೇವರಿಕೆ, ಹೇಸಿಕೆ.

Abho′rrent (ಅಬ್ಹಾರೆಂಟ್) a. hateful, loathsome. ಅಸಹ್ಯ, ಹೇಯ, ತಿರಸ್ಕರಣೀಯ, ಹೇಸಿಗೆಯ.

Abib (ಆಬಿಬ್) n. first month of the Jewish year. ಯೆಹೂದ್ಯರ ವರ್ಷದ ಮೊದಲನೆಯ ತಿಂಗಳು.

Abide (ಅಬೈಡ್) vt. wait for; dwell; submit to. ನಿರೀಕ್ಷಿಸು, ನೆಲಸು, ವಾಸವಾಗಿರು; ಸೇರಿಸು. a. by, act according to. ಅಂಗೀಕರಿಸು, ಅದರಂತೆ ನಡೆದುಕೊಳ್ಳು.

Ab′iding (ಅಬೈಡಿಂಗ್) a. continual, ನಿರಂತರ, ಶಾಶ್ವತ; ಸ್ಥಿರ, ನೆಲೆಯಾದ.

Ab′igail (ಅಬಿಗೇಲ್) n. a lady's maid. ದಾಸಿ, ಸೈರಂಧ್ರಿ, ಹುಡುಗಿ.

Ab′ili′ty (ಅ̆ಬಿಲಿಟಿ) n. quality of being able, power, cleverness. ಸಾಮರ್ಥ್ಯ, ಜಾಣತನ, ಶಕ್ತಿ, ದಕ್ಷತೆ, ಅಳವು. pl. powers of the mind. ಧೀಶಕ್ತಿ, ಚಿಚ್ಛಕ್ತಿ.

Abiogenesis (ಅಬಯೊಜೆನೆಸಿಸ್) n. spontaneous generation. ಆಕಸ್ಮಿಕ ಜನ್ಮ, ನಿರ್ಜೀವ ವಸ್ತುವಿನಿಂದ ಜೀವವಸ್ತುವಿನ ಜನ್ಮ.

Abiogenetic (ಅಬಯೋಜನೆಟಿಕ್) a. pertaining to spontaneous generation. ಆಕಸ್ಮಿಕ ಜನ್ಮಸಂಬಂಧಿ.

Abiological (ಅಬಯೊಲಾಜಿಕಲ್) a. pertaining to lifeless objects, ನಿರ್ಜೀವ ವಸ್ತುಗಳ ವಿಷಯಕ್ಕೆ ಸಂಬಂಧಿಸಿದ.

Ab′ject (ಅ̆ಬ್‌ಜೆಕ್ಟ್) a. mean, very low, worthless. ನೀಚ, ಕುಗ್ಗಿದ, ಹೀನ.

Ab′jection (ಅ̆ಬ್‌ಜೆಕ್ಷನ್) n. meanness of spirit; low state. ನೀಚತನ, ಕೀಳುತನ, ತುಚ್ಛತೆ, ಹೀನತನ.

Ab′jectly (ಅ̆ಬ್‌ಜೆಕ್ಟ್ಲೀ) adv. meanly. ಹೀನವಾಗಿ, ದೈನ್ಯದಿಂದ; ಕೀಳಾಗಿ.

Abjudicate (ಅಬ್ಜೂಡಿಕೇಟ್) vt. to give away by judgment from one to another. ನ್ಯಾಯ ತೀರ್ಮಾನ ಮಾಡಿ ಒಬ್ಬನಿಂದ ಇನ್ನೊಬ್ಬನಿಗೆ ಕೊಡಿಸು.

Abjura′tion (ಅ̆ಬ್‌ಜೂರೇಶನ್) n. official renunciation on oath of any principle. ಶಪಥಪೂರ್ವಕ ತ್ಯಾಗ.

bjure′ (ಅಬ್‌ಜೂರ್) vt. renounce on oath. ಪ್ರಮಾಣಮಾಡಿ ತ್ಯಾಗಮಾಡು.

bkari (ಅಬ್ಕಾರಿ) n. pertaining to intoxicating liquors. ಮಾದಕದ್ರವ್ಯಗಳಮೇಲೆ ಹಾಕುವ ಸುಂಕ.

blactate (ಅ̆ ಬ್ ಲಾ̆ ಕ್ಟೇ ಟ್) vt. to wean away from the breast. ತಾಯಿಯ ಸ್ತನ್ಯಪಾನವನ್ನು ಬಿಡಿಸು.

blactation (ಅ̆ಬ್‌ಲಾ̆ಕ್ಟೇಷನ್) n. weaning away from the mother. ತಾಯಿಯ ಸ್ತನ್ಯಪಾನವನ್ನು ಬಿಡಿಸುವುದು.

blation (ಅಬ್ಲೇಷನ್) n. removal of any part of the body. ಶರೀರದ ರೋಗಹತ್ತಿದ ಭಾಗವನ್ನು ತೆಗೆದುಹಾಕು.

b′lative (ಅ̆ಬ್‌ಲೇಟಿವ್) a. & n. case in nouns expressing agent, &c. ಪಂಚಮೀ ವಿಭಕ್ತಿ, (ಇಂದ, ದೆಸೆಯಿಂದ).

blaut (ಅಬ್ಲಾಟ್) n. vowel gradation. ಸ್ವರ ವ್ಯತ್ಯಯ.

blaze′ (ಅಬ್ಲೇಜ್) a. on fire, burning. excited. ಉರಿಯುವ, ಜಗಜಗಿಸುವ; (ಕೋಪದಿಂದ) ಉದ್ರೇಕಗೊಂಡ.

′ble (ಏಬ್‌ಲ್) a. skilful; having strength, capable. ಸಮರ್ಥ, ಜಾಣ, ಶಕ್ತ, ಕಾರ್ಯಧುರಂಧರ. a. bodied. ಸಬಲ, ಸಶಕ್ತ, ಗಟ್ಟಿಗ. n. ನಾವಿಕ, ಕಲಾಸಿ.

blegate (ಅಬ್ಲಿಗೇಟ್) vt. to send away. ಕಳುಹಿಸಿಬಿಡು.

blu′tion (ಅಬ್ಲೂಶನ್) n. ceremonial washing. ಶುಚಿಸ್ನಾನ, ಮಜ್ಜನ, ಪ್ರಕ್ಷಾಲನ, ಆಹ್ನಿಕ; ಸಂಪ್ರೋಕ್ಷಣೆ.

bluvion (ಅಬ್‌ಲೂವಿಯನ್) n. that which is washed off. ತೊಳೆದು ಹೊರಗೆ ಹಾಕಿದ ಪದಾರ್ಥ.

′bly (ಏಬ್ಲಿ) adv. in an able way. ಸಾಮರ್ಥ್ಯದಿಂದ, ಜಾಣತನದಿಂದ.

b′negate (ಅ̆ಬ್ನಿಗೇಟ್) vt. deny; renounce. ಅಲ್ಲಗಳೆ, ನಿರಾಕರಿಸು; ತೊರೆ. abnegation· n. denial. ನಿರಾಕರಣೆ.

Abnor′mal (ಅ̆ಬ್ನಾರ್ಮಲ್) a. irregular; not normal. ವಿಪರೀತ, ಉತ್ಕಟ, ಹದಗೆಟ್ಟ, ಅತಿರೇಕ, ಅಸಾಮಾನ್ಯ, ಅಕ್ರಮದ.

Aboard′ (ಅಬೋರ್ಡ್) adv. & prep. on board; in train or ship or aeroplane, &c. ಹಡಗಿನಲ್ಲಿ, ರೈಲಿನಲ್ಲಿ, ವಿಮಾನದಲ್ಲಿ.

Abod′e (ಅಬೋಡ್) n. pt. & pp. of abide, dwelling place; home. ವಾಸಸ್ಥಾನ, ನಿವಾಸ, ಮನೆ, ಬೀಡು, ನೆಲೆ.

Aboil (ಅಬಾಯಿಲ್) adv. boiling with rage. ಅತ್ಯಂತ ಕುಪಿತನಾಗಿ.

Abol′ish (ಅ̆ಬಾಲಿಶ್) vt. put an end to; annul. ತೆಗೆದುಹಾಕು, ನಿಲ್ಲಿಸಿಬಿಡು.

Abol′ition(ಅ̆ಬಾಲಿಶನ್) n. the doing away with· ತೆಗೆದುಹಾಕೋಣ, ರದ್ದುಮಾಡೋಣ.

Aboli′tionist(ಅ̆ಬಾಲಿಶನಿಸ್ಟ್) n. one who wishes to do away with esp. slavery. ದಾಸತ್ವವಿರೋಧಿ.

Abom′inable (ಅ̆ಬಾಮಿನೆಬ್‌ಲ್) a. detestable, disgusting. ಅಸಹ್ಯ, ಹೊಲಸು, ಹೇಯ, ಅವಲಕ್ಷಣದ.

Abom′inate (ಅ̆ ಬಾ ಮಿ ನೇ ಟ್) vt. loathe, abhor. ಅಸಹ್ಯಪಡು, ಹೇಸು, ಜುಗುಪ್ಸೆಪಡು.

Abom′ination (ಅ̆ಬಾಮಿನೇಶನ್) n. extreme aversion. ಅಸಹ್ಯ, ಹೇಸಿಕೆ.

Aboral (ಅಬೋರಲ್) adj. remote from the mouth. ಮುಖದಿಂದ ದೂರವರ್ತಿಯಾದ.

Abori′ginal (ಅ̆ಬೊರಿಜಿನಲ್) n. indigenous, earliest. ಮೂಲ, ಆದಿಮ.

Abori′gines (ಅ̆ಬೊರಿಜಿನೀಸ್) n. plu. original inhabitants of a country. ದೇಶದ ಮೂಲನಿವಾಸಿಗಳು.

Abort' (ಅಬಾರ್ಟ್) vi. to miscarry in birth, have premature delivery of child. ಹಲಿವಿಳಿ, ಗರ್ಭಸ್ರಾವವಾಗು, ಮೈ ಇಳಿ, ಕುರುಟಿಹೋಗು.

Abor'tion (ಅಬಾರ್ಶನ್) n. miscarriage, untimely birth, failure. ಹಲಿವಿಳಿಕೆ, ಗರ್ಭಸ್ರಾವ, ಗರ್ಭಪಾತ.

Abor'tive (ಅಬಾರ್ಟಿವ್) a. premature, unsuccessful, useless. ಅಕಾಲದ, ವ್ಯರ್ಥ, ನಿರರ್ಥಕ, ಅತಂತ್ರ, ಭಗ್ನ, ನಿಷ್ಫಲ.

Aboulia (ಅಬೌಲಿಯ) n.loss of will power. ಇಚ್ಛಾಶಕ್ತಿಯ ನಾಶ.

Abound' (ಅಬೌಂಡ್) vi. overflow, be or have in great, plenty. ವೆಗ್ಗಳಿಸು, ಹೆಚ್ಚು, ತುಂಬಿರು, ಹೆಚ್ಚಾಗಿರು, ನೆರೆ.

About' (ಅಬೌಟ್) adv. nearly, approximately. ಸರಿಸುಮಾರು, ಅಜಮಾಸ. pre. around, near, concerning. ಸುತ್ತಮುತ್ತ, ಹತ್ತಿರ, ಅತ್ತಿತ್ತ ಸಂಬಂಧಿಸಿದ, ಕುರಿತು.

Above' (ಅಬವ್) adv. overhead, in addition to. ಮೇಲೆ, ಮೇಲಕ್ಕೆ, ಹೆಚ್ಚಿನ. prep. over. ಮೇಲೆ. a. board, without fraud, frank. ಪ್ರಕಟವಾಗಿ, ಠಕ್ಕಿಲ್ಲದೆ, ಸ್ಪಷ್ಟ. a. all chiefly. ಮುಖ್ಯವಾಗಿ. over and a., in excess of. ಹೆಚ್ಚಾಗಿ, ಅಧಿಕವಾಗಿ, ಮಿತಿಮೀರಿ.

Abracadabra (ಅಬ್ರಕಡಬ್ರ) n. a magic spell. ಮಾಟದ ಮಂತ್ರ.

abracadabra
abracadabr
abracadab
abracada
abracad
abraca
abrac
abra
abr
ab
a
abracadabra

Abrade' (ಅಬ್ರೇಡ್) vi. injure by rubbing, scrape off. ಕೆರೆದುಬಿಡು, ಉಜ್ಜಿ (ತಿಕ್ಕಿ) ಸವೆಸು, ಗೀರು, ತೇಯು.

Abra'sion (ಅಬ್ರೇಜ್ಞನ್) n. a scratch produced by rubbing. ಗೀರಿದ ಗುರುತು, ಕೆರೆದ ಗಾಯ, ಸವೆತ, ಉಜ್ಜು ಗಾಯ.

Abra'sive (ಅಬ್ರೇಸಿವ್) n. something used for rubbing or polishing (e.g.emery paper) ಉಜ್ಜುಗೊರಡು, ಉಜ್ಜು ಕಾಗದ, ಮರಳುಕಾಗದ.

Abreast' (ಅಬ್ರೆಸ್ಟ್) adv. side by side, on a level and equally advanced. ಜೋಡಿಯಾಗಿ, ಅಡ್ಡಸಾಲಾಗಿ, ಸಮಸಮವಾಗಿ, ವರಸೆಯಾಗಿ.

Abreavoir (ಅಬ್ರುವಾರ್) n. watering place for animals. ದನಕರುಗಳಿಗೆ ನೀರುಕುಡಿಸುವ ಸ್ಥಳ.

Abridge' (ಅಬ್ರಿಡ್ಜ್) vt. shorten, cut off, condense. ಸಂಕ್ಷೇಪಮಾಡು, ಕಿರಿದುಮಾಡು, ಕಡಿಮೆಮಾಡು.

Abri'dgement (ಅಬ್ರಿಜ್‌ಮೆಂಟ್) n. summary, shortening, cutting off ಸಂಕ್ಷೇಪ, ಕ್ರೋಢೀಕರಣ, ಸಾರಾಂಶ.

Abroach (ಅಬ್ರೋಚ್) adv. pierced for liquor to run. ದ್ರವಪದಾರ್ಥವು ಹರಿಯುವುದಕ್ಕೆ ರಂಧ್ರಮಾಡಿದ.

Abroad' (ಅಬ್ರಾಡ್) adv. out of doors, public, in another country. ಹೊರಗೆ, ಪರದೇಶದಲ್ಲಿ.

Abro'gate (ಅಬ್ರೊಗೇಟ್) vt. annul, repeal, abolish, cancel. ರದ್ದುಮಾಡು, ನಿವರ್ತಿಸು, ಕಿತ್ತುಹಾಕು, ವಜಾಮಾಡು.

Abrogation (ಅಬ್ರೊಗೇಶನ್) n. act of repealing. ರದ್ದು ಮಾಡುವುದು, ನಿವರ್ತನೆ, ನಿರಸನ, ಉಚ್ಛೇದ.

Abrogative (ಅಬ್ರೋಗೇಟಿವ್) a. repealing. ರದ್ದುಮಾಡುವ.

Abrupt' (ಅಬ್ರಪ್ಟ್) a. sudden, craggy, broken, steep. ಆಕಸ್ಮಿಕ, ಅಸಂಬದ್ಧ, ಕಡಿದಾದ.

Abrupt'ly (ಅಬ್‌ರಪ್ಟ್ಲಿ) adv. suddenly. ಒಮ್ಮಿಂದೊಮ್ಮೆ, ಅಕಸ್ಮಾತ್ತಾಗಿ.

Abruptness (ಅಬ್ರಪ್ಟ್‌ನೆಸ್) n. suddenness. ಹಠಾತ್ತತೆ, ಆಕಸ್ಮಿಕತ್ವ.

Ab'scess (ಅಬ್‌ಸೆಸ್) n. collection of diseased mattter in the body, a boil. ಹುಣ್ಣು, ವ್ರಣ, ಬಾವು, ಕುರು.

Abscind' (ಅ̆ಬ್‌ಸಿಂಡ್) vt. cut off. ವಿಂಗಡಮಾಡು, ಕತ್ತರಿಸು, ವಿಚ್ಛೇದಿಸು.

Abscissa (ಅಬ್ಸಿಸ) n. portion of a line intercepted between fixed point within it and ordinate drawn to it. ಭುಜ, ಕ್ಷಿತಿಜ, ದೂರ.

Abscission (ಆಬ್‌ಸಿಷನ್) n. cutting off, violent separation. ಛೇದನ, ಕತ್ತರಿಸಿ ಹಾಕುವುದು.

Abscond' (ಅ̆ಬ್‌ಸ್ಕಾಂಡ್) vt. go away secretly, to fly from the law. ಓಡಿಹೋಗು, ಪರಾರಿಯಾಗು, ಅವಿತುಕೊಳ್ಳು, ತಪ್ಪಿಸಿಕೊಂಡುಹೋಗು.

Absconder (ಅಬ್‌ಸ್ಕಾಂಡರ್) n. one who runs away. ಪರಾರಿಯಾದವನು.

Ab'scence (ಅ̆ಬ್‌ಸೆನ್ಸ್) n. being away, non-existence; inattention. ಅನುಪಸ್ಥಿತಿ, ಇಲ್ಲದಿರುವಿಕೆ, ಗೈರುಹಾಜರಿ, ಅಭಾವ.

Ab'sent(ಅ̆ಬ್‌ಸೆಂಟ್)a. not present, being away. ಬಾರದಿರುವ,ಅನುಪಸ್ಥಿತ.

Absent' (ಅಬ್‌ಸೆಂಟ್) v. keep away purposely. ಬೇಕೆಂತಲೇ ತಪ್ಪಿಸಿಕೊ, ಬಾರದಿರು.

Absentee' (ಅ̆ಬ್ಸೆಂಟೀ) n. person not present. ಬಾರದಿರುವವನು, ಸ್ಥಳದಲ್ಲಿರದವನು, ಅನುಪಸ್ಥಿತ.

Absent-minded(ಅ̆ಬ್ಸೆನ್ಟ್-ಮೈನ್ಡೆಡ್) adj. not attentive, forgetful. ಮರೆಯುವ, ಅನ್ಯಮನಸ್ಕ, ಶೂನ್ಯಮನಸ್ಕ.

Ab'sinth (ಅ̆ಬ್‌ಸಿಂತ್) n. worm wood, liquor made from this. ವೃಕ್ಷವಿಶೇಷ; ಅದರಿಂದಾಗುವ ಮಾದಕ ದ್ರವ್ಯ.

Absolute (ಅ̆ಬ್ಸೊಲೂಟ್) a. entire, perfect; not limited by laws or rules; despotic. ಪೂರ್ಣ, ನಿರ್ಬಂಧವಿಲ್ಲದ, ನಿರವಲಂಬ, ನಿರಂಕುಶ, ಅಂಕೆಯಿಲ್ಲದ.

Absolu'tion (ಅ̆ಬ್ಸೊಲ್ಯೂಶನ್) n. forgiveness, declaration of pardon. ಕ್ಷಮೆ, ಪಾಪ ವಿಮೋಚನೆ, ನಿರ್ವಾಣ, ಬಿಡುಗಡೆ, –ist. ನಿರಂಕುಶ ಪ್ರಭುತ್ವವಾದಿ.

Absolve' (ಅ̆ಬ್ಸಾಲ್ವ್) vt.acquit, set free; pardon. ಪಾಪಮುಕ್ತ ಮಾಡು, ಕ್ಷಮಿಸು,ಮನ್ನಿಸು,ಉದ್ಧರಿಸು, ಮೋಚಿಸು.

Absonant (ಅ̆ಬ್ಸೊನಂಟ್)a. discordant, unreasonable. ದುಶ್ರಾವ್ಯ, ಅಸಂಗತ.

Absorb' (ಅ̆ಬ್ಸಾರ್ಬ್) vt. take in; take up the whole attention, incorporate. ಶೋಷಿಸು, ಹೀರು, ಇಂಗು, ಅಸಕ್ತನಾಗು, ಲೀನನಾಗು.

Absorb'ent (ಅಬ್ಸಾರ್ಬೆಂಟ್) a. drinking in. ಹೀರುವ, ಶೋಷಣಮಾಡುವ. n. that which absorbs. ಹೀರುವಂಥಾದ್ದು, ಶೋಷಕ, ಲೀನಕಾರಿ.

Absorp'tion (ಅಬ್ಸಾರ್ಪ್‌ಶನ್) n. the act of absorbing; entire occupation of mind. ಶೋಷಣ,ತಲ್ಲೀನತೆ, ತತ್ಪರತೆ, ಮಗ್ನತೆ, ಹೀರಿಕೊಳ್ಳುವುದು.

Abstain' (ಅ̆ಬ್ಸ್ಟೇನ್) vi.keep oneself away. ವರ್ಜಿಸು, ತೊಲಗು, ದೂರವಿರು,ನಿವೃತ್ತನಾಗು. n. abstainer.

Abste'mious (ಅಬ್‌ಸ್ಟೀಮಿಯಸ್) a. sparing in food, drink or enjoyments. ಮಿತಾಹಾರಿ, ಮಿತಭೋಜಿ, ಹಾಳಿತವಾದ.

Abste'miousness (ಅಬ್‌ಸ್ಟೆಮಿಯಸ್‌ನೆಸ್) the quality of being temperate in one's food habits. ಮಿತಾಹಾರ, ಮಿತಭೋಜನ.

Absten'tion (ಅಬ್‌ಸ್ಟೆನ್‌ಶನ್) n. a holding back. ವರ್ಜನೆ,(ಪಾನ)ತ್ಯಾಗ.

Absterge (ಅಬ್‌ಸ್ಟರ್ಜ್) vt. to purify, to purge. ಶುಚಿಮಾಡು, ತೊಳೆದುಬಿಡು.

Abstergent (ಅಬ್‌ಸ್ಟರ್ಜೆಂಟ್) n. purifier, cleanser. ಶುಚಿಕಾರಕ, ವಿರೇಚಕ.

Ab'stinence (ಅಬ್‌ಸ್ಟಿನೆನ್ಸ್) n. refraining from food. ಲಂಘನ, ನಿರಶನ.

Abstinent (ಅಬ್‌ಸ್ಟಿನೆಂಟ್)adj. fasting. of temperate habits. ಸಂಯಮಶೀಲ, ಉಪವಾಸಮಾಡುವ.

Ab'stract (ಅಬ್‌ಸ್ಟ್ರಾಕ್ಟ್)a not concrete; ideal. ಗಹನ, ಪ್ರಯೋಗ ಸಿದ್ಧವಲ್ಲದ. n. a summary. ಸಾರಾಂಶ vt. draw away, separate. ಸಾರಾಂಶತೆಗೆ, ಬೇರ್ಪಡಿಸು, ಸೇರಿಸದಿರು.

Abstracte'd (ಅಬ್‌ಸ್ಟ್ರಾಕ್ಟೆಡ್) a. not attentive, absent in mind. ಶೂನ್ಯಚಿತ್ತ, ಅನ್ಯಮನಸ್ಕ.

Abstrac'tion (ಅಬ್‌ಸ್ಟ್ರಾಕ್‌ಶನ್) n. taking away, absence of mind; stealing. ಶೂನ್ಯಚಿತ್ತ, ಅಮನಸ್ಕ, ಕಳವು.

Abstriction (ಅಬ್‌ಸ್ಟ್ರಿಕ್‌ಶನ್) n. act of undoing. ಕಳಚುವುದು, ಬಿಚ್ಚುವುದು.

Abstruse'(ಅಬ್‌ಸ್ಟ್ರೂಸ್)a.not clear, difficult to understand. ಗೂಢ, ಗುಪ್ತ, ಗಹನ, ಕ್ಲಿಷ್ಟ, ದುರಜ್ಞೇಯ.

Absurd' (ಅಬ್ಸರ್ಡ್) a. unreasonable, silly, ridiculous. ಹುಚ್ಚು ಹುಚ್ಚಾದ, ಅನರ್ಥಕ, ಬಾಲಿಶ.

Absurd'ity (ಅಬ್‌ಸರ್‌ಡಿಟಿ) n. silly act, absurd statement. ಅಸಬದ್ಧತೆ, ಅಬದ್ಧಕಂತೆ.

Abun'dance (ಅಬಂಡನ್ಸ್) n. mor than enough, plenty. ಹೆಚ್ಚು, ರಾಶಿ ಹೇರಳ, ಸಮೃದ್ಧಿ.

Abun'dant (ಅಬಂಡೆಂಟ್)a. ample plentiful. rich. ಧಾರಾಳ, ಹೆಗ್ಗಳ ಧಂಡಿ, ವಿಶೇಷ.

Abun'dantly (ಅಬಂಡಂಟ್ಲಿ) adv plentifully. ಧಾರಾಳವಾಗಿ, ಹೇರಳವಾಗಿ.

Abuse' (ಅಬ್ಯೂಜ್)vt. make wron use of; violate. ಬೈಯು, ದುರು ಯೋಗ ಮಾಡು.

Abuse' (ಅಬ್ಯೂಜ್) n. misuse; insulting language, reproach. ದುರುಪಯೋಗ, ನಿಂದೆ, ಬಯ್ಗುಳು, ದೂಷಣೆ.

Abu'sive (ಅಬ್ಯೂಸಿವ್) a. hurtful insulting ನಿಂದಿಸುವ, ಬೈಯುವ.

Abut' (ಅಬಟ್) vt.i. lean against border on. ಆತುಕೊಳ್ಳು, ಅಂಚಿನಲ್ಲಿರು ಒತ್ತಿನಲ್ಲಿರು, ಒರಗಿರು, ಊರೆಯಲ್ಲಿರು.

Abutment (ಅಬಟ್‌ಮೆಂಟ್) n. resting portion of arch. ಕಮಾನಿನ ಆಧಾರ, ಆನಿಕೆ, ಒದೆ, ಊರೆ.



Abutment

Abuttal (ಅಬಟಲ್) n. border boundary. ಎಲ್ಲೆ, ಅಂಚು.

Abutter (ಅಬಟರ್) n. owner o adjoining lands. ಪಕ್ಕದ ಜಮೀ ನವನು.

Abuzz (ಅಬಜ್) a. full of buzzing sound. ಜೊಯ್ ಎಂದು ಶಬ್ದಮಾಡುತ್ತ

Aby (e) (ಅಬಾಯ್) vt. suffer for. ದಂಡ ತೆರು, ಅನುಭವಿಸು.

Abys'mal (ಅಬಿಸ್‌ಮಲ್)a. bottomless. ಆಳವಾದ, ಗಭೀರ.

Abyss' (ಅಬಿಸ್) n. bottomless pit or gulf ; a deep mass of water. ಅತ್ಯಂತ ಆಳವಾದ ಹಳ್ಳ, ಮಡು, ಪಾತಾಳ.

Abyssin'ian (ಅಬಿಸೀನಿಯನ್) a. inhabitant of Abyssinia. ಅಬಿಸೀನಿಯಾಕ್ಕೆ ಸೇರಿದವ, ಹಬಶಿ.



Acacia

Aca'cia (ಅಕೇಶಿಯ) n. a family of trees with pinnate leaves. ಜಾಲೀಗಿಡ, ಕಾಚು ಗಿಡ, ಗೊಬ್ಬಳೀಮರ.

Academian (ಅಕಾಡೆಮಿಯನ್) n. member of an academy. ವಿದ್ವತ್ಪರಿಷತ್ತಿನ ಸದಸ್ಯ.

Acad emy(ಅ̆ಕಾಡೆಮಿ) n. a society for the promotion of science or art. ಪ್ರೌಢವಿದ್ಯಾಶಾಲೆ, ಪಂಡಿತಸಭೆ. academic a. scholarly. ಪಾಂಡಿತ್ಯದ.

Acardiac (ಅಕಾರ್ಡಿಯಕ್) a. without a heart. ಹೃದಯಹೀನವಾದ.

Acarpous (ಅಕಾರ್ಪಸ್) a. not giving fruit, sterile. ಫಲ ಕೊಡದ ಜಾತಿಯ.

Acaulous (ಅಕಾಲಸ್) adj. having very short stem or no stem at all. ಚಿಕ್ಕಕಾಂಡವುಳ್ಳ, ಕಾಂಡ ಅಥವಾ ತಾಳು ಇಲ್ಲದಿರುವ.

Accede' (ಅಕ್ಸೀಡ್) vt. agree to ; assent. ಒಪ್ಪು, ಅಸ್ತುಪಡು, ಸಮ್ಮತಿಸು.

Accel'erate (ಅ̆ಕ್ಸಿಲರೇಟ್) vt. i. cause to happen early; quicken, increase the speed of. ವೇಗ ಹೆಚ್ಚಿಸು, ತ್ವರೆಪಡಿಸು, ತೀವ್ರಪಡಿಸು.

Accelera'tion (ಅ̆ಕ್ಸಿಲರೇಶನ್) n. rate of increase of speed. ವೇಗವರ್ಧನೆ, ಆವೇಗ.

Accendible (ಅ ಕ್ಸೆ ಂ ಡಿ ಬ ಲ್) a. capable of being kindled. ಹತ್ತಿಸಲು ತಕ್ಕುದಾದ.

Accendibility (ಅಕ್ಸೆಂಡಿಬಿಲಿಟಿ) n. quality of being easily kindled. ಹತ್ತಿಸಲ್ಪಡಲು ಯೋಗ್ಯತೆ.

Ac'cent (ಅ̆ಕ್ಸೆಂಟ್) n. stress on a syllable ; a tone of voice. ಸ್ವರ ಉಚ್ಚಾರಣೆ, ಸ್ವರಭಾರ, ಸ್ವರಘಾತ. v. lay stress on syllable or word. ಒತ್ತಿಹೇಳು, ಸ್ವರಸಹಿತ ಉಚ್ಚರಿಸು.

Accent'uate(ಅಕ್ಸೆಂಚುಏಟ್)vt. lay stress on. ಉಚ್ಚಾರಣೆ ಚಿಹ್ನೆ ಹಾಕು, ಒತ್ತಿ ಹೇಳು,- tuation. n. ಉಚ್ಚಾರಣ ಚಿಹ್ನೆ.

Accept' (ಅಕ್ಸೆಪ್ಟ್) vt. i. receive; agree to; undertake, believe. ಅಂಗೀಕರಿಸು, ಸ್ವೀಕರಿಸು, ಒಪ್ಪಿಕೋ, ನಂಬು.

Accept'ance (ಅಕ್ಸೆಪ್ಟನ್ಸ್) n. the act of accepting. ಅನುಮತಿ, ಅಂಗೀಕಾರ, ಒಪ್ಪಿಗೆ, ಸಮ್ಮತಿ.

Accepta'tion (ಅಕ್ಸೆಪ್ಟೇಶನ್) n. a kind reception ; the received meaning of a word. ಸ್ವೀಕಾರ, ಮುಖ್ಯಾರ್ಥ, ರೂಢ್ಯರ್ಥ, ಅಂಗೀಕೃತ ಅರ್ಥ.

Ac'cess (ಅ̆ಕ್ಸೆಸ್) n. right or means of approach; increase ಪ್ರವೇಶನ, ದಾರಿ, ಮಾರ್ಗ, ಅರ್ಪಣೆ, ಅಭಿವೃದ್ಧಿ.

Access'ary (ಅಕ್ಸೆಸರಿ) a. n. same as accessory.

Accessible (ಅ̄ಕ್ಸೆಸಿಬ್ ಲ್) a. easily approached ಸುಗಮ, ಸುಲಭವಾಗಿ ನೋಡಬಹುದಾದ, ಸುಲಭಸಾಧ್ಯ.

Access'ion (ಅ̆ಕ್ಸೆಶನ್) n. coming to the throne; increase. ಅಧಿಕಾರಕ್ಕೆ ಬರುವುದು, ಸಿಂಹಾಸನಾರೋಹಣ; ವರ್ಧನೆ.

Ac'cess'ory(ಅ̆ಕ್ಸಿಸರಿ) a. n. helper (in crime); additional (ಪಾಪದಲ್ಲಿ) ಸಹಾಯಕ, ಜತೆಯ, ಸಂಗಡಿಗ, ಹೆಚ್ಚಿನ. n. a tool. ಉಪಕರಣ, ಸಾಧನ.

Ac'cidence'(ಅಕ್ಸಿಡೆನ್ಸ್) n. part of grammar dealing with inflection of words. ಶಬ್ದಖಂಡ, ಸುಬಂತ, ತಿಙಂತಗಳು, ವಿಭಕ್ತಿಪ್ರಕರಣ.

Ac'cident(ಅಕ್ಸಿಡೆಂಟ್)n. unexpected event;chance;mishap. ಆಕಸ್ಮಿಕ ಘಟನೆ, ಅಪಘಾತ, ಅವಘಡ,ದೈವಯೋಗ.

Ac'cidental(ಅಕ್ಸಿಡೆನ್ಟಲ್)a.happening by chance ; not essential. ಆಕಸ್ಮಿಕ, ಕಾಕತಾಲೀಯ, ಮುಖ್ಯವಲ್ಲದ.

Accident'ally(ಅಕ್ಸಿಡೆಂಟಲಿ) adv.by chance, unintentionally. ಉದ್ದೇಶವಿಲ್ಲದೆ, ಅಕಸ್ಮಾತ್ತಾಗಿ, ಹಠಾತ್ತಾಗಿ.

Accidented (ಅಕ್ಸಿಡೆನ್ಟೆಡ್) adj. pertaining to uneven surface, of undulating surface. ಸಮತಲವಲ್ಲದ ಪ್ರದೇಶಕ್ಕೆ ಸಂಬಂಧಪಟ್ಟ.

Accipitral (ಅಕ್ಸಿಪಿಟ್ರಲ್) a. keen sighted like a hawk. ಚುರುಕು ದೃಷ್ಟಿಯುಳ್ಳ.

Acclaim (ಅಕ್ಲೇಮ್) vt. applaud loudly; hail. ಜಯಘೋಷಮಾಡು, ಚಪ್ಪಾಳೆಹೊಡಿ, ಉಗ್ಗಡಿಸು. n. ಜಯಘೋಷ.

Accla'mation(ಅಕ್ಲಮೇಷನ್) n. applause; loud and eager assent ಉಗ್ಗಡನೆ, ಶಾಬಾಸುಗಿರಿ, ಉಘೆ, ಜಯಕಾರ ಮಾಡುತ್ತ ಒಪ್ಪುವುದು.

Accli'matize,Accli'mate (ಅಕ್ಲಿಮಟೈಜ್)(ಅಕ್ಲೈಮೇಟ್) vt. accustom to a new climate. ಹವಾಒಗ್ಗಿಸಿಕೊಳ್ಳು, ಪಳಗು, ಪಳಗಿರು, ಒಗ್ಗು.

Acclinal (ಅಕ್ಲೈನಲ್) a. sloping upwards. ಏರುಓರೆಯುಳ್ಳ, ಏರುದಿಣ್ಣೆಯುಳ್ಳ.

Acclivi'ty (ಅಕ್ಲಿವಿಟಿ) n. an upward slope. ದಿನ್ನೆ, ಏರು, ದಿಬ್ಬ, ತಿಟ್ಟೆ.

Accolade (ಅಕೋಲೇಡ್) n. ceremony for conferring knighthood ಸರ್ ಪದವಿಯನ್ನು ಕೊಡುವಾಗ ಮಾಡು ಒಂದು ಸಂಸ್ಕಾರ.

Accolent(ಅಕೊಲೆಂಟ್)n.a. one wh lives near. ಹತ್ತಿರ ವಾಸಮಾಡುವವ

Accomm'odate(ಅಕಾಮೊಡೇಟ್)vt make suitable; supply (with) find room for. ಸರಿಪಡಿಸು, ಒದಗಿಸು ಹವಣಿಸು,ಸ್ಥಳಕೊಡು, ಹೊಂದಿಕೆಮಾಡು

Accomm'odating (ಅಕಾಮೊಡೇಟಿಂಗ್)a.obliging; pliable. ಅನುಕೂಲವರ್ತನೆಯು; ದಾಕ್ಷಿಣ್ಯಪರ; ಹೊಂದಿ ಯುಳ್ಳ.

Accomm'odation(ಅಕಾಮೊಡೇಶನ್) n. space; room; lodgings: adjustment, loan. ಸ್ಥಳ, ವಸತಿ; ಜಾಗ, ಅನುಕೂಲವರ್ತನೆ, ಅನುಕೂಲತೆ; ಸಂಧಾನ ಸಂಯೋಜನೆ, ಎರವು, ಸಾಲ.

Accom'paniment(ಅಕಂಪನಿಮೆಂಟ್) n. that which accompanies. ಜೊತೆ, ಪರಿಕರ, ಹಿಮ್ಮೇಳ, ಸಾಹಿತ್ಯ, ಪಕ್ಕವಾದ್ಯ.

Accom'pany (ಅಕಂಪನಿ) vt. go or be with, attend: escort. ಸಂಗಡ ಇರು, ಜತೆಯಲ್ಲಿ ಹೋಗು, ಸಹಚರಿಸು.

Accom'plice (ಅಕಾಂಪ್ಲಿಸ್) n. partner in a crime. ಸಹಾಪರಾಧಿ, ಸಹಾಯಕ, ಶರೀಕಾದವ, ಶಾಮೀಲು.

Accomplicity(ಅಕಾಂಪ್ಲಿಸಿಟಿ) n. assistance in criminal offence. ಅಪರಾಧದಲ್ಲಿ ಸಹಾಯಕನಾಗಿರುವಿಕೆ.

Accom'plish (ಅಕಾಂಪ್ಲಿಶ್)n. carry out; perform, succeed in doing. ನೆರವೇರಿಸು, ಕಡೆಗಾಣಿಸು, ಪೂರ್ಣಮಾಡು, ನಿರ್ವಹಿಸು, ನಿಭಾಯಿಸು.

Accom'plished (ಅಕಾಂಪ್ಲಿಶ್ಡ್) a. well trained or educated. ಸುಶಿಕ್ಷಿತ, ಸುಸಭ್ಯ, ಪ್ರವೀಣ, ಕುಶಲ.

Accom'plishment (ಅಕಾಂಪ್ಲಿಶ್‌ಮೆಂಟ್) n. completion; attainment. ಸಮಾಪ್ತಿ; ಸಿದ್ಧಿ, ಪಾಂಡಿತ್ಯ, ನೈಪುಣ್ಯಪ್ರಾಪ್ತಿ. (pl.) attainments. ಪಾಂಡಿತ್ಯ, ಕುಶಲತೆ, ನಯ.

Accord' (ಅಕಾರ್ಡ್) vt. i. agree; correspond, grant. ಒಡಂಬಡು, ಒಪ್ಪು, ಅನುಗ್ರಹಿಸು; ಸ್ವೀಕೃತಿಕೊಡು. n. harmony, conformity ಸಮ್ಮತಿ; ಸ್ವೀಕರಣ; ಸಾಮರಸ್ಯ.

Accord'ance(ಅಕಾರ್ಡೆನ್ಸ್)n.agreement; conformity. ಅನುಮತಿ; ಸಮಾನತೆ, ಅನುರೂಪತೆ. ಅನುಸಾರ; ಹೊಂದಿಕೆ.

Accord'ant (ಅಕಾರ್ಡೆಂಟ್) a. agreeing; harmonious in tune. ಒಪ್ಪುವ, ಹೊಂದುವ, ಅನುರೂಪ.

According (ಅಕಾರ್ಡಿಂಗ್) adv. agreeing, in accordance with. ಅನುರೂಪವಾಗಿ, ಅನುಸಾರವಾಗಿ.

Accord'ingly (ಅಕಾರ್ಡಿಂಗ್ಲಿ) adv. consequently,suitably. ಹಾಗೆಯೇ, ತದನುಸಾರ, ಅದೇಪ್ರಕಾರ.

Accord'ion (ಅಕಾರ್ಡಿಯನ್) n. a small musical wind instrument with keys. ರಾಗಮಾಲಿಕೆ; ವಾದ್ಯಭೇದ.


Accordion

Accost' (ಅಕಾಸ್ಟ್) vt. to go up and speak to. ಮಾತಾಡಿಸು, ಸಂಭಾಷಣೆ ಮಾಡು, ಕುಶಲಕ್ಷೇಮ ಕೇಳು.

Accou'chement(ಅಕೂಚ್‌ಮೆಂಟ್)n. lying in; delivery. ಪ್ರಸವ, ಹೆರಿಗೆ.

Accou'cheur (ಅಕೂಶರ್) n. man-midwife ಪ್ರಸೂತಿಕಾರ, ಪ್ರಸವ ವೈದ್ಯ. (fem. accoucheuse) midwife.

Account' (ಅಕೌಂಟ್) vt. i. (with 'for') reckon; give reason; answer; explain ಎಣಿಸು, ಅಳೆ, ಕಾರಣ ಹೇಳು ಉತ್ತರಹೇಳು. n. a reckoning up of money; bill; story, value ಲೆಕ್ಕ; ಜಮಾಖರ್ಚಿನ ಪಟ್ಟಿ; ಹೇಳಿಕೆ, ವರ್ಣನೆ, ವಿವರ; ಗೌರವ; ಬೆಲೆ. man of a. ಗಣ್ಯನಾದವ. take into a. ಮುಖ್ಯವೆಂದು ತಿಳಿ. a. for. ವಿವರಿಸು, ಹೊಣೆಯಾಗು.

Accoun'table (ಅಕೌಂಟಬಲ್) a. liable to answer; responsible. ಉತ್ತರದಾಯಿ, ಜವಾಬುದಾರ, ಹೊಣೆಹೊತ್ತ

Accoun'tant (ಅಕೌಂಟೆಂಟ್) n. one who keeps accounts. ಕರಣಿಕ, ಲೆಕ್ಕಪರೀಕ್ಷಕ, ಗುಮಾಸ್ತ, ಕುಲಕರ್ಣಿ, ಲೆಕ್ಕಿಗ.

Accou'tre (ಅಕೂಟರ್) vt. dress or equip, with special costume. ಸಜ್ಜುಗೊಳಿಸು, ಸವರಿಸಿಕೊಡು, ಪೋಷಾಕು ಹಾಕು, ಯುದ್ಧವಸನ ತೊಡಿಸು.

Accou'trements(ಅಕೂಟರ್‌ಮೆಂಟ್) n. plu. dress; military dress, etc, ಯುದ್ಧವಸನ, ವಿಶೇಷ ವೇಷಭೂಷ.

Accred'it (ಅಕ್ರೆಡಿಟ್) vt. give credit: furnish with credentials. ಅಧಿಕಾರಕೊಡು, ವಿಶ್ವಾಸಪತ್ರಕೊಡು. a. ed. trusted. ಅಧಿಕೃತ, ವಿಶ್ವಸ್ತ.

Accrementition (ಅಕ್ರಿಮೆಂಟಿಷನ್) n. gradual increase. ಕ್ರಮಿಕವಾದ ವೃದ್ಧಿ.

Accrescence(ಅಕ್ರೆಸೆನ್ಸ್)n.gradual increase. ಕ್ರಮಿಕವೃದ್ಧಿ.

Accrescent(ಅಕ್ರೆಸೆನ್ಟ್)adj increasing, enlarged. ವೃದ್ಧಿಹೊಂದಿದ, ಹೆಚ್ಚಿದ ಆಕಾರವುಳ್ಳ.

Accretion (ಅಕ್ರಿಷನ್) n. grow together. ಒಟ್ಟಿಗೆ ಬೆಳೆಯುವಿಕೆ.

Accrue' (ಅಕ್ರೂ) vi. come by growth. ಬೆಳೆದು ಅಧಿಕವಾಗು, ಹೆಚ್ಚು ಫಲಿಸು.

Accubation (ಅಕ್ಯುಬೇಷನ್) n. reclining on couch. ಮಂಚದಮೇಲೆ ಪವಡಿಸುವುದು.

Accumbency (ಅಕ್ಯುಂಬೆನ್ಸಿ) n. state of reclining. ಒರಗಿರುವುದು.

Accum'bent (ಅಕಂಬೆಂಟ್) a. lying down on a couch. ಮಲಗಿದ, ಒರಗಿದ.

Accu'mulate (ಅಕ್ಯುಮ್ಯುಲೇಟ್) vt. i. pile up; a mass. ರಾಶಿಹಾಕು, ಕುಪ್ಪೆ ಹಾಕು, ಕೂಡಿಡು, ರಾಶಿಯಾಗು, ಶೇಖರಿಸು.

Accumula'tion (ಅಕ್ಯುಮುಲೇಶನ್) n. a pile or mass. ರಾಶಿ, ಸಂಚಯ, ಮೂಲಧನದ ವೃದ್ಧಿ.

Acc'uracy (ಅಕ್ಯೂರಸಿ) n. correctness, preciseness ಸರಿಯಾಗುವಿಕೆ, ತಥ, ಅಚ್ಚುಕಟ್ಟುತನ.

Acc'urate (ಅಕ್ಯುರೇಟ್) a. precise, exact, correct. ತಪ್ಪಿಲ್ಲದ, ಸರಿಯಾದ.

Accurs'ed (ಅಕ್ಕರ್ಸ್ಡ) a. doomed; extremely wicked. ಶಾಪಗ್ರಸ್ತ, ನಿರ್ಭಾಗ್ಯ, ಅತಿದುರಳ.

Accurst (ಅಕ್ಕರ್ಸ್ಟ್) a. doomed. ಶಾಪಗ್ರಸ್ತ.

Accusa'tion (ಅಕ್ಯುಜೇಶನ್) n. the charge brought against any one. ತಪ್ಪುಹೊರಿಸೋಣ, ಫಿರ್ಯಾದು, ದೋಷಾರೋಪಣೆ.

Accusa'tive (ಅಕ್ಯುಜಿಟಿವ್) n. the objective case (gram.) ದ್ವಿತೀಯಾ ವಿಭಕ್ತಿ, ಕರ್ಮ.

Accuse (ಅಕ್ಯೂಜ್) vt. blame; bring a charge against. ದೋಷಾರೋಪಣೆಮಾಡು, ಆಪಾದಿಸು, ತಪ್ಪುಹೊರಿಸು, ದೂಷಿಸು, ತೆಗಳು.

Accused (ಅಕ್ಯೂಸ್ಡ್) n. one charged with a crime. ಆಪಾದಿತ, ಅಪರಾಧಿ, ದೋಷಿ.

Accus'er (ಅಕ್ಯೂಜರ್) n. one who brings a charge against another ತಪ್ಪು ಹೊರಿಸುವವ, ದೂಷಕ, ದೋಷಾರೋಪಕ, ದೂರುಗಾರ.

Accust'om (ಅಕಸ್ಟಮ್) vt. hab tuate. ರೂಢಿಮಾಡು, ಪಳಗಿಸಿಕೊ ಬಳಸು, ಒಗ್ಗಿಸು.

Ace (ಏಸ್) n. the one at dice a cards; a balloon. ಪಗಡೆ, ಪಗಡೆಯ ಒಂದು, "ಇಸ್ಪೀಟಿನ ಎಕ್ಕ", ಆಕಾಶಬುಟ್ಟಿ be within an ace. ಬಹು ಹತ್ತಿ ವಾಗಿರು.

Acentric (ಎಸೆಂಟ್ರಿಕ್) adj. no centered. ಕೇಂದ್ರಸ್ಥಿತವಲ್ಲದ.

Acephalous (ಅಸಿಫಲಸ್) a. head less: chiefless. ತಲೆಯಿಲ್ಲದ, ಮುಖಂಡ ನಿಲ್ಲದ, ಮುಖ್ಯಸ್ಥನಿಲ್ಲದ.

Acerbate(ಅಸರ್ಬೇಟ್) vt. to mak bitter or sour. ಹುಳಿಹಿಡಿಸು, ಕಹಿಮಾಡು

Acerb'ity (ಅಸಬಿಟಿ) n. harshness severity. ಮಾತಿನಲ್ಲಿ ಕಾಠಿಣ್ಯ, ಕಟುರುಚಿ ರುಕ್ಷತೆ.

Acervate (ಅಸರ್ವೇಟ್) vt. growing in clusters. ರಾಶಿಗೂಡಿದ, ಗೊಂಚಲಾ ಬೆಳೆಯುವ.

Acetous (ಅಸಿಟಸ್) adj. sour, ಹುಳಿಯಾದ.

Acharnement (ಅಶಾರ್ನಮೆಂಟ್) n. blood thirstiness. ರಕ್ತಪಿಪಾಸೆ.

Acha'tes (ಅಕೇಟೀಜ್) n. a faithful friend; a trusty comrade. ನೆಚ್ಚಿನ ಗೆಳೆಯ, ಪ್ರಿಯಮಿತ್ರ, ಆಪ್ತಮಿತ್ರ.

Ache (ಏಕ್) vi. suffer. ನೋಯು, ಕೊಡೆಯು, ಚಿಟಗುಟ್ಟು. n. continuous pain. ನೋವು, ಶೂಲೆ, ವೇದನೆ.

Acheron (ಎಕೆರಾನ್) n. hell, death. ನರಕ, ಮರಣ.

Achieve' (ಅಚೀವ್) vt. to do; accomplish; win. ನೆರವೇರಿಸು, ಹೊಂದು, ಸಾಧಿಸಿಪಡೆ.

Achiever (ಅಚೀವರ್) n. a person who achieves. ಸಾಧಿಸುವವ, ಸಾಧಕ.

Achieve'ment (ಅಚೀವ್ ಮೆಂಟ್) n. a great deed. ಮಹತ್ಕಾರ್ಯ, ದೊಡ್ಡ ಕಾರ್ಯ.

Achilous (ಅಕೈಲಸ್) a. without lips. ತುಟಿಯಿಲ್ಲದ.

Acholia (ಅಕೋಲಿಯ) n. want of bile. ಪಿತ್ತರಸದ ಅಭಾವ.

Achromatic (ಅಕ್ರೊಮಾಟಿಕ್) a. free from colour. ವರ್ಣರಹಿತ.

Acicular (ಅಸಿಕ್ಯೂಲರ್) a. needle pointed, sharp pointed· ಚೂಪಾದ ಮೊನೆಯುಳ್ಳ.

A'cid (ಆಸಿಡ್) a. sharp; sour. ಚುರುಕು, ಉಗ್ರ, ಹುಳಿ, ಆಮ್ಲ.

Acidimeter (ಆಸಿಡಿಮೀಟರ್) n. an instrument for finding out the strength of acids ಆಮ್ಲಬಲಮಾಪಕ.

Acid'ity (ಆಸಿಡಿಟಿ) n. sharpness, sourness; the quality of being sour. ಹುಳಿ, ಆಮ್ಲತೆ, ಉಗ್ರತೆ.

Acid'ulous (ಆಸಿಡ್ಯುಲಸ್) a. some what sour. ಸ್ವಲ್ಪಮಟ್ಟಿಗೆ ಆಮ್ಲವಾದ.

Acknowl'edge (ಅಕ್ನಾಲೆಜ್) vt. confess admit of the receipt of. ಮುಟ್ಟಿತೆನ್ನು, ಮಾನ್ಯಮಾಡು, ಒಪ್ಪು.

Acknowl'edgment (ಅಕ್ನಾಲೆಜ್ಮೆಂಟ್) n. admission: a receipt. ಒಪ್ಪಿಗೆ, ಸಲ್ಲಿಕೆ, ಅಂಗೀಕಾರ, ರಶೀದಿ.

Aclinic (ಅಕ್ಲಿನಿಕ್) a. having no inclination. ಒಗ್ಗಿರದ, ಪ್ರವೃತ್ತಿಯಿಲ್ಲದ.

Ac'me (ಆಕ್ಮಿ) n. the top or highest point. ಶಿಖರ, ತುಟ್ಟತುದಿ, ವಿಷಮಸ್ಥಿತಿ.

Acne (ಆಕ್ನಿ) n. a disease marked by pimples. ಮೊಡವೆಗಳಾಗುವ ರೋಗ.

Acolyte (ಅಕೋಲೈಟ್) n an attendant in the church. ಚರ್ಚಿನಲ್ಲಿ ಒಬ್ಬ ಸೇವಕ.

Ac'onite (ಅಕೊನೈಟ್) n. poison; the plant, monk's hood. ವತ್ಸನಾಭಿ, ಪಚ್ಚನಾಗದ ವಿಷ.

Acorn (ಅಕಾರ್ನ್) n. fruit of the oak tree· ಸಿಂದೂರ ವೃಕ್ಷದ ಹಣ್ಣು.


Acorn

Acous'tic (ಅಕೌಸ್ಟಿಕ್) a. having to do with hearing sound. ಧ್ವನಿಗತಿಶಾಸ್ತ್ರಕ್ಕೆ ಸಂಬಂಧಿಸಿದ, ಶ್ರವಣೇಂದ್ರಿಯದ.

Acous'tics (ಅಕೌಸ್ಟಿಕ್) n. the science which deals with sound. ಧ್ವನಿಗತಿಶಾಸ್ತ್ರ, ಧ್ವನಿಗತಿವಿಜ್ಞಾನ.

Acquain't (ಅಕ್ವೈಂಟ್) vt. let one know; inform. ತಿಳಿಸು, ಶ್ರುತಪಡಿಸು, ಪರಿಚಯಮಾಡಿಸು.

Acquain'tance (ಅಕ್ವೈಂಟೆನ್ಸ್) n. familiar knowledge; a person whom we know· ಪರಿಚಯ, ಹೊಲುಬು, ಪರಿಚಿತ, ಗೊತ್ತಿರುವವ.

Acquiesce' (ಅಕ್ವಿಎಸ್) vi. to agree to. ಒಪ್ಪು, ಸಮ್ಮತಿಸು, ಅನುಮತಿಸು.

Acquies'cence (ಅಕ್ವಿಎಸೆನ್ಸ್) n. assent. ಒಪ್ಪಿಗೆ, ಸಮ್ಮತಿ, ಅನುಮತಿ.

Acquies cent (ಅಕ್ವಿಎಸೆಂಟ್) a. submissive. ನಮ್ರ, ವಿನಯಸ್ಥ. ಒಪ್ಪಿಕೊಳ್ಳುವ.

Acquire (ಅಕ್ವೈರ್) vt. to gain; get. ಸಂಪಾದಿಸಿಕೊಳ್ಳು, ಗಳಿಸು, ಸಾಧಿಸು.

Acquire'ment (ಅಕ್ವೈರ್ಮೆಂಟ್) n. something learnt or got by effort, ಸಂಪಾದನೆ, ಪ್ರಾಪ್ತಿ, ವಿದ್ಯಾಲಾಭ.

Acquisi'tion (ಅಕ್ವಿಜಿಶನ್) n. that which is acquired ಸಂಪಾದನೆ, ಲಾಭ, ಗಳಿಕೆ, ಪ್ರಾಪ್ತಿ, ಅರ್ಜನೆ.

Acquisitive (ಅಕ್ವಿಜಿಟಿವ್) a. desirous of acquiring. ಅರ್ಜನೇಚ್ಛುಕ.

Acquit' (ಅಕ್ವಿಟ್) vt. free from blame, to behave ತಪ್ಪಿಲ್ಲವೆಂದು ತೀರ್ಪುಮಾಡು,ಬಿಡುಗಡೆಮಾಡು,ವರ್ತಿಸು.

Acquit'tal (ಅಕ್ವಿಟಲ್)n. a .setting free. ಬಿಡುಗಡೆ, ಖುಲಾಸೆ, ವಿಮೋಚನೆ.

Acquit'tance (ಅಕ್ವಿಟನ್ಸ್) n. a discharge from an obligation or debt. ಋಣವಿಮೋಚನೆ, ಸಲ್ಲುಚೀಟು.

A'cre (ಏಕರ್) n. a measure of land. 4,840 sq. yards. ಎಕರೆ.

Acreage (ಏಕರೇಜ್) n. number of acres in a piece of land. ಜಮೀನಿನಲ್ಲಿರುವ ಒಟ್ಟು ಎಕರೆಗಳು.

Acrid (ಅ̆ಕರಿಡ್)a. bitter: pungent; harsh. ಕಾರ, ತೀಕ್ಷ್ಣ, ತಿಕ್ತ, ಉಗ್ರ.

Ac'rimony (ಅಕ್ರಿಮೊನಿ) n. bitterness of feeling or language. ಕಟುತೆ,ತಿಕ್ತತೆ,ತೀಕ್ಷ್ಣತೆ.

a mouious.

Acrobat (ಅ̆ಕ್ರೊಬ̆ಟ್) n. a rope dancer. ದೊಂಬ, ಡೊಂಬ.



Acrobat

Acromania(ಅಕ್ರೋಮೆನಿಯ)n.incurable madness.ಅಸಾಧ್ಯವಾದ ಹುಚ್ಚು.

Acronycal (ಅಕ್ರಾನಿಕಲ್)a. happening at nightfall. ಸಂಧ್ಯಾಕಾಲಕ್ಕೆ, ನಿಶಾರಂಭದಲ್ಲಿ ಆಗುವ.

Across' (ಅಕ್ರಾಸ್) adv. & pr. cross wise, from side to side. ಅಡ್ಡಲಾಗಿ ದಾಟಿಕೊಂಡು.

Acros'tic (ಅ̆ಕ್ರಾಸ್ಟಿಕ್)n. poem,&c. in which first & last letters of lines form words. (s). ಅಕ್ಷರಗಳ ಒಗಟು, ಪ್ರಹೇಳಿಕೆ.

Act (ಅ̆ಕ್ಟ್) n. thing done; part a play; a law. ಕಾರ್ಯ, ಕ್ರಿ ಕೆಲಸ, ನಾಟಕಾಂಕ, ಕಾನೂನು, ಕಾಯಿ ನಿಬಂಧನೆ. vt. i. perform; preten play a part; carry out. ಮಾಡ ನಡಿ, ನಟಿಸು, ಅಭಿನಯಿಸು, ಪ್ರವೃತ್ತಿ

Acting (ಅ̆ಕ್ಟಿಂಗ್) n. performan feigning. ನಾಟಕಾಭಿನಯ, ನಟನೆ.

Actinic (ಅ̆ಕ್ಟಿನಿಕ್) adj. pertaing the rays of the sun. ಸೂರ್ಯ ಕಿರಣಕ್ಕೆ ಸಂಬಂಧಿಸಿದ.

Ac'tion (ಅ̆ಕ್‌ಶನ್) n. deed; feig ing; a battle; a law suit. ಕೆಲ ಕೃತ್ಯ, ನಡತೆ. ಅಭಿನಯ, ಕಾಳಗ, ದಾ

A'ctionable (ಅ̆ಕ್ಷನೇಬಲ್) likely to cause a law cas ದಾವಾಹಾಕಲು ಯೋಗ್ಯ, ವ್ಯಾಜ್ಯಮಾಡ ಯೋಗ್ಯ.

Ac'tive (ಅ̆ಕ್ಟಿವ್) a. busy; livel effective. ಆಸಕ್ತ, ವ್ಯವಹಾರಿ, ಚಂಚ ಚುರುಕಾದ.

Activ'ity (ಅ̆ಕ್ಟಿವಿಟಿ) n. nimbl ness. ತೀವ್ರತೆ, ಚುರುಕುತನ, ಚಟವಟ (pl.) spheres of action. ಉದ್ಯ ಕ್ಷೇತ್ರ.

Ac'ter (ಅ̆ಕ್ಟರ್) n. performer i plays. ನಟ, ವೇಷಧಾರಿ.

Ac'tress (ಅ̆ಕ್ಟ್ರಸ್) n. a fema stage-player. ನಟಿ, ವೇಷಧಾರಿಣಿ.

Ac'tual (ಅ̆ಕ್ಚುಯಲ್) a. real; pr sent fact. ನಿಜವಾದ, ಪ್ರತ್ಯಕ್ಷ.ಈಗಿರುವ

Actuality (ಅ̆ಕ್ಚುಯಾಲಿಟಿ) n.reality ಸತ್ಯತೆ, ಯಥಾರ್ಥತೆ.

Actualize (ಅ̆ಕ್ಚುಎಲೈಜ್) vt. mak real. ಯಥಾರ್ಥಗೊಳಿಸು.

Ac'tually (ಆಕ್ಚುಯಲಿ) adv. really. ನಿಜವಾಗಿ, ಪ್ರತ್ಯಕ್ಷವಾಗಿ.

Ac'tuary (ಅಕ್ಚುಯರಿ) n. a registrar making calculations connected with insurance. ವಿಮೆಯ ದರಗಳನ್ನು ನಿರ್ಣಯಿಸುವ ತಜ್ಞ.

Ac'tuate (ಆಕ್ಚುಏಟ್) vt. to move; to put into action; influence. ಪ್ರೇರಿಸು, ಪ್ರಚೋದನೆಮಾಡು, ಕಾರ್ಯಕ್ಕೆ ಪ್ರೇರೇಪಿಸು.

Acuition (ಅಕ್ಯುಇಷನ್) n. strengthening the action of a medicine. ಔಷಧದ ಶಕ್ತಿಯನ್ನು ಹೆಚ್ಚಿಸುವುದು.

Acuity (ಅಕ್ಯುಇಟಿ) n. sharpness; acuteness. ತೀಕ್ಷ್ಣತೆ, ಚುರುಕು.

Aculeated (ಅಕ್ಯೂಲಿಯೇಟೆಡ್) a. pointed, having a sting. ಮುಳ್ಳುಗಳಿಂದ ಕೂಡಿದ, ಕುಟುಕುವ.

Acu'men (ಅಕ್ಯುಮೆನ್) n. sharpness; quickness; perception. ಚುರುಕುಬುದ್ಧಿ, ಕುಶಾಗ್ರ ಬುದ್ಧಿ, ಪ್ರತಿಭೆ.

Acuminate (ಅಕ್ಯೂಮಿನೇಟ್) a. pointed, sharp. ಕೊನೆ ಮೊನಚಾದ, ತೀಕ್ಷ್ಣಾಗ್ರ.

Acuminous (ಅಕ್ಯೂಮಿನಸ್) a. possessing sharp intellect. ತೀಕ್ಷ್ಣ ಬುದ್ಧಿಯುಳ್ಳ.

Acute (ಅಕ್ಯೂಟ್) a. sharp, pointed; keen; shrewd. ಚುರುಕು, ಹರಿತವಾದ, ತೀಕ್ಷ್ಣ, ತೀವ್ರ, ಹುಷಾರು.

Adactyl (ಅಡಾಕ್ಟಿಲ್) a. having no toes or fingers. ಕೈಬೆರಳುಗಳಾಗಲಿ, ಕಾಲ್ಬೆರಳುಗಳಾಗಲಿ ಇಲ್ಲದ.

Ad'age (ಅಡೇಜ್) n. a proverb. ಗಾದೆ, ನಾಣ್ಣುಡಿ, ಸಾಮತಿ.

Adam (ಆಡಮ್) n. the first man. ಆದಿಪುರುಷ, ಮನು.

Ad'amant (ಅಡಮಾಂಟ್) n. a very hard stone, diamond. ವಜ್ರ. a. as hard as diamond. ವಜ್ರದಂತೆ ಗಟ್ಟಿಯಾದ, ನಿಶ್ಚಲ.

Adaman'tine (ಅಡಮಂಟೈನ್) a. like adamant. ವಜ್ರದಂಥಾ, ಅಭೇದ್ಯ, ಕಠಿಣ.

Adapt' (ಅಡಾಪ್ಟ್) vt. make suitable, modify, accommodate. ಹೊಂದಿಸು, ಸರಿಪಡಿಸು, ಅನುಕೂಲಗೊಳಿಸು.

Adaptable (ಅಡಾಪ್ಟೆಬಲ್) adj. capable of being adapted. ಸರಿಪಡಿಸಲು ಯೋಗ್ಯವಾದ, ಅನುಗೊಳಿಸಲು ಅರ್ಹವಾದ.

Adapta'tion (ಅಡಾಪ್ಟೇಶನ್) n. act of making suitable. ಹೊಂದಿಸಿಕೊಳ್ಳುವಿಕೆ, ರೂಪಾಂತರ, ಅನುಕೂಲತೆ.

Adays (ಎಡೇಸ್) adv. now-a-days. ಈ ದಿನಗಳಲ್ಲಿ.

Add (ಆಡ್) vt. i. join; sum up; increase. ಕೂಡಿಸು, ಹೆಚ್ಚಿಸು, ಸಂಕಲನಮಾಡು.

Adde'ndum (ಅಡೆಂಡಮ್) n. pl. (adden'da) a thing added; an appendix. ಪರಿಶಿಷ್ಟ, ಹೊಸದಾಗಿ ಜೋಡಿಸಿದುದು, ಹೆಚ್ಚೋಲೆ.

Add'er (ಅಡರ್) n. small poisonous snake. ಬರೆ ಹಾವು, ಕತ್ತೆ ಹಾವು



Adder

Addict (ಅಡಿಕ್ಟ್) vt. habituate oneself to. ನಿಮಗ್ನನಾಗು, ಅಭ್ಯಾಸ ಮಾಡಿಕೊ.

Addi'cted (ಅ̆ಡಿಕ್ಟೆಡ್) a. given up to, devoted. ಅಭ್ಯಾಸ ಮಾಡಿಕೊಂಡ, ಚಟಹಿಡಿದ, ವ್ಯಸನಿ.

Addi'ction (ಅ̆ಡಿಕ್ಷನ್) n. act of devoting. ತೆವಲು, ಅಳಿವು, ದುರಾಸಕ್ತಿ, ವ್ಯಸನ.

Addition (ಅ̆ಡಿಶನ್) n. process of adding, thing added. ಕೂಡಣೆ, ಸಂಕಲನೆ, ಕೂಡಿಕೆ, ಅನುಬಂಧ, ಹೆಚ್ಚಿಕೆ.

Additional (ಅ̆ಡಿಶನಲ್) a. that is added. ಹೆಚ್ಚಾದ, ಅಧಿಕವಾದ.

Ad'dle (ಅ̆ಡಲ್)a. diseased; barren. ಕೆಟ್ಟ, ಕೊಳೆತ, ಬಂಜರು, ಗೊಡ್ಡು.

Add'le-headed (ಅ̆ಡಲ್-ಹೆಡೆಡ್) a. having unsound brains. ಮಂದಮತಿ, ಮಂಕು, ಮಡ್ಡಿ, ಮುಠ್ಠಾಳ, ಭ್ರಾಂತ.

Addleplot (ಅ̆ಡ್ಲ್‌ಪ್ಲಾಟ್) n. one who is the cause of the failure of a secret plot. ಒಳಸಂಚು ಸಫಲವಾಗದಿರಲು ಕಾರಣನಾದವನು.

Address' (ಅ̆ಡ್ರೆಸ್) vt. speak or, write to; direct a letter to. ಭಾಷಣ ಮಾಡು, ಪ್ರಸಂಗಿಸು, ವಿಳಾಸ ಬರೆ. n. direction on a letter; speech; skill. ವಿಳಾಸ; ಪತ್ತೆ, ಭಾಷಣ, ಚಾತುರ್ಯ.

Address'ee (ಅಡ್ರೆಸೀ) n. person addressed. ವಿಳಾಸದಾರ.

Address'es (ಅಡ್ರೆಸಸ್) n. plu. attentions in courtship. ಪ್ರೇಮಸಲ್ಲಾಪ. a. oneself to ಮಗ್ನನಾಗು. pay one's a.s to. ಪ್ರೇಮಾನುಸರಣ ಮಾಡು, ಒಲಿಸಿಕೊಳ್ಳು, ಪ್ರೇಮಸಲ್ಲಾಪ ಮಾಡು.

Adduce' (ಅ̆ಡ್ಯೂಸ್) vt. bring forward, cite or quote. ಮುಂದೆತರು, ಉದಾಹರಿಸು, ಉಲ್ಲೇಖಿಸು.

Adducent (ಅಡ್ಯೂಸೆಂಟ್) a. drawing together. ಎಳೆಯುತ್ತಿರುವ, ಆಕರ್ಷಕ.

Addeam (ಅಡೀಮ್) vt. to cancel ರದ್ದುಗೊಳಿಸು.

Adenitis (ಎಡೆನಿಟಿಸ್)n. inflammation of a gland. ಶರೀರದ ಯಾ ದಾದರೂ ಗ್ರಂಥಿಯ ಊದುವಿಕೆ.

Adept' (ಅಡೆಪ್ಟ್) a. completel skilled, n. an expert. ನಿಪುಣ, ಪ್ರವಿಣ, ಚತುರ, ನಿಷ್ಣಾತ, ಸಮರ್ಥ, ಅಭಿಜ್ಞ

Ad'enoids (ಅಡಿನಾಇಡ್ಸ್)n. swolle tissue at the back of the nose ನಾಸಾಗ್ರಂಥಿಬಾವು.

Ad'equate (ಅಡಿಕ್ವೇಟ್) n. sufficient; equal to, ಅನುರೂಪ, ಯಥೋಚಿತ, ತಕ್ಕ, ಸಾಕಷ್ಟು.

Ad'here (ಅಡ್ಹೀರ್) vi. to stick tc to be consistent ಅಂಟಿಕೊಳ್ಳುಮತ್ತ ಅಂಟು, ಮಾತು ಬದಲಾಯಿಸದಿರು.

Adher'ence (ಅಡ್ಹೀರೆನ್ಸ್) n steady attachment. ಸ್ಥಿರ ಅವಲಂಬನೆ.

Adher'ent (ಅಡ್ಹೀರೆಂಟ್) n. follower. ಅನುಯಾಯಿ, ಸೇರಿಕೆ, ಆಶ್ರಿತ

Adhe'sion (ಅಡ್ಹೀಜ್ನ್) n. adherence. ಅಂಟಿಕೊಂಡಿರೋಣ.

Adhe'sive (ಅಡ್ಹೀಸಿವ್) a. sticky ಅಂಟಿಕೊಳ್ಳುವ.

Adhesiveness (ಅಡ್ಹಿಸಿವ್‌ನೆಸ್) n n. stickiness, tenacity. ಅಂಟಿಕೊಳ್ಳುವಿಕೆ.

Adhibit (ಅಡ್ಹಿಬಿಟ್) vt. to use, tc administer. ಸೇವನೆಮಾಡಿಸು, ಹಚ್ಚು

Adieu' (ಅಡ್ಯೂ) int. farewell! a farewell. ಸ್ವಸ್ತಿವಾಚಕ, ನಮಸ್ಕಾರ ಸಲಾಂ! ದೇವರು ರಕ್ಷಿಸಲಿ!

Adi'pose (ಅ̆ಡಿಪೋಸ್) a. fatty, ಕೊಬ್ಬಿದ, ಪುಷ್ಟಿಯಾದ. n.-sity.

Adipsia (ಅ ಡಿ ಪ್ಸಿ ಯಾ) p. total absence of thirst. ಬಾಯಾರಿಕೆಯಿಲ್ಲದಿರುವುದು.

Adipsy (ಅಡಿಪ್ಸಿ) n. total absence of thirst. ಬಾಯಾರಿಕೆಯಿಲ್ಲದಿರುವುದು.

Adit (ಅ ಡಿ ಟ್) n. passage into a mine. ಗಣಿಯೊಳಕ್ಕೆ ದ್ವಾರ.

Adja'cent (ಅಡ್‌ಜೆಸೆಂಟ್) a. lying near to, contiguous. ಹತ್ತಿರದ, ಒತ್ತಿನ, ಪಕ್ಕದ, ಮಗ್ಗಲಿನ.

Adjectival (ಅ ಡ್ಜೆ ಕ್ಟಿ ವ ಲ್) a. pertaining to an adjective. ವಿಶೇಷಣ ಸಂಬಂಧಿ.

Adj'ective (ಅಡ್‌ಜೆಕ್ಟಿವ್) n. a word added to a noun to qualify it. ವಿಶೇಷಣ, ಗುಣವಾಚಕ.

Adjoin' (ಅಡ್‌ಜಾಯಿನ್) vi. lie next to ಪಕ್ಕದಲ್ಲಿರು, ಒತ್ತಿನಲ್ಲಿರು, ಹತ್ತಿರದಲ್ಲಿರು.

Adjourn' (ಅಡ್ಜರ್ನ್) vt. i put off to another day ತತ್ಕಾಲಕ್ಕೆ ನಿಲ್ಲಿಸು, ಮುಂದಕ್ಕೆಹಾಕಿಬಿಡು. n. -ment. ನಿಲುವಳಿ.

Adjudge' (ಅಡ್‌ಜಡ್ಜ್) vt. decide; settle. ನಿರ್ಣಯಿಸು, ತೀರ್ಮಾನಿಸು.

Adjudi'cate (ಅಡ್‌ಜುಡಿಕೇಟ್) vt. i. pronounce judgment. ತೀರ್ಪುಹೇಳು, ನಿರ್ಣಯಿಸಿ ಹೇಳು.

Adjudication (ಅಡ್‌ಜೂಡಿಕೇಶನ್) n. judgment. ತೀರ್ಪು, ನಿರ್ಣಯ.

Adjudicator (ಅಡ್‌ಜೂಡಿಕೇಟರ್) n. one who pronounces judgment. ತೀರ್ಪುಗಾರ, ನಿರ್ಣಾಯಕ.

Adjunct (ಅ ಡ್ ಜ ಂ ಕ್ಟ್) n. thing joined or added. ವಿಶೇಷಣ, ಅಧೀನ ವಸ್ತು.

Ad'juration (ಅಡ್‌ಜೂರೇಷನ್) n. the act of swearing. ಆಣೆ, ಶ್ರದ್ಧಾಯುಕ್ತ ಪ್ರಾರ್ಥನೆ.

Adjure' (ಅ ಡ್ ಜ್ಯೂ ರ್) vt. cause to swear. ಆಣೆಮಾಡಿಸು, ಪ್ರಮಾಣ ಮಾಡಿಸು.

Adjust' (ಅ ಡ್ ಜ ಸ್ಟ್) vt. arrange properly, settle. ಕ್ರಮಪಡಿಸು, ಸರಿಪಡಿಸು, ವ್ಯವಸ್ಥೆಮಾಡು.

Adjust'ment (ಅಡ್‌ಜಸ್ಟ್‌ಮೆಂಟ್) n. arrangement, regulation. ವ್ಯವಸ್ಥಾಪನೆ, ಜೋಡಣೆ.

Adjutor (ಅಡ್ಜ್ಯುಟಾರ್) n. a helper. ಸಹಾಯಕ.

Adj'utant (ಅಡ್‌ಜೂಟಂಟ್) n. an army officer. ಸೇನಾನಿಯ ಹಸ್ತಕನು.

Adjutant bird (ಅಡ್‌ಜುಟಂಟ್ ಬರ್ಡ್) n. species of stork found in India. ಭಾರತದಲ್ಲಿ ದೊರೆಯುವ ಒಂದು ಬಗೆಯ ಕೊಕ್ಕರೆ.


Adjutant bird

Adjuivant (ಅಡ್ಜ್ಯುವಾಂಟ್) n. an assistant. ಸಹಾಯಕ.

Admin'ister (ಅಡ್‌ಮಿನಿಸ್ಟರ್) vt. i. manage; look after, dispense. ಆಡಳಿತ ನಡೆಸು, ಆಡಳಿತನೋಡು, ನಿರ್ವಹಿಸು.

Administra'tion (ಅಡ್‌ಮಿನಿಸ್ಟ್ರೇಷನ್) n. management. ಆಡಳಿತ, ಕಾರುಭಾರು, ಕಾರ್ಯನಿರ್ವಹಣ, ಪ್ರಭುತ್ವ, ಸರಕಾರ.

Administra'tor (ಅಡ್‌ಮಿನಿಸ್ಟ್ರೇಟರ್) n. one who manages or directs. ಆಡಳಿತಗಾರ, ಕಾರ್ಯನಿರ್ವಾಹಕ.

Administra'trix (ಅಡ್ಮಿನಿಸ್ಟ್ರೇಟ್ರಿಕ್ಸ್) n. a woman who directs or manages. ಆಡಳಿತಗಾರ್ತಿ, ಕಾರ್ಯನಿರ್ವಾಹಕಿ.

Admirable (ಅ̆ಡ್ಮಿರಬಲ್) a. worthy of being admired. ಮೆಚ್ಚತಕ್ಕ, ಶ್ಲಾಘನೀಯ.

Ad′miral (ಅ̆ಡ್ಮಿರಲ್) n. chief commander of a fleet. ನೌಕಾ ಸೇನಾಧಿಪ.

Admi′ralty (ಅ̆ಡ್ಮಿರಾಲ್ಟಿ) n. a board of the government office which manages naval affairs. ನೌಕಾಸೇನಾಧಿಪತ್ಯದ ಕಛೇರಿ.

Admiration (ಅ̆ಡ್ಮಿರೇಶನ್) n. astonishment, wonder. ಮೆಚ್ಚಿಗೆ, ಕೌತುಕ, ಶ್ಲಾಘನೆ.

Admire (ಅಡ್ಮೈರ್) vt. to have a high opinion of; to love. ಮೆಚ್ಚು, ಪ್ರೀತಿಸು, ಗೌರವಿಸು, ಹೊಗಳು, ಶ್ಲಾಘಿಸು.

Admir′er (ಅ̆ಡ್ಮೈರರ್) n. a lover. ಮೆಚ್ಚಿದವ, ಪ್ರಶಂಸಕ, ಶ್ಲಾಘಕ.

Admiss′ible (ಅಡ್ಮಿಸಿಬಲ್) a. that may be admitted. ಒಪ್ಪಿಕೊಳ್ಳತಕ್ಕ, ಗ್ರಾಹ್ಯ, ಅಂಗೀಕಾರಾರ್ಹ.

Admi′ssion (ಅಡ್ಮಿಶನ್) n. confession, leave to enter. ಅಂಗೀಕಾರ, ಸಮ್ಮತಿ, ಪ್ರವೇಶಕ್ಕೆ ಅಪ್ಪಣೆ.

Admit′ (ಅಡ್ಮಿಟ್) vt. i. let in, allow, accept as true. ಒಪ್ಪಿಕೊಳ್ಳು, ಅಪ್ಪಣೆಕೊಡು, ಸ್ವೀಕರಿಸು.

Admittance (ಅಡ್ಮಿಟೆನ್ಸ್) n. right or leave to enter. ಪ್ರವೇಶನ, ಪ್ರವೇಶ.

Admix (ಅಡ್ಮಿಕ್ಸ್) vt. mix with something else. ಮಿಶ್ರಮಾಡು, ಸೇರಿಸು, ಬೆರಸು, ಕಲಸು.

Admix′ture (ಅಡ್ಮಿಕ್ಸ್ಚರ್) n. blend, mixing. ಬೆರಕೆ, ಮಿಶ್ರಣ.

Admon′ish (ಅಡ್ಮಾನಿಶ್) vt. warn, reprove mildly, advise. ಎಚ್ಚರಿಸು, ಬುದ್ಧಿಹೇಳು, ತಪ್ಪುತೋರಿಸಿಕೊಡು.

Admonition (ಅಡ್ಮಾನಿಶನ್) n·advice, warning. ಬುದ್ಧಿವಾದ, ಎಚ್ಚರಿಕೆ.

Adnascent (ಅಡ್ನೇಸೆಂಟ್) a. growing on to. ಬೆಳೆಯುತ್ತಿರುವ.

Adnominal (ಅಡ್ನಾಮಿನಲ್) a. attached to a noun, adjectival. ನಾಮಪದದೊಡನೆ ಸೇರಿದ, ಗುಣವಾಚಕ ಸಂಬಂಧಿ.

Ado′ (ಅಡೂ) n. bustle, trouble. difficulty. ಗಡಿಬಿಡಿ, ಗೊಂದಲ, ಘೋಟಾಳಿ, ಗದ್ದಲ. much ado about nothing. ಒಣಗದ್ದಲ.

Adobe (ಅಡೋಬ್) n. brick dried in sun· ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆ.

Adoles′cence (ಅ̆ಡೋಲೆಸ್ಸನ್ಸ್) n. period of youth (in man from 14 to 25, in woman from 14 to 21) ತಾರುಣ್ಯ, ತರುಣದೆಶೆ.

Adoles′cent (ಅ̆ಡೋಲೆಸ್ಸೆಂಟ್) a. growing to manhood or womanhood. ಯೌವನಭರಿತ, ತರುಣಾವಸ್ಥೆಯ person of either sex. ಯುವಕ, ತರುಣ, ಯುವತಿ, ತರುಣಿ.

Ad′onize (ಅ̆ಡೊನೈಜ್) vt. & i. make beautiful, adorn. ಸಿಂಗರಿಸಿಕೊಳ್ಳು, ಶೃಂಗರಿಸು.

Adopt′ (ಅ̆ಡಾಪ್ಟ್) vt. choose, embrace, take as one's child. ದತ್ತು ಸ್ವೀಕರಿಸು, ಅಂಗೀಕರಿಸು.

Adoptable (ಎಡಾಪ್ಟೆಬಲ್) a. capable of being adopted. ಸ್ವೀಕಾರಯೋಗ್ಯ.

Adop′tion (ಅ̆ಡಾಪ್ಶನ್) n. the state of being adopted. ದತ್ತು ಸ್ವೀಕಾರ.

Adopt′ive (ಅ̆ಡಾಪ್ಟಿವ್) a. that which adopts or is adopted. ಸ್ವೀಕರಿಸುವಂತಹ, ಸ್ವೀಕಾರಾರ್ಹ.

Ador′able (ಅಡೋರೆಬಲ್) a. worthy of being adored. ಪೂಜ್ಯ, ಸಂಪೂಜ್ಯ.

Adora'tion (ಅಡೋರೇಶನ್) n. divine worship, homage; ಅರ್ಚನೆ, ಮನ್ನಣೆ, ಆರಾಧನೆ, ಉಪಾಸನೆ, ಸಂಪೂಜನೆ.

Adore (ಅಡೋರ್) vt. worship, love intensely. ಭಜಿಸು ಪೂಜಿಸು, ಆರಾಧಿಸು.

Ador'er (ಅಡೋರರ್) n. one who adores. ಭಕ್ತ, ಪ್ರೇಮಿ, ಆರಾಧಕ.

Adorn' (ಅಡಾರ್ನ್) vt. deck with ornament, dress embellish. ಅಲಂಕರಿಸು, ಶೃಂಗರಿಸು, ಚಂದಗಾಣಿಸು.

Adorn'ment (ಅಡಾರ್ನ್‌ಮೆಂಟ್) n. ornament, decoration. ಪ್ರಸಾಧನ, ಅಲಂಕಾರ, ಶೃಂಗಾರ ಅಂದಚಂದ, ಭೂಷಣ.

Adown (ಅಡೌನ್) adv. down, downwards. ಕೆಳಕ್ಕೆ, ನಿಮ್ನಸ್ಥಿತಿ.

Adrad (ಅಡ್ರಾಡ್) a. of fearful condition. ಭಯಂಕರ ಸ್ಥಿತಿಯು.

Adrift (ಅಡ್ರಿಫ್ಟ್) adv. moving at random. ತೇಲಾಡುತ್ತಾ, ನಿರಾಧಾರವಾಗಿ, ಲಕ್ಷ್ಯಹೀನವಾಗಿ.

Adroit (ಅ̆ಡ್ರಾಇಟ್) a. expert, clever, skilful. ಜಾಣ, ಚತುರ, ಕುಶಲ, ಕೈಚಳಕದ. adroitness, n. adroitly, adv. ಕೌಶಲ್ಯದಿಂದ.

Adry (ಅ̆ಡ್ರೈ) adj. & adv. thirsty, dry. ಒಣಗಿದ, ಶುಷ್ಕ, ಬಾಯಾರಿದ.

Adscitious (ಅಡ್‌ಸಿಷಿಯಸ್) a. additional, adopted. ಹೊರಗಿನಿಂದ ತೆಗೆದುಕೊಂಡ, ಸೇರಿಸಿದ.

Adscript (ಅಡ್‌ಸ್ಕ್ರಿಪ್ಟ್) n. written after, a serf. ಅನಂತರ ಬರೆದುದು; ಗುಲಾಮು.

Ad'ulate (ಅ̆ಡ್ಯೂಲೇಟ್) vt. flatter servilely. ಅತಿ ಮುಖಸ್ತುತಿಮಾಡು.

Ad'ulation (ಅ̆ಡ್ಯೂಲೇಶನ್) n. fawning, flattery. ಮುಖಸ್ತುತಿ, ಅತಿಪ್ರಶಂಸೆ.

Ad ulatory (ಅ̆ಡ್ಯೂಲೇಟರಿ) a. praising, flattering. ಮುಖಸ್ತುತಿಯು.

Adult (ಅಡಲ್ಟ್) a. grown up, mature. n. grown up person. ಬೆಳೆದ, ಪ್ರಾಯಬಂದ, ನಾ. ಪ್ರೌಢ, ಹಿರಿಯು.

Adulterant (ಅಡಲ್ಟರಾನ್ಟ್) n. the person or thing that adulterates ಬೆರಸುವವ, ಬೆರಸುವ ಪದಾರ್ಥ.

Adul'terate (ಅಡಲ್ಟರೇಟ್) vt. make impure (by mixing) vi. commit adultery. ಕಲಸು, ಬೆರಸು, ವ್ಯಭಿಚರಿಸು, ಅಶುದ್ಧಗೊಳಿಸು.

Adultera'tion (ಅಡಲ್ಟರೇಶನ್) n. making spurious. ಬೆರಕೆ, ಅಪದ್ರವ್ಯ ಮಿಶ್ರಣ.

Adul'terer (ಅಡಲ್ಟರರ್) n. a man guilty of adultery. ವ್ಯಭಿಚಾರಿ, ಜಾರ.

Adul'teress (ಅಡಲ್ಟರೆಸ್) n. a woman guilty of adultery. ವ್ಯಭಿಚಾರಿಣಿ, ಜಾರಿಣಿ, ಹಾದರಗಿತ್ತಿ.

Adul'terine (ಅಡಲ್ಟರೈನ್) a. born of adultery. ವ್ಯಭಿಚಾರದಿಂದ ಜನಿಸಿದ.

Adul'terous (ಅಡಲ್ಟರಸ್) a. guilty of adultery. ವ್ಯಭಿಚಾರದ, ಹಾದರತನದ.

Adul'tery (ಅಡಲ್ಟರಿ) n. violation of the marriage bed; whether one's own or another's. ಹಾದರ, ವ್ಯಭಿಚಾರ.

Adum'brant (ಅಡಂಬ್ರಂಟ್) a. faintly representing. ಸುಳುಹು ತೋರುವ.

Ad'umbrate (ಅಡಂಬ್ರೇಟ್) vt to outline, indicate faintly. ಕುರುಹು ತೋರಿಸು, ಸುಳುಹುತೋರಿಸು, ಸೂಚಿಸು.

Adust' (ಅಡಸ್ಟ್) a. burnt up, scorched. ಸುಟ್ಟ, ಕರಕಾದ, ಕಂದಿದ.

Advance (ಅಡ್‌ವಾನ್ಸ್) vt. i. move or put forward, supply beforehand, rise in rank. ಮುನ್ನಡೆ,

ಉನ್ನತಿಹೊಂದು, ಮುಂಗಡಕೊಡು, ಪದವಿಗೇರು. n. progress, a loan. ಏಳಿಗೆ, ಏರುವಿಕೆ, ಉನ್ನತಿ, ಮುಂಗಡ. make a.s. ಸ್ನೇಹ ಸಂಧಾನಮಾಡು.

Advanced′ (ಅಡ್ವಾನ್ಸ್ಡ್)a. improved, ahead of the times, not old. ಸುಧಾರಿಸಿದ, ಮುಂದರಿದ. a. in age; old. ಹೆಚ್ಚು ವಯಸ್ಸಾದ.

Advance′ment (ಅಡ್ವಾನ್ಸ್‌ಮೆಂಟ್) n. moving forward, promotion· ಅಭಿವೃದ್ಧಿ, ಉತ್ಕರ್ಷ, ಉನ್ನತಿ, ಏಳಿಗೆ.

Advan′tage (ಅಡ್ವಾ̆ಂಟೇಜ್) n. gain, superiority. ಲಾಭ, ಉತ್ತಮಸ್ಥಿತಿ, ಸೌಕರ್ಯ, ಅನುಕೂಲತೆ. take a. of. ಪ್ರಯೋಜನ ಪಡೆ.

Advant′ageous (ಅಡ್ವಾಂಟೇಜಸ್) a. beneficial to, useful. ಲಾಭಕರ, ಪ್ರಯೋಜನಕರ, ಉಪಯುಕ್ತ.

Advene (ಅಡ್ವೀನ್) vt. to be added, in addition : to become part of. ಅಧಿಕವಾಗಿ ಸೇರಿಸಿದ್ದು.

Ad′vent (ಅ̆ಡ್ವೆಂಟ್) n. coming, arrival. ಆಗಮನ, ಬರವು.

Adventi′tious (ಅ̆ಡ್ವೆಂಟಿಶಸ್) a. accidental, foreign. ಆಕಸ್ಮಿಕ, ಅನಿರೀಕ್ಷಿತ, ಆಗಂತುಕ, ಪರಕೀಯ.

Adven′ture (ಅ̆ಡ್ವೆಂಚರ್) unexpected enterprise, a risk. ಸಾಹಸಕಾರ್ಯ, ಧೃಷ್ಟತನ, ಅದ್ಭುತಕೃತ್ಯ. vt. i. dare, risk. ಧೈರ್ಯಪಡು, ಸಾಹಸತೋರು.

Adven′turer(ಅ̆ಡ್ವೆಂಚರರ್)n. one who seeks adventures. ಧೈರ್ಯವಂತ, ಸಾಹಸಿಗ, ಗಟ್ಟಿಗ.

Adven′turous (ಅಡ್ವೆಂಚರಸ್) a. enterprising, venturesome. ಸಾಹಸವುಳ್ಳ, ಧಾರ್ಷ್ಟಿಕ, ಸಾಹಸಪ್ರಿಯ.

Ad′verb (ಅಡ್ವರ್ಬ್) n. a wor qualifying a verb or an adjective or an adverb. ಕ್ರಿಯಾವಿಶೇಷಣ

Adverbial (ಅಡ್ವರ್ಬಿಯಲ್) ad pertaining to an adverb. ಕ್ರಿಯ ವಿಶೇಷಣ ಸಂಬಂಧಿ.

Ad′versary (ಅ̆ಡ್ವರ್ಸರಿ) n. opponent, enemy; antagonist. ವೈರಿ, ವಿರೋಧಿ, ಎದುರಾಳಿ.

Advers′ative (ಅ̆ಡ್ವರ್ಸೆಟಿವ್) a denoting opposition. ವಿರೋ ದರ್ಶಕ, ವಿರುದ್ಧಾರ್ಥದ.

Ad′verse (ಅ̆ಡ್ವರ್ಸ್) n. opposing hostile. ವಿರೋಧದ, ಪ್ರತಿಕೂಲದ.

Ad′vers′ity (ಅ̆ಡ್ವರ್ಸಿಟಿ) n. trouble calamity, misfortune. ವಿಪತ್ತು, ಅನಿಷ್ಟ, ಕ್ಲೇಶ.

Advert′ (ಅಡ್ವರ್ಟ್) vi. turn the mind to; refer to. ಅನುಲಕ್ಷಿಸು, ಮನಸ್ಸುಕೊಡು, ಒಪ್ಪಿಸು, ಗಮನಿಸು.

Advertence (ಅಡ್ವರ್ಟೆನ್ಸ್) n. heedfulness; notice. ಲಕ್ಷಿಸುವಿಕೆ, ಅವಧಾನ.

Advertent (ಅಡ್ವರ್ಟೆನ್ಟ್) a. attentive, heedful. ಆಸಕ್ತಿಯುಳ್ಳ, ಎಚ್ಚರಿಕೆಯುಳ್ಳ.

Adver′tise (ಅ̆ಡ್ವರ್ಟೈಸ್) vt. i. to give public information. ಪ್ರಸಿದ್ಧಪಡಿಸು, ಪ್ರಚಾರಮಾಡು, ಪ್ರಕಟಿಸು.

Advert′isement (ಅ̆ಡ್ವರ್ಟೈಜ್ಮೆಂಟ್) n. a public notice. ಜಾಹಿರಾತು, ಪ್ರಸಿದ್ಧ ಪತ್ರಿಕೆ, ಪ್ರಕಟಣೆ.

Advice′ (ಅ̆ಡ್ವೈಸ್) n. counsel; information; intelligence. ಬುದ್ಧಿವಾದ, ಪರಾಮರ್ಶ, ಬೋಧನೆ, ಉಪದೇಶ. (plu·) notice of despach of goods. ಸೂಚನೆ.

Advis'able (ಅ̆ಡ್ ವೈ ಜೆ ಬ್ ಲ್) a. wise; expedient. ಸೂಕ್ತ, ಸಮುಚಿತ, ಯುಕ್ತಿಸಂಗತ.

Advise (ಅ̆ಡ್ ವೈ ಸ್) vt. i. give advise or counsel; notify. ಬುದ್ಧಿ ಹೇಳು, ಸಲಹೆ ಕೊಡು, ಉಪದೇಶಿಸು.

Advised (ಅಡ್‌ವೈಜ್ಡ್) a. cautious, deliberate. ಬುದ್ಧಿಪೂರ್ವಕವಾದ, ಜಾಗರೂಕ, ಯೋಗ್ಯ.

Advi'sedly (ಅಡ್‌ವೈಜೆಡ್ಲಿ) adv. intentionally. ಬುದ್ಧಿಪೂರ್ವಕವಾಗಿ.

Advi'ser (ಅ̆ ಡ್ವೈ ಜ ರ್) n. person habitually consulted. ಸಲಹೆಗಾರ.

Advi'sory (ಅ̆ಡ್‌ವೈಜರಿ) a. advice giving. ಸಲಹೆಕೊಡುವ, ಸಲಹೆಗಾರರ.

Ad'vocacy (ಅ̆ಡ್‌ವೊಕೆಸಿ) n. the function of an advocate; defence; support. ಕಾರ್ಯಕರ್ತೃತ್ವ, ವಕೀಲತನ, ಪಕ್ಷೀಕರಣ, ಪಕ್ಷಸಮರ್ಥನ.

Ad'vocate (ಅ̆ಡ್‌ವೋಕೇಟ್) n. professional pleader; a defender. ವಕೀಲ, ಪ್ರತಿಪಾದಕ, ಸಮರ್ಥಕ.

Adynamic (ಅಡೈನಮಿಕ್) a. without strength. ಶಕ್ತಿರಹಿತವಾದ.

Adze (ಅ̄ಡ್ಜ್) n. carpenter's axe. ಬಾಚಿ, ಕುಂಟಾರಿಕಾ, ಕೈಬಾಚಿ.



Adze.

Aedicule (ಈಡಿಕ್ಯೂಲ್) n. a small house or room. ಒಂದು ಸಣ್ಣ ಮನೆ ಅಥವಾ ಕೋಣೆ.

Aedile (ಈ ಡೈ ಲ್) n. a Roman Magistrate who superintended public buildings, show, etc. ರೋಮನ್ ಅಧಿಕಾರಿ.

Aegis (ಈ ಜಿ ಸ್) n. protection. ಆಶ್ರಯ, ರಕ್ಷಣೆ.

Aeolipile (ಇ ಯೋ ಲಿ ಪೈ ಲ್) n. an instrument showing force of steam. ಹಬೆಯ ಶಕ್ತಿಯನ್ನು ತೋರಿಸುವ ಯಂತ್ರ.

Ae'on,-e'on (ಎ̆ಅನ್, - ಈಅನ್) n. immense time; an age. ಯುಗ, ಕಲ್ಪ, ಮನ್ವಂತರ.

Ae'rate (ಏರೇಟ್) vt. expose to the action of air; charge with carbonic acid gas. ಗಾಳಿಗೆ ಇಡು, ಅಂಗಾರ ದ್ರಾವಕದ ಗಾಳಿ ತುಂಬು.

Aerial (ಏ ರಿ ಯ ಲ್) a. gaseous; etherial. ಗಾಳಿಯ, ವಾಯುಮಯ, ವಾಯುಮಂಡಲದ. n. collecting wire in wireless. ಬಾನುಲಿಯ (ರೇಡಿಯೋ ಯಂತ್ರದಲ್ಲಿ) ಧ್ವನಿ ಆಕರ್ಷಕ ತಂತಿ.



Aerial

Ae'rie, Aery, ey'ry (ಎಅರಿ, ಆಇರಿ) n. nest of any bird of prey; a house on some high mountain. ಹದ್ದಿನ ಗೂಡು, ಎತ್ತರವಾದ ಸ್ಥಳದಲ್ಲಿ ಕಟ್ಟಿದ ಮನೆ.

Aeriferous (ಏಅರಿಫೆರಸ್) a. conveying air. ವಾಯುವಾಹಕ.

Aerification (ಏರಿಫಿಕೇಶನ್) n. act of becoming air. ವಾಯುರೂಪಕ್ಕೆ ಪರಿವರ್ತನ.

Aeriform (ಏ ರಿ ಫಾ ರ ಮ್) a. of the form of air, gaseous. ಗಾಳಿಯ, ವಾಯುಸಮಾನ.

Aeri'fy (ಏ ಅ ರಿ ಫೈ) vt. change to the state of air or gas. ಗಾಳಿಯಾಗಿಸು.

Aer'obatics (ಏರೋಬ್ಯಾಟಿಕ್ಸ್) n. feats of aviation. ವಿಮಾನಚಲನ ಕೌಶಲ್ಯ.

Aer'odrome (ಏರೋಡ್ರೋಮ್) n. aviation ground. ವಿಮಾನನಿಲ್ದಾಣ.

Aer'ogram (ಎಅರೋಗ್ರಾಂ) n.a wireless message. ಬಾನುಲಿ ಸುದ್ದಿ, ವಾಯುವಾರ್ತೆ.

Aerolite (ಎರೋಲೈಟ್) n. a meterorite. ಉಲ್ಕ, ಉಲ್ಕಾಶ್ಮ.

Aeromancy (ಏರೋಮಾನ್ಸಿ) n. forecasting the weather. ಹವಾಗುಣದ ವಿಚಾರವಾಗಿ ಭವಿಷ್ಯ ಹೇಳುವಿಕೆ.

Aerometer (ಏರೋಮೀಟರ್) n. instrument for measuring air. ವಾಯುಭಾರಮಾಪಕ.

Aerometry (ಏರೋಮಿಟ್ರೀ) n. science of weighing the air. ವಾಯುಭಾರರೂಪ ಶಾಸ್ತ್ರ.

Ae'roplane (ಏರೋಪ್ಲೇನ್) n. a flying machine heavier than air using planes. ವಿಮಾನ.



Aeroplane

Aesthetic (ಎಅಸ್ಥೆಟಿಕ್) a. relating to appreciation of the beautiful. ಸೌಂದರ್ಯದ, ಗುಣಗ್ರಹಣದ.

Aesthet'ics (ಏಸ್ಥೆಟಿಕ್ಸ್) n. (sing) the principles of taste and of fine arts. ಸೌಂದರ್ಯಶಾಸ್ತ್ರ, ಲಲಿತಕಲೆಯ ವಿಜ್ಞಾನ, ಸೌಂದರ್ಯ ತತ್ವ.

Aestival (ಈಸ್ಟಿವಲ್) a. pertaining to summer. ಬೇಸಿಗೆಯ.

Aetiol'ogy (ಇಟಿಯಾಲಜಿ) n. inquiry into the origin of a disease. ರೋಗಮೂಲವಿಜ್ಞಾನ.

Afar' (ಅಫಾರ್) adv. from a f distance; at a distance. ದೂ ದಿಂದ, ದೂರದಲ್ಲಿ.

Aff'ability (ಅಫಬಿಲಿಟಿ) n. courtes civility. ಸೌಜನ್ಯ, ಸಭ್ಯತೆ, ಸೌಶೀಲ

Aff'able (ಅಫೆಬಲ್) a. courteou easy to be spoken to. ಸಭ್ಯ, ಸವ ನಯವುಳ್ಳ.

Affair' (ಅಫೇರ್) n· business; matter. ಕೆಲಸ, ಕಾರ್ಯ, ವಿಷಯ tame a. ನೀರಸ ವಿಚಾರ.

Affect' (ಅ ಫೆ ಕ್ಟ್) vt. to act influence; pose; touch the fee ings. ನಟಿಸು, ಮನಸ್ಸು ಕರಗಿಸು, ವೇ ಧರಿಸು.

Affect'ation (ಅಫಕ್ಟೇಶನ್) n.prete tious display. ಸೋಗು, ಬಯ್ಯಾ ಕೃತ್ರಿಮತೆ.

Affec'ted (ಅಫೆಕ್ಟೆಡ್) a. grieve feigned. ನಟನೆಯ, ತೋರಿಕೆಯ.

Affec'tion (ಅಫೆಕ್ಶನ್) n. kindnes love. ಪ್ರೀತಿ, ಮಮತೆ, ಒಲುವೆ ವಾತ್ಸಲ್ಯ.

Affec'tionate (ಅಫೆಕ್ಶನೇಟ್) a. lo ing. ಪ್ರೀತಿಯುಳ್ಳ, ಒಲವಿನ, ವಾತ್ಸಲ್ಯ

Afferent (ಅಫರೆಂಟ್) a. leading the centre. ಅಂತರ್ವಾಹಿ, ಅಭಿವಾಹಿ.

Affi'ance (ಅಫೈಅನ್ಸ್) vt. n.betrot ಲಗ್ನಕ್ಕೆ ನಿಶ್ಚಯಿಸು. n. betrotha (ಲಗ್ನ) ನಿಶ್ಚಯ.

Affida'vit (ಅಫಿಡೆವಿಟ್) n. writte statement on oath. ಪ್ರಮಾಣಪತ್ರ, ಪಣಪತ್ರ, ಶಪಥಪತ್ರ.

Affiil'iate (ಅಫಿಲಿಏಟ್) vt. adop ally ದತ್ತು ಸ್ವೀಕಾರಮಾಡು, ಸ್ವೀಕರಿಸ (ಸಭೆಗೆ) ಸೇರಿಸು, ಸಂಯೋಜನಮಾಡಿಕೊ

Affiliation (ಅಫಿಲಿಏಷನ್) n. act o affiliating, adopting. ದತ್ತುಸ್ವೀಕಾ ಸಭೆಗೆ ಸೇರಿಸುವಿಕೆ, ಸಂಯೋಜನೆ.

Affinal (ಅಫೈನಲ್) a. belonging to the same pedigree. ವಿವಾಹಸಂಬಂಧವುಳ್ಳ, ಒಂದೇಕುಲದ.

Affined (ಅಫೈನ್ಡ್) a. connected; related. ಸಂಬಂಧಿಸಿದ.

Affinity (ಅಫಿನಿಟಿ) n. relationship, resemblance. ಸಾದೃಶ್ಯ, ಸಾಮ್ಯತೆ, ಸಂಬಂಧ.

Affirm' (ಅಫರ್ಮ್) vt. i. assert positively. ಖಂಡಿತವಾಗಿ ಹೇಳು, ದೃಢೀಕರಿಸು, ಕಂಠೋಕ್ತವಾಗಿ ನುಡಿ.

Affirma'tion(ಅ̆ಫರ್ಮೇಷನ್) n. sole declaration. ಕಂಠೋಕ್ತವಾಕ್ಯ, ದೃಢೀಕರಣ, ಸತ್ಯಪ್ರತಿಜ್ಞೆ.

Affirm'ative (ಅ̆ಫರ್ಮೇಟಿವ್) a. affirming, positive. ನಿಶ್ಚಯಾರ್ಥಕ, ದೃಢತಾಸೂಚಕ, ಖಂಡಿತ.

Affix' (ಅಫಿಕ್ಸ್) vt. add ; append. ಕೂಡಿಸು, ಹತ್ತಿಸು, ಸೇರಿಸು, ಲಗತ್ತಿಸು. n. addition to a word entered before or after it. ಪ್ರತ್ಯಯ.

Affla'tus (ಅಫ್ಲೇಟಸ್) n. religious inspiration. ಈಶ್ವರ ಪ್ರೇರಣೆ.

Afflict (ಅಫ್ಲಿಕ್ಟ್) vt. give pain; trouble. ತ್ರಾಸಕೊಡು, ತೊಂದರೆಕೊಡು, ವ್ಯಥೆಯನ್ನುಂಟುಮಾಡು, ಬಾಧಿಸು.

Afflic'tion (ಅಫ್ಲಿಕ್ಶನ್) n. misery, grief; pain. ದುಃಖ, ಕ್ಲೇಶ, ವ್ಯಥೆ, ನೋವು, ವೇಧೆ.

Affluence (ಅಫ್ಲುಅನ್ಸ್) n. abundance; wealth. ಧನಸಮೃದ್ಧಿ, ಸಂಪತ್ತು, ಪ್ರಾಚುರ್ಯ.

Aff'luent (ಅಫ್ಲುಎಂಟ್) a. rich, wealthy. ಸಮೃದ್ಧ, ಐಶ್ವರ್ಯಶಾಲಿಯಾದ, ವಿಪುಲವಾದ.

Aff'lux (ಅಫ್ಲಕ್ಸ್) n. flow. ಹರಿತ, ಪ್ರವಾಹ.

Afforce (ಅಫೋರ್ಸ್) vt. to apply force upon, to ravish. ಬಲಾತ್ಕಾರಮಾಡು, ಶಕ್ತಿಯನ್ನು ಚಲಾಯಿಸು.

Afford' (ಅಫೋರ್ಡ್) vt. yield ; be able to expend. ಕೊಡು, ಈಯು, ವ್ಯಯಮಾಡಲು ಶಕ್ತನಾಗು.

Affo'rest (ಅಫಾರೆಸ್ಟ್) vt. turn land into forest. ಕಾಡು ಬೆಳಸು.

Affranchise (ಅಫ್ರಾನ್ಚೈಸ್) vt. to free from bondage. ದಾಸ್ಯದಿಂದ ಬಿಡುಗಡೆ ಮಾಡು.

Affray' (ಅಫ್ರೆ) n. a brawl ; fight, ಕಲಹ, ಜಗಳ, ಕಾದಾಟ, ವಿವಾದ.

Affreight (ಅಫ್ರೈಟ್) vt. to hire a ship. ಹಡಗನ್ನುಬಾಡಿಗೆಗೆ ಗೊತ್ತುಮಾಡು.

Affright' (ಅಫ್ರೈಟ್) vt. frighten, ಭೀತಿಯುಂಟುಮಾಡು, ಹೆದರಿಸು,ಬೆಚ್ಚಿಸು, n. great fear. ಭೀತಿ, ಹೆದರಿಕೆ.

Affront (ಅಫ್ರಂಟ್) vt. insult openly. ಬಹಿರಂಗವಾಗಿ ಅಪಮಾನಮಾಡು, ಅಪಚಾರಮಾಡು. n. open insult. ಅಪಮಾನ, ಮುಖಭಂಗ, ಅವಮರ್ಯಾದೆ.

Affu'sion (ಅಫ್ಯೂಜ್ಜನ್) n. the act of pouring upon. (ತೀರು)ಸರಿಯೋಣ, ಎರೆಯುವಿಕೆ.

Affy (ಅಫೈ) vt. betroth, bind. ವಿವಾಹ ನಿಶ್ಚಯಮಾಡು, ಕಟ್ಟು.

Afghan (ಅಫ್ಘನ್)n. an inhabitant of Afghanistan. ಅಫ್ಘಾನಿಸ್ತಾನದವನು.

Afield (ಅಫೀಲ್ಡ್) adv. on, into the field. ಹೊಲದಲ್ಲಿ, ಹೊಲಕ್ಕೆ.

Afire (ಅಫೈರ್) adv. on fire, ಬೆಂಕಿಹತ್ತಿ ಉರಿಯುತ್ತ.

Aflame' (ಅಫ್ಲೇಮ್) a. & adv. flaming, blazing. ಉರಿಯುತ್ತಾ, ಸುಡುತ್ತಾ, ಜ್ವಲಿಸುತ್ತಾ.

Afloat' (ಅಫ್ಲೋಟ್) adv. floating at seas, out of debts. ತೇಲುತ್ತಾ, ಸಮುದ್ರದಲ್ಲಿ, ಋಣಮುಕ್ತ, ಸಾಲವಿಲ್ಲದೆ.

Afoot (ಅಫೂಟ್) adv. on foot, in progress. ಪಾದಚಾರಿಯಾಗಿ, ಕಾಲುನಡೆಯಲ್ಲಿ, ಚಲಿಸುತ್ತ.

Afore' (ಅಫೋರ್) adv. prep. in front of, before. ಮುಂದೆ, ಎದುರಿನಲ್ಲಿ, ಮುಂಚೆ.

Afore'said (ಅಫೋರ್‌ಸೆಡ್) a. said before. ಮೊದಲು ಹೇಳಿದ, ಪೂರ್ವೋಕ್ತ.

Afraid' (ಅಫ್ರೈಡ್) a. in fear; feeling fear; timid. ಭಯಸ್ತ, ಹೆದರುವ, ಅಂಜುವ.

Afresh' (ಅಫ್ರೆಶ್)adv. anew; again ಹೊಸದಾಗಿ, ಪುನಃ, ಮತ್ತೊಮ್ಮೆ.

Aft (ಆಫ್ಟ್)adv. behind; in, near on. towards the stern of a ship. ಹಡಗಿನ ಹಿಂಗಡೆ, ಹಿಂಭಾಗದಲ್ಲಿ.

Af'ter (ಆಫ್ಟರ್) adv. later,behind. ಹೊತ್ತಾಗಿ, ತಡವಾಗಿ,ಬಳಿಕ. prep. like, in imitation of. ಅಂತೆ, ಅನುಸರಿಸಿ, a. all, in the end. ಅಂತ್ಯದಲ್ಲಿ, ಕಟ್ಟಕಡೆಗೆ. a. one's heart, as one desires. –ನ ಅಪೇಕ್ಷೆಯಂತೆ.

Afterbirth (ಆಫ್ಟರ್‌ಬರ್ತ್) n. membrane enveloping foetus in womb. ಸೆತ್ತೆಮಾಸು, ಗರ್ಭವೇಷ್ಟನ, ಕಸ.

Af'ter-crop (ಆಫ್ಟರ್‌ಕ್ರಾಪ್) n. second crop. ಎರಡನೆಯ ಬೆಳೆ.

Af'terdamp (ಆಫ್ಟರ್‌ಡಾಂಪ್) n. choke damp arising in coal mines after explosion of fire-damp. ಗಣಿಗಳಲ್ಲಿ ಅಗ್ನಿಸ್ಫೋಟಕವಾದ ನಂತರ ಉಳಿದ ಹೊಗೆ.

Afterglow (ಆಫ್ಟರ್‌ಗ್ಲೋ) n. glow in the west after sunset. ಸಂಜೆಯ ಬೆಳಕು, ಸಂಧ್ಯಾರಾಗ, ಬೈಗಿನ ಬೆಳಕು.

Af'termath (ಆಫ್ಟರ್‌ಮಾತ್) n. second mowing of grass, results (ಹುಲ್ಲಿನ) ಎರಡನೆಯ ಕಟಾವು, ಪರಿಣಾಮ.

Af termost (ಆಫ್ಟರ್‌ಮೋಸ್ಟ್) ad hindmost; most aft. ಎಲ್ಲಕ ಹಿಂದೆ.

Af'ternoon (ಆಫ್ಟರ್‌ನೂನ್) n. tim between noon and evening ಅಪರಾಹ್ಣ, ಇಳಿಹೊತ್ತು. a. farmer, lazy,dilatory,farmer. a. fellow ಹರಟೆಮಲ್ಲ, ಬೊಗಳೆಯುವ.

Af'ter-pains (ಆಫ್ಟರ್‌ಪೇನ್ಸ್) n.pl pains after child-birth. ಸೂತಿ ಶೂಲೆ, ಹಡೆದನಂತರದ ನೋವು.

Afterthought (ಆಫ್ಟರ್‌ಥಾಟ್) n. later consideration. ಕೆಲಸವಾ ನಂತರ ಆಲೋಚನೆ, ಪುನರಾಲೋಚ ಅನುಬೋಧೆ.

Afterwards, Afterward (ಆಫ್ಟ ವರ್ಡ್ಸ್,-ವರ್ಡ್) adv. later, subsequently. ಆಮೇಲೆ, ಬಳಿಕ, ಅನಂತ ತರುವಾಯ.

Again' (ಅಗೇನ್) adv. once more further, besides. ಪುನಃ,ಮತ್ತೆ,ತಿರು

Against' (ಅಗೇನ್ಸ್ಟ್) prep. in op position to; opposite to. ವಿರೋ ವಾಗಿ, ಬದಲಾಗಿ, ಪ್ರತಿಕೂಲವಾಗಿ.

Agalactous (ಅಗಲಾಕ್ಟಸ್) a. bere of mother's milk. ಎದೆಹಾಲಿಲ್ಲದ.

Agamic(ಅಗಾಮಿಕ್) a. characteris ed by absence of sexual action ಪುಂಸ್ತ್ರೀ ಕ್ರಿಯಾರಹಿತ.

Agamist (ಅಗಾಮಿಸ್ಟ್) n. one wh is against marriage. ವಿವಾ ವಿರೋಧಿ

Agamous (ಅಗಾಮಸ್) a. havin no sexual organs. ಜನನೇಂದ್ರಿಯ ರಹಿತ.

Agape' (ಅಗೇಪ್) a. or adv. gap ing. ಬಾಯ್ಬಿಟ್ಟ, ಬಾಯಿತೆರೆದ, ಚಕಿ ನಾದ.

Agastric (ಅಗ್ಯಾಸ್ಟ್ರಿಕ್) a. having n stomach. ಜಠರ ರಹಿತ.

ge (ಏಜ್) n. length of life or existence; a period of time. ಆಯುಷ್ಯ, ವಯಸ್ಸು, ಕಾಲ, ಯುಗ.

ged (ಏಜ್ಡ್) a. advanced in age; old. ವೃದ್ಧ, ವಯಸ್ಸಾದ, ಹಳಬ, ಮುಪ್ಪಿನ.

ge'less (ಏಜ್ ಲೆಸ್) a. never growing old. ಮುಪ್ಪಿಲ್ಲದ, ಅಜರ, ವಯಸ್ಸಾಗದ.

'gency (ಏಜನ್ಸಿ) n. action or power; the office of an agent. ಕೃತಿ, ಕರ್ತೃತ್ವ, ಪಾರುಪತ್ಯ.

gen'da (ಅಜೆಂಡಾ) n. programme of a business meeting. ಕಾರ್ಯ ಸೂಚಿಪತ್ರ, ಯಾದಿ, ಕಾರ್ಯಕ್ರಮ.

'gent (ಏಜೆಂಟ್) n. person or thing producing an effect; a deputy. ಕರ್ತೃ, ಕಾರ್ಯಸ್ಥ, ಕಾರಭಾರಿ, ನಿಯೋಗಿ.

gential (ಏಜನ್ಶಲ್) a. pertaining to an agent. ಕಾರ್ಯಕರ್ತೃ ಸಂಬಂಧವಾದ.

gglom'era'te(ಅಗ್ಲಾಮರೇಟ್)vt.i. gather together. ಏಕತ್ರ ಮಾಡು, ಮುದ್ದೆಗೂಡಿಸು, ರಾಶಿಮಾಡು, ಗುಂಪಾಗು. -tion n. a heap. ರಾಶಿ, ಗುಂಪು, ಮುದ್ದೆ.

Agglutinant(ಅಗ್ಲೂಟಿನಾನ್ಟ್) n. that which glues. ಅಂಟುವಂತೆಮಾಡುವ ಪದಾರ್ಥ.

Agglutinate (ಅಗ್ಲೂಟಿನೇಟ್) vt. i. unite as glue. ಅಂಟಿಸು, ಜೋಡಿಸು, ಅಂಟು.

Agg'randize (ಅಗ್ರಂಡೈಜ್) vt. increase in power or rank. ಹೆಚ್ಚು ಮಾಡು, ಅತಿಶಯಗೊಳಿಸು. -ment n.

Agg'ravate (ಅಗ್ರವೇಟ್) vt. make worse; provoke. ಹೆಚ್ಚು ಮಾಡು, ಹೆಚ್ಚಿಸು, ಕೆಣಕು, ಉದ್ರೇಕಿಸು, ·tor·n.

Agg'ravation (ಅಗ್ರವೇಶನ್) n. making worse; displeasure. ಉದ್ರೇಕ; ಅಸಂತೋಷ.

Agg'regate (ಅಗ್ರಿಗೇಟ್) a. collected total. ಒಟ್ಟುಕೂಡಿಸಿದ. n. sum total. ಸಮಷ್ಟಿ, ಸಂಗ್ರಹ, ಒಟ್ಟು. vt. i. collect into a mass. ರಾಶಿ ಮಾಡು; ಸೇರಿಸು, ಗುಂಪುಮಾಡು, ಒಟ್ಟುಗೂಡಿಸು.

Aggrega'tion (ಅಗ್ರಿಗೇಶನ್) n. collection. ಒಟ್ಟು. ಮೊತ್ತ, ರಾಶಿ.

Aggress'(ಅಗ್ರೆಸ್) vt. attack first. ಜಗಳಹೂಡು, ಮೇಲ್ಬೀಳು.

Aggre'ssion (ಅಗ್ರೆಶನ್) n. first act leading to a quarrel. ಅತಿಕ್ರಮಣ, ಜಗಳಹೂಡುವಿಕೆ, ಆಕ್ರಮಣ, ಧಾಳಿ.

Aggressive (ಅಗ್ರೆಸಿವ್) a. making the first attack or prone to do so. ಕೆಣಕುವ, ಜಗಳಗಂಟ. n. aggressiveness. ಜಗಳಗಂಟತನ, ಕಲಹಪ್ರಿಯತೆ.

Aggress'or (ಅಗ್ರೆಸರ್) n. one who attacks first. ಜಗಳಗಂಟ, ಪ್ರಥಮಾಪಕಾರಿ, ಕಲಹಪ್ರಿಯ, ಧಾಳಿಗಾರ.

Aggrieve' (ಅಗ್ರೀವ್) vt. to pain or to injure. ದುಃಖಕೊಡು, ಪೀಡಿಸು.

Aggrieved' (ಅಗ್ರೀವ್ಡ್) a. pained; vexed; injured. ದುಃಖಿತ, ಪೀಡಿತ, ದುಃಖಾಕುಲ.

Aghast' (ಅಘಾಸ್ಟ್) a. terrified; amazed. ಬೆಚ್ಚಿಬೆರಗಾದ, ಬೆಪ್ಪಾದ, ದಿಗ್ಭ್ರಮೆಗೊಂಡ.

A'gile(ಅಜಾಇಲ್)a. active, nimble. ಚುರುಕಾದ, ಚಟುವಟಿಕೆಯ, ಚಳಕವುಳ್ಳ.

Agil'ity (ಅಜಿಲಿಟಿ) n. quickness of motion; nimbleness. ಕೈಚಳಕ, ಚಪಲತೆ, ಚುರುಕು.

A'gio (ಏಜಿಓ) n. charge for changing paper money into cash. ವಟ್ಟ.

Agiotage (ಏಜಿಅಟೆಜ್) n. exchange business. ವಿನಿಮಯ, ವ್ಯಾಪಾರ.

Agist(ಅಜಿಸ್ಟ್)vt.take in livestock to feed. ಕೂಲಿಗೆ ಮೇಯಿಸಲು ದನಗಳನ್ನು ತೆಗೆದುಕೊ.

A'gitate (ಅಜಿಟೇಟ್) vt. i. stir violently;disturb;excite. ಜೋರಾಗಿ ಕಲಕು, ಕಳವಳಿಸು, ತಲ್ಲಣಗೊಳಿಸು, ಚಳವಳಿ ಎಬ್ಬಿಸು, ಎದೆಗುದಿಸು. n. agitator. ಚಳವಳಿಗಾರ.

Agita'tion(ಅಜಿಟೇಶನ್) n. commotion; perturbation of mind. ಚಳವಳಿ, ಉದ್ವೇಗ; ಎದೆಗುದಿ, ಕಲಕುವಿಕೆ.

Aglet (ಅಗ್ಲೆಟ್) n. metal tag of a lace. ಜರತಾರಿಯ ಗೊಂಡೆ.

Agley (ಅಗ್ಲೇ) a.slanting. ಓರೆಯಾಗಿ, ವಕ್ರವಾಗಿ.

Aglimmer (ಅಗ್ಲಿಮರ್) adv. in a glow, glowing. ಪ್ರಕಾಶಿಸುತ್ತ, ಹೊಳೆಯುತ್ತ.

Aglossal (ಅಗ್ಲಾಸಲ್) a. toungeless. ನಾಲಿಗೆಯಿಲ್ಲದವ.

Aglow' (ಅಗ್ಲೋ) a. & ad. very warm, red-hot. ನಿಗಿನಿಗಿಯಾಗಿ, ಪ್ರಕಾಶಮಯ.

Ag'nail (ಅಗ್ನೇಲ್)a. an inflammation round the toe or finger nail. ಉಗುರುಸುತ್ತು.

Ag'nate (ಅಗ್ನೇಟ್) a. related or akin by the father's side, ಪಿತೃವಂಶೀಯ ಸಂಬಂಧಿ, ಸಗೋತ್ರಿ, ಜ್ಞಾತಿ.

Agnom'en(ಅಗ್ನೋಮನ್)n.surname added. ಉಪನಾಮ, ಮನೆಯ ಹೆಸರು.

Agnos'tic(ಅಗ್ನಾಸ್ಟಿಕ್)n.one claiming that nothing can be known of God or things beyond material phenomena. ಅಜ್ಞೇಯವಾದಿ, ನಾಸ್ತಿಕ, ನಿರೀಶ್ವರವಾದಿ.

Agnus(ಅಗ್‌ನಸ್) n. lamb. ಕುರಿಮರಿ

Ago' (ಅಗೋ) adv. gone, past, since. ಹಿಂದೆ, ಮುಂಚೆ, ಪೂರ್ವದಲ್ಲಿ.

Agog (ಅಗಾಗ್) a. adv. eager, excited and ready. ಆಶಾತುರ, ನಿಲುವಿಲ್ಲದ; ಆತುರದಿಂದ. all a., in restless expectation. ಅತ್ಯಾತುರವಾಗಿ, ಕಾತುರದಿಂದ.

Agonic (ಅಗಾನಿಕ್) a. making no angle. ಕೋನರಹಿತ, ಕೋನಕ.

Agonist (ಅಗಾನಿಸ್ಟ್)n. a champion in athletics, a combatant. ಜಟ್ಟಿ, ಯೋಧ.

Agonis'tic(ಅಗೋನಿಸ್ಟಿಕ್)a.relating to athletic contests. ಜಟ್ಟಿ ಕಾಳಗದ.

Agonistics (ಅಗಾನಿಸ್ಟಿಕ್ಸ್) n. the art of prize fighting. ಜಟ್ಟಿಕಾಳಗದ ಕಲೆ.

Ago'nize (ಅಗೋನೈಜ್) vt. i. torture, struggle. ಸಂಕಟಪಡಿಸು, ಯಾತನೆಪಡಿಸು, ಹಿಂಸಿಸು; ಹೋರಾಡು, ಪ್ರಾಣಸಂಕಟದಲ್ಲಿರು.

Ag'ony(ಅಗನಿ) n. violent struggle, extreme suffering, the death struggle in particular. ಪ್ರಾಣಸಂಕಟ, ಮರಣಯಾತನೆ, ವ್ಯಥೆ.

Agoraphobia (ಅಗೋರಾಫೋಬಿಯ) n. dread of public places. ಸಾರ್ವಜನಿಕ ಸ್ಥಾನಗಳನ್ನು ಕಂಡರೆ ಭಯ.

Agrar'ian(ಅಗ್ರೇರಿಯನ್) a.relating to land, rural. ಹೊಲ ಸಂಬಂಧದ, ಭೂಮಿಯ, ಜಿರಾಯತಿ, ಕೃಷಿಯ, ಹಳ್ಳಿಯ.

Agree' (ಅಗ್ರೀ)vt.be alike;concur, consent. ತಾಳೆಬೀಳು, ಹೋಲು; ಒಪ್ಪು, ಸಮ್ಮತಿಕೊಡು, ಒಮ್ಮತನಾಗು. a. to yield, assent to. ಸಮ್ಮತಿಸು, ಒಪ್ಪಿಕೊಳ್ಳು. a with, suit, resemble. ಒಪ್ಪು, ಹೋಲು, ಹೊಂದು.

Agree'able (ಅಗ್ರಿಎಬಲ್) a. pleasing. suitable to. ರಮ್ಯ, ಪ್ರಿಯ, ಒಪ್ಪುವ, ಇಂಪಾದ, ಅನುಕೂಲವಾದ.

Agree'ment(ಅಗ್ರೀಮೆಂಟ್) n. concord, harmony, conformity.

legal contract. ತಾಳೆ, ಒಪ್ಪಿಗೆ, ಒಪ್ಪಂದ, ಕರಾರು, ಸಮ್ಮತಿ.

Agrements(ಅಗ್ರೇಮಾನ್ಟ್ಸ್)n.agreeable qualities, or surroundings. ಹಿತವಾದ ಗುಣಗಳು ಅಥವಾ ಸನ್ನಿವೇಶಗಳು.

Agrestial (ಅಗ್ರೆಸ್ಟಿಯಲ್) a. living in fields. ಹೊಲಗಳಲ್ಲಿ ವಾಸಮಾಡುವ.

Agres'tic (ಅಗ್ರೆಸ್ಟಿಕ್) a. of the fields, rustic. ಹೊಲದ, ಗ್ರಾಮ್ಯ, ಹಳ್ಳಿಯ.

Ag'ricultural (ಅಗ್ರಿಕಲ್ಚರಲ್) a. relating to agriculture. ಬೇಸಾಯದ ಆರಂಬದ, ವ್ಯವಸಾಯದ, ಕೃಷಿಸಂಬಂಧಿ.

Ag'riculture (ಅ̆ಗ್ರಿಕಲ್ಚರ್) n. the art of cultivating the land· ಬೇಸಾಯ, ಆರಂಬ, ಕೃಷಿ.

Ag'riculturist (ಅಗ್ರಿಕಲ್ಚರಿಸ್ಟ್) n. one skilled in agriculture; a farmer. ಒಕ್ಕಲಿಗ, ರೈತ, ಕೃಷೀವಲ, ಆರಂಬಗಾರ.

Agriology (ಅ ಗ್ರಿ ಯಾ ಲೊ ಜಿ) n. comparative study of the primitive peoples. ಅನಾಗರಿಕ ಮನುಷ್ಯಜಾತಿಗಳ ನಡೆನುಡಿಗಳ ತುಲನಾತ್ಮಕ ವಿಚಾರ.

Agronomy (ಅಗ್ರಾನೊಮಿ)n. scientific farming, husbandry. ಕೃಷಿವಿದ್ಯೆ, ಕೃಷಿವಾರ್ತಾಶಾಸ್ತ್ರ.

Agrostography(ಅ̆ಗ್ರಸ್ಟೋಗ್ರ̆ಾಫಿ) n. scientific description of grass. ಹುಲ್ಲುಗಳಿಗೆ ಸಂಬಂಧಿಸಿದ ಶಾಸ್ತ್ರ.

Aground(ಅಗ್ರೌಂಡ್) a. adv. stuck on the bottom of shallow water ದಡಕ್ಕೆತಾಕಿ, ತೀರಕ್ಕೆತಾಕಿ, ತಳಕ್ಕೆ ತಾಗಿದ.

A'gue (ಎಗ್ಯೂ) n· intermittent fever. ಚಳಿಜ್ವರ,ಕಂಪಜ್ವರ,ಮಲೇರಿಯಾ.

Ag'ued (ಅ̆ಗ್ಯೂಡ್) a. having ague ಚಳಿಜ್ವರವಿರುವ.

Agyrate (ಅಜೈರೈಟ್)a. not moving in a circular manner. ಸುತ್ತುಸುತ್ತಾಗಿ ಸುತ್ತದಿರುವ.

Ah,'Aha (ಅಃ,ಅಹ)intj. ಅಹ!ಅಹಹಾ!

Ahead' (ಅಹೆಡ್)adv. in advance, forward. ಮುಂಚಿತವಾಗಿ,ಮುಂದಾಗಿಯೆ.

Ahorseback (ಅ̆ಹಾರ್ಸ್‌ಬ್ಯಾಕ್) adv· on horeseback. ಅಶ್ವಾರೋಹಿಯಾಗಿ.

Ahoy (ಅಹಾಯ್) interj. an exclamation used by sailors. ನಾವಿಕರು ಉಪಯೋಗಿಸುವ ಭಾವಸೂಚಕ ಶಬ್ದ.

Ahriman(ಅಹ್ರಿಮನ್)n.God of evil of the zorastrians. ಪಾಪದೇವತೆ.

Aid (ಏಡ್) vt. help; assist. ಸಹಾಯಮಾಡು, ಬೆಂಬಲಕೊಡು. n. help, assistance. ಸಹಾಯ,ನೆರವು, ಒತ್ತಾಸೆ, ಬೆಂಬಲ.

Aide-de-camp (ಏಡ್.ಡಿ.ಕಾಂಪ್) n. (plu. aides-de-camp) officer assisting a general. ಸೇನಾನಿಯ ಹಸ್ತಕ, ಸೇನಾಪತಿ ಸಹಾಯಕ.

Aigrette (ಏಯರ್‌ಗ್ರೇಟ್) n· a white heron, tuft of feathers or hair. ಬಿಳಿಯ ಹೆರನ್‌ಹಕ್ಕಿ, ಶಿರಪೇಷ್, ತುರಾಯಿ.

Ail (ಎಇಲ್) vt. i. trouble in body or mind; be ill. ಪೀಡಿಸು, ನೋಯಿಸು, ಅಸ್ವಸ್ಥವಾಗಿರು, ನರಳುತ್ತಿರು.

Ail'ment (ಎಇಲ್‌ಮೆಂಟ್) n· pain, indisposition. ಜಾಡ್ಯ,ರೋಗ,ಕಾಯಿಲೆ; ವ್ಯಾಧಿ, ಅಸ್ವಾಸ್ಥ್ಯ.

Aim(ಏಮ್) vt. i. direct at; point at. ಗುರಿಇಡು, ನೋಟವಿಡು, ಗುರಿಕಟ್ಟು, ಕುರಿಯು n. aiming. object aimed at ಗುರಿ, ಎಸೆ, ನೋಟ. miss the aim ಎಸೆತಪ್ಪು, ಗುರಿತಪ್ಪು.

Aim'less (ಏಮ್‌ಲೆಸ್) a. without purpose. ಗುರಿಇಲ್ಲದ, ಲಕ್ಷ್ಯವಿಲ್ಲದ.

Air (ಏರ್) n. the atmosphere, outward appearance; manner or look, (plu.) affected manners. ಗಾಳಿ, ಹವೆ, ವಾಯು, ಮುಖಭಾವ, ಬ. ಬೆಡಗು, ಒಯ್ಯಾರ. vt. dry, expose to air, show off. ಆರಿಸು, ಗಾಳಿಗಿಡು, ಪ್ರದರ್ಶಿಸು. castles in the a. visionary schemes. ಗಾಳಿಗೋಪುರ, ಆಕಾಶ ಕುಸುಮ. a. cell. ಗಾಳಿಗೂಡು.

Air-conditioning (ಎಅರ್ ಕಂಡಿಷನಿಂಗ್) n. control of temperature, moisture, &c, of air in the room. ಮನೆಯಲ್ಲಿ ವಾಯುಸಂಚಾರವನ್ನು ಹದಗೊಳಿಸುವುದು.

Air'craft (ಏಅರ್‌ಕ್ರಾಫ್ಟ್) n. flying machines. ವಿಮಾನಯಂತ್ರಗಳು, ಬೆಲೂನ್, ವಿಮಾನಾದಿಗಳು, ವಾಯುಯಾನ.

Airedale (ಏರ್‌ಡೇಲ್) n. a large terrier from Aire dale in Yorkshire. ಏರ್ ಡೇಲ್‌ನಿಂದ ಬರುವ ದೊಡ್ಡ ನಾಯಿ.

Air'force (ಏಅರ್ ಫೋರ್ಸ್) n. strength of a country in flying machines for fight in the air. ವಿಮಾನಬಲ.

Air-graph (ಏರ್‌ಗ್ರಾಫ್) n. see Aerogram.

Air-gun (ಏರ್‌ಗನ್) n. a gun discharged by compressed air. ಪೆಟ್ಲಂಗೋವಿ, ಪೆಟ್ಲನಲಿಗೆ.

Ai'rhole (ಏಅರ್ ಹೋಲ್) n. an opening to admit air. ಗವಾಕ್ಷಿ, ಗಾಳಿಕಿಂಡಿ.

Air'ing (ಏರಿಂಗ್) n. short walk in open air. ವಾಯುವಿಹಾರ.

Air'line (ಏಅರ್‌ಲೈನ್) n. line of passenger aircraft. ವಿಮಾನ ಸಂಚಾರ ಮಾರ್ಗ.

Air'liner (ಏಅರ್‌ಲೈನರ್) n. large passenger aircraft. ಪ್ರಯಾಣಿಕರ ವಿಮಾನ.

Air'mail (ಏಅರ್ ಮೇಲ್) n. mail carried by aircraft. ವಿಮಾನದ ಅಂಚೆ.

Air'man (ಏಅರ್‌ಮನ್) n. aviator. ವೈಮಾನಿಕ, ವಿಮಾನ ನಡೆಸುವವ.

Air'port (ಏಅರ್ ಪೋರ್ಟ್) n. aerodrome for passenger aircraft. ಪ್ರಯಾಣಿಕರ ವಿಮಾನ ಇಳಿಯುವ ಸ್ಥಳ.

Air'pump (ಏಅರ್‌ಪಂಪ್) n. instrument for pumping out air. ಗಾಳಿ ಹೊರದೂಡುವಯಂತ್ರ.

Air'raid (ಏಅರ್‌ರೇಡ್) n. attack by aircraft. ವಿಮಾನ ಧಾಳಿ.

Air'ship (ಏರ್‌ಶಿಪ್) n. a dirigible, a navigable baloon. ವಿ ಮಾ ನ, ಆಕಾಶಬುಟ್ಟಿ, ವಾಯುಯಾನ.



Airship

Air'tight (ಏರ್‌ಟೈಟ್) a. not permeable to air. ಗಾಳಿ ಸೇರದ, ಗಾಳಿತೂರದ.

Air'way (ಏಅರ್‌ವೆ) n. organised route for air travel. ವಿಮಾನ ಸಂಚಾರಮಾರ್ಗ, ವಾಯುಮಾರ್ಗ, ಆಕಾಶ ಮಾರ್ಗ.

Air'y (ಏಅರಿ) a. breezy, like air, light of heart. ಗಾಳಿ ಆಡುವ, ಉಲ್ಲಾಸಪರ. adv. airily, merrily, ಉಲ್ಲಾಸದಿಂದ.

Aisle (ಐಲ್) n. side of a church. ಕ್ರೈಸ್ತಮಂದಿರದ ಒಂದು ಪಾರ್ಶ್ವ.

Ait (ಐಯ್ಟ್) n. small isle in a river. ನದಿಯಲ್ಲಿ ಸಣ್ಣ ದೀಪ.

Ajar' (ಅಜಾರ್) adv. (of door) partly open. ಅರ್ಧ ತೆರೆದ.

Akim'bo (ಅ ಕಿ ಂ ಬೊ) adv. with hands on hips & elbow turned out. ಸೊಂಟ (ಟೊ ಂ ಕ)ದ ಮೇಲೆ ಕೈಯಿಟ್ಟು.

Akin' (ಅಕಿನ್) a. related by blood, having the same properties. ರಕ್ತ ಸಂಬಂಧವಾದ, ಸಮಾನಲಕ್ಷಣದ.

Al'abaster (ಅಲಬಾಸ್ಟರ್)n. kind of sulphate of lime used for vases, &c· ಚಂದ್ರಕಾಂತಶಿಲೆ, ಅಮೃತಶಿಲೆ.

Alack(ಅಲಾಕ್)int.an exclamation denoting sorrow. ಅಕಟಕಟಾ! ಅಯ್ಯೋ! (ದುಃಖೋದ್ಗಾರ).

Alacrious (ಅಲಾಕ್ರಿಯಾಸ್) a· cheerful, happy. ಪ್ರಸನ್ನ, ಹರ್ಷಿತ, ಆನಂದಿತ.

Alac'rity (ಅಲಾಕ್ರಿಟಿ) n. briskness, promptitude, readiness. ಉಲ್ಲಾಸ, ಚಟುವಟಿಕೆ, ಗೆಲುವು, ಸ್ಫೂರ್ತಿ, ತತ್ಪರತೆ.

Alalia(ಅಲೇಲಿಯಾ) n. loss of power of speech. ಭಾಷಣಶಕ್ತಿಯು ಹೊರಟು ಹೋಗುವುದು.

Alamode (ಅಲಮೋಡ್) adv. in the fashion,fashionable. ಪ್ರಕೃತಕಾಲದ ನಾಜೂಕು ರೀತಿಯಂತೆ.

Alamort(ಅಲಮಾರ್ಟ್)a·half dead, dejected. ಬೇಸರಗೊಂಡ, ಧೈರ್ಯಗುಂದಿದ.

Alar (ಅಲಾರ್) a. pertaining to wings, winglike. ರೆಕ್ಕೆಗಳಿಗೆ ಸಂಬಂಧಿಸಿದ, ರೆಕ್ಕೆಯಂತೆ.

Alarm' (ಅಲಾರ್ಮ್) n. notice of danger,warning sound; a mechanical contrivance to arouse from sleep ವಿಪತ್ತನ್ನು ಸೂಚಿಸುವಧ್ವನಿ, ಅಪಾವುಧಿ, ಪರಿಭ್ರಮೆ, ಭಯಸೂಚನೆ; ಎಚ್ಚರಿಸುವ ಯುಕ್ತಿ. vt disturb; frighten. ಹೆದರಿಸು, ಗದರಿಸು.

Alarming(ಅಲಾರ್ಮಿಂಗ್)a. exciting fear. ಭಯೋತ್ಪಾದಕ.

Alar'mist(ಅಲಾರ್ಮಿಸ್ಟ್) n.a.panicmonger. ಗುಲ್ಲೆಬ್ಬಿಸುವವ.

Ala'rum (ಅಲಾರಮ್) n. same as alarm; now used of an alarm clock. ಎಚ್ಚರಿಸುವ ಗಡಿಯಾರ.

Alas'(ಅಲಾಸ್) int. exclamation of grief. ಅಯ್ಯೋ! ಅಕಟಾ! ಕಷ್ಟಕಷ್ಟ! ಹಾ!!

Alastor (ಅಲಾಸ್ಟರ್) n. avenging deity, nemesis. ಸೇಡು ತೀರಿಸುವ ದೇವತೆ, ನಿಷ್ಕರುಣ ದೇವತೆ.

Alb (ಅಲ್ಬ್) n. long, white vestment worn by priests· ಪಾದ್ರಿಗಳು ತೊಡುವ ಬಿಳಿಯ ನಿಲುವಂಗಿ.



Alb

Albatross (ಆಲ್ಬಟ್ರಾಸ್) n. large bird of the sea. ದೊಡ್ಡ ಸಮುದ್ರ ಪಕ್ಷಿ.

Al'beit(ಆಲ್‌ಬಿಇಟ್)conj.although. ಆದರೂ; ಆದಾಗ್ಯೂ, ಯದ್ಯಪಿ.

Al'bert(ಆಲ್‌ಬರ್ಟ್)n. short watch chain. ಸಣ್ಣ ಗಡಿಯಾರದ ಸರಪಳಿ.

Albescent (ಅಲ್ಬಿಸೆಂಟ್) a. becoming white, turning white. ಶ್ವೇತವರ್ಣಕ್ಕೆ ತಿರುಗುವ, ಮಾಸಿದ.

Aibi'no (ಆಲ್‌ಬಿನೋ) n. person or animal with white skin & hair and eyes of a pink colour. ತೊನಬಡಕ, ಶ್ವೇತವರ್ಣಿ.

Albion (ಆಲ್ಬಿಯನ್) n. ancient name for England. ಇಂಗ್ಲೆಂಡ್ ದೇಶದ ಹಳೆಯ ಹೆಸರು.

Al'bum (ಆಲ್‌ಬಮ್)n. blank book for autographs,photographs, &c. ಚಿತ್ರ, ಅಂಚೆಯಚೀಟಿ ಮುಂತಾದುವನ್ನು ಇಡತಕ್ಕ ಖಾಲಿಪುಸ್ತಕ.

Albu'men (ಆಲ್‌ಬ್ಯೂಮೆನ್) n. the white of eggs. ತತ್ತಿಯ ಬಿಳಿಲೋಳೆ, ಅಂಡ ಮಧ್ಯದಲ್ಲಿರುವ ಶ್ವೇತಾಂಶ.

Al'chemist (ಆಲ್‌ಕೆಮಿಸ್ಟ್) n. one skilled in alchemy. ರಸಸಿದ್ಧಾಂತಿ, ಚಿನ್ನ ಮಾಡುವ ವಿದ್ಯೆಯುಳ್ಳವನು.

Al'chemy (ಆ̆ಲ್‌ಕೆಮಿ) n. transmutation of baser metals into gold. ರಸಾಯನಶಾಸ್ತ್ರ, ಚಿನ್ನಮಾಡುವ ವಿದ್ಯೆ, ರಸ ಸಿದ್ಧಿ, ರಸವಾದ.

Alcohol(ಆ̆ಲ್‌ಕೊಹಾಲ್)n. pure spirit of wine. ಮದ್ಯಸಾರ, ಸಾರಾಯಿ(ಸೆರೆ)

Al'cove (ಆ̆ಲ್‌ಕೋವ್)n.a recess in a room or garden; summer-house. ಮಾಡ, ಗೂಡು; ಉದ್ಯಾನ ಕುಂಜ, ವಸಂತಮಂದಿರ, ಪರ್ಣಶಾಲೆ.

Al'derman (ಆ̆ಲ್ಡರ್‌ಮ̆ನ್) n. civic dignitary next below Mayor. ಪುರಪ್ರಮುಖ, ಊರಿನ ಹಿರಿಯ, ಗೌಡ, ಹೆಗ್ಗಡೆ, ಪಟ್ಟಣಶೆಟ್ಟಿ.

Ale(ಏಲ್)liquor made from malt; beer. ಒಂದು ವಿಧದ ಮದ್ಯ, ಹೆಂಡ.

Alegar (ಏಲಿಗರ್) n. ale, sour liquor. ಹುಳಿಯಾದ ಏಲ್ ಮದ್ಯ.

Ale-house (ಏಲ್‌ಹೌಸ್) n. a house where ale is sold. ಹೆಂಡದಂಗಡಿ, ಸಾರಾಯಿ ಅಂಗಡಿ.

Alembic (ಅಲೆಂಬಿಕ್) n. apparatus used in distilling. ಭಟ್ಟಿ ಇಳಿಸುವ ಯಂತ್ರ.

Alert(ಅಲರ್ಟ್) a. watchful; lively, warning of air raid. ಜಾಗರೂಕ, ಚುರುಕು, ವಿಮಾನಧಾಳಿಯ ಸೂಚನೆ. on the a., watchful. ಜಾಗರೂಕ.

Alga(ಆಲ್ಗಾ)n.sea weed. ಸಮುದ್ರದಕಳೆ

Algebra (ಆಲ್‌ಜಿಬ್ರ) n. a method of counting using letters and signs. ಬೀಜಗಣಿತ, ಕುಟ್ಟಕ.

Algebr(a)ist(ಆಲ್‌ಜಿಬ್ರೆಇಸ್ಟ್)n .one skilled in algebra. ಬೀಜಗಣಿತಜ್ಞ.

Algid (ಆಲ್ಜಿಡ್) a. of cold stage of ague. ಛಳಿಜ್ವರದ ಆರಂಭದಲ್ಲಿ ಬರುವ ಛಳಿಯು.

Algorism(ಆಲ್ಗೊರಿಸಮ್)n.decima notation. ದಶಮಾನರೀತಿಯ ಎಣಿಕೆ.

Alhambra (ಆ̆ಲ್ಹಾಮ್‌ಬ್ರ) n. palace of Moorish Kings. ಮೂರಿಷ ದೊರೆಗಳ ಅರಮನೆ.

A'lias (ಏಲಿಅಸ್) adv. otherwise. n. a false name. ಇಲ್ಲವಾದರೆ (ನಾ.) ಎರಡನೇ ಹೆಸರು, ಉಪನಾಮ, ಉರ್ಫ್.

Al'ibi(ಆ̆ಲಿಬೈ)n.plea of being elsewhere. excuse. ಕೃತ್ಯ ಆದಾಗ ತಾನುಬೇರೆ ಕಡೆಯಲ್ಲಿ ಇದ್ದನೆಂಬ ಪ್ರತಿಪಾದನೆ, ನೆವ.

Al'ien(ಏಲಿಏನ್) a. foreign, diffe ent in nature ಅನ್ಯ, ಪರಕೀ ವಿದೇಶಿ, ಹೆರನು; ಸಮಾನ ಗುಣವಿಲ್ಲದ

Al'ienate(ಏಲಿಏನೇಟ್)vt. transf take away, make strange or unfriendly. ಆಗದಂತೆಮಾಡು ಬೇರ್ಪಡಿಸು; ಮನಸ್ಸು ಕೆಡಿಸು, ವಿಮುಖಗೊಳಿಸು.

Aliena'tion (ಏಲಿಏನೇಶನ್) n. a making over; estrangement. ಪರಾಧೀನಗೊಳಿಸೋಣ, ಪರಕೀಯ ಭಾವನೆ; ಬುದ್ಧಿವಿಕಲ್ಪ.

Alienist(ಏಯ್ಲಿಯೆನಿಸ್ಟ್)n·specialist in mental diseases. ಮನೋವ್ಯಾಧಿ ಚಿಕಿತ್ಸಕ.

Aliferous (ಏಯ್ಲಿಫೆರಸ್) a. having wings. ರೆಕ್ಕೆಯುಳ್ಳ.

Aliform (ಏಯ್ಲಿಫಾರಮ್) a. wing-shaped. ರೆಕ್ಕೆಯಾಕಾರದ.

Alight' (ಅಲೈಟ್) vt. dismount, come down; descend. ಎರಗು, ಕೆಳಗಿಳಿ, a. (ಅಲ್ಯೈಟ್) on fire. ಉರಿಯುತ್ತಿರುವ, ಪ್ರಜ್ವಲಿತ.

Align', Aline' (ಅಲಾಇನ್) vt. place or form in line. ಸಾಲಿನಲ್ಲಿರು ಸಾಲಾಗಿರಿಸು, ಸಾಲು ಹಿಡಿ, ಸಮರೇ ಗೊಳಿಸು.

Align'ment (ಅಲೈನ್ಮೆಂಟ್) n. arrangement in a line. ಸಾಲಾಗಿಡೋಣ

Alike (ಅಲೈಕ್) a. similar; like. ಹೋಲಿಕೆಯುಳ್ಳ, ಸಮಾನ, ಸದೃಶ. similarly. ಅದೇ ರೀತಿಯಾಗಿ.

Al'iment (ಅಲಿಮೆಂಟ್) n. nourishment; food. ಆಹಾರ, ಪೋಷಣೆ, ಭೋಜನ, ಆಧಾರ, ಆಶ್ರಯ.

Alimen'tal (ಅಲಿಮೆಂಟಲ್) a. relating to food. ಪೋಷಿಸುವ, ಪುಷ್ಟಿಪ್ರದ.

Alimen'tary (ಅಲಿಮೆಂಟರಿ) a. nourishing; nutritive. ಆಹಾರ ಸಂಬಂಧವಾದ, ಶಕ್ತಿವರ್ಧಕ, ಪುಷ್ಟಿಕೊಡುವ.

Alimenta'tion (ಅಲಿಮೆಂಟೇಷನ್) n. nourishment. ಪೋಷಣೆ, ಭರಣೆ.

'imony (ಅಲಿಮನಿ) n. allowance to a wife pending or after separation. ಅಶನಾರ್ಥ, ಜೀವನಾಂಶ, ಅನ್ನಬಟ್ಟೆ.

Alipe (ಅಲಿಪೆಡ್) a. wing-footed. ರೆಕ್ಕೆಕಾಲುಳ್ಳ. n. ಬಾವಲಿಯು ಜಾತಿಯು ಪ್ರಾಣಿ.

Aliphatic (ಅಲಿಫಾಟಿಕ್) a. pertaining to fat. ಮೇದಸ್ಸಿಗೆ ಸಂಬಂಧಿಸಿದ.

Aliquant (ಅಲಿಕ್ವಂಟ್) a. pertaining to a factor which is not integral. ಸಶೇಷಭಾಜಕ.

Al'iquot (ಅಲಿಕ್ವಾಟ್) a. number that divides without remainder. ಸರಿಯಾಗಿ ವಿಭಾಗಿಸುವ, ನಿಶ್ಶೇಷ ಭಾಜಕ.

Alive' (ಅಲೈವ್) a. living, active, brisk. ಸಜೀವ, ಜೀವಂತ, ಗೆಲುವಿನ, ಚುರುಕಿನ.

Alkahest (ಅಲ್ಕಹೆಸ್ಟ್) n. alchemist's supposed univesral solvent. ರಸವಾದಿಯ ಸರ್ವವಿಲೀನಕಾರಿ ಪದಾರ್ಥ.

Al'kali (ಅಲ್ಕಲಿ) n. substance that neutralises acids. ಆಮ್ಲತೆಯನ್ನು ನಿವಾರಿಸುವ ಕ್ಷಾರ.

lkaline (ಅಲ್ಕಲೈನ್) a. having the properties of alkali. ಕ್ಷಾರಸಂಬಂಧಿ, ಕ್ಷಾರದ ಗುಣವುಳ್ಳ.

Alkalize (ಆಲ್ಕಲೈಜ್) v. t. to make alkali. ಕ್ಷಾರೀಕರಿಸು.

Alkanet (ಆಲ್ಕ್ಯಾನೆಟ್) n. plant whose roots give a red dye.

Alkoran (ಆಲ್‌ಕೊರಾನ್) n. the holy koran. ಮುಸಲ್ಮಾನರ ಧರ್ಮಗ್ರಂಥ.

All (ಆಲ್) n. every one; the whole, everything. ಯಾವತ್ತೂ, ಎಲ್ಲಾ, ಸರ್ವ. all in a. supreme, all powerful. ಮುಖ್ಯ, ಶ್ರೇಷ್ಠ; ಸರ್ವಾಧಿಕಾರವುಳ್ಳ. a. the same, nevertheless. ಆದಾಗ್ಯೂ, ತಥಾಪಿ, a. fours, one's legs and arms. ಕೈಕಾಲುಗಳು. to a. intents and purposes. practically. ನಿಜವಾಗಿ, ಪ್ರಾಸ್ತಾವಿಕವಾಗಿ. a. moonshine, untrue. ಭ್ರಮೆ, ಭ್ರಾಂತಿ. it is a. over with him, he is ruined, dead, &c. ಅವನು ನಾಶವಾದನು.

Allah (ಅಲ್ಲಾ) n. the supreme God of the Muslims. ಮುಸಲ್ಮಾನರಲ್ಲಿ ದೇವರ ಹೆಸರು.

Allay (ಅಲೆ) v. relieve; make quiet, lighten. ಶಮಿಸು, ತಣಿಸು, ಶಾಂತಗೊಳಿಸು, ಕಡಿಮೆಮಾಡು, ಅಡಗಿಸು, ತಗ್ಗಿಸು.

Allega'tion (ಅಲಿಗೇಶನ್) n. assertion, plea. ಹೇಳಿಕೆ, ಆರೋಪಣೆ, ಆಪಾದನೆ, ನಿಶ್ಚಿತ ಕಥನ.

Allege' (ಅಲಿಜ್) vt. assert; state as a fact. ಖಚಿತವಾಗಿ ಹೇಳು; ನಿಮಿತ್ತ, ಸಬಬುಹೇಳು, ನೆಪಹೇಳು.

Alle'giance (ಅಲೀಜನ್ಸ್) n. loyalty, obedience. ರಾಜನಿಷ್ಠೆ; ಸ್ವಾಮಿಭಕ್ತಿ, ವಿಧೇಯತೆ.

Allegiant (ಅಲೀಜಿಯಂಟ್) a. n. loyal, person owing allegiance. ಸ್ವಾಮಿಭಕ್ತಿಯುಳ್ಳ, ಸ್ವಾಮಿಭಕ್ತ.

Allegoric (ಅಲಿಗೋರಿಕ್) a. figurative. ಲಾಕ್ಷಣಿಕ, ಗೂಢಾರ್ಥವುಳ್ಳ.

All'egory(ಅ̆ಲಿಗೋರಿ) n. a parable. ಅನ್ಯೋಕ್ತಿ; ಪರೋಕ್ಷಕಥೆ, ರೂಪಕ.

All'eluia (ಆಲಿಲ್ಯೂಯಿಯ)n.song in praise of Good. ದೇವಸ್ತುತಿ.

Allev'iate (ಅಲಿವಿಯೇಟ್) vt. mitigate; lessen. ಹಗುರಮಾಡು, ಕಡಿಮೆ ಮಾಡು, ಶಮನಗೊಳಿಸು, ತಗ್ಗಿಸು.

Allevia'tion (ಅಲಿವಿಏಶನ್) n. act of mitigating. ಉಪಶಮನ, ತಗ್ಗಿಸುವಿಕೆ, ಶಮನ.

All'ey (ಅ̆ಲ್ಇ) n. narrow street; passage. ಸಂದಿ, ಓಣಿ, ಗೊಂದಿ, ಗಲ್ಲಿ.

All'fours (ಆಲ್ ಫೋರ್ಸ್)n. see all.

Alliaceous(ಅಲಿಯೇಷಸ್)adj. of the genus to which onion and garlic belong. ಈರುಳ್ಳಿ, ಬೆಳ್ಳುಳ್ಳಿಯ ಜಾತಿಯ.

Alliance (ಅಲ್ಲೈಯನ್ಸ್) n. union by marriage or treaty, union for a common purpose. ನೆಂಟಸ್ತಿಕೆ, ಬೀಗತನ; ಒಪ್ಪಂದ; ಒಕ್ಕಟ್ಟು.

All'igator (ಅ̆ಲಿಗೇಟರ್) n. a crocodile. ಮೊಸಳೆ, ನೆಗಳು.



Alligator

Allitera'tion (ಅಲಿಟರೇಷನ್) n. the beginning of two or more successive words with the same letter. ಅನುಪ್ರಾಸ.

Allit'erative (ಅಲ್ಲಿಟರೇಟಿವ್) a pertaining to alliteration. ಅನುಪ್ರಾಸದ, ಪ್ರಾಸಬದ್ಧ.

All'ocate (ಅ̆ಲೋಕೇಟ್) vt. assign to. ಹಂಚಿಕೊಡು, ನೇಮಿಸು, ಗೊತ್ತುಮಾಡು.

Allocution (ಅಲೊಕ್ಯೂಷನ್) n. an exciting speech especially of the Pope. ಉತ್ತೇಜಕ ಭಾಷಣ (ಮುಖ್ಯವಾಗಿ ಪೋಪಿನದು.)

Allod'ial (ಅಲೋಡಿಅಲ್)a. held independent of a superior; freehold. ಸ್ವಂತಮಾಲೀಕತನದ, ಸ್ವಂತದ.

Allod'ium (ಅಲೋಡಿಅಮ್) n. freehold estate. ಮಿರಾಸಿ, ಆಸ್ತಿ, ಸಂಪೂರ್ಣ ಸ್ವಾಮ್ಯಕ್ಕೆ ಸೇರಿದ ಭೂಮಿ.

Allogamy (ಅಲೊಗಮಿ) n. cross-fertilization. ಅನ್ಯಪರಾಗ ಗರ್ಭಾದಾನ.

Allograph (ಅಲೋಗ್ರಾಫ್)n.writing made by one person for another. ಮತ್ತೊಬ್ಬನಿಗಾಗಿ ಬರೆದ ಬರೆವಣಿಗೆ.

Allopathic (ಅಲಾಪತಿಕ್)n. pertaining to allopathy. ಅಲಾಪತಿ ಚಿಕಿತ್ಸಾಕ್ರಮಕ್ಕೆ ಸಂಬಂಧಿಸಿದ.

Allop'athy(ಅಲ್‌ಲಾಪಥಿ)n. made of curing diseases by producing a different course of the malady. ರೋಗ ಕಾರಣಕ್ಕೆ ವಿರೋಧ ಸ್ಥಿತಿಯನ್ನು ಉಂಟುಮಾಡುವ ಚಿಕಿತ್ಸಾಕ್ರಮ.

Allot' (ಅಲಾಟ್) vt. distribute in lots, divide, assign. ಹಂಚಿಕೊಡು, ಭಾಗಮಾಡಿಕೊಡು, ನೇಮಿಸು.

Allotee (ಅಲಾಟೀ) n. one to whom a share is allotted. ಹಂಚಿಕೆ ಪಡೆದವನು.

Allotheism (ಅಲೋತೀಯಿಸಮ್) n. worship of strange Gods. ವಿಚಿತ್ರ ದೇವತೆಗಳ ಆರಾಧನೆ.

Allot'ment (ಅಲಾಟ್‌ಮೆಂಟ್) n. the act of alloting. ಭಾಗಧೇಯ, ಪಾಲು, ಹಂಚಿಕೆ.

Allotropy (ಅಲಾಟ್ರೊಪಿ)n. property existing in more than one form. ಭಿನ್ನರೂಪತೆ, ಅನ್ಯರೂಪತೆ.

Allotropic (ಅಲಾಟ್ರೊಪಿಕ್) a pertaining to allotropy. ಭಿನ್ನರೂಪಕ್ಕೆ ಸಂಬಂಧಿಸಿದ.

Alloverishness (ಅಲೋವರಿಷ್‌ನೆಸ್) n. a feeling of discomfort. ಇಡೀ ಶರೀರದಲ್ಲಿ ಅಸ್ವಸ್ಥತೆಯಿರುವುದು.

Allow (ಅಲೌ) vt. i. grant; permit: admit. ಸಮ್ಮತಿಸು, ಕೊಡು, ಅಪ್ಪಣೆಕೊಡು, ಸೇರಿಸಿಕೊ.

Allow'able (ಅಲೌಎಬಲ್) a permissible. not forbidden, ನ್ಯಾಯ, ಅನುಮತಿಸತಕ್ಕ, ನಿಷಿದ್ಧವಲ್ಲದ.

Allow'ance (ಅಲೌಎನ್ಸ್) n. fixed sum allowed ; abatement; permission. ಭತ್ಯ, , ಉತ್ತಾರ, ವಿಶೇಷ ಸಂಭಾವನೆ, ಅಪ್ಪಣೆ, ಅನುಮತಿ.

Allow'edly (ಅಲೌಎಡ್‌ಲಿ) adv. admittedly. ಮಾನ್ಯಮಾಡಿದ ಹಾಗೆ.

Alloy' (ಅಲಾಯ್) vt. mix with baser metal ; debase. ಹೀನಧಾತುವಿನೊಡನೆ ಬೆರಸು, ಕೀಳು ಮಾಡು, ಗುಣತಗ್ಗಿಸು. n. a mixture of two or more metals. ಮಿಶ್ರಲೋಹ.

All-right (ಆಲ್‌ರೈಟ್) adv. in condition. ಒಳ್ಳೆ ಸ್ಥಿತಿಯಲ್ಲಿ.

All'round (ಆಲ್‌ರೌಂಡ್)n.good,all round, or with ability in all departments. ಸಕಲ ಕಲಾ ಕುಶಲ a. in all directions. ಸರ್ವದಿಕ್ಕು,ಸಮಂತತ, ಸರ್ವತ್ರ, ಎಲ್ಲೆಲ್ಲಿಯೂ.

Allseed (ಆಲ್‌ಸೀಡ್)n. plants producing much seeds. ಹೆಚ್ಚಾಗಿ ಬೀಜ ಬಿಡುವ ಸಸ್ಯಗಳು.

All'spice(ಆಲ್‌ಸ್ಪೈಸ್)n. Jamaica-pepper. ಕಂಕೋಳ, ಗಂಧ (ಬಾಲ). ಮೆಣಸು.

Allude' (ಅಲ್‌ಲೂಡ್) vt. refer indirectly to; hint at ಸೂಚಿಸು, ಪ್ರಸ್ತಾಪಮಾಡು, ಕುರಿತು ಹೇಳು.

Alluminate (ಅಲ್ಯೂಮಿನೇಟ್) vt. adorn with ornaments. ಸಜ್ಜುಗೊಳಿಸು, ಒಡವೆಗಳಿಂದಲಂಕರಿಸು.

Allure' (ಅ ಲ್ಯೂ ರ್) vt. entice ; tempt. ಮೋಹಗೊಳಿಸು, ಮರುಳು ಮಾಡು, ಆಕರ್ಷಿಸು.

Allure'ment (ಅಲ್ಯೂರ್‌ಮೆಂಟ್) n. enticement. ಮೋಹಕತ್ವ, ಆಕರ್ಷಣೆ, ಸೆಳೆತ, ಮನೋಹರತೆ.

Allusion (ಅಲೂಜ್ಜನ್) n. indirect reference. hint ಪೂರ್ವಕಥಾಸೂಚನೆ, ಇಂಗಿತದಿಂದ ಉಲ್ಲೇಖ.

Allusi've (ಅಲೂಸಿವ್) a. referring to indirectly; hinting at. ಸೂಚನಾತ್ಮಕ, ಪ್ರಾಸ್ತಾವಿಕ.

Alluv'ial(ಅಲೂವಿಯಲ್)a.deposited by water. ಜಲಪ್ರವಾಹದಿಂದ ಉಂಟಾದ, ನೆರೆಮಣ್ಣಿನಿಂದ ಕೂಡಿದ. n. a. soil. ಬಂಡು, ಮೆಕ್ಕಲು, ಕೆಸರು ನೆಲ.

Alluv'ion (ಅಲೂವಿಯನ್) n. matter deposited by flood. ರ್ಯಾವಿ, ಮೆಕ್ಕಲು ಮಣ್ಣು.

Alluv'ium(ಅಲುವಿಯಮ್)n(plu.i-a) earth deposited by flood. ನೀರನೆರೆ ಮರಳು, ನದಿಯಲ್ಲಿ ಹರಿದುಬಂದ ಮಣ್ಣು.

All-wise(ಆಲ್‌ವೈಜ್) a. of infinite wisdom ಅಪರಿಮಿತ ಬುದ್ಧಿಯುಳ್ಳ.

Ally' (ಅ ಲೈ) vt. form a relation by marriage, friendship or treaty. ಬೀಗತನಮಾಡು, ಜೊತೆಗೂಡು, ಒಂದಾಗು. n. a confederate; allied state or person. ಸಪಕ್ಷಕ, ಸಂಬಂಧಿ ಸಹಾಯಕ, ಮಿತ್ರರಾಜ್ಯ.

Ally,Alley,Alay (ಆಲಿ) n. playing marble. ಆಟದ ಗೋಲಿ.

Almagest (ಆಲ್ಮಜೆಸ್ಟ್) n great treatise on astronomy by Ptolemy. ಟಾಲೆಮಿಯ ಪ್ರಸಿದ್ಧ ಖಗೋಲ ಶಾಸ್ತ್ರಗ್ರಂಥ.

Al'ma m'ater (ಆಲ್ಮಾಮೇಟರ್) n. one's university or school. ತಾನು ವಿದ್ಯೆಕಲಿತ ವಿಶ್ವವಿದ್ಯಾಲಯ, ವಿದ್ಯಾಪೀಠ.

Al'manac (ಆ̆ಲ್ಮನಕ್) n. year, calendar of months and days. ಪಂಚಾಂಗ.

Almi'ghty (ಆಲ್ ಮೈಟಿ) a. very powerful: (colloq.) very great. ಸರ್ವಶಕ್ತ, ಪರಮೇಶ್ವರ; ಸರ್ವಸಮರ್ಥ.

Almir'a(ಅಲ್ಮ್ಯಾರಾ)n· cup-board, press; chest of drawers, &c. ಕಪಾಟು, ಅಲ್ಮಾರ.

Alm'ond (ಆಮಂಡ್) n. the fruit of the almond tree. ಬಾದಾಮಿ. n. plu. the tonsils or glands of the throat.

Al'moner (ಆ̆ಲ್ಮನರ್, ಆಲ್ಮನರ್) n. a distributor of alms. ಧರ್ಮದಾಯ ವಿನಿಯೋಗಿ.

Almonry (ಆಲ್ಮನ್ರಿ) n. a place where alms are distributed. ಧರ್ಮಶಾಲೆ, ಛತ್ರ.

Al'most (ಆಲ್ಮೋಸ್ಟ್) adv. nearly. ಬಹಳಮಟ್ಟಿಗೆ, ಸಮೀಪವಾಗಿ, ಸ್ವಲ್ಪಕಡಿಮೆ.

Alms (ಆಮ್ಸ್) n. gift to the poor. ಉಪಾದಾನ, ಭಿಕ್ಷೆ, ತಿರುಪೆ, ದಾನ ಧರ್ಮ.

Al'oe (ಆ̆ಲೋ) n. plant with erect spikes of flowers & bitter juice. ಲೋಳಿಸರ (ಕತ್ತಾಳೆಜಾತಿಗಿಡ), ಕುಮಾರಿ.

Aloft' (ಅಲಾಫ್ಟ್) adv. on high, above. ಮೇಲೆ, ಊರ್ಧ್ವದಲ್ಲಿ, ಉಚ್ಚವಾಗಿ.

Aloid (ಅಲೋಯಿಡ್) a. resembling aloe. ಲೋಳಿಸರದ ಜಾತಿಯ ಗಿಡವನ್ನು ಹೋಲುವ.

Alone'(ಅಲೋನ್)n.single, solitary. ಒಂಟಿ, ಏಕಾಂಗಿ, ಏಕಾಂತವಾಗಿ.

Along' (ಅಲಾಙ್) pre. through the length of, adv.in company.onward, in progress. ಉದ್ದಕ್ಕೆ; ಒಟ್ಟಿಗೆ, ಒಂದಿಗೆ, ಸಂಗಡ, ಹೊಂದಿಕೊಂಡು.

Aloof' (ಅಲೂಫ್) adv.away,apart. ದೂರವಾಗಿ, ಬೇರೆಯಾಗಿ, ಒತ್ತಟ್ಟಿಗೆ.

Alopecia (ಅಲೋಪೀಷಿಯ) n. falling off of hair;baldness. ಕೂದಲು ಉದುರಿ ಹೋಗಿರುವುದು, ಪಟ್ಟತಲೆ.

Aloud' (ಅಲೌಡ್) adv.loudly, with loud voice. ಗಟ್ಟಿಯಾಗಿ, ದೊಡ್ಡದನಿಯಿಂದ.

Alow (ಅಲೋ) adv. in lower part of ship. ಹಡಗಿನ ತಳದಲ್ಲಿ.

Alp (ಆಲ್ಪ್) n. mountain peak. ಪರ್ವತಶಿಖರ.

Alpac'a (ಆ̆ಲ್ಪಕಾ) n. llama, with long wool, cloth made of its wool. ಪರದೇಶದ ಲ್ಲಾಮಕುರಿ; ಆ ಕುರಿಯ ಉಣ್ಣೆಯಿಂದಾದ ಬಟ್ಟೆ.



Alpaca

Alpenstock (ಆಲ್ಪೆನ್‌ಸ್ಟಾಕ್) n. long staff used in climbing any lofty mountain. ಬೆಟ್ಟ ಹತ್ತುವಾಗ ಹಿಡಿದುಕೊಳ್ಳುವ ಕೋಲು.

Al'pha (ಆ̆ಲ್ಫಾ)n.the first letter of the Greek alphabet. ಗ್ರೀಕ್ ವರ್ಣಮಾಲೆಯ ಮೊದಲನೆಯ ಅಕ್ಷರ.

Al'phabet (ಆಲ್ಫಬೆಟ್)n.the letters of a language arranged in order· ವರ್ಣಮಾಲೆ, ಓನಾಮ, ಅಕ್ಷರಮಾಲೆ.

Alphabetical (ಆಲ್ಫಬೆಟಿಕಲ್) a. pertaining to the alphabet. ವರ್ಣಮಾಲೆಗೆ ಸಂಬಂಧಿಸಿದ.

Alphabet'ically (ಆಲ್ಫಬೆಟಿಕಲಿ) adv. in the order of the alphabet. ಅಕ್ಷರಕ್ರಮವಾಗಿ, ವರ್ಣಾನುಕ್ರಮದಿಂದ.

Alphonsin (ಅಲ್‌ಫಾನ್‌ಸಿನ್) n. instrument for extracting bullets. ಗುಂಡನ್ನು ತೆಗೆಯುವ ಯಂತ್ರ.

Alpine (ಆಲ್ಪೈನ್) a. pertaining to Alps or any lofty mountain. ಉನ್ನತವಾದ ಪರ್ವತಕ್ಕೆ ಸಂಬಂಧಿಸಿದ.

Already (ಆಲ್‌ರೆಡಿ)adv.previously, beforehand. ಈಗಾಗಲೇ, ಇಷ್ಟರಲ್ಲೇ.

Al'so (ಆಲ್‌ಸೋ) adv. besides,too. ಹಾಗೂ, ಸಹ, ಕೂಡಾ, ಸದಾ.

Altar (ಆಲ್ಟರ್) n.place for offerings. ವೇದಿಕೆ; ಬಲಿಪೀಠ, ಪವಿತ್ರಸ್ಥಾನ.



Altar

Altazimuth (ಅಲ್ಟಾಜಿಮುತ್) n. instrument for finding out altitude and azimuth. ಉನ್ನತಿ ಮತ್ತು ದಿಗಂತವನ್ನು ಅಳೆಯುವ ಯಂತ್ರ.

Al'ter (ಆಲ್‌ಟರ್) vt. i. change in character, &c. vary ಬದಲಾಯಿಸು, ಬೇರೆಯಾಗು, ಪಲ್ಲಟಿಸು, ಹೆಚ್ಚುಕಡಿಮೆ ಮಾಡು.

Altera'tion (ಅಲ್‌ಟರೇಷನ್) n. change, modification. ಬದಲು, ಪಲ್ಲಟ, ವಿಕಾರ, ಭೇದ.

Al'tercate (ಆಲ್ಟರ್‌ಕೇಟ್) vt. dispute, wrangle. ಹೋರಾಡು, ವಿವಾದಿಸು, ವಾಗ್ವಾದಮಾಡು.

Al'terca'tion (ಆಲ್ಟರ್‌ಕೇಷನ್) n. contention, controversy ವಾಗ್ವಾದ, ಲಟಾಪಟಿ, ವಾಗ್ಯುದ್ಧ, ವಿವಾದ.

Alternant (ಆಲ್ಟರ್ನೆಂಟ್) a alternating. ಒಂದಾದಮೇಲೆ ಒಂದು ಬರುವ.

Altern'ate (ಆಲ್ಟರ್‌ನೇಟ್) a happening, by turns. ಪರ್ಯಾಯವಾದ, ಒಂದು ಬಿಟ್ಟು ಇನ್ನೊಂದು. vt. i. perform or happen by turns. (ಸರದಿಯಿಂದ) ಪರ್ಯಾಯವಾಗಿ ಮಾಡು, ಆಗು.

Altern'ately(ಆಲ್ಟರ್‌ನೇಟ್ಲಿ)adv. by turns. ಸರದಿಯ ಪ್ರಕಾರ, ಪರ್ಯಾಯವಾಗಿ.

Alternation (ಆಲ್ಟರ್‌ನೇಷನ್) n. the act of alternating, interchange. ಸರದಿಮಾಡುವುದು, ಅದಲುಬದಲು, ಒಂದಾದಮೇಲೆ ಇನ್ನೊಂದು ಬರುವಿಕೆ.

Alternative(ಆಲ್ಟರ್‌ನೆಟಿವ್)a.offering a choice of two things. ಎರಡರಲ್ಲೊಂದು, ಪಕ್ಷಾಂತರ, ವೈಕಲ್ಪಿಕ.

Although' (ಆಲ್ದೋ) conj. notwithstanding; however. ಆದಾಗ್ಯೂ, ಯದ್ಯಪಿ.

Altim'eter(ಆಲ್ಟಿಮೀಟರ್)n. instrument for measuring altitudes. ಔನ್ನತ್ಯಮಾಪಕಯಂತ್ರ.

Al'titude (ಆಲ್ಟಿಟ್ಯೂಡ್) n. height. ಎತ್ತರ, ಔನ್ನತ್ಯ, ಉಚ್ಚತ್ವ.

Altivalent (ಆಲ್ಟಿವಾಲೆಂಟ್)a. flying high. ಎತ್ತರದಲ್ಲಿ ಹಾರಾಡುವ.

Alto (ಆಲ್ಟೊ) n. highest male voice. ಗಂಡಸಿನ ಉಚ್ಚತಮ ಧ್ವನಿ.

Altogeth'er (ಆಲ್‌ಟುಗೆದರ್) adv. wholly, completely; without exception. ಪೂರ್ಣವಾಗಿ, ಒಟ್ಟಾಗಿ, ಕೇವಲ, ಸುತರಾಂ, ಶುದ್ಧಾಂಗವಾಗಿ.

Alto-relievo (ಆಲ್ಟೋರಿಲೀವೊ) n. high relief in sculpture. ಹೆಚ್ಚುಬ್ಬಿನ ಪ್ರತಿಮೆ.

Altruism (ಆಲ್ಟ್ರೂಇಜಮ್) n. the principle of living & acting for the interest of others ಪರೋಪಕಾರ, ಪರಹಿತಾಸಕ್ತಿ, ಪರಾರ್ಥಪ್ರವರ್ತನೆ.

Alum (ಆಲಮ್) n. a mineral salt. ಪಟಿಕ, ಪಟಿಕಾರ.

Alum'ina (ಅಲೂಮಿನಾ)n the oxide of aluminium. ಒಂದುಬಗೆಯ ಪಟಿಕದ ಮಣ್ಣು.

Alu'minium, Alu'minum — (ಅಲ್ಯೂಮಿನಿಯಮ್) n. a white metal, ಬಿಳಿಯ ವರ್ಣದ ಧಾತು; ಅಲುಮಿನಂ ಲೋಹ.

Alumna (ಆಲಮ್ನಾ) n. woman graduate. ಸ್ತ್ರೀಪದವೀಧರೆ.

Alum'nus (ಆಲಮ್ನಸ್) n. pupil of a college or university (p.-mni) ವಿಶ್ವವಿದ್ಯಾಲಯದ ವಿದ್ಯಾರ್ಥಿ, ವಿದ್ಯಾರ್ಥಿದೆಸೆ.

Al'veary (ಆಲ್ವಿಯರಿ)n. bee-hiver, hollow of the ear. ಜೇನು ಹುಟ್ಟು, ಕಿವಿಗೂಡು.

Alveolar (ಆಲ್ವಿಯೊಲಾರ್) a. pertaining to tooth-socket. ಹಲ್ಲುಗೂಡಿನ.

Alveolate (ಆಲ್ವಿಯೊಲೇಟ್) a. honey-combed. ಸಣ್ಣ ಸಣ್ಣ ಗೂಡುಗಳಿಂದ ಕೂಡಿದ.

Alveolus (ಆಲ್ವಿಯೊಲಸ್) n. tooth socket, small cavity. ಸಣ್ಣಗೂಡು, ಹಲ್ಲಿನ ಗೂಡು.

Alvine (ಆಲ್ವೈನ್) a. of the intestines. ಕರುಳಿಗೆ ಸಂಬಂಧವಾದ.

Al'ways (ಆಲ್‌ವೇಸ್) adv. for ever, at ail times. ಸರ್ವದಾ, ನಿರಂತರವಾಗಿ, ಯಾವಾಗಲೂ, ನಿತ್ಯ, ಸತತ.

Am (ಆ̆ಮ್) first pers.sing. of verb to be. ಇದ್ದೇನೆ.

Amain' (ಅಮೈನ್) adv. with main force; violently. ಬಲವಂತವಾಗಿ, ಜೋರಾಗಿ, ರಭಸದಿಂದ, ಸವೇಗವಾಗಿ.

Amal'gam (ಅಮಲ್‌ಗಮ್) n. any soft mixture, compound of mercury with another metal. ರಸಮಿಶ್ರಧಾತು, ಪಾದರಸ, ಮಿಶ್ರಿತಲೋಹ.

Amal'gamate (ಅಮಲ್‌ಗಮೇಟ್) vt. i.mix. mercury with metals, unite; combine. ಪಾದರಸ ಮಿಶ್ರಮಾಡು; ಕೂಡು, ಸೇರು, ಸೇರಿಸು.

Amalgama'tion (ಅಮಾಲ್ಗಮೇಷನ್) n. mixture; union;combination, ಧಾತುಮಿಶ್ರಣ, ಸಂಯೋಜನೆ, ಸಮ್ಮಿಲನ.

Amanuensis (ಅಮಾನ್ಯುಎನ್ಸಿಸ್) n. one who writes what is dictated. ಹೇಳಿದ್ದನ್ನು ಬರೆದುಕೊಳ್ಳುವವನು, ಉಕ್ತಲೇಖಕ.

Am'aranth(ಅಮರ̆ಾಂಥ್)n. a flower that never fades. ಬಾಡದಿರುವ ಪುಷ್ಪ; ರುದ್ರಾಕ್ಷಿ ಹೂವು, ಅಡಿಕೆ ಹೂ, ಸುರಗಿ ಹೂ.

Amass(ಅಮಾಸ್) vt. heap together; accumulate. ಶೇಖರಿಸು; ಜಮಾಯಿಸು, ಒಟ್ಟುಗೂಡಿಸು, ಸಂಗ್ರಹಿಸು.

Amassment (ಅಮಾಸ್‌ಮೆಂಟ್) n. collection, heap. ಸಂಗ್ರಹ, ರಾಶಿ.

Am'ateur(ಅ̆ಮಚೂರ್) n. one who carries on an art, study, &c. for the love of it, not for money. ಮೋಜಿಗೆ ಆಡುವವ, ವಿದ್ಯಾಕಾಂಕ್ಷಿ.

Amateurish(ಅಮಚೂರಿಷ್) a. unskilled. ಅನಭ್ಯಸ್ತ, ನಿಪುಣತೆಯಿಲ್ಲದ.

Am'ative(ಅಮೆಟಿವ್) s. disposed to love. ಪ್ರೇಮಾನುಬಂಧದ, ಪ್ರೀತಿಯ. n. amativeness. ಪ್ರೇಮ, ಪ್ರೀತಿ.

Amatol(ಅಮಟಾಲ್) n. a high explosive. ಒಂದು ಬಗೆಯ ಸಿಡಿಮದ್ದು.

Amatorial (ಅಮಟೋರಿಯಲ್) a. pertaining to a lover. ಪ್ರೇಮಿಗೆ ಸಂಬಂಧಿಸಿದ.

Am'atory(ಅಮೆಟರೀ) a. of lovers or love. ಪ್ರಣಯಿಗಳ, ಶೃಂಗಾರಕ, ಪ್ರೇಮಕರ.

Amaurosis (ಆಮರೋಸಿಸ್) n. partial or total loss of sight. ದೃಷ್ಟಿಮಾಂದ್ಯ, ದೃಷ್ಟಿನಾಶ.

Amaze'(ಅಮೇಜ್)vt.surprise greatly, astound. ವಿಸ್ಮಯಪಡಿಸು, ಆಶ್ಚರ್ಯಪಡಿಸು, ಬೆಪ್ಪಳಿಸು.

Amaze'ment (ಅಮೇಜ್‌ಮೆಂಟ್) n. wonder; perplexity. ವಿಸ್ಮಯ, ಆಶ್ಚರ್ಯ, ಭ್ರಮೆ.

Am'azon (ಆ̆ಮಝೂನ್) n. a masculine woman, a female warrior. ಗುಂಡುಬೀರಿ, ರಣಧೀರೆ, ಪ್ರಮೀಳೆ, ಜಗಳಗಂಟಿ.

Ambages (ಅಂಬೆಜಸ್) n. roundabout ways. ಸುತ್ತುದಾರಿಗಳು.

Ambagious (ಅಂಬೇಜಿಯುಸ್) a. circumlocutory. ಸುತ್ತು ಮಾತಿನ, ವಾಗಾಡಂಬರದ.

Ambass'ador (ಅಂಬಾ̆ಸಡರ್) n. the representative of one sovereign at the court of another; envoy. ರಾಯಭಾರಿ, ರಾಜದೂತ.

Am'ber (ಅ̆ಂಬರ್) n. a yellowish kind of resin used for ornaments, &c. ಶಿಲಾರಾಳ, ಅಂಬರು, ಹಾಲುಮಡ್ಡಿ.

Ambergris (ಅಂಬರ್‌ಗ್ರೀಸ್) n. a fragrant substance found floating in the tropical seas. ಪನ್ನಂಬರವೆಂಬ ಸುಗಂಧದ್ರವ್ಯ.

Amberite (ಅಂಬರೈಟ್) n. kind of explosive. ಹೊಗೆ ಹೊರಡದೆ ಸಿಡಿಯುವ ಒಂದು ಬಗೆಯ ಸಿಡಿಮದ್ದು.

Ambidex'ter (ಆ̆ಂಬಿಡೆಕ್ಸ್ಟರ್) a. & n. capable of using both hands alike: double dealer. ಎರಡು ಕೈಗಳನ್ನು ಸರಿಯಾಗಿ ಉಪಯೋಗಿಸುವವ, ಉಭಯಹಸ್ತ ಕುಶಲ, ಉಭಯ ಪಕ್ಷಪಾತಿ, ವಂಚಕ ಪ್ರವೃತ್ತಿಯ.

Ambidextrous (ಆ̆ಂಬಿಡೆಕ್ಸ್ಟ್ರಸ್) cunning. ಕಪಟ, ವಂಚಕನಾದ.

Am'bient (ಆ̆ಂಬಿಎಂಟ್) a. surrounding. ಎಲ್ಲಕಡೆ ವ್ಯಾಪಿಸಿರುವ, ಸುತ್ತಿರುವ. n. the air or sky. ವಾಯು, ಆಕಾಶ.

Ambigu'ity (ಆ̆ಂಬಿಗ್ಯೂಇಟಿ) n. doubtfulness of meaning. ದಂದ್ವಾರ್ಥತೆ, ಗೂಢಾರ್ಥ, ಸಂದಿಗ್ಧಾರ್ಥತೆ, ಸಂದೇಹಾರ್ಥ.

Ambig'uous (ಆ̆ಂಬಿಗ್ಯೂಅಸ್) a. doubtful, indistinct. ಸಂದಿಗ್ಧ, ಅಸ್ಪಷ್ಟ, ಅವ್ಯಕ್ತ, ಗೂಢ.

Am'bit (ಆ̆ಮ್‌ಬಿಟ್) n. confine; scope. ಮೇರೆ, ಗಡಿ, ವಲಯ, ಪರಿಧಿ.

Ambi'tion (ಆ̆ಂಬಿಷನ್) n. eager desire of fame or power. ಮಹತ್ವಾಕಾಂಕ್ಷೆ, ಹಿರಿಯಾಸೆ, ಹೆಬ್ಬಯಕೆ.

Ambi'tious (ಆ̆ಂಬಿಶಸ್) a. strongly desirous. ಮಹತ್ವಾಕಾಂಕ್ಷೆಯುಳ್ಳ, ಯಶಸ್ಕಾಮ, ಹಿರಿಯಾಸೆಯ.

Am'ble (ಆ̆ಂಬಲ್) vt. move at an easy pace. ಸಾಧ್ಯಗತಿಯಿಂದ ನಡೆ. n. easy pace. ಕುದುರೆಯ ಕದಂನಡಿಗೆ.

Amblosis (ಅಂಬ್ಲೋಸಿಸ್) n. abortion. ಗರ್ಭಸ್ರಾವ.

Amblyopia (ಆಂಬ್ಲಿಯೋಪಿಯ) n. impaired eyesight. ದೃಷ್ಟಿಮಾಂದ್ಯ.

Ambo (ಆ̆ಂಬೋ) n. pulpit in churches. ಚರ್ಚುಗಳಲ್ಲಿರುವ ಭಾಷಣ ವೇದಿಕೆ.

Ambro'sia (ಅ̆ಂಬ್ರೋಜಿಅ) n. food of the gods; nectar. ಅಮೃತ, ಮಧುರವಾದ ಪದಾರ್ಥ.

Ambrosial (ಅಂಬ್ರೋಸಿಯಲ್) a. divinely fragrant, heavenly. ಅಮೃತಸದೃಶ, ಸ್ವರ್ಗೀಯ.

Ambry (ಆಂಬ್ರಿ) n. a pantry; room for storing alms. ಆಹಾರ ಪದಾರ್ಥಗಳನ್ನು ಇಡುವ ಸ್ಥಳ, ಭಿಕ್ಷಾದ್ರವ್ಯ ಇಡುವ ಸ್ಥಳ.

Ambsace (ಆಂಬ್ಸೇಸ್) n. lowest throw at dice, bad luck. ದಾಳದ ಅತ್ಯಂತ ಕನಿಷ್ಠಗಟ್ಟ, ದುರದೃಷ್ಟ.



Ambulance

Am'bulance (ಅಂಬ್ಯುಲನ್ಸ್) n. conveyance for sick or wounded persons. ಕಾಯಿಲೆ ಅಥವಾ ಗಾಯಗೊಂಡವರನ್ನು ಸಾಗಿಸುವ ವಾಹನ.

Ambulant (ಆಂಬ್ಯುಲೆಂಟ್) a. moving about. ಸಂಚರಿಸುವ.

Am'bulation (ಅಂಬುಲೇಶನ್) n. moving about. ಪರಿಭ್ರಮಣ.

Am'bulatory (ಅಂಬ್ಯುಲೇಟರಿ) n. cloister; place of walking. ಸಂಚಾರ ಸ್ಥಾನ.

Am'buscade' (ಅಂಬಸ್‌ಕೇಡ್) n. an ambush. ಪಾಳತಿ ಸೈನ್ಯ.

Am'bush (ಅಂಬುಷ್) n. a body of troops in concealment. ಅಡಗಿಸಿಟ್ಟಿರುವ ಸೈನ್ಯ.

Ameen (ಅಮೀನ್) n. petty officer. ಅಮೀನ.

Ameer, Emir (ಅಮೀರ್) n. an emir, a ruler. ಅಮೀರ ದೊರೆ.

Ame'liorate (ಅಮಿಲಿಒರೇಟ್) vt i. make or become better. ಸುಧಾರಿಸು, ಮೇಲಾಗಿಸು, ಉತ್ತಮಪಡಿಸು.

Amelioration (ಅಮಿಲಿಯೊರೇಶನ್) n. ಮೇಲಾಗುವಿಕೆ, ಉತ್ತಮಗೊಳಿಸುವಿಕೆ.

Amen' (ಏಮೆನ್, ಅಮೆನ್) int. so let it be ! ಹಾಗಾಗಲಿ ! ತಥಾಸ್ತು !

Ame'nable (ಅಮೆನೆಬಲ್) a. easy to be led or governed, responsible. ವಿಧೇಯ, ಉತ್ತರದಾಯಿ, ವಶವರ್ತಿಯಾದ.

Amend' (ಅಮೆಂಡ್) vt. i. correct, improve. ತಿದ್ದುಪಡಿಮಾಡು, ಸರಿಮಾಡು, ಸುಧಾರಿಸು, ತಿದ್ದು.

Amendable (ಅಮೆಂಡಬೆಲ್) a. capable of being amended. ಸುಧಾರಣೆಗೆ ಯೋಗ್ಯವಾದ.

Amend'ment' (ಅಮೆಂಡ್‌ಮೆಂಟ್) n. correction, improvement. ತಿದ್ದುಪಡಿ, ತಿದ್ದುಪಾಟು.

Amends' (ಅಮೆಂಡ್ಸ್) n. (plu.) compensation, reparation. ನಷ್ಟಭರ್ತಿ, ಪರಿಹಾರ.

Ame'nity (ಅಮಿನಿಟಿ) n. pleasantness. ಲಾವಣ್ಯ, ಸೌಂದರ್ಯ, ರಮ್ಯತೆ, (plu.) agreeable manners. ಒಳ್ಳೆಯ ನಡತೆ.

Amentia (ಅಮೆನ್ಷಿಯ) n. loss of consciousness. ಬುದ್ಧಿರಾಹಿತ್ಯ, ಯೋಗ ಸಮಾಧಿ.

Amerce (ಅಮರ್ಸ್) vt. punish, fine. ಶಿಕ್ಷಿಸು, ದಂಡವಿಧಿಸು.

Amercement (ಅಮರ್ಸ್‌ಮೆಂಟ್) n. fine, punishment. ದಂಡ, ಜುಲ್ಮಾನೆ.

Am'ethyst (ಅಮಥಿಸ್ಟ್) n. a precious stone of purple violet colour. ಪದ್ಮರಾಗ.

A'miable (ಏಮಿಎಬಲ್) a. lovable, of sweet disposition. ಪ್ರೇಮಶೀಲ, ಚಾರುಶೀಲ, ಸುಶೀಲ.

Amic (ಅಮಿಕ್) a. pertaining to ammonia. ಅಮೋನಿಯಾ ಸಂಬಂಧಿ.

Am'icable (ಅಮಿಕೆಬಲ್) a. friendly, ಸ್ನೇಹಿ, ಪ್ರಿಯಕರ. ಸ್ನೇಹಶೀಲ.

Amicableness (ಅಮಿಕೆಬಲ್‌ನೆಸ್) n. friendly spirit ಸ್ನೇಹಭಾವ.

Amid, Amidst' (ಅಮಿಡ್, ಅಮಿಡ್‌ಸ್ಟ್) pre. in the middle of, among. ನಡುವೆ, ಮಧ್ಯೆ, ಸಂದರ್ಭದಲ್ಲಿ.

Amidin (ಅಮಿಡಿನ್) n. starch solution. ದ್ರವದಲ್ಲಿ ಲೀನವಾದ ಪಿಷ್ಟ.

Amidships (ಅಮಿಡ್‌ಷಿಪ್ಸ್) adv. in middle of ship. ಹಡಗಿನ ಮಧ್ಯಭಾಗದಲ್ಲಿ.

Amir (ಅಮೀರ್) n. ameer, bey, ಅಮೀರ, ದೊರೆ.

Amiss' (ಅಮಿಸ್) adv. out of order, badly. ತಪ್ಪಾಗಿ, ಅಕ್ರಮವಾಗಿ, ಕೆಟ್ಟು,

take (a thing) amiss, be offended by it. ತಪ್ಪು ಅಭಿಪ್ರಾಯಪಟ್ಟು ಸಿಟ್ಟಾಗು.

Am'ity (ಅಮಿಟಿ) n. friendship, goodwill. ಪ್ರೀತಿ, ಸಖ್ಯ, ಅನ್ಯೋನ್ಯತೆ, ಮೈತ್ರಿ, ಸ್ನೇಹ.

Am'meter (ಅ̆ಮ್ಮೀಟರ್) n. instrument for measuring electric current. ವಿದ್ಯುತ್ಪ್ರವಾಹಮಾಪಕ.

Amomnal (ಅಮೊನಾಲ್) n. kind of explosive. ಒಂದು ಬಗೆಯ ಅಸ್ಫೋಟಕ ವಸ್ತು.

Ammo'nia (ಅಮೊನಿಅ) n. a colourless pungent gas. ಮೂತ್ರ ಲವಣ, ಅಮೋನಿಯಾ. a. Ammoniacal.

Ammuni'tion (ಅ̆ಮ್ಯೂನಿಷನ್) n. military stores of powder, ball bombs, &c. ಯುದ್ಧಸಾಮಗ್ರಿ, ಮದ್ದುಗುಂಡು ಮುಂತಾದದ್ದು.

Amnesia (ಅಮ್ನೀಸಿಯ) n. loss of memory. ಸ್ಮೃತಿನಾಶ.

Am'nesty (ಅ̆ಮ್ನೆಸ್ಟಿ) n. general pardon of political offenders. ರಾಜದ್ರೋಹ ಕ್ಷಮಾಪಣೆ, ದೋಷಕ್ಷಮೆ.

Amnion (ಆಮ್ನಿಯಾನ್) n. membrane enclosing foetus. ಭ್ರೂಣದ ಮೇಲಿನ ಪೊರೆ.

Amoe'ba (ಅಮೀಬಾ) (pl.- oebas) n. a unit mass which constantly changes its shape. ಕೀಟಾಣು.



Amoeba

Amoebeaan (ಅಮೀಬಿಯನ್) a. answering in an alternate way. ಪರ್ಯಾಯವಾಗಿ ಉತ್ತರಕೊಡುವ.

Amon'g, Amongst' (ಅಮಂಗ್, ಅಮಂಗ್ಸ್ಟ್) pre. amidst, in the number of. ಮಧ್ಯೆ, ನಡುವೆ, ಒಳಗೆ,-ಗಳಲ್ಲಿ.

Amoral (ಏಮಾರಲ್) a. unconcerned with morals, non moral. ನೀತಿಗೆಸಂಬಂಧಪಡದ, ನೀತಿಗೆಅತೀತವಾದ.

Amort (ಅಮಾರ್ಟ್) a. in a half-dead state. ಅರ್ಧಮೃತಾವಸ್ಥೆಯಲ್ಲಿ.

Amortize (ಅಮಾರ್ಟೈಜ್) vt. remove debt. ಋಣಮುಕ್ತನನ್ನಾಗಿ ಮಾಡು.

Am'orous (ಅಮೋರಸ್) a. loving, in love. ಪ್ರಣಯಾಸಕ್ತ, ಅನುರಕ್ತ, ವಿಲಾಸಿ, ಶೃಂಗಾರಪ್ರಿಯ. adv. am'orously.

Amorph'ous (ಅ̆ಮಾರ್ಫಸ್) a. shapeless. ಆಕಾರರಹಿತ, ರೂಪವಿಲ್ಲದ.

Amount (ಅಮೌಂಟ್) vt. result in, come or rise to. ಒಟ್ಟಾಗು, ಅಭಿಪ್ರಾಯವಾಗು, ಬರು. n. total quantity. ಒಟ್ಟು, ಮೊತ್ತ, ಪರಿಮಾಣ.

Amour' (ಅಮೂರ್) n. a love intrigue. ಪ್ರಣಯಗೋಷ್ಠಿ; ಕಾಮಲೀಲೆ, ಪ್ರಣಯತಂತ್ರ.

Amourette (ಅಮ್ಯೂರೆಟ್) n. a trivial love affair. ಅಲ್ಪವಾದ ಪ್ರಣಯ ಪ್ರಸಂಗ.

Am'pere (ಅಂಪೀರ್) n. unit of electric current. ವಿದ್ಯುತ್ಪ್ರವಾಹದ ಒಂದು ಅಳತೆ, ಅಂಪೀರು.

Ampersand (ಅಂಪರ್ಸಾಂಡ್) n. the sign '&', ಎಂಬ ಚಿಹ್ನೆ.

Amphibia (ಅಂಫಿಬಿಯಾ) n. animals living both in water and on earth. ನೀರಿನಲ್ಲೂ, ನೆಲದ ಮೇಲೂ ವಾಸಿಸುವ ಪ್ರಾಣಿಗಳು.

Amphibian (ಅ̆ಂಫಿಬಿಯನ್) a. living both on land and in water. ಭೂಜಲಚರ.

Amphib'ious (ಅ̆ಂಫಿಬಿಯಸ್) a living both on land & in water. ಭೂಜಲಚರ, ಉಭಯಚರ.

Amphibology (ಅಂಫಿಬಾಲೋಜಿ) n. evasive wording, quibble. ಹೊರಳು ಮಾತುಗಳು, ಸಂದಿಗ್ಧ ಶಬ್ದಗಳು.

Amphigouri (ಅಂಫಿಗೂರಿ) n. nonsensical composition. ಅಸಂಬದ್ಧ ಬರೆಹ.

Amphisbaena (ಆಂಫಿಸ್‌ಬೀನಾ) n. fabulous serpent with head at both ends. ಎರಡು ಕೊನೆಗಳಲ್ಲಿಯೂ ತಲೆಯಿರುವ ಹಾವು.

Amphitheatre (ಆ̆ಂಫಿಥಿಏಟರ್) n. semicircular gallery in theatre. ಮಲ್ಲಯುದ್ಧರಂಗ, ವರ್ತುಲಾಕಾರದ ನಾಟಕ ಶಾಲೆ.

Amphitryon (ಅ̆ಂಫಿಟ್ರಿಯಾನ್) n. host, entertainer. ಅತಿಥಿಸತ್ಕಾರಿ, ಆತಿಥೇಯ.

Am'ple (ಆ̆ಂಪಲ್) a. spacious, enough, abundant. ವಿಸ್ತೃತ, ಯಥೇಷ್ಟ, ಧಾರಾಳ, ವಿಪುಲ, ಹೇರಳ.

Amplifica'tion (ಆ̆ಂಪ್ಲಿಫಿಕೇಶನ್) n. enlargement, diffusion, discourse. ಹೆಚ್ಚಿಸೋಣ, ವಿಸ್ತರ, ವೃದ್ಧಿ, ಪ್ರಾಚುರ್ಯ.

Am'plifier (ಆ̆ಂಪ್ಲಿಫೈಯರ್) n. (esp.) appliance to increase sound in wireless reception. ಧ್ವನಿವರ್ಧಕ.

Am'plify (ಆ̆ಂಪ್ಲಿಫೈ) vt. i. make more copious in expression, add to. ವಿಸ್ತರಿಸು, ವಿಶದವಾಗಿ ವರ್ಣಿಸು, (ಧ್ವನಿ) ಹೆಚ್ಚಿಸು.

Am'plitude (ಆಂಪ್ಲಿಟ್ಯೂಡ್) n. spaciousness, largeness. ಬಾಹುಳ್ಯ, ಪ್ರಶಸ್ತತೆ; ವಿಸ್ತಾರ, ವಿಶಾಲತ್ವ, ಮಹತ್ವ.

Amply (ಆ̆ಂಪ್ಲಿ) adv. sufficiently. ಸಾಕಾದಷ್ಟು.

Ampulla (ಅ̆ಂಪಲ) n. a flask with two handles used by Romans. ರೋಮನರು ಉಪಯೋಗಿಸುತ್ತಿದ್ದ ಎರಡು ಹಿಡಿಯ ಗುಂಡು ಗಾಜಿನಪಾತ್ರೆ.

Am'putate (ಆ̆ಂಪ್ಯುಟೇಟ್) vt. cut off (limb, &c.) ಅಂಗಚ್ಛೇದ ಮಾಡು, ಕೊಯ್ದುಹಾಕು.

Am'puta'tion (ಅ̆ಂಪ್ಯುಟೇಶನ್) n. act of cutting off a limb. ಅಂಗವಿಚ್ಛೇದನೆ. n. amputator. ಅಂಗಚ್ಛೇದಕ.

Amuck' (ಅಮಕ್) adv. (run madly) in murderous frenzy. ನರಹತ್ಯೆ ಮಾಡಲೆಳಸು. run a ನರಹತ್ಯೆಮಾಡುವ ಭ್ರಾಂತಿಯಿಂದ ಓಡಾಡಿಸು.

Am'ulet (ಅ̆ಮ್ಯುಲೆಟ್) n. thing worn as a charm against evil. ಯಂತ್ರ, ತಾಯಿತ, ಭದ್ರಿಕೆ.

Amuse' (ಅಮ್ಯೂಜ್) vt. occupy pleasantly, divert. ವಿನೋದಪಡಿಸು, ಆಡಿಸು, ಚಕ್ಕಳಿಸು, ಉಲ್ಲಾಸಪಡಿಸು. a. amusive, amusing. ಉಲ್ಲಾಸಕರ.

Amu'sement (ಅಮ್ಯೂಜ್‌ಮೆಂಟ್) n. that which amuses, pastime. ವಿನೋದ, ಚಲ್ಲಾಟ, ಕುಶಾಲು, ಮೋಜು.

Amylaceous (ಅ̆ಮಿಲೇಷಸ್) a. pertaining to starch. ಪಿಷ್ಟಸಂಬಂಧಿಯಾದ.

Amyloid (ಅ̆ಮಿಲಾಯಿಡ್) n. starchy matter. ಪಿಷ್ಟಾಹಾರ.

An (ಅ̆ನ್) (indef. art.) one. ಒಂದು, ಒಬ್ಬ, ಏಕ.

Anabaptism (ಅ̆ನಬಾ̆ಪ್ಟಿಜಮ್) n. rebaptism. ಪುನರ್ಜ್ಞಾನಸ್ನಾನ.

Anabasis (ಅ̆ನಾಬಸಿಸ್) n. a military march. ' ದಂಡಯಾತ್ರೆ.

Anachronic (ಅ̆ನಕ್ರಾನಿಕ್) a. erroneous regarding time. ಕಾಲವಿರೋಧಾತ್ಮಕ.

Ana'chronism (ಅ̆ನಾಕ್ರಾನಿಜ್ಮ್) n. thing out of harmony with the period. ಕಾಲಗಣನಾದೋಷ, ಕಾಲವನ್ನು ತಪ್ಪಾಗಿ ಎಣಿಸುವುದು.

Anaclastic (ಅ̆ನಕ್ಲಾಸ್ಟಿಕ್) a. pertaining to refraction of light. ಕಿರಣದ ವಕ್ರಗತಿಗೆ ಸಂಬಂಧಿಸಿದ.

Anac'lisis(ಅನಾಕ್ಲಿಸಿಸ್) n. bed sore. ಶಯ್ಯಾವ್ರಣ, ಹಾಸಿಗೆಯ ಹುಣ್ಣು.

Anaconda (ಆ̆ನಕಾಂಡ) n. large snake of Ceylon. ಸಿಲೋನಿನ ಹೆಬ್ಬಾವು.

Anadem (ಅನಾಡೆಮ್) n. garland ; ಹಾರ, ಮಾಲೆ.

Anae'mia (ಅ ನೀ ಮಿ ಅ) n lack of blood marked by paleness. ರಕ್ತಹೀನತೆ, ರಕ್ತಕ್ಷೀಣತೆ, ಬಿಳುಚುರೋಗ.

Anaemic (ಅನೀಮಿಕ್) a· pertaining to anaemia· ರಕ್ತಹೀನತೆಗೆ ಸಂಬಂಧಪಟ್ಟ.

Anaesthe'sia (ಅ̆ನೆಸ್ಥೀಸಿಅ) n. insensible condition· ಸ್ಪರ್ಶಜ್ಞಾನಶೂನ್ಯತೆ.

Anaesthet'ic (ಅ̆ನೆಸ್ಥೆಟಿಕ್) a· producing insensibility to pain· ವೇದನಾರೋಧಕ. n· (plu·)(ಕ್ಲೋರೋಫಾರಂ, ಕೋಕೈನ್ ಮೊದಲಾದ) ಸಂವೇದನಾ ನಾಶಕದ್ರವ್ಯ· n· anaesthetist·

An'agram (ಅ̆ನಗ್ರ್ಯಾಮ್) n· word or phrase formed from letters of another; ಅಕ್ಷರಗಳ ವ್ಯತಿಕ್ರಮದಿಂದಾಗುವ ಹೊಸಪದ.

A'nal (ಏ ನ ಲ್) a· of the anus· ಗುದದ,-ಗುದಸಂಬಂಧಿ.

An'aiects (ಅ̆ನಲೆಕ್ಟ್ಸ್) n. (plu.) collection of literary fragments ಆರಿಸಿ ತೆಗೆದ ಸಾಹಿತ್ಯದ ಭಾಗಗಳ ಸಂಗ್ರಹ; ಸಾಹಿತ್ಯಸಂಗ್ರಹ.

Analeptic (ಅನಲೆಪ್ಟಿಕ್) n. & a. a restorative medicine. ಪುಷ್ಟಿಕಾರಕ ಔಷಧ.

Analgesia(ಅ̆ನಲ್ಜೀಸಿಯ)n. absence of pain. ನೋವು ತಿಳಿಯದಿರುವ.

Analog'ical (ಆ̆ನಲಾಜಿಕಲ್)a. showing an analogy. ಸದೃಶವಾದ, ಹೋಲುವ.

Analogist (ಅ̆ನಾಲೊಜಿಸ್ಟ್) n. a person who employs analogy· ಸಾದೃಶ್ಯೋದಾಹರಣೆಗಳನ್ನು ಉಪಯೋಗಿಸುವವನು.

Anal'ogous (ಅ ನಾ̆ ಲೊ ಗ ಸ್) a. similar, parallel. ಸದೃಶ, ಸಮಾನ, ಸರೂಪ.

An'alogue(ಆ̆ನಲಾಗ್)n. analogous thing. ಸದೃಶವಸ್ತು, ಸಮಾನವಸ್ತು-ಸಮಶಬ್ದ

Anal'ogy (ಅ̆ನಾಲೊಜಿ) n. likeness, parallelism. ಸಾಮ್ಯ, ಸಾದೃಶ್ಯ, ಸಮಾನತೆ, ಸಾತ್ಮ್ಯ ಹೋಲಿಕೆ, ಗಣಿತಪ್ರಮಾಣ.

An'alyse (ಅ̆ನಲೈಜ್) vt. ascertain the elements of. ವಿಚ್ಛೇದಿಸು, ವಿಂಗಡಿಸು, ಪೃಥಕ್ಕರಣಮಾಡು.

An'alysis (ಅ̆ನಾಲಿಸಿಸ್) n. (plu.-es) resolution into simple elements. ಪೃಥಕ್ಕರಣ, ವಿಭಜನೆ, ವಿಗ್ರಹ, ಪರಿಚ್ಛೇದ aa. analyt'ical. ಪೃಥಕ್ಕರಿಸುವ.

An'alyst (ಅ̆ ನ ಲಿ ಸ್ಟ್) n. one who analyses. ವಿಚ್ಛೇದಕ, ವಿಶ್ಲೇಷಕ.

Anamnesis (ಆ̆ನಮ್‌ನೀಸಿಸ್) n. recollecting previous existence. ಪೂರ್ವಜನ್ಮದ ಸ್ಮರಣೆ.

Anamorphosis (ಅ̆ನ್‌ಮಾರ್ಫಸಿಸ್)n. distorted drawing. ವಿಕೃತರೂಪದ ಚಿತ್ರ.

Anamorphous (ಅ̆ನಾಮಾರ್ಫಸ್) a, abnormally developed. ವಿಕೃತ ಬೆಳವಣಿಗೆಯುಳ್ಳ.

Ana'nas (ಅನಾನಸ್) n. pine apple. ಅನಾನಸಹಣ್ಣು, ಫರಂಗಿ-ಹಲಸು.

Anaphora (ಅ̆ನಾಫೂರ)n. repetition of the same words in a sentence, ಒಂದೇವಾಕ್ಯದಲ್ಲಿ ಪದದ ಪುನರಾವರ್ತನೆ.

Anar'chic (al)(ಅನಾರ್ಕಿಕ್,-ಅಲ್)a. lawless. ಅನಾಯಕ, ಅರಾಜಕ.

Anarchism (ಅನಾರ್ಕಿಸ್ಸಮ್) n. political confession. ಅನಾಯಕತ್ವ.

An'archist(ಅನಾರ್ಕಿಸ್ಟ್)n. advocate of anarchy. ರಾಜಕಂಟಕ,ಬಂಡುಗಾರ.

An'archy (ಅನಾರ್ಕಿ) n. the want of government in a state; political confusion. ಅರಾಜಕಸ್ಥಿತಿ,ಅನಾಯಕತ್ವ.

Anath'ema (ಅ̆ನಾತಿಮಾ) n. solemn curse, accursed thing. ಶಾಪ, ಅಭಿಶಪನ, ಬಹಿಷ್ಕಾರ, ಶಾಪಗ್ರಸ್ತ.

Anath'ematise(ಅ̆ನಾತಿಮಟೈಸ್) vt. to curse. ಶಪಿಸು, ಶಾಪಹಾಕು.

Anatomi'cal (ಅ̆ನಟಾಮಿಕಲ್) a. relating to anatomy. ಅಂಗಶೋಧನವಿದ್ಯೆಯ,ಶರೀರ ರಚನೆಯ,ಅಸ್ಥಿಪಂಜರದ.

Anatomist (ಅ̆ನಾಟೊಮಿಸ್ಟ್) n. a person well versed in anatomy. ಶರೀರ ರಚನೆಯ ಶಾಸ್ತ್ರದಲ್ಲಿ ಪಾರಂಗತ.

Anat'omy(ಅ̆ನಾಟೊಮಿ)n·science of the structure of the body learned by dissection.ಅಂಗವಿಚ್ಛೇದನ ತಂತ್ರ, ಅಂಗಶೋಧನವಿದ್ಯೆ, ಪ್ರತ್ಯಕ್ಷ ಶರೀರವಿದ್ಯೆ.

Anbury(ಅ̆ನ್‌ಬರಿ) n. tumerous disease of horses and oxen. ಕುದುರೆ ಮತ್ತು ಎತ್ತುಗಳಿಗೆ ತಗಲುವ ಒಂದು ರೋಗ.

An'cestor (ಅ̆ನ್‌ಸೆಸ್ಟರ್) n. forefather. ಪೂರ್ವಜ, ಪೂರ್ವೀಕ, ಮೂಲಪುರುಷ, ಹಿರಿಯ, ಮೊದಲಿಗ, ಹಿಂದಿನವ.

Ances'tral (ಅ̆ನ್‌ಸೆಸ್ಟ್ರಲ್) a. inherited from forefathers. ವಂಶಪರಂಪರೆಯಿಂದ ಬಂದ, ಪೂರ್ವಿಕ, ಪಿತ್ರಾರ್ಜಿತ.

An'cestry (ಅ̆ನ್‌ಸೆಸ್ಟ್ರಿ) n. ancient descent, a lineage. ಮನೆತನ, ವಂಶಾವಳಿ, ಪಿತೃಶ್ರೇಣಿ, ಪೀಳಿಗೆ.

Anc'hor(ಆ̆ಙ್ಕರ್) n· iron instrument for holding ships at rest in water. ಲಂಗರು, ನಂಗಲ್ಲು, ಲಾಂಗಲ. vt. & i. to secure ship with anchor (fig.) fix one's hopes on. ಲಂಗರು ಹಾಕು, ಭರವಸೆ ಇಟ್ಟುಕೊಂಡಿರು. wait a. take up the a. ಲಂಗರ ಎಳೆ. a. off a place, cast a. near the place. ಸ್ಥಳದ ಹತ್ತಿರ ಲಂಗರಹಾಕು.



Anchor

Anc'horage (ಆ̆ಙ್ಕರೇಜ್) n. place where a ship can anchor, (fig·) anything that gives support to the mind. ರೇವು, ಲಂಗರುಹಾಕುವ ಸ್ಥಳ, ಪ್ರಾಣಾಧಾರ, ಜೀವಾಧಾರ.

Anc'horite, Anchoret (ಆ̆ಂಙ್ಕರೈಟ್,-ರಟ್) n. hermit, recluse. ವಿರಕ್ತ, ಏಕಾಂತವಾಸಿ. ವನವಾಸಿ.

Anchylose (ಅ̆ಂಕಿಲೋಸ್) vt. i. to become stiff, to unite· (ಕೀಲು ಅಥವಾ ಮೂಳೆ) ಗಟ್ಟಿಯಾಗು, ಕೂಡಿಕೊಳ್ಳು, ಸೇರು.

An'cient (ಏನ್‌ಶೆಂಟ್) a. of times long past, old. ಪ್ರಾಚೀನ, ಪುರಾತನ, ಹಳೆಯ, ಆರ್ಷೇಯ. a· of Days, God. ದೇವರು.

An'cients (ಏನ್‌ಶನ್ಸ್) n. (plu.) those who lived long ago ಪೂರ್ವಿಕರು, ಪುರಾತನರು, ಪೂರ್ವಪುರುಷರು.

An'cillary(ಆ̆ನ್ಸಿಲ್‌ಲರಿ)a. subservient. ಅಧೀನ, ಕೈಕೆಳಗಣ.

Ancon (ಆಂಕನ್) n. elbow, support to cornice. ಮೊಣಕೈ, ಗೋಡೆಯ ಕಾರ್ನೀಸಿಗೆ ಆಧಾರವಾಗಿರುವ ಭಾಗ.

And (ಅಂಡ್) conj. used to connect words, clauses or sentences. ಮತ್ತು, ಊ, ವ.

Andan'te (ಅನ್‌ಡನ್‌ಟಿ) a. moderately slow. ಸಾವಧಾನ. (ರಾಗ).



Andiron

Andiron (ಆಂಡೈ ಅರನ್) n. an iron frame for supporting fire on hearth. ಒಲೆಯ ಸೌದೆಗೆ ಆಸರೆಯಾದ ಕಬ್ಬಿಣದ ಚೌಕಟ್ಟು.

Androphagi (ಅಂಡ್ರೊಫಾಗಿ) n. pl. cannibals. ನರಭಕ್ಷಕರಾದ ಜನರು.

Anear (ಅನಿಯರ್) prep. near. ಹತ್ತಿರ.

An'ecdote (ಅನೆಕ್‌ಡೋಟ್) n. short story. ಸಣ್ಣ ಕಥೆ, ಕಥಾನಕ.

Anecdotist (ಅನೆಕ್‌ಡೋಟಿಸ್ಟ್) n. a person who is given to narrating anecdotes. ಕಥೆಗಾರ.

Anemograph (ಅನೆಮೊಗ್ರಾಫ್) n. an instrument for recording the force and direction of wind. ವಾಯುವಿನ ಗತಿ ಮತ್ತು ವೇಗವನ್ನು ಕಂಡು ಹಿಡಿಯುವ ಯಂತ್ರ.

Anemom'eter (ಅನಿಮಾಮೀಟರ್) n. instrument to measure strength, velocity of wind. ವಾಯುಗತಿ ಮಾಪಕ ಯಂತ್ರ.

Anent' (ಅನೆಂಟ್) prep. & adv. concerning. ಕುರಿತು, ವಿಷಯವಾಗಿ.

Aneroid (ಅನೆರಾಯ್ಡ್) a. & n. box barometer. ವಾಯುವಿನ ಒತ್ತಡವನ್ನು ಅಳೆಯುವ ಪೆಟ್ಟಿಗೆಯ ಆಕಾರದ ಒಂದು ಸಲಕರಣೆ.

Anethol (ಅನಿಥಾಲ್) n. oil of aniseed. ಸೋಪು ಬೀಜದ ಎಣ್ಣೆ.

Anew (ಅನ್ಯೂ) adv .again, afresh. ಹೊಸದಾಗಿ, ಪುನಃ, ಇನ್ನೊಂದು ಬಗೆಯಾಗಿ, ಅಭಿನವವಾಗಿ.

Anfractuous (ಅನ್‌ಫ್ರಾಕ್ಟ್ಯುಅಸ್) a. round about, intricate. ಸುತ್ತುಬಳಸುವಿಕೆ, ಜಟಿಲ.

A'ngel (ಏಂಜಲ್) n. divine messenger, attendant spirit, obliging person. ದೇವದೂತ, ದಿವ್ಯಪುರುಷ, ದೇವತೆ. ಉಪಕಾರಿ.

Angelic (ಏಂಜಲಿಕ್) a. resembling an angel, of the nature of an angel. ದಿವ್ಯ, ದೇವತೋಪಮ, ಅಮಾನುಷ.

Angelolatry (ಏನ್‌ಜೆಲೊಲೆಟ್ರಿ) n. worship of an angel. ದೇವತಾಪೂಜೆ.

An'ger (ಆಂಗರ್) n. wrath, hot displeasure. ಕೋಪ, ಸಿಟ್ಟು, ರೋಷ, ಮುನಿಸು, ಸಿಡಿಮಿಡಿ. vt excite anger in. ಕೋಪವನ್ನುಂಟುಮಾಡು.

Angina (ಅಂಜಿನ) n. inflammation of throat. ಗಂಟಲು ಊದಿಕೊಳ್ಳುವುದು.



Angle

An'gle (ಆಂಗಲ್) n. a fish-hook, a point where two lines meet, a corner. ಗಾಳ, ಗಾಣ, ಕೋಣ, ಮೂಲೆ. vt. fish with rod, hook, and bait. ಗಾಳಹಾಕು.

Ang'ler (ಆಂಗ್‌ಲರ್) n. a fisherman. ಮೀನು ಹಿಡಿಯುವವ.

Anglewise (ಆಂಗಲ್‌ವೈಜ್) adv. angular. ಕೋಣದಂತೆ.

Anglican (ಆ̆ಂಗ್ಲಿಕನ್) a. & n. (a follower)of the reformed church of England. ಇಂಗ್ಲೆಂಡಿನ ಸುಧಾರಣೆ ಮಾಡಿದ ಧರ್ಮದ (ಹಿಂಬಾಲಕ).

Ang'licism (ಆ̆ಂಗ್ಲಿಸಿಜಮ್) n. an idiom or peculiarity of the English people or their language. ಇಂಗ್ಲಿಷ್ ಪದ್ಧತಿ, ಇಂಗ್ಲೀಷ್ ಭಾಷಾ ಸಂಪ್ರದಾಯ.

Ang'licize,-se(ಆ̆ಂಗ್ಲಿಸೈಜ್) vt. express in English idiom. ಇಂಗ್ಲಿಷ್ ಶೈಲಿಯಲ್ಲಿ ನುಡಿ, ಆಂಗ್ಲೀಕರಣಮಾಡು.

Anglo-Indian (ಆ̆ಂಗ್ಲೋ-ಇಂಡಿಯನ್) n. an Englishman born or living in India. ಭಾರತದಲ್ಲಿ ಹುಟ್ಟಿದ ಅಥವಾ ವಾಸಿಸುತ್ತಿರುವ ಇಂಗ್ಲಿಷಿನವ.

Anglomania (ಆ̆ಂಗ್ಲೊಮೇನಿಅ) n. great admiration of English customs. ಇಂಗ್ಲೀಷರ ಆಚಾರ ವ್ಯವಹಾರಗಳ ಮೇಲೆ ಅತ್ಯಂತ ಅಭಿಮಾನ.

Anglophobia (ಆ̆ಂಗ್ಲೊಫೋಬಿಯ) n. fear and dislike of the English. ಇಂಗ್ಲಿಷರನ್ನು ಕಂಡರೆ ದ್ವೇಷ ಮತ್ತು ಭೀತಿ.

Ang'ry (ಆ̆ಂಗ್ರಿ) a. excited with anger, inflamed. ಕೋಪಗೊಂಡ, ಸಿಟ್ಟಾದ, ಮುನಿಸಿದ; ಕೆರಳಿದ, ಉರಿಯುವ.

Anguine(ಅಂಗ್ವಿನ್)a. like a snake. ಹಾವಿನಂತೆ, ಸರ್ಪಸಮಾನ.

Ang'uish(ಆ̆ಂಗ್ವಿಷ್)n. agony, excessive pain of body or mind. ಕ್ಲೇಶ, ವೇದನೆ, ಸಂಕಟ, ವ್ಯಸನ.

Ang'ular (ಆ̆ಂಗುಲರ್) a. having angles, (fig.) stiff in manners. ಮೂಲೆಗಳುಳ್ಳ, ಚೂಪಾದ, ಜಗಳಗಂಟಿಗನಾದ.

Angula'rity (ಆ̆ಂಗ್ಯುಲಾ̆ರಿಟಿ)n. quality of being angular. ಕೋಣ ವಿಶಿಷ್ಟತ್ವ, ಮೂಲೆಯಾಗಿರೋಣ, ಕೋಣತ್ವ.

Angulate (ಆ̆ಂಗ್ಯುಲೇಟ್) a. formed with corners. ಮೂಲೆ ಮೂಲೆಯಾಗಿ ನಿರ್ಮಿಸಿದ, ಮೂಲೆಗಳುಳ್ಳ.

Anigh (ಅನೈ) adv. & prep. near. ಹತ್ತಿರ.

Anil (ಆ̆ನಿಲ್) n. indigo plant and dye. ನೀಲಿಸಸ್ಯ, ನೀಲಿಬಣ್ಣ.

An'i'le (ಆ̆ನೈಲ್) a. old, imbecile, ಮುದಿ, ದುರ್ಬಲ.-ili'ty n.imbecility dotage. ಮುದಿಭ್ರಾಂತಿ, ಕೆಪ್ಪ, ಮುಪ್ಪು.

Aniline (ಆ̆ನಿಲೈನ್) n. a chemical base from which dyes are produced. ಅನೇಕ ಬಣ್ಣಗಳ ರಾಸಾಯನಿಕ ಆಧಾರ.

Anility(ಆ̆ನಿಲಿಟಿ) n. dotage, imbecility. ಮುಪ್ಪು, ಅರುಳು ಮರುಳು.

Animadver'sion (ಆ̆ನಿಮ̆ಡ್‌ವರ್ಷನ್) n. criticism, censure, reproof. ಆಕ್ಷೇಪಣೆ, ಖಂಡನೆ, ದೋಷಾರೋಪಣೆ.

Animadvert (ಆ̆ನಿಮ̆ಡ್‌ವರ್ಟ್) vt. criticise, censure. ಆಕ್ಷೇಪಿಸು, ಖಂಡಿಸು, ನಿಂದಿಸು.

An'imal (ಆ̆ನಿಮಲ್) n. a living being, a creature other than a man. ಪಶು, ಪ್ರಾಣಿ, ಮೃಗ. a. of animals, carnal. ಪ್ರಾಣಿಮಾತ್ರದ; ಇಂದ್ರಿಯ ಭೋಗದ, ಪಾಶವಿಕ.

Animal'cule(ಆ̆ನಿಮಲ್‌ಕ್ಯೂಲ್)n. a. minute animal. ಸೂಕ್ಷ್ಮಪ್ರಾಣಿ, ಅಣುಪ್ರಾಣಿ.

Animalism (ಆ̆ನಿಮಲಿಜಮ್) n. animal activity sensuality. ಪಾಶವಿಕ ಚೇಷ್ಟೆ, ಇಂದ್ರಿಯಲಿಪ್ಸೆ.

Animality (ಆ̆ನಿಮಾ̆ಲಿಟಿ) n. animal world, animal nature. ಪ್ರಾಣಿವರ್ಗ, ಪಶುಸ್ವಭಾವ.

An'imate (ಆನಿಮೇಟ್) vt. give life to, actuate. ಜೀವಕೊಡು, ಬದುಕಿಸು. ಉತ್ತೇಜನಪಡಿಸು, ಪ್ರೋತ್ಸಾಹಿಸು, a. living, animated. ಪ್ರಾಣವುಳ್ಳ, ಸಜೀವ.

Anima'tion(ಆ̆ನಿಮೇಶನ್) n. liveliness, vigour, ardour, vivacity. ಚೇತನ, ಉತ್ತೇಜನ, ಉಜ್ಜೀವನ, ಉತ್ಸಾಹ.

Animatograph (ಆ̆ನಿಮಾ̆ಟೋಗ್ರಾಫ್) n. cinematograph. ಚಲಚ್ಚಿತ್ರ ಪ್ರದರ್ಶಕ.

Animator (ಆನಿಮೇಟರ್) n. one who enlivens, that which gives life. ಪ್ರೋತ್ಸಾಹಕ, ಜೀವನದಾಯಕ.

An'imism (ಅ̆ನಿಮಿಜಮ್)n. attribution of a soul to inanimate objects and natural phenomena. ಸರ್ವಸಜೀವತ್ವವಾದ, ಸ್ವಪ್ನದೃಷ್ಟವಾದ.

Animos'ity (ಆ̆ನಿಮಾಸಿಟಿ) n. bitter hatred, hostility. ಹಗೆ,ಮತ್ಸರ,ವೈರ.

An'imus(ಆ̆ನಿಮಸ್) n. hostile feeling. ದ್ವೇಷ, ವೈರ, ಹಗೆ.

Anise (ಆನಿಸ್) a. plants with aromatic seeds. ಬಡೇಸೋಪುಗಿಡ. an'i seeds (ಆನಿಸೀಡ್ಸ್) ಬಡೇಸೋಪು ಬೀಜ.

Aniseed (ಆ̆ನಿಸೀಡ್) n. seed of the anise plant. ಸೋಪುಬೀಜ.

An'kle(ಆ̆ಂಕಲ್) n. joint connecting the foot and leg. ಪಾದದಕೀಲು, ಹರಡು, ಗಿರಿಗೆ ಗುಲ್ಬ, ಹಡ್ಡ.

Ank'let (ಆ̆ಂಕ್ಲೆಟ್) n. an ornament for the ankle. ಕಾಲಕಡಗ, ಅಂದುಗೆ, ನೂಪುರ, ಕಾಲುಬಳೆ, ರುಳಿ, ಗೊಲಸು.

Ann'a (ಅ̆ನ) n. an Indian coin. ೧ ಆಣೆ (ನಾಣ್ಯ).

Annalist (ಆ̆ನಲಿಸ್ಟ್) n. writer or composer of annals. ಚರಿತ್ರೆಯ ಲೇಖಕ.

Ann'als(ಆ̆ನಲ್ಸ್) n. plu. narrative of events year by year. ವಾರ್ಷಿಕ ವೃತ್ತಾಂತ, ವಾರ್ಷಿಕವರದಿ.

Anneal' (ಅನೀಲ್) vt. temper glass or metals by gradually diminishing heat. ಕಾವಿನಿಂದ ಹದಮಾಡು.

Annectent(ಅನೆಕ್ಟೆಂಟ್)a. connecting. ಕೂಡಿಸುವ, ಸಂಯೋಜಕ.

Annex'(ಅನೆಕ್ಸ್)vt. join or attach, take possession of. ಸೇರಿಸು, ಕೂಡಿಸಿಕೊಳ್ಳು; ಸ್ವಾಧೀನಪಡಿಸಿಕೊಳ್ಳು.

Annexa'tion (ಅನೆಕ್ಸೇಷನ್) n. act of attaching or taking possession of. ಸೇರಿಸಿಕೊಳ್ಳುವಿಕೆ, ಸ್ವಾಧೀನ ಪಡಿಸಿಕೊಳ್ಳುವಿಕೆ, ಅನುಬಂಧ.

Anni'hilate (ಆ̆ನಿಹಿಲೇಟ್) vt. reduce to nothing, destroy completely. ನಿರ್ನಾಮಮಾಡು,ನಾಶಮಾಡು, ನಿರ್ಮೂಲಗೊಳಿಸು.

Annihilation (ಆ̆ನಿಹಿಲೇಶನ್) n. destruction of soul as well as body. ಸರ್ವನಾಶ, ಸಂಹಾರ, ವಿನಾಶ, ಪ್ರಳಯ.

Anniver'sary (ಆ̆ನಿವರ್ಸರಿ) n. the day of the year on which the event happened. ವರ್ಷೋತ್ಸವ, ಜಯಂತಿ, ಪುಣ್ಯದಿನ.

Anno Domini (ಆ̆ನೋಡಾಮಿನೈ) phr. in the year of our Lord of the Christian era. ಕ್ರಿಸ್ತಶಕ.

Anno'tate (ಆ̆ನೊಟೇಟ್) vt. i. make notes, comments upon. ಟೀಕೆಬರೆ, ಭಾಷ್ಯಬರೆ, ಟಿಪ್ಪಣಿ ಬರೆ.

Annota'tion(ಆ̆ನೊಟೇಶನ್) n. comment. ಟೀಕೆ, ಟಿಪ್ಪಣಿ, ಭಾಷ್ಯ.

Ann'otator (ಆನೋಟೇಟರ್) n. a commentator. ಟೀಕಾಕಾರ, ಟಿಪ್ಪಣಿಕಾರ.

Announce' (ಅನೌನ್ಸ್) vt. declare, give public notice. ಪ್ರಕಟಿಸು, ಘೋಷಣೆಮಾಡಿ ಹೇಳು, ತಿಳಿಸು

Announcement (ಅನೌನ್ಸ್‌ಮೆಂಟ್) n proclamation ನಿವೇದನೆ, ಘೋಷಣೆ, ಇಸ್ತಿಹಾರ್‌ನಾಮೆ.

Announcer (ಅನೌನ್ಸರ್) n. one who announces. ನಿವೇದಕ, ವಿಜ್ಞಾಪಕ.

Annoy' (ಅ̆ನಾಯ್) vt. trouble, vex. ಪೀಡಿಸು, ಕಾಡು, ಕಿರುಕುಳಕೊಡು.

Annoy'ance (ಅನಾಯನ್ಸ್) n. trouble, vexation. ತೊಂದರೆ, ಕಿರುಕುಳ, ಕಟಕಟಿ.

Ann'ual (ಆ̆ನ್ಯುಅಲ್) a. yearly, coming every year. ವಾರ್ಷಿಕ, ವರ್ಷಂಪ್ರತಿ ಬರುವ, ಸಾಂವತ್ಸರಿಕ.

Ann'ually (ಆ̆ನ್ಯೂಅಲಿ) adv. every year. ಪ್ರತಿವರ್ಷವೂ, ವರ್ಷಂಪ್ರತಿ.

Annuitant (ಆ̆ನುಯಿಟೊ̆ಂಟ್) n. one who receives an annuity, ವರ್ಷಾಶನವನ್ನು ಹೊಂದುವವ.

Annu'ity (ಅನ್ಯೂ̆ಇಟಿ) n. yearly grant, sum. ವರ್ಷಾಶನ, ವಾರ್ಷಿಕಸಂಬಳ.

Annul' (ಅನಲ್) vt. abolish.cancel. ರದ್ದುಮಾಡು, ತೆಗೆದುಹಾಕು, ವರ್ಜಿಸು.

Annul'ar (ಆ̆ನ್ಯುಲರ್) a. ring-shaped. ಕಂಕಣಾಕಾರದ, ವರ್ತುಲಾಕೃತಿಯ, ಉಂಗುರಾಕಾರದ.

Ann'ulated (ಆ̆ನ್ಯುಲೇಟೆಡ್) a. marked with rings, formed of rings. ಉಂಗುರಗಳ ಗುರುತುಳ್ಳ, ವಲಯಿತ.

Annu'let(ಆನ್ಯುಲೆಟ್ n. small ring, a circle, small band enarching column. ಚಿಕ್ಕ ಉಂಗುರ, ಚಿಕ್ಕ ವರ್ತುಲ.



Annulet

Annul'ment (ಅನಲ್‌ಮೆಂಟ್) n. abolition. ವಜಾ, ರದ್ದುಮಾಡುವಿಕೆ, ಕಂಬದ ಮೇಲಿರುವ ಚಿತ್ರದ ಪಟ್ಟಿ.

Annun'ciate (ಅನನ್ಸಿಏಟ್) vt. proclaim, announce. ಸಾರಿ ತಿಳಿಸು, ಪ್ರಕಟಿಸು, ಘೋಷಣೆಮಾಡು.

Annunciation (ಎನನ್ಸಿಏಷನ್) n. announcement, proclamation. ಸಾರುವಿಕೆ, ಘೋಷಣೆ.

Anode (ಆ̆ನೋಡ್) n. positive in an electric cell. ಧನ ವಿದ್ಯುತ್ತಿನ ಧ್ರುವ.

An'odyne (ಆ̆ನೋಡೈನ್) a. pain killing· soothing ನೋವು ಶಮನ ಮಾಡುವ, ವೇದನಾಹರ.

Anoint' (ಅನಾಯಿಂಟ್) vt. to smear with ointment or oil. ಅನುಲೇಪಿಸು, ಪೂಸು, ಹಚ್ಚು, ಅಭಿಷೇಕಿಸು. n. anointment. ಅಭಿಷೇಕ.

Anomalism (ಅನಾಮಲಿಜಮ್) n. irregularity, deviation. ಅವ್ಯವಸ್ಥೆ.

Anom'alous (ಅನಾಮಲಸ್) a· irregular, deviating from rule. ಅಕ್ರಮದ, ವಿಧಿವಿರೋಧದ, ಅಸಂಗತ.

Anom'aly (ಅ̆ನಾಮಲಿ) n. irregularity, deviation from rule. ಅಕ್ರಮ, ಅವಿಧಿ, ವ್ಯತಿಕ್ರಮ, ವಿಧಿವಿರೋಧ.

Anon' (ಅ̆ನಾನ್) adv. soon, sometime soon. ಶೀಘ್ರದಲ್ಲಿ, ಕೂಡಲೆ, ಈಕ್ಷಣ. ever and often. ಆಗಾಗ್ಗೆ, ಬಾರಿ ಬಾರಿಗೆ.

Anonym (ಅ̆ನೋನಿಮ್) n. a nameless person. ಅನಾಮಕ.

Anonymity (ಅ̆ನಾನಿಮಿಟಿ) n. state of being anonymous. ಅನಾಮಧೇಯತ್ವ.

Anon'ymous (ಆ̆ನಾನಿಮಸ್) a. nameless. ಹೆಸರಿಲ್ಲದ, ಅನಾಮಿಕ, ಹಸ್ತಾಕ್ಷರವಿಲ್ಲದ, a. letter. ಹೆಸರಿಲ್ಲದ ಅರ್ಜಿ, ಮೂಗರ್ಜಿ.

An′orexy (ಅನಾರೆಗ್ಸಿ) n. want of hunger. ಮಂದಾಗ್ನಿ, ಹಸಿವಿಲ್ಲದಿರೋಣ.

Anos′mia (ಅ̆ನಾಸ್ಮಿಯ) n. loss or want of smell. ವಾಸನೆ ತಿಳಿಯುದಿರೋಣ.

Anoth′er (ಅನದರ್) a. not same, one more, different, ಬೇರೊಂದು, ಇನ್ನೊಂದು, ಮತ್ತೊಬ್ಬ, ಬೇರೊಬ್ಬ. one a. ಒಬ್ಬರನ್ನೊಬ್ಬರು. one after a. ಒಬ್ಬನಾದ ಮೇಲೆ ಒಬ್ಬ.

Anourous (ಅನೂರಸ್) a. tailless. ಬಾಲವಿಲ್ಲದ, ಪುಚ್ಛರಹಿತ.

Anserine (ಆ̆ನ್ಸರೈನ್) a. goose-natured, silly. "ಗೂಸ್" ಎಂಬುದರ ಸ್ವಭಾವದ, ಪಡ್ಡ, ಜಡ.

Answer (ಆನ್ಸರ್) vt. i. reply to, be responsible for, suit. ಉತ್ತರ ಕೊಡು; ದನಿಗೊಡು; ಹೊಣೆಯಾಗು; ಜವಾಬುಕೊಡು, ಸರಿಬರು. n. a reply, return. ಜವಾಬು, ಉತ್ತರ. (a. to a person for a thing).

An′swerable (ಆನ್ಸರೆಬಲ್) a. responsible, accountable. ಉತ್ತರ ಹೇಳಬಹುದಾದ, ಜವಾಬುದಾರ, ಹೊಣೆಗಾರ.

Ant (ಆ̆ಂಟ್) n. small insect. ಇರುವೆ white a. ಗೆದ್ದಲು, ಒರಲೆ. red a. ಕೆಂಪಿರುವೆ. large black a. ಕಟ್ಟಿರುವೆ.

Antacid (ಅ̆ನ್ಟ್ಯಾಸಿಡ್) a.& n. preventive of acidity. ಹುಳಿಯನ್ನು ಶಮನಮಾಡುವ, ಪ್ರತ್ಯಾಮ್ಲ.

Antagonise (ಆ̆ಂಟಾಗೊನೈಜ್) vt. oppose, make enemy. ವಿರೋಧಿಸು. ಶತ್ರುತ್ವ ಬೆಳಿಸಿಕೊ.

Antagonism (ಆ̆ಂಟಾಗೊನಿಜಮ್) n. opposition, enmity. ವಿರೋಧ, ವೈರ.

Anta′gonist (ಆ̆ಂಟಾಗೊನಿಸ್ಟ್) n. an opponent. ವಿರೋಧಿ, ಎದುರಾಳಿ, ಪ್ರತ್ಯರ್ಥಿ.

Antalkali (ಆ̆ನ್ಟ್ಯಾಲ್ಕಲಿ) a & n. countering an alkali, substance that neutralises an alkali. ಕ್ಷಾರಹಾರಿ, ಕ್ಷಾರನಿವಾರಕ.

Antaphrodisiac (ಅ̆ನ್ಟ್ಯಾಫ್ರೊಡಿಸಿಆಕ್) a.& n. medicine which prevents sexual desire. ಕಾಮನಿವಾರಕ ಔಷಧ.

Antarc′tic (ಅಂಟಾರ್ಕ್ಟಿಕ್) a. opposite to the arctic. ದಕ್ಷಿಣ ಧ್ರುವದ, ದಕ್ಷಿಣಾಗ್ರದ.

Ante (ಆನ್ಟಿ) prep. (ಪ್ರತ್ಯಯ) before. -ಕ್ಕೆ, ಮುಂಚಿನ.

Antecede (ಆ̆ನ್ಟಿಸೀಡ್) vi. to happen before time. ಕಾಲಕ್ಕೆ ಮುಂಚೆ ಉಂಟಾಗು.

Antecedence (ಆ̆ನ್ಟಿಸೀಡೆನ್ಸ್) n. precedence, priority. ಪೂರ್ವತ್ವ.

Antece′dent (ಆಂಟಿಸಿಡೆಂಟ್) a. preceding. ಹಿಂದಣ, ಮುಂಚಿನ, ಮೊದಲು ಸಂಭವಿಸಿದ. n. preceding event. ಹಿಂದಣ ಸಂಗತಿ (pl.) person's past history. ವ್ಯಕ್ತಿಯ ಹಿಂದಿನ ಚರಿತ್ರೆ.

Ante chamber (ಆ̆ಂಟಿಚೇಂಬರ್) n. room leading to chief apartment. ಮುಂದಿನ ಕೊಠಡಿ, ಕೈಸಾಲೆ.

Antedate′ (ಆ̆ಂಟಿಡೇಟ್) vt. to date before the true time, anticipate. ಹಿಂದಿನ ತಾರೀಖು ಹಾಕು; ಹಳೆತೇದಿ ಬರೆ.

Antediluvian (ಆ̆ಂಟಿಡಿಲೂವಿಅನ್) a. before the deluge, very old fashioned. ಜಲಪ್ರಳಯಕ್ಕೆ ಮುಂಚಿನ, ಅತಿಪುರಾತನ, ಗತಕಾಲೀನ.

An′telope (ಆ̆ಣ್ಟಿಲೋಪ್) n. a ruminant like a deer. ಹರಿಣ, ಚಿಗರಿ, ಜಿಂಕೆ.

Antelucan (ಆ̆ನ್ಟಿಲ್ಯೂಕನ್) a. before daylight. ಸೂರ್ಯೋದಯಕ್ಕೆ ಮೊದಲು.

An'temerid'ian (ಆ̆ನ್ಟಿಮೆರಿಡಿಯನ್) adv· (abbrev.a.m)before midday or noon. ಮಧ್ಯಾಹ್ನಕ್ಕೆ ಮುಂಚಿನ.

Antemundane (ಆ̆ಂಟಿಮುಂಡೇನ್) a. existing prior to creation of this world. ಸೃಷ್ಟಿಗೆ ಮೊದಲಿನ.

Antena'tal (ಆ̆ನ್ಟಿನೇಟಲ್) a. existing before birth. ಜನ್ಮವೆತ್ತುವ ಮೊದಲಿನ, ಗರ್ಭದಲ್ಲಿನ.

Antenn'ae (ಆ̆ನ್ಟಿನೀ) n. pl. the feelers or horns of insects, (wireless) an aerial.



Antennae

ಹುಳುಗಳ ಮೀಸೆ; (ರೇಡಿಯೋ) ಧ್ವನಿ ಆಕರ್ಷಕ ತಂತಿಗಳು.

Antenuptial(ಆ̆ನ್ಟಿನಪ್ಷಲ್) a. occuring before marriage ಮದುವೆಗೆ ಮೊದಲಿನ, ವಿವಾಹಕ್ಕೆ ಪೂರ್ವಭಾವಿ.

Anteprandial (ಆ̆ನ್ಟಿಪ್ರಾ̆ನ್ಡಿಯಲ್) a occurriug before dinner. ಭೋಜನಕ್ಕೆ ಪೂರ್ವಭಾವಿಯಾಗಿ, ಊಟಕ್ಕೆ ಮೊದಲಿನ.

Ante'rior (ಆ̆ಂಟಿರೀಅರ್)a. prior to, more to the front. ಮೊದಲಿನ, ಮುಂಚಿನ, ಹಿಂದಿನ, ಹೆಚ್ಚು ಮುಂಚಿನ.

Anteriority (ಆ̆ಂಟೀರಿಯಾರಿಟಿ)n. the quality of being anterior, priority. ಪೂರ್ವತ್ವ, ಮೊದಲುತನ.

Ante'room (ಆ̆ಣ್ಟಿರೂಮ್) n. see ante-chamber.

Anthelion (ಆ̆ನ್ಥೀಲಿಯನ್) n. luminous ring on cloud opposite to sun. ಸೂರ್ಯನಿಗೆದುರಾಗಿರುವ ಮೋಡಗಳ ಮೇಲೆ ಬೀಳುವ ಪ್ರಭಾವಲಯ.

Anthelmintic (ಆ̆ನ್ಥೆಲ್ಮಿನ್ಟಿಕ್) a. & n. medicine used against intestinal worms, worm powder. ಜಂತು ಔಷಧ.

An'them (ಆ̆ಂಥೆಮ್) n. any song of praise, a sacred song. ಆನಂದ ಗೀತೆ, ಸಂಕೀರ್ತನೆ, ಸ್ತುತಿಗೀತೆ.

An'ther (ಆ̆ನ್ಥರ್) n. [in a flower] the top of the stamen holding the pollen. ಕೇಸರಾಗ್ರ, ಪರಾಗ ಕೋಶ, ಮಕರಂದ ಕೋಶ.



Anther

Ant'hill (ಆ̆ಂಟ್‌ಹಿಲ್) n. nest of ants. (fig.)the earth. ಇರುವೆ ಮತ್ತು ಇರುವೆ ಗೂಡು, ಭೂಮಿ.

Anthoid (ಆ̆ನ್ಥಾಯ್ಡ್) a. flowerlike. flowershaped. ಪುಷ್ಪಸದೃಶ, ಹೂವಿನ ಆಕಾರದ.

Anthol'ogy (ಆ̆ಂಥೊಲೊಜಿ) n. a gathering or collection of flowers, a collection of choice poems &c· ಕುಸುಮಾಂಜಲಿ (ಕಾವ್ಯ); ಪುಷ್ಪಮಾಲಿಕೆ, ಕಾವ್ಯ ಸಂಗ್ರಹ, ಮಾಲೆ.

An'thracite (ಆ̆ನ್‌ಥ್ರಸೈಟ್) n. hard coal burning without smoke smell. &c. ಹೊಗೆಯಾಗದೆ ಉರಿಯುವ ಗಟ್ಟಿಜಾತಿಯ ಕಲ್ಲಿದ್ದಲು.

An'thrax (ಆ̆ನ್‌ಥ್ರಕ್ಸ್) n. an ulcer, ಹುಣ್ಣು, ವ್ರಣ, (ದನಕುರಿಗಳ) ನೆಟ್ರೆಕಟ್ಟು ರೋಗ, ಗಂಟಲು ಕಟ್ಟುರೋಗ.

Anthropocentric (ಆ̆ನ್ಥ್ರೊಪೊಸೆನ್ಟ್ರಿಕ್) a centered around man. ಮನುಷ್ಯನನ್ನು ಕೇಂದ್ರವಾಗುಳ್ಳ.

An'thropoid (ಆ̆ನ್‌ಥ್ರಪಾಯಿಡ್) n. manlike ape. ಮನುಷ್ಯನಂತಿರುವ ಮಂಗ, a. manlike. ಮನುಷ್ಯಾಕಾರದ.

Anthropalatry (ಆ̆ನ್ಥ್ರಪಾಲಿಟ್ರಿ) n worship of man. ಮನುಷ್ಯಾರಾಧನೆ, ನರಪೂಜೆ.

Anthropolite (ಆನ್ಥ್ರೊಪೊಲೈಟ್) n. ಶಿಲೆಯಾಗಿ ಹೋಗಿರುವ ಮನುಷ್ಯ.

Anthropol'ogy (ಆ̆ನ್ಥ್ರೋಪಾಲಜಿ) n. science of man. ಮನುಷ್ಯವರ್ಣನಶಾಸ್ತ್ರ, ಮಾನವ ವಿಜ್ಞಾನ, ನೃವಿಜ್ಞಾನ.

Anthropomorph'ism (ಆ̆ನ್‌ಥ್ರೋಪೊಮಾರ್ಫಿಜಮ್) n the ascribing of human form to the deity. ಸಾಕಾರವಾದ, ಮನುಷ್ಯತ್ವಾರೋಪಣೆ.

Anthropoph'agi (ಆ̆ನ್‌ಥ್ರೊಪಾಫೆಜೈ) n. (plu) cannibals ನರಭಕ್ಷಕರು.

Anthropophobia (ಆ̆ನ್ಥ್ರೋಪೋಫೋಬಿಯ) n. dislike towards human beings. ಮನುಷ್ಯದ್ವೇಷ.

Anti (ಆ̆ಣ್ಟಿ) prep. against. ವಿರೋಧ, ಪ್ರತಿಕೂಲ

Antiar (ಆ̆ನ್ಟಿಯರ್) n. the 'Upas' tree of Java. ಜಾವಾದ್ವೀಪದ ಯೂಪಸ್ ಎಂಬ ಮರ.

Anti-air'craft (ಆ̆ನ್ಟಿ-ಏರ್‌ಕ್ರಾಫ್ಟ್) n. gun, &c. for shooting down hostile aircraft. ಶತ್ರುವಿಮಾನ ನಾಶಕ.

An'tic (ಆ̆ಂಟಿಕ್) a. old. ಕುಚೇಷ್ಟೆಯ, ಮಂಗಾಟದ. n. a fantastic figure, a buffoon, tricks. ಚಂಗಮಂಗ, ಚೇಷ್ಟೆಗಾರ; ಕೋಡಂಗಿಚೇಷ್ಟೆ.

Anticardium (ಆ̆ನ್ಟಿಕಾರ್ಡಿಯಮ್) n. the pit of the stomach. ನಾಭಿ.

An'tichrist (ಆ̆ನ್ಟಿಕ್ರೈಸ್ಟ್) n. the great enemy of Christ. ಕ್ರಿಸ್ತವಿರೋಧಿ.

Anti'cipate (ಆ̆ನ್ಟಿಸಿಪೇಟ್) v t. foresee. expect ನಿರೀಕ್ಷಿಸು, ಮೊದಲೇ ತಿಳಿ, ಭಾವಿಸು; ಹಾದಿನೋಡು.

Anticipa'tion (ಆ̆ನ್ಟಿಸಿಪೇಶನ್) n. expectation, foretaste. ಪೂರ್ವನಿರೀಕ್ಷಣೆ, ಮುಂದಾಗಿ ಗ್ರಹಿಸುವುದು, ನಿರೀಕ್ಷಣೆ.

Anticipator (ಆ̆ನ್ಟಿಸಿಪೇಟರ್) n. one who anticipates. ಮುಂದಾಗಿ ಗ್ರಹಿಸುವವ, ನಿರೀಕ್ಷಕ.

An'ticlimax(ಆ̆ನ್ಟಿಕ್ಲೈಮಾ̆ಕ್ಸ್)n.falling off, sinking, bathos. ಭಾವಮಹತ್ವ ಕಡಿಮೆಯಾಗುವ ವಾಕ್ಯಾಲಂಕಾರ.

Anticonstitutional (ಆ̆ನ್ಟಿಕಾನ್ಸ್ಟಿಟ್ಯೂಷನಲ್) a against constitution. ಅಂಗರಚನೆಗೆ ವಿರುದ್ಧ.

Anticyclone (ಆ̆ನ್ಟಿಸೈಕ್ಲೋನ್) a. outward flow of wind from area of high pressure. ಬಹಿರ್ಮುಖವಾಗಿ ಬೀಸುವ ಮಾರುತ.

An'tidote (ಆ̆ನ್ಟಿಡೋಟ್) n. remedy for poison.a counterpoison.(fig) anything that prevents evil. ವಿಷಹಾರಿ, ಪ್ರತ್ಯೌಷಧ, ತೋಡು, ವಿಷಮುರಕ, ವಿಷಘ್ನ.

Antifebr'ile (ಆ̆ನ್ಟಿಫೆಬ್ರೈಲ್) a. against fever. ಜ್ವರಹಾರಕ, ಜ್ವರಘ್ನ.

Antigen (ಆ̆ನ್ಟಿಜೆನ್) n. substance introduced into blood to form antibodies. ಪ್ರತಿವಿಷಜನಕವಸ್ತು.

Antilogous (ಆ̆ನ್ಟಿಲೊಗಸ್) a. contradictory. ವಿರೋಧಾತ್ಮಕವಾದ.

Antilogy (ಆ̆ನ್ಟಿಲೊಜಿ) n. contradiction. ಪದವಿರೋಧ, ವಿರೋಧಾಲಂಕಾರ.

Antimacass'ar (ಆ̆ನ್ಟಿಮಕಾ̆ಸರ್)n. a loose covering for chair-back. ಕುರ್ಚಿಯ ಹೊದ್ದಿಕೆ, ಕುರ್ಚಿಯ ಗೌಸು.

Antimony (ಆ̆ನ್ಟಿಮನಿ) n. a metallic ore. ಅಂಜನಕಲ್ಲು, ಸುರಮ, ಸೌವೀರ.

Antinomy (ಆ̆ನ್ಟಿನೊಮಿ) n. conflict of authority. ಅಧಿಕಾರವಿರೋಧ.

Antip'athy (ಆ̆ನ್ಟಿಪಥಿ) n. a dislike, aversion, opposition, repugnance. ವೈರ, ಹಗೆ, ಮರ್ಷ, ಬದ್ಧವೈರ. a. antipathet'ic. ಹಗೆಯ, ಮರ್ಷದ.

Antip'hony (ಆ̆ನ್ಟಿಫೋನಿ) n. singing or chanting alternately. ಸಂವಾದ ಗಾನ, ಪ್ರತಿಗಾನ.

Antiphlogistic (ಆ̆ನ್ಟಿಫ್ಲೊಜಿಸ್ಟಿಕ್) a. reducing inflammation. ಬಾವು ಮತ್ತು ನೋವನ್ನು ಶಮನಮಾಡುವ.

Antiphlogistine (ಆ̆ನ್ಟಿಫ್ಲೋಜಿಸ್ಟಿನ್) n. medicine which reduces inflammation. ಊದು ಮತ್ತು ನೋವನ್ನು ಶಮನಮಾಡುವ ಔಷಧ.

Antipodes(ಆ̆ನ್ಟಿಪೋಡೀಜ್) a. (plu.) those living on the other side of the globe. ಪ್ರತಿಲೋಮರು, ಅಧಃಶಿರಸ್ಕರು, ಅಭಿಪಾದಿಗಳು.

Antipole (ಆ̆ನ್ಟಿಪೋಲ್) n. opposite pole, completely opposite. ಪ್ರತಿಧ್ರುವ, ಸಂಪೂರ್ಣ ವಿರುದ್ಧ.

Antipyretic (ಆ̆ನ್ಟಿಪಿರೆಟಿಕ್) a. & n. drug which allays or prevents fever. ಜ್ವರನಿವಾರಕ, ಜ್ವರಹಾರಿ.

Antiquar'ian(ಆ̆ನ್ಟಿಕ್ವೇರಿಅನ್) a pertaining to anitiquity. ಪ್ರಾಚೀನ ವಸ್ತುಗಳು a. of old days, old. ಹಳೇ ಕಾಲದ.

An'tiquary(ಆ̆ನ್ಟಿಕ್ವೇರಿ) a. one who studies or collects old things. ಪ್ರಾಚೀನಪದಾರ್ಥ ಸಂಗ್ರಾಹಕ, ಪ್ರಾಚೀನಾನ್ವೇಷಕ.

An'tiquated (ಆ̆ನ್ಟಿಕ್ವೇಟೆಡ್) a. out of date. ಪ್ರಾಚೀನ, ಗತಕಾಲೀನ. ಹಳೆಯ ಕಂದಾಚಾರದ.

Antique' (ಆ̆ನ್ಟಿಕ್) a. antiquated, old fashioned. ಪ್ರಾಚೀನ, ಪೂರ್ವ ಪದ್ಧತಿಯ.

Antiq'uity (ಆ̆ನ್ಟಿಕ್ವಿಟಿ) a. ancient times. ಪ್ರಾಚೀನತೆ, ಪೂರ್ವಕಾಲ, ಹಳಮೆ. (plu) ancient relics. ಪ್ರಾಚೀನ ಉಳುಹುಗಳು, ಪ್ರಾಚೀನ ಅವಶೇಷಗಳು.

Antirabic (ಆ̆ನ್ಟಿರಾಬಿಕ್) a. pertaining to the treatment of canine madness. ಹುಚ್ಚು ನಾಯಿಯ ವಿಷದ ಚಿಕಿತ್ಸೆಗೆ ಸಂಬಂಧಿಸಿದ.

Antisep'tic(ಆ̆ನ್ಟಿಸೆಪ್ಟಿಕ್)a. stopping putrefaction. ಕೊಳೆಯದಂತೆ ಮಾಡುವ. n. drug against putrefaction. ಪೂತಿನಾಶಕ, ಕೊಳೆಯನ್ನು ತಡೆಯುವ.

Antisocial (ಆನ್ಟಿಸೋಷಲ್) a. opposed to the principles of society. ಸಮಾಜಕಂಟಕ, ಸಮಾಜಕತ್ವ ವಿರೋಧಿ.

Antistrophe(ಆ̆ನ್ಟಿಸ್ಟ್ರೊಫಿ) n. choral lines recited during returning movement in Greek drama. ಪ್ರತಿಪದ್ಯ, ವಿಲೋಮಪದ್ಯ.

Antitheist (ಆ̆ನ್ಟಿಥೀಯಿಸ್ಟ್) n. a nonbeliever in the existence of God. ನಿರೀಶ್ವರವಾದಿ, ನಾಸ್ತಿಕ.

Antith'esis(ಆ̆ನ್ಟಿಥಿಸಿಸ್)n. thoughts or words set in opposition. the opposite ವಿರೋಧಾಲಂಕಾರ, ವಿರೋಧ, ವಿರೋಧನ್ಯಾಸ.

Antithetic (ಆ̆ನ್ಟಿಥೆಟಿಕ್) a. contrasted consisting of opposites. ವಿರೋಧಭಾವದ, ಪ್ರತಿಭಾವದ.

Antitox'in (ಆ̆ನ್ಟಿಟಾಕ್ಸಿನ್) n. a substance in the blood able to fight against certain poisons. ವಿಷಘ್ನ, ರಕ್ತಸಾರ. a. antitox'ic. ವಿಷಘ್ನ.

An'ti-trade (ಆನ್ಟಿಟ್ರೇಡ್) n. wind blowing in opposite direction to trade wind. ವಾಣಿಜ್ಯಪ್ರತಿಕೂಲಮಾರುತ

An'titype (ಆ̆ನ್ಟಿಟೈಪ್) n. corresponding to a type. ಪ್ರತಿಸಂಕೇತ, ಮೂಲವರ್ತಿ, ಪ್ರತಿಬಿಂಬ.

Ant'ler (ಆ̆ಂಟ್‌ಲರ್) n. branched horn of a deer. ಸಾರಂಗದ ಕೊಂಬು.

Ant'onym(ಆ̆ಂಟೋನಿಮ್)n. a word of contrary meaning to another. ವಿರುದ್ಧಾರ್ಥಕ ಶಬ್ದ.

Antrum(ಆ̆ನ್ಟ್ರಂ) n. a cave, a den, a large cavity. ಗುಹೆ, ಗಹ್ವರ, ಬಿಲ.

A'nus (ಏನಸ್) a. the lower opening of the bowels, ಗುದ, ಅಪಾನ, ತಿಕ, ಪುಕಳಿ, ಮುಕುಳಿ, ಅಂಡು.

An'vil (ಆ̆ನ್‌ವಿಲ್) n. iron block on which metals are shaped ಸ್ಥೂಣ, ಪಟ್ಟಡೆ, ಬಡಿಗಲ್ಲು, ಅಡಿಗಲ್ಲು.


Anvil

An'xiety (ಆ̆ಜ್‌ಜೈಟಿ) n. distress of mind. uneasiness. ಚಿಂತೆ, ವ್ಯಾಕುಲತೆ, ಆತಂಕ, ತವಕ.

An'xious (ಆ̆ಜ್‌ಕ್ಶಸ್) n. troubled, solicitous. ವ್ಯಾಕುಲಿತ. ಚಿಂತಾಪರ, ಆತಂಕಿತ, ಕಾರ್ಯಾತುರ, ತವಕಗೊಂಡ.

An'y (ಎನಿ) a. one, some, every, ಯಾವನಾದರೂ (-ಳಾದರೂ,-ವುದಾದರೂ) at a. cost. ಏನಾದರೂ ಮಾಡಿ above a. thing. ಎಲ್ಲಕ್ಕಿಂತ ಮುಖ್ಯವಾಗಿ. any longer ಇನ್ನುಮೇಲೆ. any more. ಇನ್ನೂ ಹೆಚ್ಚು. a. time. ಯಾವಾಗಲಾದರೂ.

An'yone (ಎನಿ-ಒನ್) n. anybody. ಯಾವನಾದರೂ (ಳಾದರೂ, -ವುದಾದರೂ).

An'ybody (ಎನಿಬಡಿ) n. see anyone.

An'yhow (ಎ ನಿ ಹೌ) adv. in any way. ಹೇಗಾದರೂ, ಹೇಗೋ.

An'ything (ಎನಿಥಿಂಗ್) n. whatever thing. ಏನೋ ಒಂದು, ಯಾವುದಾದರೂ.

An'yways, An'ywise (ಎನಿವೇಜ್, ಎನಿವೈಜ್) adv. in any manner. ಹೇಗಾದರೂ, ಎಂತಾದರೂ.

An'ywhere (ಎನಿಹ್ವೇರ್) adv. in any place. ಎಲ್ಲಿಯಾದರೂ.

A'orist (ಎಯೊರಿಸ್ಟ್)n. a past tense denoting occurrence simply. ಸಾಮಾನ್ಯ ಭೂತಕಾಲ, ಅನಿಶ್ಚಿತ ಭೂತಕಾಲ.

Aort'a (ಎಯೊರ್ಟಾ) n. great artery issuing from left-ventricle of heart. ಹೃದಯದ ದೊಡ್ಡ ಶುದ್ಧ ರಕ್ತನಾಳ.

Aorta

Aortal (ಅಯೋರ್ಟಲ್) a. pertaining to aorta. ಅಯೋರ್ಟಾ ರಕ್ತನಾಳಕ್ಕೆ ಸಂಬಂಧಿಸಿದ.

Apace' (ಅಪೇಸ್) adv. quickly, fast. ಬೇಗನೆ, ಶೀಘ್ರವಾಗಿ, ತ್ವರಿತವಾಗಿ.

Ap'anage,Ap'panage (ಅಪನೇಜ್) n. provision for younger children. ಮಕ್ಕಳ ಪೋಷಣೆಗಾಗಿ ರಾಜರು ಬಿಟ್ಟ ಭೂಮಿ.

Apart'(ಅಪಾರ್ಟ್)adv. aside, separately. ಪ್ರತ್ಯೇಕವಾಗಿ, ಬಿಡಿಯಾಗಿ, ಬೇರೆಯಾಗಿ.

Apartment (ಅಪಾರ್ಟ್ಮಂಟ್) n. separate suite of rooms. ಕೋಣೆ, ಕೊಠಡಿ, ಖೋಲಿ.

Apathe′tic (ಅಪಥೆಟಿಕ್) a. void of feeling, indifferent. ನಿಶ್ಚಿಂತ, ಉದಾಸೀನ, ವಿರಕ್ತ, ನಿರುತ್ಸಾಹಿ.

Ap′athy (ಅಪಥಿ) n. want of feeling; absence of passion. ನಿಶ್ಚಿಂತತೆ, ಔದಾಸೀನ್ಯ, ವೈರಾಗ್ಯ, ಅನುಷ್ಣತೆ.

Ape (ಏಪ್) n. monkey without a tail; imitator. ಬಾಲವಿಲ್ಲದ ಕೋತಿ, ವಾನರ, ಮಂಗ, ಅನುಕರಣೆಮಾಡುವ. vt. imitate. ಅನುಕರಣಮಾಡು, ನಕಲಿ ಮಾಡು.

Apepsy (ಅಪೆಪ್ಸಿ) n. lack of power of digestion. ಜೀರ್ಣಶಕ್ತಿ ಹೀನತೆ.

Apercu (ಅಪೆರ್ಸ್ಯೂ) n. brief exposition. ಸಂಕ್ಷಿಪ್ತ ವಿವರಣೆ.

Ape′rient (ಅಪೆರಿಎರ್ಟ್) a. & n. gently purgative. ಸುಖವಿರೇಚಕ. n. ಭೇದಿಯೌಷಧ.

Aperitive (ಅಪೆರಿಟಿವ್) a. laxative. ಸುಖವಿರೇಚಕ.

Ap′erture (ಅಪರ್ಚರ್) n. opening, gap. ತೂತು, ರಂಧ್ರ, ವೆಜ್ಜ, ಕಿಂಡಿ, ಛಿದ್ರ.

A′pery (ಏಪರಿ) n. apish behaviour, mimicry. ಅನುಕರಣ, ಕೋತಿಚೇಷ್ಟೆ, ಮಂಗಾಟ, ನಕಲಿ.

Apetalous (ಅಪೆಟಲಸ್) a. without petals. ರೇಕುಗಳಿಲ್ಲದ, ದಳಹೀನ.

A′pex (ಏಪೆಕ್ಸ್) n. (pl.-ices,-exes.) summit, top. ತುದಿ, ಶಿಖರ, ಅಗ್ರ, ಶೃಂಗ

Apha′sia (ಅಫೇಸಿಯ) n. loss of speech (ಮೆದುಳಿಗೆ ಪೆಟ್ಟಾಗಿ) ನಾಲಿಗೆಬಿದ್ದು ಹೋಗುವುದು, ವಾಕ್‌ಸ್ತಂಭನ.

Aphe′lion (ಅಫೀಲಿಅನ್) n. point of a planet's orbit most distant from the sun. ಸೂರ್ಯಾಪಕೃಷ್ಟ, ಸೂರ್ಯನಿಂದ ದೂರವಾಗಿರುವ ಗ್ರಹಪಥ.

Apheliotropic (ಅಫೀಲಿಯೋಟ್ರಾಪಿಕ್) a. turning away from the sun. ಸೂರ್ಯನಿಗೆ ವಿರುದ್ಧವಾಗಿ ಮುಖತಿರುಗಿಸುವ.

Aphesis (ಅಫೆಸಿಸ್) n. gradual loss of initial unaccented vowel. ಆದಿಸ್ವರ ಲೋಪ.

Aphonia (ಅಫೋನಿಯ) n. total loss of speech. ವಾಕ್‌ನಾಶ, ಮಾತು ನಿಂತು ಹೋಗುವುದು.

Aphorism (ಅಫೋರಿಜಮ್) n. short pithy maxim, definition. ಸೂಕ್ತಿ, ಚೂರ್ಣಿಕೆ, ನಾಣ್ಣುಡಿ, ಗಾದೆಯಮಾತು.

Aphrodis′iac (ಅಫ್ರೋಡಿಜಿಯಾಕ್) a. & n. sex stimulating. ಕಾಮೋತ್ತೇಜಕ, ವೀರ್ಯವೃದ್ಧಿಕರ, ಶುಕ್ರವರ್ಧಕ.

Aphrodite (ಅಫ್ರೊಡೈಟಿ) n. Venus, the Goddess of beauty. ಗ್ರೀಕರ ಸೌಂದರ್ಯದೇವತೆ, ವೀನಸ್.

Aphyllous (ಅಫಿಲಸ್) a. naturally leafless. ಸ್ವಭಾವದಿಂದ ಎಲೆಯಿಲ್ಲದಿರುವುದು.

A′piary (ಏಪಿಅರಿ) n. a place where bees are kept; a bee house. ಜೇನುಹುಳು ಸಾಕುವಮನೆ, ಮಧುಮಕ್ಷಿಕಾಗೃಹ.

Apical (ಅಪಿಕಲ್) a. pertaining to the apex. ಶಿಖರಕ್ಕೆ ಸಂಬಂಧಿಸಿದ.

Apiculture (ಏಪಿಕಲ್‌ಚರ್) n. bee-keeping. ಜೇನು ಸಾಕುವಿಕೆ.

Apiece (ಅಪೀಸ್) adv. to each one, for each. ಒಬ್ಬೊಬ್ಬರಿಗೆ, ಒಂದೊಂದಾಗಿ.

A′pish (ಏಪಿಷ್) a. of or like an ape, servilely imitative. ಮಂಗನ, ಮಂಗಚೇಷ್ಟೆಯ, ದಾಸನಂತೆ ಅನುಕರಣ ಸ್ವಭಾವದ.

Aplomb (ಅಪ್ಲೋಬ್) n. perpendicularity, composure. ಲಂಬತೆ, ಧೈರ್ಯ, ಸ್ಥೈರ್ಯ.

Apnoea (ಅಪ್ನೀಯ) n. stopping of breathing. ಉಸಿರು ಕಟ್ಟುವುದು.

Apo'cope (ಅಪಾಕೊಪಿ) n. the omission of the last letter or syllable of a word. ಅಂತ್ಯಾಕ್ಷರ ಲೋಪ.

Apoc'rypha (ಅಪಾಕ್‌ರಿಫಾ) n. book of doubtful authority. ಖಿಲಗ್ರಂಥಗಳು, ಕಲ್ಪಿತಪ್ರಮಾಣ ಗ್ರಂಥಗಳು.

Apoc'ryphal (ಅಪಾಕ್ರಿಫಲ್) n. not cannonical, doubtful. ಕಲ್ಪಿತ, ಸುಳ್ಳು.

Apod, Apode (ಅಪಾಡ್, ಅಪೋಡ್) a. feetless. ನಿಷ್ಪಾದ.

Apodeic'tic (ಅಪೋಡೀಕ್ಟಿಕ್) a. demonstrative, without demonstration. ಸ್ಪಷ್ಟ, ದೃಷ್ಟಿಗೋಚರವಾಗುವ.

Ap'ogee (ಆಪೋಜೀ)n. the point of an orbit most distant from earth. ಭೂಮಿ ಚಂದ್ರರ ಮಧ್ಯೆಬರುವ ಅಂತರ.

Apograph (ಅಪೋಗ್ರಾಫ್) n. an exact copy. ನಕಲು ಪ್ರತಿ.

Apolaustic (ಅಪೋಲಾಸ್ಟಿಕ್) a. self-indulgent. ಭೋಗಲಿಪ್ಸಾತುರ.

Apocalypse (ಅಪಾಕಲಿಪ್ಸ್) n. book of revelation made to St. John. ಬೈಬಲಿನಲ್ಲಿರುವ ಸೆಯಿಂಟ್ ಜಾನ್ ಎಂಬುವನಿಗೆ ಆದ ಭವಿಷ್ಯದ್ದರ್ಶನದ ಗ್ರಂಥ.

Apoll'o(ಅಪೋಲೊ)n. Greek sungod. ಗ್ರೀಕರ ಸೂರ್ಯದೇವತೆ.

Apoll'yon(ಅಪಾಲಿಯನ್)n. destroyer, the devil. ಸಂಹಾರಕ, ಸೈತಾನ.

Apologet'ic (ಅಪಾಲಜೆಟಿಕ್) a. saying regretfully, vindicatory. ನೆವ ಹೇಳುವ, ಕ್ಷಮೆ ಬೇಡುವ.

Apologia (ಅಪೊಲೋಜಿಅ) n. written support or explanation. ಸಮರ್ಥನ, ಸಮಾಧಾನ.

Apol'ogist (ಅಪಾಲಜಿಸ್ಟ್) n. one who defends by argument. ಧರ್ಮಪ್ರತಿಪಾದಕ, ಕ್ರೈಸ್ತಧರ್ಮ ಸಮರ್ಥಕ.

Apolo'gize (ಅಪಾಲೊಜೈಜ್) v. i. beg to be excused, express regret for a fault. ತಪ್ಪಿಗಾಗಿ ಕ್ಷಮಿಸೆನ್ನು, ಕ್ಷಮೆಬೇಡು, ಮಾಫಿಬೇಡು.

Ap'ologue (ಆಪೊಲಾಗ್) n. moral fable or parable. ನೀತಿಕಥೆ.

Apol'ogy (ಅಪಾಲಜಿ) n. regretful acknowledgment of an offence, excuse. ತಪ್ಪು ಒಪ್ಪಿಕೊಳ್ಳುವಿಕೆ, ಕ್ಷಮಾಪ್ರಾರ್ಥನೆ.

Apophthegm (ಆಪೋಥೆಮ್) n. a pithy saying. ಸೂಕ್ತಿ, ಸಂಗ್ರಹವಾಗಿ ಹೇಳಿದ ಸಾರವಚನ.

Apoplectic (ಅಪೋಪ್ಲೆಕ್ಟಿಕ್) a. pertaining to apopfexy. ಮೂರ್ಛೆರೋಗಕ್ಕೆ ಸಂಬಂಧಿಸಿದ.

Ap'oplexy (ಆಪೋಪ್ಲೆಕ್ಸಿ) n. a disease causing stupor of brain. ತೀಕ್ಷ್ಣವಾಯು,ಕ್ಷಿಪ್ರಸನ್ನಿ,ಮೂರ್ಛೆರೋಗ.

Aposiopesis (ಅಪೋಸೈಯೋಪೀಸಿಸ್) n. sudden breaking off during a speech. ಭಾಷಣ ಭಂಗ, ವಾಕ್‌ಭಂಗ.

Apos'tacy,-sy (ಅಪಾಸ್ಟಸಿ) n. abandonment of one's faith, party etc. ಸ್ವಧರ್ಮತ್ಯಾಗ, ಧರ್ಮಭ್ರಷ್ಟತೆ, ಪಾತಿತ್ಯ.

Apos'tate (ಅಪಾಸ್ಟೇಟ್) n. one that forsakes his principles of religion. ಸ್ವಧರ್ಮಭ್ರಷ್ಟ, ಸ್ವಧರ್ಮತ್ಯಾಗಿ.

Apostatize (ಅಪೊಸ್ಟೆಟೈಜ್) vt. to forsake one's faith or principles. ಧರ್ಮತ್ಯಾಗಮಾಡು, ಸ್ವಸಿದ್ಧಾಂತವನ್ನು ವರ್ಜಿಸು.

Aposteriori (ಅಪಾಸ್ಟಿರಿಯಾರಿ) a. reasoning from effect to cause. ಕಾರ್ಯದಿಂದ ಕಾರಣವನ್ನು ಊಹಿಸುವುದು.

Apostil (ಅಪಾಸ್ಟಿಲ್) n. marginal note. ಪಾರ್ಶ್ವದ ಟಿಪ್ಪಣಿ.

Apo'stle (ಅಪಾಸ್ಲ್) n. one sent to preach the gospel, missionary, leader of reform. ದೇವಪ್ರೇಷಿತ, ಧರ್ಮಪ್ರಸಾರಕ, ಸುಧಾರಣಾಗ್ರಣಿ.

Apos'trophe (ಅಪಾಸ್ಟ್ರೊಫಿ) n.exclamatory address, (') sign of possessive case; sign of omitted letter. ಸಂಬೋಧನೆ, ಅಕ್ಷರಲೋಪದ ಗುರುತು, ಷಷ್ಠೀವಿಭಕ್ತಿ ಚಿಹ್ನೆಯ ಗುರುತು.

Apoth'ecary (ಅಪಾಥಿಕರಿ) n. a chemist, a druggist. ಔಷಧಮಾರುವವನು, ಗ್ರಂದಿಗೆಯಂಗಡಿಯವನು, ವೈದ್ಯ.

Apotheo'sis (ಅ̆ಪಾಥಿಯೋಸಿಸ್) n. deification, glorification ದೇವತ್ವ ಆವಾಹನೆ, ಪ್ರತಿಷ್ಠಾಪನೆ, ಪರಮಪದಪ್ರಾಪ್ತಿ.

Appal' (ಅಪಾಲ್) vt. terrify, dismay, make pale with fear. ಎದೆಗುಂದಿಸು, ದಿಗಿಲುಪಡಿಸು, ಹೆದರಿಸು, ಭಯದಿಂದ ಬಿಳಚಿಸು. a. appalling. ಹೆದರಿಸುವ.

Ap'panage (ಅಪನೇಜ್) n. see Ap'anage.

Appara'tus (ಅ̆ಪರೇಟಸ್) n. set of implements. ಉಪಕರಣಗಳು, ಸಲಕರಣೆ, ಸಾಮುಗ್ರಿ, ಸಾಹಿತ್ಯ.

Appa'rel (ಅ̆ಪಾರೆಲ್) n. clothing, garments, dress. ಉಡುಪು, ಉಡಿಗೆ ತೊಡಿಗೆ, ಪೋಷಾಕು. vt. clothe, deck. ಉಡುಪುಹೊದಿಸು, ಅಲಂಕರಿಸು, ಹವಣಿಸು, ತೊಡಿಸು.

Appa'rent (ಅ̆ಪಾರೆಂಟ್ ಅಪೇರೆಂಟ್)a. evident, easily seen. seeming. ಪ್ರತ್ಯಕ್ಷ, ತೋರುವ, ಕಣ್ಣಗೆ ಕಂಡರೂ ನಿಜವಲ್ಲದ, ಸ್ಪಷ್ಟ, ವ್ಯಕ್ತ.

Appari'tion(ಅ̆ಪರಿಶನ್)n. a ghostly appearance, spectre. ಭೂತ, ಪ್ರೇತ, ಪಿಶಾಚಿ, ದೆವ್ವ.

Apparitor (ಅಪಾರಿಟರ್) n. a servant of the Roman magistrate, a civil officer. ರೋಮನ್ ದಂಡನಾಯಕನ ಸೇವಕ, ಅಧಿಕಾರಿ.

Appeal' (ಅಪೀಲ್) vt. i. call to or invoke, address to feelings, refer to higher court. ಮೊರೆಯಿಡು, ಕೇಳಿಕೊಳ್ಳು, ಅರಿಕೆಮಾಡು, ಪುನರ್ವಿಚಾರಣೆಗಾಗಿ ಪ್ರಾರ್ಥಿಸು, ಅಪೀಲುಮಾಡು. n. request, reference, supplication. ಬೇಡಿಕೊಳ್ಳೋಣ, ಅರ್ಜಿ, ಅಪೀಲು, ಮೊರೆ, ಪ್ರಾರ್ಥನೆ.

Appealing (ಅಪೀಲಿಂಗ್) a. attractive, imploring. ಚಿತ್ತಾಕರ್ಷಕ, ಮೊರೆಯಿಡುವ.

Appear' (ಅಪಿಅರ್) vi. be visible, come in sight, seem. ತೋರು, ಕಾಣು, ಕಂಗೊಳಿಸು, ಹೊಳಪು, ಪ್ರತ್ಯಕ್ಷವಾಗು, ಹಾಜರಾಗು, ಕಾಣಿಸಿಕೊ

Appear'ance (ಅಪೀಅರನ್ಸ್) n. outward look or show, appearing, ಕಾಣಿಸುವಿಕೆ, ತೋರಿಕೆ, ಉದಯ, ವೇಷ. (pl.) show of propriety, friendly relations. ಡಂಬ ಸ್ನೇಹಗಳ ತೋರಿಕೆ.

Appease (ಅಪೀಜ್) vt. pacify, soothe, allay ಶಾಂತಪಡಿಸು, ಸಂತೈಸು, ತಮ್ಮಣಿಪಡಿಸು, ಸಮಾಧಾನಪಡಿಸು.

Appell'ant (ಅಪೆಲಂಟ್)n. one who appeals. ಅಪೀಲುವಾದಿ, ಮೇಲ್ಮನವಿಯವ.

Appell'ate (ಅಪೆಲೇಟ್) a. (of court) hearing appeals. ಅಪೀಲು ವಿಚಾರಿಸುವ, ಮನವಿ ತೀರ್ಮಾನಿಸುವ ಅಧಿಕಾರವುಳ್ಳ.

Appell'ation(ಅ̆ಪಲೇಶನ್)n.a name title. ಹೆಸರು, ನಾಮಧೇಯ, ಅಡ್ಡಹೆಸರು.

Append' (ಅಪೆಂಡ್) vt. add to, hang to, attach to as accessory. ಕೂಡಿಸು, ಜಂಟಿಸು, ಸೇರಿಸು.

Append'age (ಅಪೆಂಡೇಜ್) n. thing appended. ಅನುಬಂಧ, ಸೇರಿಸುವುದು, ಪರಿಶಿಷ್ಟ.

Appendant, Appendent (ಅಪೆಂಡೆಂಟ್) a. & n attached, annexed. ಅನುಬದ್ಧವಾದ, ಅಂಗಭೂತವಾದ.

Appendicitis (ಅಪೆಂಡಿಸೈಟಿಸ್) n. a disease of the vermiform appendix, (which is attached to the intestines.) ಕರಳು ಜಾಲಕ್ಕೆ ತಗಲುವ ರೋಗ.

Appen'dix (ಅಪೆಂಡಿಕ್ಸ್) n. pl.-ixes, -ices; supplement. ಪರಿಶಿಷ್ಟ, ಹೆಚ್ಚೋಲೆ, ಪುರವಣೆ. ಉಪಭಾಗ.

Apperseption (ಅ̆ಪರ್ಸೆಪ್ಷನ್) n. mental perception. ಮನಃಪ್ರಜ್ಞೆ.

Apperceive (ಅಪರ್ಸೀವ್) vt. understand by mental perception. ಮನಃಪ್ರಜ್ಞೆಯಿಂದ ತಿಳಿ.

Appertain' (ಅ̆ಪರ್ಟೆಯ್ನ್) vt. belong to, relate to. ಸಂಬಂಧಿಸಿರು, ಸರಿಯಾಗಿರು.

Appetence (ಅ̆ಪಿಟೆನ್ಸ್) n. desire, longing. ಅಭಿಲಾಷೆ, ಗೀಳು, ಹಂಬಲು.

App'etite (ಅ̆ಪಿಟೈಟ್) v. hunger, desire,inclination. ಹಸಿವೆ. ಕ್ಷುಧಾಗ್ನಿ, ಕಾಂಕ್ಷೆ, ಆಶೆ, ಅಭಿಲಾಷೆ.

Appetiz'er (ಅ̆ಪಿಟೈಜರ್) n. thing that gives appetite. ರುಚಿಕಾರಕ.

Applaud (ಅಪ್ಲಾಡ್) vt. i. express approval,esp. by clapping, commend. ಪ್ರಶಂಸಿಸು, ಕೊಂಡಾಡು, ಚಪ್ಪಾಳೆ ತಟ್ಟು, ಸಮ್ಮತಿಸು, ಹೊಗಳು, ಮೆಚ್ಚು, ಶ್ಲಾಘಿಸು.

Applause' (ಅಪ್ಲಾಜ್) n loud approbation. ಹೊಗಳಿಕೆ, ಪ್ರಶಂಸೆ, ಮೆಚ್ಚಿಕೆ

Apple' (ಅ̆ಪಲ್) n.fruit of the apple tree. ಸೇಬುಹಣ್ಣು. a. of the eye. the pupil: ಕಣ್ಣುಗಡ್ಡೆ. adam's a. ಗಂಟಲುಮಣಿ. a. of discord. ಜಗಳದ ಮೂಲ. a.pie order, perfect order ಸಂಪೂರ್ಣ ವ್ಯವಸ್ಥೆ. a.sauce, flattery. ಮುಖಸ್ತುತಿ.

Appliance (ಅಪ್ಲೈಯನ್ಸ್) n. anything applied, means used. ಸಾಮಗ್ರಿ, ಸಲಕರಣೆ, ಉಪಕರಣ, ಸಾಧನೆ, ಯೋಜನೆ, ಪರಿಕರ; ಪ್ರಯೋಗ.

Applicability (ಅ̆ಪ್ಲಿಕಬಿಲಿಟಿ) n. quality of being suitable. ಉಪಯುಕ್ತತೆ, ಸಮಂಜಸತೆ.

Applicable (ಅ̆ಪ್ಲಿಕಬಲ್) a. that which applies or may be applied ಅನ್ವಯಿಸತಕ್ಕ, ಯುಕ್ತ, ತಕ್ಕ, ಅನ್ವಯಯೋಗ್ಯ.

App'licant (ಅ̆ಪ್ಲಿಕೆ̆ಂಟ್) n. one who applies, a petitioner. ಅಭ್ಯರ್ಥಿ, ಮನವಿದಾರ, ಬಿನ್ನಹಗಾರ; ಅರ್ಜಿದಾರ.

Applica'tion (ಅಪ್ಲಿಕೇಶನ್) n. applying, request, diligence, bringing to bear. ಅನ್ವಯಿಸೋಣ, ಆರೋಪ. ಮನವಿ, ದರಖಾಸ್ತು, ಅರ್ಜಿ, ಬಿನ್ನವತ್ತಳೆ, ಪ್ರಯೋಗ.

Apply' (ಅಪ್ಲೈ) vt. i. put close, put in contact, administer, request, attend closely to. ಗಮನಿಸು, ಪ್ರಯೋಗಿಸು, ಬಿನ್ನವಿಸು, ಅರಿಕೆ, ಮನಸ್ಸಿಡು, ಅನ್ವಯಿಸು.

Appoint' (ಅಪಾಯಿಂಟ್) vt. fix, settle, equip, nominate (ಹೊತ್ತು) ಗೊತ್ತುಮಾಡು, ನಿಶ್ಚಯಿಸು, ನಿಯೋಜಿಸು, ವಿಹಿತಮಾಡು, ನೇಮಿಸು, ಮೊಕರೂರ್ ಮಾಡು.

Appointee (ಅಪಾಯಿಂಟೀ) n. person appointed. ನೇಮಿಸಲ್ಪಟ್ಟವನು.

Appoint'ment (ಅಪಾಯಿಂಟ್‌ಮೆಂಟ್) a. engagement, assignation, (plu.) outfit. ನೇಮಕ, ಉದ್ಯೋಗ, ಪದವಿ, ನಿಯಮ, ವಿಧಿ, ಆಜ್ಞೆ, ಹವಣಿಕೆ.

Appointer (ಅಪಾಯಿಂಟರ್) n. a person having the authority to appoint. ನೇಮಕಮಾಡಲು ಅಧಿಕಾರವುಳ್ಳವನು.

Appor'tion (ಅಪೋರ್ಶನ್) vt. divide in fair shares ಹಂಚಿಕೊಡು, ಸರಿಯಾಗಿ ಪಾಲುಮಾಡಿಕೊಡು, ಸರಿಯಾಗಿ ವಿಭಾಗಿಸು.

Appo'site (ಅ̆ಪೋಜಿಟ್) a. proper, suitable. ಯುಕ್ತ, ಸಂಗತ, ತಕ್ಕ, ಸಮಂಜಸ.

Apposi'tion (ಅ̆ಪೋಜಿಶನ್) n. proximity, juxtaposition. ಸೇರಿಸೋಣ, ಸ್ಥಿತಿಸಾನ್ನಿಧ್ಯ, ಅಕ್ಕಪಕ್ಕದಲ್ಲಿರುವುದು, ಸಮಾನಾಧಿಕರಣ, ಏಕಾನ್ವಯ.

Appraisal (ಅಪ್ರೈಸಲ್) n. estimate fixing the price or the quality of an article. ಬೆಲೆಯ ನಿಷ್ಕರ್ಷೆ, ಅಂದಾಜು.

Appraise' (ಅಪ್ರೇಜ್) vt. fix price of, estimate. ಬೆಲೆ ನಿಶ್ಚಯಿಸು, ಕ್ರಯ ನಿರ್ಣಯಮಾಡು, ಕಿಮ್ಮತ್ತು ಕಟ್ಟು. n apprais'er.

Appre'ciable (ಅಪ್ರೀಶಬಲ್) a. capable of being estimated ಗಣನೀಯ, ಗಣ್ಯ, ಗ್ರಹಣೀಯ, ವಿವೇಚನೀಯ.

Appre'ciate (ಅಪ್ರೀಶಿಏಟ್) vt. i. estimate justly, value, esteem. ಗಣನೆಗೆ ತರು, ಬೆಲೆಕಟ್ಟು, ಕಿಮ್ಮತ್ತುಕಟ್ಟು, ಗೌರವಿಸು.

Appre'ciation (ಅ̆ಪ್ರೀಶಿಯೇಶನ್) n. a just estimate, rising in value. ಗುಣಗ್ರಹಣ, ಗುಣವಿವೇಚನೆ, ಗಣನೆ, ಗೌರವ. ಬೆಲೆಯ ಏರುವಿಕೆ.

Apprehend (ಅಪ್ರಹೆಂಡ್) vt. arrest, understand. dread ದಸ್ತಗಿರಿಮಾಡು, ಗ್ರಹಿಸು, ತಿಳಿ, ಶಂಕಿಸು, ಸಂಶಯಪಡು, ಹೆದರು.

Appprehen'sible (ಅ̆ಪ್ರಹೆನ್ಸಿಬಲ್) n. perceptible to senses. ಗ್ರಾಹ್ಯ, ಇಂದ್ರಿಯಗೋಚರ.

Apprehen'sion (ಅ̆ಪ್ರಹೆನ್‌ಶನ್) n. arrest, understand, dread. ಹಿಡಿಯುವಿಕೆ, ಗ್ರಹಣಶಕ್ತಿ, ತಿಳಿಯುವಿಕೆ, ಭಯ, ಶಂಕೆ, ದಿಗಿಲು.

Apprehen'sive (ಅ̆ಪ್ರಹೆನ್ಸಿವ್) a. afraid, fearful. ಶಂಕೆಯುಳ್ಳ, ಭಯವುಳ್ಳ.

Apprentice (ಅ̆ಪ್ರೆಂಟಿಸ್) n. learner, bound to employer for specified term. ಉಮೇದುವಾರ, ಉದ್ಯೋಗಾರ್ಥಿ.

Appren'ticeship (ಅಪ್ರೆಂಟಿಸ್‌ಶಿಪ್) n the term of practical training. ಕೆಲಸ ಕಲಿಯುವ ಕಾಲ; ಸೇವೆಯ ಕಾಲ.

Apprise' (ಅ̆ಪ್ರೈಜ್) vt. inform, give notice of. ಸುದ್ದಿ ತಿಳಿಸು, ಸೂಚನೆ ಕೊಡು.

Apprize' (ಅ̆ಪ್ರೈಝ್) vt. set a. value on. ಕ್ರಯ ನಿಶ್ಚಯಿಸು, ಕಿಮ್ಮತ್ತು ಕಟ್ಟು.

Appro (ಅಪ್ರೊ) on appro. on approval. ಅಥವಾ on approbation. ಎಂಬುದರ ಸಂಕ್ಷಿಪ್ತ ರೂಪ, ಅಮಾನತ್ತಿನಲ್ಲಿ.

Approach' (ಅಪ್ರೋಚ್) vt. draw near, resemble. ಸಮೀಪಿಸು, ಹತ್ತಿರ ಸೇರು, ಹೋಲು. n access, path, avenue. ಸಾಮೀಪ್ಯ, ಮಾರ್ಗ, ಪ್ರವೇಶದ್ವಾರ.

Approachable (ಅಪ್ರೋಚಬಲ್) a. accessible ಪ್ರವೇಶಯುಕ್ತ.

App'robate (ಅ̆ಪ್ರೊಬೇಟ್) vt. approve. ಅನುಮೋದಿಸು, ಸಮ್ಮತಿಸು, ಒಪ್ಪು.

Approba'tion (ಅ̆ಪ್ರೊಬೇಶನ್) n. sanction, approval. ಸಮ್ಮತಿ, ಅನುಮತಿ, ಮೆಚ್ಚಿಗೆ, ಮಂಜೂರು, ಅನುಮೋದನೆ.

Appro'priate (ಅಪ್ರೋಪ್ರಿಯೇಟ್) a. suitable, proper. ಉಚಿತ, ಯುಕ್ತ, ತಕ್ಕ, ಸಂಗತ. vt. take possession of, devote to, set apart, assign.

ಸ್ವಂತಕ್ಕೆ ಬಳಸು, ವಿನಿಯೋಗಿಸು, ನೇಮಿಸು.

Appropria'tion (ಅಪ್ರೋಪ್ರಿಏಶನ್) n. application to a particular use. ಒಂದು ಉದ್ದೇಶಕ್ಕಾಗಿ ತೆಗೆದಿಡೋಣ, ಆತ್ಮಸಾಕ್ಷತ್ಕರಣ, ವಿನಿಯೋಗ.

Approv'al (ಅಪ್ರೂವಲ್) n. approbation, sanction. ಸಮ್ಮತಿ, ಅನುಮತಿ, ಒಪ್ಪಿಗೆ, ಮೆಚ್ಚಿಗೆ, ಮಂಜೂರು, ಸ್ವೀಕಾರ.

Approve' (ಅಪ್ರೂವ್) vt. i. like, sanction. ಮೆಚ್ಚು, ಒಪ್ಪಿಕೊಳ್ಳು, ಅನುಮೋದಿಸು, ಸಮ್ಮತಿಸು, ಮಂಜೂರುಮಾಡು.

Approved' (ಅಪ್ರೂವ್ಡ್) a. accepted, sanctioned. ಸಮ್ಮತ. ಪ್ರಶಸ್ತ, ಒಪ್ಪಿತ, ಅನುಮೋದಿತ, ಮಂಜೂರಾದ, ಸ್ವೀಕೃತ

Approv'er (ಅಪ್ರೂವರ್) n. one who turns king's evidence. ಅನುಮೋದಕ, "ಮಾಫಿ" ಸಾಕ್ಷಿ.

Approx'imate (ಅಪ್ರಾಕ್ಸಿಮೇಟ್) a. about or near to. ಸರಿಸುಮಾರು, ಹತ್ತಿರಹತ್ತಿರ.

Approximately (ಅಪ್ರಾಕ್ಸಿಮೇಟ್ಲಿ) adv. nearly. ಸರಿ ಸುಮಾರಾಗಿ, ಹತ್ತಿರವಾಗಿ, ಹೆಚ್ಚು ಕಡಿಮೆ.

Approxima'tion (ಅಪ್ರಾಕ್ಸಿಮೇಶನ್) n. close approach. ಹತ್ತಿರ ಬರುವಿಕೆ, ಸರಿ ಸುಮಾರು, ಸಾಮೀಪ್ಯ, ಉಪಸಮ.

Appui (ಅಪ್ಪೀ) n. defensive support. ಸೇನೆಯ ರಕ್ಷಣೆಯ ಆಧಾರ.

Appur'tenance (ಅಪರ್ಟಿನನ್ಸ್) n. appendage, (plu.) belongings. ಅಂಗಭೂತವಸ್ತು, ಉಪಭಾಗ, ಸ್ವಂತಕ್ಕೆ ಸೇರಿದ್ದು.

Appurtenant (ಅಪರ್ಟಿನೆನ್ಟ್) a. & n. belonging, pertaining to. ಸೇರಿದ, ಸಂಬಂಧಪಟ್ಟ, ಸಮುಚಿತವಾದ.

Ap'ricot (ಎಪ್ರಿಕಾಟ್) n. a fruit of the plum kind. ಜಲ್ದರುಹಣ್ಣು, ಜರದಾಲು.

April (ಏಪ್ರಿಲ್) n. fourth month of the year. ಕ್ರಿಸ್ತವರ್ಷದ ನಾಲ್ಕನೆ ಮಾಸ.

Apriori (ಅಪ್ರಾೖಅರಿ) n. from cause to effect. ಕಾರಣದಿಂದ ಕಾರ್ಯವನ್ನು ವಾದಿಸುವುದು, ಕಾರಣಪೂರ್ವಕ (ತರ್ಕ).

A'pron (ಏಪ್ರನ್) n. garment worn in front of body. ಬಟ್ಟೆ ಮಾಸದ ಹಾಗೆ ಕಟ್ಟಿಕೊಳ್ಳುವ ಕರವಸ್ತ್ರ, ಮುಂಕವಚ.



Apron

Apropos' (ಅಪ್ರೊಪೊ) adv. to the point or purpose. ಅನುರೂಪವಾಗಿ, ಗುರಿಗನುಸಾರವಾಗಿ, ಸಮಯೋಚಿತವಾಗಿ.

Apse (ಆ̆ಪ್ಸ್) n. a semi-circular recess. ಚರ್ಚಿನ ಅರ್ಧ ವೃತ್ತಾಕಾರವಾದ ಕಿಡಕಿ.

Apsis (ಆ̆ಪ್ಸಿಸ್) n. aphelion, perihelion of planet. ಗ್ರಹದ ಉಚ್ಚನೀಚಸ್ಥಾನ ಬಂಧುಗಳು.

Apt (ಆ̆ಪ್ಟ್) a. fit, quick, inclined, ready. ತಕ್ಕ, ಯುಕ್ತ, ಉಚಿತ, ಶೀಘ್ರ, ಪ್ರವೃತ್ತಿಯುಳ್ಳ, ಸರಿಯಾದ, ಹೊಂದುವ.

Ap'terous (ಆ̆ಪ್ಟರಸ್) a. wingless. ರೆಕ್ಕೆಯಿಲ್ಲದ, ಪಕ್ಷರಹಿತ.

Ap'titude, Ap'tness (ಆ̆ಪ್ಟಿಟ್ಯೂಡ್, ಆ̆ಪ್ಟ್‌ನೆಸ್) n. fitness, talent. ಯೋಗ್ಯತೆ, ಬುದ್ಧಿ, ಸಾಮರ್ಥ್ಯ, ಔಚಿತ್ಯ.

Apt'ly (ಆ̆ಪ್ಟ್ಲಿ) adv. properly. ಸಮಂಜಸವಾಗಿ, ಠೀಕಾಗಿ, ಯೋಗ್ಯವಾಗಿ.

Aqua (ಆ̆ಕ್ವ) n. water, liquid, solution. ನೀರು, ದ್ರವ, ದ್ರಾವಣ.

Aquamarine (ಏಕಮೆರೀನ್) n. bluish green colour ನೀಲಿಮಿಶ್ರಿತವಾದಹಸುರು ಬಣ್ಣ.



Aquarium

Aquar'ium (ಆಕ್ವೇರಿಯಮ್) n. tank for aquatic plants or animals. ಮೀನು ತೊಟ್ಟಿ, ಜಲಚರ ಸಂಗ್ರಹಾಲಯ.

Aquarius (ಆಕ್ವೇರಿಅಸ್) n. eleventh sign of zodiac. ಕುಂಭರಾಶಿ.

Aquat'ic (ಅಕ್ವೇಟಿಕ್) a. relating to or living in or near water. ಜಲಜ, ಜಲಸಂಬಂಧವಾದ, ನೀರಿನಲ್ಲಿರುವ.

A'queduct (ಆಕ್ವಿಡಕ್ಟ್) n. artificial channel for water. ಕಾಲುವೆ, ಕಾವಲಿ.

Aq'ueous (ಏಕ್ವಿಅಸ್) a. watery. ಜಲಮಯ, ನೀರು ತುಂಬಿದ, ನೀರಿನ.

Aquiline (ಅಕ್ವಿಲೈನ್, ಅಕ್ವಿಲಿನ್) a. like an eagle's beak. ಹದ್ದಿನ, ಗರುಡನ ಅಥವಾ ಗಿಣಿಯ ಮೂಗಿನಂತಿರುವ.

Arab (ಅರಬ್) n. & a. native of Arabia, Arab horse. ಅರೇಬಿಯಾ ದೇಶದವನು, ಅರಬ್ಬೀ ಕುದುರೆ.

A'rabesque (ಅರಬೆಸ್ಕ್) a. Arabian, fantastic. ಅರೇಬಿಯಾಕ್ಕೆ ಸಂಬಂಧಿಸಿದ, ವಿಚಿತ್ರವಾದ.

Arabian (ಅರೇಬಿಯನ್) a. pertaining to Arabia. ಅರೇಬಿಯಕ್ಕೆ ಸಂಬಂಧಿಸಿದ.

Arabic (ಅರಾಬಿಕ್) a. & n. pertaining to Arabia, the language of Arabia. ಅರೇಬಿಯಕ್ಕೆ ಸಂಬಂಧಿಸಿದ, ಅರಬ್ಬೀ ಭಾಷೆ.

A'rable (ಏರೆಬಲ್) a. fit for tiiling or cultivating. ಸಾಗುವಳಿಗೆ ತಕ್ಕ, ಉತ್ತು ವ್ಯವಸಾಯಮಾಡಲು ಯೋಗ್ಯವಾದ ಕೃಷಿಯೋಗ್ಯ.

Arachnid (ಅರಾಕ್ನಿಡ್) n. member of a class of insects comprising spiders, scorpions, etc. ಜೇಡ, ಚೇಳು ಮುಂತಾದ ಜಾತಿಗೆ ಸೇರಿದ ಜಂತುಗಳು.

Aramaic (ಅರಮೇಯಿಕ್) n. the language of Syria. ಸಿರಿಯಾ ದೇಶದ ಭಾಷೆ.

Arb'iter (ಆರ್ಬಿಟರ್) n. arbitrator, judge. ಪಂಚಾಯತ, ಮಧ್ಯಸ್ಥ,

Arbit'rament (ಆರ್ಬಿಟ್ರಮೆಂಟ್) n. decision of an arbiter. ಪಂಚನ ತೀರ್ಪು, ಪಂಚಾಯತಿ ತೀರ್ಮಾನ, ಮಧ್ಯಸ್ಥಿಕೆ.

Ar'bitrary (ಆರ್ಬಿಟ್ರರಿ) n. not guided by any rules, despotic. ಇಚ್ಛಾನುಸಾರಿ, ನಿರಂಕುಶ.

Arb'itrate (ಆರ್ಬಿಟ್ರೇಟ್) vt. i. determine, settle dispute. ನಿರ್ಣಯಿಸು, ಪಂಚಾಯತಿಯಿಂದ ತೀರ್ಮಾನಿಸು.

Arbitra'tor,-tress (ಆರ್ಬಿಟ್ರೇಟರ್-ಟ್ರಿಸ್) n. arbiter, judge. ಪಂಚಾಯತ, ಮಧ್ಯವರ್ತಿ, ಮಧ್ಯಸ್ಥ.

Ar'bor (ಆರ್ಬರ್) n. axle of wheel. ಗಾಲಿಯ ಅಚ್ಚು, ಚಕ್ರವ ಕದಿರು.

Arboraceous (ಆರ್ಬೊರೇಶಸ್) a. tree like. ಕುಂಜಸದೃಶವಾದ.

Arboreal (ಆರ್ಬೊರಿಯಲ್) a. pertaining to trees. ಮರದ ಸಂಬಂಧವಾದ, ವೃಕ್ಷಸಂಬಂಧಿ.

Arboreous (ಆರ್ಬೋರಿಯಸ್) n. pertaining to trees. ಮರದ ಸಂಬಂಧವಾದ, ವೃಕ್ಷಸಂಬಂಧಿ.

Arbour (ಆರ್ಬರ್) n. a bower shaded by trees, a shadow nook. ಲತಾಗೃಹ, ಲತಾಕುಂಜ.

Arc (ಆರ್ಕ್) n. part of the circumference of a circle or other curve. ವೃತ್ತಖಂಡ, ವರ್ತುಳ, ಪರಿಧದ ಒಂದುಭಾಗ.

Arcade' (ಆರ್ಕೇಡ್) n. series of arches supported by the pillars, road under a row of arches. ಕಮಾನುಗಳ ಸಾಲು, ಆಚ್ಛಾದಿತ ಮಾರ್ಗ.

Arcadi'an (ಅರ್ಕೇಡಿಯನ್) n· & a. ideally rustic· ಗ್ರಾಮ್ಯ, ಗ್ರಾಮೀಣ, ಹಳ್ಳಿಯ.

Arcady (ಆರ್ಕಡಿ) **Arcadia** (ಆರ್ಕೇಡಿಯ) n· rustic paradise (poetry) ಸ್ವರ್ಗಸಮಾನವಾದ ಹಳ್ಳಿ.

Arca'num (ಅರ್ಕೇನಮ್) n· (plu··na) n mystery· ರಹಸ್ಯ.


Arch

Arch (ಆರ್ಚ್) n· a curved construction supporting bridge, &c. curve. ಕಮಾನು. a·rouguish, saucy·ಠಕ್ಕಿನ, ಯುಕ್ತಿಯ ಚಮತ್ಕಾರದ. a. of heaven· ನಭೋಮಂಡಲ. a enemy. ಮಹಾಶತ್ರು. a. fiend. ಪಿಶಾಚಾಗ್ರಣಿ, ಸೈತಾನ.

Archaean (ಆರ್ಕೀಯನ್) a. pertaining to the earliest geological period. ಭೂಗರ್ಭಶಾಸ್ತ್ರದ ಪ್ರಥಮ ಯುಗಕ್ಕೆ ಸಂಬಂಧಿಸಿದ.

Archaelogist (ಆರ್ಕಿಯಾಲಜಿಸ್ಟ್) n. one versed in archaeology. ಪ್ರಾಚೀನ ವಸ್ತುಶಾಸ್ತ್ರಿ, ಪ್ರಾಕ್ತನವಿಮರ್ಶಕ

Archaeol'ogy (ಆರ್ಕಿಯಾಲಜಿ) n. the science of ancient monuments and arts. ಪುರಾತನ ವಸ್ತುಶಾಸ್ತ್ರ, ಪ್ರಾಚೀನ ವಸ್ತು ಶೋಧನಶಾಸ್ತ್ರ.

Archa'ic (ಆರ್ಕೇಇಕ್) a. ancient, obsolete, out of date· ಪುರಾತನ. ಪ್ರಾಚೀನ, ವಾಡಿಕೆಯಲ್ಲಿಲ್ಲದ, ಆರ್ಷ.

Archaism (ಆರ್ಕೇಯಿಜ್ಮ್) n· work, idiom or expression not current now. ಈಗ ಅಪ್ರಚಲಿತವಾಗಿರುವ ಪ್ರಾಚೀನ ಪ್ರಯೋಗ, ಆರ್ಷ ಪ್ರಯೋಗ.

Archaist (ಆರ್ಕೇಯಿಸ್ಟ್) n one who follow archaism. ಆರ್ಷೇಯವಾದುದನ್ನು ಅನುಕರಿಸುವವನು.

Archaistic (ಆರ್ಕೇಯಿಸ್ಟಿಕ್) a pertaining to archaism ಆರ್ಷೇಯವಾದುದಕ್ಕೆ ಸಂಬಂಧಿಸಿದ.

Arch'angel (ಆರ್ಕೇಂಜಲ್) n. angel of the highest order· ಪ್ರಧಾನದೇವದೂತ.

Archbish'op (ಆರ್ಚ್‌ಬಿಷಪ್) n· chief bishop· ಕ್ರೈಸ್ತರ ಪ್ರಧಾನ ಗುರು, ಮುಖ್ಯ ಧರ್ಮಾಧ್ಯಕ್ಷ.

Archdeacon (ಆರ್ಚ್‌ಡೀಕನ್) n. ecclesiastical officer next below bishop ಬಿಷಪ್ಪಿನ ಕೆಳಗಣ ಅಧಿಕಾರಿ.

Archdiocese (ಆರ್ಚ್‌ಡೈಯೊಸೆಸ್) n· episcopal, unit of an archbishop. ಆರ್ಚ್‌ಬಿಷಪ್ಪಿನ ಅಧಿಕಾರವ್ಯಾಪ್ತಿ.

Archenemy (ಆರ್ಚ್‌ಎನಿಮಿ) n· chief enemy, Satan. ಮುಖ್ಯ ಶತ್ರು, ಸೈತಾನ.


Archer

Arch'er (ಆರ್ಚರ್) n· bowman· ಬಿಲ್ಲುಗಾರ, ಅಂಬುಗಾರ, ಧನುರ್ಧರ, ಬಿಲ್ಲಾಳು.

Archery (ಆರ್ಚರಿ) n· use of bow and arrows. ಧನುರ್ವಿದ್ಯೆ, ಧನುರ್ವೇದ, ಬಿಲ್ಲುಗಾರಿಕೆ, ಬಿಲ್ಲುವಿದ್ಯೆ.

Arch'etype (ಆರ್ಕಿಟೈಪ್) n. original model· ಮೂಲರೂಪ, ಮೂಲಪ್ರತಿ, ಆದರ್ಶ.

Arch'ibald (ಆರ್ಕಿಬಾಲ್ಡ್) n. anti-air-craft gun. ವಿಮಾನಗಳ ಕಡೆ ಹಾರಿಸುವ ತೋಪು.

Archipel'ago (ಆರ್ಕಿಪೆಲಗೊ) n. group of small islands. ದ್ವೀಪ ಸಮುದಾಯ.

Arch'itect (ಆರ್ಕಿಟೆಕ್ಟ್) n. designer of buildings. ಶಿಲ್ಪಿ, ಶಿಲ್ಪಶಾಸ್ತ್ರ ಬಲ್ಲವ; ಸ್ಥಪತಿ.

Architect'ure (ಆರ್ಕಿಟೆಕ್ಚರ್) n. science of building. ಶಿಲ್ಪಶಾಸ್ತ್ರ, ಸ್ಥಾಪತ್ಯ, ವಾಸ್ತುಶಾಸ್ತ್ರ.

Archives (ಆರ್ಕ್ಈವ್ಸ್) n. plu. public record, place for these. ಹಳೆಯ ಕಡತ, ದಫ್ತರ, ದಫ್ತರಖಾನೆ, ಪತ್ರಾಗಾರ.

Archlike (ಆರ್ಚ್‌ಲೈಕ್) a. built-like an arch. ಕಮಾನಿನಂತೆ ನಿರ್ಮಿತವಾಗಿರುವ.

Archon (ಆರ್ಕನ್) n. one of the nine chief magistrates of Athens. ಅಥೆನ್ಸಿನ ಒಂಭತ್ತು ಮುಖ್ಯ ಅಧಿಕಾರಿಗಳಲ್ಲೊಬ್ಬ.

Archway (ಆರ್ಚ್‌ವೇ) n. passage under an arch. ಕಮಾನಿನ ಕೆಳಗೆ ನಿರ್ಮಿತವಾಗಿರುವ ದಾರಿ.

Arciform (ಆರ್ಸಿಫಾರಮ್) a. bent like a bow. ಬಿಲ್ಲಿನಂತೆ ಬಗ್ಗಿರುವ.

Arc'tic (ಆರ್ಕ್‌ಟಿಕ್) a. of the north pole. ಉತ್ತರಧ್ರುವದ, ಉತ್ತರಕೇಂದ್ರಿಯ.

Arcturus (ಆರ್ಕ್‌ಟ್ಯೂರಸ್) n. brightest star in the Bootes constellation. ಸ್ವಾತಿ ನಕ್ಷತ್ರ.

Arcuate, Arcuated (ಆರ್ಕ್ಯುಏಟ್, ಆರ್ಕ್ಯುಏಟೆಡ್) a. bent like a bow. ಬಿಲ್ಲಿನಂತೆ ಬಗ್ಗಿರುವ.

Ar'dent (ಆರ್ಡೆಂಟ್) a. eager, earnest, passionate. ಉತ್ತಾಹಿ, ಹುಮ್ಮಸಿಗ, ಉತ್ಸುಕ, ಕುತೂಹಲಿ, ವ್ಯಗ್ರ.

Ardour (ಆರ್ಡರ್) n. eagerness, warmth, enthusiasm. ಉದ್ರೇಕ, ಆತುರ, ತವಕ, ಹುಮ್ಮಸ್ಸು, ಹುರುಪು.

Ardu'ous (ಆರ್ಡ್ಯುಅಸ್) a. hard, strenuous. ಕಷ್ಟವಾದ, ಪ್ರಯಾಸಕರ.

Arduosness (ಆರ್ಡುಅಸ್‌ನೆಸ್) n. difficulty, laboriousness. ದುಸ್ಸಾಧ್ಯತೆ, ಕಠಿಣತೆ.

A'rea (ಏರಿಅ) n. extent of surface, region. ಅಂಗಳ, ಕ್ಷೇತ್ರಫಲ, ಪ್ರದೇಶ, ಮೈದಾನ.

Ar'eca (ಅರಿಕಾ) n. betelnut palm. ಅಡಿಕೆ ಮರ.

Arefaction (ಆರಿಫಾಕ್‌ಶನ್) n. the act of drying. ಒಣಗಿಸುವಿಕೆ.

Ar'ena (ಅರೀನಾ) n. scene of conflict. ಸಮರಭೂಮಿ, ಯುದ್ಧರಂಗ, ರಂಗಸ್ಥಳ.

Areola (ಅರೀಯೊಲ) n. interslice in tissue. ನರಗಳ ನಡುವಣ ಪ್ರದೇಶ.

Arenaceous (ಆರಿನೇಷಸ್) a. sandy, like sand. ಮರಳಿನ, ಮರಳಿನಂತಿರುವ.

Arete (ಅರೇಟ್) n. sharp mountain ridge. ಬೆಟ್ಟದ ಕಡಿದಾದ ಏಣು.

Argent (ಆರ್ಜೆಂಟ್) n. & a. silver, silvery. ಬೆಳ್ಳಿ, ರಜತ.

Argentine (ಅರ್ಜೆಂಟೈನ್) a. silvery, like silver. ಬೆಳ್ಳಿಯಂತಿರುವ.

Argali (ಆರ್ಗಲಿ) n. a wild sheep of Asia. ಏಷ್ಯಾದ ಒಂದು ಬಗೆಯ ಕಾಡು ಕುರಿ.

Ar'gil (ಆರ್ಜಿಲ್) n. potter's clay. ಕುಂಬಾರನ ಮಣ್ಣು, ಜೇಡಿಮಣ್ಣು.

Argle-bargle (ಆರ್ಗಲ್-ಬಾರ್ಗಲ್) n & vi. a famous debate. ವಾಗ್ವಾದ ಮಾಡು, ಚರ್ಚೆ, ವಾಕ್ಕಲಹ.

Ar'gol (ಆರ್ಗಲ್) n. tartar got from wine which ferments. ದ್ರಾಕ್ಷಾರಸದ ಒಂಡು.

Argon (ಆರ್ಗಾನ್) n. an inert gas. ಒಂದು ಜಡ ಅನಿಲ.

Ar'gosy (ಆರ್ಗೋಸಿ) n. a large merchant ship. ದೊಡ್ಡ ವ್ಯಾಪಾರದ ಹಡಗು.

Argot (ಆರ್ಗೊ) n. slang language, especially spoken by thieves, jargon. ಕಳ್ಳರ ಸಾಂಕೇತಿಕ ಭಾಷೆ, ಅರ್ಥವಾಗದ ಭಾಷೆ.

Argue (ಆರ್ಗ್ಯೂ) vt. i. discuss, prove reason. ಚರ್ಚೆಮಾಡು, ತರ್ಕಮಾಡು, ವಾದಮಾಡು, ವಿವೇಚನೆಮಾಡು.

Arg'ument (ಆರ್ಗ್ಯುಮೆಂಟ್) n. reason offered, debate, summary of book. ಯುಕ್ತಿ ಪ್ರಮಾಣ, ವಿತರ್ಕ, ಚರ್ಚೆ, ಪುಸ್ತಕದ ಸಾರಾಂಶ.

Argumenta'tion (ಆರ್ಗ್ಯುಮೆನ್ಟೇಶನ್) n. debate. ವಾದವಿವಾದ, ಚರ್ಚೆ, ತರ್ಕ.

Argumenta'tive (ಆರ್ಗ್ಯುಮೆನ್ಟೆಟಿವ್) a. fond of arguing. ಚರ್ಚಾಸಕ್ತ, ವಾದಪ್ರಿಯ, ವಿವಾದಶೀಲ.

Argu's (ಆರ್ಗಸ್) a. fabulous person with hundred eyes. ಸಹಸ್ರಾಕ್ಷ, ಇಂದ್ರ, a. eyed. ಮೈಯೆಲ್ಲ ಕಣ್ಣುಳ್ಳವ.

Argute (ಆ ರ್ ಗ್ಯೂ ಟ್) a. sharp, shrill. ಚುರುಕು, ತೀಕ್ಷ್ಣ, ಕರ್ಕಶ.

Aria (ಆರಿಯ) n. tunes. ರಾಗ.

Ariel (ಏರಿಯಲ್) n. species of gazelle. ಒಂದು ಜಿಂಕೆಯ ಜಾತಿ.

Ariose (ಆ ರಿ ಯೋ ಸ್) a. musical. ಇಂಪಾಗಿರುವ.

A'rid (ಅ̆ ರಿ ಡ್) a. uninteresting, dry, parched. ನೀರಸ, ಶುಷ್ಕ, ಬತ್ತಿದ, ರುಕ್ಷ.

Arid'ity (ಆರಿಡಿಟಿ) n. dryness. ಅರಬು, ರುಕ್ಷತೆ, ಒಣಕಲು.

A'ries (ಏರ್ಈಜ್) n. the ram, the first sign of the zodiac. ಮೇಷರಾಶಿ.

Aright' (ಅರೈಟ್) adv. rightly. ಸರಿಯಾಗಿ, ಸರಳವಾಗಿ, ತಪ್ಪದೆ, ನ್ಯಾಯವಾಗಿ.

Arise' (ಅ ರೈ ಜ್) v. i. rise up. appear, spring up, occur. ಕಾಣು, ಉದಯಿಸು, ಏರು, ಏಳು, ಅಡರು, ಮೂಡು.

Arista (ಅರಿಸ್ಟ) n. the beard of certain grains and grasses. ಕೆಲವು ಧಾನ್ಯಗಳ ಮತ್ತು ಹುಲ್ಲುಗಳ ಊಬು.

Aristate (ಅರಿಸ್ಟೇಟ್) a. bearded. awned. ಊಬುಳ್ಳ.

Aristoc'racy(ಅ̆ರಿಸ್ಟಾಕ್ರಸಿ)p. government by the best citizens, nobility. ಕುಲೀನರ ಪ್ರಭುತ್ವ, ವೈಭವಶಾಲಿಗರು, ಕುಲೀನರು, ಶ್ರೀಮಂತರು.

Aristocrat(ಅ̆ರಿಸ್ಟೊಕ್ರ̆ಟ್)n. a haughty person, a nobleman. ಗರ್ವಿಷ್ಠ, ವೈಭವಶಾಲಿ, ಶ್ರೀಮಂತ.

Aristology (ಅರಿಸ್ಟಾಲೊಜಿ) n. science of food. ಭೋಜನಶಾಸ್ತ್ರ.

Aristotelian ಅ̆ರಿಸ್ಟೋಟೀಲಿಯನ್) adj. pertaining to the Greek philosopher Aristotle. ಗ್ರೀಕ್ ತತ್ವಜ್ಞ ಅರಿಸ್ಟಾಟಲನಿಗೆ ಸಂಬಂಧಪಟ್ಟ.

Arithmancy (ಅ̆ರಿತ್ಮ್ಯಾ̆ನ್ಸಿ) n. prediction by numbers. ಸಂಖ್ಯಾಶಕುನ.

Arithmetic (ಅ ರಿ ತ್ ಮೆ ಟಿ ಕ್) n. science of numbers. computation. ಅಂಕಗಣಿತ, ಸಂಖ್ಯಾವಿದ್ಯೆ, ಲೆಕ್ಕ.

Arithmeti'cal (ಅರಿತ್ಮೆಟಿಕಲ್) a. of arithmetic. ಅಂಕಗಣಿತದ, ಲೆಕ್ಕದ.

Arithmeti'cian (ಅರಿಥ್ಮಿಟೀಶನ್) n. one skilled in arithmetic. ಗಣಿತಜ್ಞ, ಅಂಕಶಾಸ್ತ್ರಜ್ಞ.

Ark (ಆರ್ಕ್) n. wooden chest, covered floating vessel. ಪೆಟ್ಟಿಗೆ, ನಾವೆ.

Arm (ಆರ್ಮ್) n. upper limb of human body, sleeve, branch (plu) weapons. ರಟ್ಟೆ, ತೋಳು, ರೆಂಬೆ, ಕೊಂಬೆ. ಟೊಂಗೆ, ಶಸ್ತ್ರ, ಆಯುಧಗಳು, at a' s. length, aloof. ದೂರ, ಬೇರೆಯಾಗಿ, with open a.s.cordially. ಸಂತೋಷದಿಂದ.

Arma'da (ಆರ್ಮೇಡಾ) n. fleet of warships. ನೌಕಾಸೇನೆ, ನೌಕಾಬಲ.

Armadillo (ಆರ್ಮಡಿಲೊ) n. a.burrowing animal of South America. ದಕ್ಷಿಣ ಅಮೇರಿಕದ ಒಂದು ಕೊರೆಯುವ ಪ್ರಾಣಿ.



Armadillo

Arm'ageddon (ಆರ್ಮಗೆಡನ್) n. the final and terrible conflict among nations. ಮಹಾವಿಪ್ಲವವಾಗುವ ಅಂತಿಮ ಯುದ್ಧ.

Arm'ament(ಆರ್ಮಮೆಂಟ್) n. armed forces, military equipments. ಯುದ್ಧಸನ್ನದ್ಧ ಸೇನೆ, ಯುದ್ಧ ಶಸ್ತ್ರಾಸ್ತ್ರಗಳು.

Arm'ature (ಆ ರ್ಮ ಚ ರ್) n. arms, armour. ಕವಚ, ಮೈಜೋಡು.

Armchair (ಆರ್ಮ್‌ಛೇರ್) n. chair with arms to support arms or elbows. ಕೈಗಳನ್ನು ಇಟ್ಟುಕೊಂಡು ಕೂಡಬಹುದಾದ ಆರಾಮ ಕುರ್ಚಿ.



Armchair

Armillary (ಆರ್ಮಿಲರಿ) a. pertaining to bracelets. ವಲಯ ಆಕಾರವುಳ್ಳ.

Arm'istice (ಆರ್ಮಿಸ್ಟಿಸ್) n. suspension of hostilities, truce. ತಾತ್ಕಾಲಿಕ ಸಂಧಿ, ಯುದ್ಧ ವಿರತಿ.

Arm'let (ಆರ್ಮ್‌ಲೆಟ್) n. a band worn round arm. ಕೈಕಡಗ, ಕೇಯೂರ, ಕಂಕಣ, ತೋಳಂದಿಗೆ, ಬಾಪುರಿ.

Armor'ial (ಆರ್ಮೋರಿಯಲ್) a. pertaning to heraldic arms. ಕುಲ ಬಿರುದಿನ ಆಯುಧಗಳಿಗೆ ಸಂಬಂಧಿಸಿದ.

Armour (ಆರ್ಮರ್) n. defensive arms or dress. ಯುದ್ಧಕವಚ, ತನುತ್ರಾಣ, ಮೈಜೋಡು.

Arm'ourer (ಆರ್ಮರರ್) n. maker of arms, person in charge of arms. ಶಸ್ತ್ರಕಾರ, ಶಸ್ತ್ರಶಾಲೆಯ ಅಧಿಕಾರಿ.

Armoury (ಆರ್ಮರಿ) n. place wehre arms are kept. ಶಸ್ತ್ರಶಾಲೆ, ಆಯುಧಾಗಾರ.

Arm'pit (ಆರ್ಮ್‌ಪಿಟ್) n. hollow under shoulder. ಕಂಕುಳು, ಬಾಹುಮೂಲ

Arm'y (ಆರ್ಮಿ) n. land force of a state, vast number. ದಂಡು, ಸೇನೆ, ಪಡೆ, ದಳ, full army. ಚತುರಂಗಬಲ.

Arnica (ಆರ್ನಿಕಾ) n.genus of plants including mountain tobacco. ಬೆಟ್ಟದ ಹೊಗೆಸೊಪ್ಪು ಜಾತಿಯ ಸಸ್ಯವರ್ಗ.

Aroint (ಅರಾಯಿಂಟ್) vi. get away. begone. ತೊಲಗು.

Aro'ma (ಅರೋಮಾ) n. fragrance, sweet smell. ಸುವಾಸನೆ, ಸುಗಂಧ, ಪರಿಮಳ.

Aromat'ic (ಅರೋಮಾಟಿಕ್) a. fragrant. ಸುಗಂಧದ, ಸುವಾಸಿತ, ಸುರ ಯುತ.

Around (ಅರೌಂಡ್) ad. & prep. al round, on all sides. ಸುತ್ತುಮುತ್ತು ಬಳಸಿಕೊಂಡ, ಸುತ್ತಲೂ, ಎಲ್ಲಕಡೆಗೂ.

Arouse' (ಅರೌಜ್) vt. rouse, sti up. ಎಬ್ಬಿಸು, ಕೆಣಕು, ಹುರಿದುಂಬಿಸು ಪ್ರೇರಿಸು, ಉದ್ರೇಕಿಸು, ಕೆರಳಿಸು.

Arquebus (ಆರ್ಕ್ವಿಬಸ್) n. a typ of portable gun used in earl days. ಒಂದು ಹಳೆಯ ತರಹದ ಬಂದೂ

Ar'rack (ಅ̆ರಕ್) n. any eastern fermented juice. ಸಾರಾಯಿ, ಹೆಂಡ, ಕಳ್ಳು,

Arraign (ಅರ್ರೈನ್) vt. i. accuse, fin fault with, indict. ತಪ್ಪುಹೊರಿಸು, ದೋಷಾರೋಪಣೆಮಾಡು, ವಿಚಾರಣೆಗೆ ಗು ಪಡಿಸು.

Arrange' (ಅರೇಂಜ್) vt. i. put int order, settle, form plans. ಕ್ರಮಪಡಿಸು, ಏರ್ಪಡಿಸು, ಅಣಿಮಾಡು, ಸಾವರಿಸು, ವ್ಯವಸ್ಥೆ ಮಾಡು, (ಕಾರ್ಯಕ್ರಮ) ರಚಿಸು

Arrange'ment (ಅರೇಂಜ್‌ಮೆಂಟ್) n. settlement, classification (pl. plans. ವ್ಯವಸ್ಥೆ, ಏರ್ಪಾಟು, ನಿರ್ಣಯ, ಕ್ರಮದಲ್ಲಿಡೋಣ, ಕಾರ್ಯಕ್ರಮರಚನೆ.

Ar'rant (ಅ̆ರನ್ಟ್) a. notorious, very bad, thorough. ಅತಿ ದುಷ್ಟ, ಅ ನಿಂದ್ಯ, ನಿಕೃಷ್ಟ, ಕೇವಲ, ಕಡು, ಅತಿ, ಅತ್ಯಂತ.

Ar'ras (ಅ̆ರಾಸ್) vt. tapestry made at Arras, a town in France "ಬೂಟೆದಾರ" ವಸ್ತ್ರ, ಫ್ರಾನ್ಸಿನ ಅರಾಸ್ ಪಟ್ಟಣದಲ್ಲಿ ತಯಾರಿಸಿದ ಪರದೆ.

Array (ಅರೆ) n. material, order, dress. ರಚನೆ, ವಿನ್ಯಾಸ, ವ್ಯೂಹ, ತೊಡವು, ಉಡುಪು, ಪೋಷಾಕು. vt. equip, adorn, arrange. ಶೃಂಗರಿಸು, ಅಲಂಕರಿಸು, ಅಳವಡಿಸು, ಸಜ್ಜುಗೊಳಿಸು

Arrears (ಅರಿಯರ್ಸ್) n unpaid debts ಬಾಕಿ, ಹಿಂದಿನಕಡ, ಹಿಂದೆನಿಂತ ಕೆಲಸ.

Arrearage (ಅರಿಯರೇಜ್) n· that which stands as arrears· ಸಾಲದ ಬಾಕಿ

Arrect (ಅರೆಕ್ಟ್) a· on the alert, ears pricked up· ಜಾಗ್ರತೆಯಿಂದಿರುವ, ಕಿವಿ ಮೇಲಕ್ಕೆತ್ತಿದ.

Arrest (ಅರೆಸ್ಟ್) vt· stop, seize by authority, catch (the attention) ತಡೆ, ಅಟಕಾಯಿಸು, ಹಿಡಿ, ಕೈದುಮಾಡು, ಪ್ರತಿಬಂಧಿಸು, ಆಕರ್ಷಿಸು, n·stoppage· seizure by warrant· ತಡೆಗಡೆ, ಖೈದು, ರಾಜಾಜ್ಞೆಯಿಂದ ಹಿಡಿಯುವುದು.

Arride (ಅರೈಡ್) vt· to please, to gratify· ಸಂತೋಷಪಡಿಸು.

Arris (ಅರಿಸ್) n· sharp edge formed when two planes contact angularly· ಎರಡು ಅಂಚು ಸೇರಿದರೆ ಆಗುವ ಏಣು.

Arriv'al (ಅರೈವಲ್) n. appearance on scene. ಬರೋಣ, ತಲುಪುವಿಕೆ, ಆಗಮನ.

Arrive' (ಅರೈವ್) vt. reach destination. come to place. ತಲುಪು, ಮುಟ್ಟು, ಬಂದುಸೇರು, ಬರು.

A'rrogance (ಅರೋಗನ್ಸ್) n. haughtiness. ಅಹಂಕಾರ, ಸೊಕ್ಕು, ಬಿಂಕ, ತಲೆ ಕೊಬ್ಬು.

A'rrogant (ಅರೋಗಂಟ್) adv. proud and haughty. ಗರ್ವದ, ಸೊಕ್ಕಿನ, ಬಿಂಕದ, ಅಹಂಕಾರದ. ಹಮ್ಮಿನ.

Ar'rogate (ಅರೋಗೇಟ್) vt. claim unjustly,assume· ಗರ್ವದಿಂದ ಕೇಳು, ಬಡಾಯಿಯಿಂದ ವಹಿಸಿಕೊಳ್ಳು.

Arrogation(ಅರೋಗೇಶನ್) n. undue assumption. ಗರ್ವ, ದುರಾಗ್ರಹ, ಬಡಾಯಿ.

A'rrow (ಅರೋ) n. pointed stick shot from bow, indication, mark. ಅಂಬು, ಬಾಣ, ಬಾಣದಗುರುತು.

A'rrowroot(ಅರೋರೂಟ್)n. plant from which nutritious starch is perpared. ಕೂವೆಹಿಟ್ಟು, ಬಾಣಗಡ್ಡೆಗಿಡ.

Arse (ಆರ್ಸ್) buttocks. ಕುಂಡಿ.

Ar'senal (ಆರ್ಸಿನಲ್) n. place where war materials are manufactured or stored. ಆಯುಧಶಾಲೆ, ಶಸ್ತ್ರಗೃಹ, ಮದ್ದಿನಮನೆ.

Ars'enic (ಆರ್ಸ್ನಿಕ್) n. a semimetallic poison. ಸಂಬಳಕಾರ, ಶಂಖಪಾಷಾಣ, ಮಣಿಶಿಲೆ ಸೋಮಲ, ತಾಳಕ. ಅರದಾಳ.

Arsis(ಆರ್ಸಿಸ್)n. accented syllable in scansion· ಸ್ವರದ ಒತ್ತುಳ್ಳ ಅಕ್ಷರ.

Ars'on (ಆರ್ಸನ್) n· wilful burning of houses or other property. ಮನೆಗೆ ಕಿಚ್ಚಿಡೋಣ.

Arsy-Varsy (ಆರ್ಸಿ-ವಾರ್ಸಿ) adv. topsy-turvy· ತಲೆಕೆಳಗಾಗಿ.

Art (ಆರ್ಟ್) n. skill, knowledge, ಚಾತುರ್ಯ, ನಿಪುಣತೆ, ವಿದ್ಯೆ, ಕಲಾಕೌಶಲ್ಯ, ಯುಕ್ತಿ. fine. a. s· music, painting, &c. ಲಲಿತಕಲೆ, ಸಂಗೀತ, ಕಾವ್ಯ. ಶಿಲ್ಪ, ಚಿತ್ರಕಲೆಗಳು. black a. ಮಾಟ, ಮೋಡಿ, ಮಂತ್ರ. artless. ನಿಷ್ಕಪಟ.

Artefact, Artifact (ಆರ್ಟಿಫಾಕ್ಟ್) n. ಮನುಷ್ಯನಿಂದ ನಿರ್ಮಿತವಾದ ವಸ್ತು.

Arter'ial (ಆರ್ಟೀರಿಅಲ್)a. pertaining to an artery. ಶುದ್ಧರಕ್ತನಾಡಿಯ.

Arteriatomy (ಆರ್ಟೀರಿಯೋಟಮಿ) n. opening or dissection of an artery. ಧಮನಿಯನ್ನು ಕತ್ತರಿಸುವ ಕ್ರಿಯೆ.

Ar'tery (ಆರ್ಟರಿ) n. any of the tubes which convey blood from the heart. ಶುದ್ಧರಕ್ತವಾಹಿನಿ, ಧಮನಿ, ನಾಡಿ.

Artesian (ಆರ್ಟೀಸನ್)a. like a well first dug in Artois, an old French province. ಫ್ರಾನ್ಸಿನ ಆರ್ಟ್ವಾ ಪ್ರಾಂತದ



Artesian well

ಭಾವಿಯಂತೆ. A. well. a well first dug in Artois. ಆರ್ಟೀಸಿಯನ್ ಭಾವಿ.

Art′ful (ಆರ್ಟ್‌ಫುಲ್) a. crafty, cunning. ಕಪಟದ, ಕುಯುಕ್ತಿಯ, ಕೃತ್ರಿಮದ.

Arthritis (ಆರ್ತ್ರೈಟಿಸ್) n. gout, inflammation in the joints. ವಾತರೋಗ, ಸಂಧಿವಾತ.

Artichoke (ಆರ್ಟಿಚೋಕ್) n. a kind of plant. ಒಂದು ಜಾತಿಯ ಸಸ್ಯ.



Artichoke

Article (ಆರ್ಟಿಕಲ್) n. substance, commodity, clause of agreement, treaty, &c., short literary composition ; a part of speech. ಪದಾರ್ಥ, ಸರಕು, ದಿನಸು. ನಿಬಂಧನೆ, ಲೇಖನ, ಉಪಪದ, ನಿರ್ದೇಶಕ ಪದ.

Artic′ular (ಆರ್ಟಿಕ್ಯುಲರ್) a of the joints. ಸಂಧಿಗತ, ಕೀಲುಳ್ಳ; ಸಂದುಕಟ್ಟಿನ.

Articulate (ಆರ್ಟಿಕ್ಯುಲೇಟ್) a. distinct, having joints. ಸ್ಪಷ್ಟ, ಕೀಲು, ಕೀಲುಳ್ಳ. vt. i. speak distinctly, connect by joints. ಸ್ಪಷ್ಟ ಉಚ್ಚರಿಸು, ಕೀಲು ಸೇರಿಸು.

Articulation (ಆರ್ಟಿಕ್ಯುಲೇಶನ್) n. a distinct utterance, joining. ಸ್ಪಷ್ಟೋಚ್ಚಾರಣೆ, ಸಂದು, ಕೀಲುಗಂಟು, ಸಂಧಿ.

Artifact (ಆರ್ಟಿಫಾಕ್ಟ್) n. human creation. ಮನುಷ್ಯನಿಂದ ನಿರ್ಮಿತವಾದ ವಸ್ತು.

Artifice (ಆರ್ಟಿಫಿಸ್) n. trick, cunning, contrivance. ತಂತ್ರ, ಉಪಾಯ, ಕೃತ್ರಿಮ, ಹರವು, ಯುಕ್ತಿ, ಕಲ್ಪನೆ.

Artifi′cer (ಆರ್ಟಿಫಿಶರ್) n. workman craftsman, inventor. ಕೆಲಸಗಾರ, ಶಿಲ್ಪಿ, ನವಯೋಜಕ, ಕಲ್ಪಕ.

Artificial (ಆರ್ಟಿಫಿಶಲ್) a. mad by art; not natural. ಕೃತಕ, ಕೃತ್ರಿಮ ಅಸ್ವಾಭಾವಿಕ, ನಿರ್ಮಿತ.

Artill′ery (ಆರ್ಟಿಲರಿ) n. cannon ordnance, branch of army ಸೇನೆಯ ಫಿರಂಗಿದಳ.

Artisan′ (ಆರ್ಟಿಸಾನ್) n. mechanic craftsman. ಶಿಲ್ಪಿ, ಕಸಬುದಾರ, ಕಾರೆ ಗಾರ.

Art′ist (ಆರ್ಟಿಸ್ಟ್) n. one who prac tises fine arts ಚಿತ್ರಕಾರ, ಶಿಲ್ಪಿ ಗಾಯಕ, ಲಲಿತಕಲೋಪಾಸಕ.

Artiste′ (ಆರ್ಟಿಸ್ಟ್) n. professiona singer, dancer, &c. ಗಾಯಕ, ನಾಟ ಗಾರ.

Artist′ic (ಆರ್ಟಿಸ್ಟಿಕ್) a. pertaining to art, beautiful. ಕೌಶಲ್ಯದ ಚಮತ್ಕೃತಿಯ, ಕಲಾನೈಪುಣ್ಯದ, ಸುಂದರ

Arti′stry (ಆರ್ಟಿಸ್ಟ್ರಿ) n. skill of a artist. ಕಲಾವಿದನ ಕೌಶಲ್ಯ.

Art′less (ಆರ್ಟ್‌ಲೆಸ್) n. lackin art, simple, guileless. ನಯವಿಲ್ಲದ ನಿಷ್ಕಪಟ, ಸರಳ, ಅಕುಟಿಲ, ಒರಟ.

Arty (ಆರ್ಟಿ) a. of outward show showy. ಬಾಹ್ಯಾಡಂಬರದ, ಬರಿನಾಜೂಕಿ

Arval (ಆರ್ವಲ್) a. pertaining t tilled soil. ಉತ್ತನೆಲದ.

Aryan (ಆರ್ಯನ್) n. & a. belongin to the Indo-European famil ಆರ್ಯವರ್ಗಕ್ಕೆ ಸೇರಿದ.

As (ಆ̆ಜ್) adv. & conj. similarl while, when, since, ಹಾ ರೀತಿಯಾಗಿ, ಅಂತೆ, ಆಗ, ಅಂದರೆ, ಅಷ ಕಾರಣದಿಂದ. rel pron. that, wh which. ಯಾರು, ಯಾವುದು. a. wel ಸಹ. a. yet ಈ ವರೆಗೆ.

Asafoeti′da (ಅಸಫೋಟಿಡಾ) n. kin of resinous gum with smell garlic. ಹಿಂಗು, ಇಂಗು.

Asbes′tos (ಆ̆ಸ್‌ಬೆಸ್ಟೋಜ್) n. a fil rous mineral. ಕಲ್ನಾರು.

Ascarides (ಆಸ್ಕಾರಿಡೀಸ್) n. genus of intestinal worms. ಜಂತುಹುಳ.

Ascend' (ಅಸೆಂಡ್) vt i. rise, climb, mount. ಏರು, ಹತ್ತು.

Ascend'ance;-ancy (ಅಸೆಂಡನ್ಸ್, ಅನ್ಸಿ) n. sway, powerful influence. ಏಳಿಗೆ, ಪ್ರಬಲತೆ. ಪ್ರಭುತ್ವ, ಪ್ರಾಬಲ್ಯ.

Ascend'ant,-ent (ಅಸೆಂಡೆಂಟ್) n. predominance. ಶ್ರೇಷ್ಠತೆ, ಪ್ರಾಧಾನ್ಯ. a. rising predominant. ಮೂಡುವ, ಏರುವ, ಶ್ರೇಷ್ಠ, ಉತ್ತಮ, ಪ್ರಮುಖ.

Ascen'sion (ಅಸೆನ್ಶನ್) n. a going up. ಏರಿಕೆ, ಆರೋಹಣ.

Ascent (ಅಸ್ಸೆಂಟ್) n. rising slope of hill. ಏರುವಿಕೆ, ದಿಣ್ಣೆ, ಏರು. ಮೇಡು.

Ascertain' (ಅಸರ್ಟೇನ್) vt find out, make certain. ಅರಿತುಕೋ, ಗೊತ್ತುಹಚ್ಚು, ವಿಚಾರಿಸು, ನಿಶ್ಚಯಿಸು.

Ascertainable (ಅಸರ್ಟೇನ್ಎಬಲ್) a capable of being ascertained. ಗೊತ್ತುಹಚ್ಚಲು ಯೋಗ್ಯವಾದ.

Ascertain'ment (ಅಸ್ಸರ್ಟೇನ್‌ಮೆಂಟ್) n. making certain. ನಿರ್ಣಯ, ನಿರ್ಧಾರ.

Ascet'ic (ಅಸೆಟಿಕ್) n. a hermit. ಸಂನ್ಯಾಸಿ, ವೈರಾಗಿ, ಯತಿ. a. severe in self-discipline. ವಿರಕ್ತ, ತಪೋನಿಷ್ಠ.

Ascet'icism (ಅಸ್ಸೆಟಿಸಿಝಮ್) n. the practice of self denial. ವೈರಾಗ್ಯ, ತಪಶ್ಚರ್ಯ, ಸಂನ್ಯಾಸ, ವಿರಕ್ತಿ.

Ascites (ಅಸೈಟೀಸ್) n. dropsy. ಮಹೋದರ, ಜಲೋದರ.

Ascribable (ಅಸ್ಕ್ರೈಬಬಲ್) a assignable. ಆಪಾದಿಸಲು ಯೋಗ್ಯವಾದ.

Ascribe' (ಅಸ್ಕ್ರೈಬ್) vt. attribute, impute, assign ದೋಷ ಹೊರಿಸು, ಎಣಿಸು, ಆರೋಪಿಸು.

Ascrip'tion (ಅಸ್ಕ್ರಿಪ್ಶನ್) n. act of ascribing. ದೋಷಾರೋಪಣೆ.

Aseity (ಅಸೀಯಿಟಿ) n. underived existence. ನಿರುತ್ಪನ್ನವಾದ ಅಸ್ತಿತ್ವ.

Asepsis (ಅಸೆಪ್ಸಿಸ್) n. absence of harmful bacteria. ವಿಷಾಣುಗಳು ಇಲ್ಲದಿರುವುದು.

Aseptic (ಅಸೆಪ್ಟಿಕ್) a. free from poisonous bacteria. ವಿಷಾಣುಗಳಿಂದ ರಹಿತ.

Ash (ಆಶ್) n. hard wood tree. residue of anything burnt. ಒಂದು ಬಗೆ ತೇಗದ ಮರ, ಭಸ್ಮ, ಬೂದಿ. (plu.) the remains of the human body when burnt. ಶವ ದಹನವಾದ ಬಳಿಕ, ಉಳಿದ ಶರೀರದ ಭಸ್ಮ ಮತ್ತು ಅಸ್ಥಿಗಳು.

Asexual (ಅಸೆಕ್ಶ್ಯುಅಲ್) a. without sex. ಲಿಂಗರಹಿತ, ನಿರ್ಲಿಂಗ.

Asexuality (ಅಸೆಕ್ಶ್ಯುಆಲಿಟಿ) n. sexlessness. ಪುಂಸ್ತ್ರೀಲಿಂಗ ರಾಹಿತ್ಯ.

Ashamed (ಅಶೇಮ್ಡ್) abashed, feelig shame. ನಾಚಿದ, ಲಜ್ಜಿತ, ಮುಖಭಂಗಿತ.

Ashen (ಆಶೆನ್) a. made of ash. ಬೂದುಬಣ್ಣದ.

Ashlar (ಆಶ್ಲರ್) n. square shaped hewn stone. ಚದರವಾಗಿ ಸೀಳಿದ ಕಲ್ಲು.

Ashore' (ಅಶೋರ್) adv on shore. ದಡಕ್ಕೆ, ತೀರಕ್ಕೆ, ದಡದ ಮೇಲೆ

Barring (ಬಾರಿಂಗ್) prep. except, not including. ಹೊರತು, ಉಳಿದು, ವಿನಾ.

Ba'rrister(ಬಾ̆ರಿಸ್ಟರ್) n. a superior court lawyer. ಮೇಲು ತರಗತಿಯ ವಕೀಲ, ಬ್ಯಾರಿಸ್ಟರು.

Ba'rrow (ಬಾ̆ರೋ) n. two wheeled handcart. ಕೈಬಂಡಿ, ಕೈಗಾಡಿ.

Bart'er (ಬಾರ್ಟರ್) vt.i. exchange, (goods, rights &c.)ಪದಾರ್ಥ ಬದಲಾವಣೆಮಾಡು, ಸಾಟಿಮಾಡು, ಮಾರಿಸು.

Bartisan (ಬಾರ್ಟಿಜಾನ್) n. parapet or battlement. ದುರ್ಗದ ಕೈಪಿಡಿ, ಗೋಡೆ, ಬುರುಜು.

Bart'on (ಬಾರ್ಟನ್) n. farm yard. ಹೊಲದಮನೆ, ಅಂಗಳ.

Baryta(ಬರೈಟ) n. oxide of barium. ಬೇರಿಯಂ ಆಕ್ಸೈಡು.

Basalt (ಬಾ̆ ಸಾ ಲ್ಟ್) n. a kind of brown rock. ಕಂದುಬಣ್ಣದ ಅಗ್ನಿಶಿಲೆ.

Bascule (ಬಾ̆ಸ್‌ಕ್ಯೂಲ್) n. a kind of lever or drawbridge. ಎತ್ತು ಸೇತುವೆಯಲ್ಲಿ ಉಪಯೋಗಿಸುವ ಸನ್ನೆ.

Base (ಬೇಸ್) a. mean, of inferior value. ನೀಚ, ತುಚ್ಛ, ಅಲ್ಪ, ಹೀನ. n. bottom, foundation. ತಳ, ಅಡಿ, ಪಾಯ, ಗದ್ದುಗೆಗಲ್ಲು, ಪೀಠ, ಅಸ್ತಿಭಾರ. vt. rest on. ಆಧಾರಿಸು, ಸ್ಥಾಪಿಸು.

Base-ball (ಬೇಸ್-ಬಾಲ್) n. the American game of ball. ಅಮೇರಿಕೆದಲ್ಲಿ ಪ್ರಚಲಿತವಾಗಿರುವ ಬೇಸ್ ಬಾಲ್ ಚೆಂಡಾಟ.

Base'born(ಬೇಸ್‌ಬಾರ್ನ್) a. illegitimate. ಜಾರಜ, ಹಾದರಕ್ಕೆ ಹುಟ್ಟಿದ.

Base'less(ಬೇಸ್‌ಲೆಸ್)a groundless, unfounded. ಬುಡವಿಲ್ಲದ, ನಿರಾಧಾರವಾದ.

Base'ment(ಬೇಸ್‌ಮೆಂಟ್)n.ground-floor. ತಳಮನೆ, ತಳಪದಿ, ಮೇಲ್ಪಾಯ.

Bash(ಬಾ̆ಷ್) vt.strike to smash in. ನೆಲಕ್ಕಪ್ಪಳಿಸು.

Bash'ful (ಬಾ̆ಷ್‌ಫುಲ್)a. shy, sheepish. ನಾಚಿಕೆಯುಳ್ಳ, ಭಿಡೆಯುಳ್ಳ, ಪುಕ್ಕ, ಹೇಡಿ.

Bash'fulness (ಬಾ̆ಷ್‌ಫುಲ್‌ನೆಸ್) n. shyness, modesty. ನಾಚಿಕೆ, ಲಜ್ಜಾಶೀಲತೆ.

Basial (ಬೇಸಿಯಲ್)a. pertaining to a kiss. ಚುಂಬನಕ್ಕೆ ಸಂಬಂಧಿಸಿದ.

Ba'sic (ಬೇಸಿಕ್) a. of, at, forming the base, fundamental. ತಳಕ್ಕೆ ಸಂಬಂಧಿಸಿದ, ಆಧಾರಭೂತವಾದ.

Bas'il(ಬಾಸಿಲ್)n.an aromatic herb. ತುಳಸಿ, ತುಳಸಿಯ ಸಸ್ಯಜಾತಿ.

Basilar (ಬಾಸಿಲರ್)a. pertaining to the base. ಮೂಲದ,ಮೂಲಸ್ಥವಾದ.

Basilicon (ಬಸಿಲಿಕಾನ್) n. kinds of ointment. ಕೆಲವು ತರಹದ ಮುಲಾಮುಗಳು.

Ba'sin (ಬೇಸಿನ್)n. wide open vessel, dock, pond. ಅರಕಿನ ಚಟ್ಟಿ, ಬೋಗುಣಿ, ಬಾನೆ, ಗಂಗಾಳ, ತಾಂಬಾಣ, ರೇವು.

Ba'sis (ಬೇಸಿಸ್)n. foundation, first crinciple. ತಳಹದಿ,ಆಧಾರ, ಬುಡ, ಆದಿ, ಆಧಾರ ಮೂಲಭೂತ.

Bask(ಬಾಸ್ಕ್)vt. lie or sit warming in sunshine. ಕಾಯಿಸಿಕೊ, ಬೆಚ್ಚಗಿರು

Bas'ket (ಬಾಸ್ಕೆಟ್)n. wicker vessel made of plaited cane, &c. ಗೂಡೆ, ಮಂಕರಿ, ಬುಟ್ಟಿ, ಕುಕ್ಕೆ.

Baslard (ಬಾಸ್‌ಲಾರ್ಡ್) n. a small dagger, a girdle. ಸಣ್ಣ ಕಠಾರಿ.

Bason (ಬೇಸನ್) n. bench used for felting hats. ಟೋಪಿಗೆ ಉಣ್ಣೆ ತಟ್ಟುವುವಕ್ಕೆ ಉಪಯೋಗಿಸುವ ಕಾಲುಮಣೆ.

Bas'relief (ಬಾಸ್‌ರಿಲೀಫ್)n.shallow carving or sculpture on background. ಉಬ್ಬಿರುವ ಕೆತ್ತನೆ ಕೆಲಸ, ಅರೆ ಉಬ್ಬು ಚಿತ್ರ.

Bass (ಬಾಸ್) n. a fish, (in music) the base. ಸೀನೀರಿನ ಮೀನು,ಮಂದಸ್ವರ.

Basset (ಬಾಸೆಟ್)n. a kind of card-game. ಒಂದುತರದ ಇಸ್ಪೀಟಾಟ.

Bassinet (ಬಾ ಸಿ ನೆ ಟ್)n. a hooded wicker cradle, a kind of perambulator. ಛಾವಣಿಯಿರುವ ಬೆತ್ತದ ತೊಟ್ಟಿಲು.

Bas'tard(ಬಾಸ್ಟರ್ಡ್)a. born out side wedlock, n. illegitimate child. ಜಾರಜ, ಸೂಳೆಗೆ ಹುಟ್ಟಿದವನು, ಇಬ್ಬಂದಿ.

Baste (ಬೇಸ್ಟ್) vt. beat, tack, sew slightly. ಹೊಡೆ, ಚಚ್ಚು, ಟಾಕಿಹಾಕಿ ಹೊಲಿ.

Bastille (ಬಾ ಸ್ಟಿ ೀ ಲ್) n. fortress. prison. ಸೆರೆಮನೆ, ಕಾರಾಗೃಹ, ಹಳೆಯ ಕೋಟೆ.

Bastina'do (ಬಾಸ್ಟಿನೇಡೋ)vt. caning on soles of feet. ಅಂಗಾಲಿಗೆ ಬೆತ್ತದಿಂದಹೊಡಿ.

Bas'tion (ಬಾಸ್ಟಿಅನ್) n projection from a fortification. ಕೋಟೆಬುರುಜು.

Bat (ಬಾ ಟ್) n.a flat club, flying animal, 'ಕ್ರಿಕೆಟ್' ಆಟದಲ್ಲಿ ಚೆಂಡು ಹೊಡೆಯುವ ಚಪ್ಪಟೆಯಾದ ದಾಂಡು, ಕಣ್ಣುಕಪಟ,ಬಾವಲಿ, vt. use bat. ಕ್ರಿಕೆಟ್‌ನಲ್ಲಿ 'ಬ್ಯಾಟು' ಉಪಯೋಗಿಸು.



Bat

Batch (ಬಾಚ್) n. loaves baked at a time, group, collection of things. ಒಬ್ಬೆ, ತಂಡ, ಗುಂಪು, ವಸ್ತುಗಳ ಪಂಗಡ

Bate (ಬೇಟ್) vt. i. let down. fall off in force, deduct, ತಗ್ಗಿಸು, ಮಟ್ಟಾಗು, ಕುಗ್ಗಿಸು, ಕುಗ್ಗು, ನಿಯಮಿತ ಮಾಡು, ಕಳೆ.

Bath (ಬಾತ್) n. washing, place for bathing. ತೊಳೆಯುವುದು, ಸ್ನಾನಪಾತ್ರೆ, ಮಜ್ಜನ, ಸ್ನಾನಗೃಹ.

Bathe (ಬೇ ತ್) vt. i. wash in a bath, take a bath. ಮೀಯು, ಸ್ನಾನ ಮಾಡು, ತೊಳೆ, ನೆನೆಸು.

Bathometer (ಬ ಥಾ ಮೀ ಟ ರ್) n. instrument used in finding the

depth of water. ನೀರಿನ ಆಳಕಂಡು ಹಿಡಿಯುವ ಯಂತ್ರ.

Bathos (ಬೇತಾಸ್) n. anti-climax. ಉತ್ಕರ್ಷಭಂಗ,ಅತ್ಯಂತಗಂಭೀರಭಾವದಿಂದ ಹಾಸ್ಯಾಸ್ಪದವಾದ ಭಾವಕ್ಕೆ ಇಳಿಯುವುದು.

Bastiste (ಬೇಟಿಸ್ಟ್) n. fine, light fabric ತೆಳ್ಳನೆಯ ಬಟ್ಟೆ.

Bat'man(ಬಾಟ್ ಮನ್) n. warrant officer's servant. ಸೇನಾಧಿಕಾರಿಯ ಆಳು.

Bat'on(ಬಾಟನ್) n. a staff of office. ಅಧಿಕಾರಿಯ ದಂಡ, ಲಾಠಿ, ದೊಣ್ಣೆ.

Batrachia (ಬೆಟ್ರೇಕಿಯ) n. creature of the frog kind. ಕಪ್ಪೆಯ ಜಾತಿಯ ಪ್ರಾಣಿಗಳು.

Batrachian (ಬಟ್ರೇಕಿಯನ್) a. & n. of frog, froglike· ಕಪ್ಪೆಗೆ ಸಂಬಂಧಿಸಿದ, ಕಪ್ಪೆಯಂತಿರುವ.

Bat'ta (ಬಾಟ) n. extra allowance ಭತ್ಯ, ಪಡಿ, ವೇತನ.

Battal'ion (ಬಟಲಿಯನ್) n. body of men in battle, array. ಪಡೆ, ಸೇನಾ ಚಮೂ, ಪಟಾಲಂ.

Batt'en (ಬಾಟನ್) vt. i. grow fat, live in luxury, fasten with batter. ಕೊಬ್ಬಿಬೆಳೆ, ಸುಖದಲ್ಲಿ ಬೆಳೆ. ಹಲಗೆಗಳನ್ನು ಚೌಕದಲ್ಲಿ ಜೋಡಿಸು, n. piece of board. ಹಲಗೆ.

Batt'er (ಬಾಟರ್) vt. i. criticise severely, beat repeatedly. ಖಂಡಿಸು, ಹೊಡಿ, ಬಡಿ, ಹೊಡೆದು ಹೊಡೆದು ಮುರಿ.

Batt'ery (ಬಾಟರಿ) n a number of cannons, platform for guns apparatus for storing electricity. ಫಿರಂಗಿಗಳ ಗುಂಪು, ಬತೇರಿ, ಬುರುಜು, ವಿದ್ಯುಕ್ತ್ರವಾಹ ಸಾಧನ.

Batting (ಬಾಟಿಂಗ್) n. cotton sheets prepared for quilting. ರಜಾಯಿಗೆ ಹಾಕಲು ಹಾಳೆಗಳಾಗಿ ತಯಾರಿಸಿರುವ ಹತ್ತಿ.

Batt'le (ಬಾಟಲ್)n. a. contest between opposing armies. ಯುದ್ಧ, ಕಾಳಗ, ಕದನ, b. axe. ಗಂಡುಗೊಡಲಿ, ಚಂಡಾಯುಧ, b. field. ರಣರಂಗ, ಯುದ್ಧಭೂಮಿ, b. plane. ಯುದ್ಧ ವಿಮಾನ.

Battledore(ಬಾಟಲ್‌ಡೋರ್)n.a light bat· ಚೆಂಡಾಟದಲ್ಲಿ ಉಪಯೋಗಿಸುವ ಒಂದುಬಗೆಯ ಹಗುರವಾದ ದಾಂಡು.

Bat'tlement (ಬಾಟಲ್ಮೆಂಟ್) n. an indented parapet. ಕೋಟೆಯ ತೆನೆ, ಕೋಟೆಯ ಮೇಲಿನ ಕೈಪಿಡಿ ಗೋಡೆ.



Battlement

Bau'ble (ಬಾಬಲ್)n. a child's toy· ಮಗುವಿನ ಆಟದ ಸಾಮಾನು, ಅಲ್ಪವಸ್ತು.

Bauxite (ಬಾಕ್ಸೈಟ್) n. an ore of aluminium. ಒಂದು ಬಗೆಯ ಜೇಡಿಮಣ್ಣು.

Bawd (ಬಾಡ್) n. procuress. ಕುಂಟಲಗಿತ್ತಿ, ತಲೆಹಿಡಿಕಿ, ಕುಟ್ಟಿಣಿ.

Bawd'ry (ಬಾಡ್ರಿ) n. obscene talk, ಬಂಡುಮಾತು, ಅವಾಚ್ಯ.

Bawdy (ಬಾಡಿ) a. obscene. ಅಸಭ್ಯ; ಹೊಲಸು.

Bawl (ಬಾಲ್) vt. i. shout loudly. ಕೂಗು, ಕಿರುಚು, ಅರಚು, ಬೊಬ್ಬೆಹಾಕು.

Bawn (ಬಾನ್) n. cattle fold. ದನದಕೊಟ್ಟಿಗೆ.

Bay (ಬೆ) n. an inlet of the sea with a wider opening than a gulf. ಕೊಲ್ಲಿ, ಅಖಾತ. a. reddish brown· ಕೆಂಚಬಣ್ಣದ. v.bark ಬಗಳು, ಬೊಗಳು. driven to b. made desperate. ನಿರಾಶರಾಗಿ, ಹತಾಶರಾಗಿ.

Bay'onet (ಬಾಯೊನೆಟ್) n. stabbing instrument. ಕೋವಿಯ ತುದಿಗೆ ಸಿಕ್ಕಿಸುವ ಕಠಾರಿ, ಸನೀನು· v. stab with bayonet· ಸನೀನಿಂದ ತಿವಿ.


Bayonet

Bayard (ಬೆಯಾರ್ಡ್) n. a brave person· ವೀರಪುರುಷ.

Bays(ಬೇಸ್) n. honorary garland of victory. ವಿಜಯಮಾಲೆ.

Baysalt (ಬೆಸಾಲ್ಟ್) n. salt in crystalline form got in pits. ಹಳ್ಳಗಳಲ್ಲಿ ದೊರಕುವ ಹರಳುಪ್ಪು.

Baywindow (ಬೇವಿಂಡೋ) n. window of a recess in a room. ಕಟ್ಟಡದ ಚಾಚುಭಾಗದಲ್ಲಿರುವ ಕಿಟಿಕಿ.

Bazaar (ಬಜಾರ್) n oriental market. ಪೇಟೆ, ಅಂಗಡಿ, ಸಂತೆ.

Bdellium (ಡೆಲಿಯಂ) n. kind of gum. ಗುಗ್ಗುಲ.

Be (ಬೀ)vi. exist, occur, remain ಇರು, ಸಂಭವಿಸು, ಉಂಟಾಗು. b. off ತೊಲಗು! b. at home, be fully acquainted with. ಚನ್ನಾಗಿ ಅರಿತಿರು.

Beach (ಬೀಚ್) n· sandy shore of a sea. ಸಮುದ್ರತೀರ, ದಡ, ಮರಳಿನ ದಂಡೆ.

Beaco'n (ಬೀಕನ್) n·signal fire on a pole or hill. ಅಪಾಯಸೂಚಕ ದೀಪ, ಇಷಾರಿನ ಬೆಳಕು.

Beacon light (ಬೀಕನ್ ಲೈಟ್) n. a light used as a signal. ಅಪಾಯ ಸೂಚಿಸುವ ದೀಪ.


Beacon light

Bead (ಬೀಡ್) n. little ball pierced for stringing. ಮಣಿ, ಗುಂಡು.

Beadle (ಬೀಡ್‌ಲ್) n. servant of a company. ವ್ಯಾಪಾರ ಸಂಸ್ಥೆಯ ನೌಕರ.

Beads'man (ಬೀಡ್ಸ್‌ಮನ್) n. a beggar, a monk. ಭಿಕ್ಷುಕ, ದಾತನಿಗಾಗಿ ಜಪಮಾಡುವವ.

Beady (ಬೀಡಿ) adj. beadlike. ಮಣಿಯಂತಿರುವ.

Bea'gle (ಬೀಗಲ್) n. small hound. ಸಣ್ಣಜಾತಿ ಬೇಟೆನಾಯಿ.

Beak (ಬೀಕ್) n. bill of a bird, prow of a warship. ಚಂಚು, ಮೂತಿ, ಹಕ್ಕಿಗಳ ಕೊಕ್ಕು, ಹಡಗಿನ ಕೊಟ್ಟು.

Beak'er (ಬೀಕರ್) n. large drinking cup. ದೊಡ್ಡಗಿಂಡಿ, ಚಂಚುಪಾತ್ರೆ. ಚಂಬು.


Beaker

Beam (ಬೀಮ್) n. large & straight piece of timber or iron, ray of light. ತೊಲೆ; ತ್ರಾಸಿನ ದಂಡಿಗೆ, ಪ್ರಭೆ, ಕಿರಣ. vt. shine· ಪ್ರಕಾಶಿಸು.

Beaming (ಬೀಮಿಂಗ್)adv. radiant. ಕಳೆ ಹೊರಸೂಸುವ.

Bean (ಬೀನ್) a. plant with kidney shaped seeds in long pods. ಹುರುಳಿ, ಅವರೆಕಾಯಿ, ಹಲಸಂದೆ ಮುಂತಾದ್ದು.


Bean

Beanfeast (ಬೀನ್‌ಫೀಸ್ಟ್) n. feast given by employers to staff. ದಣಿ ತನ್ನ ಆಶ್ರಿತರಿಗೆ ಹಾಕುವ ಊಟ.

Bear(ಬೇರ್) n. heavy thick furred quadruped, rough surly person. ಕರಡಿ, ಒರಟು ಮನುಷ್ಯ. vt. i. carry, endure, tolerate, give birth to,

ಹೊರು, ತಾಳು, ಒಯ್ಯು, ಸಹಿಸಿಕೊ, ಹೆರು, ಹಡೆ. b. a. hand, assist. ಸಹಾಯಮಾಡು. b. date, be dated. ತಾರೀಖು ಉಳ್ಳದ್ದಾಗಿರು. b. down crush by force. ಕುಗ್ಗಬಡಿ, ಸೋಲಿಸು. be down upon, move forward to attack. ಯುದ್ಧದಹಡಗು ಸೈನ್ಯದ) ಕಡೆಗೆನಡೆ, ಆಕ್ರಮಿಸಲು ಮುಂಬರು. b. out, maintain and support to the end. ಕೊನೆಯವರೆಗೂ ಸಾಧಿಸು, ಸ್ಥಾಪಿಸು, ಸ್ಥಿರಪಡಿಸು. b. the palm. be pre-eminent. ಪ್ರಮುಖಸ್ಥಾನಹೊಂದಿರು. be up ; support, be firm, not to sink. ತಾಳಿಕೊಂಡಿರು, ಸೈರಿಸು, ದೃಢವಾಗಿರು, ಎದೆಗೊಂಡಿರು. b. with endure. ಸಹಿಸಿಕೊಳ್ಳು.

Bear'able (ಬೆಅರಬಲ್) a. endurable. ತಡೆದುಕೊಳ್ಳಬಹುದಾದ, ಸಹನೀಯ.

Beard (ಬಿಅರ್ಡ್) n. hair on the chin. ಗಡ್ಡ, ದಾಡಿ. v. oppose openly. ಪ್ರತಿಭಟಿಸು. b. lion in his den. attack a dangerous person boldly in his quarters. ಧೈರ್ಯದಿಂದ ಪ್ರತ್ಯಕ್ಷವಾಗಿ ಎದುರಿಸು.

Bear'er (ಬೇರರ್) n. carrier or messenger. ದೂತ, ಆಳು, ಹೊರುವವ.

Beargarden (ಬೇರ್‌ಗಾರ್ಡನ್) n. scene of uproar. ಗೊಂದಲದ ಸ್ಥಳ.

Bear'ing (ಬೆಅರಿಂಗ್) n. behaviour, aspect, relation. ವರ್ತನೆ, ವಸ್ತುಗಳ ಪರಸ್ಪರ ಸ್ಥಾನ, ನಡತೆ, ಬೆಲೆ, ಸಂಬಂಧ.

Bearish (ಬೇರಿಷ್) adj. like a bear, uncouth. ಕರಡಿಯಂತಹ, ಒರಟಾದ.

Beast (ಬೀಸ್ಟ್) n. animal, brutal man. ಮೃಗ, ಪ್ರಾಣಿ, ನರಪಶು, ಅನಾಗರಿಕ.

Beast'ly (ಬೀಸ್ಟ್ಲಿ) a. dirty, disgusting. ಸಹಿಸಲಾಗದಂಥ, ಪಾಶವ, ಅಯೋಗ್ಯ, ನಾಚಿಕೆಗೇಡಿ.

Beat (ಬೀಟ್) vt. strike repeatedly, defeat. ಹೊಡೆ, ಹೊಯ್ಯು, ಕುಟ್ಟು, ಬಾರಿಸು, ಮೀರಿಸು. n. recurrent stroke, throbbing. a round or course. ಏಟು, ಹೊಡೆತ, ಬಡಿದಾಟ, ಪಹರೆಯವನ ಗಸ್ತು. b. about the bush, convey one's meaning in a roundabout fashion. ಬಳಸಿ ಮಾತಾಡು, ದ್ರಾವಿಡ ಪ್ರಾಣಾಯಾಮಮಾಡು. b. down, crush, destroy. ಹಾಳುಮಾಡು, ನಾಶವಾಗು. b. off, repel or drive back. ಹೊಡೆದೋಡಿಸು, ಸೋಲಿಸು. b. hallow, vanquish completely. ಸಂಪೂರ್ಣವಾಗಿ ಸೋಲಿಸು.

Beatif'ic (ಬೀಟಿಫಿಕ್) a. making supremely happy. ಆನಂದಕರ, ಪರಮ ಸುಖಕರ.

Beatifical (ಬೀಟಿಫಿಕಲ್) a. rendering blessed. ಆನಂದದಾಯಕ.

Beat'ify (ಬೀಟಿಫೈ) vt. make happy ಅಮಿತಾನಂದವೀಯು, ಪರಮಾನಂದ ಉಂಟುಮಾಡು.

Beating (ಬೀಟಿಂಗ್) n. chastisement by giving blows. ಹೊಡೆತ.

Beat'itude (ಬೀಟಿಟ್ಯೂಡ್) n. a. heavenly happiness. ಸ್ವರ್ಗಸುಖ, ಪರಮಾನಂದ, ದಿವ್ಯಾನಂದ.

Beau (ಬೋ) n. [plu. beaux ಬೋಜ್] a lover, fop. ಚೆಲುವ, ಬೆಡಗುಗಾರ.

Beau-ide'al (ಬೊಐಡಿಯಲ್) n. ideal excellence. ತಿಲಕಪ್ರಾಯ, ಬೆಡಗಿನ ಗಣಿ.

Beau-monde (ಬೋಮ್ಯಾಂಡ್) n. fashionable society. ಮೋಜುಗಾರರ ಪ್ರಪಂಚ, ಭೋಗಿಪ್ರಪಂಚ.

Beaute'ous (ಬ್ಯೂಟಿಅಸ್) a. endowed with beauty. ಸೊಗಸಾದ, ಅಂದವಾದ.

Beautifier (ಬ್ಯೂಟಿಫೈಅರ್) n. he, who or that which beautifies. ಸುಂದರಕಾರಕ, ಶೃಂಗಾರವರ್ಧಕ.

Beaut'iful(ಬ್ಯೂಟಿಫುಲ್) a. elegant, lovely. ರಮ್ಯವಾದ, ಚೆಂದದ, ಮನೋಹರ, ಚೆನ್ನ, ಲಾವಣ್ಯದ, ಅಂದದ.

Beauti'fy (ಬ್ಯೂಟಿಫೈ) vt. make beautiful, adorn. ಸುಂದರಗೊಳಿಸು, ಅಲಂಕರಿಸು, ಶೃಂಗರಿಸು, ಅಂದಗೊಳಿಸು.

Beaut'y (ಬ್ಯೂಟಿ) n. whatever pleases the eye. ಸೌಂದರ್ಯ, ಚಂದ, ಚಲುವು, ಲಾವಣ್ಯ, ಸೊಗಸು.

Beav'er (ಬೀವರ್) n. a. soft furred rodent, its fur. ನೀರನಾಯಿ, ಅದರ ಚರ್ಮ. protecting for lower part of the face. ಮುಖದ ಕೆಳಭಾಗಕ್ಕೆ ಉಪಯೋಗಿಸುತ್ತಿದ್ದ ರಕ್ಷಾಕವಚ.



Beaver

Becalm' (ಬಿಕಾಮ್)vt make calm ಶಾಂತಗೊಳಿಸು, ಶಮನಮಾಡು.

Became (ಬಿಕೇಮ್) p.t. of become.

Because' (ಬಿಕಾಜ್) adv. & conj. for the reason that, on account of, for. ಏಕೆಂದರೆ, ಕಾರಣದಿಂದ.

Bechance (ಬಿಛಾನ್ಸ್) vt. happen, befall. ಉಂಟಾಗು, ಸಂಭವಿಸು.

Becharm (ಬಿಛಾರ್ಮ್) vt. enchant, charm. ಒಲಿಸು, ಮರಳುಮಾಡು.

Beck (ಬೆಕ್) vt. i. beckon. ಕೈಯಿಂದ ಸನ್ನೆಮಾಡು, ತಲೆಯಾಡಿಸು. n. sign with the finger, nod, a brook. ಕೈಸಂಜ್ಞೆ, ಸೈಗೆ, ಸಣ್ಣ ಹಳ್ಳ, ಹೊಳೆ. at one's b. & call, ready to obey one's orders. ದಾಸನಾಗಿರು, ಆಜ್ಞಾಧಾರಕನಾಗಿರು.

Beck'on (ಬೆಕನ್) vt. t. make mute signal. ಕೈಯಿಂದ ಅಥವಾ ಕಣ್ಣಿಂದ ಸನ್ನೆಮಾಡು.

Becloud' (ಬಿಕ್ಲೌಡ್) vt. cover with clouds, dim. ಮೋಡಕವಿ, ಮೋಡ ಮುಸುಗು, ಕತ್ತಲೆಮಾಡು, ಮಬ್ಬಾಗಿಸು.

Become' (ಬಿಕಮ್) vt. t. come be, suit, befit. ಆಗು, ಸಂಭವಿ ಒಪ್ಪು, ಹೊಂದು, ತಕ್ಕದ್ದಾಗಿರು.

Becoming (ಬಿಕಮಿಂಗ್) n. f graceful. ಯುಕ್ತ, ಉಚಿತ, ಶೋಭಿಸು

Becomi'ngly (ಬಿಕಮಿಂಗ್ಲಿ) adv. in suitable manner. ಒಪ್ಪುವಂತೆ, ಅ ರೂಪವಾಗಿ, ಯುಕ್ತವಾಗಿ.

Bed (ಬೆಡ್) n. couch to sleep o garden plot for plants, botto of sea, river, &c. ಹಾಸಿಗೆ, ಮಂ ನದಿ, ಸಮುದ್ರಗಳ ತಳ, ಪಾತ್ರ, ನದಿಯುಗ b. of roses, comfortable situa tion. ಸುಖಸ್ಥಿತಿ. Bedroom. ಮಲಗು ಕೋಣೆ. Bed-spread. ಮಗ್ಗಲಾಸಿ Bed stead. ಮಂಚ, ಪಲ್ಲಂಗ, ಹೊರಸು Bed time. ನಿದ್ದೆಸಮಯ, ಮಲಗು ವೇಳೆ.

Bedabble (ಬಿಡಾಬ್ಲ್)vt. stain with liquid, wet. ತೊಯ್ದು ಹೋಗುವಂ ಮಾಡು.

Bedaub' (ಬಿಡಾಬ್) vt. smear, ಬಳಿ ಹಚ್ಚು.

Bedazzle (ಬಿಡಾಜ್ಲ್) vt. confound with splendour. ಕಣ್ಣು ಕುಕ್ಕುವಂತೆ ಮರಳುಮಾಡು.

Bedding (ಬೆಡಿಂಗ್) n. mattress & bed clothes, &c. ಹಾಸಿಗೆ, ಬಿಛಾನ, ಶಯ್ಯೆ.

Bedeck (ಬಿಡೆಕ್) vt. adorn. ಅಲಂಕಾರಮಾಡು, ಶೃಂಗರಿಸು.

Bedevil (ಬಿಡೆವಿಲ್)vt. treat violently, bewitch. ಕ್ರೂರವಾಗಿ ವ್ಯವಹರಿಸು, ಮಾಟ ಮಾಡು.

Bedew' (ಬಿಡ್ಯೂ) vt. cover with drops. ಒದ್ದೆಮಾಡು, ತೋಯುವಂತೆ ಮಾಡು.

Bedfast (ಬೆಡ್ ಫಾಸ್ಟ್) adv. confined to bed. ಹಾಸಿಗೆ ಹಿಡಿದ.

Bedight (ಬಿಡೈಟ್) vt. adorn, array. ಅಲಂಕರಿಸು, ಸಜ್ಜುಗೊಳಿಸು.

Bedim' (ಬಿಡಿಮ್) vt. make dim. ಮಬ್ಬುಮಾಡು, ಕತ್ತಲೆಗೊಳಿಸು.

Bedizen (ಬಿಡೈಸನ್) vt. dress gaudily. ಉಡಿಗೆ ತೊಡಿಗೆಗಳನ್ನು ಅನಾಗರಿಕವಾಗಿ ಹಾಕಿಕೊ.

Bedraggle (ಬಿಡ್ರಾಗ್‌ಲ್) vt. soil by dragging in dirt. ಕೊಳೆಯಲ್ಲಿ ಎಳೆದಾಡು.

Bedrench (ಬಿಡ್ರೆಂಚ್) vt. drench, saturate. ನೆನಸು, ತೋಯಿಸು.

Bed'ridden(ಬೆಡ್‌ರಿಡ್ನ್) a. confined to bed by age or sickness. ಶಯ್ಯಾಸೇವಿಯಾದ, ಹಾಸಿಗೆ ಹಿಡಿದು ಮಲಗಿದ.

Bedust (ಬಿಡಸ್ಟ್) vt cover with dust. ಧೂಳಿನಿಂದ ಮುಚ್ಚು.

Bee (ಬೀ) n. insect producing wax and honey, busy worker. ಜೇನುನೊಣ, ನಿತ್ಯೋದ್ಯೋಗಿ.

Beech (ಬೀಚ್) n. smooth barked glossy leaved tree. ಹೊಂಗೆಮರ, ತಮಾಲವೃಕ್ಷ, ಹುಲಗಲಿಮರ.

Beef (ಬೀಫ್) n. flesh of bull or cow. ಗೋಮಾಂಸ, ವೃಷಭ ಮಾಂಸ.

Beef-eater(ಬೀಫ್-ಈಟರ್) n. eater of beef, yeoman of guard. ಗೋಮಾಂಸಭಕ್ಷಕ, ಸ್ವಯಂಸೇವಕ, ಅಶ್ವಸವಾರ.

Bee'hive (ಬೀಹೈವ್) n. house for bees. ಜೇನುಗೂಡು.

Bee'line (ಬೀಲೈನ್) n. shortest course. ಬಹು ಸಮೀಪದ ಮಾರ್ಗ.

Beer (ಬೀರ್) n. alcoholic liquor. ಸಾರಾಯಿ, ಬೀರ್ ಎಂಬ ಮದ್ಯ.

Bees'tings (ಬೀಸ್ಟಿಂಗ್ಸ್) n. [plu.] first milk of cow after parturition. ಗಿಣ್ಣು ಹಾಲು.

Bees'wax (ಬೀಸ್‌ವಾಕ್ಸ್) n. wax made by bees. ಜೇನುಮೇಣ.

Beet (ಬೀಟ್) n. kind of plant with root used for sugar making, &c, ಗಾಜರು ಗೆಡ್ಡೆ, ಒಂದು ಬಗೆಯ ಗೆಣಸು.

Beet

Beetle (ಬೀಟ್ ಲ್) n. kind of insect, large heavy mallet. ರೆಕ್ಕೆ ಹುಳ, ದುಂಬಿಯ ಜಾತಿಯ ಹುಳ, ಜೀರುಂಡೆ, ಕೊಡತಿ, ಸುತ್ತಿಗೆ.

Beetle

Beeves (ಬೀವ್ಸ್) n. pl. animals of ox kind. ಎತ್ತಿನ ಜಾತಿಯ ಪ್ರಾಣಿಗಳು.

Befall (ಬಿಫಾಲ್)vt· happen to pass. ಉಂಟಾಗು, ಸಂಭವಿಸು, ಘಟಿಸು.

Befit (ಬಿಫಿಟ್) vt. be suited tc. ತಕ್ಕದ್ದಾಗಿರು, ಅನುರೂಪವಾಗಿರು, ಯೋಗ್ಯವಾಗಿರು.

Befog (ಬಿಫಾಗ್)vt. cover with fog. ಮಂಜಿನಿಂದ ಕವಿಸು.

Befool' (ಬಿಫೂಲ್) vt make a fool of. ಮರಳುಮಾಡು. ಹುಚ್ಚನಹಾಗೆ ಆಡಿಸು.

Before (ಬಿಫೋರ್)adv.prep.ahead. previously, in presence of, in front of. ಪೂರ್ವದಲ್ಲಿ. ಮೊದಲು, ಮುಂಚೆ, ಸಮಕ್ಷಮದಲ್ಲಿ, ಮುಂದೆ.

Before'hand(ಬಿಫೋರ್‌ಹಾಂಡ್) adv. before the time. ಮುಂಚಿತವಾಗಿ.

Befoul' (ಬಿಫೌಲ್) vt. make foul. ಕೆಡಿಸು, ಹೊಲೆಗಲಸು, ಕಲುಷಿಸು.

Befriend' (ಬಿಫ್ರೆಂಡ್) vt. act as a friend. to help at need. ಮಿತ್ರನಾಗು, ಸ್ನೇಹಬೆಳಸು, ನೆರವಾಗು.

Beg (ಬೆಗ್)vt. i. ask for something by way of alms, ask for favour, make entry. ಬೇಡು, ಪ್ರಾರ್ಥಿಸು, ತಿರಿ, ಯಾಚಿಸು; begging the question, assume that which requiers to be proved. ತರ್ಕಿಸಿ ಪ್ರಮಾಣಿಸಬೇಕಾದ್ದನ್ನೆ ನಿಜವೆಂದು ನಂಬು.

Began (ಬಿಗಾನ್)pt·of begin, begin. ಧಾತುವಿನ ಭೂತಕಾಲದ ರೂಪ.

Beget (ಬಿಗೆಟ್) vt. procreate, give rise to. ಜನ್ಮವೀಯು, ಹೆರು, ಉತ್ಪನ್ನ ಮಾಡು.

Begg'ar (ಬೆಗ್ಗರ್) n. one who begs, a mean fellow. ಭಿಕ್ಷುಕ, ತಿರುಕ, ಕಂಗಾಲ, ಬಡವ. ಕ್ಷುದ್ರ; ನೀಚ. b. description, be beyond adequate description. ವರ್ಣನಾತೀತವಾಗಿರು.

Begg'arly (ಬೆಗರ್ಲಿ) a. poor, needy mean. ಬಡ, ದರಿದ್ರ, ಕ್ಷುದ್ರ, ತುಚ್ಛ.

Begg'ary (ಬೆಗರಿ) n. extreme poverty. ಬಡತನ, ದಾರಿದ್ರ್ಯ, ಕಂಗಾಲತನ.

Begin (ಬಿಗಿನ್) vt. i. commence, enter on something new, originate. ಪ್ರಾರಂಭಿಸು, ಮೊದಲು ಮಾಡು, ಕೈಗೊಳ್ಳು, ಉಪಕ್ರಮಿಸು.

Beginner (ಬಿಗಿನರ್) n. one who begins. ಉಪಕ್ರಮಿಸುವವನು, ಮೊದಲಿಗ, ಆರಂಭಿಗ.

Beginn'ing (ಬಿಗಿನಿಂಗ್) n. origin, commencement. ಪ್ರಾರಂಭ, ಉಪಕ್ರಮ, ಮೊದಲುಮಾಡುವಿಕೆ, ಆದಿ.

Begird (ಬಿಗರ್ಡ್)vt. gird, encircle. ಸೊಂಟಕಟ್ಟು, ಸುತ್ತಿಕೊಳ್ಳು.

Begone' (ಬಿಗಾನ್) n. be off ! get away ! ತೊಲಗು ! ಹೋಗು, ನಡೆ.

Begonia (ಬಿಗೊನಿಯ) n. kind of plant. ಒಂದು ಬಗೆಯ ಅಲಂಕಾರಕ್ಕಾಗಿ ಬೆಳೆಸುವ ಗಿಡ.

Begrime (ಬಿಗ್ರೈಮ್) vt. soil with dirt. ಮಸಿಹಚ್ಚು, ಕೊಳೆಮಾಡು.

Begrudge (ಬಿಗ್ರಡ್ಜ್) vt. be dissatisfied. ಅಸಮಾಧಾನಪಡು, ಅಸೂಯೆಪಡು.

Beguile(ಬಿಗೈಲ್) vt. cheat, charm, amuse. ವಂಚಿಸು, ಮುಗ್ಧಗೊಳಿಸು, ವಶೀಕರಿಸು, ರಂಜಿಸು, ಮೋಸಮಾಡು, ಭ್ರಮೆಗೊಳಿಸು.

Begun (ಬಿಗನ್) past participle of begin, begin. ಧಾತುವಿನ ಭೂತಕೃದಂತ.

Behalf (ಬಿಹಾಫ್)n. apart, interest. ಪಕ್ಷ, ಕಾರಣ, ಪರವಾಗಿ, ಒಬ್ಬನಿಗಾಗಿ.

Behave(ಬಿಹೇವ್)vt.& refl. conduct oneself, act in specified manner. ವರ್ತಿಸು, ನಡೆದುಕೊ.

Behavi'our (ಬಿಹೇವಿಯರ್) n. conduct, good manners. ನಡತೆ, ಚರ್ಯೆ, ವರ್ತನೆ.

Behead' (ಬಿಹೆಡ್) vt. cut off the head. ತಲೆಕಡಿ, ತಲೆತೆಗಿ, ಶಿರಚ್ಛೇದಿಸು.

Beheld (ಬಿಹೆಲ್ಡ್)past tense & past participle of behold, behold. ಧಾತುವಿನ ಭೂತರೂಪ.

Behemath (ಬಿಹೆಮಾತ್) n. animal described in the Bible. ಬೈಬಲ್ಲಿನಲ್ಲಿ ಹೇಳಿರುವ ಒಂದು ಪ್ರಾಣಿ.

Behest' (ಬಿಹೆಸ್ಟ್) n. command, charge. ಅಪ್ಪಣೆ, ಅನುಜ್ಞೆ, ಹುಕುಂ, ಆಣತಿ.

Behind' (ಬಿಹೈಂಡ್)adv. & prep. in or to the rear, too late in paying arrears. ಹಿಂದೆ, ಬೆನ್ನಹಿಂದೆ, ತಡವಾಗಿ, ಹಿಂದುಳಿದ, ಬಾಕಿ ಉಳಿದ.

Behold' (ಬಿಹೋಲ್ಡ್) vt. see with the eyes, (import.) take notice, observe. ನೋಡು ! ಈಕ್ಷಿಸು ! ನೋಡಿ, ತಿಳಿದುಕೋ. int. Lo ! See ! ಇಗೋ! ಅಗೋ ! ನೋಡು ! ಗಮನಿಸು.

Behol'den (ಬಿಹೋಲ್ಡನ್) a. obliged, indebted. ಕೃತಜ್ಞ, ಉಪಕೃತ, ಋಣಿ.

Behoof' (ಬಿಹೂಫ್) n. use, advantage. ಉಪಯೋಗ, ಲಾಭ.

Behove'-hoove(ಬಿಹೋವ್, ಬಿಹೂವ್) vt. befit or necessary. ಅಗತ್ಯವಾಗಿರು, ತಕ್ಕದ್ದಾಗಿರು, ಯೋಗ್ಯವಾಗಿರು.

Beige (ಬಾಜ್) n. kind of woollen fabric. ಒಂದು ಬಗೆಯ ಉಣ್ಣೆಯಬಟ್ಟೆ.

Be'ing (ಬೀಇಂಗ್) n. existence, any person or thing existing.

ಇರವು, ನೆಲೆ, ಜೀವಾಳ, ಮನುಷ್ಯ, ಜೀವಿ, ಸ್ಥಿತಿ. well b. ಕ್ಷೇಮ, ಸುಖ.

Bejewelled(ಬಿಜೂಎಲ್ಡ್)adj. wearing several jewels. ಅನೇಕ ಆಭರಣಗಳನ್ನು ತೊಟ್ಟಿರುವ.

Bela'bour (ಬಿಲೇಬರ್) vt. beat soundly. ಥಳಿಸು, ಚೆನ್ನಾಗಿ ಹೊಡೆ, ಸದೆಬಡಿ.

Belate (ಬಿಲೇಟ್) vt. make late. ತಡಮಾಡು.

Belat'ed (ಬಿಲೇಟೆಡ್)a. coming too late, overtaken by darkness. ತಡವಾದ, ವಿಳಂಬವಾದ, ಇರುಳುಮೂಡಿದ.

Belaud' (ಬಿಲಾಡ್)vt. heap praises on. ಹೊಗಳು, ಸ್ತುತಿಸು.

Belay'(ಬಿಲೇ)v.fasten rope,thrash; waylay. ಹೊಡೆ, ದಾರಿಕಟ್ಟು, ಹಗ್ಗಕಟ್ಟು.

Belch(ಬೆಲ್ಚ್)vt. i. eject wind noisily from stomach, emit violently, &c. ತೇಗು, ಡೇಗು, ಬೆಂಕಿ, ಹೊಗೆ, ಮೊದಲಾದುವನ್ನು ಉಗುಳು. belching mountain. ಜ್ವಾಲಾಮುಖಿ ಪರ್ವತ

Bel'dam (ಬೆಲ್ಡಮ್)n. old woman, ugly woman, virago. ಕುರೂಪಿ, ಮುದಿಗೂಬೆ, ಗಂಡುಬೀರಿ, ಜಬ್ಬಿ.

Beleag'uer(ಬಿಲೀಗರ್) vt. besiege, ಮುತ್ತಿಗೆಹಾಕು.

Bel'fry(ಬೆಲ್‌ಫ್ರಿ)n.bell tower. ಕ್ರೈಸ್ತದೇವಾಲಯದ ಘಂಟೆ ಗೋಪುರ.

Belial (ಬೀಲಿಯಲ್) n. the devil. ಪ್ರೇತ, ರಾಕ್ಷಸ.

Belie' (ಬಿಲೈ) vt. speak falsely, of falsity. ಸುಳ್ಳು ಮಾತಾಡು, ಮಾತು ಮುರಿ, ತಪ್ಪು ಸಾಧಿಸು, ಮಾತಿಗೆ ತಪ್ಪು, ಸುಳ್ಳು ಮಾಡು.

Belief' (ಬಿಲೀಫ್) n. faith, natural judgment. ನಂಬಿಕೆ, ವಿಶ್ವಾಸ. ನೆಚ್ಚಿಗೆ, ಅಭಿಮತ. a. make b. ನಟನೆ, ಮಾಯೆ.

Believe' (ಬಿಲೀವ್) vt. i regard as true,trust in. ನಂಬಿಕೊಂಡಿರು, ವಿಶ್ವಾಸಿಸು, ನೆಚ್ಚು.

Believ'er (ಬಿಲೀವರ್) n. one who believes. ನಂಬುವವ, ಭಕ್ತ, ಆಸ್ತಿಕ.

Belike' (ಬಿಲೈಕ್) adv. perhaps. ಬಹುಶಃ.

Belit'tle (ಬಿಲಿಟ್‌ಲ್) vt. make small, depreciate. ಕೀಳುಮಾಡು, ತೃಣೀಕರಿಸು, ಕೀಳಾಡು, ಜರಿ.

Bell (ಬೆಲ್) n. a hollow metal which gives forth rising sound when struck, ಘಂಟೆ, b. the cat. take a leading part in a hard task. ಕೆಟ್ಟ ಕೆಲಸದಲ್ಲಿ ಮುಂದಾಳಾಗು.

Belladonn'a (ಬೆಲಡಾನ) a. deadly night shade, drug got from it. ವತ್ಸನಾಭಿಯಂಥ ವಿಷಮೂಲಿಕೆ.

Bell-buoy (ಬೆಲ್‌ಬಾಯ್) n. buoy carrying a bell rung by the waves. ಗಂಟೆಯುಳ್ಳ ತೇಲುಬುರುಡೆ.

Belle(ಬೆಲ್)n. handsome woman. ಸುಂದರಿ, ಚೆನ್ನೆ, ಚೆಲುವೆ, ಜಗನ್ಮೋಹಿನಿ, ರೂಪವತಿ.

Belles lett'ers (ಬೆಲ್ ಲೆಟರ್) n. (plu)studies or writings of purely literary kind. ಲಲಿತಸಾಹಿತ್ಯ, ಶುದ್ಧಕಾವ್ಯಗ್ರಂಥಗಳು, ಅಲಂಕಾರಶಾಸ್ತ್ರ.

Bell'icose (ಬೆಲಿಕೋಸ್) a contentious, warlike. ಕಲಹಪರ, ಜಗಳಗಂಟ.

Belligerency(ಬೆಲಿಜೆರೆನ್ಸಿ) n. quality of being warlike. ಯುದ್ಧಪ್ರಿಯತೆ, ಯುದ್ಧಮಗ್ನತೆ.

Belli'gerent(ಬೆಲಿಜೆರೆಂಟ್)n. carrying on regular war, engaged in conflict ಯುದ್ಧಮಾಡುವ,ಯುದ್ಧಮಗ್ನ.

Belljar (ಬೆಲ್ಜಾರ್) n. cover of glass used as protection from dirt. ಘಂಟಾಪಾತ್ರೆ.



Belljar

Bell'metal (ಬೆಲ್‌ಮೆಟಲ್) a. alloy of copper and tin. ಕಂಚು, ಕಾಂಸ್ಯ.

Bellona (ಬೆಲೋನ) n. war personified, woman of commanding presence. ಯುದ್ಧದೇವತೆ, ಗಂಭೀರ ಆಕೃತಿಯ ಸ್ತ್ರೀ.

Bell'ow (ಬೆಲೋ) vt. i. roar like bull, to make any violent outcry. ಗುಟುರುಹಾಕು, ಕೂಗು, ಬೊಬ್ಬೆ ಇಡು.

Bellows (ಬೆಲೋಸ್) n. (plu.) an instrument for blowing current of air into fire, the lungs. ತಿದಿ, ತಿತ್ತಿ, ಶ್ವಾಸಕೋಶಗಳು, ಪುಪ್ಪುಸಗಳು.



Bellows

Bell-wether n. leading sheep of a flock with a bell tied in the neck, ring leader. ಕುರಿಮಂದೆಯಲ್ಲಿ ಕತ್ತಿಗೆ ಗಂಟೆ ಕಟ್ಟಿರುವ ಮುಂದಿರುವ ಕುರಿ, ಮುಂದಾಳು.

Bell'y (ಬೆಲಿ) n. stomach. ಹೊಟ್ಟೆ, ಉದರ. vt. i. swell out. ಉಬ್ಬು, ಉಬ್ಬಿಸು. b. ache. ಹೊಟ್ಟೆನೋವು.

Belong' (ಬಿಲಾಂಗ್) vt. be the property of, be attached to. ಸೇರಿಕೊಂಡಿರು, ಹೊಂದಿರು, ಸಂಬಂಧಿಸಿರು.

Belong'ings (ಬಿಲಾಂಗಿಂಗ್ಸ್) n. (plu)one's property or relatives. ಸ್ವತ್ತು, ಆಸ್ತಿ, ಗಂಟುಮೂಟೆ, ನೆಂಟರಿಷ್ಟರು.

Belov'ed(ಬಿಲವೆಡ್)a. much loved, very dear. ಅಕ್ಕರೆಯ, ಪ್ರೇಮದ, ಪ್ರೀತಿಪಾತ್ರ, ಅನುರಕ್ತ, ಮುದ್ದಿನ.

Below (ಬಿಲೊ)adv. under, in time or place, inferior. ಕೆಳಗಡೆ, ಅಡಿಯಲ್ಲಿ, ಕೀಳುತರವಾಗಿ.

Belt (ಬೆಲ್ಟ್) n. a girdle, sash, band. ನಾಡ, ನಡುಕಟ್ಟು, ಉಡಿದಾರ, ಒಡ್ಯಾಣ, ಸೊಂಟಪಟ್ಟಿ.

Belt

Bel'vedere (ಬೆಲ್ವಿಡಿಅರ್) n. rais turret to view scenery fro ನೋಟಕ್ಕಾಗಿಕಟ್ಟಿದ ಎತ್ತರವಾದ ಬುರು

Bemask (ಬಿಮಾಸ್ಕ್) vt. conce mask. ಮುಚ್ಚು.

Bemire (ಬಿಮೈರ್) vt. stain w mud. ಕೆಸರು ಬಳಿ.

Bemoan'(ಬಿಮೋನ್) vt. lament, b wail. ದುಃಖಿಸು, ಗೋಳಾಡು, ವ್ಯ ಪಡು.

Bemuse (ಬಿಮ್ಯೂಸ್) vt. confu stupefy. ಮಂಕುಹಿಡಿಸು, ಭ್ರಾ ಗೊಳಿಸು.

Bench (ಬೆಂಚ್) n. long seat wit out back, judge's seat, judge ಅಡ್ಡಣಿಗೆ, ಬೆಂಚು, ನ್ಯಾಯಪೀಠ, ಕಾಲ್ಮ ನ್ಯಾಯಾಧಿಪತಿಗಳು.

Bend (ಬೆಂಡ್)vt. i. curve, subm incline. ಬಗ್ಗಿಸು, ಮಣಿಸು, ಅಧಿ ಮಾಡಿಕೊಳ್ಳು, ವಾಲು, ಬಗ್ಗು. n. curv ಬಾಗು.

Beneath' (ಬಿನೀತ್) adv. & pre under, below. ಅಡಿಯಲ್ಲಿ, ಕೆಳ ಯಲ್ಲಿ, ತಳದಲ್ಲಿ.

Benedicite (ಬಿನಿಡಿಸೈಟ್) n. bles ing before a repast. ಊಟ ಮುಂಚೆ ಕ್ರೈಸ್ತರು ಹೇಳುವ ಸ್ವಸ್ತಿವಚ

Benedick (ಬೆನಿಡಿಕ್) n. new married man. ಹೊಸ ಮದುಮಗ.

Ben'edic'tion(ಬೆನಿಡಿಕ್‌ಶನ್)n. utte ance of blessing, blessing. ಆ ರ್ವಾದ, ಸ್ವಸ್ತಿವಾಚನ, ಧನ್ಯವಾದ.

Benedictine (ಬೆನಿಡಿಕ್ಟೀನ್) a. per taining to St. Benedict or hi doctrines. ಸಂತ ಬೆನಿಡಿಕ್ಟನಿಗೆ ಅಥ ಅವನ ತತ್ತ್ವಗಳಿಗೆ ಸಂಬಂಧಿಸಿದ.

Bene'dictory (ಬೆನಡಿಕ್ಟರಿ)a. expressing benediction. ಆಶೀರ್ವದಿಸು

Benedictus (ಬೆನಿಡಿಕ್ಟಸ್) n. a hol song. ಪವಿತ್ರ ಗೀತ.

enefac'tion(ಬೆನಿಫ್ಯಾಕ್ಶನ್)n. doing good; grant or endowment. ಉಪಕಾರ, ದತ್ತಿ, ಧರ್ಮ.

enefactor (ಬೆನಿಫ್ಯಾಕ್ಟರ್)n. patron, donor. ಉಪಕಾರಿ, ದಾತ, ದಾನಿ.

en'fiece (ಬೆನಿಫಿಸ್) n. church living. ಪಾದ್ರಿಯ ವೃತ್ತಿ, ಶ್ರೋತ್ರಿಯ, ಮಾನ್ಯ, ಗುರುದಕ್ಷಿಣೆ. a. & n. beneficiary. ದಾನ ಹೊಂದಿದ (ವ).

enef'icent (ಬೆನಿಫಿಸೆಂಟ್) a. doing good. actively kind. ಉಪಕಾರಿಯಾದ, ಉದಾರವಾದ. n beneficence. ಪರೋಪಕಾರ, ದಯಾಧರ್ಮ.

enefi'cial (ಬೆನಿಫಿಶಲ್) n. advantageous, serviceable. ಹಿತಕರ, ಪ್ರಯೋಜನಕರ.

en'efit (ಬೆನಿಫಿಟ್) n. advantge, profit. ಲಾಭ, ಹಿತ, ಉಪಕಾರ, ಉಪಯೋಗ. vt. i. do good, to receive benefit. ಒಳಿತು ಮಾಡು, ಉಪಕಾರ ಮಾಡು, ಲಾಭಪಡೆ.

enet (ಬೆನೆಟ್)vt. catch in a net. ಬಲೆಹಾಕಿ ಹಿಡಿ.

enev'olence(ಬೆನಿವೊಲೆನ್ಸ್)n good will, generosity ಪರೋಪಕಾರಗುಣ. ಧರ್ಮಬುದ್ಧಿ, ಔದಾರ್ಯ, ತ್ಯಾಗಶೀಲತೆ.

enev'olent (ಬೆನಿವೊಲೆಂಟ್) n. charitable, generous, well disposed. ಪರೋಪಕಾರಿ, ದಯಾಳು, ಧರ್ಮಶೀಲ.

enight'ed (ಬಿನೈಟೆಡ್) a. overtaken by night, involved in intellectual or moral darkness. ಕತ್ತಲುಕವಿದ, ಅಜ್ಞಾನಾಂಧಕಾರದಲ್ಲಿ ಮುಳುಗಿದ, ವಿವೇಕರಹಿತ.

enign , benig'nant (ಬಿನೈನ್-ಬಿನಿಗ್ನೆಂಟ್) a. kind, gracious. ದಯಾಳುವಾದ, ಕರುಣಾಳು; ಉಪಕಾರಶೀಲ. ಉಪಯುಕ್ತ, ಹಿತಕರ. benignity, n. kindliness. ದಯೆ, ಕರುಣೆ.

Benignity (ಬಿನಿಗ್ನಿಟಿ) n. kindliness. ದಯಾಳುತನ.

Ben'ison(ಬೆನಿಸನ್) n. benediction. ಹರಕೆ, ಆಶೀರ್ವಾದ.

Benjamin (ಬೆಂಜಮಿನ್) n youngest child. ಕಡೆಯಕೂಸು, ಕಿರಿಗೂಸು.

Bent (ಬೆಂಟ್) n. inclination, bias. ಬಾಗು, ಇಚ್ಛೆ, ಆಸಕ್ತಿ, ಅಭಿಲಾಷೆ, ಮನೋಭಾವ b. upon, determined to do. ಮಾಡಲು ನಿರ್ಧರಿಸಿದ.

Ben'thamism (ಬೆಂಥಮಿಸಮ್) n. doctrine of the greatest happiness of the greatest number. ಬಹುಜನರ ಸುಖಸಾಧಕತ್ವವಾದ.

Benumb'(ಬಿನಮ್)vt. make numb, paralyse. ಜೋಮು ಹಿಡಿಸು. ಮರಗಟ್ಟಿಸು, ತಿಮರುಹಿಡಿಸು, ಜಡವಾಗುವಂತೆ ಮಾಡು.

Benzene (ಬೆನ್‌ಜೀನ್) n. aromatic hydrocarbon. ಟಾರಿನಿಂದ ತೆಗೆದ ಒಂದು ದ್ರವ್ಯ.

Ben'zoin (ಬೆಂಜೋಯಿನ್)n. aromatic resin. ಸಾಂಬ್ರಾಣಿ, ಸುವಾಸನೆಯ ಧೂಪ, ಶಿಲಾರಸ.

Bepowder (ಬಿಪೌಡರ್)vt. sprinkle powder. ಹಿಟ್ಟನ್ನು ಚಿಮುಕಿಸು.

Bequeath' (ಬಿಕ್ವೀತ್) vt. leave by will. ಮೃತ್ಯುಪತ್ರ ಮೂಲಕ ಸ್ವಂತ ಆಸ್ತಿಕೊಡು.

Bequest' (ಬಿಕ್ವೆಸ್ಟ್) n. legacy left by will. ಮೃತ್ಯುಲೇಖದಾನ, ಉಯಿಲು.

Berate (ಬಿರೇಟ್) vt. to abuse. ಬಯ್ಯು.

Bere (ಬಿಅರ್) n. barley. ಜವೆಗೋಧಿ.

Bereave' (ಬಿರೀವ್) v. i. rob, deprive ವಿಯೋಗಪಡಿಸು, ಅಗಲಿಸು, ಕಸಿದುಕೊಳ್ಳು, ಕಿತ್ತುಕೊಳ್ಳು, ಅಪಹರಿಸು.

Bereave'ment (ಬಿರೀವ್‌ಮೆಂಟ್) n. loss by death. ವಿಯೋಗ, ಅಗಲಿಕೆ, ನಷ್ಟ.

Bergamot (ಬರ್ಗಮಾಟ್) n. a tree of orange and lemon kind. ಮರ ಸೇಬಿನಹಣ್ಣು.

Berhyme (ಬೆರ್ರೈಮ್) vt celebrate in verse. ಯಾವುದಾದರೂ ಸಂದರ್ಭಕ್ಕಾಗಿ ಕಾವ್ಯರಚನೆಮಾಡು.

Beri-beri (ಬೆರಿಬೆರಿ) n. a disease prevalent in India. ಬೆರಿಬೆರಿ ರೋಗ.

Berry (ಬೆರಿ) n. any small round juicy fruit. ಬೀಜವಿಲ್ಲದ ಹಣ್ಣು, ಚಿಕ್ಕಕಾಯಿ.

Berth (ಬರ್ಥ್,-ರ್ತ್) n. ship's place at wharf, sleeping place in ship or train, situation. ಹಡಗು ನಿಲ್ಲುವ ಠಾವು, ನಾವೆಯಲ್ಲಿ ಮಲಗುವ ಸ್ಥಳ, ಉದ್ಯೋಗ, ನೌಕರಿ.

Ber'yl (ಬೆರಿಲ್) n. green mineral or gem. ಪಚ್ಚೆ (ರತ್ನ).

Beseech' (ಬಿಸೀಚ್) v. t. ask earnestly for. ಬೇಡಿಕೊ, ಪ್ರಾರ್ಥಿಸು. ಕೇಳಿಕೊಳ್ಳು.

Beseem' (ಬಿಸೀಮ್)v. t. suit, befitting for. ಯೋಗ್ಯವಾಗಿರು, ತಕ್ಕದ್ದಾಗಿರು.

Beset' (ಬಿಸೆಟ್) v. t. hem in, assail. ಸುತ್ತಿಕೊಳ್ಳು, ಮುತ್ತಿಗೆಹಾಕು, ಬಳಸು, ಮುಸುರಿಕೊಳ್ಳು, ಆಕ್ರಮಿಸು.

Beshame (ಬಿಶೇಮ್) vt. to make ashamed. ನಾಚಿಕೆಪಡಿಸು.

Beshrew' (ಬಿಶ್ರೂ)vt. wish a curse to. ಶಾಪಕೊಡು, ಶಪಿಸು. b. it ! int. ಅದು ಹಾಳಾಗಲಿ! ಉರಿದುಹೋಗಲಿ !

Beside' (ಬಿಸೈಡ್) prep. at the side of ; close to. ಸಮೀಪದಲ್ಲಿ, ಹತ್ತಿರ, ಬಳಿಯಲ್ಲಿ. b. oneself, out of one's senses, irrelevant. ಅಸಂಬದ್ಧ. b. the mark, not to the point. ಗುರಿಬಿಟ್ಟು.

Besides (ಬಿಸೈಡ್ಸ್) prep. & adv. in addition to, otherwise than. ಅಲ್ಲದೆ, ಸಹ, ಹೊತ್ತಾಗಿ, ಮೇಲಾಗಿ, ವಿನಾ.

Besiege' (ಬಿಸೀಜ್) vt. attack a tower on all sides. ಆವರಿಸು, ಮುತ್ತಿಗೆ ಹಾಕು.

Beslaver (ಬಿಸ್ಲಾವರ್) vt. flatter ver much. ಮಿತಿಮೀರಿ ಹೊಗಳು.

Beslobber (ಬಿಸ್ಲಾಬರ್)vt. besmear with, spittle, kiss profusely. ಉಗುಳುಹಾರಿಸು, ಅತಿಯಾಗಿ ಮುತ್ತಿಡು.

Besmear' (ಬಿಸ್ಮಿಅರ್) vt. smear, bedaub. ಪೂಸು, ಸವರು, ಲೇಪಿಸು, ಬಳಿ, ಸಾರಿಸು.

Besmirch' (ಬಿಸ್ಮರ್ಚ್) vt. soil. discolour. ಮಲಿನಗೊಳಿಸು, ಕೊಳೆ ಮಾಡು, ಬಣ್ಣಗೆಡಿಸು.

Be'som (ಬೀಜಮ್) n. a broom. ಕಸಬರಿಗೆ, ಪೊರಕೆ, ಬರಲು.

Besot' (ಬಿಸಾಟ್) vt. make dull, stupid or foolish. ಅಮಲೇರಿಸು, ಎಚ್ಚರತಪ್ಪಿಸು, ಬೆಪ್ಪುಗೊಳಿಸು.

Bespa'tter (ಬಿಸ್ಪ್ಯಾಟರ್) vt. cover with abuse. ಮೇಲೆಲ್ಲ ಸಿಡಿಸು, ಕೆಸರು ನೀರು ಚಿಮುಕಿಸು.

Bespan'gle (ಬಿಸ್ಪ್ಯಾಂಗಲ್) vt cover with spangles. ಥಳಥಳಿಸುವ ವಸ್ತುಗಳಿಂದ ಅಲಂಕಾರಮಾಡು.

Bespeak' (ಬಿಸ್ಪೀಕ್) vt. engage or order [good-] beforehand, be evidence of. ಮುಂದಾಗಿ ಮಾತಾಡಿ ನಿಗದಿಮಾಡಿಕೊ, ಮೊದಲೇ ತಿಳಿಸಿ ಸಾಮಾನನ್ನು ತರಿಸು, ಸಾಕ್ಷಿಯಾಗಿರು.

Bespeed (ಬಿಸ್ಪೀಡ್) vt. hurry up. ಜಾಗ್ರತೆಮಾಡು.

Bespice (ಬಿಸ್ಪೈಸ್) vt. season with spice. ಮಸಾಲೆ ಪದಾರ್ಥಗಳನ್ನು ಪಯೋಗಿಸಿ ಒಗ್ಗರಣೆ ಹಾಕು.

Bespr'n'kle (ಬಿಸ್ಪ್ರಿಂಕಲ್) vt. sprinkle. ಚಿಮುಕಿಸು, ಪ್ರೋಕ್ಷಿಸು.

Best (ಬೆಸ್ಟ್) a. good in the highes degree. ಅತ್ಯುತ್ತಮ, ಪರಾಕಾಷ್ಠ, ಸರ್ವೋತ್ಕೃಷ್ಟ, ಪರಮಶ್ರೇಷ್ಠ. at. b

ಬಹುಕಷ್ಟವಾದದೆ. n. utmost. ಅಸಾಧ್ಯ ಪ್ರಯತ್ನ, ಅತ್ಯಂತಪ್ರಯತ್ನ. v. [colloq] defeat. ಸೋಲಿಸು.

Bestain (ಬಿಸ್ಟೇಯುನ್) vt. mark with spot. ಚುಕ್ಕೆ ಗುರುತುಮಾಡು.

Bestead (ಬಿಸ್ಟೆಡ್) vt. assist, help. ಸಹಾಯಮಾಡು.

Bes'tial (ಬೀಸ್ಟಿಅಲ್) a. belonging to beast, brutish. ಪಶುವಿನ, ಮೃಗದ, ಪಶುಪ್ರಾಯದ, ವಿಷಯಲಂಪಟ.

Bestill (ಬಿಸ್ಟಿಲ್) vt. make quit, make still. ಶಾಂತವಾತಾವರಣ ಕಲ್ಪಿಸು, ಸದ್ದಿಲ್ಲದಂತೆ ಮಾಡು.

Bes'tir (ಬಿಸ್ಟರ್) vt. exert, rouse into vigorous action. ಪ್ರಯತ್ನಿಸು, ತವಕಪಡು, ಉತ್ಸಾಹಗೊಳಿಸು, ಉತ್ತೇಜನಗೊಳಿಸು.

Bestow' (ಬಿಸ್ಟೋ) vt. confer as a gift. deposit. ಕೊಡು, ಈಯು, ದಯಪಾಲಿಸು, ಕೂಡಿಡು, ಸಂಗ್ರಹಿಸು.

Bestowal(ಬಿಸ್ಟೋಅಲ್)n. disposal. ಕೊಡುಗೆ, ದಾನ.

Bestrew' (ಬಿಸ್ಟ್ರೂ)vt.scatter loosely over. ಎರಚು, ಚೆಲ್ಲಾಡು, ಹರಡು.

Bestride' (ಬಿಸ್ಟ್ರೈಡ್) vt. stand or sit over with a leg on each side ಕಾಲಗಲಿಸಿ ನಿಲ್ಲು, ಕೂಡು.

Bet (ಬೆಟ್) vi. t. stake as bet. ಪಂಥಕಟ್ಟು, ಪಂದ್ಯಕಟ್ಟು, ಪಣವೊಡ್ಡು. n. a wager. ಪಂದ್ಯ, ಜೂಜು, ಬಾಜಿ, ಪಣ.

Beta (ಬೀಟ)n. second letter of the Greek alphabet. ಗ್ರೀಕ್ ವರ್ಣಮಾಲೆಯ ಎರಡನೆಯ ಅಕ್ಷರ.

Betake (ಬಿಟೇಕ್) vt. go to, have recourse to. ಹೋಗು, ಆಶ್ರಯಮಾಡು, ಅನುಸರಣೆಮಾಡು, ಅವಲಂಬಿಸು.

Beteem (ಬಿಟೀಮ್)vt. bring forth, shed. ಹುಟ್ಟಿಸುವುದು, ಚೆಲ್ಲುವುದು.

Be'tel (ಬೀಟಲ್) n. leaf of a plant chewed with arecanut. ವೀಳ್ಯದೆಲೆ, ನಾಗವಲ್ಲಿ, ವೀಳ್ಯ, ತಾಂಬೂಲ.

Be'telnut (ಬೀಟಲ್‌ನಟ್) n. arecanut. ಅಡಿಕೆ.

Beth'el(ಬೆಥೆಲ್) n. hallowed spot, place of worship. ಪುಣ್ಯಕ್ಷೇತ್ರ, ಪವಿತ್ರಸ್ಥಳ.

Bethink' (ಬಿಥಿಂಕ್) vt. i. reflect, stop to think. ಆಲೋಚಿಸು, ಚಿಂತನೆಮಾಡು, ವಿಚಾರಮಾಡಿ ನೋಡು, ಪರ್ಯಾಲೋಚಿಸು.

Bethral (ಬಿಥ್ರಾಲ್) vt. enslave. ಗುಲಾಮನಾಗಿ ಮಾಡು.

Bethump (ಬಿಥಂಪ್) vt. thrash. ಹೊಡೆ, ಗುದ್ದು.

Betide'(ಬಿಟೈಡ್)vt. i. happen to, befall. ಸಂಭವಿಸು, ಉಂಟಾಗು, ಘಟಿಸು.

Betimes' (ಬಿಟೈಮ್ಸ್) adv. in good time, early. ಸಕಾಲದಲ್ಲಿ, ಮುಂಚಿತವಾಗಿ, ಸಮಯಕ್ಕೆ ಸರಿಯಾಗಿ.

Betise (ಬೆಟೀಜ್) n. some foolish act or remark. ಮೂರ್ಖತನದ ಕಾರ್ಯ ಅಥವಾ ಮಾತು.

Bet'o'ken (ಬಿಟೋಕನ್) vt. signify. ಸೂಚಿಸು, ಮುಂದಾಗಿ ತಿಳಿಸು, ಚಿಹ್ನೆಯಾಗಿರು.

Betray(ಬಿಟ್ರೇ)vt.give up or reveal treacherously. ವಿಶ್ವಾಸಘಾತ ಮಾಡು, ದ್ರೋಹಮಾಡು, ಗುಟ್ಟು ಹೊರಗೆಡಹು.

Betray'al(ಬಿಟ್ರೇಅಲ್) n. act of betraying. ವಿಶ್ವಾಸಘಾತಕತನ, ವಂಚಿಕೆ ದ್ರೋಹ, ಗುಟ್ಟು ಹೊರಗೆಡಹುವಿಕೆ.

Betroth (ಬಿಟ್ರೋತ್) vt. promise in marriage. (ಮದುವೆಗೆ)ನಿಶ್ಚಿತಾರ್ಥ ಮಾಡು, ವಾಗ್ದಾನಮಾಡು.

Betrothal (ಬಿಟ್ರೋದಲ್)n. engagement to marry. ಮದುವೆಯ ನಿಶ್ಚಿತಾರ್ಥ.

Bett'er(ಬೆಟರ್)a. good in a greater degree. ಉತ್ತಮತರದ, ಲೇಸಾದ, ಗುಣಕರ. vt. i. improve, surpass. ಸುಧಾರಿಸು, ಇನ್ನೂ ಉತ್ತಮವಾಗಿ ಮಾಡು, ಮೀರಿಸು n. [plu] one's superiors. ಉತ್ತಮರು, ದೊಡ್ಡವರು, ಶ್ರೇಷ್ಠರು.

Better ment(ಬೆಟರ್‌ಮೆಂಟ್) n. improvement. ಸುಧಾರಣೆ, ಉತ್ತಮತೆ.

Between', betwixt(ಬಿಟ್ವೀನ್, ಬಿಟ್ವಿಕ್ಸ್ಟ್) prep. in or into a space, interval. ನಡುವೆ, ಮಧ್ಯೆ, ಒಳಗೆ b. two fires, liable to attacks of opposing sides. ಉಭಯ ಸಂಕಟಿದಲ್ಲಿರು.

Bev'el (ಬೆವೆಲ್) n. sloping edge,an instrument like compasses used for measuring angles. ಇಳಿಜಾರು, (ಬಾಗಿದ)ಅಂಚು, ಕೈವಾರದಂತಿರುವ ಕೋಣಗಳನ್ನು ಆಳೆಯುವುದಕ್ಕೆ ಉಪಯೋಗಿಸುವ ಸಲಕರಣೆ.


Bevel

Bev'erage (ಬೆವರೆಜ್) n. drink, liquor. ಪಾನಕ,ಪಾನಕದಮದ್ಯ,ಪಾನೀಯ.

Beves (ಬೀವ್ಸ್) n. pl. animals of ox kind. ಹಸು,ಎತ್ತು ಮುಂತಾದ ಪ್ರಾಣಿಗಳು.

Bev'y (ಬೆವಿ) n. a flock of birds, a company of ladies. ಪಕ್ಷಿಗುಂಪು, ಹಕ್ಕಿಗಳ ಹಿಂಡು, ಸ್ತ್ರೀಯರ ಸಮೂಹ.

Bewail' (ಬೀವೇಲ್) vt. i. lament, mourn for. ಪ್ರಲಾಪಿಸು, ದುಃಖಪಡು, ಶೋಕಿಸು.

Beware'(ಬಿವೇರ್)vt i. be on one's guard. ಎಚ್ಚರಿಕೆಯಾಗಿರು, ನೋಡಿಕೊಳ್ಳು, ಎಚ್ಚರಹಿಡಿ, ಹುಷಾರಾಗಿರು, ಜಾಗ್ರತನಾಗಿರು.

Bewet (ಬಿವೆಟ್) vt. wet, moisten. ತೋಯಿಸು, ನೆನೆಯಿಸು.

Bewil'der (ಬಿವಿಲ್ಡರ್) vt. perplex, confuse. ದಿಗ್ಭ್ರಮೆ ಹಿಡಿಸು, ಗಾಬರಿಪಡಿಸು, ಕಂಗೆಡಿಸು.

Bewitch' (ಬಿವಿಚ್) vt. cast magic spell on, fascinate, delight. ಮಾಟಮಾಡು, ಮರುಳು ಮಾಡು, ಮನರಂಜಿಸು.

Bewray (ಬಿರೇ)vt reveal, disclose. ಹೊರಗೆಡವು, ಗುಟ್ಟು ರಟ್ಟುಮಾಡು.

Bey,beg (ಬೇ,ಬೇಗ್)n. Turkish Governor of a province. ಟರ್ಕಿಯ ಪ್ರಾಂತಶಾಸಕ.

Beyond (ಬಿಯಾಂಡ್) adv. & prep. farther away, farther on. ಆಚೆ, ಆಚೆಯುಕಡೆ, ದೂರದಲ್ಲಿ, ಇನ್ನೂ ಮುಂದಕ್ಕೆ.

Bezel (ಬೆಸಲ್) n. sloped edge of a chisel, oblique faces of cut gem ಉಳಿಯ ಏಣು; ರತ್ನಗಳ ಪಟ್ಟೆಯ ಮುಖ.

Bezique' (ಬಿಝೀಕ್) n. card game. ಇಸ್ಪೀಟು ಆಟದಬಗೆ.

Bezonian (ಬೆಜೋನಿಯನ್) n. raw, recruit, wretch, knave. ಹೊಸದಾಗಿ ಕೆಲಸಕ್ಕೆ ಸೇರಿರುವವನು, ಮೋಸಗಾರ, ಕೆಟ್ಟವನು.

Biang'ular (ಬೈಆಂಗುಲರ್) a. having two angles ದ್ವಿಕೋಣಗಳ.

Bi'as (ಬೈಯಾಸ್) n. prejudice, predisposition, oblique direction. ಪಕ್ಷಪಾತ, ಒಲವು, ಅಸಿಕೆ, ಮನಸ್ಸಿನ ಇಳಿತ, ಬಾಗು.

Bib (ಬಿಬ್) vi. drink fruegently. ಅತಿಯಾಗಿ ಕುಡಿ.

Bib'ber(ಬಿಬರ್)n.drunkard. ಕುಡುಕ.

Bi'ble (ಬೈಬಲ್) n. Old & New Testaments. ಕ್ರೈಸ್ತರ ಸತ್ಯವೇದ, ಬೈಬಲ್.

Bibliog'raphy (ಬಿಬ್ಲಿಆಗ್ರಫಿ) n. history of, account of books. ಗ್ರಂಥಗಳ ವಿವರಣೆ, ಗ್ರಂಥವಿವರಣಪಟ್ಟಿ.

Bibliolatry (ಬಿಬ್ಲಿಯಾಲಟ್ರಿ) n worship of books ಪುಸ್ತಕಾರಾಧನೆ.

Bib'liophile (ಬಿಬ್ಲಿಒಫೈಲ್) n. book lover. ಪುಸ್ತಕಪ್ರೇಮಿ, ಪುಸ್ತಕಸಂಗ್ರಾಹಕ.

Biblist (ಬಿಬ್ಲಿಸ್ಟ್) n. one who is conversant with the Bible. ಬೈಬಲನ್ನು ಚೆನ್ನಾಗಿ ತಿಳಿದವನು.

Bibulous (ಬಿಬ್ಯುಲಸ್) a. spongy, absorbant. ತೇವ, ಹೀರುವ.

Bicente'nary (ಬೈಸೆಂಟಿನರಿ) a. pertaining to two hundred years. ಇನ್ನೂರು ವರ್ಷದ, ದ್ವಿಶತಮಾನದ.

Bicephalous (ಬೈಸೆಫಲಸ್)a. having two heads. ಎರಡು ತಲೆಗಳುಳ್ಳ, ದ್ವಿಶೀರ್ಷಿ.

Bicker (ಬಿಕರ್) vi. quarrel, patter, glitter. ಜಗಳವಾಡು, ಪಟಪಟ ಶಬ್ದ ಮಾಡು, ಮಿನುಗು.

Bick'ering (ಬಿಕರಿಂಗ್) n. wrangling, moving quickly. ಜಗಳ. ಕಲಹ, (ನದಿ) ವೇಗವಾಗಿ ಹರಿಯುವದು.

Bi'cycle (ಬೈಸಿಕಲ್) n. two-wheeled velocipede. ವೇಗವಾಗಿ ಚಲಿಸುವ ಎರಡು ಚಕ್ರದ ಕಾಲುಗಾಡಿ, ಬೈಸಿಕಲ್.

Bid (ಬಿಡ್) vt. i. offer, invite, command. ಹರಾಜಿನಲ್ಲಿ (ಲಿಲಾವಿನಲ್ಲಿ, ಏಲಂನಲ್ಲಿ) ಕ್ರಯಕ್ಕೆ ಕೇಳು, ಬರಹೇಳು, ಅಪ್ಪಣೆ ಮಾಡು, ಆಜ್ಞೆಮಾಡು. b. fair, promise well. ಭರವಸೆಕೊಡು, ಆಸೆ ತೋರು. b. one good-bye. ಬೀಳ್ಕೊಡು.

Bidd'ing (ಬಿಡಿಂಗ್) n. commend, offer ಅಪ್ಪಣೆ, ಕರೆಯೋಣ, ಕೇಳಿದ, ಬೇಡಿವ ಬೆಲೆ, 'ವಾರು'.

Bide (ಬೈಡ್) vt. i. abide. ಕಾದುಕೊಂಡಿರು, ಇರು, ಸೀರಿಕ್ಷೆಮಾಡು, ಸಹಿಸು, ತಡಿ.

Bidental (ಬೈಡೆನ್ಟಲ್) adj. having two teeth. ದ್ವಿದಂತಿ, ಎರಡು ಹಲ್ಲುಗಳುಳ್ಳ.

Bienn'ial (ಬೈಯನಿಅಲ್) a. lasting for two years, happening once in two years. ಎರಡು ವರ್ಷಕ್ಕೊಮ್ಮೆ ಸಂಭವಿಸುವ, ಎರಡು ವರ್ಷಗಳ, ದ್ವೈವಾರ್ಷಿಕ.

Bier (ಬಿಅರ್) n. carriage on which coffin is taken to the grave. ಶಿದಿಗೆ, ಚಟ್ಟ, ಶವಹೊರುವ ವಾಹನ, ಹೆಣದ ಶಿಬಿಕೆ.

Biest'ings (ಬೀಸ್ಟಿಂಗ್ಸ್) n. pl. see beestings.

Bif'urcate (ಬೈಫರಕೇಟ್) vt. i. divide into two forks. ಎರಡು ಶಾಖೆ ಮಾಡು, ಕವಲೊಡೆ, ಶಾಖೆಯಾಗು.

Big (ಬಿಗ್) a. large, grown up. pregnant, important, boastful. ದೊಡ್ಡ, ಬಲಿತ, ಗರ್ಭಿಣಿಯಾದ, ಕೊಬ್ಬಿದ, ಮುಖ್ಯ, ಜಂಬದ, ಗರ್ವದ.

Big'amy (ಬಿಗಮಿ) n. having two wives or husbands at one time. ಇಬ್ಬರು ಹೆಂಡರು ಅಥವಾ ಗಂಡಂದಿರನ್ನು ಮಾಡಿಕೊಳ್ಳುವುದು.

Bigeminal (ಬೈಗೆಮಿನಲ್)a arranged in two pairs. ಎರಡುಜೋಡಿಗಳಲ್ಲಿರುವ

Big'ht (ಬೈಟ್) n. small bay. ಕೊಲ್ಲಿ.

Bigot (ಬಿಗಟ್) n. one blindly devoted to a particular creed or view. ಸ್ವಮತಾಂಧ, ಪರಮತವೈರಿ.

Big'otry (ಬಿಗಟ್ರಿ) n. blind zeal in religious matters. ಮತಾಭಿಮಾನ, ಪರಮತ ವೈರ.

Bilat'eral (ಬೈಲ್ಯಾಟರಲ್) a. having two sides. ಇತ್ತಟ್ಟಿನ, ಉಭಯಪಕ್ಷದ.

Bilbo (ಬಿಲ್ಬೋ) n. sword. ಕತ್ತಿ.

Bilboes (ಬಿಲ್ಬೋಸ್) n. pl, fetters. ಬೇಡಿ, ನೆಲಬೇಡಿ.



Bilboes

Bile (ಬೈಲ್) n. bitter fluid of liver, anger. ಸಿಡುಕು, ಪೈತ್ಯ, ಪಿತ್ತರಸ, ಕೋಪ.

Bilge (ಬಿಲ್ಜ್) vt. &. i. bulge, swell out. ಉಬ್ಬು, ಊದು.

Biliary (ಬಿಲಿಯರಿ) a. of the bile. ಪಿತ್ತರಸದ.

Biling'ual (ಬೈಲಿಙ್ಗ್ವಲ್) a. of or speaking two languages. ಎರಡು ಭಾಷೆಗಳ, ದ್ವಿಭಾಷಿ.

Bil'ious (ಬಿಲಿಅಸ್) a. pertaining to bile. ಪಿತ್ತದ, ಪಿತ್ತರಸದ.

Biliteral (ಬೈಲಿಟರಲ್)a. consisting of two letters. ಎರಡು ಅಕ್ಷರಗಳುಳ್ಳ.

Bilk (ಬಿಲ್ಕ್) vt. cheat, evade payment. ವಂಚಿಸು, ಮೋಸಮಾಡು.

Bill (ಬಿಲ್) n. beak of a bird, account, note, draft of law. ಚಂಚು, ಹಕ್ಕಿಯ ಕೊಕ್ಕು, ಮೂತಿ, ಚುಳ್ಳಿ, ಹುಂಡಿ, ಸಾಮಾನಿನ ಬೆಲೆಪಟ್ಟಿ, ಕಾನೂನಿನ ಮಸೂದೆ.

Bil'let (ಬಿಲ್ಲೆಟ್) n. small chit. ಚೀಟು, ಸಣ್ಣ ಕಾಗದ

Billet-doux' (ಬಿಲಿಡೂ) n. sweetmate's love letter. ಪ್ರೇಮ ಲಿಖಿತ, ಪ್ರೇಮಪತ್ರ.

Billiards (ಬಿಲಿಅರ್ಡ್ಸ್) n. a kind of game. ಜಂತದ ಗುಂಡಾಟ.



Billiards

Bill'ingsgate (ಬಿಲ್ಲಿಂಗ್ಸ್‌ಗೇಟ್) n. violent abuse. ಹೀನಬೈಗಳು.

Bill'ion (ಬಿಲ್ಯನ್) n. million millions. ಲಕ್ಷಕೋಟಿ, ಮಹಾಪದ್ಮ. ಶತಕೋಟಿ.

Bill'ow (ಬಿಲ್ಲೋ) n. great wave. ದೊಡ್ಡ ಅಲೆ; ತರಂಗ, ಸಮುದ್ರದ ಅಲೆ.

Billycock (ಬಿಲ್ಲಿಕಾಕ್) n. kind of felt hat, bowler hat. ಒಂದು ತೆರದ ಗುಂಡು ಟೋಪಿ.

Bi-mensal (ಬೈಮೆನ್ಸಲ್)a. occuring once in two months. ದ್ವೈಮಾಸಿಕ.

Bimonth'ly (ಬೈಮಂತ್ಲಿ) a. & adv. every two months. ದ್ವೈಮಾಸಿಕ.

Bin (ಬಿನ್) n. receptacle for corn, wine, coal, refuse, &c. ಪೆಟ್ಟಿಗೆ, ತೊಟ್ಟಿ, ಕಣಜ, ಕೋಣೆ, ಕಡಿಕೆ ಧಾನ್ಯವನ್ನಿಡುವ ಉಗ್ರಾಣ.

Binary (ಬೈನರಿ) a. having pairs, double. ಯುಗಳ, ಯುಗ್ಮ, ಜೋಡಿ.

Binate (ಬೈನೇಟ್) a. in pairs. ಯುಗ್ಮ, ಎರಡೆರಡು.



Binate leaves

Binaural (ಬೈನಾರಲ್) a. pertaining to both the ears. ಎರಡು ಕಿವಿಗಳಿಂದಲೂ ಕೇಳುವ.

Bind (ಬೈಂಡ್) vt. fasten, unite, wreath, be obligatory on, put into cover. ಕಟ್ಟು. ನಿರ್ಬಂಧದಲ್ಲಿಡು, ಬಿಗಿಸು, (ಉಪಕಾರದಿಂದ) ಬದ್ಧಪಡಿಸು, ಪುಸ್ತಕ ಹೊಲೆ, ರಟ್ಟು ಹಾಕು. b. over, oblige by bond. ಕಟ್ಟಿನೊಳಗೆ ಸಿಕ್ಕಿಸು. n. binder.

Binding (ಬೈಂಡಿಂಗ್) a. obligatory on. ಬಂಧನಕಾರಕ. n anything that binds. ಬಂಧ, ಕಟ್ಟು, ಗಾಯದ ಕಟ್ಟು, ಪುಸ್ತಕದ ರಟ್ಟು.

Bine (ಬೈನ್) n. flexible shoot of climbing plant. ಬಳ್ಳಿ, ಅಂಬು.

Binn'acle ಬಿನಕಲ್)n box of ship's compass. ಹೋರಾಯಂತ್ರದ ಪೆಟ್ಟಿಗೆ, ಹಡಗಿನ ದಿಕ್ಚಕ್ರ ಇಡುವ ಪೆಟ್ಟಿಗೆ.

Binoc'ulars (ಬೈನಾಕ್ಯುಲರ್ಸ್) n. field-glasses.



Binoculars

Bino'mial (ಬೈನೋಮಿಅಲ್) a. consisting of two terms or parts joined by + or -. ಬೀಜಗಣಿತದಲ್ಲಿ ಎರಡು ಅಂಗಗಳುಳ್ಳ ಪರಿಮಾಣ.

Biogenesis (ಬಯೋಜೆನಿಸಿಸ್) n. hypothesis that life is derived from life. ಜೀವದಿಂದ ಜೀವ ಎಂಬ ತತ್ವ.

Biog'raphy (ಬಯಾಗ್ರಫಿ) n. written life of person. ಜೀವನ ವೃತ್ತಾಂತ, ಜೀವನ ಚರಿತ್ರೆ.

Biology (ಬಯಾಲಜಿ) n. science of physical life of animals & plants ಪ್ರಾಣಿವನಸ್ಪತಿವಿಜ್ಞಾನ, ಜೀವಶಾಸ್ತ್ರ.

Bioscope (ಬಯುಸ್ಕೋಪ್) n. early form of cinematograph. ಚಲನಚಿತ್ರ ದರ್ಶಕದ ಪೂರ್ವರೂಪ.

Bi'ped (ಬೈಪೆಡ್) a. two feeted. ಎರಡು ಕಾಲಿನ, ದ್ವಿಪಾದಿ.

Bipolar (ಬೈಪೋಲರ್) a. having two poles. ಎರಡು ಧ್ರುವಗಳುಳ್ಳ, ದ್ವಿಧ್ರುವಿ.

Bird(ಬರ್ಡ್) n. feathered animal, ಪಕ್ಷಿ, ಹಕ್ಕಿ. bs. of same feather, persons of same character. ಒಂದೇ ಗುಣದವರು. b. of passage, migratory. ಪ್ರವಾಸಿಕ, ತಿರುಗಾಡುವ.

Biquadratic (ಬೈಕ್ವಾಡ್ರಾಟಿಕ್) a. square of a square. ಚತುರ್ಘಾತ, ವರ್ಗದ ವರ್ಗ.

Birch (ಬರ್ಚ್)n. kind of tree with smooth bark. ನುಣುಪಾದ ತೊಗಟೆಯುಳ್ಳ ಒಂದು ತೆರದ ಮರ.

Birdlime (ಬರ್ಡ್‌ಲೈಮ್) n. stuff used in catching birds. ಹಕ್ಕಿ ಹಿಡಿಯುವುದಕ್ಕೆ ಉಪಯೋಗಿಸುವ ಅಂಟು.

Biretta (ಬೈರೆಟಾ) n. a kind of square cap. ಚಚ್ಚೌಕವಾದ ಒಂದು ತೆರದ ಟೋಪಿ.

Birth (ಬರ್ಥ್) n. origin, descont, bringing forth offsprings, being born. ಹುಟ್ಟು, ಪ್ರಾರಂಭ, ಜನ್ಮ, ಆದಿ, ಜನನ. give b. to ಹೆರು. b. control. ಸಂತಾನ ನಿರೋಧ, ಹುಟ್ಟುತಡೆ, noble b. ಕುಲೀನತ್ವ. b. place. ಹುಟ್ಟಿದ ಸ್ಥಳ. b. right. ಜನ್ಮದಿಂದ ಪಡೆದ ಹಕ್ಕು.

Bis (ಬಿಸ್) n. (music) once again, ಮತ್ತೊಮ್ಮೆ.

Bis'cuit (ಬಿಸ್‌ಕಿಟ್) n. dry & crisp bread in small cakes. ಬಿಸ್ಕೀಟು, ಬಿಸ್ಕತ್ತು, ಗಾರಿಗೆ, ಹಪ್ಪಳ, ರೊಟ್ಟಿ.

Bisect' (ಬೈಸೆಕ್ಟ್) vt. divide into two equal parts. ಸಮನಾಗಿ ಎರಡು ಭಾಗಮಾಡು. n. bisec'tion.

Bisexual (ಬೈಸೆಕ್ಷುಅಲ್) n. having both sexes in one. ಉಭಯ ಲಿಂಗಿ.

Bish'op (ಬಿಶಪ್) n. governor of biocese, piece in chess. ಕ್ರೈಸ್ತ ಪ್ರಧಾನ ಗುರು, ಧರ್ಮಾಧಿಪತಿ, ಚದುರಂಗ ಆಟದಲ್ಲಿ ಒಂಟೆ.

Bish'opric (ಬಿಶಪ್ರಿಕ್) n. office of bishop. ಪ್ರಧಾನ ಗುರುತ್ವ, ಅವನ ಆಧಿಪತ್ಯ.

Bison (ಬೈಸನ್) n. wild ox, buffalo. ಕಾಡು ಕೋಣ, ಕಾಡೆಮ್ಮೆ, ಕಾಟಿ.



Bison

Bisque (ಬಿಸ್ಕ್) n. white unglared porcelain. ಬಿಳಿಯ ಪಿಂಗಾಣಿ.

Bistoury (ಬಿಸ್ಟರಿ) n. a surgeon's narrow knife. ಶಸ್ತ್ರಚಿಕಿತ್ಸಕನ ಸಣ್ಣ ಚೂರಿ.

Bit(ಬಿಟ್)n.small piece or amount ಪಟ್ಣ ಚೂರು, ತುಣುಕು, ತುತ್ತು, ಪವಳ, ಮೊಟಕು, ತುಂಡು, ಸ್ವಲ್ಪ, ರವಷ್ಟು.

Bitch (ಬಿಚ್) n. female dog, &c. abusive term for a woman. ಹೆಣ್ಣು ನಾಯಿ, ತೋಳ ಅಥವಾ ನರಿ; ಸೂಳೆ, ಗುಡಿಸೆಟ್ಟಿ,(ಹೆಂಗಸನ್ನು ಬಯ್ಯುವ ಮಾತು)

Bite (ಬೈಟ್)[p. & pp. bitten] seize or tear with the teeth, penetrate grip, ಕಡಿಯು, ಕಚ್ಚು, ಖಾರವಾಗು. b. dust, fall in battle. ಸಾಯು, n. biting, mouthful. ಕಚ್ಚುವುದು, ತುತ್ತು, ಖಾರವಾಗಿರುವುದು.

Bi'ting (ಬೈಟಿಂಗ್) a. cutting, severe. ಕಚ್ಚುವಂಥ, ಉಗ್ರವಾದ, ಖಾರವಾದ, ತೀಕ್ಷ್ಣ.

Bitt'er (ಬಿಟ್ಟರ್) a. acid to the taste, virulent, sharp. ಕಹಿಯಾದ, ತಿಕ್ತ, ಕಟು, ಕ್ರೂರ, ತೀಕ್ಷ್ಣ. n. -ness, sharp taste, hatred. ಕಹಿ; ದ್ವೇಷಭಾವ.

Bittern (ಬಿಟರ್ನ್) n. kind of heronlike bird. ಕೊಕ್ಕರೆಯಂತಿರುವ ಪಕ್ಷಿವಿಶೇಷ.

Bitts(ಬಿಟ್ಸ್) n. pl.pair of posts for fastening cables. ಹಡಗಿನಲ್ಲಿ ಲಂಗರಿನ ಹಗ್ಗ ಬಿಗಿಯುವುದಕ್ಕಾಗಿ ಇರುವ ಕಂಬಗಳು.

Bitu'men (ಬಿಟುಮನ್) n. inflammable minerals [naptha, asphalt, &c.] ಶಿಲಾಜಿತು, ರಾಳ, ಪೆಟ್ರೋಲಿಯಂ, ಇತ್ಯಾದಿ.

Bivalve (ಬೈವಾಲ್ವ್) a. with two valves. ಎರಡು ಕವಾಟಗಳುಳ್ಳ.

Biv'ouac (ಬಿವ್ವೊಅಕ್) n. encampment of army in the open air. ಸೈನ್ಯದ ಹಂಗಾಮಿ ಪಾಳೆಯ, ಬೈಲಲ್ಲಿ ಇಳಕೊಳ್ಳೋಣ.

Biweek'ly (ಬೈವೀಕ್ಲಿ) n. happening twice a week or once every two weeks. ವಾರಕ್ಕೆರಡು ಸಲದ, ಪಾಕ್ಷಿಕ.

Bizarre (ಬಿಜಾರ್)a. odd,fantastic, ವಿಲಕ್ಷಣ, ವಿಚಿತ್ರ.

Blab(ಬ್ಲಾಬ್) vt. i. talk much, tell secret. ಹರಟೆಬಡಿ, ಗುಟ್ಟು ಹೇಳು, ಹರಟು.

Black (ಬ್ಲಾಕ್) a. dark, cloudy, dusky, gloomy. ಕಪ್ಪು, ಕತ್ತಲು, ಮೋಡವಾದ, ಮಬ್ಬಾದ, ಮಸಕಾದ, ಕತ್ತಲಾದ. b. art, magic. ಮೋಡಿ, ಶೂನ್ಯವಿದ್ಯೆ. b. out, put out, obliterate, ದೀಪ ಆರಿಸು, ತೆಗೆದುಹಾಕು. b. sheep, untrust-worthy fellow. ನಂಬಲನರ್ಹ. in b. & white. ಬರೆವಣಿಗೆಯಲ್ಲಿ.

Blackbee'tle(ಬ್ಲಾಕ್ಬೀಟಲ್)n. cockroach. ಜೊಂಡಿಗ, ಜಿರಲೆ, ಎಕ್ಕಲೆ.

Black-board (ಬ್ಲಾಕ್-ಬೋರ್ಡ್) n. board used to write on with chalk. ಕಪ್ಪುಹಲಗೆ, ಬೋರ್ಡು.

Black'-book (ಬ್ಲಾಕ್-ಬುಕ್) n. a. book for registering crimes. ಗುಮಾನಿ ಆಸಾಮಿಗಳ ಪಟ್ಟಿ,ಪಾಪಪುರಾಣ.

Black-cattle (ಬ್ಲಾಕ್-ಕಾಟಲ್) n. oxen and cattle reared for slaughter. ಕಸಾಯಿಖಾನೆ ಪಶುಗಳು, ಗೊಡ್ಡು ಪಶುಗಳು.

Black'-coffee (ಬ್ಲಾಕ್-ಕಾಫಿ) n. milkless coffee. ಹಾಲಿಲ್ಲದ ಕಾಫಿ.

Black'en (ಬ್ಲಾಕನ್) vt. i. make black, defame. ಕಪ್ಪು ಹಚ್ಚು, ಹೆಸರು ಕೆಡಿಸು, ದೂಷಿಸು, ಮಾನನಷ್ಟಗೊಳಿಸು.

Black'guard (ಬ್ಲಗಾರ್ಡ್)n. scoundrel, foul-mouthed fellow. ನೀಚ, ಭಂಡ,ಪುಂಡ,ಪೋಲಿ,ಲುಚ್ಚ,ದುರ್ನೀತಿಯ.

Black'lead (ಬ್ಲಾಕ್ಲೆಡ್) n. plumbago. ಕರಿ ಸೀಸ.

Black'leg(ಬ್ಲಾಕ್ಲೆಗ್) n. notorious gambler and cheat. ಜೂಜುಗಾರ, ವಂಚಕ, ಠಕ್ಕ.

Black'list (ಬ್ಲಾಕ್ಲಿಸ್ಟ್) n. printed list of insolvents. cirminals. ದಿವಾಳಿಗಳ, ಗುಮಾನಿ ಆಸಾಮಿಗಳ ಪಟ್ಟಿ.

Black'mail(ಬ್ಲಾಕ್ಮೇಲ್) n. extortion by threats. ದರೋಡೆಯವನ ಲಂಚ, ಅನ್ಯಾಯದ ತೆರಿಗೆ.

Blackness (ಬ್ಲಾಕ್ನೆಸ್) n. quality of being black. ಕಪ್ಪಾಗಿರುವುದು, ಕೃಷ್ಣತೆ.

Black'shirt (ಬ್ಲಾಕ್ಷರ್ಟ್)n. fascist ಇಟಲಿಯ ಫಾಸಿಸ್ಟ್ ಪಂಗಡದ ಕಪ್ಪಂಗಿಯವ.

Black'smith (ಬ್ಲಾಕ್ಸ್ಮಿತ್)n. smith working in iron. ಕಮ್ಮಾರ.

Bladde'r(ಬ್ಲಾಡರ್)n. membranous bag in human or other animal body,inflated thing. ಮೂತ್ರಕೋಶ,

ಉಚ್ಚೆಚೀಲ, ಗಾಳಿತುಂಬುವ ಚೀಲ, ಗಾಳಿಗುಳ್ಳೆ. gall b. ಪಿತ್ತಚೀಲ.

Blade(ಬ್ಲೇಡ್)n flat part of grass, cutting part of a knife,&c.,gay, dashing fellow. ಎಲೆ, ಗರಿ, ಕತ್ತಿ, ಧಾರೆ, ಸಾಹಸಿ, ಚತುರ.

Blade-bone (ಬ್ಲೇಡ್‌ಬೋನ್) n. the upper bone of the shoulder. ಭುಜದಮೇಲಿನ ಎಲುಬು.

Blain (ಬ್ಲೇನ್) n. boil, blister. ಹುಣ್ಣು, ಬೊಕ್ಕೆ, ಕುರು, ಗುಳ್ಳೆ.

Blamable(ಬ್ಲೇಮಬಲ್) a deserving of blame ನಿಂದನೀಯ, ದೂಷಿಸಲು ಯೋಗ್ಯವಾದ.

Blame(ಬ್ಲೇಮ್)vt.find fault with, censure. ನಿಂದಿಸು, ದೂಷಿಸು, ಆಕ್ಷೇಪಿಸು, ತೆಗಳು. n. ಅಪವಾದ, ಆಕ್ಷೇಪಣೆ.

Blame'less(ಬ್ಲೇಂಲೆಸ್)a. guiltless. innocent· ನಿರಪರಾಧಿ, ನಿರ್ದೋಷಿ.

Blame'worthy (ಬ್ಲೇಮ್‌ವರ್ದಿ) a. culpable. ನಿಂದಾರ್ಹನಾದ, ದೋಷಪ್ರದ, ದೂಷ್ಯ, ಅಪರಾಧಕ್ಕೀಡಾದ.

Blanch (ಬ್ಲಾಂಚ್) vt. i. whiten, grow pale. ಬೆಳ್ಳಗೆ ಮಾಡು, ಚೆಲುವೆ ಮಾಡು, ಬಿಳಿಚಿಕೊ, ಕಳೆಗುಂದು, ನಿಸ್ತೇಜನಾಗು.

Bland (ಬ್ಲಾಂಡ್) a. gentle, mild, balmy. ವಿನಯಶೀಲ, ಹಿತಕರವಾದ, ಮೃದುವಾದ, ಸುಖಕರ, ಕೋಮಲ.

Blandi'sh (ಬ್ಲಾಂಡಿಶ್) vt. flatter and coax. ಆದರಿಸು, ನೇವರಿಸು, ಲಾಲಿಸು.

Blan'dishment(ಬ್ಲಾಂಡಿಶ್‌ಮೆಂಟ್)n. soothing speech. ಒಳ್ಳೆಯ ಮಾತು, ಸಿಹಿಮಾತು, ಪುಸಲಾಯಿಕೆ, ಪ್ರಿಯಸ್ತುತಿ.

Blank (ಬ್ಲಾಂಕ್) a. empty, unwritten, straightforward. ಬಿಳಿಯ, ಏನೂ ಬರೆಯದ, ಖಾಲಿ, ಸರಳ, ನಿಷ್ಕಪಟ.

Blank'et (ಬ್ಲಾಂಕೆಟ್)n. large woollen covering for beds. ಕಂಬಳಿ, ಜಾಡಿ, ಹಾಸುಗಂಬಳಿ.

Blank'ly (ಬ್ಲಾಂಕ್ಲಿ)adv. helplessly, flatly. ಗಾಬರಿಯಾಗಿ, ಕಳೆಗುಂದಿ, ಶೂನ್ಯದೃಷ್ಟಿಯಿಂದ, ಸರಳವಾಗಿ, ಸ್ಪಷ್ಟವಾಗಿ.

Blankness (ಬ್ಲಾಂಕ್‌ನೆಸ್) n. the quality of being empty. ಶೂನ್ಯ, ಖಾಲಿಯಾಗಿರುವದು.

Blare (ಬ್ಲೇರ್) vt. i. make sound of trumpet, roar. ಮೊಳಗು; ಅರಚು. n. blaring noise. ಗರ್ಜನೆ.

Blaspheme(ಬ್ಲಾಸ್‌ಫೀಮ್)vt.i.talk impiously, curse and swear.ದೇವದೂಷಣೆಮಾಡು, ತೆಗಳು, ಶಪಿಸು.

Blas'phemous (ಬ್ಲಾಸ್ಫಿಮಸ್) a. impious, profane. ಈಶ್ವರನಿಂದನೆಯುಳ್ಳ, ದೇವದೂಷಕ.

Blas'phemy (ಬ್ಲಾಸ್ಫಿಮಿ) n. profane speech, profanity. ದೇವದೂಷಣೆ, ದೇವನಿಂದೆ.

Blast (ಬ್ಲಾಸ್ಟ್) n. gust of wind, sound of wind, instrument. ಬಿರುಗಾಳಿ, ಕೆಟ್ಟ ಗಾಳಿ, ಕೊಂಬಿನದನಿ. b. hopes ನಿರಾಶೆಗೊಳಿಸು, ಆಶಾಭಂಗ ಮಾಡು.

Blatant (ಬ್ಲೇಟೆಂಟ್) a. loud in a vulgar way. ಗಲಭೆಯ, ಅರಚುವ.

Blatter (ಬ್ಲಾಟರ್) vt. patter, talk much. ಅತಿಮಾತಾಡು, ಹರಟು.

Blaze' (ಬ್ಲೇಝ್) n. bright flame, fire, outburst of passion. ಉರಿ, ಧಗಧಗಿಸುವ ಜ್ವಾಲೆ, ಆಕ್ರೋಶ, ಉದ್ರೇಕ.burn with excitement, proclaim. ಉರಿ, ಪ್ರಜ್ವಲಿಸು, ರೇಗಿಬೀಳು, ಸಾರು.

Blazer (ಬ್ಲೇಜರ್) n. coloured jacket given to players at boating, golf, etc. ಆಟಗಾರರಿಗೆ ಕೊಡುವ ಬಣ್ಣದ ಅಂಗಿ.

Bla'zon (ಬ್ಲೇಝನ್) n. heraldic shield, coat of arms or banner. ವಂಶದಬಿರುದು, ಡಂಭ, ವಂಶವರ್ಣನೆಯ ಕುರುಹು. vt. make public. ಬಹಿರಂಗ ಮಾಡು, ಹೊಗಳು.

Blazonry (ಬ್ಲೇಜನರಿ) n. brightly coloured display, armorial bearings. ಉಜ್ವಲವಾದ ಪ್ರದರ್ಶನ, ವಂಶ ಲಾಂಛನ.

Bleach (ಬ್ಲೀಚ್) vt. i. whiten. ಬೆಳ್ಳಗೆ ಮಾಡು, ಚೆಲುವೆ ಮಾಡು, ಮಡಿಮಾಡು, ಬಿಳಿಯಾಗು.

Bleak (ಬ್ಲೀಕ್) a. cold, open, exposed. ಸಂತೋಷವಿಲ್ಲದ, ಉತ್ಸಾಹ ಶೂನ್ಯ, ಅತಿಶೀತವಾದ, ತಣ್ಣನೆ ಕೊರೆಯುವ, ನಿರ್ವರ್ಣ.

Blear (ಬ್ಲಿಯರ್) vt. make dull. make dim. ಮಬ್ಬುಗೊಳಿಸು, ಮಂಕು ಮಾಡು.

Bleat (ಬ್ಲೀಟ್) vt. i. cry as a sheep. ಕುರಿಯಂತೆ ಕೂಗು, ಅರಚು, ಪಿಸುಮಾತಾಡು. n. cry of a sheep. ಕುರಿಯ ಕೂಗು.

Bleb (ಬ್ಲೆಬ್) n. small blister or bubble on skin. ಬೊಬ್ಬೆ, ಗುಳ್ಳೆ.

Bleed (ಬ್ಲೀಡ್) vt. i. emit blood, extort money from, feel pity. ರಕ್ತ ಸುರಿಸು, ರಕ್ತತೆಗೆ, ಹಣಸುಲಿಗೆಮಾಡು, ದಯತೋರು.

Blemi'sh (ಬ್ಲೆಮಿಷ್) n. flaw, stain, defect. ಛಿದ್ರ, ನ್ಯೂನತೆ, ಕಳಂಕ, ಕುಂದುಕೊರತೆ.

Blemishless (ಬ್ಲೆಮಿಷ್ ಲೆಸ್) a. flawless, without defect. ನಿಷ್ಕಳಂಕ ನಿರ್ದೋಷಿ.

Blench (ಬ್ಲೆನ್ಷ್) vt. & i. flinch, start aside. ವಿಮುಖನಾಗು, ಬೇರೆಕಡೆ ತಿರುಗು.

Blend (ಬ್ಲೆಂಡ್) vt. mix, become one. ಸೇರಿಸು, ಮಿಶ್ರಣಮಾಡು, ಬೆರಿಕೆ ಮಾಡು, ಬೆರಸು, ಒಂದಾಗು. n. mixture ಮಿಶ್ರಣ, ಬೆರಕೆ.

Blent (ಬ್ಲೆಂಟ್) pt. & p. p. of blend, blend. ಧಾತುವಿನ ಭೂತಕಾಲದ ರೂಪ.

Bless (ಬ್ಲೆಸ್) vt. i. consecrate, praise, make happy. thank. ಹರಸು, ಆಶೀರ್ವದಿಸು, ಸ್ತುತಿಸು, ಅನುಗ್ರಹಿಸು, ಅಭಿನಂದಿಸು.

Blessed, blest (ಬ್ಲೆಸೆಡ್, ಬ್ಲೆಸ್ಟ್) a. consecrated, revered, happy, ಮಂಗಲಾತ್ಮ, ಧನ್ಯ, ಸುಖಿ, ಪೂಜ್ಯ.

Blessedness (ಬ್ಲೆಸೆಡ್ ನೆಸ್) n. happiness, prosperity. ಸುಖ, ಧನ್ಯತೆ.

Bless'ing (ಬ್ಲೆಸಿಂಗ್) n. wish for happiness, gift. ಆಶೀರ್ವಾದ, ಹರಕೆ, ಅನುಗ್ರಹ, ದಾನ, ವರಪ್ರಸಾದ.

Bleth'er, blather (ಬ್ಲೆದರ್, ಬ್ಲಾದರ್) vi. talk nosense. ಹರಟೆ ಕೊಚ್ಚು; ಹರಟೆಹೊಡೆ, n. such talk. ಹರಟೆ.

Blight (ಬ್ಲೈಟ್) n. plant disease, ruin, decay. (ಗಿಡಗಳ)ಕಾಡಿಗೆ ರೋಗ, ಕೇಡು, ಮಬ್ಬು, ನಾಶ; vt. destroy, ನಾಶಮಾಡು, ಭಂಗಪಡಿಸು.

Blimp (ಬ್ಲಿಂಪ್) n. kind of small airship. ಒಂದು ತೆರದ ಸಣ್ಣ ವಾಯುಯಾನ.

Blind (ಬ್ಲೈಂಡ್) a. without sight. reckless, ignorant. ಕುರುಡ, ಗುಪ್ತವಾದ, ಅಂಧ, ಮರೆಯಾಗಿರುವ, ಬುದ್ಧಿಗೇಡಿ, ಮೂಢ, ಅವಿವೇಕಿ, ವಿವೇಚನೆಯಿಲ್ಲದ. blind alley, ಒಂದೇಕಡೆ ಪ್ರವೇಶವಿರುವ ಮಾರ್ಗ.

Blind'fold (ಬ್ಲೈಂಡ್‌ಫೋಲ್ಡ್) a. & adv. with eyes bandaged, reckless ಕಣ್ಣುಕಟ್ಟಿ, ಮುಚ್ಚಿದ, ವಿವೇಚನೆಯಿಲ್ಲದ. v. deprive sight by bandage. ಕಣ್ಣು ಕಟ್ಟು.

Blindl'y (ಬ್ಲೈಂಡ್ಲಿ) adv. without seeing, recklessly. ಕಣ್ಣು ಮುಚ್ಚಿ, ಹಿಂದುಮುಂದೆ ವಿಚಾರಿಸದೆ, ಅವಿವೇಕವಾಗಿ.

Blind'ness (ಬ್ಲೈಂಡ್‌ನೆಸ್) n. want of sight, ignorance, folly. ಕುರುಡು

ತನ, ಪರಿಜ್ಞಾನಶೂನ್ಯತೆ, ತಿಳಿಗೇಡಿತನ, ಅವಿವೇಕ, ದೋಷ.

Blinds(ಬ್ಲೈಂಡ್ಸ್)n. pl. screen for windows. ಕಿಟಕಿಗಳಿಗೆ ತೆರೆ.

Blink(ಬ್ಲಿಂಕ್)vt.i. wink, glimmer, evade. ಸನ್ನೆಮಾಡು, ಕಣ್ಣುಮಿಟಕಿಸು, ಮಿಣುಕು, ಮಿನುಗು, ಮರೆಮಾಚು, ತಪ್ಪಿಸು.

Blink'ers(ಬ್ಲಿಂಕರ್ಸ್)n plu. horse's eye-screens. ಕುದುರೆಯ ಕಣ್ಕಾಪು, ಕುದುರೆಯ ಮೊಗವಾಡ.

Bliss (ಬ್ಲಿಸ್)n. highest happiness. ಸುಖಪದ, ಪರಮಸುಖ, ಅತ್ಯಾನಂದ.

Blis'ter(ಬ್ಲಿಸ್ಟರ್)n. vesicle on skin ಗುಳ್ಳೆ, ಬೊಕ್ಕೆ, ಹೊಪ್ಪಳೆ, ಉಜ್ಜುಬೊಬ್ಬೆ.

Blithe, blithe'some (ಬ್ಲೈದ್-ಬ್ಲೈದ್‌ಸಮ್) sprightly. ಉಲ್ಲಾಸವುಳ್ಳ, ಉತ್ಸಾಹವುಳ್ಳ, ಹರ್ಷವುಳ್ಳ.

Blizz'ard (ಬ್ಲಿಝರ್ಡ್) n. storm of snow and wind. ಹಿಮದ ಬಿರುಗಾಳಿ, ಕೊರೆಯುವ ಚಳಿಗಾಲ.

Bloat (ಬ್ಲೋಟ್) vt. & i. swell, inflate. ಉಬ್ಬು, ಉಬ್ಬಿಸು, ಊದು, ಊದಿಸು.

Blob(ಬ್ಲಾಬ್)n. small round mass. ನೀರಿನಗುಳ್ಳೆ, ಉಬ್ಬಿದ ಬಟ್ಟು.

Block (ಬ್ಲಾಕ್) n. grooved pulley with a hook used for lifting weights. ಭಾರಎತ್ತುವುದಕ್ಕೆ ಉಪಯೋಗಿಸುವ ಕೊಕ್ಕೆಯುಳ್ಳ ರಾಟೆ.



Block

Block (ಬ್ಲಾಕ್) n. log, mass of stone, obstruction, square of building in town. ತೊಲೆ, ಮರದ ದಿಮ್ಮಿ, ಕಲ್ಲುಬಂಡೆ, ಅಡಿಗಲ್ಲು, ಪ್ರತಿಬಂಧಕ, ಮನೆಗಳ ಗುಂಪು.

Blockade' (ಬ್ಲಾಕೇಡ್) n. blocking up of place by hostile forces. ಮುತ್ತಿಗೆ, ಹಾದಿಕಟ್ಟುವಿಕೆ. vt. obstruct ತಡೆಗಟ್ಟು, ಹಾದಿಕಟ್ಟು.

Block'head (ಬ್ಲಾಕ್‌ಹೆಡ್) n. dolt, stupid fellow. ದಡ್ಡ; ಹೆಡ್ಡ, ಜಡ, ಮಡ್ಡಿ, ಮಂದ ಬುದ್ಧಿ, ಮೊದ್ದುತಲೆ.

Blockish (ಬ್ಲಾಕಿಷ್)a. stupid, dull. ದಡ್ಡ, ಹೆಡ್ಡ.

Blond, blonde (ಬ್ಲಾಂಡ್) a. fair. ಸುಂದರ, ಚಲುವ. n. fairy. ಚಲುವೆ.

Blood (ಬ್ಲಡ್) n. red liquid in veins of animals, murder, race, relationship, man of fashion. ರಕ್ತ, ನೆತ್ತರು, ಖೂನಿ, ಕೊಲೆ, ಜಾತಿ, ಕುಲ, ಬಾಂಧವ್ಯ, ಜಂಬಗಾರ. blue b., noble blood. ಕುಲೀನರಕ್ತ. bad b. enmity. ದ್ವೇಷ. make one's b. run cold, fill one with horror. ಭಯಪಡಿಸು, ಭೀತಿಗೊಳಿಸು.

Blood'hound(ಬ್ಲಡ್‌ಹೌಂಡ್)n. large dog for hunting (fig.) detective. ವಾಸನೆಯಿಂದ ಪತ್ತೆಹಿಡಿಯುವ ಬೇಟೆನಾಯಿ, ಗುಪ್ತಪೋಲೀಸಿನವ, ಪತ್ತೆದಾರ.

Blood'less (ಬ್ಲಡ್‌ಲೆಸ್) a. without blood, unfeeling. ರಕ್ತವಿಲ್ಲದ, ವಿವರ್ಣ, ನಿಶ್ಚೇತನ, ನಿಸ್ಸತ್ವ.

Blood'shed (ಬ್ಲಡ್‌ಶೆಡ್)n. spilling of blood, slaughter. ರಕ್ತಪಾತ, ಕೊಲೆ, ಪ್ರಾಣಹಾನಿ.

Blood'shot(ಬ್ಲಡ್‌ಶಾಟ್)a. (of eye) inflamed with blood. ಕೆಂಪೊರೆದ. ರಕ್ತದಿಂದ ಕೆಂಪೇರಿದ, ಕೆರಳಿದ.

Blood'sucker(ಬ್ಲಡ್‌ಸಕರ್)n. leech, extortioner, sponger. ಜಿಗಣೆ, ಜಿಗಳಿ, ಸುಲಿಗೆಗಾರ.

Blood'thirsty (ಬ್ಲಡ್‌ಥರ್ಸ್ಟಿ) a. having desire to shed blood. ರಕ್ತಪ್ರಿಯ, ಘಾತಕ, ಹಿಂಸಕ.

Bloodvessel (ಬ್ಲಡ್‌ವೆಸಲ್) n. vein or artery conveying blood. ರಕ್ತನಾಳ, ರಕ್ತನಾಡಿ, ಧಮನಿ.

Bloody(ಬ್ಲಡಿ)a. of blood, murderous, cruel. ರಕ್ತಸಂಬಂಧವಾದ, ರಕ್ತಮಯ, ಕೊಲೆಯ, ಕ್ರೂರಸ್ವಭಾವದ.

Bloom(ಬ್ಲೂಮ್)n. flower, blossoming, prime, freshness. ಹೂವು, ಪುಷ್ಪ, ಪ್ರಾಯ, ಲಾವಣ್ಯ. vi. flower, flourish. ಹೂವುಬಿಡು, ಅರಳು, ಏಳಿಗೆಯಲ್ಲಿರು, ಯೌವ್ವನಭರದಲ್ಲಿರು.

Blossom (ಬ್ಲಾಸಮ್) n. flower bud, flower. ಮೊಗ್ಗು, ಹೂವು vi. flower. ಹೂವಾಗು, ವಿಕಸಿತವಾಗು, ಅರಳು.

Blot(ಬ್ಲಾಟ್) n. spot of ink, stain, blemish. ಕರೆ, ಕಲೆ, ದೋಷ, ಅಪನಿಂದೆ vt. disgrace, destroy. ಅಪಮಾನಿಸು, ಕೆಡಿಸು, ತೊಡೆದುಹಾಕು, ಅಳಿಸಿಬಿಡು.

Blotch(ಬ್ಲಾಚ್) n. pustule pimple or spot on the skin. ಮಡಿವೆ, ಗುಳ್ಳೆ, ಚರ್ಮದ ಮೇಲಿನ ಮಚ್ಚೆ, ಹೊಪ್ಪಳೆ.

Blott'er (ಬ್ಲಾಟರ್) n. pad of blotting paper ಒತ್ತುಕರಡದ ಶಿಂಬೆ, ಮಸಿ ಹೀರುವ ಕಾಗದದ ಕಟ್ಟು.

Blotting-paper (ಬ್ಲಾಟಿಂಗ್-ಪೇಪರ್) n.an absorbent paper. ಒತ್ತುಕರಡು, ಮಸಿ ಹೀರುವ ಕಾಗದ.

Blouse (ಬ್ಲೌಸ್) n. loose bodice for women, workman's upper garment, ರವಿಕೆ, ಮೇಲಂಗಿ.

Blow (ಬ್ಲೋ) vt. i. produce a current of air, breathe, blossom, boast (ಗಾಳಿ) ಬೀಸು, ಊದಿಬಿಡು, ಏದು, ತೇಕು, ಅರಳು, ಜಂಬಕೊಚ್ಚು. n stroke, calamity. ಏಟು, ಹೊಡೆತ b. one's own trumpet, praise oneself. ಆತ್ಮಶ್ಲಾಘನೆ ಮಾಡಿಕೊ.

Blowpipe (ಬ್ಲೋಪೈಪ್) n. tube for driving a current of air through a flame. ಊದುಗೊಳವೆ.



Blowpipe

Blowzed (ಬ್ಲೌಸ್ಡ್) a. red-faced. ಕೆಂಪುಮೋರೆಯ.

Blowzy (ಬ್ಲೌಸಿ)a. red-faced. ಕೆಂಪುಮೋರೆಯ.

Blubb'er (ಬ್ಲಬರ್) n. whale fat, weeping noisily ತಿಮಿಂಗಿಲದ ಕೊಬ್ಬು, ಮೀನಿನಎಣ್ಣೆ, ಬಿಕ್ಕಿಬಿಕ್ಕಿ ಅಳುವುದು.

Bludg'eon(ಬ್ಲಜನ್)n.heavy stick. ದೊಡ್ಡ ಟೊಣಪೆ, ಲಾಠಿ, ಸೋಟೆ.

Blue (ಬ್ಲೂ) a. of the blue colour, ನೀಲಿಯ, n. colour, sky, sea. ನೀಲಿಯಬಣ್ಣ, ಅಗಸರು ಬಟ್ಟೆಗೆ ಹಾಕುವ ನೀಲಿಯಪುಡಿ, ಆಕಾಶ, ಸಮುದ್ರ, b. devils, depressed feelings, ಖೇದ, ಖಿನ್ನತೆ, ಮನೋವ್ಯಥೆ.

Blue'beard (ಬ್ಲೂಬಿಯರ್ಡ್) n. man of many wives. ಅನೇಕ ಹೆಂಡಿರ ಗಂಡ, ಬಹುಪತ್ನೀಕ.

Blueblood(ಬ್ಲೂಬ್ಲಡ್)n.high birth, aristocratic descent. ಉತ್ತಮಕುಲ, ಶ್ರೀಮಂತವಂಶ.

Blue'book (ಬ್ಲೂಬುಕ್) n. publication issued by Parliament. ಪಾರ್ಲಿಮೆಂಟ್ ವರದಿ ಪುಸ್ತಕ.

Blue'jacket(ಬ್ಲೂಜಾಕೆಟ್)n. sailor, ನೌಕಾ ಸೈನಿಕ.

Blue'stocking (ಬ್ಲೂಸ್ಟಾಕಿಂಗ್) n. lady devoted to learning. ವಿದ್ಯಾವತಿ, ವಿದುಷಿ, ಪಂಡಿತೆ.

Bluestone (ಬ್ಲೂಸ್ಟೋನ್) n. copper sulphate. ಮೈಲುತುತ್ತ.

Bluff(ಬ್ಲಫ್) a. blustering, blunt, frank, steep. ಒರಟಾದ, ದಾಷ್ಟಿಕ, ನಿಷ್ಕಪಟ, ನಯವಿಲ್ಲದ. n. high, steep bank, [slang] an excuse. ದಿಣ್ಣೆ, ಕಡಿದಾದ ಬಂಡೆ, ಭೂಶಿರ, ಸುಳ್ಳುನೆಪ.

Blund'er (ಬ್ಲಂಡರ್) vt. i. make a gross mistake. ದೊಡ್ಡ ತಪ್ಪುಮಾಡು. n. gross mistake. ದೊಡ್ಡತಪ್ಪು.

Blun'derbuss (ಬ್ಲಂಡರ್ ಬಸ್)n. short handgun with a wide bore. ಸಣ್ಣತೋಪು, ಕೈಫಿರಂಗಿ.

Blunderhead (ಬ್ಲಂಡರ್ ಹೆಡ್) n. stupid fellow. ದಡ್ಡ.

Blunt (ಬ್ಲಂಟ್) a. rough, having a dull edge, outspoken, dull. ಮೊಂಡ, ಹರಿತವಿಲ್ಲದ, ದಾಕ್ಷಿಣ್ಯವಿಲ್ಲದ, ನಿರ್ಭಿಡೆಯು, ದಡ್ಡ, ಮೊರಟು.

Blur' (ಬ್ಲರ್) n. blot, stain, spot, ಚಿತ್ತು, ಕಲೆ, ಕರೆ, ದೋಷ. vt. make indistinct stain. ಅಸ್ಪಷ್ಟಗೊಳಿಸು, ಕಳಂಕಗೊಳಿಸು.

Blurt (ಬ್ಲರ್ಟ್) vi. utter tactlessly, ವಿಚಾರವಿಲ್ಲದೆ ಮಾತಾಡು.

Blush (ಬ್ಲಶ್) vi. become red in face, be ashamed, ನಾಚಿಕೆಯಿಂದ ಮುಖ ಕೆಂಪೇರು, ಬಣ್ಣಗುಂದು, ನಾಚು, n. blushing, ಮುಖ (ನಾಚಿಕೆಯಿಂದ) ಕೆಂಪಾಗುವುದು.

Bluster (ಬ್ಲಸ್ಟರ್) vt. i. storm boisterously, bully, ಗರ್ಜಿಸು, ಅಬ್ಬರಿಸು, ದಬಾಯಿಸು. n. blustering, boasting. ಗದ್ದಲ, ಬಡಾಯಿ, ಜಲ್ಲಿ, ಅಬ್ಬರ.

Bo(ಬೋ)int, sound used to startle. ಬೆದರಿಸುವುದಕ್ಕೆ ಉಪಯೋಗಿಸುವ ಮಾತು.

Boa (ಬೋ ಅ) n. huge nonpoisonous snake. ಹೆಬ್ಬಾವು a long wrap of narrow silk strip of cloth worn on the neck. ಕತ್ತಿಗೆ ಕಟ್ಟಿಕೊಳ್ಳುವ ರೇಷ್ಮೆಯ ಪಟ್ಟಿ.


Boa

Boar (ಬೋರ್) n. male pig. ಗಂಡು ಹಂದಿ.

Board(ಬೋರ್ಡ್)n. thin plank, table food, council, thick stiff paper (pl.) the stage, deck of a ship, ಹಲಗೆ, ಊಟದಮೇಜು, ಊಟ, ಭೋಜನ, ಆಲೋಚನಾಸಭೆ, ಸಮಿತಿ, ಸಂಸ್ಥೆ, ರಟ್ಟು, ರಂಗಭೂಮಿ, ಹಡಗಿನ ಮೇಲ್ಗಡೆ. vt. i. cover with boards, provide with food, embark on. ಹಲಗೆ ಹಾಸು, ಊಟಕೊಡು, ಹಡಗು ಹತ್ತು.

Board'er (ಬೋರ್ಡರ್) n. one who is lodged & fed at a certain price. ದುಡ್ಡುಕೊಟ್ಟು ಊಟಮಾಡುವವನು.

Boarding (ಬೋರ್ಡಿಂಗ್) n. covering with boards, feeding. ಹಲಗೆ ಸೇರುವೆಮಾಡುವುದು, ಭೋಜನ.

Boarding school (ಬೋರ್ಡಿಂಗ್ ಸ್ಕೂಲ್) n. school where boys and girls board. ಅನ್ನಹಾಕಿ ವಿದ್ಯೆ ಕಲಿಸುವ ಪಾಠಶಾಲೆ.

Boasn (ಬೋಸ್ನ್) n. ship's officer in charge of sails, &c. ಹಡಗಿನ ದೋಣಿ, ಹಾಯಿ ಮೊದಲಾವುಗಳ ಅಧಿಕಾರಿ, ತಂಡೇಲು.

Boast (ಬೋಸ್ಟ್) n. a brag, ಜಂಬ, ಹೆಮ್ಮೆ, ಬಡಾಯಿ. vt. i. brag, magnify or exalt one's self. ಬಡಾಯಿ ಕೊಚ್ಚು, ಉಬ್ಬು, ಹೆಗ್ಗಳಿಸು.

Boat (ಬೋಟ್) n. small vessel, steamer. ದೋಣಿ, ಸಣ್ಣ ಹರಗೋಲು, ಜಹಜು; boating. ದೋಣಿ ನಡೆಸೋಣ. b. man. ಅಂಬಿಗ, ನಾವಿಕ, ದೋಣಿಗ.

Boatfly (ಬೋಟ್‌ಫ್ಲೈ) n. kind of insect. ನೀರಿನಲ್ಲಿರುವ ಒಂದು ಕೀಟ.

Boatswain (ಬೋಟ್‌ಸ್ವೆಯ್ನ್) n. officer in a ship. ಹಡಗಿನ ಮೇಸ್ತ್ರಿ.

Bob (ಬಾಬ್)n. short blow, bobbed hair, weight on pendulum, ದೆಬ್ಬೆ, ಏಟು, ಕತ್ತರಿಸಿದ ಕೂದಲು, ತೂಗಾಡುವ ಗುಂಡು, ಜುಮುಕಿ, ಲೋಲಾಕು, ಮೊದಲಾದುವು. vt. i. cheat, cut short. ಮೋಸಮಾಡು, ಕತ್ತರಿಸು.

Bobbery (ಬಾಬರಿ) n. noisy row, disturbance. ಗಲಾಟೆ, ಗೊಂದಲ.

Bobbin (ಬಾಬಿನ್)h. spool for holding thread. ದಾರ ಸುತ್ತುವ ಉರುಳೆ.

Bobbish(ಬಾಬಿಷ್) a. brisk, hearty. ಚಟುವಟಿಕೆಯಾದ, ಗೆಲುವಾದ.

Bobby (ಬಾಬಿ) n. policeman. ಪೋಲೀಸಿನವನು.

Bode (ಬೋಡ್) vt i. foretell, foresee, presage. ಭವಿಷ್ಯ ಹೇಳುವ, ಕಣಿ ಹೇಳು, ಶಕುನವಾಗು.

Bodeful (ಬೋಡ್‌ಫುಲ್) a. ominous. ಅಶುಭ.

Bodice (ಬಾಡಿಸ್) n. woman's garment, corset. ಕುಪ್ಪಸ, ಕಂಚುಕ, ರವಿಕೆ.

Bod iless (ಬಾಡಿಲೆಸ್) a. separated from body. ಅಶರೀರಿ, ವಿದೇಹಿ.

Bod'ily (ಬಾಡಿಲಿ) n. of the body, ಶರೀರದ. adv. in person, as a whole. ಮೂರ್ತಿಮತ್ತಾಗಿ, ಅನಾಮತ್ತಾಗಿ.

Boding (ಬೋಡಿಂಗ್) n. omen. ಶಕುನ.

Bod kin (ಬಾಡ್‌ಕಿನ್) n. blunt needle. ಡಬ್ಬಳ, ಡಬ್ಬಣ

Bod'y (ಬಾಡಿ) n. whole form of a man or animal, main part, person, mass, substance. ದೇಹ, ಮೈ, ಒಡಲು, ಶರೀರ, ಮುಖ್ಯಭಾಗ, ವ್ಯಕ್ತಿ, ಮನುಷ್ಯ, ಸಭೆ, ಸಂಸ್ಥೆ, ವಸ್ತು. b. and soul, wholly, entirely. ಕಾಯಾ ವಾಚಾ ಮನಸಾ, ಸಂಪೂರ್ಣವಾಗಿ.

Body'guard (ಬಾಡಿಗಾರ್ಡ್) n. a guard of the person ಮೈಗಾವಲು, ಶರೀರ ಗಾವಲು, ಅಂಗರಕ್ಷಕ.

Bog (ಬಾಗ್) n. marsh, morass. ಬುರುದೆ ಭೂಮಿ, ಜೌಗುಪ್ರದೇಶ, ಚವುಳು ನೆಲ, ಕೆಸರುಭೂಮಿ, ಉಸುಬು, ಹೂಳು.

Bogg'y (ಬಾಗಿ) n. marshy. ಜೌಗಿನ.

Bog'ie (ಬೋಗಿ) n. under carriage. ನಾಲ್ಕು ಚಕ್ರದ ಬಂಡಿ, ರೈಲ್ವೆ ಗಾಡಿ.

Boggle (ಬಾಗಲ್) vi. start with fear. ಭಯದಿಂದ ಬೆದರು.

Bogle (ಬೋಗಲ್) n. phantom, goblin. ದೆವ್ವ, ಗುಮ್ಮ.

Bo'gus (ಬೋಗಸ್) a. sham ಠಕಾರಿ, ಕೃತಕ, ಖೋಟ, ಮೋಸದ.

Bogy, bogey (ಬೋಗಿ) n. goblin, the devil, bugbear. ದೆವ್ವ, ಭೂತ, ಪಿಶಾಚಿ.

Boil (ಬಾಯಿಲ್) n. hard inflamed tumour. ಕುರು, ಬೊಕ್ಕೆ, ಹುಣ್ಣು. vt. bubble up with heat, ಕುದಿ, ಉಕ್ಕು, ಬೇಯು, ಉದ್ರೇಕ, ಕುದಿಸು, ಮರಳು.

Boiler (ಬಾಯಿಲರ್) n. vessel for boiling. ಕಡಾಯಿ, ಕೊಪ್ಪರಿಗೆ, ಹಂಡೆ, ಉಬ್ಬೆಯಪಾತ್ರೆ.



Boiler

Boiling-point (ಬಾಯಿಲಿಂಗ್ ಪಾಇಂಟ್) temperature at which liquids begin to boil. ಕುದಿಬರುವ (ಕಾವಿನ) ಮಿತಿ.

Bois'terous (ಬಾಇಸ್ಟರಸ್) a. violent. nearing noisy ಭೋರ್ಗರೆಯುವ, ಘೋಷಿಸುವ, ಪ್ರಚಂಡ ಗದ್ದಲದ.

Bold (ಬೋಲ್ಡ್) a. daring, impudent, well marked, clear ಧೈರ್ಯದ, ಕೆಚ್ಚೆದೆಯ, ಹೆದರದ; ದಿಟ್ಟ, ಉದ್ಧಟ, ಕಾಣುವಂತೆ ಗುರುತಿಸಿದ, ಸ್ಫುಟ.

Bole (ಬೋಲ್) n. stern, trunk. ಬುಡಕಾಂಡ.

Bolshevik (ಬಾಲ್ಷೆವಿಕ್) n. Russian Communist revolutionary, ಕ್ರಾಂತಿಕಾರ.

Bol'ster (ಬೋಲ್‌ಸ್ಟರ್) n long pillow, cushion. ಮೆತ್ತೆ, ತಲೆದಿಂಬು, ಲೋಡು, vt. i. support, pad. ಎತ್ತಿಹಿಡಿ, ಒತ್ತಾಸೆ ಕೊಡು, ಆಧಾರವಿಡು, ಆನಿಕೆಕೊಡು.

Bolt (ಬೋಲ್ಟ್) n. bar of a door, arrow, lightning, running away. ಚಿಲಕ, ಅಂಬು, ಬಾಣ, ಅಗುಳಿ, ಬರಸಿಡಿಲು, ಪಲಾಯನ. vt.i. fasten, run away, (of horse). ಅಗುಳಿ ಹಾಕು, ಬಿರ್ರನೆ ಓಡು.



Bolt

Bolting (ಬೋಲ್ಟಿಂಗ್) n sudden start, shifting. ಥಟ್ಟನೆ ಓಡಿಹೋಗುವುದು, ಸೋಸುವುದು.

Bo'lus (ಬೋಲಸ್) n. big pill. ದೊಡ್ಡ ಗುಳಿಗೆ, ದೊಡ್ಡ ಉಂಡೆ.

Bomb (ಬಾಮ್ಬ್) n. explosive projective. ಸಿಡಿಮದ್ದು ತುಂಬಿದ ಫಿರಂಗೀ ಗುಂಡು, „ಬಾಂಬು" ಗುಂಡು, ಸಿಡಿಗುಂಡು.



Bomb

Bombard (ಬಾಂಬಾರ್ಡ್)vt. batter with shot & shell, abuse. ಮದ್ದುಗುಂಡುಗಳ ಮಳೆಸುರಿಸು, ಹಿಡಿದು ನಿಲ್ಲಿಸಿ ಬೈ.

Bom'bast(ಬಾಂಬಸ್ಟ್)n. high sounding language. ಆಡಂಬರದ ಮಾತು, ಶಬ್ದಪಾಂಡಿತ್ಯ, ಶಬ್ದವೈಖರಿ.

Bomber (ಬಾಮ್ಬರ್) n. aeroplane used in bombing. ಸಿಡಿಗುಂಡು ಹಾಕುವ ಆಕಾಶಯಾನ.

Bomb'shell (ಬಾಂಬ್‌ಶೆಲ್) n. bomb, startling piece of news. ಬಾಂಬುಗುಂಡು, ಭಯಂಕರ ಸುದ್ದಿ.

Bon (ಬೋನ್) a. good. ಒಳ್ಳೆಯ.

Bonbon (ಬೋನ್‌ಬೋನ್) n. sweetmeat. ಸಕ್ಕರೆ ಮಿಠಾಯಿ.

Bonafide (ಬೋನಫೈಡಿ) a. genuine, with good faith. ಅಕೃತ್ರಿಮ, ನಂಬಿಕೆಗೆ ಅರ್ಹ.

Bond(ಬಾಂಡ್)n. that which unites a binding agreement, (plu.) fetters, chains. ಬಂಧನ, ಪಾಶ, ತೊಡರು, ಕರಾರುಪತ್ರ, ಸಂಕೋಲೆ, ಬೇಡಿ, ನಿರ್ಬಂಧ.

Bond'age (ಬಾಂಡೇಜ್) n. slavery, captivity. ಗುಲಾಮಗಿರಿ, ದಾಸ್ಯ, ಸೆರೆ, ಕೈದು, ಕಟ್ಟು.

Bondsman (ಬಾಂಡ್ಸ್‌ಮ್ಯಾನ್) n. slave, serf. ಗುಲಾಮ, ಹೊಣೆಗಾರ.

Bone (ಬೋನ್) n. any of the separate parts of a skeleton. ಎಲುಬು, ಎಮುಕೆ, ಮೂಳೆ. b. of contention. ಜಗಳದ ಕಾರಣ.

Bon'fire (ಬಾನ್‌ಫೈರ್) n. large open air fire. ದೀಪೋತ್ಸವ, ಉತ್ಸವಾಗ್ನಿ, ಕಸದ ಕಿಚ್ಚು.

Bonne (ಬಾನ್) n. nursemaid. ದಾಸಿ.

Bonn'et (ಬಾನೆಟ್) n. women's outdoor headdress. ಹೆಂಗಸರ ಚಾಚಂಚು ಇಲ್ಲದ ಟೋಪಿ. ಕುಲಾವಿ.



Bonnet

Bonn'y (ಬಾನಿ) a. comely, healthy looking. ಅಂದವಾದ, ಸೊಗಸಾದ, ಸುಂದರವಾದ, ಕಳೆದುಂಬಿದ.

Banten (ಬಾನ್‌ಟೆನ್) n. narrow woollen fabric. ಉಣ್ಣೆಯ ಬಟ್ಟೆಯ ಪಟ್ಟಿ.

Bo'nus(ಬೋನಸ್)n. extra dividend or wages. ಇನಾಮು, ಉಚಿತಾರ್ಥ, ಲಾಭ, „ಕೊಸರು" ಹಣ.

Bonze (ಬಾಂಝ್) n. a Buddhist priest. ಬೌದ್ಧ ಪುರೋಹಿತ, ಶ್ರಮಣ, ಬೌದ್ಧ ಭಿಕ್ಷು.

Boo (ಬೂ) vi. & n. make sound of disapproval. ಅಸಮಾಧಾನಸೂಚಕ ಧ್ವನಿಮಾಡು.

Booby (ಬೂಬಿ) n. dunce. ಹೆಡ್ಡ, ಗುಗ್ಗು, ಮೊದ್ದ.

Boodle (ಬೂಡಲ್)n. money got by fradulent means. ಮೋಸ ಮಾಡಿ ಸಂಪಾದಿಸಿದ ಹಣ.

Boohoo (ಬೂಹೂ) n. sound of noisy weeping. ಗೋಳಾಟದ ಧ್ವನಿ.

Book (ಬುಕ್) n. literary composition. a volume. ವಹಿ, ಪುಸ್ತಕ, ಗ್ರಂಥ. vt. enter in book list, secure (seat, &c.) in advance. ಪುಸ್ತಕದಲ್ಲಿ ಬರೆ, ಸ್ಥಳ ಮೊದಲಾದ್ದನ್ನು ಮುಂಚಿತವಾಗಿ ಗೊತ್ತುಪಡಿಸು.

Book'ing-clerk (ಬುಕಿಂಗ್‌ಕ್ಲಾರ್ಕ್) n. clerk who issues tickets. ಟಿಕೀಟು ಕಾರಕೂನ, ಟಿಕೀಟು ಮಾರುವ ಗುಮಾಸ್ತ.

Booking-office(ಬುಕಿಂಗ್ ಆಫೀಸ್)n. office where tickets are sold. ಟಿಕೀಟು ಮಾರುವ ಕಚೇರಿ.

Book-keeper(ಬುಕ್‌ಕೀಪರ್) n. one who keeps business accounts. ಜಮಾಖರ್ಚಿನ ಗುಮಾಸ್ತ.

Book·mark (ಬುಕ್‌ಮಾರ್ಕ್) n. card for marking a page in book. ಓದು ಗುರುತು.

Book-worm(ಬುಕ್‌ವರ್ಮ್) n. book destroying maggot, great reader. ಪುಸ್ತಕ ಕ್ರಿಮಿ, ರಾಮಬಾಣದ ಹುಳ, ಓದು ಕುಳಿ, ಪುಸ್ತಕ ಪಿಶಾಚಿ.

Boom (ಬೂಮ್) n. deep sound, period of trade, prosperity, floating timber across a river· ತೆರೆಗಳ ಗರ್ಜನೆ, ವ್ಯಾಪಾರದಲ್ಲಿ ಬೆಲೆಗಳ ಏರಿಕೆ, ಮರದ ತೆಪ್ಪ, vi. t. emit boom, be in great demand. ಝೋಂಕಾರಮಾಡು, ಮೊಳಗು, ಬೆಲೆ ಏರು.

Boomerang(ಬೂಮರಾಂಗ್) n. curved stick used by Australian natives as a weapon. ಆಸ್ಟ್ರೇಲಿಯದ ಆದಿವಾಸಿಗಳು ಅಸ್ತ್ರವಾಗಿ ಉಪಯೋಗಿಸುವ ಮರದಿಂದ ಮಾಡಿದ ಬಾಗಿರುವ ದಂಡಕೋಲು.



Boomerang

Boon (ಬೂನ್) n. favour, gift, request. ವರ, ಅನುಗ್ರಹ. ಪ್ರಸಾದ, ಕೊಡುಗೆ, ಬೇಡಿಕೆ.

Boor (ಬೂರ್) n. ill mannered man. ಮರ್ಯಾದೆ ಇಲ್ಲದವ, ಒರಟ.

Boost (ಬೂಸ್ಟ್) vt. lift or raise by pushing. ಮುಂದಕ್ಕೆ ತಳ್ಳು, ಮೇಲಕ್ಕೆ ಎತ್ತು.

Boosy (ಬೂಸಿ)a. little intoxicated. ಕುಡಿದು ಮತ್ತೇರಿದ.

Boot (ಬೂಟ್) n. foot covering of leather, use, profit. ಪಾದರಕ್ಷೆ, ಜೋಡು, ಮೋಜಾ, ಲಾಭ, ಪ್ರಯೋಜನ. vt. put on boots, kick. ಮೋಜಾ ಹಾಕಿಕೊ, ಮೋಜಾಕಾಲಿನಿಂದ ಒದೆ.

Bootblack (ಬೂಟ್‌ಬ್ಲಾಕ್) n. one who cleans and blacks boots. ಪಾದರಕ್ಷೆಯನ್ನು ಒರೆಸಿ ಬಣ್ಣಹಾಕಿ ಕೊಡುವವನು.

Booth (ಬೂದ್) n. covered stall at fairs. ಗುಡಾರ, ಚಪ್ಪರ, ಮಳಿಗೆ, ಪರಿಶೆ. ಜಾತ್ರೆಗಳ ಹಂಗಾಮಿ ಛಾವಣಿಯಿರುವ ಅಂಗಡಿ.

Bootjack (ಬೂಟ್‌ಜಾಕ್) n. an implement which aids in remarking boots. ಪಾದರಕ್ಷೆಯನ್ನು ತೆಗೆಯುವುದಕ್ಕೆ ಸಹಾಯಕ ಉಪಕರಣ.

Bootlost(ಬೂಟ್‌ಲಾಸ್ಟ್)n. appliance for keeping boots in shape. ಮೋಜವನ್ನು ಸರಿಯಾದ ಆಕಾರದಲ್ಲಿಡುವ ಯಂತ್ರ.

Boot'less (ಬೂಟ್‌ಲೆಸ್) a. useless, profitless. ಉಪಯೋಗವಾಗದ, ಲಾಭವಿಲ್ಲದ.

Boots (ಬೂಟ್ಸ್) n. a hotel boot black. ಉಪಾಹಾರ ಗೃಹಗಳಲ್ಲಿ ಪಾದರಕ್ಷೆಗೆ ಬಣ್ಣಹಾಕಿ ಕೊಡುವವನು.

Boot'y (ಬೂಟಿ) n. spoil taken in war or by force, plunder. ಲೂಟಿ, ಕೊಳ್ಳೆ, ಸುಲಿಗೆ.

Booze (ಬೂಜ್) vi. drink deeply. ಮಿತಿಮೀರಿ ಕುಡಿ.

Bopeep (ಬೋಪೀಪ್) n. game of hide and seek. ಕಣ್ಣು ಮುಚ್ಚಾಲೆ ಆಟ.

Bora'x (ಬೊರಾಕ್ಸ್) n. salt used as antiseptic & in soldering. ಟಂಕಣ ಖಾರ, ಬಿಳಿಗಾರ, ಟಂಕಣ.

Bord'er (ಬಾರ್ಡರ್) n. edge, boundary; ಅಂಚು, ಸೆರಗು, ಅರಗು, ಕರೆ, ಗಡಿ, ಸರಹದ್ದು, ಎಲ್ಲೆ. vt. adorn with b., be a border. ಅಂಚು ಕಟ್ಟು, ಗಡಿಯಲ್ಲಿರು, ಹೊಂದಿಕೊಂಡಿರು.

Bord'erer (ಬೋರ್ಡರರ್) n. one who dwells near border. ಮೇರೆಯಲ್ಲಿರುವವನು, ಗಡಿಪ್ರಾಂತದವನು, ಗಡಿನಿವಾಸಿ.

Bore (ಬೋರ್) vt. i. make hole with an auger, weary. ಕೊರೆ, ತೂತುಮಾಡು, ತೋಡು, ವೆಜ್ಜಮಾಡು, ಪೀಡಿಸು, ಬೇಸರಪಡಿಸು, ತಲೆ ಚಿಟ್ಟುಗಟ್ಟಿಸು. n. hole made by boring, tiresome person ವೆಜ್ಜ, ತೂತು, ರಂಧ್ರ, ಬೇಸರಗೊಳಿಸುವವನು, ಪೀಡೆ, ತೊಂದರೆ.

Boreal (ಬೋರಿಯಲ್) a. pertaining to North wind. ಉತ್ತರ ದಿಕ್ಕಿನ ಮಾರುತಕ್ಕೆ ಸಂಬಂಧಿಸಿದ.

Bor'eas (ಬೋರಿಅಸ್) n. the North wind; ಉತ್ತರದ ಗಾಳಿ. a. boreal. ಉತ್ತರ ದಿಕ್ಕಿನ, ಬಡಗಣ.

Bore'dom (ಬೋರ್ಡಮ್) n. bored state, weariness. ಬೇಸರ, ತ್ರಾಸ, ಬೇಜಾರು, ಬಳಲಿಕೆ, ಶ್ರಮ, ದಣಿವು.

Boric (ಬೋರಿಕ್) a pertaining to boron. ಬೋರಾನ್‌ಗೆ ಸಂಬಂಧಿಸಿದ.

Born (ಬಾರ್ನ್) a. destined from birth. ಹುಟ್ಟಿದ, ಸಂಭವಿಸಿದ. b. poet. ಹುಟ್ಟು ಕವಿ. b. with silver spoon in mouth. ಆಗರ್ಭಶ್ರೀಮಂತನಾದ.

Borne (ಬೋರ್ನ್) a. carried, supported. ಸಮರ್ಥಿತ.

Boron (ಬೋರಾನ್) n. a nonmetallic element. ಅಲೋಹ ಮೂಲಧಾತು.

Bo'rough (ಬರೋ) n. a town with a municipal corporation. ಪೌರಸಂಸ್ಥೆಯುಳ್ಳ ಊರು, ನಗರ, ಪಟ್ಟಣ, ಸ್ಥಳ.

Bo'rrow (ಬಾರೊ) vt. i. get temporary use of, borrow money, copy. ಸಾಲಮಾಡು, ಕಡಮಾಡು, ಎರವು ತೆಗೆದುಕೊ, ಅನುಸರಿಸು, ಅನುಕರಣೆ ಮಾಡು.

Bort (ಬಾರ್ಟ್) n. diamond fragments. ಪುಡಿವಜ್ರ, ವಜ್ರದ ಸಣ್ಣ ಚೂರುಗಳು.

Bosh (ಬಾಶ್) n. nonsense. ಸುಳ್ಳು, ಹರಟೆ.

Bosket (ಬಾಸ್ಕೆಟ್) n. thicket, plantation. ಪೊದೆ, ಮರದ ತೋಪು.

Bosky (ಬಾಸ್ಕಿ) a. hushy, wooded. ಪೊದೆಗಳಿಂದ ಕೂಡಿದ.

Bo'som (ಬೂಜಮ್) n. the breast, heart. ಎದೆ, ವಕ್ಷಸ್ಥಳ, ಹೃದಯ, ಅಂತರ್ಯ, ಮನಸ್ಸು.

Bo'som-friend (ಬೂಜಮ್‌ಫ್ರೆಂಡ್) n. confidential friend. ಜೀವಗೆಳೆಯ, ಆಪ್ತಸ್ನೇಹಿತ, ಪ್ರಾಣಮಿತ್ರ.

Boss (ಬಾಸ್) n. manager, round knob or stud. ಧಣಿ, ಯಜಮಾನ, ಗುಂಡು, ಗುಬುಟು, ಮೊಳೆ. vt. control, be boss of. ಆಡಳಿತ ನಡೆಸು, ಯಜಮಾನಿಕೆಮಾಡು.

Botanical (ಬೊಟಾನಿಕಲ್) a. pertaining to botany. ಸಸ್ಯವಿಜ್ಞಾನಕ್ಕೆ ಸಂಬಂಧಿಸಿದ.

Bot'anist (ಬಾಟನಿಸ್ಟ್) n. student of botany. ಔಷಧಿಶಾಸ್ತ್ರಜ್ಞ, ಸಸ್ಯಶಾಸ್ತ್ರಜ್ಞ.

Botany (ಬಾಟನಿ) n. science of plants. ವನಸ್ಪತಿವಿದ್ಯೆ, ಸಸ್ಯಶಾಸ್ತ್ರ, ಸಸ್ಯವಿಜ್ಞಾನ.

Botch (ಬಾಚ್) vt. patch, mend clumsily. ಒರಟು ತೇಪೆಹಾಕು, ಅಡನಾಡಿ ಕೆಲಸಮಾಡು. n. ill-finished work, a swelling. ಒಡ್ಡೊಡ್ಡಾದ ಕೆಲಸ, ಬಾವು.

Bote (ಬೋಟ್) n. compensation. ಪ್ರತಿಫಲ, ಬದಲು.

Both (ಬೋತ್) a. the two, the one & the other, conj. as well. ಎರಡೂ, ಇಬ್ಬರೂ, ಉಭಯ; ಊ. pro. both persons or things. ಉಭಯರೂ, ಎರಡೂ.

Both'er (ಬಾದರ್) vt. i tease, take trouble. ಪೀಡಿಸು, ಕಾಡು, ತೊಂದರೆಗೊಳ್ಳು. n. trouble, fuss. ತೊಂದರೆ, ಕಾಟ, ಜಂಜಡ, ಗಲಾಟೆ.

Bothersome (ಬಾದರ್‌ಸಮ್) a. troublesome. ತೊಂದರೆಕೊಡುವ, ಕ್ಲೇಶಪಡಿಸುವ.

Bot'tle (ಬಾಟಲ್) n. narrow-necked vessel for liquids, bundle of hay, habit of drinking. ಕುಪ್ಪಿ, ಸೀಸೆ, ಬುಡ್ಡಿ, ಬುದ್ದಲಿ, ಬಾಟಲು, ಮದ್ಯಪಾನ, ಕುಡಿತ, ಹುಲ್ಲಿನ ಹೊರೆ.

Bottler (ಬಾಟ್ಲರ್) n. person who bottles liquor. ಸೀಸೆಗಳಲ್ಲಿ ಮದ್ಯ ತುಂಬುವವನು.

Botto'm (ಬಾಟಮ್) n. lowest part of anything. ತಳ, ಬುಡ, ಅಡಿ, ಕೆಳಭಾಗ, ಮೂಲಾಧಾರ, ತಳಹದಿ.

Bott'omless (ಬಾಟಮ್‌ಲೆಸ್) a. unfathomable. ಅಗಾಧವಾದ, ತಳವಿಲ್ಲದ, ಆಳ ಕಾಣಲಾಗದ.

Bott'omry (ಬಾಟಮ್ರಿ) n. borrowing of money by owner on security of ship. ಹಡಗನ್ನೇ ಈಡುಕೊಟ್ಟು (ಆಧಾರಮಾಡಿ) ಸಾಲ ತೆಗೆದುಕೊ.

Boud'oir (ಬೂಡ್‌ವಾರ್) n. lady's private room. ನಾಯಕಿಯ ಏಕಾಂತಗೃಹ, ಅಂತಃಪುರ.

Bough (ಬೌ) n branch of a tree. ಟೊಂಗೆ, ಮರದ ರೆಂಬೆ, ಶಾಖೆ, ಮರದ ಕೊಂಬೆ.

Bougie (ಬೂಷೀ) n. wax candle. ಮೇಣದಬತ್ತಿ.

Boul'der (ಬೌಲ್ಡರ್) n. large water-worn stone. ದುಬ್ಬುಗುಂಡು, ಉರುಳುಗುಂಡು; ಗುಂಡುಕಲ್ಲು.

Boul'evard (ಬೂಲ್‌ವಾರ್ಡ್) n. broad tree-lined street. ಸಾಲು ಮರಗಳ ವಿಶಾಲ ರಾಜಮಾರ್ಗ.

Bounce (ಬೌನ್ಸ್) vt.i. jump suddenly, boast. ಚಟ್ಟನೆ ಹಾರು, ಪುಟನೆಗೆ. ಕುಪ್ಪಳಿಸಿಹಾರು, ಜಿಗಿ, ನೆಗೆದಾಡು, ಬೊಬ್ಬಿರಿ, ಬಡಾಯಿಕೊಚ್ಚು. n. heavy sudden flow, leak or spring. ಪೆಟ್ಟು, ಗಟ್ಟಿದೆಬ್ಬು, ಬಲವಾದ ಏಟು, ಜಿಗಿತ; ಪುಟನೆಗೆತ, ಹಾರಿಕೆ, ಥಟ್ಟನೆ ಹಾರು.

Bouncer (ಬೌನ್ಸರ್) n. bully, boster. ಡಂಭಗಾರ, ಬಾಯಿಬಡಿಕ.

Bound (ಬೌಂಡ್) n. [usu. in plu,] limit, a jump, spring, leap. ಗಡಿ, ಮೆಟ್ಟು, ಹಾರಿಕೆ, ನೆಗೆತ, ಧುಮುಕುವಿಕೆ. a. ready to start on the way for, obliged morally. ಹೋಗತಕ್ಕ, ಹೊರಡಲು ಸಿದ್ಧವಾದ, ಹಂಗಿನ, ನಿರ್ಣೀತ, ಅವಶ್ಯವಾದ, ಬದ್ಧನಾದ.

Boun'dary (ಬೌಂಡರಿ) n. a. visible limit, a border, termination. ಸರಹದ್ದು, ಮೇರೆ, ಎಲ್ಲೆ, ಗಡಿ, ಸೀಮೆ.

Boun'teous bounti'ful (ಬೌಂಟಿಅಸ್, ಬೌಂಟಿಫುಲ್) a. liberal, generous. ಉದಾರ, ದೊಡ್ಡಮನಸ್ಸಿನ, ಔದಾರ್ಯದ, ಸಮೃದ್ಧ.

Boun'ty (ಬೌಂಟಿ) n. liberality, generosity, profuse giving. ಔದಾರ್ಯ, ಉಪಕಾರವಿತರಣೆ, ದಾನಶೂರತೆ.

Bouquet' (ಬೂಕೆ) n. a bunch of flowers, a nosegay. ಪುಷ್ಪಗುಚ್ಛ, ತುರಾಯಿ, ಹೂಗೊಂಚಲು, ಹೂಗೊಂಡೆ.


Bouquet

Bourn (ಬೂರ್ನ್) n. a boundary. a stream. ಸರಹದ್ದು, ಗಡಿ, ಎಲ್ಲೆ, ಪ್ರವಾಹ.

Bourse (ಬೂರ್ಸ್) n. foreign money market. ಪರದೇಶದ ವ್ಯಾಪಾರಕಟ್ಟೆ.

Bout (ಬೌಟ್) n. turn, trail, attempt, contest. ಸಲ, ಬಾರಿ, ಪಾಳಿ, ಆವೃತ್ತಿ, ಎತ್ತುಗಡೆ, ಪ್ರಯತ್ನ, ಸ್ಪರ್ಧೆ.

Bovine (ಬೋವೈನ್) a. pertaining to a cow or cattle. ಗೋಜಾತಿಯ, ದನದ, ಗವ್ಯ.

Bovril (ಬಾವ್ರಿಲ್) n. beef extract. ಒಂದು ಬಗೆಯ ಗೋಮಾಂಸಸಾರ.

Bow(ಬೋ)n.piece of elastic wood or other metal for shooting arrows,a laped knot of ribbons ಧನುಸ್ಸು, ಕಮಾನು, ಕುಚ್ಚು, ಗೊಂಡೆ.

Bow(ಬೌ)vt. i. salute,bend, make curved. ನಮಿಸು, ನಮಸ್ಕರಿಸು, ಬಗ್ಗು, ಮಣಿ, ಬಾಗಿಸು, ಬಗ್ಗುವಂತೆ ಮಾಡು.

Bow (ಬೌ) n. bending of the body in saluting a person, fore-end of boat or ship, instrument to shoot arrows. ಶರಣು, ನಮ್ರತೆ, ನಮಸ್ಕಾರ, ಹಡಗಿನ ಮುಂಭಾಗದ ಮೂತಿ, ಬಿಲ್ಲು, ಧನುಸ್ಸು.

Bow-compasses (ಬೋಕಾಂಪ್‌ಸಸ್) n. compasses with jointed legs. ತೋಳುಗಳುಳ್ಳ ಕೈವಾರ.

Bow'els (ಬೊವೆಲ್ಸ್)n·[plu]interior part of anything; entrails, intestines, compassion, [fig]the heart, pity. ಕರುಳು, ಅಂತ್ರ, ಹೊಟ್ಟೆ, ಕೆಳಭಾಗ, ಕರುಣೆ, ಹೃದಯ.

Bowe'r (ಬಾವರ್) n. arbour, leafy nook, a lady's room ಲತಾಕುಂಜ, ಹೊದರು, ಪೊದರು, ವಸಂತಮಂದಿರ, ಸ್ತ್ರೀಯರ ಅಂತಃಪುರ.

Bowl(ಬೌಲ್) n. basin esp.of drink or food, a ball. ಪಾತೇಲಿ, ಕುಡಿಯುವ ಪಾತ್ರೆ, ಬಟ್ಟಲು, ಬೋಗುಣಿ, ಗಿನ್ನಾಲು, ದೊನ್ನೆ, ಬೋಸಿ, ಚೆಂಡು, ಗುಂಡು. (ಬೋಲ್) vt. i. throw ball as in cricket. ಕ್ರಿಕೆಟ್ ಆಟದಲ್ಲಿ ಚೆಂಡು ಒಗಿ, ಎಸೆ.

Bowl'er (ಬೋಲರ್) n. one who bowls in cricket. "ಕ್ರಿಕೆಟ್" ಆಟದಲ್ಲಿ ಚೆಂಡು ಎಸೆಯುವವನು.

Bow'man(ಬೋಮನ್) n. an archer· ಬಿಲ್ಲುಗಾರ, ಧನುರ್ಧಾರಿ, ಅಂಬುಗಾರ.

Bowse (ಬೌಸ್) vi. pull, haul. ಎಳೆ, ಜಗ್ಗಿಸು.

Bowshot(ಬೋಷಾಟ್)n.distance tc which an arrow can be shot. ಅಂಬು ಎಸೆಯಲಾಗುವಷ್ಟು ದೂರ.

Bow-bow (ಬೌವೌ) n. barking of a dog. ನಾಯ ಬಗುಳು.

Box(ಬಾಕ್ಸ್) n. chest, blow, small compartment in a theatre, driver's seat in front of carriage· ಬಂಡಿ ಹೊಡೆಯುವವನ ಪೀಠದಲ್ಲಿ ಕುಳಿತುಕೊಳ್ಳಲು ಪ್ರತ್ಯೇಕ ಆಸನ, ಪೆಟ್ಟಿಗೆ, ಸಂದೂಕ, ಕರಡಿಗೆ, ಗುದ್ದು, ಏಟು, vt. i. put in a box, fight with boxing gloves or bare fists. ಪೆಟ್ಟಿಗೆಯಲ್ಲಿಡು, ಮುಷ್ಟಿಯುದ್ಧಮಾಡು, ಕುಸ್ತಿಮಾಡು b. ears. ಕಿವಿಹಿಂಡು.

Box'er(ಬಾಕ್ಸರ್)n. a glove fighter. ಜಟ್ಟಿ, ಮಲ್ಲಯುದ್ಧಮಾಡುವವ, ಮುಷ್ಟಿಯುದ್ಧಮಾಡುವವನು.

Boxing (ಬಾಕ್ಸಿಂಗ್) n. act of fighting with fists. ಮುಷ್ಟಿಕಾಳಗ, ಮಲ್ಲಯುದ್ಧ, ಗುದ್ದಾಟ.

Box'wood(ಬಾಕ್ಸ್‌ವುಡ್)n. wood of the box-tree. ಜಾಕಾಯಿ ಮರ.

Boy (ಬಾಯ್) n. a male child of youth, son, native male servant. ಹುಡುಗ, ಗಂಡುಮಗು, ಬಾಲಕ, ಆಳು, ಸೇವಕ.

Boy'cott(ಬಾಯ್‌ಕಾಟ್) vt. shut out from all social & commercial intercourse. ಕೊಡುಕೊಳ್ಳುಗಳಿಗೆ ತಡೆ ಮಾಡು, ಬಹಿಷ್ಕರಿಸು.

Boy'hood (ಬಾಯ್‌ಹುಡ್) n. boyish age. ಹುಡುಗಪ್ರಾಯ, ಬಾಲ್ಯ, ಹುಡುಗತನ.

Boy'ish(ಬಾಇಶ್) a. of boys, lively or high spirited. ಬಾಲ್ಯದ, ಹುಡುಗಾಟಿಕೆಯ, ಆನಂದವುಳ್ಳ, ಹುಮ್ಮಸ್ಸುಳ್ಳ.

Boy'scouts(ಬಾಯ್‌ಸ್ಕ್ಯಾಟ್ಸ್)n. [plu] organizations founded for developing character & physique of boys. ಹುಡುಗರ ಶೀಲ ಮತ್ತು ಆರೋಗ್ಯ ಸುಧಾರಿಸುವುದರ ಸಲುವಾಗಿ ಸ್ಥಾಪಿಸಿದ ಸಂಸ್ಥೆಗಳು, ಬಾಲಚಮೂತಾರ.

Brabble (ಬ್ರ್ಯಾಬ್‌ಲ್) n. quarrel, broil. ಜಗಳ, ಕಲಹ.

Brace (ಬ್ರೇಸ್) vt. strengthen, tighten. ಬಲಕೊಡು, ಬಿಗಿಸು, ಬಿಗಿಮಾಡು, ಕಟ್ಟು, n. ನಡುಕಟ್ಟು, ಬಂಧನ, ಬಿಗಿಪಟ್ಟಿ. n. [plu] pair of trouser suspenders. ಇಜಾರವನ್ನು ಹೆಗಲಿಗೆ ತೂಗಿಸುವ ಪಟ್ಟಿ.

Brace and bit (ಬ್ರೇಸ್ ಎಂಡ್ ಬಿಟ್) revolving tool boring holes, ಭೈರಿಗೆ.



Brace and bit

Brace'let (ಬ್ರೇಸ್ಲೆಟ್) n. ornament for arms or wrist. ಕಂಕಣ, ಕೈಬಳೆ.

Bracer (ಬ್ರೇಸರ್) n. pick me up, arm bands. ಪುಷ್ಟಿಯ ಔಷಧ, ಕೈಪಟ್ಟಿ.

Brac'ing (ಬ್ರೇಸಿಂಗ್)a. strengthening. ಬಲಕರ, ಪುಷ್ಟಿದಾಯಕ.

Brack'et (ಬ್ರ್ಯಾಕೆಟ್) n. support for something fastened to a wall, () [] marks used in pair for enclosing words or figures. ಮರದ ಕೈ, ಚಾಚುಪೀಠ, "ಕಂಸ", ಆವರಣಚಿನ್ಹೆ.

Brack'ish (ಬ್ರ್ಯಾಕಿಶ್) a, saltish ಉಪ್ಪುಪ್ಪಾಗಿರುವ.

Bradawl (ಬ್ರ್ಯಾಡಲ್) n. tool for boring. ಕೊರೆಯುವ ಬೈರಿಗೆ.

Bradshaw (ಬ್ರ್ಯಾಡ್‌ಷಾ) n. a detailed railway guide. ರೈಲುಗಳು ಹೊರಡುವ-ಬರುವ ವೇಳೆ ವಿಸ್ತಾರವಾಗಿ ಕೊಟ್ಟಿರುವ ಪುಸ್ತಕ.

Brag (ಬ್ರ್ಯಾಗ್) vt. i. boast of talk boastfully. ಬಡಾಯಿಹೇಳು, ಹೆಮ್ಮೆಯ ಮಾತು ಆಡು, ಬಡಿವಾರಮಾಡು; ಜಂಭಕೊಚ್ಚು.

Bragg'art(ಬ್ರ್ಯಾಗರ್ಟ್)n. vain boaster. ಜಂಭಗಾರ, ಬಡಾಯಿಕೋರ, ಡಂಬಗಾರ, ಸನ್ನಿಬಡಕ. a. boastful. ಬರಿ ಜಂಬದ.

Brahmin (ಬ್ರಾಮಿನ್) n. member of Hindu priestly caste. ಬ್ರಾಹ್ಮಣ.

Braid (ಬ್ರೇಡ್) n. entwined hair, plait. ಜಡೆ, ಹೆರಳು, ಜಡೆಪಟ್ಟಿ, ಕೇಶವೇಣಿ, ಕೇಶಬಂಧ, ಹೆಣಿಗೆ, ಅಲ್ಲಣ. vt. form into braid,interweave ಹೆಣೆ, ಜಡೆಹಾಕು, ಹೆರಳುಹಾಕು, ತುರುಬುಕಟ್ಟು.

Braille (ಬ್ರೇಲ್) n. printing in relief for the blind. ಕುರುಡರು ಕೈಸ್ಪರ್ಶದಿಂದ ಓದುವ ಉಬ್ಬಿದ ಅಕ್ಷರಗಳ ಬರೆವಣಿಗೆ.

Brain (ಬ್ರೇನ್) n. nervous organ in interior of skull. ಮಿದುಳು, ಮಸ್ತಿಷ್ಕ, ಜ್ಞಾನ, [plu.] intellectual ability. ಬುದ್ಧಿ, ತಿಳಿವು, ಅರಿವು.

Brake (ಬ್ರೇಕ್) n. apparatus for checking motion of wheel, vehicle or train. ಗಾಡಿಯ ವೇಗವನ್ನು ತಡೆಯುವ ಸಾಧನ, ಚಕ್ಕಡಿಯ ತಿರುವು, ಕೈಹಿಡಿ.

Bram'ble (ಬ್ರ್ಯಾಂಬಲ್)n. wild pricky shrub bearing black berries. ಒಂದು ತರದ ಮುಳ್ಳುಗಿಡ.

Bran (ಬ್ರ್ಯಾನ್)n. the refuse of grain. ತವುಡು, ಹೊಟ್ಟು, ಉಮ್ಮಿ.

Branch (ಬ್ರ್ಯಾಂಚ್) n. small twig, a. sub-division of something.

ಟೊಂಗೆ, ರೆಂಬೆ, ಕವಲು, ವಿಭಾಗ, ಉಪಶಾಖೆ.

Branchless (ಬ್ರಾಂಚ್‌ಲೆಸ್) a. destitute of branches. ಶಾಖಾರಹಿತ.

Branchy (ಬ್ರಾಂಚಿ) a. full of branches. ಕೊಂಬೆಗಳಿಂದ ಕೂಡಿದ.

Brand (ಬ್ರಾಂಡ್) n. piece of wood burning or partly burned, mark barred into anything with a hot iron, trade mark ; sword mark of infamy. ಉರಿಯುತ್ತಿರುವ ಮರದ ತುಂಡು, ಬರೆ, ಮುದ್ರೆ, ವ್ಯಾಪಾರದ ಗುರುತು, ಕತ್ತಿ, ಖಡ್ಗ, ಕಳಂಕ, ಶುನಕದ ಮುದ್ರೆ. vt. stamp with a brand, stigmatize. ಬರೆಹಾಕು, ಮುದ್ರೆ ಸುಡು, ಕಳಂಕಹಚ್ಚು, ಭ್ರಷ್ಟನನ್ನಾಗಿ ಮಾಡು.

Bran'dish (ಬ್ರಾಂಡಿಶ್) vt. wave or flourish. ಝಳಪಿಸು, ಆಡಿಸು, ತಿರುಗಿಸು.

Brand'-new (ಬ್ರಾಂಡ್-ನ್ಯೂ) n. conspicuously new. ಪೂರ್ಣ ನವೀನ, ಹೊಚ್ಚಹೊಸ.

Brandreth (ಬ್ರಾಂಡೆತ್) n. wooden stand for cask. ಪೀಪಾಯಿಗೆ ಮರದ ಬುಡ.

Bran'dy (ಬ್ರಾಂಡಿ) n. strong spirit distilled from wine or grapes. "ಬ್ರಾಂಡಿ" ಎಂಬ ಮದ್ಯ, ಬ್ರಾಂದಿ.

Brangle (ಬ್ರಾಂಗಲ್) vt. quarrel ಜಗಳವಾಡು.

Branny (ಬ್ರಾನಿ) a. like bran. ಹೊಟ್ಟನಂತಿರುವ.

Brasier (ಬ್ರೇಸಿಯರ್) n. worker in brass. ಹಿತ್ತಾಳೆಕೆಲಸ ಮಾಡುವವನು.

Brass (ಬ್ರಾಸ್) n. yellow alloy of copper with zinc, effrontery, impudence ಹಿತ್ತಾಳೆ, ನಾಚಿಕೆಯಿಲ್ಲದಿರುವಿಕೆ, ನಾಚಿಕೆಗೇಡು.

Brassy (ಬ್ರಾಸಿ) a. made of brass, impudent. ಹಿತ್ತಾಳೆಯಂತಿರುವ, ಉದ್ದಂಡ, ದುರಭಿಮಾನವುಳ್ಳ.

Brassage (ಬ್ರಾಸೇಜ್) n. minting charges for coining money. ಟಂಕಸಾಲೆಯಲ್ಲಿ ವಿಧಿಸುವ ಶುಲ್ಕ.

Brassard (ಬ್ರಸಾರ್ಡ್) n. badge worn on arm. ತೋಳಿನ ಮೇಲೆ ಧರಿಸುವ ಕುರುಹು.

Brat (ಬ್ರಾಟ್) n. contemptuous name for child. ಪೋರ, ಚಿಳ್ಳೆ, ಮಗು.

Brava'do (ಬ್ರಾವೆಡೊ) n, boastful threat, display of bravery. ಬಡಾಯಿಯ ಬೆದರಿಕೆ, ಬಡಿವಾರ, ಶೌರ್ಯ ಪ್ರದರ್ಶನ, ಜಂಭ, ಡಂಭ.

Brave (ಬ್ರೇವ್) a. daring, courageous, noble, handsome, showy. ಸಾಹಸಿಕ, ಶೂರ, ಧೈರ್ಯಶಾಲಿಯಾದ, ದಿವ್ಯವಾದ, ಘನತೆಯ, ಶೃಂಗಾರವುಳ್ಳ, ಸೊಗಸಾದ.

Brav'ery (ಬ್ರೇವರಿ) n. noble courage, heroism, valour, splendour, finery, ಧೈರ್ಯ, ಶೌರ್ಯ, ಕೆಚ್ಚು, ಪ್ರತಾಪ, ಶೃಂಗಾರ, ಸೊಗಸು.

Bra'vo (ಬ್ರಾವೊ) n. hired assassin. ಕೊಲೆಪಾತಕ, ಆತತಾಯಿ, [interj] well done ! excellent ! ಶಹಭಾಸ್ ! ಭೇಷ್ ! ವಹವ್ವಾ ! ಭಳಿರೆ ! ಭಲೇ !

Bravura (ಬ್ರಾವೂರ) n. brilliant display. ಅಸಾಧಾರಣವಾದ ಪ್ರದರ್ಶನ.

Brawl (ಬ್ರಾಲ್) n· noisy quarrel, ಬೀದಿ ಜಗಳ, ಗದ್ದಲ, ಕಾದಾಟ. vi. engage in brawl, ಜಗಳವಾಡು.

Brawn (ಬ್ರಾನ್) n. muscle, lean flesh, meat of pig's head. ಮಾಂಸಖಂಡ, ಸ್ನಾಯು, ಮೈತುಂಬಿದ ಶರೀರಬಲ, ಹಂದಿ ತಲೆಯ ಮಾಂಸ.

Brawny (ಬ್ರಾನಿ) a. muscular, strong. ಕೊಬ್ಬಿದ, ಸೊಕ್ಕಿದ, ತುಂಬಿದ ಮೈಯುಳ್ಳ, ಪುಷ್ಟಿಯಾಗಿರುವ.

Braxy (ಬ್ರಾಕ್ಸಿ) n. a disease of sheep. ಕುರಿಗಳ ಒಂದು ಬಗೆಯ ರೋಗ.

Bray (ಬ್ರೇ)n. ass's cry, any harsh sound. ಕತ್ತೆಯ ಕಿರಚು, ಕರ್ಕಶ ಧ್ವನಿ. vt. i. emit bray. ಕತ್ತೆಯಂತೆ ಅರಚು.

Braze (ಬ್ರೇಜ್) vt. solder with an alloy of brass and zinc. ಹಿತ್ತಾಳೆ ಪುಡಿ ಇಟ್ಟು ಬೆಸೆ, ಬೆಸಿಗೆಮಾಡು.

Braz'en (ಬ್ರೇಜನ್) a. of or like brass, shameless. ಹಿತ್ತಾಳೆಯ, ನಾಚಿಗೆಕೆಟ್ಟ.

Bra'zier (ಬ್ರೇಜಿಅರ್) n. brass-worker, pan with lighted charcoal as portable heater. ಕಂಚುಗಾರ, ಹಿತ್ತಾಳೆಯ ಕೆಲಸದವನು, ಅಗ್ಗಿಷ್ಟಿಕೆ.

Breach (ಬ್ರೀಚ್) n. a break or opening, breaking of law, violation of contract, quarrel. ಬಿರಕು, ಕಂಡಿ, ಛಿದ್ರ, ಭಂಗ, ಕಾನೂನು ಉಲ್ಲಂಘನೆ, ಮನಸ್ತಾಪ.

Bread(ಬ್ರೆಡ್)n. cake made of flour or meal and baked food, livelihood. ಬಕ್ಕರಿ, ಹಿಟ್ಟಿನ ರೊಟ್ಟಿ, ಅನ್ನ, ಆಹಾರ, ಜೀವನಾಧಾರ, ಹೊಟ್ಟೆಪಾಡು. b.-fruit, a fruit of the South Sea Islands. ದಕ್ಷಿಣ ಸಮುದ್ರದ ದ್ವೀಪಗಳಲ್ಲಿ ದೊರಕುವ ಹಿಟ್ಟುಮಯವಾಗಿರುವ ಹಣ್ಣು.



Breadfruit

Breadth (ಬ್ರೆಡ್ತ್-ಬ್ರೆಟ್ಥ್) n. width, extent from side to side. ಅಗಲ, ವಿಸ್ತಾರ, ಅಡ್ಡಗಲ.

Break(ಬ್ರೇಕ್) vt. i. part by force, shatter, crush, subdue, make or become bankrupt, become feeble. ಒಡೆ, ಮುರಿದುಹಾಕು, ಒಡೆದುಹಾಕು, ಜಜ್ಜು, ಕುಟ್ಟು; ಚೂರುಮಾಡು, ಪಳಗಿಸು, ದಿವಾಳಿಯಾಗು, ಮಾಡು, ಶಿಥಿಲವಾಗು. n. breach, gap, pause in work. ಒಡಕು, ಬಿರುಕು, ವಿರಾಮ, ತಡೆಗಟ್ಟು, ವಿಚ್ಛೇದ. b. away, go away abrupty, ಥಟ್ಟನೆ ಹೊರಟು ಹೋಗು. b. down, crash down, fall completely. ಮುರಿದುಬೀಳು, ನಿಂತುಹೋಗು. b. fast. take first meal of the day. ಪಾರಣೆಮಾಡು, ಉಪವಾಸ ಮುರಿ. b. from, go away or escape suddenly. ತಪ್ಪಿಸಿಕೊಳ್ಳು, ಕೊಸರಿಕೊಳ್ಳು. b in, enter suddenly. ಕರೆಯದೆ ಒಳನುಗ್ಗು. b. into, force a way into. ಭೇದಿಸಿ ನುಗ್ಗು, ಬಾಗಿಲು ಒಡೆದು ಒಳನುಗ್ಗು. b. loose, get free forcibly. ಬಿಚ್ಚಿಕೊಳ್ಳು, ಸ್ವತಂತ್ರನಾಗು. b. off. discontinue. ನಿಲ್ಲಿಸಿಬಿಡು, ನಿಂತುಹೋಗು. b. open, open by breaking. ಒಡೆದು ತೆರೆ, ತೆಗೆ. b out appear suddenly. ಅಕಸ್ಮಾತ್ ಹೊರಬೀಳು, ಕಾಣಿಸಿಕೊಳ್ಳು. b. the heart, destroy with grief. ಎದೆಯೊಡಿಸು. b. the ice. overcome the first difficulties, make a beginning. ಪ್ರಥಮ ವಿಘ್ನಗಳನ್ನು ನಿವಾರಿಸಿಕೊಳ್ಳು, ಪ್ರಾರಂಭಮಾಡು. b. through, penetrate. ಭೇದಿಸು, ತೂರಿಸು, ನುಗ್ಗಿಸು. b. out, appear suddenly, burst forth. ಥಟ್ಟನೆ ಕಾಣಿಸಿಕೊಳ್ಳು, ಹೊರಬೀಳು, ಸಿಡಿ, ಒಡಕೊಳ್ಳು. b. up. dissolve, come to an end. ಬಿಚ್ಚಿಹೋಗು, ತುಂಡು ತುಂಡಾಗು, ಚದುರು, ಕೊನೆಗಾಣು. b. with, cease to be friendly with. ಸ್ನೇಹ ಮುರಿ, ಮಿತ್ರತ್ವ ಬಿಡು.

Breakable (ಬ್ರೇಕಬಲ್) a. able to be broken. ಒಡೆಯಲು ಸಾಧ್ಯವಾದ.

Breakage(ಬ್ರೇಕೇಜ್) n. allowance for thing broken. ಒಡೆದುಹೋಗುವುದು.

Break'er(ಬ್ರೇಕರ್) n. heavy wave breaking on coast or over reef. ಬಂಡೆಗೆ ಹೊಡೆಯುವ ತೆರೆ, ದೊಡ್ಡ ಅಲೆ.

Breakdown(ಬ್ರೇಕ್‌ಡೌನ್)n. failure of health, collapse. ಆರೋಗ್ಯ ಕೆಡುವುದು, ಕುಸಿದುಹೋಗುವುದು.

Break'fast (ಬ್ರೇಕ್‌ಫಾಸ್ಟ್) n. first meal of day. ಬೆಳಗಿನ ಊಟ, ದಿನದ ಮೊದಲ ಊಟ, ಫಳಾರ, ಬೆಳಗಿನ ಫಲಾಹಾರ, ನಾಷ್ಟಾ.

Break'neck (ಬ್ರೇಕ್‌ನೆಕ್) n. [of pace, hill, &c,] dangerous. ಕಡಿದಾದ, ಅಪಾಯಕರ, ಗಂಡಾಂತರದ, ಮುಗ್ಗರಿಸುವ.

Break'water (ಬ್ರೇಕ್‌ವಾಟರ್) n. barrier to break force of water. ದಂಡೆ, ಅಣೆಕಟ್ಟು, ಅಲೆತಡೆ.

Bream (ಬ್ರೀಮ್) n. fresh-water fish. ಸಿಹಿನೀರೊಳಗಿನ ಮೀನು.

Breast (ಬ್ರೆಸ್ಟ್) n. either milk secreting organ in woman [fig.] source of nourishment, the chest, seat of affection. ಮೊಲೆ, ಸ್ತನ, ಕೆಚ್ಚಲು, ಪೋಷಣಾಧಾರ, ಎದೆ, ಅಂತಃಕರಣ. **make a clean b. of,** make a full confession. ತಪ್ಪು ಒಪ್ಪಿಕೊಳ್ಳು, ಮನಸ್ಸಿನಲ್ಲಿ ಇರುವುದೆಲ್ಲವನ್ನೂ ಹೇಳಿಬಿಡು.

Breastbone (ಬ್ರೆಸ್ಟ್‌ಬೋನ್) n. the sternum. ಎದೆಯೆಲುಬು

Brestdeep (ಬ್ರೆಸ್ಟ್‌ಡೀಪ್) a. deep up to the breast ಎದೆಯವರೆಗೆ ಆಳವಾದ.

Bre'ast plate (ಬ್ರೆಸ್ಟ್‌ಪ್ಲೇಟ್) n. piece of armour for breast. ಎದೆಕವಚ, ವಕ್ಷಸ್ತ್ರಾಣ, ಎದೆಕಾಪು.

Breastwork (ಬ್ರೆಸ್ಟ್‌ವರ್ಕ್) n. temporary wall built for defence. ರಕ್ಷಣೆಗೋಸ್ಕರ ತಾತ್ಕಾಲಿಕವಾಗಿ ಕಟ್ಟಿದ ಗೋಡೆ.

Breath(ಬ್ರೆತ್-ಬ್ರೆಥ್) n. air, as used by lungs, breathing on respiration, life, very slight breeze. ಶ್ವಾಸ, ಉಸಿರಾಟ, ಜೀವ, ಪ್ರಾಣ, ಮಂದಾನಿಲ. **out of b.** unable to breathe freely. ಸರಿಯಾಗಿ ಉಸಿರಾಡಲಾಗದೆ. under one's b. in whisper. in fear. ಪಿಸುಮಾತಿನಲ್ಲಿ, ಹೆದರಿಕೆಯಿಂದ.

Breathe (ಬ್ರೀದ್) vt. i. draw in and expel air from the lungs, live, whisper. ಉಸಿರಾಡು, ಶ್ವಾಸಮಾಡು, ಬದುಕು, ಜೀವಂತನಾಗಿರು, ಕಿವಿಯಲ್ಲಿ ಹೇಳು.

Breath'ing (ಬ್ರೀದಿಂಗ್) n. respiration. ಉಸಿರಾಡೋಣ, ಶ್ವಾಸಮಾಡೋಣ, ಶ್ವಾಸ.

Breath'less (ಬ್ರೆತ್‌ಲೆಸ್) a. dead. excessively eager. ಉಸಿರಾಡದ, ಸತ್ತ, ಉಸಿರಾಚದಂತಿರುವ, ಅತ್ಯಾತುರದಿಂದಿರುವ.

Breech (ಬ್ರೀಚ್) n. the buttocks. the hinder part of anything esp. of a gun. ಅಂಡುಗಳು, ಪಿರ್ರೆ, ವ್ಯೈಯ್ಯ, ಹಿಂಭಾಗ, ಬಂದೂಕಿನ ಹಿಂಭಾಗ.

Breeches (ಬ್ರೀಚೆಸ್) n. trousers, man's garment fastend below the knees. ಇಜಾರು, ಚಲ್ಲಣ, ಷರಾಯಿ, ಚಡ್ಡಿ.



Breeches

Breed (ಬ್ರೀಡ್) vt. i. generate or bring forth, train or bring up. ಹೆರ, ಉತ್ಪತ್ತಿಮಾಡು, ಪೋಷಿಸು, ಸಲಹು, ಶಿಕ್ಷಣಕೊಡು, ತರಪೇತುಮಾಡು.

Breeder (ಬ್ರೀಡರ್) n. one who breeds or brings up. ಪಾಲಿಸುವವನು, ಪೋಷಕ.

Breedi'ng (ಬ್ರೀಡಿಂಗ್) n. nurture, education or training. ಪೋಷಣೆ, ಶಿಕ್ಷಣ, ಕಲಿಸೋಣ, ತಯಾರುಮಾಡೋಣ.

Breeze (ಬ್ರೀಜ್) n. gentle wind, [sl] quarrel ಮಂದಾನಿಲ, ಮೆಲ್ಲನೆ ಬೀಸುವಗಾಳಿ, ಮಂದಮಾರುತ, ಜಗಳ.

Bren (ಬ್ರೆನ್) n. a kind of light machine gun. ಹಗುರವಾದ ಫಿರಂಗಿ, ಬ್ರೆನ್ ಫಿರಂಗಿ.

Breth'ren (ಬ್ರೆದ್ರೆನ್) pl. of brother.

Breve (ಬ್ರೀವ್) n. sign for a short vowel sound. ಲಘುಸ್ವರದ ಚಿನ್ಹೆ.

Breviary (ಬ್ರೀವಿಅರಿ) n. book of daily prayers. ನಿತ್ಯಸ್ತೋತ್ರ ಸಂಗ್ರಹ.

Brevier(ಬ್ರೆವಿಯರ್)n. size of printing type. ನಿಶ್ಚಿತ ಪ್ರಮಾಣದ ಅಚ್ಚು ಮೊಳೆ.

Brev'ity (ಬ್ರಿವಿಟಿ) n. shortness, conciseness. ಸಂಕ್ಷೇಪ, ಕ್ರೋಢೀಕರಣ, ಸಂಕ್ಷಿಪ್ತ, ಅಡಕ, ಅಲ್ಪಾವಧಿ.

Brew(ಬ್ರೂ)vt. i. make beer, make tea, &c., boil, be in a state of preparation, contrive or plot. ಬೀರು, ಕಷಾಯ ಇಳಿಸು, ಭಟ್ಟಿ ಇಳಿಸು, ಕಾಯಿಸು, ಯೋಚಿಸು, ಸಂಚುಮಾಡು.

Brew'ery (ಬ್ರೂಅರಿ) commercial brew-house. ಸಾರಾಯಿಮಾಡುವ ಮನೆ. ಸಾರಾಯಿ ಭಟ್ಟಿ.

Bribe (ಬ್ರೈಬ್) n. corrupt gift, price given to do wrong act. ಲಂಚಪರಿದಾನ. vt. i. give bribe, to corrupt. ಲಂಚಕೊಡು, ರುಷವತ್ತು ಕೊಡು.

Briber (ಬ್ರೈಬರ್) n. a person who offers bribe. ಲಂಚರುಷುವತ್ತು ಕೊಡುವವನು.

Bri'bery (ಬ್ರೈಬರಿ) n. the act of giving or taking bribes. ಲಂಚಗಾರಿಕೆ, ಲಂಚಕೋರತನ.

Brick (ಬ್ರಿಕ್) n. oblong or square piece of burnt clay,(sl) reliable friend. ಇಟ್ಟಿಗೆ; ಇಟ್ಟಿಗಿ, ನೆಚ್ಚಿನ ಗೆಳೆಯ.

Brick'bat (ಬ್ರಿಕ್‌ಬಾಟ್) n. piece of brick, esp. as missile. ಇಟ್ಟಿಗೆ ತುಂಡು, ಮಣ್ಣು ಹೆಂಟೆ.

Brickfield (ಬ್ರಿಕ್‌ಫೀಲ್ಡ್) n. place where bricks are made. ಇಟ್ಟಿಗೆಗಳನ್ನು ಮಾಡಿ ಸುಡುವ ಸ್ಥಳ.

Brick'kiln (ಬ್ರಿಕ್‌ಕಿಲ್ನ್) n. kiln in which bricks are baked. ಇಟ್ಟಿಗೆ ಸುಡುವ ಗೂಡು.

Brick'layer(ಬ್ರಿಕ್‌ಲೇಅರ್) n. builder with bricks. ಉಪ್ಪಾರ, ಕಾವಸಾಟಿಗ.

Brick-work (ಪ್ರಿಕ್‌ವರ್ಕ್)n. building in brick, work done by brick-laying. ಇಟ್ಟಿಗೆಯಲ್ಲಿ ಕಟ್ಟುವ ಕೆಲಸ, ಇಟ್ಟಿಗೆಯಲ್ಲಿ ಪೂರೈಸಿದ ಕಾರ್ಯ.

Bri'dal (ಬ್ರೈಡಲ್) n. marriage feast, wedding, nuptial. ವಿವಾಹ ಮಹೋತ್ಸವ, ಮದುವೆ, ಮದುವೆ ಭೋಜನ, ವಿವಾಹ ಪ್ರಸ್ತ. a. of bride or wedding. ವಧುವಿನ ವಿವಾಹದ.

Bri'de (ಪ್ರೈಡ್) n. woman about to be married or newly married. ಮದುಮಗಳು, ಮದುವೆ ಹೆಣ್ಣು, ಮದುವಣಗಿತ್ತಿ, ಕನ್ಯಾವಧು.

Bride'groom (ಬ್ರೈಡ್‌ಗ್ರೂಮ್) n. man about to be or newly married. ವರ, ಮದುವೆ ಗಂಡು, ಮದುವಣಿಗ.

Brides'maid (ಬ್ರೈಡ್ಸ್‌ಮೇಡ್) n. woman who attends the bride. ವಧುವಿನ ಗೆಳತಿ, ವಧುಸಖಿ.

Bridesman (ಬ್ರೈಡ್ಸ್‌ಮ್ಯಾನ್) n. man who attends the bride groom. ಮದುಮಗನ ಗೆಳೆಯ, ವರನ ಸಖಿ.

Bridewell (ಬ್ರೈಡ್‌ವೆಲ್)n. house of correction. ಅಪರಾಧಿಗಳ ಸ್ವಭಾವವನ್ನು ತಿದ್ದುವ ಮನೆ.

Bridge (ಬ್ರಿಡ್ಜ್) n. structure for carrying loads across water, ravine, card game. ಸೇತುವೆ, ಸಂಕ, ಕಮರಿ, ಒಂದು ತರಹದ ಇಸ್ಪೀಟಾಟ.

Bri'dle (ಬ್ರೈಡ್‌ಲ್) n. bit & reins for horse, any curb or restraint. ಕಡಿವಾಣ, ಕುದುರೆ ಲಗಾಮು, ಮೂಗುದಾರ, ಮೂಗುದಾಣ, ಹತೋಟಿಯಲ್ಲಿಟ್ಟಿರು, ಲಗಾಮು ಹಾಕು, ನಿಗ್ರಹಿಸು.



Bridle

Brief (ಬ್ರೀಫ್) a. short, concise. ಸಂಕ್ಷೇಪವಾದ, ಸಂಗ್ರಹ, ಕ್ಷಣಿಕ, ಅಲ್ಪ ಕಾಲಿಕ. n. instructions to barrister. ವ್ಯಾಜ್ಯ ವಿಷಯ, ವಕಾಲತು, ಚೀಟು.

Brief'less (ಬ್ರೀಫ್‌ಲೆಸ್) a. without clients. ಕಕ್ಷಿಗಾರರಿಲ್ಲದ, ವಕಾಲತು ಇಲ್ಲದ.

Briefly (ಬ್ರೀಫ್‌ಲಿ) adv. in a concise way. ಸಂಕ್ಷೇಪವಾಗಿ.

Bri'er,-ar (ಬ್ರೈಅರ್) n. wild rose bush. ಕಾಡು ಗುಲಾಬಿ ಗಿಡ.

Brig (ಬ್ರಿಗ್) n. two-masted vessel. ಎರಡು ಕೂವೆಗಳುಳ್ಳ ಹಡಗು, ಇಕ್ಕೂವೆಯ ಹಡಗು, ನಾವೆ.

Brigade' (ಬ್ರಿಗೇಡ್) n. military unit. ಸೇನಾಭಾಗ, ಸೈನ್ಯದಳ.

Brigadier (ಬ್ರಿಗೇಡಿಅರ್) n. brigade commander ಸೇನಾಧಿಪತಿ.

Brig'and (ಬ್ರಿಗೆಂಡ್) n. robber. ದಾರಿಬಡಕ, ಡಕಾಯಿತ, ದರೋಡೆಕಾರ, ಲೂಟಿಗಾರ.

Brigandage(ಬ್ರಿಗೆಂಡೇಜ್) n highway robbery ದರೋಡೆ, ಲೂಟಿ.

Brig'antine (ಬ್ರಿಗೆಂಟೀನ್) n. see Brig.

Bright (ಬ್ರೈಟ್) a. shining, brilliant. ಹೊಳೆಯುವ, ಪ್ರಕಾಶಮಾನವಾದ, ಕಾಂತಿಯುಳ್ಳ, ತೀಕ್ಷ್ಣಬುದ್ಧಿಯುಳ್ಳ, ತೇಟು ಬುದ್ಧಿಯು.

Bright'en (ಬ್ರೈಟನ್) vt. make bright. ಪ್ರಕಾಶಗೊಳಿಸು, ಬೆಳಗು.

Brilliance (ಬ್ರಿಲಿಯನ್ಸ್) n. brightness, sparkle; glitter. ಪ್ರಕಾಶ, ಕಾಂತಿ, ಹೊಳೆಯುವಿಕೆ.

Brill'iant(ಬ್ರಿಲ್ಯಂಟ್) a. sparkling. splendid, glittering. ಪ್ರಕಾಶಮಾನವಾದ, ಕಾಂತಿಯುಳ್ಳ, ಥಳಥಳಿಸುವ, ಹೊಳೆಯುವ.

Brilliantine (ಬ್ರಿಲ್ಯಂಟೀನ್) n. cosmetic preparation for the hair. ತಲೆಕೂದಲುಗಳಿಗೆ ಹಚ್ಚುವುದಕ್ಕಾಗಿ ತಯಾರಿಸಿದ ಪದಾರ್ಥ.

Brills (ಬ್ರಿಲ್ಸ್) n. hair on the eyelids of a horse. ಕುದುರೆಯ ರೆಪ್ಪೆಯ ಮೇಲಿನ ಕೂದಲು.

Brim (ಬ್ರಿಮ್) n. brick, edge. ಅಂಚು, ಅರಗು, ಏಣಿ, ಕರ, ದಡ. up to the b. ಕಂಠಪೂರ್ತಿ, ತುಂಬಿ ತುಳುಕುವ.

Brim'ful (ಬ್ರಿಮ್‌ಫುಲ್) a. full to the brim ತುಂಬಿತುಳುಕುವ, ಸೂಸಮಟ್ಟ, ಕಂಠಪೂರ್ಣ.

Brimless (ಬ್ರಿಮ್‌ಲೆಸ್) a. having no brim. ಅಂಚಿಲ್ಲದ, ಕಂಠವಿಲ್ಲದ.

Brimmed (ಬ್ರಿಮ್ಡ್) a. having a brim. ಅಂಚುಳ್ಳ, ದಡವುಳ್ಳ.

Brimmer (ಬ್ರಿಮರ್) n. bowl full to the top. ತುಂಬಿದ ಬಟ್ಟಲು.

Brim'stone (ಬ್ರಿಮ್‌ಸ್ಟೋನ್) n. sulphur. ಗಂಧಕ.

Brind'le, brindled (ಬ್ರಿಂಡಲ್, ಬ್ರಿಂಡ್ಲ್ಡ್) a. streaked. spotted. ಬಣ್ಣದ ಪಟ್ಟೆಗಳುಳ್ಳ, ಚುಕ್ಕಿ ಚುಕ್ಕಿಗಳುಳ್ಳ.

Brine (ಬ್ರೈನ್) n. salt water, the sea, tear. ಉಪ್ಪುನೀರು, ಸಮುದ್ರ, ಅಶ್ರು, ಕಣ್ಣೀರು.

Bring (ಬ್ರಿಂಗ್) vt. fetch, carry, procure. ತರು, ಕರೆದುಕೊಂಡು ಬಾ, ತೆಗೆದುಕೊಂಡು ಬಾ, ಎತ್ತಿಕೊಂಡು ಬರು, ಹೊರು, ಒದಗಿಸು. b. about, cause. ಆಗುವಂತೆ ಮಾಡು. b down, cause to alight. ಇಳಿಸು, ತಗ್ಗಿಸು, ಕುಗ್ಗಿಸು, ನಮ್ರಗೊಳಿಸು. b. down the horse, elicit universal applause. ಎಲ್ಲರೂ ಹೊಗಳುವಂತೆ ಮಾಡು. b forth, give birth to, cause. ಹೆರು, ಪ್ರಸವಿಸು, ಉಂಟುಮಾಡು, ಹುಟ್ಟಿಸು b. forward, carry (sum) on to new page. ಲೆಕ್ಕವನ್ನು ಮುಂದರಿಸಿ ಮುಂದಿನ ಪುಟವಲ್ಲಿ ಬರೆ. b. home, to convict or con-

vince of. (ಅಪರಾಧ) ತೀರ್ಮಾನಿಸು, ಖಚಿತಗೊಳಿಸು. b. in, introduce, import. ರೂಢಿಗೆತರು, ಒಳಗೆ ತರು, b. into the world, give birth to, ಹೆರು, ಜನನ ಕೊಡು. b on, lead to. ಕಾರಣವಾಗು. b. out, publish book, &c. ಗ್ರಂಥ ಪ್ರಕಟಿಸು b. off, conduct successfully, ಜಯಪ್ರದವಾಗಿ ನಡೆಸು. b. over, convert. ಮತಾಂತರಗೊಳಿಸು. b.round (esp.) restore to consciousness, ಅರಿವು ಉಂಟುಮಾಡು, ಶ್ರದ್ಧೆ ಬರುವಂತೆಮಾಡು, b. to light, make clear, discover. ಸ್ಪಷ್ಟಪಡಿಸು, ಪ್ರಕಟಿಸು, ಕಂಡುಹಿಡಿ b. to mind, recall to memory. ನೆನಪಿಸಿಕೊಳ್ಳು, ಜ್ಞಾಪಿಸಿಕೊಳ್ಳು. b. to pass, make happen. ಆಗುವಂತೆ ಮಾಡು. b. under, subdue. ಸ್ವಾಧೀನಕ್ಕೆ ತಂದು ವಶಪಡಿಸಿಕೊಳ್ಳು. b. up-rear, educate. ಸಾಕು, ತರಬೇತುಮಾಡು.

Brinish (ಬ್ರೈನಿಷ್) a. saltish; ಉಪ್ಪಾಗಿರುವ.

Brinjal (ಬ್ರಿಂಜಾಲ್) n. egg apple. ಬದನೇಕಾಯಿ.

Brinjals

Brink (ಬ್ರಿಂಕ್) n. the edge of a river. ಬದಿ. ಅಂಚು, ಕರೆ, ನದೀತೀರ, ದಡ. on the b. of, in imminent danger of dying. ಬೀಳುವದರಲ್ಲಿ, ನಾಶವಾಗುವದರಲ್ಲಿ ಇರುವ.

Briny (ಬ್ರೈನಿ) a. salty. ಉಪ್ಪಾಗಿರುವ.

Brisk (ಬ್ರಿಸ್ಕ್) a. active, sharp. ಚುರುಕಾದ, ಚಟುವಟಿಕೆಯುಳ್ಳ, ಚಾಲಾಕಿನ.

Brisket (ಬ್ರಿಸ್ಕೆಟ್) n. breast of animals specially used as joint of meat. ಮಾಂಸವಾಗಿ ಉಪಯೋಗಿಸುವ ಪ್ರಾಣಿಗಳ ಎದೆಯ ಭಾಗ.

Bristle (ಬ್ರಿಸ್ಲ್) n. short stiff hair as of swine. ಬಿರುಗೂದಲು, ಹಂದಿಯ ಕೂದಲು, ಗಡ್ಡದ ರೋಮ, ಊಬು, vt. i. stand erect, be thickly set with [obstacles, &c.] ನೆಟ್ಟಗೆ ನಿಲ್ಲು, ರೋಮಾಂಚನವಾಗು, ರೇಗು, ಅಡ್ಡಿ ಆತಂಕಗಳಿಂದ ತುಂಬಿರು.

Bristling (ಬ್ರಿಸ್‌ಲಿಂಗ್) n. kind of small fish. ಒಂದು ವಿಧದ ಸಣ್ಣ ಮೀನು.

Britain (ಬ್ರಿಟನ್) n. England, Wales and Scotland. ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್ಲೆಂಡ್.

Britanni'a (ಬ್ರಿಟಾನಿಅ) n. Britain personified. ಬ್ರಿಟನ್‌ದೇಶ.

Britannic (ಬ್ರಿಟಾನಿಕ್) a. pertaining to Britain. ಬ್ರಿಟನ್ ದೇಶಕ್ಕೆ ಸಂಬಂಧಪಟ್ಟ.

British (ಬ್ರಿಟಿಶ್) a. of Great Britain; of the British. ಬ್ರಿಟನ್ನಿನ, 'ಬ್ರಿಟಿಷರ.'

Bri'ton (ಬ್ರಿಟನ್) n. modern British person. ಬ್ರಿಟನ್ನಿನವ, ಬ್ರಿಟಿಷ.

Brit'tle (ಬ್ರಿಟಲ್) a. easily broken, fragile. ಪೆಡಸು. ಭಂಗುರ, ಸುಲಭವಾಗಿ ಒಡೆಯುವ, ಲೊಡ್ಡು.

Broach (ಬ್ರೋಚ್) n. roasting spit, boring bite, spire. ಸಲಾಕಿ, ಬೈರಿಗೆ ಮೊಳೆ, ಮೊಂಡು ಮಬ್ಬಳ, ಚರ್ಚಿನ ಗೋಪುರ. vt. bore, tap, bring up for discussion, ತೂತು ಕೊರೆ, ತಿವಿ, ಚುಚ್ಚು, ಹಿರಿ, ಪ್ರಸ್ತಾಪಿಸು.

Broad (ಬ್ರಾಡ್) a. wide, large. open or free, unmistakable. ಅಗಲವಾದ, ವಿಶಾಲವಾದ, ಉದಾತ್ತ, ಉದಾರ ಹೃದಯದ, ಸ್ಪಷ್ಟವಾದ.

Broad-arrow (ಬ್ರಾಡ್-ಆರೋ) n. the official mark on Government goods. ಸರಕಾರೀ ಸಾಮಾನುಗಳ ಮೇಲೆ ಗುರ್ತಿಸುವ ಬಾಣದ ಚಿಹ್ನೆ.

Broad'cast (ಬ್ರಾಡ್‌ಕಾಸ್ಟ್) a. scattered or dispersed widely. ಪಸರಾಯಿಸಿದ, ಬಿತ್ತಿದ, ಚೆಲ್ಲಿದ, ಎರಚಿದ. vt. i.

scatter, transmit by wireless. ಹರಡು, ಹರವು, ಬಾನುಲಿ (ಆಕಾಶವಾಣಿ) ಯಿಂದ ತಿಳಿಸು.

Broad cloth (ಬ್ರಾಡ್.ಕ್ಲಾತ್) n. fine kind of woollen cloth. ನಯವಾದ ಬನಾತು.

Broad'en (ಬ್ರಾಡ್ನ್) vt.make broad, grow broad. ಅಗಲಿಸು, ಅಗಲವಾಗು.

Broadness (ಬ್ರಾಡ್ನೆಸ್) n. indelicacy (of speech). ವಿಶಾಲತೆ, (ಮಾತಿನಲ್ಲಿ) ಅಶ್ಲೀಲತೆ.

Broadsheet (ಬ್ರಾಡ್‌ಷೀಟ್) n. large sheet of paper printed on one side only. ಒಂದೇ ಪಕ್ಕ ಮುದ್ರಣಮಾಡಿರುವ ದೊಡ್ಡ ಕಾಗದದ ಹಾಳೆ.

Broad'side (ಬ್ರಾಡ್‌ಸೈಡ್) n. ship's side, sheet printed on one side. ಹಡಗಿನಭಾಗ,ಒಂದುಕಡೆ ಅಚ್ಚಾದ ಕಾಗದ.

Broads word (ಬ್ರಾಡ್ಸ್ವೋರ್ಡ್) n. a broad bladed sword. ಅಗಲವಾದ ಅಲಗಿನ ಖಡ್ಗ.

Broadways (ಬ್ರಾಡ್ ವೇಸ್) adv. along the breadth. ಅಗಲವಾಗಿ.

Brob (ಬ್ರಾಬ್) n. wooden wedge that tightens a tenon. ಕೂರು ಮತ್ತು ವೆಜ್ಜವನ್ನು ಸೇರಿಸುವುದಕ್ಕೆ ಉಪಯೋಗಿಸುವ ಮರದ ಬೆಣೆ.

Brocade (ಬ್ರಾಕೇಡ್) n. silk stuff decorated with raised pattern. ಜರತಾರಿ, ಕಸೂತಿ ಕೆಲಸಮಾಡಿದ ರೇಶಿಮೆ ವಸ್ತ್ರ.

Broccoli (ಬ್ರಾಕಲಿ) n. cabbage with edible flower. ಕೋಸುಗಡ್ಡೆಯ ಜಾತಿಯ ತರಕಾರಿ.

Bro'chure(ಬ್ರೊಶೂರ್)n.pamphlet. ಸಣ್ಣಪುಸ್ತಕ, ಲಘುಗ್ರಂಥ, ಪತ್ರಿಕೆ, ವಹಿ.

Brocket (ಬ್ರಾಕೆಟ್) n. stag two years old. ಎರಡುವರ್ಷದ ಗಂಡು ಜಿಂಕೆ, ಮೃಗಶಾಬಕ.

Brogue (ಬ್ರೋಗ್) n. stout shoe, manner of pronurciation especially Irish. ಒರಟಾಗಿರುವ ಜೋಡು, ಒಂದು ಬಗೆಯ (ಐರಿಷ್) ಜನರ ಉಚ್ಚಾರಣೆ.

Broider (ಬ್ರಾಯಿಡರ್) vt. adorn with needlework. ಕಸೂತಿಕೆಲಸಮಾಡಿ ಅಲಂಕರಿಸು.

Broil'(ಬ್ರಾಯಿಲ್) n. noisy quarrel. tumult. ಕಲಹ,ದೊಂಬಿ,ಗಲಭೆ. vt. i. dress meat over a fire, be hot. ಮಾಂಸವನ್ನು ಸುಡು, ಬೆಂದುಹೋಗು, ಬಿಸಿಯಾಗಿಡು.

Brokage(ಬ್ರೋಕೇಜ್)n. brokerage, ದಲಾಲಿಯ ರುಸುಮು.

Bro'ken (ಬ್ರೋಕನ್) a. shattered, uncertain, crushed, incomplete. ಒಡೆದುಹೋದ, ಮುರಿದ, ತುಂಡಾದ, ಚೂರುಚೂರಾದ, ನಿಶ್ಚಯವಿಲ್ಲದ.

Broken'hearted (ಬ್ರೋಕನ್‌ಹಾರ್ಟೆಡ್) a. crushed by grief. ಭಗ್ನಹೃದಯನಾದ, ಕುಂದಿದ, ವ್ಯಸನದಿಂದ ಕುಗ್ಗಿದ, ಹತಾಶನಾದ.

Broker (ಬ್ರೋಕರ್) n. commissioner, one employed to buy & sell for others. ದಲಾಲಿ, ದಳ್ಳಾಳಿ, ವ್ಯಾಪಾರದಲ್ಲಿ ಮಧ್ಯಸ್ಥಗಾರ.

Bro'kerage (ಬ್ರೋಕರೇಜ್) n. the commission charged by a broker. ದಲಾಲಿ, ದಳ್ಳಾಳಿಯ ರುಸುಮು, ತರಗು.

Bro'king (ಬ್ರೋಕಿಂಗ್) n. doing business as a broker. ದಲಾಲಿ ವ್ಯಾಪಾರ.

Bromic (ಬ್ರಾಮಿಕ್) a. pertaining to bromine, ಬ್ರೋಮಿನಿಗೆ ಸಂಬಂಧಿಸಿದ.

Bromide(ಬ್ರೋಮೈಡ್)n.compound of bromine. ಬ್ರೋಮೀನ್ ಸೇರಿರುವ ಔಷಧ.

Bromine (ಬ್ರೋಮೀನ್) n. non-metallic element which resembles chlorine. ಕ್ಲೋರೀನ್ ಅನಿಲವನ್ನು ಹೋಲುವ ಅಲೋಹ ಮೂಲಧಾತು.

Bronc'hial (ಬ್ರಾಙ್ಕಿಅಲ್) a. of the ramifications of the wind pipe. ಶ್ವಾಸನಳಿಕೆಗೆ ಸಂಬಂಧಪಟ್ಟ.

Bronchi'tis(ಬ್ರಾಙ್ಕೈಟಿಸ್)n.inflammation of the bronchial membrane. ಕಾಸ, ಗೂರಲು, ಶ್ವಾಸನಾಳಗಳ ಊತ, ನೇವಸ.

Bronco (ಬ್ರಾನ್ಕೊ)n. a half broken Native Horse in America, a mustang. ಅಮೇರಿಕದ ಕಾಡು ಕುದುರೆ.

Bronze (ಬ್ರಾಂಜ್) n. brown alloy of copper & tin, its colour ಕಂದುಕಂಚು, ಕಂಚಿನಬಣ್ಣ.

Brooch (ಬ್ರೂಚ್) n.fancy safety-pin. ಹೆಂಗಸರ ಅಲಂಕಾರ ಪದಕ, ಪದಕದ ಕೊಂಡಿ.


Brooch

Brood (ಬ್ರೂಡ್) n. offspring, birds hatched at one time, race, kind, parentage. ಮರಿಗಳು, ಸಂಸಾರ, ಮಕ್ಕಳು ಮರಿಗಳು, ಕುಟುಂಬ. vt. i. sit on eggs, meditate deeply. ಹೊದಗು, ಕಾವಿಗೆ ಕೊಡು, ಕೊರಗು, ಗಾಢವಾಗಿ ಧ್ಯಾನಿಸು.

Brook (ಬ್ರೂಕ್)vt. bear or endure. ತಾಳು, ಸೈರಿಸು. n. small stream. ಹಳ್ಳ, ನೀರಿನಝುರಿ, ಸಣ್ಣಹೊಳೆ, ತೊರೆ.

Brooklet (ಬ್ರೂಕ್ಲೆಟ್) n. a streamlet. ಸಣ್ಣ ನದಿ, ತೊರೆ.

Broom (ಬ್ರೂಮ್)n. yellow flowered shrub, long handled sweeping brush. ಅಂಚಿನ ಕಡ್ಡಿ ಗಿಡ, ಬರಲು, ಪೊರಕೆ.

Brose (ಬ್ರಾಜ್) n, a Scottish dish made of oat or peas meal. ತೋಕೆ ಗೋಧಿ ಅಥವಾ ಬಟಾಣಿಯಿಂದ ಮಾಡಿದ ಊಟ.

Broth (ಬ್ರಾಥ್) n. thin meat soup, ಮಾಂಸದ ಸಾರು, ಅಮ್ರ.

Broth'el (ಬ್ರಾಥೆಲ್) n. house of prostitution. ವೇಶ್ಯಾಗೃಹ, ಸೂಳೆಮನೆ, ವ್ಯಭಿಚಾರದ ಮನೆ.

Broth'er (ಬ್ರದರ್) n. son of same parents, fellow member, ಒಡಹುಟ್ಟಿದವ, ಸೋದರ, ಒಡನಾಡಿ, ಸಹೋದ್ಯೋಗಿ.

Broth'erhood (ಬ್ರದರ್ಹುಡ್) n. brotherliness, set of brothers and comrades. ಭ್ರಾತೃತ್ವ, ಒಡನಾಡಿಗಳ ಸಂಘ.

Brother-in-law(ಬ್ರದರ್-ಇನ್-ಲಾ) n. brother of a husband or wife, sister's husband. ಭಾವ, ಹೆಂಡತಿಯ ಸೋದರ.

Broth'erly (ಬ್ರದರ್ಲಿ) a. like a brother, kind, affectionate. ಸೋದರ ಭಾವದ, ಮಮತೆಯ, ವಾತ್ಸಲ್ಯದ, ಪ್ರೇಮದ.

Brougham (ಬ್ರೂಮ್) n. carriage drawn by one horse. ಒಂದು ಕುದುರೆ ಕಟ್ಟಿದ ಬಂಡಿ.

Brow (ಬ್ರೌ) n. arch of hair over eye (usu. in plu), forehead, the edge of a hill, &c. ಹಣೆ, ಹುಬ್ಬು, ನೊಸಲು, ಲಲಾಟ, ಫಾಲ, ಪ್ರಪಾತ, ಶೃಂಗ.

Brow'beat (ಬ್ರೌಬೀಟ್) vt. bear down with look and words. ಬೆದರಿಸು, ಗದರಿಸು, ದಬಾಯಿಸು.

Brown (ಬ್ರೌನ್) a. of a dark or dusky red colour. ಕಂದು ಬಣ್ಣದ, ಕಂದುತಿರುಗಿದ. ತೇಗದ ಮರದ ಬಣ್ಣದ, b. study, reverie. ಅತಿಧ್ಯಾನ, ತಲ್ಲೀನತೆ, ಮಗ್ನತೆ.

Brownie(ಬ್ರೌನಿ)n. a domestic elf. ಗೃಹಪಿಶಾಚ.

Browning(ಬ್ರೌನಿಂಗ್)n. automatic pistol. ಸ್ವಯಂ ಚಾಲಿತವಾಗುವ ಪಿಸ್ತೂಲು.

Brownness (ಬ್ರೌನ್‌ನೆಸ್) n. the quality of being brown. ಕಂದು ಬಣ್ಣ.

Browse (ಬ್ರೌಜ್) vt. i. feed on the shoot or leaves of plants [fig.] read for enjoyment. ಎಳೆಚಿಗುರು ಮೇಯಿಸು, ಆನಂದಕ್ಕಾಗಿ ಓದು.

Bruise (ಬ್ರೂಇಜ್) vt i. crush by blows, contuse, pound. ಜಜ್ಜು, ನೆಗ್ಗು, ತಟ್ಟು, ಗುದ್ದು, ಬಡಿ.

Bruiser (ಬ್ರೂಯಿಸರ್) n. one who bruises, boxer. ಜಜ್ಜುವವನು, ಬಾಕ್ಸಿಂಗ್ ಆಟಗಾರ.

Bruit (ಬ್ರೂಯಿಟ್) vt. spread about ನಾಲ್ಕು ದಿಕ್ಕಿಗೂ ಹರಡು, ವದಂತಿ ಹರಡು.

Brumal (ಬ್ರೂಮಲ್) a. belonging to winter. ಛಳಿಗಾಲಕ್ಕೆ ಸಂಬಂಧಿಸಿದ.

Brummagem (ಬ್ರುಮಾಜಮ್) adj. made in Birmingham, showy but worthless. ಬರ್ಮಿಂಗ್‌ಹಾಮ್ ನಗರದ, ಕೃತ್ರಿಮ, ಉಪಯೋಗವಿಲ್ಲದ.

Brumous (ಬ್ರೂಮಸ್) a. wintry. foggy. ಛಳಿಗಾಲದ, ಮಂಜು ಕವಿದ.

Brunnette (ಬ್ರೂನೆಟ್) n. woman of dark complexion. ಕರ್ರಗಿರುವ ಹೆಂಗಸು.

Brunt (ಬ್ರಂಟ್) n. stress of shock or attack. ಹೊಡೆತದ ಬಿರುಸು, ಪೆಟ್ಟಿನ ಬಲ.


Brush

Brush (ಬ್ರಶ್) n. cleaning of hair, dressing or painting implement, fox's tail, skirmish. ಪರಾಹಕಟ್ಟು, ಕುಂಚಿಗೆ, ಚಿತ್ರಗಾರನ ಕುಂಚ, ಕೂಚ್ಚ, ಜಗಳ, ತಿಕ್ಕಾಟ. vt. use brush on. ಬ್ರಶ್‌ನಿಂದ ಒರಸು. b. by. pass close to without noticing. ಕಾಣದಂತೆ ಮಗ್ಗುಲಲ್ಲಿ ಹಾದು ಹೋಗು.

Brush'wood (ಬ್ರಷ್‌ವುಡ್) n. thicket of small shrubs. ಕುರುಚಲುಗಿಡ, ಪೊದೆ.

Brusque (ಬ್ರಸ್ಕ್) a. blunt, rude. ಒರಟಾದ, ನಯನಾಜೂಕಿಲ್ಲದ.

Brustle (ಬ್ರಸ್‌ಲ್) vt. rustle, crackle. ಚಟಪಟ ಶಬ್ದಮಾಡು.

Bru'tal (ಬ್ರೂಟಲ್) a. like brute, savage, unfeeling. ಪಶುಸ್ವಭಾವದ, ಅತಿಕ್ರೌರ್ಯದ, ಕ್ರೂರ; ನಿಷ್ಕಾರುಣ್ಯದ.

Brutal'ity (ಬ್ರೂಟಾಲಿಟಿ) n. stupidity, rudeness. ಪಶುಸ್ವಭಾವ, ಪಾಮರತೆ, ಅಸಭ್ಯತೆ.

Brutalize (ಬ್ರೂಟಲೈಜ್) vt. to make cruel ನಿರ್ದಯಿಯಾಗಿ ಮಾಡು, ಕ್ರೂರಿಯಾಗಿ ಪರಿವರ್ತಿಸು.

Brute (ಬ್ರೂಟ್) n. senseless, stupid, rude, ಬುದ್ಧಿಯಿಲ್ಲದ, ಪಶುಪ್ರಾಯ, ಅಸಭ್ಯ, ಒರಟು. n. beast, ಪಶು, ಮೃಗ.

Brutish (ಬ್ರೂಟಿಷ್) a. like a brute. ಅಸಭ್ಯ, ಪಶುವಿನಂತೆ, ಪಾಶವಿಕ.

Bub'ble (ಬಬ್‌ಲ್) n. small bladder of water, empty project, false show. ನೀರ್ಗುಳ್ಳೆ, ನೀರುಬುಗ್ಗೆ, ಬೊಬ್ಬುಳ, ಬುದ್ಬುದ, ಕೇವಲಭ್ರಾಂತಿಜನಿತ, ಮೋಸ. vt. [fig rise in air-balls,] boil over [with joy, anger, &c.] ಮರಳು, ಕುದಿಯೇಳು, ಹಿಗ್ಗಿಹಿರಿ, ಕೋಪದಿಂದ ಕುದಿಯು.

Bubo (ಬ್ಯೂಬೊ) n. swelling in the arm pit. ಕಂಕುಳು ಗೆಡ್ಡೆ.

Bubonic (ಬ್ಯೂಬಾನಿಕ್) a. characterised by buboes. ಗೆಡ್ಡೆಯೇಳುವ.

Buccal (ಬಕಲ್) a. pertaining to the cheek. ಕೆನ್ನೆಗೆ ಸಂಬಂಧಿಸಿದ, ಗಲ್ಲದ.

Buccaneer' (ಬಕನಿಯರ್) n. sea-rover, pirate. ಸಮುದ್ರಚೋರ, ಕಡಲುಗಳ್ಳ.

Buccaneer'ing (ಬಕನೀರಿಂಗ್) n. piratical. ಸಮುದ್ರಕಳ್ಳತನದ, n. ಹಡಗು ಸುಲಿಗೆ ಮಾಡೋಣ.

Bucentaur (ಬುಸೆಂಟಾರ್) n. a fabulous monster, half ox half man. ಅರ್ಧಎತ್ತು ಅರ್ಧಮನುಷ್ಯನ ಆಕೃತಿಯ ಒಂದು ರಾಕ್ಷಸ.

Buck (ಬಕ್) n. mate of reindeer, goat, hare, &c., a dandy. ಹುಲ್ಲೆ, ಮೇಕೆ ಮೊದಲಾದುವುಗಳಲ್ಲಿ ಗಂಡು, ಗಂಡುಜಿಂಕೆ, ಗಂಡು ಮೊಲ, ಸೊಗಸುಗಾರ.

Buck'et (ಬಕೆಟ್) n. a vessel for holding water. ನೀರಿನತೊಟ್ಟಿ, ಮರಿಗೆ, ನೀರು ಸೇದುವಬಾನಿ, ಬಕೀಟು, vt. i. ride [horse] hard, ಕುದುರೆ ಸವಾರಿ ಮಾಡು (ಓಡಿಸು.)

Buck'le (ಬಕಲ್) n. a clasp with hinged tongue used for straps, fastener. ಕೊಕ್ಕೆ, ಬಕ್ಲೀಸು, ಚಿಲುಕುಕಟ್ಟು.

Buck'ler(ಬಕ್ಲರ್) n. shield, (fig.) protector. ಡಾಲು, ಗುರಾಣಿ, ರಕ್ಷಕ.

Buck'ram (ಬಕ್ರಮ್) n. coarse linen or cloth stiffened with paste· ಬಿರುಸುಮಾಡಿದ ಅರಿವೆ, ಬಟ್ಟೆ.

Buckshot (ಬಕ್‌ಷಾಟ್) n. coarse shot of gun. ಜಿಂಕೆಯನ್ನು ಕೊಲ್ಲುವಷ್ಟು ದೂರದ ತುಪಾಕಿ ಹೊಡೆತ.

Buckwheat (ಬಕ್‌ವೀಟ್) n cereal used for horse, ಕುದುರೆಗಳಿಗೆ ಮೇವಾಗಿ ಉಪಯೋಗಿಸುವ ಧಾನ್ಯ.

Bucol'ic (ಬ್ಯೂಕಾಲಿಕ್) a. rustic, pastoral. ಕುರುಬರ, ಗೋವಳರ, ಪಶುಪಾಲಕರ.

Bud (ಬಡ್) n first shoot of tree or germ. ಮೊಳಕೆ, ಚಿಗುರು, ಅಂಕುರ, ಮೊಗ್ಗು, ಕುಡಿ. vt. begin to grow· ಚಿಗುರು, ಕುಡಿಯೊಡೆ, ಬೆಳೆ, ಅಂಕುರಿಸು.



Bud

Budge (ಬಡ್ಜ್) vt. i. move or stir. ಕದಲು, ಸರಕೊಳ್ಳು, ಅಲುಗಿಸು.

Budg'et (ಬಜೆಟ್) n. annual estimate of revenue and expenditure. bag with contents. ಸರಕಾರದ ವಾರ್ಷಿಕ ಆದಾಯ ವೆಚ್ಚಗಳ ಅಂದಾಜುಪಟ್ಟಿ, ಚೀಲ, ಮೂಟೆ.

Budlet (ಬಡ್‌ಲೆಟ್) n. small bud. ಸಣ್ಣಮೊಗ್ಗು.

Buff (ಬಫ್) n. soft buffalo skin ; yellow colour. ಅರಿಶಿನ ಬಣ್ಣದ ಎಮ್ಮೆ ತೊಗಲು, ಮಾಸಲು ಹಳದಿಯ ಬಣ್ಣ.

Buff'alo (ಬಫಲೋ) n, kind of ox. ಎಮ್ಮೆ.

Buff'er (ಬಫರ್) n. contrivance to deaden concussion ; as at the end of a train. ರೈಲು ಬಂಡಿಗಳಲ್ಲಿ ಧಕ್ಕೆ ಎಗರಿಸುವ ಸಾಧನ.

Buff'et (ಬಫೆಟ್) n. blow with the hand or dealt by waves or fortune. cup-board ಹೊಡೆತ, ಗುದ್ದು, ಕೈಪೆಟ್ಟು, ಸಂದೂಕದ ಗೂಡು, vt.i. deal blows to, struggle with· ಗುದ್ದು, ಬಡಿದಾಡು, ಹೋರಾಡು.

Buff'oon (ಬಫೂನ್) n. coarse jester. ಹಾಸ್ಯಗಾರ, ನಕಲಿಗಾರ, ವಿದೂಷಕ.

Buffoon'ery(ಬಫೂನರಿ) n. low jest. ಹಾಸ್ಯ, ನಕಲಿ, ಅಣಕ, ಕುಚೇಷ್ಟೆ.

Bug (ಬಗ್) n. small blood-sucking insect infesting beds. ತಗಣೆ, ತಿಗಣೆ, ಚವಣೆ, ಸಣ್ಣಹುಳು.

Bugaboo (ಬಗಾಬೂ) n. a bogy, object of terror. ದೆವ್ವ, ಭೂತ. ಭಯೋತ್ಪಾದಕ ವಸ್ತು.

Bug'bear (ಬಗ್‌ಬೇರ್) n· object of terror; dreaded event. ಗುಮ್ಮ, ದಿಗಿಲು, ಭೂತ, ಗೊಗ್ಗಯ್ಯ, ಗೊಡ್ಡು ಹೆದರಿಕೆ.

Bugg'y (ಬಗಿ) n. vehicle for one or two (esp· in India. U·S·) ಒಂದು ತರದ ಕುದುರೆಗಾಡಿ, ಹಗುರವಾದ ಗಾಡಿ.

Bug'house (ಬಗ್ ಹೌಸ್) a. crazy. ಮರುಳಿನ, ಭ್ರಾಂತಿಯ.

Bu'gle (ಬ್ಯೂಗಲ್) n. instrument like trumpet. ತುತೂರಿ, ಹಿತ್ತಾಳೆಯ ಕಹಳೆ, ಹಾಳೆ; ಮುರಿ, ಕೊಂಬು.


Bugle

Buglet (ಬ್ಯೂಗ್ಲೆಟ್) n. small bugle. ಸಣ್ಣ ತುತೂರಿ.

Buhl (ಬ್ಯೂಲ್) n. gold, mother of pearl,etc., inlaid into wood.etc ಮರ ಮೊದಲಾದುವುಗಳಲ್ಲಿ ಚಿನ್ನ, ಮುತ್ತಿನ ಚಿಪ್ಪು ಮುಂತಾದುವನ್ನು ಹಾಕಿ ಮಾಡಿರುವ ಕೆತ್ತನೆಯ ಕೆಲಸ.

Build (ಬಿಲ್ಡ್) vt.i erect as a house, form, construct. ಮನೆ, ಕಟ್ಟಡ ಮೊದಲಾದ್ದನ್ನು ರಚಿಸು. n. make, physique; construction. ರಚನೆ, ಕಟ್ಟಡ ರೀತಿ, ಮೈಕಟ್ಟು, ಮಾಟ, ಕಟ್ಟಡದ ಶೈಲಿ, ರೂಪ, ಶಿಲ್ಪ. b. castles in air, indulge in visionary plans. ಗಾಳಿ ಗೋಪುರವ ಕಟ್ಟು.

Build'ing (ಬಿಲ್ಡಿಂಗ್) n. house or other structure with roof & walls. ಮನೆ ಕಟ್ಟಡ, ಇಮಾರತು.

Bulb (ಬಲ್ಬ್) n. round root, electric light. lamp. ಕಂದ, ಗಾಜಿನ ಬುರುಡೆ, ಗೆಡ್ಡೆ, ವಿದ್ಯುದ್ದೀಪದ ಬುರುಡೆ.


Bulbs

Bulbiform (ಬಲ್ಬಿಫಾರಮ್) a. of the form of a bulb. ಗೆಡ್ಡೆಯಾಕೃತಿಯ, ಬುರುಡೆಯಾಕಾರದ.

Bulbous (ಬಲ್ಬಸ್) a. having a bulb. like a bulb. ಗೆಡ್ಡೆಯ, ಗೆಡ್ಡೆಯುಳ್ಳ.

Bulbul (ಬುಲ್‌ಬುಲ್) n. the Persian nightingale. ಬುಲ್‌ಬುಲ್ ಪಕ್ಷಿ, ಹಾಡುವ ಹಕ್ಕಿ.

Bulgarian (ಬಲ್ಗೇರಿಯನ್) a. pertaining to Bulgaria. ಬಲ್ಗೇರಿಯಾ ದೇಶಕ್ಕೆ ಸಂಬಂಧಿಸಿದ. n. native of Bulgaria, language of Bulgaria. ಬಲ್ಗೇರಿಯಾ ದೇಶದವ, ಅಲ್ಲಿಯ ಭಾಷೆ.

Bulge (ಬಲ್ಜ್) n. widest part of cask; swelling. ಪೀಪಾಯಿಯ ಉಬ್ಬು, ಊತ, ಉಬ್ಬು, ಬುಗುಟೆ. vi. swell out. ಹೊಟ್ಟೆ ಬರು, ಊದು.

Bulginess (ಬಲ್ಜಿನೆಸ್) n. swelling. ಊದುವಿಕೆ.

Bulimia (ಬ್ಯೂಲೈಮಿಯ) n. morbid hunger. ಹಸಿವುರೋಗ, ಕ್ಷುಧಾರೋಗ.

Bulk (ಬಲ್ಕ್) n. magnitude or size, great size, the greater part. ಅಳತೆ, ಪ್ರಮಾಣ, ದಪ್ಪ, ದೊಡ್ಡ ಆಕೃತಿ, ಸ್ಥೂಲತ್ವ, ಗಾತ್ರ.

Bulkhead (ಬಲ್ಕ್‌ಹೆಡ್) n. partition separating two parts of a ship. ಹಡಗಿನ ಎರಡು ಭಾಗಗಳನ್ನು ಬೇರ್ಪಡಿಸುವ ಅಡ್ಡತಟ್ಟಿ.

Bul'ky (ಬಲ್ಕಿ) n. unwieldy. ತೋರ, ಸ್ಥೂಲವಾದ, ಅತಿ ದೊಡ್ಡದಾದ, ಗಾತ್ರವಾದ, ದಪ್ಪವಾದ.

Bull (ಬುಲ್) n. male of ox, and other large animals, edict of the Pope, speculator for a rise in stocks. ಗೂಳಿ, ವೃಷಭ, ಗಂಡಾನೆ ಮೊದಲಾದುವು, ಪೋಪನ ಶಾಸನ, ಬೆಲೆ ಯೇರಿಸುವುದರಲ್ಲಿ ಉತ್ಸಾಹವುಳ್ಳವ.

Bulldog (ಬುಲ್‌ಡಾಗ್) n. a large breed of dogs, tenacious person. ದೊಡ್ಡ ತಲೆಯ, ಜಾತಿನಾಯಿ, ಹಟಮಾರಿ.

Bulldoze (ಬುಲ್‌ಡೋಜ್) vt. intimidate. ಹೆದರಿಸು.

Bulldozer (ಬುಲ್‌ಡೋಜರ್) n. tractor for clearing away obstruction and levelling ground. ಕಲ್ಲು ಮೊದಲಾದ ಅಡಚಣೆಗಳನ್ನು ತೆಗೆದು ಭೂಮಿಯನ್ನು ಸಮತಲ ಮಾಡುವ ಯಂತ್ರ.

Bull'et (ಬುಲೆಟ್) n. missile for rifle, pistol or machine gun. ಸೀಸದ ಗುಂಡು, ತುಪಾಕಿ, ಬಂದೂಕದ ಗುಂಡು, ಗೋಲಿ.

Bulle'tin(ಬುಲೆಟಿನ್)n. short official statement. ಲಘು ಪ್ರಕಟಣೆ, ಅಧಿಕಾರಯುತವಾದ ಪ್ರಕಟಣೆ, ಪ್ರಕಟಣೆ, ಇಸ್ತಿಹಾರು.

Bulli'on (ಬುಲ್ಯನ್) gold or silver in the lump or by weight. ಚಿನ್ನದ ಅಥವಾ ಬೆಳ್ಳಿಯ ಗಟ್ಟಿ, ಅಚ್ಚಬೆಳ್ಳಿ, ಸಟ್ಟೆ, ಪಾಳ.

Bull'ock (ಬುಲಕ್) n. castrated or gelded bull. ಬೀಜ ಒಡೆದ ಎತ್ತು.

Bull's eye (ಬುಲ್ಸ್ಐ)n. centre of a target. ಗುರಿಯ ಮಧ್ಯಭಾಗ.

Bully (ಬುಲಿ) n. ruffian hired to intimidate any one. ಬಾಯಬಡಕ, ಜಗಳಗಂಟಿ. vt. threaten in a noisy way. ಬಾಯಿಬಡಿ, ಹೆದರಿಸು, ಪೀಡಿಸು, ಭಯಪಡಿಸು.

Bul'rush (ಬುಲ್‌ರಷ್) n. tall rush esp. reedmace. ಆಪು, ಉದ್ದವಾದ ಜೊಂಡು, ಚೇಣ.

Bull'wark(ಬುಲ್‌ವರ್ಕ್)n. fortification, ship's side above deck. ಬುರುಜು. ಕೋಟೆಕೊತ್ತಲ, ರಕ್ಷಣಾ ವ್ಯವಸ್ಥೆ, ಹಡಗಿನ ಮೇಲ್ಭಾಗ.

Bum(ಬಮ್)a. (sl.) useless. ಪ್ರಯೋಜನವಿಲ್ಲದ.


Bumble bee

Bumble-bee (ಬಂಬಲ್ ಬೀ) n. kind of large bee. ಒಂದು ವಿಧದ ದೊಡ್ಡ ಜೇನು ನೊಣ.

Bummel(ಬಮೆಲ್)n. aimless stroll. ಗುರಿಯಿಲ್ಲದ ಸುತ್ತಾಡುವಿಕೆ.

Bumm'er (ಬಮ್ಮರ್) n. worthless loafer. ಕೆಲಸಕ್ಕೆ ಬಾರದವ, ತಿರುಕುಳಿ.

Bump(ಬಂಪ್) n. swelling; blow. ಬಾವು, ಹೊಡೆತ, [illegible], [illegible]. vt. i. rise abruptly. ಥಟ್ಟನೆ ನೆಗೆ ಹಾರು.

Bum'per (ಬಮ್‌ಪರ್) n. cup or glass filled to the brim, great harvest. ಸೂಸುವಟ್ಟ, ತುಂಬಿದ ಬಟ್ಟಲು, ದೊಡ್ಡ ಸುಗ್ಗಿ, ಹುಲುಸು ಬೆಳೆ.

Bump'kin(ಬಂಪ್‌ಕಿನ್) n. awkward rustic. ಹೆಡ್ಡ, ಹಳ್ಳಿ ಗಮಾರ, ಗಾಂಪ.

Bump'tious(ಬಂಪ್‌ಶಸ್)n. offensively self assertive. ಸ್ವಪ್ರತಿಷ್ಠೆಯ ಹಟಮಾರಿ, ಅಧಿಕಾರ ತೋರುವ.

Bumpy (ಬಂಪಿ) a. abounding in bumps. ಅತಿಯಾಗಿ ಹಾರುವ, ನೆಗೆಯುವ

Bun(ಬನ್)n. a kind of sweet cake hair dressed in bunshape. ಸೀರೊಟ್ಟಿ, ತುರುಬು, ಕೂದಲ ಸಿಂಬಿ.

Bunch(ಬಂಚ್)n. number of things tied or grown together, group of people. ಗೊನೆ, ಗೊಂಚಲು, ತಂಡ, ಗುಚ್ಛ, ಗುತ್ತಿ, ಗುಂಪು.

Bun'dle (ಬಂಡ್‌ಲ್) n. number of things loosely bound together. ಗಂಟು, ಮೂಟೆ, ಕಂತೆ, ಪಿಂಡಿ. vt. i. tie in a bundle. ಗಂಟುಕಟ್ಟು, ಮೂಟೆಕಟ್ಟು, ಕಂತೆಕಟ್ಟು, ಪಿಂಡಿಕಟ್ಟು.

Bung (ಬಂಗ್) n. large cork. ಪೀಪಾಯಿಯ ಬಿರಡೆ, ಗಟ್ಟ.

Bungalow (ಬಂಗಲೊ) n. one storeyed house. ಬಂಗಲೆ, ಮನೆ, ಸದನ.

Burghole (ಬಂಗ್‌ಹೋಲ್) n. a hole in a cask which holds the stopper. ಪೀಪಾಯಿಗೆ ಬಿರಡೆಯನ್ನು ಸಿಕ್ಕಿಸುವ ಬಾಯಿ.

Bung'le (ಬಂಗಲ್) vt. i. act or manage in a clumsy awkward manner. ಅಡಸಾಡಿ ಕೆಲಸ ಮಾಡು. n. gross mistake. ಅಡ್ಡಾದಿಡ್ಡಿಯ, ದೊಡ್ಡ ತಪ್ಪು.

Bunion (ಬನ್ಯನ್) n. swelling on foot. ಹೆಜ್ಜೆಯ ಮೇಲೆ ಏಳುವ ಕುರು.

Bunk (ಬಂಕ್) n. sleeping berth, big talk, bunkum (ಹಡಗಿನಲ್ಲಿ

ಸುಲಗುವ) ಕೋಣೆ, ಪೊಳ್ಳುಮಾತು, ಬಣ ಮಾತು.

nk'er (ಬಂಕರ್) n. ship's coal bin; a receptacle, fig obstacle. ಹಡಗಿನಲ್ಲಿ ಇದ್ದಲು ಇಟ್ಟುವ ತೊಟ್ಟಿ, ಬಾನಿ, ಕಷ್ಟಕ್ಕೆ ತಡೆ.

nk'um (ಬಂಕಮ್) n. insincere talk. ಪೊಳ್ಳುಮಾತು, ದಕ್ಕ್ಯ.ಬೂಟಾಟಿಕೆ.

nny(ಬನಿ)n. pet name for rabbit. ಮೊಲದ ಪ್ರೀತಿಯ ಹೆಸರು, "ಬನಿ"

nt(ಬಂಟ್) n. baggy part of sail. ಹಡಗಿನ ಪಟ್ಟದ ಜೋಲುವಂತಿರುವ ಭಾಗ.

n'ting(ಬಂಟಿಂಗ್) n. flags, cloth decorations. ನಿಶಾನೆ, ಧ್ವಜಪಟ, ತೋರಣ, ಅಲಂಕಾರದ ಬಾವುಟ.

oy (ಬಾಯ್) n. anchored float as a navigation mark. ಬಂಡೆ ಮುಂತಾದವುಗಳನ್ನು ತೋರಿಸಲು ಮಾಡಿದ ತೇಲುವ ಗುರುತು, ತೇಲುಬುಡೆ, ತೇಲುವೆ, ಈಜುಬುರುಡೆ. vt. keep a float. ತೇಲಿಸು.



Buoy

uoyancy (ಬಾಯನ್ಸಿ) n. floating power. ತೇಲುವಿಕೆ, ಪ್ಲವನಶೀಲತೆ.

uoy'ant (ಬಾಯಂಟ್) a. apt to float, light, cheerful. ತೇಲುವ, ಹಗುರವಾದ, ಉಲ್ಲಾಸದಿಂದ ಕೂಡಿದ, ಮೇಲೇಳುವ, ಲಘು.

urble (ಬರ್ಬಲ್) vt. trouble, confuse. ಕಷ್ಟಪಡಿಸು, ಗಾಬರಿಪಡಿಸು.

urden (ಬರ್ಡನ್) n. load, weight of grief, refrain of song, theme. ಭಾರ, ವಜ್ಜೆ, ಜವಾಬ್ದಾರಿ, ಹಾಡಿನ ಪಲ್ಲವಿ, ಪ್ರಯಾಸ, ಧ್ರುವಪದ. vt. load; oppress. ಭಾರ ಹೊರಿಸು, ಪೀಡಿಸು, ಕುಗ್ಗಿಸು. b. of proof, duty of proving a fact in a dispute, n. ಖರೆ ಮಾಡಿಕೊಡುವ ಭಾರ. b. of a song, refrain of song. ಪಲ್ಲವಿ.

Burden'some (ಬರ್ಡನ್‌ಸಮ್) a. heavy, oppressive. ಭಾರವಾದ, ಪ್ರಯಾಸದ, ಜಡ, ಕಷ್ಟಕರ, ತೊಂದರೆಯು.

Bureau(ಬ್ಯೂರೊ) n writing table, office, department for business. ಬರೆಯುವ ಮೇಜು, ಕಚೇರಿ, ಕೆಲಸಗಳ ಖಾತೆ.

Bureau'cracy (ಬ್ಯೂರೊಕ್ರಸಿ) n. system of government centralised in graded series of officials. ಅಧಿಕಾರಿಗಳ ಆಡಳಿತ, ಅಧಿಕಾರದ ಧೋರಣೆ, ದರ್ಪ, ನೌಕರಶಾಹಿ.

Bureaucrat (ಬ್ಯೂರೊಕ್ರ್ಯಾಟ್) n. an advocate of bureaucracy, an official. ಅಧಿಕಾರಿವರ್ಗದ ಸಮರ್ಥಕ, ಅಂತಹ ಅಧಿಕಾರಿ.

Burgeon(ಬರ್ಜನ್) vi. grow forth, sprout. ಚಿಗಿ, ಹೊರಹೊಮ್ಮು.

Burgess (ಬರ್ಗೆಸ್) n. inhabitant of a borough. ನಗರವಾಸಿ, ನಾಗರಿಕ.

Burg'lar (ಬರ್ಗ್‌ಲರ್) n. one who breaks into a house by stealth. ಕನ್ನಗಳ್ಳ, ಇರುಳುಗಳ್ಳ.

Burg'lary (ಬರ್ಗ್‌ಲರಿ) n. breaking into a house by night to steal. ಕನ್ನಗಳವು.

Burgonet(ಬರ್ಗೊನೆಟ್)n. steel cap, helmet. ಉಕ್ಕಿನಲ್ಲಿ ಮಾಡಿದ ಟೋಪಿ, ಶಿರಸ್ತ್ರಾಣ.

Burgundy (ಬರ್ಗಂಡಿ) n. wine made in the French Province of Burgundy. ಫ್ರಾನ್ಸ್ ದೇಶದ ಬರ್ಗಂಡಿ ಪ್ರಾಂತ್ಯದಲ್ಲಿ ಮಾಡಿದ ಮದ್ಯ.

Burial (ಬರಿಅಲ್) n. interment. ಸಮಾಧಿಕ್ರಿಯೆ, ಶವಸಂಸ್ಕಾರ, ಹೆಣ ಹೂಳುವುದು.

Burial (ಬರಿಯಲ್) n. depositing under earth. ಹುಗಿತ.

Burin (ಬ್ಯೂರಿನ್) n. tool for engraving on copper. ತಾಮ್ರದ ಮೇಲೆ ಕೆತ್ತುವುದಕ್ಕೆ ಉಪಯೋಗಿಸುವ ಆಯುಧ.

Burke (ಬರ್ಕ್) vt. murder, esp. by stifling, stifle enquiry. ಉಸಿರುಗಟ್ಟಿಸಿ ಕೊಲೆಮಾಡು, ರಹಸ್ಯವಾಗಿಕೊಂದು ಹೂಳು, ಸುದ್ದಿ ಅಡಗಿಸು.

Burl (ಬರ್ಲ್) n. knot at the end of cloth. ಬಟ್ಟೆಯ ತುದಿಯ ಗಂಟು.

Burlap (ಬರ್ಲಾಪ್) n. coarse canvas for purposes of warping. ಸುತ್ತುವುದಕ್ಕೆ ಬೇಕಾದ ಗೋಣಿಪಟ್ಟೆ.

Burlesque' (ಬರ್ಲೆಸ್ಕ್) a. tending to excite laughter. ಪ್ರಹಸನದ, ಕುಚೋದ್ಯದ, ಪರಿಹಾಸ, ಅಣಕಿಸುವ.

Burletta (ಬರ್ಲೆಟಾ) n. a musical farce, comic opera. ಸಂಗೀತಯುಕ್ತವಾದ ಪ್ರಹಸನ.

Burliness (ಬರ್ಲಿನೆಸ್) n. sturdiness, corpulence. ಗಟ್ಟಿಮುಟ್ಟಾಗಿರುವುದು, ಸ್ಥೂಲತೆ, ದಪ್ಪವಾಗಿರುವುದು.

Burly (ಬರ್ಲಿ) a. bulky, stout, study. ಧಾಂಡಿಗನಾದ, ದಪ್ಪವಾದ, ವಿಕಟಾಕಾರದ.

Burmese (ಬರ್ಮೀಸ್) a. relating to Burma or its language. ಬರ್ಮಾ ಅಥವಾ ಅವರ ಭಾಷೆಗೆ ಸಂಬಂಧಪಟ್ಟ.

Burn (ಬರ್ನ್) vt. i. consume or be consumed by fire, be inflamed. be on fire. ಉರಿಸು, ಸುಟ್ಟುಹಾಕು, ಸೀದುಹೋಗು, ರೇಗು, ದಹಿಸು, ಕೆರಳು, ಸುಡುತ್ತಿರು. n. hurt caused by fire. ಸುಟ್ಟಗಾಯ, ಉರಿತ, ಬರೆ. b. one's candle at both ends, be extravagant. ದುಂದುವೆಚ್ಚಮಾಡು. b. day light, waste time ಹೊತ್ತು ಕಳೆ. b. one's fingers, get into unexpected trouble. ಅನಿರೀಕ್ಷಿತವಾಗಿ ನಷ್ಟಹೊಂದು, ಕೈಸುಟ್ಟು ಅನುಭವ ಹೊಂದು. b. wi (anger &c.) be inflamed wit ಉದ್ರೇಕಗೊಳ್ಳು, ರೇಗು. b. the mi night oil, work late. ರಾತ್ರಿ ಹೆ ಕಾಲ ಕೆಲಸಮಾಡು. burning questio question that excites passiona discussion. ತೀಕ್ಷ್ಣ ಚರ್ಚೆಯ ವಿಷ burning same, flagrant injustic ಘೋರ ಅನ್ಯಾಯ.

Burn'er (ಬರ್ನರ್) n. part of lamp, &c. that shapes the flam (ಕಂದೀಲು, ಲಾಟಿನು) ಮೊದಲಾದುವುಗ ಬರ್ನರು, ದೀಪದ ಕುಡಿ ಕಾಣುವ ಭಾಗ.

Burn'ish (ಬರ್ನಿಶ್) vt. i. polis brighten. ಒಪ್ಪಹಾಕು, ಬೆಳಗು, ಮೆರು ಕೊಡು, ಹೊಳಪುಕೊಡು, ಒಪ್ಪವಿಡು. polish. ಮೆರುಗು, ಒಪ್ಪ, ಹೊಳಪು.

Burnt (ಬರ್ನ್ಟ್) (p. p. of bur a. treated with fire. ಸುಟ್ಟ.

Burr (ಬರ್) n. whet stone. ಸಾಣೆ ಹಿಡಿಯುವ ಕಲ್ಲು.

Burrow (ಬರೊ) n. hole excavate by animals as dwelling. ಬಿಲ ಹೋರು, ಡೊಗರು, ಬೊಕ್ಕೆ. vi, lodg in the earth, work a way unde ಬಿಲದಲ್ಲಿ ವಾಸಿಸು, ಹೋರು ತೋಡು.

Burs'ar (ಬರ್ಸರ್) n. treasurer o college, charity student. ವಿದ್ಯಾಲಯದ ಕೋಶಾಧ್ಯಕ್ಷ, ಧರ್ಮವೇತ ಪಡೆಯುವ ವಿದ್ಯಾರ್ಥಿ.

Burst (ಬರ್ಸ್ಟ್) vi. break int pieces, explode, rush forth. ಛೇದಿಸು ಸಿಡಿ, ಬಿರಿ, ಹೊರಗೆ ಬರು, ರಭಸದಿಂ ನುಗ್ಗು. n. sudden outburst, spas modic effort. ಬಿರಿತ, ಒಡೆತ, ಆಕಸ್ಮಿ ವಾದ ಆರಂಭ. b. into tears. ಕಣ್ಣೀ ಸುರಿಸಲಾರಂಭಿಸು.

Bu'ry (ಬರಿ) vt. inter. consign t oblivion. ಹೂತಿಡು, ಹೆಣಹೂಳು, ಹುಗಿ, ಮಣ್ಣುಮಾಡು, ನಿಕ್ಷೇಪಿಸು. b. the hatchet, abandon mutual animocity. ಹಗೆತನ ಬಿಡು, ದ್ವೇಷ ಬಿಡು.

us (ಬಸ್) n. omnibus, ದೊಡ್ಡ ಮೋಟಾರುಬಂಡಿ, ಬಸ್ಸು.

ush (ಬುಶ್) n. shrub, forest, the wild. ಕಾಡು, ಪೊದೆ, ಮೆಳೆ, ಪೊದರು, ಗುಲ್ಮ, ಪಾಳು ಭೂಮಿ, ಕಾನನ.

ush’el (ಬುಶೆಲ್) n. a measure of 8 gallons for measuring grain, fruit, &c. ಧಾನ್ಯದ ಅಳತೆಯ ಪ್ರಮಾಣ ಹೆಚ್ಚು ಕಡಿಮೆ, ೮ ಗ್ಯಾಲನ್ನುಗಳು.

Bushido (ಬೂ ಷಿ ಡೊ) n. Japanese code of chivalry. ಜಪಾನಿನ ಪರಸ್ಪರ ಆಚಾರ ವ್ಯವಹಾರಕ್ಕೆ ಸಂಬಂಧಿಸಿದ ವ್ಯವಸ್ಥೆ.

Bushy (ಬುಷಿ) a. thick and spreading. ಪೊದರುಪೊದರಾದ, ದಟ್ಟವಾದ.

Busi’ness (ಬಿಜಿನೆಸ್) n. employment, engagements, trade, profession, duty. ಕೆಲಸ, ಕಾರ್ಯ, ಉದ್ಯೋಗ, ವ್ಯವಹಾರ, ಕಸಬು, ಕರ್ತವ್ಯ.

Businesslike (ಬಿಜಿನೆಸ್ ಲೈಕ್) a. done punctually and accurately. ವ್ಯವಸ್ಥೆಯಿಂದ ಮಾಡಿದಂತಹ.

Bus’kin (ಬಸ್ಕಿನ್) n. high boot for Greek tragedians, the tragic drama. ಗ್ರೀಕರ ಮೊಣಕಾಲಿನವರೆಗಿನ ದೊಡ್ಡ ಬೂಟ್ಸು, ವಿಷಾದಾಂತ ನಾಟಕ.

Buss (ಬುಸ್) vt. kiss rudely or playfully. ಒರಟಾಗಿ ಅಥವಾ ಹುಡುಗಾಟಕ್ಕೆ ಮುತ್ತುಕೊಡು.

Bust (ಬಸ್ಟ್) n. sculptured head, shoulders and chest; contour of breast and neck. ಅರ್ಧಾಕೃತಿ ಪ್ರತಿಮೆ, ಎದೆ ವಿಗ್ರಹ.



Bust

Bus’tard (ಬಸ್ಟರ್ಡ್) n. large running bird. ಕಾಡುಕೋಳಿ.

Bu’stle (ಬಸ್ಲ್) vt. i. busy one’s self noisily. ಗಡಿಬಿಡಿಮಾಡು, ಅವಸರಪಡಿಸು. n. hurried activity, tumult. ಗಲಿಬಿಲಿ, ಗದ್ದಲ, ಹುಯಿಲು, ಗಲಾಟೆ, ಗೊಂದಲ, ಸಂಭ್ರಮ.

Bus’y (ಬಿಜಿ) a. active, diligent, fussy. ಅವಿಶ್ರಾಂತ, ಕಾರ್ಯನಿರತ, ಚಟುವಟಿಕೆಯುಳ್ಳ, ಬರೀಗಲಾಟೆಯ.

Busyness (ಬಿ ಜಿ ನೆ ಸ್) n. state of being busy. ಗಲಾಟೆಯಲ್ಲಿರುವುದು.

Busybody (ಬಿ ಜಿ ಬಾ ಡಿ) n. meddlesome person, mischief maker. ತಂಟೆಕೋರ, ಬೇರೆಯವರ ಕೆಲಸದಲ್ಲಿ ಕೈ ಹಾಕುವವ.

But (ಬಟ್) adv. only [prep. & conj.] without, except, besides. ಆದರೆ, ವಿನಾ, ಅಲ್ಲದೆ, ಬಿಟ್ಟು, ಮಾತ್ರ, ಪರಂತು.

Butch’er (ಬುಚರ್) n. slaughter of animals for food, one who delights in bloody deeds. ಕೊಲೆಗಡುಕ, ವಧೆಮಾಡುವವ, ಕಸಾಯಿ, ಕೊಲೆಪಾತಕ. vt. slaughter mercilessly. ಕೊಲ್ಲು, ವಧಿಸು.

Butch’ery (ಬುಚೆರಿ) n. cruel slaughter, slaughter-house. ಕಟುಕತನ, ವಧಾಗಾರ, ಕತ್ತರಿಸುವಿಕೆ, ಸಂಹಾರ, ಕಸಾಯಿಖಾನೆ.

But’ler (ಬ ಟ್ ಲ ರ್) n. servant having care of liquors, plate, &c. ಉಗ್ರಾಣದ ಪಾರುಪತ್ಯವುಳ್ಳ ಸೇವಕ, ಬಟ್ಲರು, ಹಿರಿಯಾಳು.

Butt (ಬಟ್) n. large cask, larger end of thing; target, object of ridicule. ಮರದ ಬುಡ, ಪೀಪಾಯಿ, ತುಪಾಕಿ ಕುಂದ, ದೂಲದ ಕೊನೆ, ಲಕ್ಷ್ಯ, ಗುರಿದಿಬ್ಬ, ಹಾಸ್ಯಕ್ಕೆ ಗುರಿಯಾದ ವ್ಯಕ್ತಿ. vt. i. strike with the head. ಹಾಯಿ, ಇರಿ, ಡಿಕ್ಕಿ ಹೊಡೆ, ತಿವಿ, ಅಡ್ಡಬರು, make the b. of a person, make him a mark for ridicule. ಹಾಸ್ಯಕ್ಕೆ ಗುರಿಮಾಡು.

Butt'er (ಬಟರ್) n. fatty substance obtained by churning cream. flattery. ಬೆಣ್ಣೆ, ನವನೀತ, ಅತಿ ಹೊಗಳಿಕೆ vt. smear butter. flatter. ಬೆಣ್ಣೆ ಹಾಕು, ಮುಖಸ್ತುತಿಮಾಡು.

Butter'fly (ಬಟರ್ ಫ್ಲೈ) n. insect with large wings of brilliant colours, showy person. ಪತಂಗದ ಹುಳು, ಚಿಟ್ಟೆಹುಳು, ಸೊಗಸುಗಾರ.

Butterine (ಬಟರೀನ್) n. artificial butter. ಕೃತಕ ಬೆಣ್ಣೆ.

Butteris (ಬಟೆರಿಸ್) n. knife used for paring horse's hoofs. ಲಾಳ ಕಟ್ಟುವಾಗ ಕುದುರೆಯ ಗೊರಸನ್ನು ಉಜ್ಜಲು ಉಪಯೋಗಿಸುವ ಆಯುಧ.

Butter-milk (ಬಟರ್ ಮಿಲ್ಕ್) n. the milk that remains after separating butter from cream by churning. ಮಜ್ಜಿಗೆ.

Butt'ery (ಬಟರಿ) n. room for provisions. ಉಗ್ರಾಣ, ಕಣಜ, ಕೋಠಿ.

Butt'ock (ಬಟಕ್) n. protuberant part of the body behind, hind part of beasts. ಕುಂಡಿ, ಅಂಡು, ಪಿರ್ರೆ, ಪುಕಳಿ, ಪೃಷ್ಠ, ನಿತಂಬ, ಮುಕುಳಿ.

Button (ಬಟನ್) n. knob of metal, bone, &c., to fasten; dress bud; knob of electric bell. ಗುಂಡಿ, ಬಿರಡೆ, ಮೊಗ್ಗು. ವಿದ್ಯುತ್ತಿನ ಗಂಟೆಯ ಗುಂಡಿ, ಅಲಂಕಾರದ ಗುಂಡು, ಗುಬುಟು.


Buttons

Butt'ress (ಬಟ್ರೆಸ್) v. support built against a wall, &c. prob. ಮುಟ್ಟು ಗೋಡೆ, ಒತ್ತುಗೋಡೆ, ಆನಿಕೆ, ಅವಲಂಬನ, ಆಧಾರ. vt i. support. strengthen. ಆಧಾರಕೊಡು, ಊರೆ ಕೊಡು.

Bux'om (ಬಕ್ಸಂ) a. plump, comely, gay. lively. ಮುದ್ದಾದ, ಉಲ್ಲಾಸದಿಂದ ಕೂಡಿದ, ಅಂದವಾದ, ಚುರುಕು, ಸುರೂಪವುಳ್ಳ.

Buxomness (ಬಕ್ಸಮ್ ನೆಸ್) plumpness, comelines . ಮು ಗಿರುಪಿಕೆ, ಉಲ್ಲಾಸಕರತೆ, ಪ್ರಫುಲ್ಲತೆ.

Buy (ಬೈ) vt purchase for mon bribe. ಕೊಂಡುಕೊ, ಕ್ರಯಕ್ಕೆ ಪ ಲಂಚಕೊಟ್ಟು ವಶಪಡಿಸಿಕೊ.

Buyable (ಬೈಯಬಲ್) a. fit to purchased. ಕೊಳ್ಳಲು ಯೋಗ್ಯವಾ

Buy'er (ಬಯರ್) n. purchas ಕೊಂಡುಕೊಳ್ಳುವವ.

Buzz (ಬಝ್) vt. make a lo humming noise like bees, wh per. ಝೇಂಕರಿಸು, ಝೇಂಕಾರಮಾ ಗಲಭೆಮಾಡು, ಗುಸುಮಾತಿನಲ್ಲಿ ಹೇ n. humming, a whispered r port. ಝೇಂಕಾರ, ಕಲಕಲ, ಗುಸುಮಾ ಹಳೀ ಸುದ್ದಿ. b.off. ಥಟ್ಟನೆ ಹೋಗಿಬಿಡ

Buzzard (ಬುಜಾರ್ಡ್) n. genus large hawks. ಡೇಗೆಯ ಜಾತಿ ದೊಡ್ಡ ಹಕ್ಕಿ.

Concom'itant (ಕನ್‌ಕಾಮಿಟಂಟ್) a. accompanying; attendant. ಸಹಗಾಮಿ, ಸಹವರ್ತಿ, ಒಡನಿರುವ, ಸಮೇತ, ಸಂಯುಕ್ತವಾದ.

Conc'ord (ಕಾನ್‌ಕಾರ್ಡ್) n. harmonious relations, (gram) agreement in gender, person, &c. between words. ಒಗ್ಗಿಕೆ, ಒಪ್ಪಂದ, ಮೈತ್ರಿ, ಹೊಂದಿಕೆ, ಅಧಿಕರಣ, ಪುರುಷ, ಲಿಂಗ, ವಚನಾದಿಗಳ ಹೊಂದಿಕೆ.

Concordance (ಕಾನ್‌ಕಾರ್ಡೆನ್ಸ್) n. agreement. ಐಕತೆ, ಸಾದೃಶ್ಯ.

Concord'ant (ಕಾಂಕಾರ್ಡಂಟ್) a. harmonious, united. ಅನುಕೂಲದ, ಹೊಂದಿಕೆಯುಳ್ಳ, ಅನುಗುಣದ.

Concorporate (ಕಾನ್‌ಕಾರ್ಪೊರೇಟ್) a. united in one body. ಒಂದೇ ಸಂಸ್ಥೆಯಾಗಿ ಒಟ್ಟುಗೂಡಿದ.

Conc'ourse (ಕಾನ್‌ಕೋರ್ಸ್) n. assembly of persons or things. ಗುಂಪು, ಸಂದಣಿ, ಮೇಳ, ಸಂಗಮ, ಸಮೂಹ.

Concreate (ಕಾನ್‌ಕ್ರಿಯೇಟ್) vt. create at the same time. ಒಂದೇ ಸಮಯದಲ್ಲಿ ಸೃಷ್ಟಿಸು.

Concrescence (ಕನ್‌ಕ್ರೆಸೆನ್ಸ್) n. growing together. ಒಟ್ಟಿಗೆ ಬೆಳೆಯುವುದು.

Concr'ete (ಕಾಂಕ್ರೀಟ್) a. having objective reality, not abstract. ವಾಸ್ತವಿಕವಾದ ವಸ್ತು, ಮೂರ್ತವಸ್ತು, ಸಾಕಾರವಾದ. n. concrete thing or word, composition of gravel, cement, &c. ಪ್ರತ್ಯಕ್ಷ ಸ್ಥಿರವಸ್ತು ಅಥವಾ ಶಬ್ದ, ಜಲ್ಲಿಕಲ್ಲು, ಸಿಮೆಂಟುಗಳ ಮಿಶ್ರಣ.

Concretion (ಕಾನ್‌ಕ್ರೀಷನ್) n. coalescence. ಒಟ್ಟುಗೂಡುವಿಕೆ.

Concu'bine (ಕಾಂಕ್ಯುಬೈನ್) n. a woman who cohabits with a man without marriage. ಉಪಪತ್ನಿ, ಸೂಳೆ, ಮಿಂಡಿ.

Conculcate (ಕನ್‌ಕಲ್ಕೇಟ್) vt. trample under feet. ಕಾಲಿನಿಂದ ತುಳಿಯುವುದು.

Concur' (ಕಂಕರ್) vt. coincide, agree. ಹೊಂದಿಕೆಯಾಗು, ಸಮ್ಮತಿಸು, ಒಪ್ಪು, ಸಹಕರಿಸು, ಐಕಾಭಿಪ್ರಾಯಪಡು.

Concu'rrence (ಕಂಕರನ್ಸ್) n. agreement. ಐಕಾಭಿಪ್ರಾಯ, ಸಹಕಾರ, ಮತೈಕ್ಯ.

Concu'rrent (ಕನ್‌ಕರೆಂಟ್) a. united, accompanying. ಒಮ್ಮನಸ್ಸಿನ, ಒಟ್ಟಿಗೆ ಹೋಗುವ, ಐಕಾಭಿಪ್ರಾಯವುಳ್ಳ, ಸಹಕರಿಸುವ, ಸಂಗಡ ಇರುವ.

Concuss (ಕನ್‌ಕಸ್) vt. shake violently. ರಭಸದಿಂದ ಅಲ್ಲಾಡಿಸುವುದು.

Concu'ssion (ಕನ್‌ಕಷನ್) n. violent shock, head injury due to heavy blow, &c. ಧಕ್ಕೆ, ವಿಕಂಪನೆ, ಸಂಘಟ್ಟ; ಮೆದುಳಿನ ಆಘಾತ.

Condemn' (ಕಂಡೆಮ್) vt. blame, censure, give judicial decision against, pronounce unfit for use. ತಪ್ಪು ಹೊರಿಸು, ಶಿಕ್ಷೆಗೆ ಗುರಿಮಾಡು, ಖಂಡಿಸು, ತೆಗಳು, ನಿಂದಿಸು, ದೋಷಾರೋಪಣೆಮಾಡು, ನಿಷೇಧಿಸು.

Condemnable (ಕಂಡೆಮ್ನಬಲ್) a. blameworthy, censurable. ದೂಷಣಯೋಗ್ಯ, ದಂಡಯೋಗ್ಯ.

Condemnation (ಕಂಡೆಮ್ನೇಷನ್) n. state of being cnodemned, judicial conviction. ದಂಡನೆ, ಸಜಾ, ಶಿಕ್ಷೆ.

Condensation (ಕಂಡೆನ್ಸೇಷನ್) n. concentration, compression. ಸಂಕ್ಷೇಪ, ಘನೀಕರಣ.

Condense' (ಕಂಡೆನ್ಸ್) vt. i. make brief, compress, consolidate, grow dense. ಸಂಕ್ಷೇಪಿಸು, ಘನೀಕರಿಸು, ಹೆಪ್ಪುಗಟ್ಟು, ಗಟ್ಟಿಯಾಗು, ಸಾಂದ್ರೀಕರಿಸು.

Condescend (ಕಾಂಡಿಸೆಂಡ್) vt. deign to do, stoop. ತಗ್ಗಿನಡೆ, ಅನುಗ್ರಹತೋರು, ನಮ್ರತೆ ತಾಳು, ವಿನಯದಿಂದ ಆದರಿಸು.

Condescen'sion (ಕಾಂಡಿಸೆನ್‌ಶನ್) n. graciousness, affability to inferior. ಕರುಣೆ, ಕೃಪೆ, ನಿಗರ್ವತ್ವ, ನಮ್ರತೆ.

Condign' (ಕಂಡೈನ್) a. adequate, well merited. ಯೋಗ್ಯವಾದ, ಸರಿಯಾದ, ಉಚಿತ, ತಪ್ಪಿಗೆ ತಕ್ಕ (ಶಿಕ್ಷೆ).

Con'diment (ಕಾಂಡಿಮೆಂಟ್) n. relish or seasoning for use with food. ಮಸಾಲೆ, ಸಂಬಾರ ಸಾಮುಗ್ರಿ, ಉಪ್ಪಿನಕಾಯಿ, ಮೇಲೋಗರ ಮುಂತಾದ್ದು.

Condite (ಕನ್‌ಡೈಟ್) vt. to preserve. ರಕ್ಷಿಸಿ ಇಡುವುದು.

Condi'tion (ಕಂಡಿಶನ್) n. quality, state, attribute, [plu.] circumstance, stipulation, social rank. ಗುಣ, ಅವಸ್ಥೆ, ಧರ್ಮ, ವಿದ್ಯಮಾನ, (ಬ. ವ.) ಪರಿಸ್ಥಿತಿ, ನಿಬಂಧನೆ, ನಿಯಮ, ಕರಾರು, ಅಂತಸ್ತು, ಸಾಮಾಜಿಕ ದರ್ಜೆ.

Condi'tional (ಕಂಡೀಶನಲ್) a. depending on conditions. ನಿಯಮಕ್ಕೊಳಪಟ್ಟ, ಅಧೀನ ನಿಬಂಧನೆಗೆ ಒಳಪಟ್ಟ, ಸಹೇತುಕವಾದ, ಕರಾರಿನ.

Conditionally (ಕಂಡಿಷನಲಿ) adv. with certain limitations. ಹಲವು ಶರತ್ತುಗಳೊಡಗೂಡಿ.

Conditioned (ಕಂಡಿಷನ್ಡ್) a. having specified disposition, circumstanced. ನಿಶ್ಚಿತ ಸ್ಥಿತಿಯ, ಒಂದು ರೀತಿಯಲ್ಲಿ ಸಂಘಟಿತವಾದ.

Condolatory (ಕಾಂಡೊಲೆಟರಿ) a. expressing condolation. ಸಂತಾಪಸೂಚಕ.

Condole' (ಕಂಡೋಲ್) vi. sympathise in sorrow. ಸಂತಾಪಸೂಚಿಸು, ಪರರ ದುಃಖದಲ್ಲಿ ಸಹಾನುಭೂತಿ ತೋರು.

Condol'ence (ಕಂಡೋಲೆನ್ಸ್) n. expression of grief for another's sorrow. ಅನುತಾಪ, ಸಂತಾಪ.

Condonation (ಕಾಂಡೊನೇಷನ್) n. forgiveness, pardon. ಕ್ಷಮಿಸುವುದು.

Condone' (ಕಂಡೋನ್) vt. forgive. ಕ್ಷಮಿಸು, ಮನ್ನಿಸು.

Conduce' (ಕಂಡ್ಯೂಸ್) vt. tend to produce or effect. ನೆರವಾಗು, ಅನುಕೂಲವಾಗು, ಸಹಾಯವಾಗು, ಉಪಯೋಗವಾಗು.

Condu'cive (ಕಂಡ್ಯೂಸಿವ್) a. tending to, advantageous. ಪರಿಣಾಮಕ, ಹಿತಕರ, ಅನುಕೂಲಕರ, ಸಹಾಯಕ.

Conduciveness (ಕಂಡ್ಯೂಸಿವ್‌ನೆಸ್) n. quality of conducing. ನೆರವಾಗುವಿಕೆ, ಪ್ರವೃತ್ತಿ, ಪ್ರಯೋಜನ.

Cond'uct (ಕಾಂಡಕ್ಟ್) n. behaviour, management, escort. ನಡತೆ, ಮಾರ್ಗದರ್ಶನ, ವರ್ತನೆ, ನಡೆ, ನಿರ್ವಹಣ, ಚರಿತೆ, ವ್ಯವಸ್ಥೆ.

Conduct' (ಕಂಡಕ್ಟ್) vt. load, escort, behave oneself, manage control, transmit. ಮಾರ್ಗತೋರಿಸು, ವರ್ತಿಸು, ಜೊತೆಯಲ್ಲಿ ಹೋಗು, ಸಾಗಿಸು, ನಿರ್ವಹಿಸು, ನಿಯಂತ್ರಿಸು, ಶಕ್ತಿಪ್ರವಹಿಸುವಂತೆ ಮಾಡು.

Conduc'tor (ಕಂಡಕ್ಟರ್) n. manager, one in charge of a bus, &c.

that which has the property of transmitting heat and electricity. ಮಾರ್ಗದರ್ಶಿ, ನಿರ್ವಾಹಕ, ಬಸ್ಸು ನಿರ್ವಾಹಕ, ಟ್ರಾಮುಗಳ ಪ್ರಯಾಣಿಕರಿಗೆ ಟಿಕೀಟುಕೊಡುವವನು, ವಿದ್ಯುತ್ ಮತ್ತು ಉಷ್ಣವಾಹಕ.

Con'duit (ಕಂಡಿಟ್) n. channel or pipe; acqueduct. ಕೊಳಾಯಿ, ನಾಳ, ಚರಂಡಿ, ಕೊಳವೆ.

Cone (ಕೋನ್) n. tapering figure with a circular base. ಬುಗುರಿಯಾಕಾರದ ವಸ್ತು, ಶಂಕು.


Cone

Confab'ulate (ಕನ್ಫ್ಯಾಬ್ಯುಲೇಟ್) vi. chat, talk together. ಸಂಭಾಷಿಸು, ಹರಟೆಹೊಡೆ, ಸಲ್ಲಾಪನಡಸು.

Confarreation (ಕಾನ್ಫಾರಿಯೇಷನ್) n. Roman system of marriage. ರೋಮನ್ ಜನರಲ್ಲಿ ಬಳಕೆಯಲ್ಲಿದ್ದ ವಿವಾಹ ಪದ್ಧತಿ.

Confect (ಕಾನ್ಫೆಕ್ಟ್) n. fruit prepared mixed with sugar, sweet meat. ಸಕ್ಕರೆ ಮಿಶ್ರವಾದ ಹಣ್ಣಿನಿಂದ ಮಾಡಿದ ಮಿಠಾಯಿಗಳು.

Confec'tion (ಕನ್ಫೆಕ್ಷನ್) n. sweet-stuff. ಮಿಠಾಯಿ.

Confec'tioner (ಕನ್ಫೆಕ್ಷನರ್) n one who makes confections ಮಿಠಾಯಿಗಾರ, ಹಲವಾಯಿ, ಮಿಠಾಯಿ ತಯಾರಿಸುವವನು.

Confed'eracy(ಕಾನ್ಫೆಡರಸಿ)n. league, conspiracy, league of confederate states. ಸಂಘ, ಕೂಟ, ಮೈತ್ರಿ, ಒಂದು ಕಟ್ಟು, ಒಳಸಂಚು, [illegible], ಸಂಸ್ಥೆಗಳ ಕೂಟ.

Confed'erate (ಕಾನ್ಫೆಡರೇಟ್) a. leagued together, allied. ಒಪ್ಪಂದದಿಂದ ಒಗ್ಗಟ್ಟುಮಾಡಿದ, ಸಂಯುಕ್ತ, ಜೊತೆಗೂಡಿದ. vt. i. make league with, make a confederation ಒಗ್ಗಟ್ಟುಮಾಡು, ಮೈತ್ರಿ ಬೆಳಸು, ಜೊತೆಗೂಡು, ಒಂದಾಗಿ ಸೇರು.

Confed'era'tion (ಕಾನ್ಫೆಡರೇಷನ್) n. league, alliance, esp. of princes and states. ರಾಜ್ಯಸಂಘ; ರಾಷ್ಟ್ರಗಳ ಕೂಟ.

Confer (ಕನ್ಫರ್) vt. i. give, grant· converse with, meet for discussion, exchange of views. ಕೊಡು, ಅನುಗ್ರಹಿಸು, ಕೂಡಿಮಾತಾಡು, ಚರ್ಚೆಗಾಗಿ ಒಂದು ಕಡೆ ಸೇರು.

Con'ference (ಕಾನ್ಫರೆನ್ಸ್) n. meeting for discussion, exchange of view. ಸಮ್ಮೇಳನ, ಸಮಿತಿ, ಸಮಾಲೋಚನೆ, ವಿವಾದ.

Conferencial(ಕಾನ್ಫರೆನ್ಸಲ್)a. relating to a conference. ಸಮ್ಮೇಳನಕ್ಕೆ ಸಂಬಂಧಪಟ್ಟ.

Confess' (ಕನ್ಫೆಸ್) vt. i. acknowledge own, admit. ಒಪ್ಪಿಕೊ, ಪಾಪನಿವೇದನೆಮಾಡು, ಹೌದೆನ್ನು, ತಪ್ಪೊಪ್ಪು, ಧರ್ಮೋಪಾಧ್ಯಾಯನೆದುರಿಗೆ ತನ್ನ ಪಾಪಗಳನ್ನು ನಿವೇದಿಸು.

Confess'edly (ಕನ್ಫೆಸೆಡ್ಲಿ) adv. avowedly. ಸಂಶಯವಿಲ್ಲದೆ, ಖಂಡಿತವಾಗಿ, ನಿರ್ವಿವಾದವಾಗಿ.

Confe'ssion (ಕನ್ಫೆಷನ್) n. acknowledgment of a fault or a crime, avowal. ತಪ್ಪೊಪ್ಪಿಕೆ, ಪಾಪನಿವೇದನೆ, ಅರಿಕೆ, ವಿಜ್ಞಾಪನೆ.

Confetto (ಕೊನ್ಫೆಟೋ) n. coloured paper bits thrown at carnivals, weddings, etc. ಮದುವೆ ಮುಂತಾದ ಸಂತೋಷ ಸಮಾರಂಭಗಳಲ್ಲಿ ಎಸೆಯುವ ಬಣ್ಣದ ಕಾಗದದ ಚೂರುಗಳು.

Confidant' (ಕಾನ್ಫಿಡಾಂಟ್) n. a bosom friend. ಜೀವದ ಗೆಳೆಯ, ಆಪ್ತಮಿತ್ರ, ಆಪ್ತಸ್ನೇಹಿತ.

Confide(ಕನ್ಫೈಡ್)vi.t. rely, trustfully, impart. ನಂಬಿ ಒಪ್ಪಿಸು, ನಂಬಿಕೆಯಿಡು, ವಿಶ್ವಾಸವಿಡು.

Con'fidence (ಕಾನ್ಫಿಡೆನ್ಸ್) n. faith, firm, trust, assurance, self-reliance. ಪೂರ್ಣನಂಬಿಕೆ, ನೆಚ್ಚಿಗೆ, ದೃಢವಿಶ್ವಾಸ, ಆತ್ಮವಿಶ್ವಾಸ, ದಿಟ್ಟತನ, ಧೈರ್ಯ.

Con'fident (ಕಾನ್ಫಿಡೆಂಟ್)a. trusting firmly, positive. ನೆಚ್ಚಿಕೆಯು, ಭರವಸೆಯು, ಧೈರ್ಯವುಳ್ಳ, ವಿಶ್ವಾಸವುಳ್ಳ. ಸಂದೇಹವುಳ್ಳದ.

Confiden'tial (ಕಾನ್ಫಿಡೆನ್ಶಲ್) a· private, enjoying cofidence. ಗುಟ್ಟಾದ, ಗೋಪ್ಯವಾದ, ವಿಶ್ವಾಸದ, ಭರವಸೆಯ, ಮರ್ಮದ.

Configuration (ಕನ್ಫಿಗ್ಯುರೇಶನ್) n. external form, aspect of planets ಸಾಪೇಕ್ಷಸ್ವರೂಪ, ರೂಪ, ಹೊರಗಿನ ಆಕಾರ, ಆಕೃತಿ, ಗ್ರಹಗತಿ.

Configure(ಕನ್ಫಿಗರ್)vt.give shape to. ಆಕೃತಿಕೊಡು, ರೂಪಿಸು.

Confine (ಕನ್ಫೈನ್) vt. limit, imprison, (pass.) be brought to bed of a child, ಪ್ರತಿಬಂಧಮಾಡು, ಹದ್ದಿನಲ್ಲಿಡು, ಬಂಧಿಸು, (ಕರ್ಮಣಿ) ಮಿತಿಕಲ್ಪಿಸು, ಪ್ರಸವಿಸು, ಹಡೆ, ಹೆರು.

Confine (ಕನ್ಫೈನ್) n. a boundary or limit [plu]the border or edge of. ಎಲ್ಲೆ, ಗಡಿ, ಹದ್ದು, ಮರ್ಯಾದೆ, ಅಂಚು, ಮಿತಿ.

Confine'ment (ಕನ್ಫೈನ್ಮೆಂಟ್) n. restraint, imprisonment, childbirth. ನಿರ್ಬಂಧ, ಹತೋಟಿ, ಕೈದು, ಸೆರೆ, ಪ್ರಸೂತಿ, ಹೆರಿಗೆ, ಪ್ರಸವ.

Confirm'(ಕನ್ಫರ್ಮ್) vt. strengthen, fix or establish, ratifv, assure. ಸ್ಥಿರಗೊಳಿಸು, ದೃಢಪಡಿಸು, ಪುಷ್ಟೀಕರಿಸು, ಊರ್ಜಿತಪಡಿಸು, ನಿಶ್ಚಯಿಸು, ಬಲಪಡಿಸು.

Confirm'ation (ಕನ್ಫರ್ಮೇಶನ್) n. convincing proof, admission to full Christian privileges. ಸ್ಥಿರೀಕರಣ, ದೃಢೀಕರಣ, ದೃಢೀಕರಣವೆಂಬ ಕ್ರೈಸ್ತ ಸಂಸ್ಕಾರ.

Confiscable (ಕನ್ಫಿಸ್ಕಬ್ಲ್) a. capable of being seized. ವಶಪಡಿಸಿಕೊಳ್ಳಲು ತಕ್ಕವಾದ.

Con'fiscate(ಕಾನ್ಫಿಸ್ಕೇಟ್)vt. seize as by authority. ಮುಟ್ಟುಗೋಲು ಹಾಕು, ವಶಪಡಿಸಿಕೊ, ಸರಕಾರಕ್ಕೆ ಸೇರಿಸಿಕೊ.

Confisca'tion (ಕಾನ್ಫಿಸ್ಕೇಶನ್)n.the act of confiscating. ಮುಟ್ಟುಗೋಲು, ಜಪ್ತಿ, ಸರಕಾರಕ್ಕೆ ಸೇರಿಸಿಕೊಳ್ಳುವುದು.

Conflagrate (ಕಾನ್ಫ್ಲಗ್ರೇಟ್) vt. & i. burn up. ಸುಡು, ಸುಟ್ಟುಹಾಕು.

Conflagra'tion (ಕಾನ್ಫ್ಲಗ್ರೇಶನ್)n. great fire. ದೊಡ್ಡಕಿಚ್ಚು, ದಳ್ಳುರಿ, ಅಗ್ನಿಪ್ರಳಯ.

Conflate (ಕಾನ್ಫ್ಲೇಟ್) vt. blow together, combine two separate readings of a text into one. ಒಟ್ಟ ಬೆಸಗೆಮಾಡಿ ಸೇರಿಸು, ಗ್ರಂಥದ ಎರಡು ಪಾಠಾಂತರಗಳನ್ನು ಒಟ್ಟುಗೂಡಿಸಿ ಗ್ರಂಥ ಸಂಪಾದನೆಮಾಡು.

Conflation (ಕನ್ಫ್ಲೇಷನ್) n.fusing together. ಬೆಸಗೆ.

Conflict (ಕಾನ್ಫ್ಲಿಕ್ಟ್) n. struggle ; fight. ತಿಕ್ಕಾಟ, ಬಡಿದಾಟ, ಘರ್ಷಣ,

Confluence, con'flux (ಕಾನ್ಫ್ಲುಎನ್ಸ್, ಕಾನ್ಫ್ಲಕ್ಸ್) n. meeting of confluents, concourse. ಸಂಧಿ, ಸಮೂಹ, ಸಂಗಮ, ಕೂಟ, ಮಹಾಸಮುದಾಯ.

Con'fluent (ಕಾನ್ಫ್ಲುಎಂಟ್) a. flowing together, uniting. ಸಂಗಮವಾಗಿ ಹರಿಯುವ, ಸೇರುವ.

Conflux (ಕಾನ್ಫ್ಲಕ್ಸ್)n.confluence, ಸಂಗಮ.

Conform' (ಕನ್‌ಫಾರ್ಮ್) vt. i. make like to, comply with, adapt. ಮಾದರಿಯಂತೆ ರಚಿಸು, ಅನುಸರಿಸು, ಅನುವರ್ತಿಸು, ಒಗ್ಗು, ಹೊಂದಿಕೊಳ್ಳು.

Conform'able (ಕನ್‌ಫಾರ್ಮೆಬ್‌ಲ್) a. suitable, corresponding to. ಅನುರೂಪವಾದ, ಅನುಗುಣವಾದ, ಒಪ್ಪುವ, ಹೊಂದಿಕೊಳ್ಳುವ.

Conforma'tion (ಕನ್‌ಫಾರ್ಮೇಶನ್) n. thing's structure. ರಚನೆ, ರೂಪ; ಆಕೃತಿ, ಅನುರೂಪ, ಹೊಂದಿಕೆ, ಅನುಸರಣೆ

Conformist (ಕನ್‌ಫಾರ್ಮಿಸ್ಟ್) n. one who conforms to the usages of the Church of England. ಚರ್ಚ್ ಆಫ್ ಇಂಗ್ಲೆಂಡ್ ಪದ್ಧತಿಗಳನ್ನನುಸರಿಸುವವನು.

Conform'ity (ಕನ್‌ಫಾರ್ಮಿಟಿ) n. consistency, compliance. ಅನುರೂಪ, ಹೋಲಿಕೆ, ಒಪ್ಪಿಗೆ, ಅನುಸರಣೆ, ಅನುವರ್ತನೆ.

Confound' (ಕನ್‌ಫೌಂಡ್) vt. mix up, confuse, astound, baffle ಕಲಸು, ಗಾಬರಿಮಾಡು, ಹೆದರಿಸು, ದಿಗ್ಭ್ರಮೆಗೊಳಿಸು.

Confounding (ಕನ್‌ಫೌಂಡಿಂಗ್) a· baffling, confusing. ವಿಸ್ಮಯಕಾರಕ, ಸಂದೇಹಜನಕ.

Confratern'ity (ಕಾನ್‌ಫ್ರಟರ್ನಿಟಿ) n. guild or brotherhood. ಬಂಧುವರ್ಗ, ಭ್ರಾತೃವರ್ಗ, ಸಂಘ.

Confrere (ಕೊನ್‌ಫ್ರೇರ್) n. fellow member of profession. ಸಹೋದ್ಯೋಗಿ, ಜತೆಯಲ್ಲಿ ಕೆಲಸಮಾಡುವವ, ಸಹಸದಸ್ಯ.

Confront' (ಕನ್‌ಫ್ರಂಟ್) vt. bring face to face, oppose. ಸಂಧಿಸು, ಮುಖನಿಲೆಮಾಡು, ಇದಿರುನಿಲ್ಲು, ಎದುರಿಸು.

Confucian (ಕನ್‌ಫ್ಯೂಶಿಯನ್) a. of or belonging to Confucius. ಕನ್‌ಫ್ಯೂಷಸ್ಸಿಗೆ ಸಂಬಂಧಿಸಿದ.

Confusable (ಕನ್‌ಫ್ಯೂಜೆಬಲ್) a· capable of being confused. ಸುಲಭವಾಗಿ ಭ್ರಾಂತಿಗೊಳ್ಳುವ.

Confuse (ಕನ್‌ಫ್ಯೂಜ್) vt. throw into disorder, obscure, mix up. ಗಲಿಬಿಲಿಮಾಡು, ದಿಕ್ಕುತೋರದಂತೆ ಮಾಡು, ಭ್ರಾಂತಿಗೊಳಿಸು, ಕಲಬೆರಕೆ ಮಾಡು.

Confu'sion (ಕನ್‌ಫ್ಯೂಝುನ್–ಜನ್) n. disorder, tumult, discomfiture. ಗಾಬರಿ, ಗೊಂದಲ, ತೊಡಕು, ಅಸ್ತವ್ಯಸ್ತತೆ, ಗಲಭೆ, ಗೋಜು, ನಿರಾಶೆ.

Confutation (ಕಾನ್‌ಫ್ಯುಟೇಷನ್) n. refutation. ಖಂಡನೆ.

Confute (ಕನ್‌ಫ್ಯೂಟ್) vt. refute, prove to be false. ಖಂಡಿಸು, ತಪ್ಪೆಂದು ಮನಗಾಣಿಸು.

Conge (ಕಾನ್‌ಜೇ) n. farewell. ಬೀಳ್ಕೊಡುವಿಕೆ.

Congeal' (ಕನ್‌ಜೀಲ್) vt. i. solidify by freezing or otherwise ಘನೀಭವಿಸು, ಗರಣೆಕಟ್ಟು, ಹೆಪ್ಪಾಗು, ಹೆತ್ತುಕೊ, ಗಟ್ಟಿಗಟ್ಟು.

Congener (ಕಾಂಜಿನರ್) a, allied, akin. ಸಜಾತೀಯ.

Congeneric (ಕಾಂಜೆನೆರಿಕ್) a. of the same genus, of the same origin· ಸಜಾತೀಯ, ಒಂದೇಬಗೆಯ.

Congeni'al (ಕಂಜೀನಿಅಲ್) a. sympathetic, suitable, pleasurabl, to. ಒಂದೇ ಸ್ವಭಾವದ, ಸಮರಸವಾದ. ಸ್ವಭಾವಾನುಕೂಲವಾದ, ಅನುಗುಣವಾದ, ಒಗ್ಗುವ, ಕ್ಷೇಮಕರ, ಹಿತಕರ.

Congenially (ಕನ್‌ಜೀನಿಯ್ಯಲಿ) adv. in a sympathetic way, in a suitable manner. ಸ್ವಭಾವಾನುಕೂಲ ರೀತಿಯಲ್ಲಿ, ಕ್ಷೇಮಕರವಾಗಿ.

Congenital (ಕಾನ್‌ಜೆನಿಟಲ್) a. born with one, dating from birth. ಆಜನ್ಮ, ಸಹಜಾತ, ಹುಟ್ಟಿನಿಂದ ಬಂದ.

Congest (ಕಂಜೆಸ್ಟ್) vi. accumulate to be in excess. ವಿಪರೀತವಾಗಿ ಸೇರು,

Conges'ted (ಕನ್ಜೆಸ್ಟೆಡ್) a. over-crowded, affected with an unnatural accumulation of blood. ಕಿಕ್ಕಿರಿದ, ಹೆಪ್ಪುಕಟ್ಟಿದ, ಸಾಂದ್ರವಾದ, ನೆತ್ತರು ಗಟ್ಟಿಕಟ್ಟಿದ, ರಕ್ತಕಟ್ಟಿದ.

Conges'tion (ಕನ್‌ಜೆಶ್ಚನ್) n. abnormal accumulation of blood, population, &c. ರಕ್ತಾವರೋಧ, ಜನಸಂದಣೆ. ಜಿಬಿಡತೆ, ರಕ್ತಸಂಚಯ, ರಕ್ತಕಟ್ಟುವಿಕೆ.

Conglobate (ಕಾಂಗ್ಲೊಬೇಟ್) vt. & i. form into a ball. ಉಂಡೆಯಾಗು, ಮುದ್ದೆಯಾಗು.

Conglom'erate (ಕಂಗ್ಲಾಮರೇಟ್) n. & a. mass of pebbles cemented together into a stone mixture of things. ಹರಳುಗಳ ಪೆಂಟಿಗಟ್ಟು, ಮುದ್ದೆಗಟ್ಟಿದ, ಉಂಡೆಯಾದ, ಹೆಂಟೆಗಟ್ಟಿದ್ದು, ಪಿಂಡೀಕೃತ, ಜೂರುಗಲ್ಲುಂಡೆ.

Conglomera'tion (ಕಂಗ್ಲಾಮರೇಶನ್) n. collection of things. ಮುದ್ದೆಗಟ್ಟುವಿಕೆ, ಉಂಡೆ, ರಾಶಿ.

Conglutinate (ಕಂಗ್ಲೂಟಿನೇಟ್) vt. & i stick together. ಒಟ್ಟಿಗೆ ಅಂಟಿಕೊ, ಸಂಶ್ಲೇಷಿಸು.

Congou (ಕಾಂಗು) n. kind of black chinese tea. ಒಂದು ವಿಧದ ಚೀನಾದೇಶದ ತೇಯೆಲೆ.

Congrat'ulate (ಕಂಗ್ರಾಟ್ಯುಲೇಟ್) vt. express joy on any fortunate event, felicitate. ಅಭಿನಂದಿಸು, ಸಂತೋಷವನ್ನು ತಿಳಿಸು.

Congratula'tion (ಕಂಗ್ರಾಟ್ಯುಲೇಶನ್) n. expression of joy in another's good fortune (usu in plu.) ಅಭಿನಂದನೆ; ಪ್ರತಿನಂದನೆ, ಸಲವರಿಕೆ.

Cogratulatory (ಕಂಗ್ರಾಟ್ಯುಲೇಟರಿ) concerning congratulation. ಅಭಿನಂದನಾತ್ಮಕ, ಧನ್ಯವಾದಾತ್ಮಕ.

Cong'regate (ಕಾಂಗ್ರಿಗೇಟ್) vt gather together, assemble. ಗುಂಪ ಸೇರಿಸು, ಒಟ್ಟುಗೂಡು, ನೆರೆಯು.

Congrega'tion (ಕಾಂಗ್ರಿಗೇಶನ್) n assemby of people esp. for religious worship. ಸಮೂಹ, ಪರಿಷತ್ತು, ಸಭೆ, ಗುಂಪು, ಗೋಷ್ಠಿ.

Cong'ress (ಕಾಂಗ್ರೆಸ್) n. assembly, legislature of United States, ಪ್ರತಿನಿಧಿಗಳ ಸಭೆ, ರಾಷ್ಟ್ರೀಯಸಭೆ. ಕಾಂಗ್ರೆಸು, ಅಮೆರಿಕ ಸಂಯುಕ್ತ ಸಂಸ್ಥಾನ ಶಾಸನಸಭೆ.

Congressional (ಕಾಂಗ್ರೆಷನಲ್) a pertaining to congress. ಅಮೆರಿ ಸಂಯುಕ್ತ ಸಂಸ್ಥಾನದ ನ್ಯಾಯವಿಧಾಯ ಸಭೆಗೆ ಸಂಬಂಧಿಸಿದ.

Congruence (ಕಾಂಗ್ರುಎನ್ಸ್) n. agreement, conformity. ಹೊಂದಿಕೆ, ಅನುರೂಪತೆ, ಸಾಮಂಜಸ್ಯ.

Cong'ruent (ಕಾಂಗ್ರುಎನ್ಟ್) a. suitable. agreeing. ತಕ್ಕ, ಒಪ್ಪುವ, ಏಕರೂಪದ.

Congru'ity (ಕಾಂಗ್ರುಇಟಿ) n. consistency. agreement. ಹೊಂದಿಕೆ, ಅನುರೂಪತೆ.

Congruous (ಕಾಂಗ್ರುಅಸ್) a. accordant, filling. ಹೊಂದಿಕೊಳ್ಳುವ, ಸಮಂಜಸ.

Conic (ಕಾನಿಕ್) a. coneshaped, of a cone. ಶಂಕುವಿನಾಕಾರದ, ಶಂಕುವಿಗೆ ಸಂಬಂಧಿಸಿದ.

Con'ical (ಕಾನಿಕಲ್) a. cone-shaped ಬುಗುರಿಯಾಕಾರದ, ಶಂಕುವಿನಾಕಾರದ.

Coniform (ಕೋನಿಫಾರ್ಮ್) a. cone shaped. ಶಂಕುವಿನಾಕಾರದ.

Conjec'ture (ಕಂಜೆಕ್ಚರ್) n. guessing, guess work. ಅಭಿಪ್ರಾಯ, ಊಹೆ, ಅನುಮಾನ, ಆಧಾರವಿಲ್ಲದ ಕಲ್ಪನೆ, ಊಹಿಸೋಣ.

Conjec'tural (ಕಂಜೆಕ್ಚರಲ್) a. depending on conjecture. ಊಹೆಯ, ಊಹಾತ್ಮಕ, ಕಾಲ್ಪನಿಕ, ಅನುಮಾನಿಕ.

Conjoin'(ಕಂಜಾಯಿನ್)vt.i. join together, combine, unite. ಸೇರಿಸು, ಒಟ್ಟುಗೂಡಿಸು, ಒಂದುಮಾಡು, ಜೋಡಣೆ ಮಾಡು, ಸಂಯೋಗಿಸು.

Conjoint (ಕಾನ್ಜಾಯಿಂಟ್) a. united, associated. ಒಟ್ಟುಗೂಡಿದ, ಸಂಯೋಜಿತ.

Conjointly (ಕಾನ್ಜಾಯಿಂಟ್ಲೀ)adv. in a united manner. ಒಟ್ಟುಗೂಡಿ, ಸಂಯೋಜಿತವಾಗಿ.

Con'jugal (ಕಾಂಜುಗಲ್) a. pertaining to marriage, between married persons ಮದುವೆಯ, ಗಂಡ ಹೆಂಡಿರ, ದಂಪತಿಗಳ, ದಾಂಪತ್ಯದ.

Con'jugate (ಕಾಂಜುಗೇಟ್) vt. i. inflect (verb) enter into conjugation. ಕ್ರಿಯಾಪದದ ರೂಪಭೇದಮಾಡು, ಒಂದುಗೂಡಿಸು, ಸಂಯೋಗಿಸು, ಧಾತುರೂಪ ನಡೆಸು, ಜೋಡಾಗು.

Conjuga'tion (ಕಾಂಜುಗೇಶನ್) n. form or inflection of verb, union. ಕ್ರಿಯಾರೂಪ ನಿಷ್ಪತ್ತಿ, ಸಂಯೋಗ, ಧಾತುರೂಪ ನಡೆಸುವುದು, ಒಂದುಗೂಡುವುದು.

Coujugational (ಕಾನ್ಜುಗೇಷನಲ್) a. pertaining to conjugator. ಧಾತುರೂಪಕ್ಕೆ ಸಂಬಂಧಿಸಿದ.

Conjunct'(ಕಂಜಂಕ್ಟ್)a. conjoined, coocurrent. ಒಟ್ಟುಗೂಡಿಸಿದ, ಸೇರಿಕೊಂಡ, ಸಂಯುಕ್ತ, ಸಂಯೋಗವಾದ.

Conjunction (ಕಂಜಕ್ಷನ್) n.connection, union (**gram**) a word that connects sentences and words. ಸೇರಿಕೆ, ಸಂಯೋಗ, ಸಂಗಮ, ಸಮುಚ್ಚಯಾವ್ಯಯ, ಸಮುಚ್ಚಯ.

Conjunctive (ಕಂಜಕ್ಟಿವ್) a. serving to join, uniting. ಒಟ್ಟುಗೂಡಿಸುವ, ಸಂಯೋಜಕ.

Conjunc'ture (ಕಂಜಂಕ್ಚರ್) n. important occasion, crisis. ಸಂಧಿಕಾಲ, ಸನ್ನಿವೇಶ, ಸಂದರ್ಭ, ಕಠಿಣ ಪ್ರಸಂಗ.

Conjura'tion(ಕಾಂಜುರೇಶನ್) n. incantation, solemn entreaty. ಇಂದ್ರಜಾಲ, ಗಾರುಡಿ ವಿದ್ಯೆ, ಮಾಟವಿದ್ಯೆ, ಗಂಭೀರಭಾವದಿಂದ ಪ್ರಾರ್ಥಿಸಿಕೊಳ್ಳೋಣ.

Conjure' (ಕಂಜೂರ್) vt. entreat or implore earnestly to do something. ಸೆರಗೊಡ್ಡಿ ಬೇಡಿಕೊಳ್ಳು, ಗಂಭೀರ ಭಾವದಿಂದ ಪ್ರಾರ್ಥಿಸು.

Con'jure (ಕಂಜರ್) vt. produce magical effect, enchant. ಇಂದ್ರಜಾಲಮಾಡು, ಮಾಟಮಾಡು, ಗಾರುಡಿ ಮಾಡು.

Con'jurer,-or (ಕಂಜರರ್) n. enchanter, one who practises magical arts. ಮಾಟಗಾರ, ಗಾರುಡಿಗ, ಮಂತ್ರವಾದಿ, ಇಂದ್ರಜಾಲಿಕ.

Conk(ಕಾಂಕ್) n. nose. ಮೂಗು.

Connascent (ಕನೇಸೆಂಟ್) n. born or produced at the same time. ಒಂದೇಕಾಲದಲ್ಲಿ ಜನಿಸಿದ, ಏಕಕಾಲದಲ್ಲಿ ಉತ್ಪನ್ನವಾದ.

Connate (ಕಾನೇಟ್) a. innate, inborn. ಆಜನ್ಮಸಂಯುಕ್ತ.

Connatural (ಕನಾಟ್ಯುರಲ್) a. belonging naturally to, innate. ಹುಟ್ಟಿನಿಂದ ಬಂದ, ಸಹಜವಾದ.

Connect' (ಕನೆಕ್ಟ್) v. i. join, link, unite be coherent. ಜೋಡಿಸು, ಸೇರಿಸು, ಸಂಬಂಧಕಲ್ಪಿಸು, ಜೊತೆಗೂಡಿಸು, ಸೇರು.

Connec'tive (ಕನೆಕ್ಟಿವ್) a. serving as connexion. ಸೇರಿಸುವ, ಸೇರಿಸಲಾಗುವ, ಸಂಬಂಧಕ, ಕೂಡಿಸುವ.

Connec'tion,-nexion (ಕನೆಕ್ಷನ್) n. act of connecting, intercourse, relation, intimacy. ಸೇರುವೆ, ಸಹವ್ಯಕ್ತಿಸಂಬಂಧ, ಸಹವಾಸ, ಬಂಧುತ್ವ, ಸಂಪರ್ಕ, ಸಂಸರ್ಗ, ಬಳಕೆ, ನಿಕಟ, ಸಲಿಗೆ.

Conner (ಕಾನರ್) n. one who directs or steers a ship. ಹಡಗನ್ನು ಸಂಚಾಲಿಸುವವ.

Connictation (ಕನಿಕ್ಟೇಷನ್) n. winking. ಕಣ್ಣು ಮಿಟಗಿಸುವಿಕೆ.

Conniv'ance (ಕನೈವೆನ್ಸ್) n. winking at offence. ಅರಿಯದವನಂತೆ ಇರೋಣ, ಕಂಡೂಕಾಣದಂತೆ ಇರುವುದು.

Connive' (ಕನೈವ್) vi. take no notice, wink at fault. ಉಪೇಕ್ಷಿಸು, ಗಮನಿಸದೇ ಇರು, ಕಂಡೂ ಕಾಣದ ಹಾಗೆ ಇರು.

Connoisseur' (ಕನಿಸ್ಯೂರ್) a. critical judge esp. in art, music, &c. ಕಲಾಭಿಜ್ಞ, ಅಭಿಜ್ಞ, ಪರಿಣತ, ರಸಜ್ಞ.

Connotate (ಕನೋಟೇಟ್) vt. signify, mean. ಅರ್ಥಕೊಡು.

Connota'tion (ಕನೋಟೇಶನ್) n. implied meaning. ಗರ್ಭಿತಾರ್ಥ, ಒಳಾರ್ಥ, ಗೂಢಾರ್ಥ.

Connote' (ಕನೋಟ್) vt. signify. betoken, mean. ಪದದ ಒಳ ಅರ್ಥವನ್ನು ಸೂಚಿಸು, ಭಾವಕೊಡು, ಧ್ವನಿತವಾಗು, ಗರ್ಭಿತಾರ್ಥಸೂಚಿಸು' ಹೆಚ್ಚು ಅರ್ಥಕೊಡು.

Connub'ial (ಕನ್ಯೂಬಿಅಲ್) a. connected with marriage. ವಿವಾಹ ಸಂಬಂಧವಾದ, ವೈವಾಹಿಕ, ದಾಂಪತ್ಯದ.

Conoid (ಕಾನಾಯಿಡ್) n. anything in the form of a cone. ಶಂಕುವಿನ ಅಕಾರದ ವಸ್ತು.

Con'quer (ಕಾಂಕರ್) vt. i. acquire by conquest, master one's difficulties or passions. ಜಯಿಸು, ಹಸ್ತಗತ ಮಾಡಿಕೊ, ಗೆದ್ದುಕೊ, ದಮನಮಾಡು.

Conquerable (ಕಾಂಕರೆಬಲ್) a. capable of being conquered. ಗೆಲ್ಲುವುದಕ್ಕಾಗುವ, ಜಯಿಸಲು ಯೋಗ್ಯವಾದ.

Con'querer (ಕಾಂಕರರ್) n. one who conquers: ಜಯಶಾಲಿ, ವಿಜಯಿ, ಗೆದ್ದವ.

Conq'uest (ಕಾಂಕ್ವೆಸ್ಟ್) n. act of conquering, that which is acquired by physical or moral force. ಜಯ, ವಿಜಯ, ಗೆಲುವು.

Consanguine (ಕಾನ್ಸಾಂಗ್ವಿನ್) a. related by blood. ರಕ್ತ ಸಂಬಂಧದ.

Consanguin'eous (ಕಾನ್ಸ್ಯಾಂಗ್ವಿನಿಅಸ್) a. related by birth, near of kin. ಸಗೋತ್ರ, ರಕ್ತಸಂಬಂಧವುಳ್ಳ, ಒಂದೇ ಕುಟುಂಬಕ್ಕೆ ಸೇರಿದ.

Consanguin'ity (ಕಾನ್ಸಾಂಗ್ವಿನಿಟಿ) n. kinship. ರಕ್ತಸಂಬಂಧ, ಸಗೋತ್ರತೆ.

Con'science (ಕಾನ್ಶೆನ್ಸ್) n. sense of duty, faculty distinguishing between right or wrong. ವಿವೇಚನಾಶಕ್ತಿ, ಆತ್ಮಸಾಕ್ಷಿ, ಮನಸ್ಸಾಕ್ಷಿ, ಧರ್ಮಜ್ಞಾನ.

Conscien'tious (ಕಾನ್ಶಿಎನ್ಶಸ್) a. sincere, scrupulous. ನ್ಯಾಯನಿಷ್ಠ, ಧರ್ಮಶೀಲ, ಪ್ರಾಮಾಣಿಕ, ಪಾಪಭೀರು, ಆತ್ಮಸಾಕ್ಷಿಯ.

Con'scious (ಕಾನ್ಶಸ್) a. aware, having the faculty of consciousness. ಸ್ವಬೋಧವುಳ್ಳ, ತಿಳಿದಿರುವ, ಜಾಗ್ರತನಾಗಿರುವ, ಗೊತ್ತಿರುವ, ಪ್ರಜ್ಞೆಯಿರುವ, ಬುದ್ಧಿಪೂರ್ವಕ.

Consciously (ಕಾನ್ಶಸ್‌ಲಿ) adv. in a conscious manner. ಸ್ವಬೋಧೆಯಿಂದ, ತಿಳಿದೂ ತಿಳಿದು.

Con'sciousness (ಕಾನ್ಶಸ್‌ನೆಸ್) n. persons, thoughts and feelings

as a whole. ಪ್ರಜ್ಞೆ, ಭಾವ, ತಿಳಿವು, ಜಾಗೃತಿ, ಜ್ಞಾನ ಚೇತರಣೆ, ಸ್ಮೃತಿ, ಜಾಗ್ರತಾವಸ್ಥೆ, ಎಚ್ಚರಿಕೆ.

Conscribe (ಕನ್‌ಸ್ಕ್ರೈಬ್) vt. enlist by conscription ಒತ್ತಾಯದಿಂದ ದಂಡಿಗೆ ಸೇರಿಸು, ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಿಕೊ.

Con'script (ಕಾನ್‌ಸ್ಕ್ರಿಪ್ಟ್) n. one enrolled and liable to serve as a soldier or sailor. ದಂಡಿನಲ್ಲಿ ಅಥವಾ ನೌಕಾಸೇನೆಯಲ್ಲಿ ಸೇರುವುದಕ್ಕೆ ನಿರ್ಬಂಧಿಸಲ್ಪಟ್ಟವ, ಒತ್ತಾಯದಿಂದ ಸೈನ್ಯಕ್ಕೆ ಸೇರಿದವನು.

Conscrip'tion (ಕಾನ್‌ಸ್ಕ್ರಿಪ್‌ಶನ್) n. compulsory enrolment for naval or military service. ಬಲಾತ್ಕಾರವಾದ ರಾಷ್ಟ್ರಸೇವೆಗಾಗಿ ಸೇನೆಯಲ್ಲಿ ಸೇರಿಸುವಿಕೆ.

Con'secrate (ಕಾನ್ಸಿಕ್ರೇಟ್) vt. set apart for a holy use, devote, sanctify. ಪ್ರತಿಷ್ಠೆ ಮಾಡು, ಮೀಸಲಾಗಿಡು, ಪವಿತ್ರ ಉದ್ದೇಶಕ್ಕಾಗಿ ಪ್ರತ್ಯೇಕವಾಗಿಡು, ಸಂಪ್ರೋಕ್ಷಿಸು, ಪವಿತ್ರಗೊಳಿಸು.

Consecra'tion (ಕಾನ್ಸಿಕ್ರೇಷನ್) n. act of devoting to a sacred use, dedication. ಸಂಪ್ರೋಕ್ಷಣೆ, ಪ್ರತಿಷ್ಠೆ, ದೀಕ್ಷೆ, ಸಮರ್ಪಣೆ, ಮುಡಿಪು, ಅರ್ಪಣೆ, ಕಾಣಿಕೆ.

Consectaneous (ಕನ್‌ಸೆಕ್ಟೇನಿಯಸ್) a. following as a natural consequence. ಪ್ರಾಕೃತಿಕ ನಿಯಮಗಳ ಫಲವಾಗಿ ಉಂಟಾಗುವ.

Consectary (ಕನ್ಸೆಕ್ಟರಿ)n. deduction corollary. ಅನುಮಿತ ಫಲ.

Consecution (ಕಾನ್ಸಿಕ್ಯೂಷನ್) n. logical sequence of events. ಅನುಕ್ರಮ, ಅನುಪೂರ್ವಿ.

Conse'cut'ive (ಕನ್ಸೆಕ್ಯುಟಿವ್) a. following in regular order. ಅನುಕ್ರಮವಾದ, ಕ್ರಮಾನುಗತ, ವರಸೆಯಾದ, ಪರಂಪರಾಗತ.

Consecutively (ಕಾನ್ಸಿಕ್ಯೂಟಿವ್ಲಿ)adj. in a consecutive manner. ಅನುಕ್ರಮವಾಗಿ, ಪಾಂಕ್ತವಾಗಿ.

Consenescence (ಕಾನ್ಸೆನೆಸೆನ್ಸ್) n, decay by age. ಮುಪ್ಪಿನ ಕುಗ್ಗು, ಉಡುಗು.

Consen'sus (ಕನ್ಸೆನ್ಸಸ್) n. unanimity, agreement in opinion. ಏಕಾಭಿಪ್ರಾಯ, ಸಹಕಾರ, ಹೊಂದಿಕೆ, ಒಮ್ಮತ, ಏಕೀಭಾವ.

Consent (ಕನ್ಸೆಂಟ್)vi. give assent, yield, comply. ಒಡಂಬಡು, ಒಪ್ಪು, ಅನುಮತಿಸು, ಸಮ್ಮತಿಸು.

Consentan'eous (ಕಾನ್ಸೆಂಟೇನಿಅಸ್) a. in accord. done by common consent. ಯುಕ್ತ, ಏಕಾಭಿಪ್ರಾಯವುಳ್ಳ.

Con'sen'tient (ಕನ್ಸೆನ್‌ಶೆನ್ಟ್) a. agreeing mind or opinion. ಒಂದೇ ಅಭಿಪ್ರಾಯದ, ಸರ್ವಾನುಮತದ.

Consequence (ಕಾನ್ಸಿಕ್ವೆನ್ಸ್) n. result, effect, importance. ಕಾರ್ಯಫಲ, ಪರಿಣಾಮ, ಪ್ರಾಮುಖ್ಯತೆ, ಪ್ರಭಾವ, ಘನತೆ, ಗಣ್ಯತೆ.

Con'sequent (ಕಾನ್ಸಿಕ್ವೆಂಟ್) a. following as a consequence. ಪರಿಣಾಮವಾಗಿ, ಅನುಗತ, ಫಲವಾಗಿ ಬಂದ ; ಆನುಷಂಗಿಕ.

Con'sequen'tial(ಕಾನ್ಸಿಕ್ವೆನ್‌ಶಲ್) a. resulting from, pompous, self-important. ಪರಿಣಾಮವಾಗಿ ಬಂದ, ಫಲವಾಗಿ ಆದ, ಆಡಂಬರದ, ಅಟ್ಟಹಾಸದ.

Con'sequently (ಕಾನ್ಸಿಕ್ವೆಂಟ್ಲಿ) adv. & con. as a result, accordingly, therefore. ಫಲವಾಗಿ, ಪರಿಣಾಮವಾಗಿ, ಆದಕಾರಣ, ಆದುದರಿಂದ.

Consertion (ಕಾನ್ಸರ್ಶನ್) n. junction. ಸಂಗಮಸ್ಥಳ.

Conservancy(ಕನ್ಸರ್ವನ್ಸಿ) n. official preservation. ಸಂರಕ್ಷಣ, ಪಾಲನ.

Conserva'tion(ಕಾನ್ಸರ್ವೇಶನ್)n. preserving, continuance, conserved state. ರಕ್ಷಣೆ, ಕಾಪಾಟಿ, ಜೋಪಾಸನೆ, ಕಾಪು, ಪಾಲನೆ, ಮುಂದುವರಿಸೋಣ.

Conserv'ative (ಕನ್ಸರ್ವಟಿವ್) a. lending or having power to conserve, opposed to change, moderate. ರಕ್ಷಿಸುವ, ಪಾಲಿಸುವ, ಸಂಪ್ರದಾಯ ಪಾಲಕ, ಪೂರ್ವಾಚಾರಪ್ರಿಯ, ಸುಧಾರಣೆಯ ವಿರೋಧಿಯಾದ, ಮಧ್ಯಮಮಾರ್ಗಿ.

Conservator(ಕಾನ್ಸರ್ವೇಟರ್)n. preserver, custodian. ರಕ್ಷಕ, ಪಾಲಕ, ರಕ್ಷಣಾಧಿಕಾರಿ.

Conserv'atory (ಕನ್ಸರ್ವೆಟರಿ) n. green house for tender plants. ಸಸ್ಯ ರಕ್ಷಣಾಲಯ, ಲತಾಗೃಹ.

Conserve (ಕನ್ಸರ್ವ್) vt. preserve, keep from decay or change. ರಕ್ಷಿಸು, ಕಾಯು, ಪಾಲಿಸು, ಕೆಡದಂತೆ ಇಡು.

Consid'er (ಕನ್ಸಿಡರ್) vt.i.contemplate, deliberate thoughtfully, take into account show consideration of. ಆಲೋಚಿಸು, ಪರ್ಯಾಲೋಚಿಸು, ವಿಚಾರಮಾಡು, ಯೋಚಿಸು, ಅಭಿಪ್ರಾಯಪಡು, ಗಮನಿಸು.

Consid'erable (ಕನ್ಸಿಡರಬ್‌ಲ್) a. important. moderately large. ಮಹತ್ವದ, ಗಣನೀಯವಾದ, ಮಾನ್ಯ, ಮುಖ್ಯವಾದ, ಅಪಾರ.

Consid'erably (ಕನ್ಸಿಡರಬ್ಲಿ) adv. in a considerable manner, to a great extent. ಪ್ರಧಾನವಾಗಿ, ವಿಶೇಷ ರೂಪದಿಂದ.

Consid'erate(ಕನ್ಸಿಡರೇಟ್)a. thoughtful for others, ವಿವೇಚನೆಯುಳ್ಳ, ಪರಹಿತಚಿಂತೆಯ.

Consideration (ಕನ್ಸಿಡರೇಶನ್) n. deliberation, thing worth considering, coniderateness, regard ಆಲೋಚನೆ, ವಿಚಾರಯೋಗ್ಯ ವಿಷಯ, ಪರಿಶೀಲನೆ, ವಿಚಾರ ಗೌರವ ಪರಿಗಣನೆ.

Considering(ಕನ್ಸಿಡರಿಂಗ್) prep. in view of. ಪರಿಗಣಿಸಿದರೆ.

Consign' (ಕನ್ಸೈನ್) vt. give to another, transmit. ವಶಪಡಿಸು, ಕೊಡು, ಕೈವರ್ತಿಸು, ಅರ್ಪಿಸು, ಮಾಲು ಕಳುಹಿಸು, ರವಾನಿಸು.

Consignation(ಕಾನ್ಸಿಗ್ನೇಷನ್) n payment of money to authorised person. ವಿಹಿತರೀತಿಯಲ್ಲಿ ಹಣ ಪಾವತಿಮಾಡುವುದು.

Consignee',-or (ಕನ್ಸೈನೀ) n. person to whom, by whom goods are consigned. ಸರಕು ಪಡೆದುಕೊಳ್ಳುವವ, ಸರಕು ಕೊಟ್ಟವ, ಒಪ್ಪಿಸಿಕೊಳ್ಳುವವನು.

Consign'ment (ಕನ್ಸೈನ್‌ಮೆಂಟ್)n. consigning, goods consigned. ಸರಕು ಕಳುಹಿಸುವುದು, ಕಳಿಸಿಕೊಟ್ಟ ಮಾಲು.

Consilience (ಕನ್ಸಿಲಿಯನ್ಸ್) n. coincidence, concurrence. ಸಂಯೋಗ, ಹೊಂದಾಣಿಕೆ.

Consilient (ಕನ್ಸಿಲಿಯಂಟ್) a. accordant. ಹೊಂದುವ, ಸಂಗತವಾಗುವ.

Consist' (ಕನ್ಸಿಸ್ಟ್)vi. be composed of, be compatible with. ಉಂಟಾಗಿರು, ಹೊಂದಿರು, ಸೇರಿರು, ಒಳಗೊಂಡಿರು, ಕೂಡಿರು, ಅನುರೂಪವಾಗಿರು, ಸಮರಸವಾಗು.

Consist'ency (ಕನ್ಸಿಸ್ಟೆನ್ಸಿ) n. being consistent, uniformity, density, harmony ಸಂಗತವಾಗಿರುವಿಕೆ, ಅವಿರೋಧ, ನಿಷ್ಠೆ, ಸಾಂದ್ರತೆ, ದೃಢತೆ, ಮಿಲನ ಸಾಮರಸ್ಯ, ಹೊಂದಿಕೆ, ಸ್ಥಾಯಿತ್ವ.

Consistent (ಕನ್ಸಿಸ್ಟೆಂಟ್) a. fixed, uniform in thought or action.

ಸಮಂಜಸ, ಸ್ಥಿರ, ಏಕರೂಪವಾದ, ನಿಷ್ಠನಾದ, ಅನುಗುಣದ.

Consociate (ಕನ್ಸೋಷಿಯೆಟ್) a. associated. ಜೊತೆಗೂಡಿದ, ಭಾಗಿ.

Consociation (ಕನ್ಸೋಷಿಯೇಷರ್) n. fellowship, association. ಪರಸ್ಪರ ಮೈತ್ರಿ, ಸೇರುವಿಕೆ.

Consolable (ಕನ್ಸೋಲೆಬಲ್) a. capable of being consoled. ಸಂತಯಿಸಲು ಅರ್ಹವಾದ.

Consola'tion (ಕನ್ಸೊಲೇಶನ್) n. solace. ದುಃಖೋಪಶಮನ, ಸಮಾಧಾನ.

Console' (ಕನ್ಸೋಲ್) vt. cheer or comfort in distress. ಸಮಾಧಾನ ಮಾಡು, ಸಂತೈಸು, ದುಃಖ ಆರಿಸು, ಆಶ್ವಾಸನವೀಯು.

Consol'idate (ಕನ್ಸಾಲಿಡೇಟ್) vt. i. solidify, strengthen, unite into one. ಗಟ್ಟಿಮಾಡು, ಒಟ್ಟುಗೂಡಿಸು, ಘನೀಭವಿಸು, ಬಲಪಡಿಸು, ಜೋಡಿಸು, ಕ್ರೋಢೀಕರಿಸು.

Consols (ಕನ್ಸಾಲ್ಸ್) n. [plu.] government's consolidated stock. ಸರ್ಕಾರದ ಸಾಲಪತ್ರಗಳು.

Consonance (ಕಾನ್ಸೊನೆನ್ಸ್) n. state of agreement, agreement of sounds. ಸಾಮರಸ್ಯ, ಸಾಂಗತ್ಯ, ಮೇಳ. ಹೊಂದಿಕೆ, ಧ್ವನಿಮೇಳ, ಮೇಳನ.

Con'sonant (ಕಾನ್ಸೊನೆಂಟ್) a. consistent, agreeable. ಸುಸಂಗತವಾದ, ಒಪ್ಪುವ, ಹೊಂದಿಕೊಳ್ಳುವ n. non-vowel letter, ವ್ಯಂಜನಾಕ್ಷರ.

Consort (ಕಾನ್ಸಾರ್ಟ್) n. spouse, partner, ship sailing with another. ದಂಪತಿ, ಸಂಗಾತಿ, ಗಂಡ ಹೆಂಡತಿ ಸಹ ಭೋಗಿ, ಇನ್ನೊಂದು ಹಡಗಿನೊಂದಿಗೆ ಹೋಗುವ ಹಡಗು. vt. keep company with. ಒಂದುಗೂಡು, ಸಂಗಾತಿಯಾಗಿರು, ಜೊತೆಸೇರು.

Conspecific (ಕಾನ್ಸ್ಪಿಸಿಫಿಕ್) a. of the same species. ಒಂದೇ ಜಾತಿಯ.

Conspec'tus (ಕರ್ಸ್ಪೆಕ್ಟಸ್) n. general view, synopsis. ದಿಗ್ದರ್ಶನ, ಸಂಗ್ರಹ, ಸಮಷ್ಟಿದೃಷ್ಟಿ, ಸಂಕ್ಷೇಪ.

Conspicuity (ಕಾನ್ಸ್ಪಿಕ್ಯೂಇಟಿ) n. quality of being conspicuous. ಸುವ್ಯಕ್ತತೆ.

Conspic'uous (ಕರ್ಸ್ಪಿಕ್ಯೂಅಸ್) a. striking to eye, prominent, readily seen. ಕಣ್ಣಿಗೆ ಹೊಡೆಯುವ, ಎದ್ದುಕಾಣುವ, ಪ್ರಸಿದ್ಧ, ಸ್ಪಷ್ಟವಾದ, ಗಮನ ಸೆಳೆಯುವ, ಸುವ್ಯಕ್ತ, ಸ್ಫುಟ.

Conspicuousness (ಕಾರ್ಸ್ಪಿಕುಅಸ್ನೆಸ್) n. state of being prominent. ಪ್ರಮುಖತೆ, ವಿಶದತೆ, ಸ್ಪಷ್ಟತೆ.

Conspi'racy (ಕನ್ಸ್ಪಿರಸಿ) n. a plot, plotting for evil doing. ಒಳಸಂಚು, ಪಿತೂರಿ, ಕಪಟಪ್ರಬಂಧ, ದ್ರೋಹ,

Conspirator (ಕನ್ಸ್ಪಿರೇಟರ್) n. one who conspires. ಒಳಸಂಚಿನವ, ಪಿತೂರಿಗಾರ, ರಾಜದ್ರೋಹಿ.

Conspire' (ಕರ್ಸ್ಪೈರ್) vt. plot together. ಒಳಸಂಚುಮಾಡು, ಪಿತೂರಿ ನಡಸು, ಒಳಸಂಚು ನಡಸು.

Conspue (ಕಾನ್ಸ್ಪ್ಯೂ) vi. express hatred. ದ್ವೇಷವನ್ನುತೋರಿಸು.

Con'stable (ಕಾನ್ಸ್ಟೆಬಲ್) n. great officer of royal household, policeman. ಅರಮನೆಯ ಮುಖ್ಯಾಧಿಕಾರಿ, ಪೋಲೀಸಿನವ, ತಳವಾರ.

Constob'ulary (ಕನ್ಸ್ಟ್ಯಾಬ್ಯೂಲರಿ) n. the police force. ಪೋಲೀಸರ ದಳ, ತಳವಾರರ ಸೇರುವೆ.

Con'stancy (ಕಾನ್ಸ್ಟೆನ್ಸಿ) n. faithfulness, steadiness. ಪ್ರಾಮಾಣಿಕತೆ, ದೃಢತೆ, ದಾರ್ಢ್ಯ, ಸ್ಥೈರ್ಯ, ನಿಷ್ಠೆ.

Con'stant (ಕಾನ್ಸ್ಟಂಟ್) a. unchangeable, firm, continual. ನಿಶ್ಚಲ, ದೃಢವಾದ, ಅಚಲ, ತಪ್ಪದ, ಬದಲಾಗದ, ಸ್ಥಿರ, ಸತತ.

Con'stantly (ಕಾನ್ಸ್ಟಂಟ್ಲಿ) adv.

always, often. ಯಾವಾಗಲೂ, ಸತತ, ತಪ್ಪದೆ, ಸಂತತವಾಗಿ.

Constellate (ಕಾನ್ಸ್ಟೆಲೇಟ್) vt. & i. form into a constellation. ನಕ್ಷತ್ರಪುಂಜವಾಗು, ಮಾಡು.

Constella'tion (ಕಾನ್ಸ್ಟಿಲೇಶನ್) n. a group of stars. ನಕ್ಷತ್ರರಾಶಿ, ತಾರಾಗಣ.



Constellation

Consternate (ಕಾನ್ಸ್ಟರ್ನೇಟ್) vt. dismay. ಗಾಬರಿಗೊಳಿಸು.

Consterna'tion (ಕಾನ್ಸ್ಟರ್ನೇಶನ್) n. great terror. ಗಾಬರಿ, ದಿಗ್ಭ್ರಾಂತಿ, ಕಾತರ, ತಲ್ಲಣ, ಭಯ, ಮಹಾಭೀತಿ.

Con'stipate (ಕಾನ್ಸ್ಟಿಪೇಟ್) vt. effect with constipation. ಮಲಬದ್ಧ ಮಾಡು, ಹೊಟ್ಟೆಕಟ್ಟಿಸು.

Constip'ation (ಕಾನ್ಸ್ಟಿಪೇಶನ್) n. costiveness, difficulty in evacuating the bowels. ಮಲಬದ್ಧತೆ, ಮಲಾವರೋಧ, ಹೊಟ್ಟೆಕಟ್ಟು.

Consti'tuency (ಕಾನ್ಸ್ಟಿಟ್ಯೂಎನ್ಸಿ) n. body electing representative, a place represented. ಚುನಾವಣಾಕ್ಷೇತ್ರ, ಮತದಾರ ಮಂಡಲಿ, ಮತದಾರರ ವಿಭಾಗ.

Constit'uent (ಕನ್ಸ್ಟಿಟ್ಯೂಎಂಟ್) a. making part of a whole, appointing, electing. ಒಂದು ಅಂಗವಾದ, ಘಟಕ, ಮೂಲಭೂತ, ನಿಯೋಜಕ, ಚುನಾಯಿಸುವ, ನೇಮಿಸುವ, ಆಯ್ಕೆಯ.

Con'stitute (ಕಾನ್ಸ್ಟಿಟೂಟ್) vt. appoint, make into, establish, be the essence or components of ನಿಯಮಿಸು, ರಚಿಸು, ಆಗಿರು, ನಿಯೋಜಿಸು, ಸ್ಥಾಪಿಸು, ಏರ್ಪಡಿಸು, ತತ್ವ ಅಥವಾ ಅಂಶ ಅಥವಾ ಸಾರವಾಗಿರು.

Constituted (ಕಾನ್ಸ್ಟಿಟ್ಯೂಟೆಡ್) a. a. appointed, intended. ನೇಮಿತವಾದ, ಸ್ಥಾಪಿತವಾದ.

Constitu'tion (ಕಾನ್ಸ್ಟಿಟ್ಯೂಶನ್) n. natural condition of body or mind, form in which a state is organised, system of laws and customs. ದೇಹಪ್ರಕೃತಿ, ಸ್ವಗುಣ, ಶರೀರಸ್ವಭಾವ, ರಾಜ್ಯವ್ಯವಸ್ಥೆ, ರಾಜಶಾಸನ, ರಾಜ್ಯಾಂಗ.

Constitu'tional (ಕಾನ್ಸ್ಟಿಟ್ಯೂಶನಲ್) a. of or due to one's constitution, in harmony with the constitution of the state. ಸ್ವಭಾವಜನ್ಯ, ದೇಹಪ್ರಕೃತಿಯ, ರಾಜಶಾಸನಾನುರೂಪ, ಕಾನೂನಿಗೆ ಅನುಗುಣವಾದ, ಶಾಸನಬದ್ಧ.

Constitutive (ಕಾನ್ಸ್ಟಿಟ್ಯೂಟಿವ್) a. formative, essential. ಕಾರಕ, ಮುಖ್ಯ.

Constrain (ಕನ್ಸ್ಟ್ರೇನ್) vt, compel, hold in, constraint. ನಿರ್ಬಂಧಪಡಿಸು, ಬಲಾತ್ಕರಿಸು, ನಿರ್ಬಂಧದಲ್ಲಿಡು, ಒತ್ತಾಯಮಾಡು, ಸೆರೆಯಲ್ಲಿಡು.

Constraint (ಕನ್ಸ್ಟ್ರೇಂಟ್) n. compulsion, embarrassment. ನಿರ್ಬಂಧ, ಒತ್ತಾಯ, ಬಲಾತ್ಕಾರ, ಕಷ್ಟಾಯ; ಅಡಚಣೆ, ಬಲವಂತ.

Constrict (ಕನ್ಸ್ಟ್ರಿಕ್ಟ್) vt. compress, contract, ಕುಗ್ಗಿಸು, ಸಂಕೋಚಿಸು.

Constriction (ಕನ್ಸ್ಟ್ರಿಕ್ಷನ್) n. contraction, compression. ಸಂಪೀಡನ.

onstrictive (ಕನ್ಸ್ಟ್ರಿಕ್ಟಿವ್) a. tending to constrict. ಸಂಪೀಡಕ.

Constrictor (ಕಾನ್‌ಸ್ಟ್ರಿಕ್ಟರ್) n. muscle that contracts, any snake which crushes its prey, ಸಂಕುಚಿತನಾಗುವ ಶರೀರದ ಮಾಂಸಖಂಡ, ತನ್ನಗ್ರಾಸವನ್ನು ಅದುಮಿ ಕೊಲ್ಲುವ ಹೆಬ್ಬಾವು.



Constrictor

Constringe (ಕನ್‌ಸ್ಟ್ರಿಂಗ್) vt. compress, contract. ಅದುಮು, ಕುಗ್ಗಿಸು.

Constringent (ಕನ್‌ಸ್ಟ್ರಿನ್ಜೆನ್ಟ್) a. contractive. ಸಂಕೋಚನ ಶೀಲ.

Construct (ಕನ್‌ಸ್ಟ್ರಕ್ಟ್) vt. build up, make, compose. ಕಟ್ಟು, ನಿರ್ಮಿಸು, ಹೊಂದಿಸು, ಜೋಡಿಸು, ರಚಿಸು.

Costruction (ಕನ್‌ಸ್ಟ್ರಕ್ಷನ್) n. thing constructed, syntactial connexion, interpretation. ನಿರ್ಮಾಣ, ರಚನಾಕ್ರಮ, ಬಂಧ, ರೇಖನ ವಾಕ್ಯರಚನಾಕ್ರಮ, ಕಟ್ಟಡ, ಅಭಿಪ್ರಾಯ.

Construc'tive (ಕನ್‌ಸ್ಟ್ರಕ್ಟಿವ್) a. lending to construction, of a positive kind. ಕಾರ್ಯಪ್ರವರ್ತಕ, ವಿಧಾಯಕ, ರಚನಕಾರಿ, ರಚನಾತ್ಮಕವಾದ.

Con'strue (ಕಾನ್‌ಸ್ಟ್ರು) vt. translate, explain, interpret, ಭಾಷಾಂತರಮಾಡು, ಪದಶಃ ಅರ್ಥಮಾಡು, ಅನ್ವಯಮಾಡು, ವ್ಯಾಖ್ಯಾನಿಸು.

Consubstan'tial (ಕಾನ್‌ಸಬ್‌ಸ್ಟ್ಯಾನ್‌ಶಲ್) a. of the one substance. ಸಮವಸ್ತುವಿನ, ಏಕದ್ರವ್ಯದ, ಒಂದೇಪದಾರ್ಥ.

Con'sul (ಕಾನ್ಸಲ್) n. State agent in foreign town. ಪರರಾಷ್ಟ್ರದಲ್ಲಿರುವ ಪ್ರತಿನಿಧಿ, ರಾಯಭಾರಿ.

Consular (ಕಾನ್‌ಸ್ಯುಲರ್) a. pertaining to consuls. ರಾಯಭಾರಿಗೆ ಸಂಬಂಧಿಸಿದ.

Consult (ಕನ್ಸಲ್ಟ್) vt. i. seek information or advice from, take counsel with. ಆಲೋಚನೆ ಕೇಳು, ಅಭಿಪ್ರಾಯಕೇಳು, ಆಲೋಚಿಸು, ವಿಚಾರಿಸು.

Consultant (ಕನ್‌ಸಲ್ಟೆಂಟ್) n. one who consults. ಸಲಹೆ ಕೇಳುವವನು.

Cousulta'tion (ಕನ್‌ಸಲ್ಟೇಶನ್) n. consulting, meeting to consult. ಪರ್ಯಾಲೋಚನೆ, ಪರಾಮರ್ಶೆ, ಸಲಹೆ, ಆಲೋಚನೆಮಾಡೋಣ.

Consumable (ಕನ್‌ಸ್ಯೂಮಬಲ್) a. that may be consumed. ಉಪಯೋಗ ಯೋಗ್ಯವಾದ.

Consume' (ಕನ್‌ಸ್ಯೂಮ್) vt. i. destroy, waste away, use up, eat or drink, be exhausted. ನಾಶಮಾಡು, ತಿಂದುಬಿಡು, ಕುಡಿದುಬಿಡು, ವ್ಯಯಮಾಡು, ಮುಗಿಸಿಬಿಡು.

Consumma'te (ಕನ್ಸುಮೇಟ್) a. of the highest perfection or completeness. ಸಂಪೂರ್ಣವಾದ, ಅತ್ಯಂತ ಉತ್ಕೃಷ್ಟ, ಸರ್ವೋತ್ತಮ, ಪರಮ.

Consummate (ಕಾನ್ಸಮೇಟ್) vt. perfect or finish, be the crown of. ನೆರವೇರಿಸು, ಸಮಾಪ್ತಿಸು, ಪೂರ್ತಿಮಾಡು, ಶಿಖರವಾಗು, ಕಳಸಪ್ರಾಯವಾಗು.

Consumately (ಕಾನ್ಸುಮೇಟ್ಲಿ) adv. in a perfect manner. ಪೂರ್ಣವಾಗಿ, ಉತ್ಕೃಷ್ಟವಾಗಿ.

Consumma'tion (ಕಾನ್ಸುಮೇಷನ್) n. perfection, completion. ನೆರವೇರಿಕೆ, ಸಂಪೂರ್ಣತೆ.

Consummative (ಕಾನ್ಸುಮೇಟಿವ್) a. completing. ಪೂರ್ಣಗೊಳಿಸುವ.

Consump'tion (ಕನ್ಸಂಪ್‌ಷನ್) n. consuming, wasting disease, esp. tuberculosis. ಉಪಯೋಗ, ಬಳಕೆ, ಸವೆತ, ಕ್ಷಯ, ರೋಗ, ರಾಜಯಕ್ಷ್ಮ.

Consump'tive (ಕನ್ಸಪ್‌ಟಿವ್) a. tending to or affected with tuberculosis, &c. ವ್ಯಯಮಾಡುವ, ಕ್ಷಯರೋಗದಿಂದ ನರಳುವ, ಕ್ಷೀಣಿಸುತ್ತಿರುವ, ಕೃಶನಾಗುತ್ತಿರುವ.

Con'tact (ಕಾಂಟೆಕ್ಟ್) n. touch, connection, ಸ್ಪರ್ಶ, ಸಂಪರ್ಕ, ಸೋಕು, ತಾಕು, ಸಂಬಂಧ.

Conta'gion (ಕಂಟೇಜನ್) n. communication of disease by contact, corrupting influence. ಅಂಟುಜಾಡ್ಯ, ಸೊಂಕುರೋಗ, ಸ್ಪರ್ಶದಿಂದ ರೋಗಪ್ರಸಾರವಾಗುವುದು, ಸಹವಾಸದೋಷ, ನೀತಿಭ್ರಷ್ಟತೆವಾತಾವರಣ.

Contag'ious (ಕಂಟೇಜಸ್) a. infectious, catching. ಹರಡುವ, ಸೊಂಕುವ, ವ್ಯಾಪಿಸುವ, ಅಂಟಿಕೊಳ್ಳುವ, ಸಾಂಕ್ರಾಮಿಕ.

Contagiously (ಕಂಟೇಜಸ್ಲಿ) adv. in an infectious manner. ಸಾಂಕ್ರಾಮಿಕ ರೀತಿಯಲ್ಲಿ.

Contain' (ಕಂಟೇನ್) vt. have within, include, restrain. ಸೇರಿರು, ಹಿಡಿ, ಅಂತರ್ಗತಮಾಡಿಕೊ, ಅಡಿಗಿಸಿಕೊ, ತಡೆದುಕೊ, ಒಳಗೊಂಡಿರು, ನಿಗ್ರಹಿಸು.

Containable (ಕಂಟೇನೆಬಲ್) a. that may be inclnded or comprised. ಒಳಗೊಳ್ಳುವ, ಸಮಾವಿಷ್ಟವಾಗುವ.

Contam'inate (ಕಂಟಾಮಿನೇಟ್) vt. pollute, corrupt, infect. ಕೊಳೆಮಾಡು, ಅಪವಿತ್ರಗೊಳಿಸು ಅಶುಚಿಗೊಳಿಸು, ಕಳಂಕಿಸು, ಕಲುಷಿತಮಾಡು, ತೃಣೀಕರಿಸು.

Contemn' (ಕಂಟೆಮ್) vt. scorn, despise. ತಾತ್ಸಾರಮಾಡು, ನಿಕೃಷ್ಟವಾಗಿ ಕಾಣು, ಧಿಕ್ಕರಿಸು, ಕಡೆಗಣಿಸು, ಅಲಕ್ಷ್ಯಮಾಡು, ತುಚ್ಛೀಕರಿಸು.

Con'template (ಕಾಂಟೆಮ್‌ಪ್ಲೇಟ್) vt. survey steadily in mind, have in view. ಅವಲೋಕಿಸು, ಚಿಂತಿಸು, ನಿರೀಕ್ಷಿಸು, ಆಲೋಚಿಸು, ಧ್ಯಾನಿಸು, ಉದ್ದೇಶಿಸು.

Contempla'tion (ಕಾಂಟೆಮ್‌ಪ್ಲೇಶನ್) a. meditative state, continued thought. ಧ್ಯಾನ, ಸಮಾಧಿ, ಆಲೋಚನೆ, ಚಿಂತನೆ, ಅನುಸಂಧಾನ.

Contemplative (ಕಾಂಟೆಮ್‌ಪ್ಲೇಟಿವ್) a. throughtful, meditating. ಧ್ಯಾನಾಸಕ್ತ, ಚಿಂತನನಿರತ.

Contemporan'eous (ಕಂಟೆಂಪೊರೇನಿಅಸ್) a. living or happening or being at the same time. ಸಮಕಾಲೀನ, ಒಂದೇ ಕಾಲದ, ಏಕಕಾಲಿಕ.

Contemporaneity (ಕಂಟೆಂಪೊರನೀಯಿಟಿ) n. contemporariness. ಸಮಕಾಲೀನತೆ, ಸಮವಯಸ್ಕತೆ.

Contem'porary (ಕಂಟೆಂಪೊರರಿ) a. living at the same period. ಸಮಕಾಲೀನ, ಸಮವಯಸ್ಸಿನ, ಸಮವಯಸ್ಕ, ಸಮಸಾಮಯಿಕ. n. contemporary person or newspaper. ಸಮಕಾಲೀನ ವ್ಯಕ್ತಿ, ಅಥವಾ ವರ್ತಮಾನಪತ್ರಿಕೆ.

Contempt' (ಕಂಟೆಂಪ್ಟ್) n. feeling of scorn, disrespect, disobedience to lawful authority ಅಲಕ್ಷ್ಯ, ಅಸಡ್ಡೆ, ಧಿಕ್ಕಾರ, ತಾತ್ಸಾರ, ಅಪಮಾನ, ಉಲ್ಲಂಘನೆ, ಅತಿಕ್ರಮ.

Contemptible (ಕಂಟೆಂಪ್ಟಿಬ್‌ಲ್) a. despicable. ತುಚ್ಛ, ಅಲ್ಪ, ಹೇಯ, ಕ್ಷುದ್ರ, ನಿಕೃಷ್ಟ, ತಿರಸ್ಕರಣೀಯ.

Contemp'tuous (ಕಂಟೆಂಪ್‌ಟ್ಯುಅಸ್) a. scornful, haughty. ತಿರಸ್ಕರಿಸುವ, ದುರಹಂಭಾವದ, ಗರ್ವಿತ, ದುರಹಂಕಾರದ.

Contend' (ಕಂಟೆಂಡ್) vt. i. strive for, dispute. contest. ಪ್ರಯತ್ನಪಡು, ಹೋರಾಡು, ಹೊಡೆದಾಡು, ಕಾದಾಡು, ಮೇಲಾಡು, ಸ್ಪರ್ಧಿಸು, ಪೈಪೋಟಿಮಾಡು.

Contender (ಕಂಟೆಂಡರ್) n. champion, combatant. ಸ್ಪರ್ಧಿಷ್ಣು.

Content' (ಕಂಟೆಂಟ್) a. satisfied with. ಸಂತುಷ್ಟ, ತೃಪ್ತಿಹೊಂದಿದ. satisfaction, the substance, (plu.) what is contained, table

of contents of books. ತೃಪ್ತಿ, ವಸ್ತು, ತಾತ್ಪರ್ಯ, ಸಾರಾಂಶ, ಪರಿವಿಡಿ, ಪುಸ್ತಕದ ಅನುಕ್ರಮಣಿಕೆ. vt. make content. ತೃಪ್ತಿಪಡಿಸು, ಸಂತೋಷಗೊಳಿಸು, ತಣಿಸು.

Conten'ted (ಕಂಟೆಂಟೆಡ್) a. satisfied. ಸಂತುಷ್ಟ, ತೃಪ್ತನಾದ.

Conten'tion (ಕಂಟೆನ್‌ಶನ್) n. strife, debate. ಜಗಳ, ಹೋರಾಟ, ವ್ಯಾಜ್ಯ, ಕಲಹ, ವಾದವಿವಾದ, ವಾದವಿಷಯ, ವಾದ.

Conten'tious (ಕಂಟೆನ್‌ಶಸ್) a. given to or involving contention. ವಾದಗ್ರಸ್ತ, ಕಲಹಶೀಲ, ತಕರಾರಿನ, ಕಲಹಪ್ರಿಯ, ಜಗಳಗಂಟಿ.

Content'ment (ಕಂಟೆಂಟ್‌ಮೆಂಟ್) n. satisfaction, happiness. ಸಂತುಷ್ಟಿ, ತೃಪ್ತಿ, "ಸಮಾಧಾನ".

Conterminal (ಕಂಟರ್ಮಿನಲ್) a. having the same bounds. ಸಮಾನ ಎಲ್ಲೆಯುಳ್ಳ.

Conterminous (ಕಂಟರ್ಮಿನಸ್) a. having the same bounds, contiguous. ತುದಿಗಳಲ್ಲಿ ಸೇರುವ, ಸಹವ್ಯಾಪಕ.

Contest' (ಕಂಟೆಸ್ಟ್) vt. impugn, controvent, contend or compete for. ಆಕ್ಷೇಪಿಸು, ತಕರಾರುಮಾಡು, ಪ್ರತಿಪಾದಿಸು, ವಿವಾದಮಾಡು, ಸ್ಪರ್ಧಿಸು, ವಿರೋಧಿಸು.

Con'test (ಕಾಂಟೆಸ್ಟ್) n. contending, strife, a competition. ಜಗಳ, ವಾಜ್ಯ, ಹೋರಾಟ, ಚರ್ಚೆ, ಕಲಹ, ವಿವಾದ, ವಾಗ್ಯುದ್ಧ, ಸ್ಪರ್ಧೆ.

Contestable (ಕಂಟೆಸ್ಟೆಬಲ್) a. that may be contested, disputable. ವಿವಾದಾರ್ಹ, ಸ್ಪರ್ಧಿಸಲು ಯೋಗ್ಯವಾದ.

Contestant (ಕಂಟೆಸ್ಟೆಂಟ್) n. person who contests. ಸ್ಪರ್ಧಿ.

Contestation (ಕಂಟೆಸ್ಟೇಷನ್) n. disputation. ಎದುರಿಸುವಿಕೆ.

Context (ಕಾಂಟೆಕ್ಸ್ಟ್) n. what proceeds & follows, word or passage of discourse. ಸನ್ನಿವೇಶ, ಪ್ರಸಂಗ, ಪ್ರಕರಣ, ಪೂರ್ವೋತ್ತರ ಸಂದರ್ಭ, ಅರ್ಥಾನ್ವಯ.

Contexture (ಕಂಟೆಕ್ಶ್ಚರ್) n. interweaving of several parts into one texture. ಅನೇಕ ಭಾಗಗಳನ್ನು ಸೇರಿಸಿ ನೆಯ್ಯುವುದು.

Contigu'ity (ಕಾಂಟಿಗ್ಯೂಇಟಿ) n. contact, nearness. ಸಾಮೀಪ್ಯ, ಸಾನ್ನಿಧ್ಯ, ಸಂಪರ್ಕ, ನೆರೆಹೊರೆ, ನಿಕಟತೆ, ಹೊದ್ದು.

Contig'uous (ಕಾಂಟಿಗ್ಯೂಅಸ್) a. adjoining, next to, neighbouring. ಹೊಂದಿದ, ಹತ್ತಿರದ, ತಾಕಿರುವ, ಪಕ್ಕದ.

Con'tinence (ಕಾಂಟಿನೆನ್ಸ್) n. self-restraint in sexual indulgence. ಸಂಯಮ, ಬ್ರಹ್ಮಚರ್ಯ, ಜಿತೇಂದ್ರಿಯತ್ವ.

Con'tinent (ಕಾಂಟಿನೆಂಟ್) a. self-restraining, temperate. ಜಿತೇಂದ್ರಿಯ, ಇಂದ್ರಿಯ ನಿಗ್ರಹಮಾಡಿದ, ಮಿತಭೋಗಿ, ಸಂಯಮಿ. n. a large extent of land not broken by seas. ಭೂಖಂಡ.

Continental (ಕಾಂಟಿನೆಂಟಲ್) a. pertaining to acontinent especially Europe. ಭೂಖಂಡದ, ಯೂರೋಪಿನ.

Contin'gency (ಕಂಟಿನ್‌ಜೆನ್ಸಿ) n. accident, contingent event ಆಕಸ್ಮಿಕ ಪ್ರಸಂಗ, ದೈವಗತಿ, ಅನಿಶ್ಚಯ, ಸಂಭವ, ಸಾದಿಲ್ವಾರು.

Contin'gent (ಕಂಟಿನ್ಜೆಂಟ್) a. accidental, conditional. ಆಕಸ್ಮಿಕವಾದ, ಆಕಸ್ಮಿಕವಾಗಿ ಸಂಭವಿಸುವ, ಸಂಭವಿಸ

ಬಹುದಾದ, ಅನಿಶ್ಚಿತವಾದ. n. quota of troops. ಸೈನ್ಯಭಾಗ.

Contin'ual (ಕಂಟಿನ್ಯುಅಲ್) a. unceasing constant, incessant. ನಿರಂತರವಾದ, ಸಂತತ, ಅಡಿಗಡಿಗೆ ಬರುವ, ಅವಿಚ್ಛಿನ್ನ, ಎಡೆಬಿಡದ.

Contin'uance (ಕಂಟಿನ್ಯೂಅನ್ಸ್) n. duration, continuing in existence ಸ್ಥಿರತೆ, ನೆಲೆ, ನಿಲವು, ಇರುವುದು, ನಿಲುಗಡೆ.

Continuant (ಕಂಟಿನ್ಯೂಎಂಟ್) n. consonant the sound of which can be prolonged. ಅನವರುದ್ಧ ಧ್ವನಿಗಳು.

Continua'tion (ಕಂಟಿನ್ಯೂಏಶನ್) n. unbroken succession, extension. ಮುಂದೆ ಸಾಗುವಿಕೆ, ಅನುಬಂಧ, ಮುಂದುವರಿಸೋಣ.

Continutive (ಕಂಟಿನ್ಯೂಏಟಿವ್) a. tending to continue. ಸಾಗಿಸುವ, ಮುಂದುವರಿಸುವ.

Continuator (ಕಂಟಿನ್ಯುಏಟರ್) n. one who writes a continuation to another's work. ಕೃತಿಯ ಉತ್ತರ ಭಾಗದ ಲೇಖಕ.

Contin'ue (ಕನ್ಟಿನ್ಯೂ) vt. i. go on with, remain in existence, take up again. ಮುಂದುವರಿಸು, ಬಿಡದೆ ನಡೆಸು, ಸಾಗಿಸು, ನೆಲೆ ನಿಲ್ಲು.

Continu'ity (ಕಂಟಿನ್ಯೂಇಟಿ) n. uninterrupted connection. ಎಡೆಬಿಡದಿರುವುದು, ಅವಿಚ್ಛಿನ್ನತೆ, ನಿರಂತರತ್ವ, ಅಖಂಡತೆ.

Continu'ous (ಕಂಟಿನ್ಯೂಅಸ್) a. uninterrupted. ಎಡೆಬಿಡದ, ಅಖಂಡವಾದ, ಕೂಡಿಕೊಂಡಿರುವ, ನಿರಂತರ, ತೆರವಿಲ್ಲದ, ಅವಿಚ್ಛಿನ್ನ.

Contline (ಕಾಂಟ್‌ಲೈನ್) n. interval between strands of rope. ಹಗ್ಗದ ತಿರಿಗೆರೆ.

Con'tort (ಕಂಟಾರ್ಟ್) vt. twist or force out of normal shape. ಹೊಸೆ, ತಿರಿಚು, ಹುರಿಮಾಡು, ಹಿಡಮುರಿ, ವಕ್ರೀಕರಿಸು.

Contortion (ಕಂಟಾರ್ಷನ್) n. twisting, twisted condition of body. ತಿರಿಚು, ತಿರಿಚಿದ ಸ್ಥಿತಿ.

Contortionist (ಕಂಟಾರ್ಷನಿಸ್ಟ್) n. an artist whose work exibits contortions. ಕೃತಿಗಳಲ್ಲಿ ವಕ್ರಾಕಾರವನ್ನು ಚಿತ್ರಿಸುವ ಕಲೆಗಾರ.

Con'tour (ಕಾಂಟೂರ್) n. outline of a figure, object, coast, &c. ಬಾಹ್ಯರೇಖೆ, ಹೊರ ಆಕಾರ, ಭೂಪಟದಲ್ಲಿ ಸಮುದ್ರತೀರ, ಪರ್ವತ ಇತ್ಯಾದಿಗಳನ್ನು ತೋರಿಸುವ ರೇಖೆ.

Contra (ಕಾಂಟ್ರ) prep. in the sense of against. ಪ್ರತಿಯಾಗಿ, ವಿರುದ್ಧವಾಗಿ ಎಂಬ ಅರ್ಥಕೊಡುವ ಉಪಸರ್ಗ.

Con'traband (ಕಾಂಟ್ರಬಾ̆ಂಡ್) n. prohibited traffic, smuggled goods. ಕಾಯಿದೆಗೆ ವಿರೋಧವಾದ ವ್ಯಾಪಾರ, ಕಳ್ಳ ವ್ಯಾಪಾರ, ನಿಷಿದ್ಧ ವ್ಯಾಪಾರ, ಸುಂಕ (ಜಕಾತಿ) ತಪ್ಪಿಸಿ ತಂದ ಸಾಮಾನು.

Contrabandist (ಕಾಂಟ್ರಬಾ̆ಂಡಿಸ್ಟ್) n. a smuggler. ಕಳ್ಳತನದಿಂದ ಸಾಮಾನು ಸಾಗಿಸುವವನು.

Contracep'tion (ಕಾಂಟ್ರಸೆಪ್ಷನ್) n. prevention of conception. ಗರ್ಭಧಾರಣೆ ನಿಲ್ಲಿಸುವುದು, ಗರ್ಭನಿರೋಧಕ.

Contraceptive (ಕಾಂಟ್ರಸೆಪ್ಟಿವ್) n. hinderer of conception. ಗರ್ಭನಿರೋಧಕ, ಬಸಿರುತಡೆ.

Con'tract (ಕಾಂಟ್ರಾ̆ಕ್ಟ್) n. a bond, an agreement on fixed terms. ಕರಾರು, ಗುತ್ತಿಗೆ, ಮುಚ್ಚಳಿಕೆ, ಒಪ್ಪಂದ.

Contract (ಕಂಟ್ರಾ̆ಕ್ಟ್) vt. i. make a contract, catch, (cold, &c.) shorten, shrink. ಕರಾರು ಮಾಡಿಕೊ, ಒಪ್ಪಂದ ಮಾಡಿಕೊ, ಗುತ್ತಿಗೆ ಹಿಡಿ, ತಗ.

ಲಿಸಿಕೊ, ಚಿಕ್ಕದುಮಾಡು, ಕುಗ್ಗು, ಸಂಕುಚಿಸು.

Contractile (ಕಂಟ್ರ್ಯಾಕ್ಟೈಲ್) a. capable of producing contraction. ಸಂಕೋಚನೀಯ.

Contrac'tion (ಕಂಟ್ರ್ಯಾಕ್ಷನ್) n. shrinking, word shortening. ಮುದುರಿಕೊಳ್ಳುವದು, ಕುಗ್ಗುವುದು, ಪದ ಸಂಕೋಚನ.

Contractive (ಕಂಟ್ರ್ಯಾಕ್ಟಿವ್) a. serving to contract. ಸಂಕೋಚನವನ್ನುಂಟುಮಾಡುವ.

Contrac'tor (ಕಂಟ್ರ್ಯಾಕ್ಟರ್) n. maker of a contract, a builder. ಗುತ್ತಿಗೆ ಹಿಡಿಯುವವನು, ಗುತ್ತಿಗೆಗಾರ, ಮನೆ ಮೊದಲಾದ ಕಟ್ಟಡ ಕಟ್ಟುವವ, ಒಪ್ಪಂದಗಾರ.

Contractual (ಕಂಟ್ರ್ಯಾಕ್ಚುಎಲ್) a. pertaining to a contract. ಕರಾರಿಗೆ ಸಂಬಂಧಪಟ್ಟ.

Contradict' (ಕಾಂಟ್ರಡಿಕ್ಟ್) vt. i. oppose by words, deny. ಎದುರು ನುಡಿ, ಪ್ರತಿಯಾಗು, ಹೇಳು, ನಿಷೇಧಿಸು, ಅಲ್ಲವೆನ್ನು, ವಿರೋಧಿಸು.

Contradic'tion (ಕಾಂಟ್ರಡಿಕ್ಷನ್) n. denial, direct opposition, inconsistency. ಖಂಡನೆ, ವಿರೋಧೋಕ್ತಿ, ಎದುರುತ್ತರ, ಪ್ರತ್ಯಕ್ಷ ವಿರೋಧ, ಅಸಮಂಜಸ, ಪ್ರತಿಹೇಳುವುದು, ಅಸಂಗತ.

Contradic'tory (ಕಾಂಟ್ರಡಿಕ್ಟರಿ) a conflicting, inconsistent. ವಿರುದ್ಧ, ಅಸಂಬದ್ಧವಾದ, ವಿರೋಧಾತ್ಮಕ, ಪರಸ್ಪರ ವಿರೋಧದ.

Contradistinction (ಕಾಂಟ್ರಡಿಸ್ಟಿಂಕ್ಷನ್) n. distinction by opposite qualities. ವೈಲಕ್ಷಣ್ಯ, ವೈದೃಶ್ಯ.

Contradistinguish (ಕಾಂಟ್ರ್ಯಾಡಿಸ್ಟಿಂಗ್ವಿಷ್) vt. to distinguish by opposite qualities. ವಿರೋಧೀಗುಣಗಳಿಂದ ಪ್ರತ್ಯೇಕಗೊಳಿಸು.

Contralto (ಕಂಟ್ರ್ಯಾಲ್ಟೊ) n. singer with lowest female voice. ಮಂದ್ರತಮ ಸ್ವರದಿಂದ ಹಾಡುವ ಗಾಯಕಿ.

Contrapose (ಕಾಂಟ್ರಪೋಜ್) vt. to place over against a thing. ವ್ಯತಿರಿಕ್ತವಾದ ಸ್ಥಿತಿಯಲ್ಲಿಡು.

Contraposition (ಕಾಂಟ್ರಪೊಜಿಷನ್) n. contrast, opposite position. ವ್ಯತ್ಯಾಸ, ಅಂತರ, ತಾರತಮ್ಯದ ಸ್ಥಿತಿ.

Contraption (ಕಂಟ್ರ್ಯಾಪ್ಷನ್) n. queer machine. ವಿಲಕ್ಷಣ ಯಂತ್ರ.

Contrapuntal (ಕಾಂಟ್ರಪಂಟಲ್) a. relating to counterpoint. ಸ್ವರಸಂವಾದಕ್ಕೆ ಸಂಬಂಧಿಸಿದ.

Contrariant (ಕಂಟ್ರೇರಿಯಂಟ್) a. opposed to. ವಿರುದ್ಧ.

Contrariety (ಕಾಂಟ್ರರೈಇಟಿ) n. opposition, contrariness. ವೈಪರೀತ್ಯ, ಪರಸ್ಪರ ವಿರೋಧ, ಅಸಂಬದ್ಧತೆ, ಅಸಾಂಗತ್ಯ.

Con'trariwise (ಕಾಂಟ್ರರೀವೈಜ್) adv. on the other hand, in the opposite way. ಅದಲ್ಲದೆ, ಪ್ರತಿಯಾಗಿ, ಹಾಗಲ್ಲದೆ, ಇನ್ನೊಂದು ಪಕ್ಷವಾಗಿ, ವಿರುದ್ಧವಾಗಿ.

Con'trary (ಕಾಂಟ್ರರಿ) a. opposite, contradictory. ಪ್ರತಿಕೂಲವಾದ, ವಿರುದ್ಧವಾದ.

Con'trast (ಕಾಂಟ್ರ್ಯಾಸ್ಟ್) n. exhibition of differences. ಭೇದ, ವ್ಯತ್ಯಾಸ, ಭಿನ್ನಭಾವ.

Contrast' (ಕಂಟ್ರಾಸ್ಟ್) vt: i. put in comparison, subject to or be in contrast. ಪರಸ್ಪರ ವ್ಯತ್ಯಾಸ ತೋರಿಸು, ಭೇದ ಕಾಣಿಸು, ತಾರತಮ್ಯ ನೋಡು, ಭಿನ್ನಭಿನ್ನವಾಗಿ ಕಾಣು.

Contrate (ಕಾಂಟ್ರೇಟ್) adj. having teeth at right angles to a wheel's plane. ಚಕ್ರದ ಕ್ಷೇತ್ರಕ್ಕೆ ಲಂಬವಾಗಿ ಹಲ್ಲುಗಳುಳ್ಳ.

Contravene' (ಕಾಂಟ್ರವೀನ್) vt. oppose, obstruct, conflict with, infringe. ಎದುರಿಸು, ಅತಿಕ್ರಮಿಸು, ನಿಷೇಧಿಸು, ವಿರೋಧಿಸು, ಅಡ್ಡಿಮಾಡು, ಉಲ್ಲಂಘಿಸು.

Contraven'tion (ಕಾಂಟ್ರವೆನ್ಶನ್) n. opposition, obstruction, infringement. ನಿಷೇಧ, ಆತಂಕ, ಪ್ರತಿಬಂಧ, ಪ್ರತಿವಿರೋಧ, ಅತಿಕ್ರಮ, ಉಲ್ಲಂಘನೆ.

Contrib'ute (ಕಂಟ್ರಿಬ್ಯೂಟ್) vt. i. give to a common stock, bear a part, have share in. ವಂತಿಗೆ ಮಾಡು, ಧನಸಹಾಯಮಾಡು, ಲೇಖನ ಕೊಡು, ನೆರವಾಗು, ಸಹಾಯಕನಾಗು.

Contrib'ution (ಕಾಂಟ್ರಿಬ್ಯೂಶನ್) n. anything given away. ವಂತಿಗೆ, ಚಂದಾ. ಕೊಡುಗೆ, ದತ್ತಾಂಶ, ಸಹಾಯದಾನಾರ್ಥ.

Contrib'utor (ಕಂಟ್ರಿಬ್ಯೂಟರ್) n. one who contributes. ಲೇಖನದಾತ, ಚಂದಾದಾರ, ಸಹಾಯಕ.

Contributory (ಕಾಂಟ್ರಿಬ್ಯೂಟರಿ) a. contributing to the same purpose. ಸಹಾಯಕ.

Con'trite (ಕಾಂಟ್ರೈಟ್) a. repentant, penitent, sorrowing for sin. ಪಶ್ಚಾತ್ತಾಪಿ, ಅನುತಾಪಿ, ನೊಂದುಬೆಂದ.

Contri'tion (ಕಾಂಟ್ರಿಶನ್) n. sorrow for sin, repentance. ಅನುತಾಪ, ಪಶ್ಚಾತ್ತಾಪ, ಎದೆಗುದಿ, ಮರುಕ, ಪರಿತಾಪ.

Contrivable (ಕಂಟ್ರೈವೆಬಲ್) a. that which may be contrived. ನಿರ್ಮಾಣಯೋಗ್ಯ.

Contriv'ance (ಕಂಟ್ರೈವೆನ್ಸ್) n. scheme, design, artifice ಯೋಜನೆ, ರಚನೆ, ಸಾಧನ, ತಂತ್ರ, ಸಂಚು, ಕಲ್ಪನಾಸಾಮರ್ಥ್ಯ, ಉಪಾಯ, ಯುಕ್ತಿ.

Contrive' (ಕಂಟ್ರೈವ್) vt. i. invent, devise, scheme, plan. ಕಲ್ಪಿಸು, ರಚಿಸು, ಕಲ್ಪನೆಮಾಡು, ಸಂಚುಮಾಡು, ನಿರ್ವಹಿಸು, ಉಪಾಯ ಯೋಚಿಸ ಸಾಧಿಸು.

Contriver (ಕಂಟ್ರೈವರ್) n. scheme inventor. ನಿರ್ಮಾತೃ, ಆವಿಷ್ಕಾರಕ.

Control (ಕಂಟ್ರೋಲ್) n. restrai command. ಹಿಡಿತ, ನಿರ್ಬಂ ಹತೋಟಿ, ಅಧಿಕಾರ, ನಿರೋಧ, ಆಜ್ಞೆ vt. govern, restrain, chec ಹತೋಟಿಯಲ್ಲಿಟ್ಟುಕೊ, ಆಳು, ಮೇ ಚಾರಣೆ ಮಾಡು.

Controllable (ಕಂಟ್ರೋಲೆಬಲ್) subject to control. ಅಂಕೆಯಲ್ಲಿಟ್ಟ ಬಹುದಾದ.

Controll'er (ಕಂಟ್ರೋಲರ್) n. o that governs. ಸರಕಾರದ ಹಣದ ನಿಯ ಮಕ, ವೆಚ್ಚಗಳ ಮೇಲ್ವಿಚಾರಣೆ ಮಾಡ ಅಧಿಕಾರಿ.

Controver'sial (ಕಂಟ್ರೋವರ್ಶಲ್) of controversy, disputabl ಚರ್ಚಾಸ್ಪದ, ವಾದಗ್ರಸ್ತ, ವಾದಾಸ್ಪದ.

Con'troversy (ಕಂಟ್ರೋವರ್ಸಿ) disputation, esp. argument conducted in the press. ವಾದವಿವಾ ಚರ್ಚೆ, ವಾಗ್ಯುದ್ಧ, ವಾಗ್ವಾದ.

Controvert' (ಕಾಂಟ್ರೋವರ್ಟ್) v oppose, argue against, refus ವಾದಮಾಡು, ಪ್ರತಿಹೇಳು, ಖಂಡಿಸ ನಿರಾಕರಿಸು.

Contumacious (ಕಾಂಟ್ಯುಮೇಷಸ್). disobedient. ಅವಿಧೇಯ.

Con'tumacy (ಕಾಂಟ್ಯುಮಸಿ) stubbornness, obstinate, disob dience. ದುರಾಗ್ರಹ, ಹಟಮಾರಿತನ, ಅ ನಯ, ಉಲ್ಲಂಘನೆ, ಅವಿಧೇಯತೆ.

Contumelious (ಕಾಂಟ್ಯುಮಿಲಿಯಸ a. insolent. ನಿಂದಕವಾದ.

Con'tumely (ಕಾಂಟ್ಯೂಮಲಿ) insulting language or trea ment ನಿಷ್ಠುರವಾದ ಮಾತು, ತಿರಸ್ಕಾ ನಡತೆ, ತಿರಸ್ಕಾರ, ಧಿಕ್ಕಾರ, ತಾತ್ಸಾರ, ಬಿ ನುಡಿ, ಅವಹೇಳನ, ಅವಮಾನ.

Contund (ಕಾಂಟನ್ಡ್) vt. crush, bruise. ಜಜ್ಜು, ಗುದ್ದು.

Contuse' (ಕಂಟ್ಯೂಝ್) vt. bruise, crush. ಜಜ್ಜು, ಗುದ್ದು, ನಜ್ಜುಗುಜ್ಜು ಮಾಡು.

Contu'sion (ಕಂಟ್ಯೂಝನ್) n. bruise. ಜಜ್ಜಿದಗಾಯ, ಮೂಗು ಪೆಟ್ಟು, ಬಾಸುಂಡೆ.

Conun'drum (ಕನನ್‌ಡ್ರಮ್) n. any puzzling question, riddle. ಸಮಸ್ಯೆ, ಒಗಟುಗಳು, ಗೂಢಪ್ರಶ್ನೆ, ಗುಪ್ತಪ್ರಶ್ನೆ.

Convalesce' (ಕಾನ್ವಲೆಸ್) vt. regain health. ಮೈತುಂಬು, ಆರೋಗ್ಯಹೊಂದು, ಹುಷಾರಾಗು, ಚೇತರಿಸಿಕೊ, ವಾಸಿಯಾಗು.

Convales'cence (ಕಾನ್ವಲೆಸ್ಸನ್ಸ್) n. gradual recovery of health and strength. ರೋಗವಿಮುಕ್ತನಾಗಿ ಎದ್ದು ಓಡಾಡುವಿಕೆ, ಚೇತರಿಕೆ, ಆರೋಗ್ಯಪಡೆಯುವುದು.

Convales'cent (ಕಾನ್ವಲೆಸೆಂಟ್) a. recovering from sickness. ರೋಗದಿಂದ ಮುಕ್ತನಾಗಿ ಆರೋಗ್ಯ ಹೊಂದುತ್ತಿರುವ, ಗುಣಹೊಂದುತ್ತಿರುವ, ಚೇತರಿಸುತ್ತಿರುವ.

Convection (ಕನ್ವೆಕ್ಷನ್) n. transportation. ಪ್ರಚಲನ.

Convenance (ಕನ್ವೀನೆನ್ಸ್) n. conventional propriety. ಸಾಂಪ್ರದಾಯಿಕ ಶಿಷ್ಟವರ್ತನ.

Convene (ಕನ್ವೀನ್) vt. i. summon, call together, assemble. ಆಹ್ವಾನಿಸು, ಬರಮಾಡು, ಒಟ್ಟುಗೂಡಿಸು, ಸಭೆಸೇರು, ಕರೆಕೊಡು, ನೆರೆ.

Conven'er (ಕನ್ವೀನರ್) n. one who calls a meeting. ಸಭೆಸೇರಿಸುವವನು.

Conve'nience (ಕನ್ವೀನಿಎನ್ಸ್) n. what suits one, an advantage (plu) comforts. ಅನುಕೂಲ, ಉಪಯೋಗಸಾಧನ, ಅನುವು, ಸೌಕರ್ಯ.

Conven'ient (ಕನ್ವೀನಿಯಂಟ್) n. suitable, well adopted, opportune. ಪ್ರಶಸ್ತವಾದ, ಉಪಯುಕ್ತ, ಅನುಕೂಲವಾದ, ಸೌಕರ್ಯವುಳ್ಳ, ಅನುಗುಣವಾದ, ಅಚ್ಚುಕಟ್ಟಾದ.

Con'vent (ಕಾನ್ವೆಂಟ್) n. religious community esp. of women, a nunnery. ಸನ್ಯಾಸಿನಿಯರ ಮಠ, ಸಂನ್ಯಾಸಿನಿಯರ ಆಶ್ರಮ.

Conventicle (ಕನ್ವೆಂಟಿಕಲ್) n. secret religious meeting. ರಹಸ್ಯವಾಗಿ ನಡೆಸುವ ಮತಸಭೆ.

Conven'tion (ಕನ್ವೆನ್ಶನ್) n. assembly for transaction of business, an agreement, custom. ಸಭೆ, ಸಂಘ, ಒಡಂಬಡಿಕೆ, ಆಚಾರ, ಒಪ್ಪಂದ, ಪದ್ಧತಿ, ನಡವಳಿಕೆ, ರೂಢಿ.

Conven'tional (ಕನ್ವೆನ್ಶನಲ್) n. customary; depending upon custom. ವಾಡಿಕೆಯಾದ, ರಿವಾಜಿನ, ಸಾಂಪ್ರದಾಯಿಕ, ನಡೆದುಬಂದ.

Conventionally (ಕನ್ವೆನ್ಷನಲಿ) adv. by tacit agreement. ಸಾಂಪ್ರದಾಯಿಕವಾಗಿ.

Conventionary (ಕನ್ವೆನ್ಷನರಿ) a. acting according to convention. ಲೋಕರೀತಿಗೆ ಅನುಸಾರವಾಗಿ ವರ್ತಿಸುವ.

Conventual (ಕನ್ವೆಂಟ್ಯುಅಲ್) a. pertaining to a convent. ಸಂನಾಸಿನೀ ಮಠದ.

Converge (ಕನ್ವರ್ಜ್) vt. i. tend to one point. ಒಂದು ಬಿಂದುವಿನಲ್ಲಿ ಸೇರಿಹೋಗು, ನಡುವೆಕೂಡು, ಒಮ್ಮುಖವಾಗು.

Convers'able (ಕನ್ವರ್ಸಬಲ್) a. disposed to converse, sociable. ಸಂಭಾಷಣೋತ್ಸುಕ, ಸಂಭಾಷಿಸಬಹುದಾದ, ಸ್ನೇಹಪರನಾದ, ಬಳಕೆಮಾಡಿಕೊಳ್ಳುವ, ಸರಸದ.

Conversance (ಕಾನ್ವರ್ಸನ್ಸ್) n. acquaintance. ಪರಿಚಯ.

Con'versant (ಕಾನ್ವರ್ಸಂಟ್) n. familiar with, versed in. ಪರಿಚಿತ, ಸಲಿಗೆಯ,

ಪರಿಚಯವುಳ್ಳ, ರೂಢಿಯಾದ, ಪ್ರವೀಣ, ಪರಿಶ್ರಮವುಳ್ಳ.

Conversa'tion (ಕನ್ವರ್ಸೇಶನ್) n. familiar discourse, intercourse. ಸಂಭಾಷಣೆ, ಮಾತುಕತೆ, ಸಲಿಗೆ, ಸಂಭೋಗ, ಇಷ್ಟಾಲಾಪ.

Converse' (ಕನ್ವರ್ಸ್) vt. hold converse, commune. ಸಂಭಾಷಣೆ ಮಾಡು, ಮಾತನಾಡು; ಬಳಕೆಮಾಡು.

Con'verse (ಕಾನ್ವರ್ಸ್) n. familiar intercourse, conversation. ಹೊಕ್ಕು ಬಳಕೆ, ಸಂಭಾಷಣೆ. a. turned upside down, put the other way. ವಿರುದ್ಧ, ವ್ಯತಿರಿಕ್ತವಾದ, ಹಿಂದುಮುಂದು, ಉಪರಾಟಿ

Conversely (ಕನ್ವರ್ಸ್ಲೀ) in a converse order. ವಿಪರ್ಯಯವಾಗಿ, ವ್ಯತಿಕ್ರಮವಾಗಿ.

Conver'sion (ಕನ್ವರ್ಶನ್) n. change from one state into another. ರೂಪಾಂತರ, ಪರಿವರ್ತನೆ, ಮತಾಂತರ, ಮಾರ್ಪಾಟು.

Convert' (ಕನ್ವರ್ಟ್) vt. alter one thing into anotther, bring over to another opinion, turn from irreligious to holy life. ಪರಿವರ್ತಿಸು, ಮಾರ್ಪಡಿಸು, ಮತಾಂತರಮಾಡು, ಸನ್ಮಾರ್ಗಕ್ಕೆತರು.

Convert (ಕನ್ವರ್ಟ್) n. one who has changed his religion. ಪರಮತಾಂತರ ಹೊಂದಿದವನು, ಮತಾವಲಂಬಿ, ಪರಿವರ್ತಿತ.

Convertible (ಕನ್ವರ್ಟಿಬಲ್) adj. that which can be converted. ಪರಿವರ್ತನ ಸಾಧ್ಯ.

Con'vex (ಕಾನ್ವೆಕ್ಸ್) a. of exterior curvature. ಬಾಹ್ಯಗೋಳದ, ಉಬ್ಬಿದ, ಹೊರವಾಗುಳ್ಳ, ಹೊರಉಬ್ಬಿದ.



Convex

Convey' (ಕನ್ವೇ) vt. carry, transmit, transfer, make known, seem to mean, ಸಾಗಿಸು, ತಲುಪಿಸು, ಮುಟ್ಟಿಸು, ವರ್ಗಕೊಡು, ತಿಳಿಯಪಡಿಸು, ಸ್ಥಳಾಂತರಮಾಡು, ಅರ್ಥಸೂಚಿಸು.

Convey'ance (ಕನ್ವೇಅನ್ಸ್) n. carriage, deed conveying property. ವಾಹನ, ಗಾಡಿ, ಸಾಗಣೆ, ರವಾನೆ, ಬಂಡಿ, ವರ್ಗಪತ್ರ, ಯಾದಿಪತ್ರ.

Convicinity (ಕರ್ವಿಸಿನಿಟಿ) n. neighbourhood. ನೆರೆಹೊರೆ.

Conv'ict (ಕನ್ವಿಕ್ಟ್) vi. prove guilty. ತಪ್ಪು ಸಾಬೀತು ಮಾಡು, ತಪ್ಪಿತಸ್ಥನೆಂದು ನಿರ್ಣಯಿಸು, ಅಪರಾಧ ಹೊರಿಸು, ಆಪಾದಿಸು.

Con'vict (ಕಾನ್ವಿಕ್ಟ್) n. sentenced criminal. ಬಂದೀವಾನ ಶಿಕ್ಷೆಯನ್ನು ಅನುಭವಿಸುತ್ತಿರುವ ಕೈದಿ, ಅಪರಾಧಿ, ದೋಷಿ.

Convic'tion (ಕನ್ವಿಕ್ಷನ್) n. verdict of "guilty," strong belief. ತಪ್ಪು ಸಾಬೀತು ಮಾಡೋಣ, ಅಪರಾಧ ನಿರ್ಣಯ, ದೃಢ ನಿಶ್ಚಯ, ಆಪಾದನೆ, ನಿಶ್ಚಿತಾಭಿಪ್ರಾಯ, ಮನವರಿಕೆ.

Convince' (ಕನ್ವಿನ್ಸ್) vt. satisfy as to truth or error, produce conviction. ಮನಗಾಣಿಸು, ಒಪ್ಪಿಸು, ಮಂದಟ್ಟುಮಾಡಿಕೊಡು, ನಂಬಿಕೆಯುಂಟುಮಾಡು.

Conviv'ial (ಕನ್ವಿವಿಅಲ್) a. festive, social, jovial. "ಮೇಜವಾನಿಕೆಯ" ಭೋಜನ ಸಮಾರಂಭದ, ಹಬ್ಬದ, ಗೆಲುವಿನ ಉತ್ಸವದ, ಉಲ್ಲಾಸದ.

Conviv'alit'y (ಕನ್ವಿವಿಆಲಿಟಿ) n. feast, jovial temper. ಮೇಜವಾನಿ, ಸಂತೋಷ ಸಂಭ್ರಮ, ಉಲ್ಲಾಸಶೀಲತೆ, ಆನಂದ ಸ್ವಭಾವ.

Convoca'tion (ಕಾನ್ವೋಕೇಶನ್) n. convoking meeting. ಸಭೆ, ಪದವೀಧರರ ಸಭೆ, ಪದವೀದಾನ ಸಮಾರಂಭ, ಘಟಿಕೋತ್ಸವ.

Convoke' (ಕನ್ವೋಕ್) vt. call together, summon to an assembly, ಸಭೆ ಕೂಡಿಸು, ಸಭೆಕರೆ, ಕರೆದು ಒಟ್ಟುಗೂಡಿಸು, ನೆರೆಯಿಸು.

Convolute (ಕಾನ್ವೊಲ್ಯುಟ್) adj. rolled together, coiled up. ಸುರುಳಿಸುತ್ತಿಕೊಂಡಿರುವ.

Convolu'tion (ಕಾನ್ವಲ್ಯೂಷನ್) n. coiled state, one turn of a coil or spiral. ಸುರುಳಿ, ನುಲಿಕೆ, ಪದರ, ಸುರುಳಿ ಸುತ್ತಿಕೊಂಡಿರುವುದು, ಮಡಿಕೆ.

Convolve' (ಕನ್ವಾಲ್ವ್) vt. & i. roll or wind together. ಸುರುಳಿಸುತ್ತು, ಸುರುಳಿಸುತ್ತಿಕೊ.

Convoy' (ಕನ್ವಾಯ್) vt. accompany for protection. ಮೈಗಾವಲಿಗಾಗಿ ಹೋಗು, ರಕ್ಷಣೆಗಾಗಿ ಜೊತೆಯಲ್ಲಿ ಹೋಗು. vt. escort(ship, &c.) for defence. (ಹಡಗು ಮೊದಲಾದವುಗಳ) ರಕ್ಷಣೆಗಾಗಿ ಹಿಂದೆ ಅಥವಾ ಜತೆಯಲ್ಲಿ ಹೋಗು.

Convoy' (ಕಾನ್ವಾಯ್) n. an escort, convoyed party. ಮೈಗಾವಲು, ರಕ್ಷಣೆ, ರಕ್ಷಣಾದಳ, ಅಂಗರಕ್ಷೆ, ಅಂಗರಕ್ಷಕ ಪಡೆ.

Convulse (ಕನ್ವಲ್ಸ್) vt. affect with convulsion or convulsions ಒದ್ದಾಡಿಸು, ಕಲಕು, ಜೋರಾಗಿ ಅಲ್ಲಾಡಿಸು, ನಡುಗಿಸು, ಅಲ್ಲಾಡಿಸು.

Convul'sion (ಕನ್ವಲ್ಶನ್)n. violent muscular spasms (usu. p.). uncontrollable laughter. ಸೆಳೆತ, ಅಪಸ್ಮಾರ, ಎಳವುವಾಯು, ಸನ್ನಿ, ಬಾಲಗ್ರಹ, ಹುಚ್ಚುಹುಚ್ಚಾಗಿ ನಗುವುದು.

Co'ny (ಕೋನಿ) n. rabbit. ಮೊಲ.

Coo (ಕೂ) n. soft, murmuring sound. ಗುಬ್ಬಳಿಕೆ, ಮೆಲುವಾದ ಧ್ವನಿ, ಗೂಗೂ ಧ್ವನಿ. vt. i. talk amorously or softly. ಚಕ್ಕೈಸು, ಮುದ್ದಿಸು, ಲಲ್ಲೈಸು, ಪ್ರೇಮ ತೋರು, ಲಾಲಿಸು.

Cook(ಕುಕ್) vt. i. prepare food by heat, undergo cooking, (colloq) falsify (accounts), &c., ಅಡಿಗೆಯಾಗು, ಸುಳ್ಳುಲೆಕ್ಕತಯಾರಿಸು, ಅಡಿಗೆಮಾಡು, ಬೇಯಿಸು, ರಚಿಸು. n. one whose business is to cook. ಅಡಿಗೆಭಟ್ಟ, ಬಾಣಸಿಗ, ಅಡಿಗೆಯವನು.

Cook'er (ಕುಕರ್) n. cooking apparatus. ಅಡಿಗೆಮಾಡುವ ಪಾತ್ರೆ, "ಕುಕರ್" ಅಡಿಗೆಯಪಾತ್ರೆ.

Cook'ery (ಕುಕರಿ) n. art of cooking. ಪಾಕಶಾಸ್ತ್ರ, ಅಡಿಗೆಯ ಕೆಲಸ.

Cook-house (ಕುಕ್-ಹೌಸ್) n. an outdoor kitchen. ಮನೆಯಹೊರಗಿನ ಪಾಕಶಾಲೆ.

Cookie (ಕುಕಿ)n. small cake. ಸಣ್ಣ ಸೀರೊಟ್ಟಿ.

Cooky (ಕುಕಿ)n. female cook. ಅಡಿಗೆಯವಳು.

Cool (ಕೂಲ್) a. cold to a slight degree, unperturbed, self-possessed, lacking zeal or cordiality. ತಂಪಾದ, ಶಾಂತವಾದ, ತಣ್ಣನೆಯ, ಉದಾಸೀನ, ದುಡುಕದ, ನಿರುತ್ಸಾಹದ, ಅನಾದರದ vt. i. make or become cool. ತಣ್ಣಗಾಗು, ತಣ್ಣಗೆಮಾಡು, ತಂಪುಮಾಡು, ತಂಪಾಗು, ಆರಿಸು.

Cool'er (ಕೂಲರ್) n. vessel for cooling. ತಂಪುಮಾಡುವ (ಆರಿಸುವ) ಪಾತ್ರೆ.

Coolie (ಕೂಲಿ) n. hired labourer. ಕೂಲಿಮಾಡುವವನು, ಆಳು, ಕೂಲಿಗಾರ.

Coomb, combe (ಕೂಮ್) n. short valley. ಸಣ್ಣ ಕಣಿವೆ.

Coon (ಕೂನ್)n. sly fellow, negro. ಠಕ್ಕನವ, ನೀಗ್ರೋ.

Coop(ಕೂಪ್) n. a cage or pen for confining fowls. ಕೋಳಿಗೂಡು.

Coop'er (ಕೂಪರ್)n. maker or repairer or casks, pails, &c. ಪೀಪಾಯಿ (ಪೀಪ) ಮಾಡುವವನು.

Co-operant(ಕೊ-ಆಪರೇಟ್)n. & a. co-operating, one who co-operates. ಸೇರಿ ಕೆಲಸ ಮಾಡುವ, ಸಹಕಾರಿ.

Co-operate (ಕೋಆಪರೇಟ್) vi. work together. ಒಂದಾಗೂಡಿ ಕೆಲಸ ಮಾಡು, ಸಹಕರಿಸು.

Co-opera'tion (ಕೋ-ಆಪರೇಶನ್) n. joint operation, joint labour. ಸಹಪ್ರಯತ್ನ, ಸಹಕಾರ.

Co-opt' (ಕೊ-ಆಪ್ಟ್) vt. elect as colleague or member (ಕೆಲಸಕ್ಕೆ ಜೊತೆಗೆ) ಆರಿಸು, ಸೇರಿಸಿಕೊ, ಚುನಾಯಿಸು.

Co-ord'inate (ಕೊ-ಆರ್ಡಿನೇಟ್) a. equal in status. ಸಮಸ್ಥಾನವುಳ್ಳ, ಸುಸಂಘಟಿತವಾದ, ಅನ್ಯೋನ್ಯ ಸಂಬಂಧವುಳ್ಳ, ಸಮಾನ ದರ್ಜೆಯ. n. (plu.) set of distance from known points or lines of planes sufficing in combination to fix thing's position. ಭುಜಗಳು, ಸ್ಥಾನನಿರ್ದೇಶಕಗಳು.

Coot (ಕೂಟ್) n. kind of water-bird. ಒಂದು ಜಾತಿಯ ನೀರು ಹಕ್ಕಿ, ನೀರುಕೋಳಿ.

Cop (ಕಾಪ್) n. a ball or thread. ಕದರಿನಮೇಲೆ ಸುತ್ತಿರುವ ದಾರದ ಉಂಡೆ.

Cop (ಕಾಪ್) n (slang) a policeman. ಪೋಲೀಸಿನವನು.

Copal (ಕೋಪಲ್) n kinds of resin used for varnish. ಒಂದು ಬಗೆಯ ಮರದ ಎಣ್ಣೆ, ಧೂಪ.

Coparcenary (ಕೋಪಾರ್ಸಿನೆರಿ) n. joint partnership. ಸಹಭಾಗಿತ್ವ, ಸಹಸ್ವಾಮ್ಯ.

Copartner (ಕೋಪಾರ್ಟ್ನರ್) n. joint partner. ಪಾಲುಗಾರ, ಸಹಭಾಗಿ, ಹಿಸ್ಸೆದಾರ, ಪಾಲುದಾರ.

Copartnership (ಕೋಪಾರ್ಟ್ನರ್‌ಶಿಪ್) n. association with others in something. ಪಾಲುಗಾರಿಕೆ.

Cope (ಕೋಪ್) n. a covering, a cap or hood (fig.) vault (of heaven), coping of wall, &c. ಕ್ರೈಸ್ತ ಪುರೋಹಿತನ ದೊಡ್ಡ ಕವಚ, ಟೋಪಿ, ಕುಲಾವಿ, (ಆಕಾಶದ ಕಮಾನು) ಗೋಡೆಯ ಮೇಲಿನ ಕಟ್ಟಡ.

Cope (ಕೋಪ್) vi. contend with, oppose, keep level with (task &c) ಸ್ಪರ್ಧಿಸು, ಮೇಲಾಡು, ಹೋರಾಡು, ಸರಿಸಮನಾಗಿ ಹೋರಾಡು.

Coper (ಕೋಪರ್) n. a horsedealer. ಕುದುರೆಯ ವ್ಯಾಪಾರಿ.

Cop-house (ಕಾಪ್-ಹೌಸ್) n. a house where tools are kept. ಉಪಕರಣಗಳನ್ನು ಇಟ್ಟಿರುವ ಮನೆ.

Copier (ಕಾಪಿಯರ್) n. one who copies. ನಕಲುಮಾಡುವವನು.

Cop'ing (ಕೋಪಿಂಗ್) n. top course of masonry of a wall. ತಲೆ ಕಟ್ಟಡ, ಕುಂಬೆ, ಪ್ರಾಕಾರದ ಗೋಡೆಯ ಶಿಖರ.

Cop'ious (ಕೋಪಿಅಸ್) a. plentiful, overflowing. ಹೇರಳ, ಸಮೃದ್ಧಿಯಾದ, ತುಂಬಿತುಳುಕುವ, ಧಾರಾಳ.

Copopsia (ಕೋಪೋಪ್ಸಿಯ) n. fatigue of sight. ದೃಷ್ಟಿಯ ಆಯಾಸ.

Copp'er (ಕಾಪರ್) n. metal of brownish pink colour, bronze coin, washing cauldron ತಾಮ್ರ, ತಾಮ್ರದಪಾತ್ರೆ, ತಾಮ್ರದ ಕುದಿಪಾತ್ರೆ, ಕಂಚಿಗೆ, ತಾಮ್ರದ ನಾಣ್ಯ.

Copp'eras (ಕಾಪರ್ಸ್) n. green vitrol. sulphate of iron. ಹಿರೇಕಸ, ಅನ್ನಭೇದಿ.

Copp'erplate (ಕಾಪರ್‌ಪ್ಲೇಟ್) n- plate of polished copper on which something has been engraved. ತಾಮ್ರದ ತಗಡು, ತಾಮ್ರ ಶಾಸನ.

Copp'ersmith (ಕಾಪರ್‌ಸ್ಮಿತ್) n. smith who works in copper. ಕಂಚುಗಾರ, ತಾಮ್ರಕಾರ, ತಾಮ್ರದ ಕೆಲಸ ಮಾಡುವವನು, ತಾಮ್ರಸಾಲೆ.

Copp'ersulphate (ಕಾಪರ್‌ಸಲ್ಫೇಟ್) n. blue vitriol, sulphate of copper. ತುತ್ತ, ಮೈಲುತುತ್ತ.

Copp'ice, copse (ಕಾಪಿಸ್, ಕಾಪ್ಸ್) n. thicket. ಪೊದೆ, ಕಂಟಿಗಳುಳ್ಳ ಅಡವಿ, ಕುರುಚಲುಕಾಡು.

Copra (ಕೋಪ್ರಾ) n. dried kernel of coconut. ಒಣಗಿದ ಕೊಬ್ಬರಿ.

Coprology (ಕಾಪ್ರಾಲೊಜಿ) n. filth in literature. ಸಾಹಿತ್ಯ ಮುಂತಾದುವುಗಳಲ್ಲಿ ಅಶ್ಲೀಲ ವಿಷಯಗಳ ಪ್ರಸ್ತಾಪ.

Copt (ಕಾಪ್ಟ್) n. christian descendent of the ancient Egyptians. ಪ್ರಾಚೀನ ಈಜಿಪ್ಟಿನವರ ಕ್ರೈಸ್ತ ವಂಶಜರು.

Cop'ula (ಕಾಪ್ಯೂಲಾ) n. that which joins together, link. ಬಂಧನ, ಕಟ್ಟು, ಸಂಯೋಜಕಪದ, ಕೂಡಿಸುವ ಪದ.

Cop'ulate (ಕಾಪ್ಯುಲೇಟ್) vt. unite sexually. ಸಂಭೋಗಿಸು, ಭೋಗಿಸು, ಕ್ರೀಡಿಸು.

Cop'ulative(ಕಾಪ್ಯುಲೇಟಿವ್)a. uniting, (gram) n. conjunction that unites ideas as well as words. ಸಂಯೋಜಕ, ಕೂಡಿಸುವ, ಉಭಯಾನ್ವಯ, ಸಮುಚ್ಚಯಾರ್ಥಕ.

Cop'y (ಕಾಪಿ) n. an imitation, a transcript, a specimen of penmanship to be imitated ಅನುಕರಣ, ನಕಲು, ಮಾದರಿ, ಪ್ರತಿ, ಪಡಿಯಚ್ಚು, ಮೇಲ್ಪಂಕ್ತಿ, ಹಸ್ತಪ್ರತಿ. imitate, transcribe. ಅನುಸರಿಸು, ನಕಲುಮಾಡು, ಪ್ರತಿಯೆತ್ತು, ಕದ್ದುನೋಡಿ ಬರೆ.

Cop'ybook (ಕಾಪಿಬುಕ್) n. book in which copies are printed for imitation. ಕಾಪಿಪುಸ್ತಕ, ಕಾಪಿವಹಿ, ಮೇಲ್ಪಂಕ್ತಿ ಪುಸ್ತಕ.

Copyhold (ಕಾಪಿಹೋಲ್ಡ್) n. a tenure by copy. ಜಮೀನಿನ ಹಿಡುವಳಿ, ಅವರ ಪಟ್ಟೆ

Cop'yist (ಕಾಪಿಇಸ್ಟ್)n. transcriber. ನಕಲು ಬರೆಯುವವನು.

Cop'yright (ಕಾಪಿರೈಟ್) n. sole right to reproduce. ಗ್ರಂಥಕರ್ತನಿಗೆ ತನ್ನ ಕೃತಿಯಲ್ಲಿರುವ ಹಕ್ಕು vt. secure copyrights of. ಗ್ರಂಥಕಾರನ ಹಕ್ಕನ್ನು ಭದ್ರಪಡಿಸು.

Coquet'(ಕೊಕೆಟ್)vi. excite admiration or love, trifle with in love. ಹಾವಭಾವತೋರಿಸು, ಸರಸವಾಡು, ಮೋಹನಮಾಡು, ಆಲಿಂಗಿಸು, ಒಲವು ತೋರಿಸು, ಅಪ್ಪಿಕೊಳ್ಳು.

Coquetry (ಕೊಕೆಟ್ರಿ) n. trifling in love. ಒಯ್ಯಾರ, ಒಲವು, ಕುಲುಕು, ವಿಭ್ರಮ, ಬೆಡಗು,

Coquette' (ಕೊಕೆಟ್) n. a flirt. ಒಯ್ಯಾರಿ, ಮೋಹಿನಿ, ಬೆಡಗುಗಾತಿ, ಒಲವುಗಾರ್ತಿ, ವಿಲಾಸಗಾರ್ತಿ.

Coquett'ish(ಕೊಕೆಟಿಶ್)a. befitting a coquette. ಒಯ್ಯಾರದ, ಬೆಡಗಿನ.

Coracle (ಕಾರಕಲ್) n. a boat made of watertight material. ನೀರಿಳಿಯದ ಪದಾರ್ಥದಿಂದ ಮಾಡಿದ ದೋಣಿ.

Disapprove' (ಡಿಸ್‌ಅಪ್ರೂವ್) vt. i. have or express an unfavourable opinion of. ಸಮ್ಮತಿಸದಿರು, ಮೆಚ್ಚದಿರು, ಒಪ್ಪದಿರು, ಅಸಮ್ಮತಿಸೂಚಿಸು.

Disarm (ಡಿಸ್‌ಆರ್ಮ್) vt. deprive of weapons, pacify hostility ನಿರಾಯುಧನನ್ನಾಗಿಮಾಡು, ನಿಶ್ಶಸ್ತ್ರವಾಗಿ ಮಾಡು, ಅಡಗಿಸು, ದ್ವೇಷನಿವಾರಣೆಮಾಡು.

Disarm'ament (ಡಿಸ್‌ಆರ್ಮಮೆಂಟ್) n. reduction of warlike establishment. ಯುದ್ಧಸಾಮಗ್ರಿಗಳನ್ನು ಕಡಮೆ ಮಾಡೋಣ, ನಿರಾಯುಧ ಮಾಡೋಣ, ಶಸ್ತ್ರತ್ಯಾಗ.

Disarrange (ಡಿಸ್‌ಅರೇಂಜ್) vt. put to disorder. ಕ್ರಮಗೆಡಿಸು.

Disarray (ಡಿಸ್ ಅರೇ) n. want of order, disorder. ಕ್ರಮವಿಲ್ಲದಿರುವುದು.

Disassociate (ಡಿಸ್‌ಅಸೋಸಿಏಟ್) vt. disconnect thing associated, disunite.. ಸಂಬಂಧ ಕಡಿದುಹಾಕು, ವಿಸಂಯೋಜಿಸು.

Disas'ter (ಡಿಝಾ [ಜಾ] ಸ್ಟರ್) n. calamity, sudden or great misfortune. ಆಪತ್ತು, ಗ್ರಹಚಾರ, ಕೇಡು, ವಿಪತ್ತು, ದುರದೃಷ್ಟ.

Disas'trous (ಡಿಝಾಸ್ಟ್ರಸ್) a. calamitous, unlucky. ಅಶುಭ, ಗ್ರಹಚಾರದ, ವಿಪತ್ಕಾರಕ, ಘೋರವಾದ, ದುರದೃಷ್ಟದ.

Disattach (ಡಿಸ್‌ಅಟಾಚ್) vt. undo what is attached. ಕಟ್ಟಿರುವುದನ್ನು ಬಿಚ್ಚುವುದು.

Disavow (ಡಿಸ್ ಅವೌ) vt. disown, repudiate. ಗೊತ್ತಿಲ್ಲವೆನ್ನು, ನಿರಾಕರಿಸು, ಸಮ್ಮತಿಸದಿರು, ಒಪ್ಪದಿರು, ಅಲ್ಲಗಳೆ. n. disavowal.

Disband' ಡಿಸ್‌ಬ್ಯಾನ್ಡ್)vt.i. (troops) disperse, be broken up. ಸೈನ್ಯವನ್ನು ಯುದ್ಧೋದ್ಯಮದಿಂದ ತೊಲಗಿಸು, ಚದರಿಸಿಬಿಡು, ಒಡೆದುಬಿಡು, ಮುರಿದುಬಿಡು.

Disbar (ಡಿಸ್‌ಬಾರ್) vt. expel a lawyer from the bar. ವಕೀಲನು ತನ್ನ ವೃತ್ತಿಯನ್ನು ಮಾಡದಂತೆ ತಡೆಗಟ್ಟು.

Disbelief (ಡಿಸ್‌ಬಿಲೀಫ್) n. refusal to believe, want of belief. ಅವಿಶ್ವಾಸ, ನಂಬಿಕೆಯಿಲ್ಲದಿರೋಣ.

Disbelieve' (ಡಿಸ್‌ಬಿಲೀವ್) vt. i. discredit, be a sceptic. ನಂಬದಿರು, ಸಂದೇಹಿಸು, ನಂಬಿಕೆಯಿಲ್ಲದಿರು, ನಾಸ್ತಿಕನಾಗು.

Disbowel(ಡಿಸ್ ಬವೆಲ್) vi. take out the intestines. ಕರುಳುಗಳನ್ನು ಹೊರಗೆ ತೆಗೆ.

Disburd'en(ಡಿಸ್ಬರ್ಡನ್) vt. unload, ease the mind. ಹೊರೆ ಇಳಿಸು, ಭಾರ ಕಳೆ, ಚಿಂತೆ ತಪ್ಪಿಸು.

Disburse'(ಡಿಸ್ಬರ್ಸ್)vt. i. pay out. ಹಣಕೊಡು, ಬಟವಾಡೆಮಾಡು, ಹಣಪಾವತಿ ಮಾಡು.

Discage (ಡಿಸ್‌ಕೇಜ್) vt. take out of cage. ಪಂಜರದಿಂದ ಹೊರಗೆ ತೆಗೆ.

Discard' (ಡಿಸ್ಕಾರ್ಡ್) vt. i. throw out or reject, give up, dismiss. ತಳ್ಳಿಬಿಡು, ತ್ಯಜಿಸು, ತಿರಸ್ಕರಿಸು, ನಿರಾಕರಿಸು, ವಿಸರ್ಜಿಸು.

Discern (ಡಿಸ್ಸರ್ನ್) vt. make out, distinguish. ವ್ಯತ್ಯಾಸತಿಳಿ, ಭೇದಗ್ರಹಿಸು, ವಿವೇಚಿಸು, ಪರೀಕ್ಷಿಸು, ಪರಿಚ್ಛೇದಿಸು, ವಿವೇಚನೆಮಾಡು, ಪರಿಶೀಲಿಸು.

Discern'ment (ಡಿಸ್ಸರ್ನ್‌ಮೆಂಟ್) n. insight, power of discriminating

ಸೂಕ್ಷ್ಮಗ್ರಹಣ, ವಿವೇಚನೆ; ತಾರತಮ್ಯವರಿಯುವ ಶಕ್ತಿ, ವಿವೇಕ, ದೂರದೃಷ್ಟಿ.

Discerp(ಡಿಸರ್ಪ್)vt.separate, tear asunder. ಬೇರ್ಪಡಿಸು.

Discerptible (ಡಿಸರ್ಪ್ಟಿಬಲ್) a. capable of being disunited, separable. ಬೇರೆಮಾಡಲು ಸಾಧ್ಯವಾದ, ಬೇರ್ಪಡಿಸಲು ತಕ್ಕುದಾದ.

Discharge'(ಡಿಸ್ಚಾರ್ಜ್)vt.i. unload, disembark, dismiss, release, let flow,send as missile,fire,acquit oneself of (duty,debt)ಭಾರಇಳಿಸು, ಬರಿದುಮಾಡು, ಕೆಲಸದಿಂದ ತೆಗೆದುಹಾಕು, ಬಿಡುಗಡೆಮಾಡು, ವಜಾಮಾಡು, ಹಾರಿಸು, (ಬಾಂಬು ಮುಂತಾದ್ದು) ಗುಂಡು ಹೊಡೆ, ಹೊರಬಿಡು, ಹೊರಡಿಸು, ಪ್ರವಾಹಹರಿಸು, ಕರ್ತವ್ಯನಿರ್ವಹಿಸು, ನೆರವೇರಿಸು, ತೀರಿಸು. n. discharging, matter discharged from tumour. ಅನುಷ್ಠಾನ, ನಿರ್ವಹಣೆ, ಸ್ರಾವ, ಹರಿತ.

Discharm(ಡಿಸ್‌ಚಾರ್ಮ್)vt. remove charm from. ಮಂತ್ರದ ಪ್ರಭಾವದಿಂದ ಬಿಡಿಸು.

Dis'ciple (ಡಿಸೈಪ್‌ಲ್) n. one who takes another as the teacher. ಶಿಷ್ಯ, ವಿದ್ಯಾರ್ಥಿ, ಅನುಯಾಯಿ, ಮತಸ್ಥ, ಛಾತ್ರ.

Disciplinar'ian (ಡಿಸಿಪ್ಲಿನೇರಿಅನ್)a. one who enforces strict discipline. ಶಿಸ್ತಿನಲ್ಲಿ ಅಸಕ್ತ; ಶಿಸ್ತಿನವ.

Dis'ciplinary (ಡಿಸಿಪ್ಲಿನರಿ) a. of or promoting discipline. ಶಿಸ್ತಿನ, ಸುಶಿಕ್ಷಣದ.

Discipline (ಡಿಸಿಪ್ಲಿನ್) n. training that produces self-control ; orderliness, obedience. ಶಿಸ್ತು, ತಿದ್ದುಪಾಟು, ವಿನಯ, ಅಂಕೆ, ನೀತಿಶಿಕ್ಷಣ, ಶಿಸ್ತುಪಾಲನೆ, ಕಟ್ಟುಪಾಡು. vt. train with discipline. ಶಿಸ್ತು, ಕಲಿಸು, ತಿದ್ದು, ಅಂಕೆಯಲ್ಲಿಡು, ಶಿಸ್ತಿನಲ್ಲಿಡು.

Disclaim (ಡಿಸ್ಕ್ಲೇಮ್) vt. disown, disavow. ಹಕ್ಕನ್ನು ಬಿಟ್ಟುಕೊಡು, ಒಪ್ಪದಿರು, ನಿರಾಕರಿಸು, ತನ್ನದಲ್ಲವೆನ್ನು, ಅಂಗೀಕರಿಸದಿರು.

Disclose' (ಡಿಸ್ಕ್ಲೋಜ್) vt. bring to light, reveal. ಬಯಲುಮಾಡು, ಪ್ರಕಟನೆಮಾಡು, ಬಹಿರಂಗಮಾಡು, ಪ್ರಕಾಶಗೊಳಿಸು, ಹೊರಗೆಡಹು.

Disclos'ure (ಡಿಸ್ಕ್ಲೋಜರ್) n. disclosing, thing disclosed. ಪ್ರಕಟಗೊಳಿಸುವುದು, ಬೈಲಿಗೆ ತರುವದು, ಪ್ರಕಾಶನ.

Discol'our (ಡಿಸ್ಕಲರ್) vt. i. alter the appearance of. ಬಣ್ಣಗೆಡಿಸು, ವಿವರ್ಣಮಾಡು, ಕರೆಮಾಡು, ಕಳೆಗುಂದು.

Discoid(ಡಿಸ್ಕಾಯಿಡ್)a.of the shape of a disk. ಮಂಡಲಾಕೃತಿಯ.

Discom'fit (ಡಿಸ್ಕಂಫಿಟ್) vt. defeat, daffle, disconcert. ಸೋಲಿಸು, ಹತಾಶಗೊಳಿಸು, ಆಶಾಭಂಗಮಾಡು.

Discom'fiture (ಡಿಸ್ಕಂಫಿಚರ್) n. defeat. ಸೋಲು, ಪರಾಜಯ, ಪರಾಭವ, ಭಂಗ.

Discom'fort (ಡಿಸ್ಕಂಫರ್ಟ್) n. uneasiness of body or mind. ಮನಸ್ಸಿನ ಅಥವಾ ಶರೀರದ ಅಸ್ವಸ್ಥತೆ, ಅಸ್ವಾಸ್ಥ್ಯ, ಕ್ಲೇಶ, ಅಸೌಖ್ಯ. vt. make uneasy. ಅಸಂತೋಷಪಡಿಸು.

Discomfortable (ಡಿಸ್‌ಕಂಫರ್ಟೆಬಲ್) a. not comfortable. ಅಸುಖಕರವಾದ, ವ್ಯಥಾಕಾರಕವಾದ.

Discommode (ಡಿಸ್‌ಕಮೋಡ್) vt. put to inconvenience. ಅಸೌಕರ್ಯಪಡಿಸು.

Discompose (ಡಿಸ್‌ಕಂಪೋಸ್) vt. ruffle, disturb. ಮನವನ್ನು ಕಲಕು, ಚಿತ್ತಸ್ಥೈರ್ಯ ಕೆಡಿಸು.

Discompo'sure' (ಡಿಸ್ಕಂಪೋಝು[ಜ]ರ್) d. disorder, disturbance. ಅಸಮಾಧಾನ, ಆಕುಲತೆ, ಕ್ಷೋಭೆ, ಚಿತ್ತಸ್ಥೈರ್ಯಕೆಡುವಿಕೆ.

Disconcert(ಡಿಸ್ಕನ್ಸರ್ಟ್)vt.derange, upset, embarrass. ಭಂಗಮಾಡು, ಕ್ಷೋಭೆಗೊಳಿಸು, ಗಲಿಬಿಲಿಮಾಡು, ನಿರರ್ಥಕಗೊಳಿಸು, ಹೊಂದಿಕೆ ತಪ್ಪಿಸು, ಗಾಬರಿ ಹಿಡಿಸು.

Discongruity (ಡಿಸ್‌ಕಾಂಗ್ರೂಇಟಿ) n. disagreement. ಅಸಮ್ಮತಿ.

Disconnect (ಡಿಸ್ಕನೆಕ್ಟ್) vt. sever the connection of. ಬಿಚ್ಚು, ಸಂಬಂಧ ಹರಿ, ಸಂಬಂಧತಪ್ಪಿಸು, ವಿಯೋಗಿಸು, ಬಿಚ್ಚು, ವಿಶ್ಲೇಷಿಸು.

Disconnection (ಡಿಸ್‌ಕನೆಕ್ಷನ್) n. want of connection, lack of union. ನಿಯೋಗ, ಸಾರ್ಥಕ್ಯ, ಬೇರ್ಪಟ್ಟಿರುವಿಕೆ.

Discon'solate (ಡಿಸ್ಕಾನ್ಸೊಲೇಟ್)a. inconsolable, downcast. ದುಃಖಾಕ್ರಾಂತ, ಮನಶ್ಶಾಂತಿಯಿಲ್ಲದ, ಖಿನ್ನ, ವಿಷಣ್ಣ.

Disconsolation (ಡಿಸ್‌ಕಾನ್ಸೊಲೇಷನ್) n. disappointment. ವಿಷಣ್ಣತೆ, ನಿರಾಶೆ.

Discontent(ಡಿಸ್ಕನ್ಟೆಂಟ್)n.unsatisfied state of mind. ಅಸಮಾಧಾನ, ಕೊರತೆ, ಅತೃಪ್ತಿ, ನಾಖುಷಿ.

Discontiguous (ಡಿಸ್‌ಕಂಟಿಗ್ಯೂಅಸ್) adj. not in contact. ಭಾಗಗಳು ಸೇರಿರದ.

Discontinuance (ಡಿಸ್‌ಕಂಟಿನ್ಯೂಎನ್ಸ್) n. interruption. ಬಿಡುವು, ಅವಕಾಶ.

Discontin'ue(ಡಿಸ್ಕನ್ಟಿನ್ಯೂ)vt. leave off, cease. ತೊರೆದುಬಿಡು, ತ್ಯಜಿಸು, ನಿಲ್ಲಿಸಿಬಿಡು, ಬಿಟ್ಟುಬಿಡು, ನಿವೃತ್ತನಾಗು, ನಿಲ್ಲದಂತೆಮಾಡು, ನಿಲ್ಲಿಸು.

Discord' (ಡಿಸ್ಕಾರ್ಡ್) n. disagreement, strife, harsh noise, want of harmony ವಿರೋಧ, ಅಸಮ್ಮತಿ, ವೈಷಮ್ಯ, ಹೊಂದಿಕೆಯಿಲ್ಲದಿರುವುದು, ವೈಮನಸ್ಯ, ಅಪಸ್ವರ.

Discordance (ಡಿಸ್‌ಕಾರ್ಡೆನ್ಸ್) n. disagreement, opposition. ಅಸಂಗತಿ, ವಿರೋಧ ಸ್ಥಿತಿ.

Discordant (ಡಿಸ್‌ಕಾರ್‌ಡೆಂಟ್) adj. disagreeing, opposite. ಅಸಂಗತ, ವಿರೋಧಿ.

Dis'count(ಡಿಸ್ಕೌಂಟ್) n. deduction from amount of bill. ವಟ್ಟ, ಕಮಿಷನು, ತರಗು, ತಳ್ಳುಪಡಿ, ಸೋಡಿ. vt. lessen, deduct from, allow for exaggeration. ಕಡಿಮೆಮಾಡು, ಕಮಿಷನ್‌ಕೊಡು, ವಟ್ಟ ತೆಗೆ, ಸೋಡಿ ಕೊಡು, ರಿಯಾಯಿತಿ ತೋರು, ತಳ್ಳುಪಡಿಮಾಡು.

Discountenance (ಡಿಸ್‌ಕೌಂಟಿನನ್ಸ್) vt. discourage, disapprove. ಉತ್ಸಾಹಭಂಗಮಾಡು, ಅಸಮ್ಮತಿ ತೋರಿಸು.

Discou'rage (ಡಿಸ್ಕರೇಜ್) vt. dishearten ; dissuade, deter. ಧೈರ್ಯಗೆಡಿಸು, ; ಬೇಡವೆನ್ನು, ಅಧೈರ್ಯಪಡಿಸು, ಎದೆಗುಂದಿಸು, ತಡೆಯು, ಉತ್ಸಾಹಕುಗ್ಗಿಸು, ಮಾಡದಂತೆ ತಡೆ.

Discourse (ಡಿಸ್ಕೋರ್ಸ್) n. talk or conversation, a lecture, sermon or other exposition. ಸಂಭಾಷಣೆ, ವಾಖ್ಯಾನ, ಪ್ರವಚನ, ಉಪದೇಶ, ಭಾಷಣ. vt. utter a discourse, talk, converse. ಸಂಭಾಷಿಸು, ಮಾತನಾಡು, ಉಪನ್ಯಾಸಕೊಡು, ವ್ಯಾಖ್ಯಾನಮಾಡು.

Discourt'eous (ಡಿಸ್ಕೋರ್ಟಿಅಸ್) a. uncivil, rude. ಅಸಭ್ಯ, ಅವಿನೀತ, ಮರ್ಯಾದೆತೋರದ, ವಿನಯವಿಲ್ಲದ. n. discourtesy. (ಡಿಸ್ಕರ್ಟಸಿ) n. incivility. ಅಸಭ್ಯತೆ, ವಿನಯಹೀನತೆ.

Discover (ಡಿಸ್ಕವರ್) vt. find out, detect, make known. ಕಂಡುಹಿಡಿ, ಹುಡುಕಿತೆಗೆ, ಪ್ರಕಟಿಸು, ಬಹಿರಂಗಪಡಿಸು.

Discovert (ಡಿಸ್‌ಕವರ್ಟ್) n. an unmarried or widowed woman, ಮದುವೆಯಾಗದ ಅಥವಾ ವಿಧವೆಯಾದ ಸ್ತ್ರೀ

Disco'very(ಡಿಸ್ಕವರಿ)n. disclosure, thing discovered. ಕಂಡುಹಿಡಿಯುವುದು, ಕಂಡುಹಿಡಿದಿದ್ದು, ದರ್ಶನ.

Discred'it (ಡಿಸ್‌ಕ್ರೆಡಿಟ್) n. discredited state, disrepute. ಅಪನಂಬಿಕೆ, ಅವಿಶ್ವಾಸ, ಅಪಖ್ಯಾತಿ, ಕಳಂಕ, ಅಪಕೀರ್ತಿ.vt. refuse belief to. ನಂಬದಿರು.

Discreditable (ಡಿಸ್ಕ್ರೆಡಿಟೆಬಲ್) a. disgraceful, shameful. ಅಪಕೀರ್ತಿಕರ, ನಿಂದನೀಯ.

Discreet' (ಡಿಸ್‌ಕ್ರೀಟ್) a. prudent, cautious in speech or action. ಮುಂದಾಲೋಚನೆಯುಳ್ಳ, ವಿವೇಚನೆಯುಳ್ಳ ದೂರದರ್ಶಿ, ವಿವೇಕಪೂರ್ಣ, ವಿಚಾರಶೀಲ.

Discrep'ancy (ಡಿಸ್ಕ್ರೆಪೆನ್ಸಿ) n. difference, failure to tally. ಹೆಚ್ಚುಕಡಿಮೆ, ವ್ಯತ್ಯಾಸ, ಭಿನ್ನತೆ, ಪರಸ್ಪರ ವಿರೋಧ. a. discrep'ant. not tallying. ವ್ಯತ್ಯಾಸವಿರುವ, ಭೇದವುಳ್ಳ, ಹೊಂದಿಕೆಯಿಲ್ಲದ.

Discrepant(ಡಿಸ್ಕ್ರೆಪೆಂಟ್) a. different, disagreeing. ವಿರುದ್ಧ,ಪ್ರತಿಕೂಲ.

Dis'crete(ಡಿಸ್ಕ್ರೀಟ್) n. separate, distinct ಬೇರೆಬೇರೆ, ವಿಯುಕ್ತ ಪ್ರತ್ಯೇಕವಾದ, ಭಿನ್ನಭಿನ್ನವಾದ.

Discre'tion(ಡಿಸ್ಕ್ರೆಶನ್)n.prudence, liberty of action. ವಿವೇಕ, ಯುಕ್ತಾಯುಕ್ತ ಪರಿಜ್ಞಾನ, ವಿಚಕ್ಷಣೆ, ಯುಕ್ತಾಯುಕ್ತವಿವೇಚನೆ.

Discretive (ಡಿಸ್‌ಕ್ರಿಟಿವ್) adj. distinctive, separative. ಪ್ರತ್ಯೇಕವಾದ, ಭಿನ್ನವಾದ.

Discrimi'nate(ಡಿಸ್‌ಕ್ರಿಮಿನೇಟ್) vt. i.note the difference, distinguish. ಭೇದಮಾಡು, ಪಕ್ಷಪಾತಮಾಡು, ವಿವೇಚಿಸು, ಪರಿಚ್ಛೇದಿಸು.

Discrimination (ಡಿಸ್‌ಕ್ರಿಮಿನೇಷನ್) n. judgment. ವಿವೇಚನೆ.

Disculpate (ಡಿಸ್‌ಕಲ್‌ಪೇಟ್)vt. free from blame. ದೂಷಣೆಯಿಂದ ಮುಕ್ತಗೊಳಿಸು.

Discursion (ಡಿಸ್‌ಕರ್ಶನ್) n. rambling talk. ವಿವಾದ, ಅಪ್ರಾಸಂಗಿಕ ಮಾತು.

Discurs'ive (ಡಿಸ್ಕರ್ಸಿವ್) a. rambling, not striking to the main subject, ವಿಷಯಾಂತರ ಮಾಡುವ, ಬಳಸಾಡುವ, ತಾರ್ಕಿಕ, ಅಪ್ರಾಸಂಗಿಕ.

Discuss' (ಡಿಸ್ಕಸ್) vt. examine by argument. debate. ವಾದವಿವಾದಮಾಡು, ವಿಚಾರಮಾಡು, ಪರಿಶೀಲಿಸು, ತರ್ಕಿಸು, ಚರ್ಚಿಸು.

Discussive (ಡಿಸ್ಕಸಿವ್) a. having power to determine. ವಿವಾದಶೀಲ.

Disdain' (ಡಿಸ್ಡೇನ್) vt. treat as unworthy of notice or of oneself, scorn. ಹೀನೈಸು, ಕಡೆಗಣಿಸು, ಉಪೇಕ್ಷೆಮಾಡು, ನಿರ್ಲಕ್ಷಿಸು. ತುಚ್ಛಮಾಡು. n. scorn, contempt. ತಿರಸ್ಕಾರ, ಅಸಡ್ಡೆ, ಧಿಕ್ಕಾರ, ಅವಹೇಳನೆ.

Disease' (ಡಿಸೀಜ್) n. bodily disorder. ಬೇನೆ, ಜಾಡ್ಯ,ರೋಗ, ಕುತ್ತ. ಕಾಯಿಲೆ, ಅಸ್ವಸ್ಥತೆ, ವ್ಯಾಧಿ.

Diseased (ಡಿಸೀಜ್ಡ್) a. affected with disease, morbid. depraved ವ್ಯಾಧಿಗ್ರಸ್ತ, ರೋಗಗ್ರಸ್ತ, ಜಾಡ್ಯಹಿಡಿದ, ಕಾಯಿಲೆಯಾದ, ದುರವಸ್ಥೆಯುಳ್ಳ.

Disembarass(ಡಿಸೆಂಬರಾಸ್) vt. free from perplexity, ತೊಡಕಿನಿಂದ, ಪೇಚಾಟದಿಂದ ಮುಕ್ತಗೊಳಿಸು.

Disembark' (ಡಿಸ್‌ಎಂಬಾರ್ಕ್) vt. i. land from a ship. ಹಡಗಿನಿಂದ ಇಳಿ, ನೌಕೆಯಿಂದ ಇಳಿಸು.

Disembosom (ಡಿಸ್‌ಎಂಬೂಸಮ್)vt. reveal. ಅಂತರ್ಯ ತಿಳಿಸು.

Disembroil (ಡಿಸ್‌ಎಂಬ್ರಾಯಿಲ್) vt. extricate from trouble. ತೊಡರಿನಿಂದ ಬಿಡಿಸು.

Disenchant'(ಡಿಸ್‌ಎನ್‌ಚಾನ್ಟ್)vt. free from illusion. ಮೋಹ ಹೋಗಲಾಡಿಸು ಮಂತ್ರಶಕ್ತಿ ನಿವಾರಿಸು.

Disencum'ber (ಡಿಸ್‌ಎನ್ಕಂಬರ್) vt. disburden. ಹೊರೆಇಳಿಸು, ಭಾರತಪ್ಪಿಸು, ತೊಂದರೆ ಬಿಡಿಸು.

Disengage' (ಡಿಸ್‌ಎಂಗೇಜ್) vt. detach, liberate, loosen. ಬಿಡಿಸು,

ಸ್ವತಂತ್ರಗೊಳಿಸು, ಸಡಿಲಮಾಡು.

Disentang'le (ಡಿಸ್‌ಎಂಟ್ಯಾಂಗಲ್) vt. extricate, unravel, untwist. ಸಿಕ್ಕಿನಿಂದ ಬಿಡಿಸು, ತೊಡಕುಬಿಡಿಸು, ತಿರಿಬಿಚ್ಚು.

Disenthra'l (ಡಿಸ್‌ಎಂಥ್ರಾಲ್) vt. free from bondage. ದಾಸ್ಯದಿಂದ ಬಿಡಿಸು.

Disentomb (ಡಿಸ್‌ಎಂಟೂಮ್) vt. unearth. ಅಗೆದು ತೆಗೆ.

Disenvelope (ಡಿಸ್‌ಎನ್ವಲಪ್) vt. unfold. ಬಿಚ್ಚು, ವಿಸ್ತರಿಸು.

Disfavour (ಡಿಸ್ಫೇವರ್) n. disapproval, dislike. ಅವಕೃಪೆ, ಅಪ್ರಸನ್ನತೆ, ಅನಾದರಣೆ, ಅಸಮ್ಮತಿ, ಅಪ್ರೀತಿ, ಅಸಂತೋಷ.

Disfig'ure (ಡಿಸ್‌ಫಿಗರ್) vt. spoil the beauty of, deform. ಕುರೂಪಮಾಡು, ವಿರೂಪಮಾಡು, ರೂಪುಗೆಡಿಸು, ವಿಕಾರಗೊಳಿಸು.

Disfigurement (ಡಿಸ್‌ಫಿಗರ್‌ಮೆಂಟ್) n. defacement of beauty. ವಿರೂಪಗೊಳಿಸುವಿಕೆ.

Disfran'chise (ಡಿಸ್‌ಫ್ರಾಂಚೈಜ್) vt. take away the right of votes. ಓಟಿನ ಅಧಿಕಾರ ತೆಗೆದುಹಾಕು.

Disgorge (ಡಿಸ್‌ಗಾರ್ಜ್) vt. eject from throat. ಕಕ್ಕು, ಸುರಿಸು.

Disgrace' (ಡಿಸ್‌ಗ್ರೇಸ್) n. downfall; ignominy. ಮಾನಹಾನಿ, ಅಪಮಾನ, ಅಪಕೀರ್ತಿ, ಮಾನಭಂಗ, ನಾಚಿಕೆಗೇಡು, ಸ್ವರೂಪನಾಶನ. vt. dismiss from favour; bring disgrace to. ಕಳಂಕಹಚ್ಚು, ಅಪಕೀರ್ತಿ ತರು. ಅನುಗ್ರಹ ತಪ್ಪಿಸು, ಅಪಮಾನಮಾಡು.

Disgraceful (ಡಿಸ್‌ಗ್ರೇಸ್‌ಫುಲ್) a. shameful. ನಾಚಿಕೆಯ, ಅಪಮಾನದ.

Disgrade (ಡಿಸ್‌ಗ್ರೇಡ್) vt, degrade. ಕೆಳಶ್ರೇಣಿಗೆ ಹಾಕು.

Disgrun'tled (ಡಿಸ್‌ಗ್ರಂಟಲ್ಡ್) a. discontented. ಅಸಂತುಷ್ಟ, ಅತೃಪ್ತ.

Disguise (ಡಿಸ್‌ಗೈಜ್) vt. change the appearance of, cloak or hide. ವೇಷಹಾಕಿಕೊ, ಸೋಗು ಹಾಕು, ಕಪಟರೂಪತಾಳು, ಮರೆಮಾಚು, ಬಚ್ಚಿಡು, ಮುಚ್ಚಿಡು, ರೂಪಮರಸಿಕೊ. n. false appearnce. ಸೋಗು, ವೇಷ, ನಟನೆ, ಮೋಸ, ವಂಚನೆ, ಪ್ರಚ್ಛನ್ನತೆ.

Disgust' (ಡಿಸ್ಗಸ್ಟ್) n. strong dislike, keen disappointment. ಅಸಹ್ಯ, ಹೇಸಿಕೆ, ಜುಗುಪ್ಸೆ, ಹೇವರಿಕೆ, ಬೇಸರ. vt. affect with disgust. ರೋಸು, ಅಸಹ್ಯಹುಟ್ಟಿಸು, ಹೇಸಿಕೆಯುಂಟುಮಾಡು, ಬೇಸರಪಡಿಸು.

Disgusting (ಡಿಸ್‌ಗಸ್ಟಿಂಗ್) a. exciting disgust. ಅಸಹ್ಯಕರ, ಕುತ್ಸಿತ.

Dish (ಡಿಶ್) n. shallow vessel for food. ತಾಟು, ತಟ್ಟೆ, ಬಟ್ಟಲು, ಗಂಗಳ, ತಳಿಗೆ, ಉಟತಿಂಡಿ, ಅಡಿಗೆ, ಭಕ್ಷ್ಯ, ಎಡೆ.

Dishabille (ಡಿಸ್‌ಹಬೀಲ್) n. state of being undressed. ಅರ್ಧವಾಗಿ ಉಡುಗೆ ತೊಟ್ಟಿರುವುದು.

Disharmonise (ಡಿಸ್‌ಹಾರ್ಮನೈಜ್) vt. make discordant. ಸಾಮಂಜಸ್ಯವಿಲ್ಲದಿರುವಂತೆ ಮಾಡು.

Disharmony (ಡಿಸ್‌ಹಾರ್ಮನಿ) n. lack of harmony. ಮೇಳವಿಲ್ಲದಿರುವಿಕೆ.

Disheart'en (ಡಿಸ್‌ಹಾರ್ಟನ್) vt. discourage, deject. ಎದೆಗುಂದಿಸು, ಧೈರ್ಯಗೆಡಿಸು, ಎದೆಯೊಡಿಸು, ಕುಗ್ಗಿಸು.

Dishevel (ಡಿಸ್‌ಹೆವಲ್) vt. spread hairs in disorder. ಕೂದಲನ್ನು ಕೆದರಿಕೊ.

Dishev'elled (ಡಿಸ್‌ಹೆವಲ್) a. with disordered hair, untidy, unkempt. ಕೆದರಿದ ಕೂದಲುಳ್ಳ, ತಲೆಕೆದರಿಕೊಂಡಿರುವ, ಬಿಚ್ಚಿದ, ಒಪ್ಪವಿಲ್ಲದ, ಓರಣವಿಲ್ಲದ, ಸೋರುಮುಡಿಯ, ಬಾಚದಿರುವ.

Dishon'est (ಡಿಸ್‌ಆನೆಸ್ಟ್) a. insincere, wanting integrity, disposd to cheat. ಅಪ್ರಮಾಣಿಕ, ಕಳ್ಳಾಟಕೆಯ, ಮೋಸದ, ವಂಚನೆಯ, ತಕ್ಕನ.

Dishonesty (ಡಿಸ್‌ಆನೆಸ್ಟಿ) n. insincerity, lack of integrity. ಅಪ್ರಾ

ಮಾಣಿಕತೆ, ವಂಚನೆ.

Dishon'our (ಡಿಸ್‌ಆನರ್) vt. treat contumely, bring dishonour upon. ಅನಾದರಿಸು, ಅಪಮಾನಮಾಡು, ಮಾನಹಾನಿಮಾಡು, ಅಗೌರವತೋರಿಸು. n. loss of honour. ಅಪಮಾನ, ಅಪಕೀರ್ತಿ.

Dishon'ourable (ಡಿಸ್‌ಆನರೆಬಲ್) n. disgraceful, unprincipled. ಅಪಮಾನಕರ, ಅಪಕೀರ್ತಿಕರ, ತತ್ವರಹಿತ.

Disillu'sion (ಡಿಸ್ ಇಲ್ಯೂಷನ್) vt. open the eyes of; awake to (disappointing) realities. ಭ್ರಮೆಪರಿಹರಿಸು, ನಿರಸನಮಾಡು, ನಿರ್ಮಾಯೆಗೊಳಿಸು.

Disinclination (ಡಿಸ್‌ಇನ್‌ಕ್ಲಿನೇಶನ್) a. unwillingness, slight dislike. ಉಪೇಕ್ಷೆ, ಅನಿಚ್ಛೆ, ಅರುಚಿ, ವಿರಕ್ತಿ, ಅಪ್ರೀತಿ.

Disincline (ಡಿಸ್‌ಇನ್‌ಕ್ಲೈನ್)vt. make unwilling, excite dislike, ಮನಸ್ಸು ಒಲವಿಲ್ಲದಿರು, ಒಡಿ, ಒಲವು ಕೆಡಿಸು.

Disincorporate (ಡಿಸ್ ಇನ್ಕಾರ್ಪೊರೇಟ್) vt. to deprive of corporate rights. ಸಾಮಾಜಿಕ ಅಧಿಕಾರಗಳನ್ನು ಕಿತ್ತುಹಾಕು.

Disinfect' (ಡಿಸ್‌ಇನ್‌ಫೆಕ್ಟ್) vt. purge of infection. ರೋಗದ ಸೊಂಕು ಹೋಗಲಾಡಿಸು, ಶುದ್ಧಗೊಳಿಸು, ಸೊಂಕಿಲ್ಲದಂತೆ ತೊಳೆ.

Disinfectant (ಡಿಸ್‌ಇನ್‌ಫೆಕ್ಟೆಂಟ್) n. preventive against infection. ಅಂಟುಜಾಡ್ಯ ನಿವಾರಕ.

Disinfection (ಡಿಸ್‌ಇನ್‌ಫೆಕ್‌ಷನ್) n. purification from infection. ಸೊಂಕಿಲ್ಲದಂತೆ ಶುದ್ಧಿಮಾಡುವಿಕೆ.

Disingen'uous (ಡಿಸ್‌ಇಂಜೆನ್ಯುಅಸ್) a. not frank or open, insincere. ಕಪಟಿ, ಕುಹಕ, ಪಕ್ಕ, ಕುಟಿಲ, ವಂಚನೆಯ, ಠಕ್ಕಿನ.

Disinhe'rit (ಡಿಸ್‌ಇನ್‌ಹೆರಿಟ್) vt. cut off from hereditary rights. ಬಾಧ್ಯತೆ ತಪ್ಪಿಸು, ಸ್ವಾಮ್ಯ ತಪ್ಪಿಸು, ವಾರಸು ತಪ್ಪಿಸು.

Disin'tegrate (ಡಿಸ್‌ಇನ್ಟಿಗ್ರೇಟ್) vt. i. separate into parts, lose cohesion. ಪೃಥಕ್ಕರಿಸು, ಭಿನ್ನಭಿನ್ನಮಾಡು, ಶಿಥಿಲವಾಗು, ಭಾಗವಿಭಾಗವಾಗಿ ವಿಂಗಡವಾಗು, ಪ್ರತ್ಯೇಕ ಭಾಗಗಳಾಗಿ ಒಡೆ.

Disintegration (ಡಿಸ್‌ಇಂಟಿಗ್ರೇಶನ್) n. act of separating integral parts of a substance. ಪದಾರ್ಥಗಳನ್ನು ಪ್ರತ್ಯೇಕ ಭಾಗಗಳಾಗಿ ಒಡೆ.

Disinter' (ಡಿಸ್‌ಇಂಟರ್) vi. take out of a grave. (ಶವವನ್ನು) ಸಮಾಧಿಯಿಂದ ತೆಗೆ.

Disin'terested (ಡಿಸ್‌ಇಂಟರೆಸ್ಟೆಡ್)a. impartial, unselfish. ಸ್ವಾರ್ಥವಿಲ್ಲದ, ಪಕ್ಷಪಾತವಿಲ್ಲದ, ನಿಸ್ಪೃಹ, ನಿಷ್ಕಾಮ.

Disinterment (ಡಿಸ್‌ಇಂಟರ್‌ಮೆಂಟ್) n. act of taking out of earth. ಹೂತದ್ದನ್ನು ಅಗೆದು ಹೊರಕ್ಕೆ ತೆಗೆ.

Disjoin (ಡಿಸ್‌ಜಾಯಿನ್)vt. separate, disunite. ಅಗಲಿಸು, ಬೇರ್ಪಡಿಸು, ಪ್ರತ್ಯೇಕಿಸು, ಸಂಬಂಧಬಿಡಿಸು, ವಿಯೋಗಿಸು, ಕಳಚು.

Disjoint (ಡಿಸ್‌ಜಾಯಿಂಟ್) vt. to separate at a joint.

Disjunct (ಡಿಸ್‌ಜೆಂಕ್ಟ್)a. disjoined. ಅಗಲಿಸಿದ, ಬೇರ್ಪಡಿಸಿದ.

Disjunction (ಡಿಸ್ ಜಂಕ್ಷನ್) n. separation, sundering. ಅಗಲಿಕೆ, ಬೇರ್ಪಟ್ಟಿರುವಿಕೆ.

Disk, disc (ಡಿಸ್ಕ್) n. thin flat circular object or resemblance of this. ಬಿಂಬ, ಮಂಡಲ, ಬಟ್ಟು, ತಲ, ಚಕ್ರ, ಪರಿಧಿ.

Dislike' (ಡಿಸ್ಲೈಕ್) vt. feel aversion to. ಅಸಹ್ಯಪಡು, ಮೆಚ್ಚದಿರು, ಇಷ್ಟವಿಲ್ಲದಿರು, ಆಗದಿರು, ಸೇರದಿರು.

Dis'locate (ಡಿಸ್‌ಲೊಕೇಟ್) vt. put limb out of joint, displace. ಕೀಲು ತಪ್ಪಿಸು, ಸ್ಥಳ ತಪ್ಪಿಸು, ಸಂಧಿಭಂಗಮಾಡು.

Dislodg'e (ಡಿಸ್‌ಲಾಡ್ಜ್) vt. drive from place of rest or station.

ಒಕ್ಕಲು ತೆಗೆಯಿಸು, ಹೊರಕ್ಕೆ ಹೊರಡಿಸು, ಉಚ್ಚಾಟನೆ ಮಾಡು, ನೆಲೆ ತಪ್ಪಿಸು, ತಳ್ಳಿಸು.

Disloy'al (ಡಿಸ್‌ಲಾಯಲ್) a. unfaithful. ರಾಜದ್ರೋಹಿ, ಸ್ವಾಮಿದ್ರೋಹಿ, ವಿಶ್ವಾಸಘಾತಕಿ, ಭಕ್ತಿಹೀನ, ಅಸಂತುಷ್ಟ.

Disloy'alty (ಡಿಸ್‌ಲಾಯಲ್ಟಿ) n. faithlessness. ರಾಜಭಕ್ತಿಹೀನತೆ, ರಾಜದ್ರೋಹ.

Dis mal (ಡಿಝ್(ಜ್)ಮಲ್) a. cheerless, dreary. ಖಿನ್ನ, ನಿರುತ್ಸಾಹಗೊಳಿಸುವ, ವ್ಯಥೆಹುಟ್ಟಿಸುವ, ದುಃಖಿತ, ಭೀಕರ, ಅಪ್ರಸನ್ನ, ದಾರುಣ, ಘೋರ.

Disman'tle (ಡಿಸ್‌ಮ್ಯಾಂಟಲ್) vt. deprive of dress, furniture, &c. ವಸ್ತ್ರಾಪಹರಣಮಾಡು, ರಕ್ಷಾಬಂಧಕಗಳನ್ನು ತೆಗೆದುಬಿಡು, ಬತ್ತಲೆಮಾಡು.

Dismay' (ಡಿಸ್ಮೆ) n. loss of strength and courage through fear. ದಿಗಿಲು, ಗಾಬರಿ, ಭಯ, ಭ್ರಾಂತಿ. vt. terrify. discourage. ಭಯಪಡಿಸು, ಅಂಜಿಸು, ಗಾಬರಿಹುಟ್ಟಿಸು, ದಿಗಿಲುಗೊಳಿಸು,

Dismiss' (ಡಿಸ್‌ಮಿಸ್) vt. send away, discard, remove from office. ಕಳುಹಿಸು, ವಿಸರ್ಜಿಸು, ವಜಾಮಾಡು, ಅಧಿಕಾರದಿಂದ ನಿವೃತ್ತಿಗೊಳಿಸು, ತಳ್ಳಿಹಾಕು.

Dismount' (ಡಿಸ್‌ಮೌಂಟ್) vt. i. alight or cause to alight from horse-back. ಕುದುರೆಯಿಂದ ಇಳಿ, ಇಳಿಸು.

Disnest (ಡಿಸ್‌ನೆಸ್ಟ್) vt. dislodge from a nest. ಗೂಡಿನಿಂದ ತೆಗೆದುಹಾಕು.

Disobe'dience (ಡಿಸ್‌ಒಬೀಡಿಎನ್ಸ್) n. violation of orders. ಅವಿಧೇಯತೆ, ಆಜ್ಞಾಭಂಗ.

Disobey' (ಡಿಸ್‌ಒಬೆ) vt. i. disregard orders, break rules. ಅಪ್ಪಣೆಮೀರು, ನಿರ್ಲಕ್ಷಿಸು, ಅವಿಧೇಯನಾಗು.

Disoblige (ಡಿಸ್‌ಒಬ್ಲೈಜ್) vt. refuse to oblige or grant any favour. ಅಪ್ರಸನ್ನಗೊಳಿಸು, ಪ್ರತಿಕೂಲಮಾಡಿಕೊ.

Disord'er (ಡಿಸ್‌ಆರ್ಡರ್) n. confusion, bodily or mental ailment. ಅವ್ಯವಸ್ಥೆ, ತಾರುಮಾರು, ಅಕ್ರಮ, ಕ್ರಮಭಂಗ, ಗದ್ದಲ, ಗಲಿಬಿಲಿ, ಗಲಾಟೆ, ಬೇನೆ, ವ್ಯಾಧಿ. vt. disturb the healthy working of. ತಾರುಮಾರುಮಾಡು, ರೋಗಸ್ಥಪಡಿಸು, ಆರೋಗ್ಯ ಕೆಡಿಸು, ರೋಗತರು.

Dis'orderly (ಡಿಸ್‌ಆರ್ಡರ್ಲಿ) a. untidy, riotous or ill-disciplined. ಕ್ರಮತಪ್ಪಿದ, ಅವ್ಯವಸ್ಥೆಯ, ಗೊಂದಲದ, ಗಲಭೆಯ, ಗುರಿಕೆಟ್ಟ, ಶಿಸ್ತು ಇಲ್ಲದ, ಪುಂಡ.

Disorganize (ಡಿಸ್‌ಆರ್ಗನೈಜ್) vt. throw into disorder, destroy system, &c. of. ಕ್ರಮಭಂಗಮಾಡು, ಅವ್ಯವಸ್ಥೆಮಾಡು, ಗಲಿಬಿಲಿಮಾಡು, ಹೊಂದಿಕೆ ತಪ್ಪಿಸು.

Disown' (ಡಿಸ್‌ಓನ್) vt, refuse to own, disclaim, renounce. ತನ್ನದಲ್ಲವೆನ್ನು, ನೀತಿಗಳೆ, ತ್ಯಜಿಸು.

Dispa'rage (ಡಿಸ್‌ಪ್ಯಾರೆಜ್) vt. lower in rank or estimation, talk slightingly. ತುಚ್ಛಮಾಡು, ತಿರಸ್ಕರಿಸು, ಕೀಳ್ಮಾಡು, ಅಲ್ಲಗಳೆ, ಜರೆ, ಧಿಕ್ಕರಿಸು.

Disparagement (ಡಿಸ್ಪೆರೇಜ್‌ಮೆಂಟ್) n. undervaluing, detraction. ತುಚ್ಛಮಾಡುವಿಕೆ, ಹೀನಯಿಸುವಿಕೆ.

Disparate (ಡಿಸ್ಪರೇಟ್) adj. unequal ಬೇರೆ ತರದ, ಭಿನ್ನಪ್ರಕಾರದ

Disparity (ಡಿಸ್‌ಪ್ಯಾರಿಟಿ) n. inequality. ಹೆಚ್ಚುಕಡಿಮೆ, ಫರಕು, ಅಸಮತೆ, ವ್ಯತ್ಯಾಸ, ಭೇದ, ತಾರತಮ್ಯತೆ.

Dispart (ಡಿಸ್‌ಪಾರ್ಟ್) vt. separate. ಬೇರ್ಪಡಿಸು.

Dispa'ssionate (ಡಿಸ್ಪ್ಯಾಶನೇಟ್) a. free from passion, cool, impartial. ವೀತರಾಗ, ಉದ್ರೇಕವಿಲ್ಲದ, ಶಾಂತ, ಪಕ್ಷಪಾತವಿಲ್ಲದ, ಗಂಭೀರ.

Dispatch, des- (ಡಿಸ್ಪ್ಯಾಚ್) vt. send to destination, put to death, get business done promptly. ಕಳುಹಿಸಿ ಕೊಡು, ರವಾನಿಸು, ಕೆಲಸವನ್ನು ಜಾಗ್ರತೆಯಾಗಿಮಾಡು,ಯಮಲೋಕಕ್ಕೆ ಕಳುಹಿಸು. n. despatching rapidly. official message. ರವಾನೆ, ಕಳುಹಿಸುಬಿಡುವುದು, ತ್ವರೆ, ಕ್ಷಿಪ್ರವ್ಯವಸ್ಥೆ, ಸರಕಾರಿ ವರದಿ.

Dispel' (ಡಿಸ್ಪೆಲ್)vt. dissipate, disperse. ಹೋಗಲಾಡಿಸು, ದೂರಮಾಡು, ಓಡಿಸು, ಚದುರಿಸು, ತೊಲಗಿಸು.

Dispen'sable (ಡಿಸ್ಪೆನ್ಸಬಲ್) a. that may be dispensed with. ತ್ಯಾಜ್ಯವಾದ, ಅನಾವಶ್ಯಕ, ವರ್ಜ್ಯ.

Dispen'sary (ಡಿಸ್ಪೆನ್ಸರಿ) n. a place where medicine is dispensed. ಔಷಧಶಾಲೆ, ದವಾಖಾನೆ, ಚಿಕಿತ್ಸಾಲಯ.

Dispen'sation (ಡಿಸ್‌ಪೆನ್‌ಸೇಶನ್) n. dealing out, system of divine truths and rites. ಹಂಚಿಕೆ, ಈಶ್ವರಾಜ್ಞೆ, ದೈವೇಚ್ಛೆ.

Dispense' (ಡಿಸ್ಪೆನ್ಸ್) vt. i. deal out (justice, &c.)make up and issue medicines, exempt. ನ್ಯಾಯನಡೆಸು, ಹಂಚಿಕೊಡು, ವಿನಾಯಿತಿ ನೀಡು, ವಿಭಾಗಿಸು, ಔಷಧ ಮಾಡಿಕೊಡು, ಹರಗು ತಪ್ಪಿಸು, d. with, do without, discharge. ವರ್ಜ್ಯಮಾಡು, ವರ್ಜಿಸು,ಕೆಲಸದಿಂದ ಬಿಡಿಸು.

Dispenser (ಡಿಸ್ಪೆನ್ಸರ್) n, he who dispenses medicines. ಔಷಧಿನಿರ್ಮಾಣ ಮಾಡುವವನು.

Dispeople (ಡಿಸ್‌ಪೀಪ್‌ಲ್) vt. depopulate, ನಿರ್ಜನಮಾಡು.

Disperse (ಡಿಸ್ಪರ್ಸ್) vt. i. scatter, go in different directions, vanish. ಚದುರಿಸು, ಚದುರು, ದಿಕ್ಕಾಪಾಲಾಗಿ ಹರಡು, ಓಡಿಸು, ತೊಲಗಿಸು.

Dispersion (ಡಿಸ್‌ಪರ್ಶನ್) n. act of scattering, dispersing. ಹರಡುವಿಕೆ, ಚದುರುವಿಕೆ.

Dispi'rit (ಡಿಸ್ಪಿರಿಟ್) vi. dishearten, discourage. ಧೈರ್ಯಗೆಡಿಸು, ಮನಸ್ಸು ಕುಗ್ಗಿಸು, dispirited. ಖಿನ್ನ, ಎದೆಗುಂದಿದ.

Dispitious(ಡಿಸ್ಪಿಟಿಯಸ್) a. pitiless, merciless. ದಯಾಶೂನ್ಯ, ನಿರ್ದಯಿ.

Displace' (ಡಿಸ್‌ಪ್ಲೇಸ್) vt. put out of place, oust, remove from office. ಸ್ಥಳಾಂತರಮಾಡು,ಅಧಿಕಾರತಪ್ಪಿಸು, ಸ್ಥಾನಪಲ್ಲಟಮಾಡು,ಕವಲಿಸು. displacement, n. displacing. ಸ್ಥಳಾಂತರ, ಎಡೆತಪ್ಪುವುದು.

Displacement (ಡಿಸ್‌ಪ್ಲೇಸ್‌ಮೆಂಟ್) n. act of displacing, ousting. ಸ್ಥಳಾಂತರತೆ, ಅಧಿಕಾರ ತಪ್ಪಿಸುವಿಕೆ.

Displant (ಡಿಸ್‌ಪ್ಲ್ಯಾಂಟ್) vt. remove a plant from its place. (ಗಿಡ) ಸ್ಥಳಾಂತರ ಮಾಡು.

Display' (ಡಿಸ್‌ಪ್ಲೆ) vt. spread out to view, exhibit, ತೋರಿಸು,ಮೆರಸು, ಬಹಿರಂಗಮಾಡು,ಪ್ರದರ್ಶಿಸು.n.displaying,exhibition,ostentation. ಆಡಂಬರ, ಪ್ರದರ್ಶನ, ತೋರಿಕೆ, ಆಕರ್ಷಕ ಮುದ್ರಣ, ಠೀವಿ.

Displease' (ಡಿಸ್‌ಪ್ಲೀಸ್) vt. offend, make angry, disgust. ಬೇಸರಿಸು, ರೇಗಿಸು, ಅಸಹ್ಯ ಹುಟ್ಟಿಸು.

Displea'sure (ಡಿಸ್‌ಪ್ಲೆಷರ್) n. resentment, annoyance, vexation. ಅತೃಪ್ತಿ, ಅಸಮಾಧಾನ, ಸಿಟ್ಟು, ಕಾಟ.

Diplume (ಡಿಸ್‌ಪ್ಲೂಮ್) vt. strip off feathers or plumes. ರೆಕ್ಕೆಗಳನ್ನು ಕಿತ್ತುಹಾಕು.

Disport (ಡಿಸ್‌ಪೋರ್ಟ್) n. sport, pastime. ಆಟ, ವಿಹಾರ.

Dispo'sal (ಡಿಸ್‌ಪೋಜಲ್) n. disposing of, bestowal, sale, management. ವಿನಿಯೋಗ, ಫೈಸಲು, ಹಂಚಿಕೆ, ನಿರ್ವಾಹ, ಮಾರಾಟ, ಆಡಳಿತ, ವ್ಯವಸ್ಥೆ.

Dispose' (ಡಿಸ್‌ಪೋಝ್) vt, i.

arrange, adjust; incline: mind to do, bestow. ಕ್ರಮದಲ್ಲಿಡು, ಅಣಿಯಾಗಿಡು, ವ್ಯವಸ್ಥೆಮಾಡು, ಮುಗಿಸಿಬಿಡು, ಕೊಂದುಬಿಡು, ಕೊಡು, ಹಂಚು. d. of, get rid of, sell. ಕೊಟ್ಟುಬಿಡು.

Disposi'tion (ಡಿಸ್‌ಪೊಝಿ(ಜಿ)ಶನ್) n. arrangement, temperament. plan for disposing one's property. ಏರ್ಪಾಡು, ಪ್ರವೃತ್ತಿ, ಮನೋಧರ್ಮ, ಸ್ವಭಾವ, ಪ್ರಕೃತಿ, ಪಾಲು, ಹಂಚಿಕೆ.

Dispossess' (ಡಿಸ್‌ಪೊಝೆಸ್, ಡಿಸ್‌ಪೊಸೆಸ್) vt. oust or dislodge. ಸ್ವಾಧೀನತಪ್ಪಿಸು, ಉಚ್ಚಾಟನೆ ಮಾಡು, ಹೊರಡಿಸಿಬಿಡು, ಕಳಚಿಬಿಡು.

Dispossesion (ಡಿಸ್‌ಪೊಸೆಶನ್) n. act or state of being dislodged. ಸತ್ವಹರಣ, ಅಧಿಕಾರ ಕಿತ್ತುಕೊಳ್ಳುವಿಕೆ.

Disproof' (ಡಿಸ್‌ಪ್ರೂಫ್) n. refutation. ಖಂಡನೆ, ನಿರಸನ, ನಿರಾಕರಣೆ.

Disproportion (ಡಿಸ್‌ಪ್ರಪೊರ್ಶನ್) n. want of symmetry. ಅಸಮತೆ.

Dispropor'tionate (ಡಿಸ್‌ಪ್ರಪೋರ್ಶನೇಟ್) n. unsymmetrical. ಅನನುರೂಪದ, ಅಸಮತೆಯ, ಇಜ್ಜೋಡಿ.

Disprove' (ಡಿಸ್‌ಪ್ರೂವ್) vt. refute, prove false. ತಪ್ಪುತೋರಿಸು, ಖಂಡಿಸು.

Dis'putable (ಡಿಸ್‌ಪ್ಯೂಟಬಲ್) a. open to question. ವಾದಗ್ರಸ್ತ, ವಿವಾದಾಸ್ಪದ.

Dis'putant (ಡಿಸ್‌ಪ್ಯೂಟಂಟ್) n. controversialist. ವಾದಿಸುವವ, ತರ್ಕಿಸುವವ.

Disput'ation (ಡಿಸ್‌ಪ್ಯೂಟೇಶನ್) n. argument, discourse or treatise. ವಾಗ್ವಾದ, ತರ್ಕ, ವಾದವಿವಾದ.

Disputatious (ಡಿಸ್‌ಪ್ಯೂಟೇಶಸ್) a, inclined to dispute. ಕಲಹಪ್ರಿಯ, ವಿವಾದಪ್ರಿಯ.

Dispute' (ಡಿಸ್‌ಪ್ಯೂಟ್) vt. i. hold debate. quarrel, contend for. ಚರ್ಚೆಮಾಡು, ವಾದಿಸು, ವಾಗ್ವಾದ ನಡಸು, ಖಂಡಿಸು, ಪ್ರತಿಭಟಿಸು, ಜಗಳವಾಡು, ಎದುರಿಸು. n. debate, quarrel, difference of opinion. ವಿವಾದ, ವಾಕ್ಕಲಹ, ವ್ಯಾಜ್ಯ, ಭಿನ್ನಾಭಿಪ್ರಾಯ.

Disqualification (ಡಿಸ್‌ಕ್ವಾಲಿಫಿಕೇಷನ್) n. state of being disabled. ಅನರ್ಹತೆ.

Disquali'fy (ಡಿಸ್‌ಕ್ವಾಲಿಫೈ) vt. make unfit or ineligible. ಅಯೋಗ್ಯಪಡಿಸು, ಅನರ್ಹಮಾಡು.

Disquiet (ಡಿಸ್‌ಕ್ವೈಯಟ್) vt. deprive of peace, worry. ಶಾಂತಿಭಂಗಮಾಡು, ವ್ಯಾಕುಲಪಡಿಸು.

Disqui'etude (ಡಿಸ್‌ಕ್ವೈಇಟ್ಯೂಡ್) n. uneasiness, anxiety. ಅಸಮಾಧಾನ, ಅಶಾಂತಿ, ವ್ಯಾಕುಲ, ಕಳವಳ.

Disquisi'tion (ಡಿಸ್‌ಕ್ವಿಝಿಶನ್) n. an elaborate exposition or disputation. ವಿಮರ್ಶೆ, ಉಪನ್ಯಾಸ, ವ್ಯಾಖ್ಯಾನ, ಪ್ರಬಂಧ.

Disregard' (ಡಿಸ್‌ರಿಗಾರ್ಡ್) v.t. pay no attention to be influenced by, ಅಲಕ್ಷ್ಯಮಾಡು, ಉಪೇಕ್ಷೆಮಾಡು, ಕಡೆಗಣ್ಣಿನಿಂದ ನೋಡು, ತಾತ್ಸಾರಮಾಡು, ಅಸಡ್ಡೆಮಾಡು. n. neglect. ಉಪೇಕ್ಷೆ, ಅನಾದರ, ಅಸಡ್ಡೆ, ತಾತ್ಸಾರ.

Disrepute' (ಡಿಸ್‌ರೆಪ್ಯೂಟ್) n. ill repute, discredit. ಅಪಕೀರ್ತಿ, ಅಪ್ರತಿಷ್ಠೆ.

Disrespect' (ಡಿಸ್‌ರೆಸ್ಪೆಕ್ಟ್) n. want of respect, discourtesy. ಅನಾದರಣೆ, ಅಗೌರವ, ಅಪಮಾನ, ಅವಮರ್ಯಾದೆ.

Disrobe (ಡಿಸ್‌ರೋಬ್) vt. deprive of garment. ವಸ್ತ್ರತೆಗೆದು ಹಾಕುವುದು.

Disroot (ಡಿಸ್‌ರೂಟ್) vt. tear up roots. ಮೂಲೋತ್ಪಾಟನಮಾಡು.

Disrupt (ಡಿಸ್‌ರಪ್ಟ್) vt. break up. burst asunder. ಚೂರು ಚೂರಾಗಿ ಮಾಡು, ಒಡಿ, ಸಿಡಿ.

Dissatisfac'tion (ಡಿಸ್ಸಾಟಿಸ್ಫಾಕ್ಶನ್) n. discontent. ಅಸಂತುಷ್ಟಿ, ಅತೃಪ್ತಿ, ಅಸಂತೋಷ, ಅಸಮಾಧಾನ.

Dissat'isfy (ಡಿಸ್ಸಾಟಿಸ್ಫಾಯ್) vt. fail to satisfy, make discontented. ಅತೃಪ್ತಿಗೊಳಿಸು, ಅಸಂತೋಷಗೊಳಿಸು.

Dissect' (ಡಿಸೆಕ್ಟ್) vt. cut in pieces, anatomize, examine or criticize. ತುಂಡುತುಂಡಾಗಿ ಕತ್ತರಿಸು, ವಿಭಜಿಸು, ಛೇದಿಸಿ ಪರೀಕ್ಷಿಸು, ಕೊಯ್ಯು, ಭಾಗ ಭಾಗವಾಗಿ ಪರೀಕ್ಷಿಸು.

Dissection (ಡಿಸೆಕ್ಷನ್) n. anatomy critical analysis. ಅಂಗವಿಚ್ಛೇದ, ತುಂಡುತುಂಡಾಗಿ ಕೊಯ್ಯುವಿಕೆ, ಸೂಕ್ಷ್ಮ ವಿಶ್ಲೇಷಣ.

Disse'mble (ಡಿಸೆಂಬಲ್) vt. i. disguise, conceal, be hypocritical. ನಟಿಸು, ಠಕ್ಕಿಸು, ವೇಷತಾಳು.

Dissem'inate (ಡಿಸ್ಸೆಮಿನೇಟ್) vt. scatter abroad. ಬೀರು, ಬಿತ್ತು, ಚೆಲ್ಲು, ಹೊರಗೆ ಹರಡು, ಪ್ರಸಾರಮಾಡು.

Dissemination (ಡಿಸ್ಸೆಮಿನೇಷನ್) n. diffusion. ವಿಸ್ತಾರ ಹರಡುವಿಕೆ.

Dissen'sion (ಡಿಸ್ಸೆನ್ಷನ್) n. discord, strife ವಿರೋಧ, ವಿವಾದ, ಮನಸ್ತಾಪ, ಭಿನ್ನಾಭಿಪ್ರಾಯ, ವೈಮನಸ್ಯ, ಕಚ್ಚಾಟ, ಒಡಕು, ಭೇದ.

Dissent' (ಡಿಸ್ಸೆಂಟ್) vt. differ in opinion. ಸಮ್ಮತಿಸದಿರು, ಒಪ್ಪಿಗೆ ಕೊಡದಿರು, ಮತಭೇದವುಳ್ಳವನಾಗಿರು, ಒಡಂಬಡದಿರು, ಅಸಮ್ಮತಿ, ಮತಭೇದ.

Dissent'er (ಡಿಸೆಂಟರ್) n. one who dissents, esp from an established church. ಭಿನ್ನಮತಾವಲಂಬಿ, ಅನ್ಯಶಾಖಿ.

Dissen'tient (ಡಿಸ್ಸೆನ್ಶಿಯಂಟ್) a. not agreeing, dissenting. ಸಮ್ಮತಿಸದ, ಭಿನ್ನಾಭಿಪ್ರಾಯದ.

Dissert (ಡಿಸ್ಸರ್ಟ್) vi. discourse or dispute. ಸಂಭಾಷಿಸು, ವಿವಾದಿಸು.

Disserta'tion (ಡಿಸರ್ಟೇಶನ್) n. formal discourse, treatise. ವಿವರಣೆ, ಉಪನ್ಯಾಸ, ನಿಬಂಧ, ಪ್ರಬಂಧ.

Dissim'ilar (ಡಿಸ್ಸಿಮಿಲರ್) a. unlike. ಅಸದೃಶ, ಭಿನ್ನ, ಬೇರೆಯ.

Diss'ipate (ಡಿಸ್ಸಿಪೇಟ್) vt. i. dispel, squander or fritter away. ಚದರಿಸು, ಹಾಳುಮಾಡು, ವ್ಯರ್ಥವಾಗು.

Disso'ciate (ಡಿಸ್‌ಸೋಶಿಏಟ್) vt. separate, part. ಸಂಬಂಧ ಕಡಿದುಬಿಡು, ಜೊತೆಬಿಡು, ಬೇರ್ಪಡಿಸು, ಪ್ರತ್ಯೇಕಿಸು, ಅಗಲಿಸು.

Dissociation (ಡಿಸ್‌ಸೋಶಿಏಷನ್) n. act of separating, disuniting. ಬೇರ್ಪಡಿಸುವಿಕೆ, ಪೃಥಕ್ಕರಣ.

Diss'olute (ಡಿಸೊಲ್ಯೂಟ್) a. loose in moral, lewd. ದುರ್ವ್ಯಸನಿ, ವಿಷಯಲಂಪಟ, ನೀತಿಗೆಟ್ಟ, ಪೋಕರಿ, ವ್ಯಭಿಚಾರಿ, ಲಂಡಭಂಡ.

Dissolut'ion (ಡಿಸ್ಸೊಲ್ಯೂಷನ್) n. dissolving, death, annulment of marriage or other bond. ಕರಗುವುದು, ಸಾವು, ಅಳಿವು, ಕ್ಷಯ, ಮುಕ್ತಾಯ, ನಾಶ, ಸಭೆಯ ವಿಸರ್ಜನೆ, ಚೆದರಿಕೆ.

Dissolve' (ಡಿಝಾ[ಜಾ]ಲ್ವ್) vt. i. decompose, make or become liquid, put an end to: ಭಿನ್ನಮಾಡು, ಕರಗಿಸು, ವಿಲೀನಮಾಡು, ಶಿಥಿಲವಾಗು, ವಿಸರ್ಜಿಸು, ಚೆದರಿಸಿಬಿಡು, ರದ್ದುಮಾಡು.

Dissonance (ಡಿಸ್ಸೊನೆನ್ಸ್) n. disagreement in sound. ಅಪಸ್ವರ, ವಿರುದ್ಧಸ್ವರ.

Diss'onant (ಡಿಸ್ಸೊನಂಟ್) a. jarring, clashing, discordant. ಸ್ವರವಿರೋಧವಾದ, ಅಪಸ್ವರದ, ವಿರುದ್ಧ.

Dissuade' (ಡಿಸ್ವೇಡ್) vt. advise against, hinder. ಮಾಡಬೇಡವೆಂದು ಮನಸ್ಸು ತಿರುಗಿಸು, ಅಡ್ಡಿಪಡಿಸು.

Dissuasion (ಡಿಸ್ವೇಷನ್) n. act of dissuading. ನಿವರ್ತನ, ಅಡ್ಡಿಪಡಿಸುವಿಕೆ.

Dis'taff (ಡಿಸ್ಟಾಫ್) n. staff from which flax is drawn. ಹಂಜಿಕೋಲು,



Distaff

Dis'tance(ಡಿಸ್ಟೆನ್ಸ್) n. length from one point to another,remoteness. distant behaviour. ದೂರ, ಅಂತರ, ದೂರದ ಪ್ರದೇಶ,ಕಾಲಾವಧಿ,ಗಾಂಭೀರ್ಯ ಭಿಡೆ, ಹಿಗ್ಗು. vt leave far behind. ಬಹಳ ಹಿಂದೆ ಬಿಡು.

Dis'tant(ಡಿಸ್ಟೆಂಟ್) a. at a considerable or specified distance. ದೂರವಾದ, ದೂರದ, ದೂರದಲ್ಲಿರುವ.

Distaste'(ಡಿಸ್ಟೇಸ್ಟ್)n.dislike.aversion ಅರುಚಿ,ಅಸಹ್ಯ,ಅಪ್ರೀತಿ,ಜುಗುಪ್ಸೆ. ಹೆದರಿಕೆ.

Distemper (ಡಿಸ್ಟೆಂಪರ್) n. indisposition. disease ಅಸ್ವಸ್ಥತೆ, ವ್ಯಾಧಿ.

Distend (ಡಿ ಸ್ಟೆಂ ಡ್) vi. swell out or be dilated by pressure from within. ಉಬ್ಬು, ಊದು,ಹಿಗ್ಗು,ಊದಿ ಕೊಳ್ಳು.

Dis'tich(ಡಿಸ್ಟಿಕ್) n. [poet] couplet. ಶ್ಲೋಕ, ದ್ವಿಪದಿ.

Dis'til (ಡಿಸ್ಟಿಲ್)vt. i. trickle come or give forth in drops ತೊಟ್ಟಿಕ್ಕು, ಹನಿಹನಿಯಾಗಿ ಬೀಳು, ಒಸರು, ಜಿನುಗು, ಸಾರವಿಳಿಸು, ಭಟ್ಟಿಇಳಿಸು, ಇಂಗಿಸು, ಸೋಸು.

Distillation (ಡಿಸ್ಟಿಲೇಷನ್) n. act of process of distilling. ಭಟ್ಟಿ ಇಳಿಸುವಿಕೆ.



Distillation

Distill'ery (ಡಿಸ್ಟಿಲರಿ) n. spirit distilling establishment. ಸಾರಾಯಿ ಭಟ್ಟಿ ಇಳಿಸುವ ಕಾರ್ಖಾನೆ.

Distinct' (ಡಿಸ್ಟಿಂಕ್ಟ್) a. clear, well defined, separate or different in identity. ಪ್ರತ್ಯೇಕವಾದ, ಸ್ಫುಟ, ಸ್ಪಷ್ಟವಾಗಿ ಕಾಣುವ,ಭಿನ್ನ,ವ್ಯತಿರಿಕ್ತ,ನಿಶ್ಚಿತವಾದ, ಬೇರೆಯಾದ.

Distinc tion (ಡಿಸ್ಟಿಂಕ್ಷನ್)n. difference. ಭಿನ್ನತೆ, ವ್ಯತ್ಯಾಸ, ವಿಶೇಷಲಕ್ಷಣ, ಪ್ರತಿಷ್ಠೆ, ಗೌರವ, ಪ್ರಖ್ಯಾತಿ, ಘನತೆ, ಮಹತ್ವ, ವೈಶಿಷ್ಟ್ಯ.

Dist'inctive(ಡಿಸ್ಟಿಂಕ್ಟಿವ್) a. expressing difference. ಭೇದ ತೋರಿಸುವ, ಪಾರ್ಥಕ್ಯಸೂಚಕ, ವೈಶಿಷ್ಟ್ಯಪೂರ್ಣ.

Distinctly (ಡಿಸ್ಟಿಂಕ್ಟ್ಲೀ)adv. clearly, perceptibly. ಸುಸ್ಪಷ್ಟವಾಗಿ.

Disting'uish(ಡಿಸ್ಟಿಂಗ್ವಿಷ್)vt.i. draw or make distinctions between; characterize, recognize; make oneself prominent. ಭೇದಮಾಡು, ವಿಭಜಿಸು, ವಿಶೇಷಿಸು, ವ್ಯತ್ಯಾಸಕಾಣು, ವಿಂಗಡಿಸು,ಗುರುತಿಸು, ಪ್ರಾಮುಖ್ಯಕ್ಕೆಬರು, ಕೀರ್ತಿಪಡೆ.

Distort' (ಡಿಸ್ಟಾರ್ಟ್)vt. pull or twist out of shape misrepresent. ವಿರೂಪಮಾಡು, ವಕ್ರಮಾಡು, ವಿಕಾರಮಾಡು, ಕೊಂಕಿಸು, ತಪ್ಪುಅಭಿಪ್ರಾಯಕೊಡು.

Distortion (ಡಿಸ್ಟಾರ್ಷನ್) n. act of distorting, deforming. ವಿರೂಪಗೊಳಿಸುವುದು, ಕುಟಿಲರೂಪ.

Distract' (ಡಿಸ್ಟ್ರ್ಯಾಕ್ಟ್)vt. divert, drive mad. ಮನಸ್ಸುತಿರುಗಿಸು, ಭ್ರಮೆಹಿಡಿಸು.

Distrac'ted (ಡಿಸ್ಟ್ರ್ಯಾಕ್ಟೆಡ್) a. driven mad, infuriated, bewildered. ಬುದ್ಧಿಭ್ರಂಶವಾದ, ವಿಕ್ಷಿಪ್ತ, ವ್ಯಗ್ರ, ಮೂಢ.

Distrac'tion (ಡಿಸ್ಟ್ರ್ಯಾಕ್ಷನ್)n. diversion, anger, perplexity, confusion,dissension. ಚಿತ್ತಭ್ರಮಣೆ, ಚಿತ್ತಭ್ರಂಶ, ವ್ಯಗ್ರತೆ. ಕೋಪ, ದಿಗ್ಭ್ರಮಣೆ ಉನ್ಮಾದ, ಮನಶ್ಚಾಪಲ್ಯ.

Distraint(ಡಿಸ್ಟ್ರೇಂಟ್) n. legal seizure for debt. (ಸಾಲಕ್ಕಾಗಿ) ಜಪ್ತಿ.

Distraught (ಡಿಸ್ಟ್ರಾಟ್) a. distracted, perplexed. ಗಾಬರಿಯಾದ,ವ್ಯಾಕುಲಪಟ್ಟ.

Distress' (ಡಿಸ್ಟ್ರೆಸ್) n. mental pain.

pressure, [law] distraint. ಮಾನಸಿಕ ದುಃಖ, ವ್ಯಥೆ, ಯಾತನೆ, ಸಂಕಟ, ದುರವಸ್ಥೆ, ಕೊರತೆ, ಅತಿತೊಂದರೆ, ದಣಿವು, ಆಯಾಸ, ಸೋಲು, ಜಪ್ತಿ, vt. pain mentally, exhaust ಪೇಚಾಡಿಸು, ಗೋಳಾಡಿಸು, ಬಳಲಿಸು, ಪೀಡಿಸು, ಗೋಳುಗುಟ್ಟಿಸು.

istrib'ute (ಡಿಸ್ಟ್ರಿಬ್ಯೂಟ್) vt. deal out, give each a share of, classify. ಹಂಚು, ಪಾಲುಮಾಡಿ ಕೊಡು, ಚೆದರಿಸು, ವಿಂಗಡಿಸು.

istribution (ಡಿಸ್ಟ್ರಿಬ್ಯೂಶನ್) n, act of distributing, classification. ಹಂಚಿಕೆ, ವಿಂಗಡನೆ, ವರ್ಗೀಕರಣ.

istrib'utive (ಡಿಸ್ಟ್ರಿಬ್ಯೂಟಿವ್) a. that distributes, separates or divides. ಹಂಚುವಂಥ, ವಿನಿಯೋಗಿಸುವ.

is'trict (ಡಿಸ್ಟ್ರಿಕ್ಟ್) n. region, province, territory. ಪ್ರದೇಶ, ಜಿಲ್ಲೆ, ನಾಡು, ಪ್ರಾಂತ, ತುಕಡಿ.

istune (ಡಿಸ್‌ಟ್ಯೂನ್) vt. put out of tune. ಧ್ವನಿ ತಪ್ಪಿಸು.

istrust (ಡಿಸ್ಟ್ರಸ್ಟ್) n. want of trust. doubt, suspicion. ಅಪನಂಬಿಗೆ, ಸಂಶಯ, ನೆಚ್ಚಿಕೆಯಿಲ್ಲದಿರುವುದು, ಸಂದೇಹ, ಅವಿಶ್ವಾಸ. vt disbelieve, doubt. ನಂಬದಿರು, ಶಂಕಿಸು.

isturb' (ಡಿಸ್ಟರ್ಬ್) vt. break the rest or quiet of; worry, disorganize. ಶಾಂತಿಭಂಗಮಾಡು, ಕೆಡಿಸು, ಕಲಕು, ಕೆರಳಿಸು, ತೊಂದರೆಮಾಡು, ಕ್ಷೋಭೆಗೊಳಿಸು, ಕಾಡು.

isturb'ance (ಡಿಸ್ಟರ್ಬನ್ಸ್) n. agitation, tumult perplexity. ಕ್ಷೋಭೆ, ಗಲಭೆ, ಗೊಂದಲ, ದೊಂಬಿ, ದಂಗೆ, ಬಾಧೆ, ಆತಂಕ, ತಲ್ಲಣ; ದಾಂಧಲೆ.

isu'nion (ಡಿಸ್ಯೂನ್ಯನ್) n. want of union, separation. ಅನೈಕ್ಯಮತ್ಯ, ಭೇದ, ಒಡಕು, ವಿಯೋಗ, ಅಗಲಿಕೆ.

isunite' (ಡಿಸ್ಯೂನೈಟ್) vt. i. separate, become separate. ಅಗಲಿಸು, ಬೇರೆಯಾಗು, ಭೇದಹುಟ್ಟಿಸು, ವಿಭಾಗಿಸು.

Disunity (ಡಿಸ್‌ಯೂನಿಟಿ) n. want of unity disunion, ಜಗಳ, ಅನೈಕ್ಯ.

Disusage (ಡಿಸ್‌ಯುಸೇಜ್) n. neglect of custom. ಪದ್ಧತಿಯನ್ನು ತಪ್ಪಿಸು.

Disuse' (ಡಿಸ್ಯೂಝ್) vt. cease to use. ಉಪಯೋಗಿಸದಿರು, ಬಳಸದಿರು, ಅಭ್ಯಾಸಬಿಡು, ರೂಢಿತಪ್ಪಿಸು. n. cessation of use. ಅಪ್ರಯೋಗ, ಅಪ್ರಚಾರ, ಅವ್ಯವಹಾರ, ಅನಭ್ಯಾಸ.

Disyllable (ಡೈಸಿಲಬ್‌ಲ್) n. a word of two syllables. ಎರಡು ಮಾತ್ರೆಗಳ ಶಬ್ದ.

Ditch (ಡಿಚ್) n. a trench dug in the ground. ಕಂದಕ; ಅಗಳು, ಕಾಲುವೆ.

Ditheism (ಡೈಥಿಯಿಸಮ್) n. doctrine of the existence of two supreme Gods. ದ್ವಿದೇವವಾದ.

Dither (ಡಿಥರ್) vi. shiver with cold. ಛಳಿಯಿಂದ ನಡುಗು.

Ditto' (ಡಿಟ್ಟೊ) n. the same thing. ಅದೇ, ಅದೇವ, ಸದರಿ, ಹಿಂದೆ ಹೇಳಿದ, ಮೇಲೆಹೇಳಿದ ನಕಲು, ಪ್ರತಿ.

Dittology (ಡಿಟೋಲಜಿ) n. double reading. ಎರಡುಸಲ ಓದುವುದು.

Ditty (ಡಿಟಿ) n. a short simple song. ಪದ, ಲಘುಗೀತೆ

Diuretic (ಡಯುರೆಟಿಕ್) a. promoting discharge of urine. ಮೂತ್ರವರ್ಧಕ.

Diurn'al (ಡಯರ್ನಲ್) a. in or of the day. ಹಗಲಿನ, ಪ್ರತಿದಿನದ.

Divan (ದಿವಾನ್) n. oriental council room. ದಿವಾನ್‌ಖಾನೆ

Divagate (ಡೈವಗೇಟ್) vi. stray away, wander about. ಮಾರ್ಗಬಿಟ್ಟು ಹೋಗು, ಅಡ್ಡದಾರಿ ಹಿಡಿ.

Divellicate (ಡೈವೆಲ್ಲಿಕೇಟ್) vt. pull in pieces ಚೂರುಚೂರಾಗಿ ಮಾಡು.

Diver (ಡೈವರ್) n. one who dives. diving bird. ಮುಣುಗುವವ, ನೀರಕೋಳಿ.

Dive (ಡೈವ್) vt. plunge esp. head foremost into water, &c. make deep enquiry into. ತಲೆಮೊದಲಾಗುವಂತೆ ಮೇಲಿನಿಂದ ಧುಮುಕಿ ಮುಳುಗು, ಆಮೂಲಾಗ್ರ ವಿಚಾರಿಸು.



Diving

Diverge' (ಡೈವರ್ಜ್) vt. take a different direction, go off sideways, digress. ಹಾದಿಬಿಟ್ಟು ಬೇರೆದಿಕ್ಕಿಗೆ ಹೋಗು, ದಾರಿತಪ್ಪಿನಡೆ, ಅಪ್ರಸ್ತಾಪಿಸು.

Divergent (ಡೈವರ್ಜೆಂಟ್) a. different. ಬೇರೆ ಬೇರೆ.

Di'vers (ಡೈವರ್ಸ್) n. sundry, several. ಹಲವು, ನಾನಾ, ವಿವಿಧ, ಚಿಲ್ಲರೆ, ಸಣ್ಣಪುಟ್ಟ.

Diverse' (ಡೈವರ್ಸ್) a. different, unlike, various. ವಿವಿಧ, ಬಗೆಬಗೆಯ, ಹಲವು ತೆರದ, ಪರಿಪರಿ.

Divers'ify (ಡೈವರ್ಸಿಫೈ) vt. make different, vary. ಬಗೆಬಗೆ ಮಾಡು.

Diver'sion (ಡೈವರ್ಷನ್) n. diverting, deviation, amusement. ಮನಸ್ಸು ತಿರುಗಿಸುವಿಕೆ, ವಿಹಾರ, ಆಟ, ವಿನೋದ.

Divers'ity (ಡೈವರ್ಸಿಟಿ) n. diverseness, variety. ನಾನಾತ್ವ, ವಿವಿಧತೆ, ವೈವಿಧ್ಯ, ಬೇರೆರೀತಿ, ವೈಚಿತ್ರ್ಯ, ತರತರ.

Divert' (ಡೈವರ್ಟ್) vi. turn in another direction, entertain, amuse. ಮನಸ್ಸು ತಿರುಗಿಸು, ವಿನೋದಪಡಿಸು, ಮನರಂಜಿಸು.

Divert'ing (ಡೈವರ್ಟಿಂಗ್) a. amusing. ವಿನೋದವನ್ನುಂಟುಮಾಡುವ, ಮನರಂಜಕ.

Dives (ಡೈವೀಸ್) n. rich and luxurious person. ಧನಿಕ, ಐಶ್ವರ್ಯವಂತ.

Divest' (ಡೈವೆಸ್ಟ್) vt. unclothe, strip, lay bare. ನಗ್ನಮಾಡು, ಬತ್ತಲೆ ಮಾಡು. ಅಪಹರಿಸು, ಉಡುಪುತೆಗೆ, ಕಸಿದುಕೊ, ಕಳಚಿಹಾಕು, ತೆಗೆದುಬಿಡು, ಇಲ್ಲದಂತೆ ಮಾಡು.

Divestment (ಡೈವೆಸ್ಟ್‌ಮೆಂಟ್) n. act of divesting. ಹಕ್ಕಿನ ಅಪಹರಣ.

Divide' (ಡಿವೈಡ್) vt. i. separate into parts, cut off, set at variance, distribute. ಭಾಗಮಾಡು. ಭಾಗವಾಗು, ಹೋಳುಮಾಡು, ವಿಂಗಡಿಸು, ವಿಭಾಗಿಸು, ಕತ್ತರಿಸಿಹಾಕು, ಪ್ರತ್ಯೇಕಿಸು, ವರ್ಗೀಕರಿಸು, ಒಡಕು ಹುಟ್ಟಿಸು.

Div'idend (ಡಿವಿಡೆಂಡ್) n. that whic is to be divided, sum payabl as interest or profit on share ಭಾಜ್ಯ, ಲಾಭಾಂಶ, ಭಾಜ್ಯಾಂಶ, ಹಿಸ್ಸೆ ಭಾಗ.

Divi'der (ಡಿವೈಡರ್) n. that whic divides, (plu.) pair of measurin compasses. ಭಾಜಕ (ಭಾ. ವ.), ಅಳತೆ ಮಾಡುವ "ಕಂಪಾಸ್".

Divi-divi (ಡಿವಿಡಿವಿ) n. a tropica American tree. ಅಮೆರಿಕಾದ ಉಷ್ಣವಲಯಗಳಲ್ಲಿ ಬೆಳೆಯುವ ಒಂದು ಬಗೆಯ ಮರ.

Divina't'on (ಡಿವಿನೇಷನ್) n. divinin esp. by aid of magic. ಕಣಿ, ಶಕುನ ಹೇಳುವುದು, ಭವಿಷ್ಯಜ್ಞಾನ ಹೇಳುವುದು.

Divinator (ಡಿವಿನೇಟರ್) n. one wh pretends to foretell the future. ಭವಿಷ್ಯಜ್ಞಾನಿ, ಕಣಿ ಹೇಳುವವನು.

Divine' (ಡಿವೈನ್) a. of, from o like God or a God, sacred ದೈವಿಕ, ದೇವತೆಯ, ಪುಣ್ಯ, ದೇವದತ್ತ, ದಿವ್ಯವಾದ, ಸ್ವರ್ಗೀಯ, ಪವಿತ್ರ n. theologian. ಗುರು, ವೇದಮೂರ್ತಿ, ಬ್ರಹ್ಮಜ್ಞಾನಿ. vt. i. foresee, predict, conjecture. ಭವಿಷ್ಯ ಹೇಳು. ಊಹಿಸು; ಕಣಿ ಹೇಳು, ಕಾಲಜ್ಞಾನದಿಂ ಹೇಳು.

Divinize (ಡಿವಿನೈಜ್) vt. to deify. ದೇವತೆಯನ್ನಾಗಿ ಮಾಡು.

Diving-bell (ಡೈವಿಂಗ್‌ಬೆಲ್) n. apparatus used to descend below water. ಮುಳುಗು ಪೆಟ್ಟಿಗೆ, ಮುಳುಗು ಗಂಟೆ.



Diving bell

Divin'ity (ಡಿವಿನಿಟಿ) n. divineness, divine being, theology. ದೈವತ್ವ, ದೇವತೆ, ದೇವಜ್ಞಾನಶಾಸ್ತ್ರ, ಬ್ರಹ್ಮಜ್ಞಾನ.

Divis'ible (ಡಿವಿಜಬಲ್) a. that can be divided. ವಿಭಾಗಿಸತಕ್ಕ, ಭಾಜ್ಯ.

Division (ಡಿ ವಿ ಝ ನ್) n. dividing or being divided. ಭಾಗ, ಜಿಲ್ಲೆ, ಮಂಡಲ, ವರ್ಗ, ಭಾಗಾಹಾರ, ಭಾಗಾಕಾರ.

Divisional (ಡಿವಿಜನಲ್) a. belonging to a division. ವಿಭಾಗಕ್ಕೆ ಸಂಬಂಧಿಸಿದ.

Divisor (ಡಿ ವೈ ಸ ರ್) n. number by which another is divided. ಭಾಜಕ.

Divorce' (ಡೈವೋರ್ಸ್) n. dissolution of marriage, separation between things that should go together. ವಿವಾಹವಿಚ್ಛೇದನ, ಸಂಬಂಧವಿಯೋಗ.

Divulgate (ಡೈವಲ್ಗೇಟ್) adj. published. ಪ್ರಕಾಶಿತವಾದ.

Divulge (ಡಿವಲ್ಜ್) vt. let out (secret), make public. ಹೊರಗೆಡಹು, ಬಯಲುಮಾಡು, ಬಹಿರಂಗಮಾಡು, ಪ್ರಕಟಿಸು, ರಟ್ಟುಮಾಡು.

Divulger (ಡೈವಲ್ಜರ್) n. one who divulges. ಬಹಿರಂಗಮಾಡುವವನು.

Divulging (ಡೈವಲ್ಜಿಂಗ್) n. act of revealing. ಪ್ರಕಾಶನ, ಉದ್ಘಾಟನ.

Divulsion (ಡೈವಲ್‌ಷನ್) n. separation. ಅಗಲುವಿಕೆ.

Dizzard (ಡಿಜಾರ್ಡ್) n. blockhead, fool. ಮೂರ್ಖ.

Dizen (ಡೈಸನ್) vr. dress. ಸಿಂಗರಿಸು. ಅಲಂಕರಿಸು.

Dizzily (ಡಿಜಿಲಿ) adv. in a dizzy manner. ತಲೆತಿರುಗುವಂತೆ, ಭ್ರಮಿಸುವಂತೆ.

D'izzy (ಡಿಜ್ಜಿ) a. giddy, dazed, unsteady. ತಲೆ ತಿರುಗಿಸುವ, ಶಿರೋಭ್ರಮಣೆಯು, ಚಂಚಲ. d. height. ತಲೆ ತಿರುಗುವಷ್ಟು ಎತ್ತರ.

Do (ಡು) vt. perform, effect, complete, deal with, set in order, solve, exhaust. ಮಾಡು, ನೆರವೇರಿಸು, ಸಾಧಿಸು, ವ್ಯವಸ್ಥೆಮಾಡು, ಬಿಡಿಸು, ದಣಿಸು. vi act. proceed, succeed, ಆಚರಿಸು, ನಡೆಯಿಸು, ನಡೆಸು, ಮುಂದರಿಯು, ಕೊನೆಗಾಣಿಸು, ಸಾಲು, ಮುಗಿಸಿಬಿಡು, ಸಾಕಾಗು. d. a thing under the rose, do a thing secretly. ಗುಪ್ತವಾಗಿ ಕೆಲಸ ಮಾಡು. d. away with, remove, destroy. ತೆಗೆದುಹಾಕು, ನಾಶಗೊಳಿಸು. d. up, make tidy, ruin, make bankrupt, weary. ಚೊಕ್ಕಟಮಾಡು, ಹಾಳುಮಾಡು, ದಿವಾಳಿಮಾಡು, ಆಯಾಸಗೊಳಿಸು. d. for spoil, ruin. ಕೆಡಿಸು, ನಾಶಗೊಳಿಸು. d. battle, contend. ಹೋರಾಡು. d. one's best. exert oneself to the utmost. ಕೈಲಾದಷ್ಟು ಪ್ರಯತ್ನಮಾಡು. d. in the eye. (sl.) cheat. ಮೋಸಗೊಳಿಸು. d. one good, give joy to. ಸಂತೋಷಗೊಳಿಸು. d. into; translate into. ಭಾಷಾಂತರಿಸು. done brown (sl) swindled. ಸುಲಿಗೆಗೊಳಗಾದ, ವಂಚಿತ. done up, tired. ಬಳಲಿದ. be well to; be in prosperous condition. ಅಭಿವೃದ್ಧಿಸ್ಥಿತಿಯಲ್ಲಿರು. d. to, inflicton. ಹೊರಿಸು. d. honour, act as host or hostess at an entertainment. ಉತ್ಸವದಲ್ಲಿ ಮನೆಯೊಡೆಯ ಅಥವಾ ಒಡತಿಯಂತೆ ವರ್ತಿಸು. do to death, kill. ಕೊಲ್ಲು. do a city, visit and see the sights of it. ಪಟ್ಟಣವನ್ನು ನೋಡು. have to

do with, have business with. ವ್ಯವಹಾರವಿಡು. d. a person brown, deceive him completely, hood wink. ಸಂಪೂರ್ಣವಾಗಿ ಮೋಸಗೊಳಿಸು. ದಬಾಯಿಸು.

Doab(ದೋಆಬ್)n piece of country between two rivers. ಎರಡು ನದಿಗಳ ಮಧ್ಯದ ಪ್ರದೇಶ.

Dobbin (ಡಾಬಿನ್) n. a farm horse. ಜೀತದ ಕುದುರೆ.

Do'cile(ಡೊಸೈಲ್) a. easy to teach and willing to obey. ಸಾಧು, ವಿಧೇಯ, ನಮ್ರ.

Docility ಡೊಸೈಲಿಟಿ)n. submissiveness. ವಿಧೇಯತೆ, ನಮ್ರತೆ.

Dock (ಡಾಕ್) n. basin for loading and repairing of ships. enclosure in court for prisoner. ಹಡಗು ನಿಲ್ಲುವ ಅಥವಾ ಸರಿಮಾಡುವ ಸ್ಥಳ, ಹಡಗು ಕಟ್ಟೆ. "ಗೋದಿ", ಬಂದಿ ಕಟಕಟೆ, ಕೋರ್ಟಿನಲ್ಲಿ ಕೈದಿ ನಿಲ್ಲುವ ಆವರಣ.

Docker (ಡಾಕರ್)n dock labourer. ಹಡಗಿನ ಕಟ್ಟೆಯಲ್ಲಿ ಕೆಲಸಮಾಡುವ ಕೂಲಿಯಾಳು.

Dockyard(ಡಾಕ್‌ಯಾರ್ಡ್) n. enclosure for building, and repairing ships. ಹಡಗು ಮೊದಲಾದ್ದನ್ನು ನಿಲ್ಲಿಸುವ ಅಥವಾ ಸರಿಪಡಿಸುವ ಸ್ಥಳ.

Dock'et (ಡಾಕೆಟ್) n. endorsement on document showing its subject or contents. ಸೂಚಿಪತ್ರ, ಸಂಕ್ಷೇಪವಾದ ಚೀಟು, ಚೀಟಿ.

Dockmaster (ಡಾಕ್ ಮಾಸ್ಟರ್) n. supervisor of a dock ಹಡಗು ಕಟ್ಟೆಯನ್ನು ನೋಡಿಕೊಳ್ಳುವ ಅಧಿಕಾರಿ.

Doc'tor (ಡಾಕ್ಟರ್) n. holder of highest university degree in any faculty, qualified medical practitioner. ಪಂಡಿತ, ಬಿರುದು ಪಡೆದವ, ಚಿಕಿತ್ಸೆಮಾಡುವವ, ಡಾಕ್ಟರು.

Doctrinaire (ಡಾಕ್ಟ್ರಿನೇರ್)n. political theorist. ಕೇವಲ ತಾತ್ವಿಕ, ಆಚರಣೆಯಿಲ್ಲದವ.

Doctrinal (ಡಾಕ್ಟ್ರಿನಲ್) adj. pertaining to a doctrine. ತತ್ವ ಸಂಬಂಧವಾದ, ತಾತ್ವಿಕ.

Doc'trine (ಡಾಕ್ಟ್ರಿನ್) n. a thing taught, a particular dogma. ಉಪದೇಶ, ಬೋಧನೆ, ಮತ, ಸಿದ್ಧಾಂತ, ವಾದ, ತತ್ವ, ಧರ್ಮತತ್ವ.

Doc'ument (ಡಾಕ್ಯುಮೆಂಟ್)n. paper containing infomation or the proof of anything. ಲೇಖ್ಯ, ಪತ್ರ, ಕಾಗದಪತ್ರ, ದಸ್ತಾವೇಜು.

Documental (ಡಾಕ್ಯುಮೆಂಟಲ್) adj pertaining to a document. ಲೇಖನಕ್ಕೆ ಸಂಬಂಧಿಸಿದ, ಪತ್ರಸಂಬಂಧಿ.

Documentation ಡಾಕ್ಯುಮೆಂಟೇಶನ್) n. use of documents. ಪತ್ರಗಳ ಉಪಯೋಗ.

Dodd(ಡಾಡ್)vt. cut off wool from sheep's tail. ಕುರಿಯ ಬಾಲದಿಂದ ಉಣ್ಣೆಯನ್ನು ಕತ್ತರಿಸು.

Dodder (ಡಾಡರ್) vi. tremble, totter, shake. ನಡುಗು, ಕಂಪಿಸು.

Dodge (ಡಾಜ್) n. swerving or zigzag movement, piece of duplicity, wrinkle or ingenious method. ವಕ್ರಗತಿ, ಕಪಟೋಪಾಯ, ಮೋಸ, ಠಕ್ಕು, ಯುಕ್ತಿ, ಕಪಟ, ತಂತ್ರ. vi. i. elude, treat evasively. ಜಾರುಪಾಟು ಮಾಡು, ಯುಕ್ತಿನಟಿಸು, ಎರಡರ್ಥದ ಮಾತಾಡು, ನುಸುಳು ಮಾತಾಡು, ನುಣುಚಿಕೊ, ತಪ್ಪಿಸಿಕೊ.

Doe(ಡೋ)n. female of the fallow deer hare or rabbit. ಹೆಣ್ಣುಚಿಗರಿ, ಹರಿಣಿ, ಹೆಣ್ಣುಮೊಲ.

Doff (ಡಾಫ್) vt. take off(hat,&c.) ತೆಗೆ (ಟೋಪಿ ಮುಂತಾದ್ದು).

Dog (ಡಾಗ್) n. quadruped of various breeds, wild and domesticated, worthless man or boy; lucky or sly fellow. ನಾಯಿ ಕುನ್ನಿ.

ಸೊಣಗ, ಗಂಡುನರಿ, ಒರಟ, ಅನಾರೋಗ್ಯ, ಅದೃಷ್ಟವಂತ, ಸುಳ್ಳುಗಾರ. vt. follow closely, pursue tract. ಬೆನ್ನು ಹಿಡಿ, ಬೆನ್ನಟ್ಟಿ ಹೋಗು, ಜಾಡು ಹಿಡಿ. d. in the manger. (sl.) a selfish man who refuses to allow his neighbour to enjoy even what he himself has no use for. ತಾನೂ ತಿನ್ನ, ಪರರಿಗೂ ಕೊಡ. go to the ds, be corrupted or ruined. ಕೆಟ್ಟು ಹೋಗು, ನಾಶವಾಗು. throw to the ds., throw away. ಬಿಸಾಟು ಬಿಡು, ಬಿಸಾಕು, ದೂರ ಎಸೆ. a. ds., chance, last chance. ಅಲ್ಪ ಅವಕಾಶ. ds. of war, famine, sword & fire. ಬರಗಾಲ, ಯುದ್ಧ, ಅಗ್ನಿ ಪ್ರಳಯ. d. cheap. very cheap. ಅತಿ ಅಗ್ಗ. give a d. a bad name and hang him, goodness is not proof against calumny. ಹೆಸರು ಕೆಡಿಸಿಕೊಂಡವನ ಸತ್ಕಾರ್ಯಗಳಿಂದ ಕೀರ್ತಿ ಬರಲಾರದು. every d. has his day; no one is always unlucky. ಎಲ್ಲರ ಜೀವನದಲ್ಲೂ ಒಳ್ಳೆಯ ಕಾಲ ಬರದಿರದು, ಅತ್ತೆಗೊಂದು ಕಾಲ ಸೊಸೆಗೊಂದು ಕಾಲ.

Dog'cart (ಡಾಗ್ ಕಾರ್ಟ್) n. two wheeled carriage. ಎರಡು ಗಾಲಿಯ ಗಾಡಿ.

Dogg'ed (ಡಾಗೆಡ್) a. tenacious. ಹಠವಾರಿಯಾದ, ಹಿಡಿದಪಟ್ಟು ಬಿಡದ, ಮುಷ್ಕರವುಳ್ಳ, ಛಲವುಳ್ಳ, ಜಗ್ಗದ, ಬಗ್ಗದ.

Dogg'erel (ಡಾಗೆರೆಲ್) n. slipshod or unpoetic verse. ಹುರುಳಿಲ್ಲದ ಲಾವಣಿ, ಬಗದಾಳ, ಕುಂಟು ಪದ್ಯ, ಕ್ಷುಲ್ಲಕ ಪದ್ಯ.

Dog'ma (ಡಾಗ್ಮ)n. principle, tenet, doctrinal system. ಮತ ತತ್ವ, ಅಭಿಪ್ರಾಯ, ಸಿದ್ಧಾಂತ.

Dogma'tic (ಡಾಗ್ಮ್ಯಾಟಿಕ್) a. one of the nature of dogma, given to dogmatising. ಸ್ವಮತಾಭಿಮಾನವುಳ್ಳ, ಸಿದ್ಧಾಂತದ, ತತ್ವಾತ್ಮಕ, ಶಾಸ್ತ್ರಾಧಾರದ, ಹಠದ, ಗರ್ವದ, ಅಹಂಕಾರದ.

Dog'matism (ಡಾಗ್ಮ್ಯಟಿಜ್ಂ)n. dogmatising, temper. ಶಾಸ್ತ್ರಾಂಧತೆ, ಹಠಸ್ವಭಾವ, ಸ್ವಮತಾಭಿಮಾನ.

Dog'matize(ಡಾಗ್ಮಟೈಜ್) vt. assert positively. ಪ್ರತಿಪಾದಿಸು, ಹಠದಿಂದ ಹೇಳು, ಊರಿಹೇಳು.

Doily (ಡಾಯ್ಲಿ) n. small napkin. ಸಣ್ಣ ಚೌಕ.

Do'ings (ಡೂಇಂಗ್ಸ್-ಗ್ಸ್) n. (plu.) things done, events, behaviour. ಕಾರ್ಯ, ವರ್ತನೆ, ನಡಾವಳಿ, (ಕೆಲಸದ) ವಿಷಯಗಳು, ನಡತೆ, ಆಚರಣೆ.

Doit (ಡಾಇಟ್) n. very small sum. ಬಹಳ ಸ್ವಲ್ಪ ಹಣ, ಪುಡಿಕಾಸು, ಅತ್ಯಲ್ಪ ಮೊಬಲಗು.

Dole (ಡೋಲ್) n. charitable gift, esp. of measured amount, payment of unemployment insurance, woe. ಭಿಕ್ಷೆ, ದಾನ, ಧರ್ಮ, ದುಡ್ಡು, ನಿರುದ್ಯೋಗ ವೇತನ, ದುಃಖ, ಸಂಕಟ, ವ್ಯಥೆ. vt. deal out, distribute. ಹಂಚು, ಕೊಡು.

Dole'ful (ಡೋಲ್‌ಫುಲ್) a. dreary, dismal, melancholy. ಶೋಕಪರ, ವಿಷಣ್ಣ, ವ್ಯಥೆಯ, ಕೊರಗುವ.

Dolesome (ಡೋಲ್‌ಸಮ್) adj. gloomy, painful. ನಿರುತ್ಸಾಹ ಭರಿತ, ವಿಷಣ್ಣ.

Doll(ಡಾಲ್) n. puppet or toy-baby for a child. ಗೊಂಬೆ, ಬೊಂಬೆ, ಪ್ರೀತಿಯ ಹುಡುಗಿ, ತಿಳಿಗೇಡಿಯಾದ ಚೆಲುವೆ, ಚೆಲುವೆಯಾದ ಮೂರ್ಖ ಸ್ತ್ರೀ ಅಥವಾ ಮಗು, ಶಿಶು.

Doll'ar (ಡಾಲರ್) n. silver coin of U. S., Canada & elsewhere=100 cents. ಅಮೆರಿಕದ ಬೆಳ್ಳಿಯ ನಾಣ್ಯ (ಸುಮಾರು ರೂಪಾಯಿ ೫).

Dolly (ಡಾಲಿ) n. doll, kind of wooden shaft use in washing. ಬೊಂಬೆ.

Dol'orous (ಡಾಲರಸ್) a. painful, sad, dismal. ದುಃಖಕರ, ವ್ಯಸನಕರ, ವ್ಯಥೆಗೊಳಿಸುವ, ಸಂಕಟಕರವಾದ, ಶೋಕಾರ್ಥ, ದುಃಖಪೀಡಿತ, ಸಂಶೋಕ, ಉದ್ವಿಗ್ನ, ಆಕುಲ.

Dol'our (ಡಾಲರ್) n. sorrow, distress. ದುಃಖ, ಕ್ಲೇಶ, ಖೇದ, ಆರ್ತಿ.

Dol phin (ಡಾಲ್ಫಿನ್) n. porpoise-like sea mammal. ಹಂದಿ ಮೀನು, ಸಾಯುವಾಗ ಬಣ್ಣ ತಿರುಗುವ ಮತ್ಸ್ಯ ಭೇದ.



Dolphin

Dolt (ಡೋಲ್ಟ್) n. stupid fellow. ದಡ್ಡ, ಟೊಣಪ, ಮೂಢ, ಮೂರ್ಖ, ಜಡ.

Domain' (ಡೊಮೇಯ್ನ್) n. estate or realm. ರಾಜ್ಯ, ಸ್ವಾಮಿತ್ವ, ಭೂಸ್ವತ್ತು, ಜಮೀನು, ಆಧಿಪತ್ಯ, ಪ್ರಾಂತ, ಆಳಿಕೆಯಲ್ಲಿರುವ, ಅಧಿಕಾರಕ್ಕೊಳಪಟ್ಟ, ಆಸ್ತಿ, ವಿಷಯ, ಸ್ವಭೂಮಿ.

Dome (ಡೋಮ್) n. rounded vault as roof, stately building (fig.) the sky. ಗುಮ್ಮಟ, ಗೋಳಾಕಾರದ ಶಿಖರ, ಭವ್ಯಭವನ, ಆಕಾಶ, ಸೌಧ, ಪ್ರಸಾದ, ಗುಂಬಜು.



Dome

Domes'tic (ಡೊಮೆಸ್ಟಿಕ್) a. of the home, household or family affairs of one's country. ಮನೆಯ, ಸಂಸಾರದ, ಗೃಹಕೃತ್ಯದ n. household servant. ಚಾಕರ, ಊಳಿಗದವ, ದೇಶೀಯ ಮನೆಯಾಳು.

Domes'ticate (ಡೊಮೆಸ್ಟಿಕೇಟ್) vt. tame animal, naturalise (plant &c.) ಸಾಧುಮಾಡು, ಮನುಷ್ಯನ ಅಧೀನಕ್ಕೆ ತರು, ಭೂಗುಣಕ್ಕೆ ಒಗ್ಗಿಸು, ಪಳಗಿಸು.

Domesticity (ಡೊಮೆಸ್ಟಿಸಿಟಿ) n. quality of being domestic. ಸಂಸಾರಿಯ ಲಕ್ಷಣ, ಗೃಹಾಸಕ್ತಿ.

Domical (ಡೋಮಿಕಲ್) adj. shaped like a dome. ಗುಮ್ಮಟದ ಆಕಾರದ.

Domi'cile (ಡಾಮಿಸೈಲ್) n. person's regular place of abode. ವಾಸಸ್ಥಾನ, ವಾಸಸ್ಥಳ, ವಸತಿ.

Dominance (ಡಾಮಿನೆನ್ಸ್) n. command, rule, sway. ಅಧಿಕಾರ, ಪ್ರಭುತ್ವ.

Domi'nant (ಡಾಮಿನಂಟ್) a. prevailing, predominant. ಪ್ರಬಲವಾದ, ಪ್ರಧಾನ, ಮುಖ್ಯ.

Dom'inate (ಡಾಮಿನೇಟ್) vt. i. have commanding influence over, overlook. ಪ್ರಭಾವ ತೋರು, ಆಳು, ಸರ್ವಾಧಿಕಾರ, ಉಗ್ರಶಾಸನ ಮಾಡು.

Domination (ಡಾಮಿನೇಷನ್) n. authority, government, tyranny. ಪ್ರಭುತ್ವ, ಶಾಸನ.

Domi'neer (ಡಾಮಿನೀರ್) vt. behave overbearingly, tyrannize over. ಜಬ್ಬರಿಸು. ದೌರ್ಜನ್ಯದಿಂದಾಳು, ಕ್ರೂರವಾಗಿ ಆಳು.

Dominical (ಡಾಮಿನಿಕಲ್) adj. relating to the lord. ಪ್ರಭುವಿಗೆ ಸಂಬಂಧಿಸಿದ.

Dominicide (ಡಾಮಿನಿಸೈಡ್) n. murder of a master. ಪ್ರಭುಹತ್ಯೆ.

Dom'inion (ಡೊಮಿನ್ಯನ್) n. lordship, sovereignty, territory of sovereign or government. ಅಧಿಕಾರ, ಪ್ರಭುತ್ವ ಶಾಸನ, ಆಧಿಪತ್ಯ, ಆಳಿಕೆ, ರಾಜ್ಯ.

Domino (ಡಾಮಿನೊ) n. a kind of game played with alice. ಪಗಡೆ ಕಾಯಿ ಇಟ್ಟುಕೊಂಡು ಆಡುವ ಒಂದು ಬಗೆಯ ಆಟ.

Dominus (ಡಾಮಿನಸ್) n. sir. ಪ್ರಭು.

Don (ಡಾನ್) vt. put on (garment) ಉಡು, ತೊಟ್ಟುಕೊ, ಹಾಕಿಕೊ, ಧರಿಸು.

Donate' (ಡೊನೇಟ್) vt. make a donation. ದಾನಮಾಡು, ವಂತಿಗೆ ಕೊಡು, ದಾನಕೊಡು.

Dona'tion (ಡೊನೇಶನ್) n. gift to a fund or institution, benefaction. ದಾನ, ಕೊಡುಗೆ.

Donative (ಡಾನಟಿವ್) adj. vested by donation. ದಾನದ, ದಾನಸಂಬಂಧವಾದ.

Donee (ಡೋನಿ) n. person to whom something is donated. ದಾನ ಪಡೆದವನು.

Donk'ey (ಡಾಂಕಿ) n. the ass, a stupid fellow. ಕತ್ತೆ, ದಡ್ಡ, ಮಡ್ಡಿ, ಬುದ್ಧಿಹೀನ.

Do'nor (ಡೋನರ್) n. giver, bestower. ದಾನಿ, ದಾತ, ತ್ಯಾಗಶೀಲ.

Donothing (ಡೂನಥಿಂಗ್) n. idler. ವ್ಯರ್ಥ ಕಾಲಹರಣಮಾಡುವವನು.

Doodle (ಡೂಡಲ್) n. a simple fellow. ಸರಳಸ್ವಭಾವದ ಮನುಷ್ಯ.

Doom (ಡೂಮ್) n fate, destiny, judicial sentence, the last judgment. ಅದೃಷ್ಟ, ದಂಡಾಜ್ಞೆ, ಹಣೆಯ ಬರಹ, ಗತಿ, ದಂಡನೆ, ಅಂತ್ಯದ ತೀರ್ಪು. vt. sentence, condemn. ಮರಣ ಶಿಕ್ಷೆ ವಿಧಿಸು.

Dooms day (ಡೂಮ್ಸ್‌ಡೇ) n. day of the last judgment. ಲೋಕಾಂತ್ಯ, ಲೋಕಾಂತ ದಿನ, ಕಲ್ಪಾಂತ ದಿನ.

Door (ಡೋರ್) n. the usual entrance into house, &c. (fig.) means of approach. ಬಾಗಿಲು, ಮಾರ್ಗ. lay at one's d., charge one with. ಅಪರಾಧ ಹೊರಿಸು, ಅಪಾದಿಸು, ಕದ, ದ್ವಾರ.

Door-keeper (ಡೋರ್-ಕೀಪರ್) n. porter. ದ್ವಾರಪಾಲಕ.

Dope (ಡೋಪ್) n. thick varnish used in painting wings of aeroplanes. ಒಂದು ತೆರದ ಮಂದವಾದ ಎಣ್ಣೆ.

Doric (ಡಾರಿಕ್) adj. style of architecture, pertaining to Doris in Greece. ಡೋರಿಕ್ ರೀತಿಯು.

Dorm'ant (ಡಾರ್ಮೆಂಟ್) a. lying inactive as in sleep, concealed. ನಿದ್ರಿತ, ಶಾಂತ, ಗುಪ್ತ, ಗೂಢ, ಸುಪ್ತಾವಸ್ಥೆಯು, ನಿಶ್ಚಲ.

Dormer (ಡಾರ್ಮರ್) n. projecting window in sloping roof. ಛಾವಣಿಯ ಚಾಚುಕಿಟಕಿ.

Dormitive (ಡಾರ್ಮಿಟಿವ್) a. n. promoting sleep, medicine which promotes sleep ನಿದ್ರೆಬರುವ, ನಿದ್ರೆಬರುವಂತೆ ಮಾಡುವ ಔಷಧ.

Dorm'itory (ಡಾರ್ಮಿಟರಿ) n. sleeping chamber with many beds. ಮಲಗುವ ಮನೆ, ಶಯನಗೃಹ, ನಿದ್ರಾಶಾಲೆ.

Dormouse (ಡಾರ್ಮೌಸ್) n. small rodent ಅಳಿಲನ್ನು ಹೋಲುವ ಸಣ್ಣ ಇಲಿ.



Dormouse

Dorsal (ಡಾರ್ಸಲ್) adj pertaining to the back. ಬೆನ್ನಿನ, ಬೆನ್ನಿಗೆ ಸಂಬಂಧಿಸಿದ.

Dorsum (ಡಾರ್ಸಮ್) n. hill ridge, back of the body. ಬೆಟ್ಟದ ಕಟ್ಟೆ, ಶರೀರದ ಹಿಂಭಾಗ.

Dosage (ಡೋಸೇಜ್) n. mode of dosing ಎಷ್ಟು ಔಷಧಿ ಕೊಡಬೇಕು ಎನ್ನುವುದು.

Dose (ಡೋಸ್) n. quantity of medicine given to be taken at one time. ಒಂದು ಸಲದ ಔಷಧಿಮಾತ್ರೆ, ಗುಟುಕು, "ಡೋಜು".

Dot (ಡಾಟ್) n. small spot, a point; small child, tiny object. ಬಿಂದು,

ಸೊನ್ನೆ, ಸಣ್ಣ ಚುಕ್ಕೆ, ಸಣ್ಣ ಮಗು, ಪುಟ್ಟ ವಸ್ತು. vt. mark with dots. ಚುಕ್ಕೆ ಚುಕ್ಕೆ ಮಾಡು, ಸೊನ್ನೆ ಹಾಕು.

Do'tage (ಡೋಟಿಜ್) n. feeble minded senility. ಮುದಿಭ್ರಾಂತಿ, ಅರಳು ಮರಳು, ಅರೆಹುಚ್ಚು.

Dotal (ಡೋಟಲ್) adj. pertaining to dowry. ಬಳುವಳಿಗೆ ಸಂಬಂಧಪಟ್ಟ.

Do'tard (ಡೋಟರ್ಡ್) n. one who dots, old fool. ಅರುಳು ಮರುಳಾದವನು, ಅತಿವೃದ್ಧ, ಮುದಿಮೂಢ.

Dotation (ಡೊಟೇಷನ್) n. act of endowing dowry. ಬಳುವಳಿಕೊಡುವಿಕೆ.

Dote (ಡೋಟ್) vt. be feeble minded or silly, be passionately fond of. ಅರುವು ಮರುವು ಆಗಿರು, ಅತಿ ಪ್ರೀತಿಸು.

Dotterel, dottrel (ಡೋಟರೆಲ್) n. booby, dupe. ಮೂರ್ಖ, ಮೋಸಗಾರ

Dou'ble (ಡಬಲ್) a. two fold, consisting of two parts; of two kinds, deceitful ಇಮ್ಮಡಿ, ಎರಡು, ಎರಡಿರುವ, ಜೋಡಿ, ದ್ವಯ, ದ್ವಿಗುಣ, ಎರಡು ಬಗೆಯ, ವಂಚನೆಯ, ಮೋಸದ.

adv. twice the amount, two together. ಇಮ್ಮಡಿಯಾಗಿ, ಜೊತೆಯಾಗಿ. n. person or thing mistakable for another, game between two pairs of players, twice the amount. ಅದೇ ಇದೆಂದು ಭ್ರಾಂತಿಯಾಗುವ ವಸ್ತು ಅಥವಾ ವ್ಯಕ್ತಿ, ಎರಡರಷ್ಟು, ಇಮ್ಮಡಿ. vt. i. make or become double, increase twofold, clench (fist); make sudden turn; play two parts, in same piece. ಇಮ್ಮಡಿಸು, ಎರಡರಷ್ಟುಮಾಡು, ದ್ವಿಗುಣಿಸು, ಎರಡರಷ್ಟಾಗು, ಮಡಿಸು, ವಕ್ರವಕ್ರವಾಗಿ ಓಡು, ಮುಷ್ಟಿ ಹಿಡಿ, ಫಕ್ಕನೆ ತಿರುಗು, ಒಂದರಲ್ಲಿ ಎರಡು ಕೆಲಸ ಮಾಡು.

Doublet (ಡಬ್ಲೆಟ್) n. close-fitting body garment. ಗಂಡಸರ ಬಿಗಿಯಂಗಿ.

Dou'ble dealer (ಡಬಲ್‌ಡೀಲರ್) n. insincere person. ತಟವಟಿಗಾರ, ಕಪಟಿ, ಮೋಸಗಾರ, ವಂಚಕ, ದ್ರೋಹಿ.

Dou'ble-edged (ಡಬಲ್‌ಎಡ್ಜ್ಡ್) a. having two edges, cutting or working both ways. ಇಬ್ಬಾಯಿಯ, ಎರಡು ಕಡೆಗೂ ಹರಿತವಾಗಿರುವ, ಎರಡು ಏಣುಗಳುಳ್ಳ.

Doubt' (ಡೌಟ್) n. feeling of uncertainty, suspicion, fear. ಅನುಮಾನ, ಅಪನಂಬಿಕೆ, ಅಳುಕು, ಅನಿಶ್ಚಯ, ಸಂದೇಹ, ಶಂಕೆ. vt. i. feel doubt, disbelieve in, feel distrust of; be apprehensive. ಅನುಮಾನಪಡು, ಸಂದೇಹಪಡು, ಶಂಕೆಗೊಳ್ಳು.

Doubt'ful (ಡೌಟ್‌ಫುಲ್) a. feeling or giving rise to doubt, uncertain. ಸಂಶಯಕರ, ಸಂದಿಗ್ಧ, ಅನಿಶ್ಚಿತವಾದ, ಖಂಡಿತವಿಲ್ಲದ, ನಿಷ್ಕೃಷ್ಟವಿಲ್ಲದ, ಅನುಮಾನ.

Doubt'less (ಡೌಟ್‌ಲೆಸ್) adv. certainly. ನಿಃಸಂಶಯವಾಗಿ, ಅನುಮಾನವಿಲ್ಲದೆ.

Doubtlessly (ಡೌಟ್‌ಲೆಸ್ಲಿ) adv. confidenthy. ನಿಸ್ಸಂದೇಹವಾಗಿ, ಸಂಶಯವಿಲ್ಲದೆ.

Douceur (ಡೂಸರ್) n. present, gratuity. ಇನಾಮು, ಬಹುಮಾನ.

Douche (ಡೂಶ್) n. jet of water applied externally or internally. ಜಲಧಾರೆ, ನೀರೆರೆತ.

Dough (ಡೋ) n. flour moistened and kneaded. ನಾದಿದ ಕಣಕ, ಉಸುಕಿದ ಹಿಟ್ಟು, ನಾದಿದ ಹಿಟ್ಟು, ಹುದುಗು ಹಿಟ್ಟು.

Doughtily (ಡೌಟಿಲಿ) adv. bravely. ಪರಾಕ್ರಮದಿಂದ.

Dought'y (ಡೌಟಿ) a. valiant. ಶೂರ, ವೀರ, ಪರಾಕ್ರಮದ.

our (ಡೂರ್) a. grim, stubborn. ಒರಟು, ಒಂದೇ ಪಟ್ಟಿನ, ದುರ್ದಮ.

Dout (ಡೌಟ್) vt. put out, extinguish. ಆರಿಸು, ನಂದಿಸು.

Douse' (ಡೌಜ್) vt. i. plunge into water, lower hastily, put out. (ನೀರಿನಲ್ಲಿ) ಅದ್ದು, ಮುಳುಗಿಸು, (ಪಟ) ಕೆಳಗಿಳಿಸು, (ದೀಪ) ಆರಿಸು, ನಂದಿಸು.

Dove' (ಡವ್) n. pigeon, a word of endearment, emblem of innocence. ಪಾರಿವಾಳ, ಕಪೋತ, "ಮುದ್ದು ಮಣಿ". ಪರಿಶುದ್ಧಾತ್ಮ, ಸರಳತೆಯು, ಸರಳತೆಯ ಚಿಹ್ನೆ, ಆದರ್ಶ.

Dove'cot (ಡವ್ ಕಾಟ್) n. pigeon house. ಪಾರಿವಾಳದ ಗೂಡು.

Dovetail (ಡವ್‌ಟೆಯ್ಲ್) vt. & i. join boards or wood by letting one piece into another in the form of a spread dove's tail. ಮರದ ಹಲಗೆ ಮೊದಲಾದುವುಗಳನ್ನು ಕೂರು, ವೆಜ್ಜಮಾಡಿ ಜೋಡಿಸು.


Dovetailing

Dow'ager (ಡವೆಜರ್) n. woman with title or property derived from her late husband. ಶ್ರೀಮಂತ ವಿಧವೆ.

Dowdily (ಡೌಡಿಲಿ) adv. in a shabby way. ಅಂದವಿಲ್ಲದ, ವಿಕಾರವಾದ.

Dowd'y (ಡೌಡಿ) a. lacking smartness, carelessly dressed. ಅಂದವಿಲ್ಲದ, ವಿರೂಪಿಣಿ, ವಿಕಾರವಾದ.

Dowdyish (ಡೌಡಿಯಿಷ್) a. like a dowdy. ವಿಕಾರವಾದ.

Dowel (ಡೌಎಲ್) n. pin of wood or iron to join boards. ಮರದ ತುಂಡುಗಳನ್ನು ಜೋಡಿಸುವುದಕ್ಕಾಗಿ ಉಪಯೋಗಿಸುವ ಬಿಳಮೊಳೆ.

Dow'er (ಡವರ್) widow's share for life of husband's estate, natural gift or talent. ವಿಧವಾಂಶ, ಹೆಂಡತಿಯು ತಂದಹಣ, ಬಳುವಳಿ.

Dowlas (ಡೌಲಾಸ್) n. coarse linen cloth. ಒರಟಾದ ನಾರು ಬಟ್ಟೆ.

Down (ಡೌನ್) n. open high land, fine soft short hair of feathers. ಹುಲ್ಲುಗಾವಲದಿಣ್ಣೆ. ಮೃದುರೋಮ, ಎಳೆಗೂದಲು, ತುಪ್ಪಳ. adv. towards or in a lower position, from earlier to later time, on the ground. ಕೆಳಗಡೆ, ಅಂದಿನಿಂದ ಇಂದಿನವರೆಗೆ, ನೆಲದ ಮೇಲೆ. prep. downwards, along, through, on, into; at a lower part. ಕೆಳಗೆ, ಮೂಲಕ, ಅಡಿಯಲ್ಲಿ. a. descending, directed. downwards. ಅಧೋಮುಖವಾದ, ಇಳುಕಲಾದ. be d. upon a person; find fault with him. ಅವನಲ್ಲಿ ತಪ್ಪು ಹುಡುಕು. be d. on their luck; very unfortunate. ಅತಿನಿರ್ಭಾಗ್ಯ d. in the mouth, dispirted . sad. ದುಃಖಿತ, ಖಿನ್ನ, ಶೋಕಾಕುಲ.

Down'cast (ಡೌನ್‌ಕಾಸ್ಟ್) a. (of eyes) looking down, (of person) dejected. ಖಿನ್ನ, ಮನಗುಂದಿದ, ಉದಾಸೀನ, ವಿಷಣ್ಣವದನ.

Down'come (ಡೌನ್‌ಕಮ್) n descent, catastrophe. ಇಳಕಲು, ವಿಪತ್ತು.

Down'fall (ಡೌನ್‌ಫಾಲ್) n. fall from prosperity or power, downpour. ಅವನತಿ, ಅಧಃಪತನ, ನಾಶ, ಜಡಿಮಳೆ.

Down'hearted' (ಡೌನ್‌ಹಾರ್ಟೆಡ್) a. despondent. ಕುಂಗೆಟ್ಟ ; ಗತಾಶನಾದ, ಮುಂಕುಗೆಟ್ಟ.

Down'hill (ಡೌನ್ ಹಿಲ್) n. downward slope. ಇಳಿಜಾರು, ಇಳಿಕಲಾದ, ಅವನತವಾದ.

Down'pour(ಡೌನ್ ಪೋರ್)n. heavy fall of rain, &c. ಜಡಿಮಳೆ, ಎಡೆಬಿಡದ ವೃಷ್ಟಿ, ಮುಸುಲಧಾರೆ.

Down'right (ಡೌನ್ರೈಟ್) a. plain; straight forward, blunt. ಸ್ಪಷ್ಟವಾದ, ಸರಳವಾದ, ವ್ಯಕ್ತವಾದ, ಕೇವಲ, ಶುದ್ಧಾಂಗವಾಗಿ. adv. thoroughly; quite. ಸ್ಪಷ್ಟವಾಗಿ, ಸಂಪೂರ್ಣವಾಗಿ, ಖಂಡಿತವಾಗಿ.

Downstairs' (ಡೌನ್ಸ್ಟೇರ್ಸ್) adv. n. & a.(into, of) lower part of a house. ಕೆಳಅಂತಸ್ತಿನಲ್ಲಿ, ಮಹಡಿಯ ಕೆಳಗೆ.

Downtrain(ಡೌನ್ಟ್ರೇನ್) n. outward bound train. ಹೊರಹೋಗುವ ಗಾಡಿ.

Downtrodden (ಡೌನ್ಟ್ರಾಡನ್) adj. oppressed. ಕೆಳಗೆ ತುಳಿದ.

Down'ward (ಡೌನ್ ವರ್ಡ್) a. & adv. from highest to a lower place, from source to outlet. ಕೀಳಾದ, ಕೆಳಗಿನ, ಇಳಿಯುವ, (ನದಿಯು) ಕೆಳಮುಖದವರೆಗೆ.

Downy (ಡೌನಿ) a. covered with down, soft. ತುಪ್ಪುಳದಿಂದ ಆಚ್ಛಾದಿತವಾದ, ಮೆತ್ತಗಿರುವ.

Dow'ry (ಡೌರಿ) n. property brought by a wife at marriage; a talent. ಮದುವೆಯ ಬಳುವಳಿ, ಸ್ತ್ರೀಧನ, ಬಳುವಳಿ, ಸಹಜ ಚಾತುರ್ಯ.

Dowse (ಡೌಸ್) vt strike a blow on the head. ತಲೆಯ ಮೇಲೆ ಏಟು ಹೊಡೆ

Doxy(ಡಾಕ್ಸಿ)n. opinion on theological subject. ಧರ್ಮಸಂಬಂಧವಾದ ವಿಷಯದ ಸಂಬಂಧವಾಗಿ ಅಭಿಪ್ರಾಯ.

Doze (ಡೋಜ್) vi. yield to sleep, be half asleep ತೂಕಡಿಸು, ಜೂಗಳಿಸು, ಅರೆನಿದ್ರೆಯಲ್ಲಿರು. n. nap. ತೂಕಡಿಕೆ.

Dozer (ಡೋಜರ್) n. slumberer. ತೂಕಡಿಸುವವ.

Do'zen (ಡಜನ್) n. collection of 12. ಹನ್ನೆರಡು.

Drab (ಡ್ರ್ಯಾಬ್) n. a low sluttish woman, whore. ವ್ಯಭಿಚಾರಿಣಿ, ಹಾದರಗಿತ್ತಿ. a. pale brown, dull. ಕಾಕಿ ಬಣ್ಣದ, ಕಪಿಶ, ಕಪಿಲ, ಮಂದ; ಜಡ.

Drabble (ಡ್ರ್ಯಾಬ್ಲ್) vt. make dirty with mud. ಕೆಸರನ್ನು ಸಿಡಿಸಿ ಕೊಳೆಮಾಡು.

Drachm'(ಡ್ರ್ಯಾಮ್)n. unit of weight $\frac{1}{16}$ oz. avoid. $\frac{1}{8}$ oz. apoth. ಚಿನ್ನ ಬೆಳ್ಳಿ ತೂಕದ ಔನ್ಸಿನಲ್ಲಿ $\frac{1}{16}$ ಭಾಗ, ಔಷಧಿ ಅಳತೆ ಔನ್ಸಿನಲ್ಲಿ $\frac{1}{8}$ ಭಾಗ, ಡ್ರ್ಯಾಮು.

Draconian (ಡ್ರಕೋನಿಯನ್) adj. pertaining to Draco, the Athenian lawgiver; severe, rigorous. ಕಠಿಣವಾದ, ಕಠೋರವಾದ.

Draff (ಡ್ರ್ಯಾಫ್) n. dregs, refuse. ಚರಟ, ಕಲಗಚ್ಚು.

Draft (ಡ್ರಾಫ್ಟ್) n. body of men drawn from depot, &c. order for drawing money, bill or cheque drawn, sketch of work to be done; rough copy of document. ಸೇನಾದಳದ ಭಾಗ, ಹುಂಡಿ, ಕರಡುಪತ್ರ, ನಕ್ಷೆ "ಚೆಕ್" vt. dispatch (men) as draft; make draft of (documents, &c.) (ಸೈನ್ಯ) ಕಳುಹು, ವಿಶೇಷ ಕಾರ್ಯಕ್ಕಾಗಿ ಕಳಿಸು, ಕರಡು ನಕಲುಮಾಡು, ರಚಿಸು, ಬರೆ.

Drafts'man (ಡ್ರಾಫ್ಟ್ಸ್ಮನ್) n. drafter of documents. ದಸ್ತಾವೇಜು ಲೇಖಕ, ಕರಡುಪ್ರತಿಗಳನ್ನು ತಯಾರಿಸುವವನು.

Drag (ಡ್ರ್ಯಾಗ್) vt i. draw along with force; go heavily. ಎಳೆ, ಸೆಳೆದಾಡು, ಜಗ್ಗಿಸು, ತುಯ್ಯು, n. check o progress: retarded motion. ಪ್ರತಿಬಂಧ, ತಡೆ, ಅಡ್ಡಿ, ಆತಂಕ.

Draggle (ಡ್ರ್ಯಾಗ್‌ಲ್) vt. i. make or become wet and dirty by trailing. ಎಳೆದು ಕೊಳೆಮಾಡು, ಕೆಸರಿನಲ್ಲಿ ಎಳೆದಾಡು, ಎಳೆದು ತೋಯಿಸು.

Dragnet (ಡ್ರ್ಯಾಗ್‌ನೆಟ್) n. net used to catch fish. ಮೀನು ಹಿಡಿಯಲು ಉಪಯೋಗಿಸುವ ಬಲೆ.

Drag'on (ಡ್ರ್ಯಾಗನ್) n. a fabulous winged reptile; vigilant person. ರೆಕ್ಕೆಗಳೂ, ಉಗುರುಗಳೂ ಉಳ್ಳ ಪೌರಾಣಿಕ ಮಹಾಸರ್ಪ, ಕಾಯುತ್ತಿರುವ ಮನುಷ್ಯ.



Dragon

Dragoon (ಡ್ರಗೂನ್) n. (hist) mounted infantry man. ರಾಹುತ, ಕಾಲ್ದಳದ ಸವಾರ. vt. force into submission ಹಿಂಸಿಸು, ವಶವಾಗಲು ಬಲಾತ್ಕರಿಸು.

Drail (ಡ್ರೇಯಿಲ್) n. weighted fishing line for drawing through water. ಭಾರ ಕಟ್ಟಿರುವ ಮೀನು ಹಿಡಿಯುವ ಕಡ್ಡಿ.

Drain (ಡ್ರೇನ್) vt. i. draw off by degrees, filter; make dry; exhaust, flow off gradually ಬರಿದುಮಾಡು ಹೀರಿಹಾಕು, ಖಾಲಿಮಾಡು; ಬಸಿ, ಮುಗಿಸು, ಬಸಿದುಹೋಗು. n. a water course; a ditch; a sewer (slang); drop of liquor. ಚರಂಡಿ, ಮೋರಿ, ತೂಬು, ಬಚ್ಚಲುಗಳಮಾರ್ಗ, (ಗ್ರಾಮ್ಯ) ಗುಟುಕು ಮದ್ಯ.

Drain'age (ಡ್ರೇನೇಜ್) n. draining; what is drained off. ಕಾಲುವೆ, ನಾಲೆಗಳ ವ್ಯವಸ್ಥೆ, ಚರಂಡಿ, ಗಟಾರು.

Drake (ಡ್ರೇಕ್) n. male duck. ಗಂಡು ಬಾತು.

Dram (ಡ್ರ್ಯಾಮ್) n. a drachm; small draught of strong drink. ಒಂದು ತೂಕ. (drachm ನೋಡಿ,); ಮದ್ಯದ ಗುಟುಕು.

Drama (ಡ್ರಾಮಾ) n. stage play; dramatic art: play like series of events. ನಾಟಕ, ರೂಪಕ, ನಾಟ್ಯಕಲೆ, ನಾಟಕದಂತೆ ನಡೆಯುವ ಘಟನೆ.

Dramat'ic (ಡ್ರಮ್ಯಾಟಿಕ್) a. of drama; forcible; theatrical; striking. ನಾಟಕೀಯ; ನಾಟಕದ, ರೂಪಕದ, ಅಭಿನಯದ, ವಿಚಿತ್ರವಾದ, ವಿಚಿತ್ರ ದರ್ಶಕವಾದ, ಮರೆಯಲಾಗದ.

Dramatical (ಡ್ರಮ್ಯಾಟಿಕಲ್) a. theatrical. ನಾಟಕ ಸಂಬಂಧಿ.

Dram'atist (ಡ್ರ್ಯಾಮಟಿಸ್ಟ್) a. writer of plays. ನಾಟಕಕಾರ, ರೂಪಕ ರಚಿಸುವವನು.

Dram'atize (ಡ್ರ್ಯಾಮಟೈಜ಼್) vt. play turn into drama. ನಾಟಕ ರೂಪವಾಗಿ ರಚಿಸು, ನಾಟಕೀಕರಣಮಾಡು, ಆಡು.

Dramaturgy (ಡ್ರಾಮಟರ್ಜಿ) n. science of dramatic composition. ನಾಟಕ ರಚನೆ, ನಾಟಕ ಶಾಸ್ತ್ರ.

Drape (ಡ್ರೇಪ್) vt. adorn with cloth. ವಸ್ತ್ರದಿಂದ ಅಲಂಕರಿಸು.

Embrace' (ಎಂಬ್ರೇಸ್) vt. fold in the arms, clasp, enclose, accept, adopt; include. ಅಪ್ಪಿಕೊಳ್ಳು, ತಬ್ಬಿಕೊಳ್ಳು, ಆಲಿಂಗಿಸು, ಆವರಿಸು, ಆದರದಿಂದ ಸ್ವೀಕರಿಸು, ಸೇರಿರು, ಅಡಕಮಾಡು, ಸೇರಿಸು, ಸಮಾವೇಶಗೊಳಿಸು.

Embrangle (ಎಂಬ್ರ್ಯಾಂಗ್ಲ್) vt confuse, entangle. ತಬ್ಬಿಬ್ಬು ಮಾಡು, ಸಿಕ್ಕಿಸು.

Embrasure (ಎಂಬ್ರೇಶರ್) n. an opening in a wall for cannon. ಕೋಟೆ ಗೋಡೆಯಮೇಲೆ ಫಿರಂಗಿಯನ್ನಿಡುವುದಕ್ಕೆ ಮಾಡಿರುವರಂಧ್ರ.



Embrasure

Embroid'ery (ಎಂಬ್ರಾಯಿಡರಿ) n. embroidered work, adventitious ornament. ಬೂಟೆದಾರಿ, ಕಸೂತಿ ಕೆಲಸ, ನಕ್ಷೆ ಕೆಲಸ, ಸೂಚಿಕರ್ಮ, ಶಿಲ್ಪ.

Embroil (ಎಂಬ್ರಾಯಿಲ್) vt. entangle, confuse. ಗೊಂದಲಸ್ಥಿತಿಗೆ ತರು, ಗೋಜುಮಾಡು.

Embroilment (ಎಂಬ್ರಾಯಲ್‌ಮೆಂಟ್) n. confusion, disturbance. ಗೊಂದಲ, ತೊಡಕು, ಗಲಭೆ.

Em'bryo (ಎಂಬ್ರಿಓ) n. unborn offspring. thing in embryo. ಗರ್ಭ, ಮೂಲ ಅವಸ್ಥೆಯಲ್ಲಿರುವ ವಸ್ತು, ಭ್ರೂಣ, ಆರಂಭ ಅವಸ್ಥೆ.

Embryoctomy (ಎಂಬ್ರಿಯಾಕ್ಟಮಿ) n. destruction of the foetus in the womb. ಗರ್ಭದಲ್ಲಿಯೇ ಭ್ರೂಣಹತ್ಯೆ.

Embryology (ಎಂಬ್ರಿಯಾಲೊಜಿ) n. science of embryo. ಭ್ರೂಣಶಾಸ್ತ್ರ.

Emend' (ಇಮೆಂಡ್) n. remove errors, correct. ತಪ್ಪುಗಳನ್ನು ತಿದ್ದು, ಸುಧಾರಿಸು, ಪರಿಷ್ಕರಿಸು.

m'erald (ಎಮರಾಲ್ಡ್) n. bright green precious stone ; colour of emerald. ಮರಕತ, ಪಚ್ಚೆ, ಪಚ್ಚೆಯ ಬಣ್ಣ.

merge' (ಇಮರ್ಜ್) vi. come up issue, crop up ಗೋಚರಕ್ಕೆ ಬರು, ಹೊರಬರು, ದೃಷ್ಟಿಪಥಕ್ಕೆ ಬರು, ಬಯಲಿಗೆ ಬರು, ಉದಯಿಸು ಕಾಣಿಸು, ಉದ್ಭವಿಸು.

mer'gency(ಇಮರ್ಜೆನ್ಸಿ) n. sudden juncture needing prompt action ಜರೂರು, ಅತ್ಯವಶ್ಯಕತೆ, ಅತ್ಯಗತ್ಯ, ಅವಸರ, ತುರ್ತು, ತರಾತುರಿ.

mergent(ಎಮರ್ಜೆಂಟ್) a. urgent. ಆವಶ್ಯಕ.

me'ritus (ಇಮರಿಟಸ್) a. retired from service. ನಿವೃತ್ತ [ಅಧ್ಯಾಪಕ],

mer'sion (ಇಮರ್ಶಿಅನ್)n. emerging ; reappearance after an eclipse. ಹೊರಬೀಳುವುದು, ಶುದ್ಧ ಮಂಡಲವಾಗುವುದು, ಬಿಡುಗಡೆ, ನಕ್ಷತ್ರೋದಯ, (ಗ್ರಹಣ) ಮೋಕ್ಷ.

met'ic (ಇಮೆಟಿಕ್) a. medicine that causes vomitting. ವಾಂತಿ ಕಾರಕ ಔಷಧ.

meute(ಎಮಿಟ್)n. popular rising. ದಂಗೆ, ಬಂಡಾಯ.

Emication (ಎಮಿಕೇಷನ್) n. spark. ಸ್ಫುಲ್ಲಿಂಗ, ಕಿಡಿ.

Em'igrant(ಎಮಿಗ್ರಂಟ್)a. emigrating. ವಲಸೆ ಹೋಗುವ, ವಲಸೆಹೋಗುವವನು, ವಲಸಿಗ, ಕುಡಿಯೊಕ್ಕಲ.n. one who emigrates. ಕುಡಿಯೊಕ್ಕಲಿಗ.

Em'igrate (ಎಮಿಗ್ರೇಟ್) vt. i. go to settle in another country. ವಲಸೆ ಹೋಗು, ಪರದೇಶದಲ್ಲಿ ನೆಲಸುವುದಕ್ಕಾಗಿ ಹೋಗು, ಒಕ್ಕಲು ಹೋಗು, ದೇಶಬಿಟ್ಟು ಹೋಗು, ವಾಸಸ್ಥಾನವನ್ನು ಬದಲಾಯಿಸು.

Emigre (ಎಮಿಗ್ರೇ) n. emigrant. ವಲಸಿಗ.

Em'inence (ಎಮಿನೆನ್ಸ್) n. recognised superiority ; rising ground. ಮೇಡು, ತಿಟ್ಟು, ಎತ್ತರ, ಉನ್ನತ ಸ್ಥಾನ, ಪ್ರಾಧಾನ್ಯ, ಉತ್ಕೃಷ್ಟತೆ, ಹಿರಿಮೆ, ಉನ್ನತಿ, ದಿಣ್ಣೆ, ಏರಿ.

Em'inent (ಎಮಿನೆಂಟ್) a. distinguished; notable. ಶ್ರೇಷ್ಠ, ಉನ್ನತ, ಉಚ್ಚ, ಉತ್ಕೃಷ್ಟ, ಘನ, ಪ್ರಸಿದ್ಧ.

Emir (ಎಮೀರ್) n. Arab prince or governor. ಅರಬ್ ರಾಜಕುಮಾರ, ಅಮೀರ.

Em'issary (ಎಮಿಸರಿ) n. secret agent. ಗೂಢಚಾರ, ಗುಪ್ತಕಾರ್ಯಸಾಧನೆಗಾಗಿ ಕಳುಹಲ್ಪಟ್ಟವನು, ಬೇಹುಕಾರ, ಗುಪ್ತದೂತ.

Emission (ಇಮಿಷನ್) n. act of issuing forth. ವಿಸರ್ಜಿಸುವಿಕೆ.

Emit' (ಇಮಿಟ್) vt. give out, put forth. ಹೊರಸೂಸು, ಹೊರಡಿಸು, ಹೊರಬಿಡು, ಹೊರಗೆಬಿಡು, ಚೆಲ್ಲು, ವಿಸರ್ಜಿಸು.

Emmet (ಎಮೆಟ್) n. ant. ಇರುವೆ.

Emolliate (ಎಮೋಲಿಯೇಟ್) vt. soften. ನುಣುಪುಮಾಡು, ಮೃದುಮಾಡು.

Emolliation (ಎಮೋಲಿಯೇಷನ್) n. act of softening. ನುಣುಪುಮಾಡುವಿಕೆ, ಮೃದುಮಾಡುವುದು.

Emolli'ent (ಇಮಾಲಿಯನ್ಟ್) a. softening. ಮೃದುಕಾರಕ.

Emol'ument (ಇಮಾಲ್ಯುಮೆಂಟ್) n. [usu.plu.] profit from employment, salary. ವರಮಾನ, ಕೆಲಸದಿಂದ ಬರುವ ಆದಾಯ, ವೇತನ, ಸಂಬಳ.

Emo'tion (ಇಮೋಶನ್) n. mental agitation, or feeling ; excited mental state. ಮನೋಭಾವ, ಉದ್ವೇಗ, ಉದ್ರೇಕ, ಆವೇಗ, ಭಾವ, ರಾಗ, ಕಳವಳ.

Empanel(ಎಮ್‌ಪ್ಯಾನೆಲ್) vt. enrol, impanel. ಪಟ್ಟಿಯಲ್ಲಿ ಸೇರಿಸು, ದಾಖಲು ಮಾಡು.

Empathy (ಎಂಪತಿ) n. power of feeling. ಅನುಭೂತಿ ಶಕ್ತಿ.

Empawn (ಎಂಪಾನ್) vt. give in pledge. ಅಡವಿಡು, ಒತ್ತೆಹಾಕು.

Em'peror (ಎಂಪರರ್) n. ruler of an empire. ಚಕ್ರವರ್ತಿ, ಸಮ್ರಾಟ, ಚಕ್ರಾಧಿಪತ್ಯದ ಅಧಿಪತಿ, ಸಾರ್ವಭೌಮ, ಮಂಡಲೇಶ್ವರ, ರಾಜಾಧಿರಾಜ.

Em'phasis (ಎಂಫಸಿಸ್) n. significant stress on vigour or expression. ಸ್ವರಭಾರ, ಒತ್ತು, ಪ್ರಧಾನ ಪ್ರಾಮುಖ್ಯತೆ, ಸ್ಪಷ್ಟತೆ, ಮಹತ್ವ, ಪ್ರಭಾವ, ಮಾತಿನಬಲ, ವಾಗ್ಬಲ.

Em'phasize (ಎಂಫಸೈಝ್) vt. lay stress on. ಸ್ವರಭಾರಹಾಕು, ಒತ್ತಿಹೇಳು.

Em'phat'ic (ಇಂಫಾಟಿಕ್) a. forcible, strong ಕಡಾಖಂಡಿತ, ಒತ್ತಿಹೇಳುವ, ಸ್ಪಷ್ಟಪಡಿಸುವ.

Emphatically (ಎಂಫಾಟಿಕಲಿ) adv. in an emphatic way. ಒತ್ತಾಯಪೂರ್ವಕವಾಗಿ, ನಿಶ್ಚಯಪೂರ್ವಕವಾಗಿ.

Em'pire (ಎಂಪಾಯರ್) n. supreme and wide dominion, territory of an emperor. ಸಾಮ್ರಾಜ್ಯ, ಚಕ್ರಾಧಿಪತ್ಯ

Empi'ric (ಎಂಪಿರಿಕ್) a. relying on experiment, not on theory. ಸ್ವಾನುಭವಸಿದ್ಧ, ಪ್ರಯೋಗಸಿದ್ಧ, ಪ್ರಾಯೋಗಿಕ, ಅನುಭವಾತ್ಮಕ. n. empiric scientist physician &c., quack ಅನುಭವವಾದಿ, ಪ್ರಯೋಗವಾದಿ, ಅನುಭವಜ್ಞಾನವುಳ್ಳ, ತತ್ವಜ್ಞ, ವೈದ್ಯ, ಅಳಲೆಕಾಯಿ ಪಂಡಿತ.

Em'pirically (ಎಂಪಿರಿಕಲಿ) adv. by experiment or experience. ಪ್ರಯೋಗಜ್ಞಾನದಿಂದ ಅಥವ ಅನುಭವಜ್ಞಾನದಿಂದ.

Emplacement (ಎಂಪ್ಲೇಸ್‌ಮೆಂಟ್) n. situation, placing. ಸ್ಥಿತಿ, ಸ್ಥಾನ.

Emplane (ಎಂಪ್ಲೇನ್) vi. go aboard, aeroplane. ವಿಮಾನ ಹತ್ತು.

Employ (ಎಮ್ ಪ್ಲಾ ಯ್) vt. use [thing, time, energies, &c.]; use services of: keep at work. ಉಪಯೋಗಿಸು, ಕೆಲಸಕ್ಕಿಟ್ಟುಕೊ, ಪ್ರಯೋಗಿಸು. ಕೆಲಸಮಾಡಿಸು.

Employee' (ಎಂಪ್ಲಾಈ) n. one employed for wages. ನೌಕರ, ಕೂಲಿಯಾಳು, ಚಾಕರ, ಕೆಲಸದವ.

Employ'er (ಎಂಪ್ಲಾಯರ್) n. one who uses another's service. ಯಜಮಾನ, ಧಣಿ, ಒಡೆಯ, ಚಾಕರಿಗೆ ಇಟ್ಟುಕೊಳ್ಳುವವನು.

Employ'ment (ಎಂಪ್ಲಾಯ್‌ಮೆಂಟ್) n. work; one's trade; business entrusted to one. ಬದುಕು, ಚಾಕರಿ, ನೌಕರಿ, ಉದ್ಯೋಗ, ಕಸುಬು, ಕೆಲಸ.

Empor'ium (ಎಂಪೋರಿಅಮ್) n. centre of commerce ವ್ಯಾಪಾರಸ್ಥಳ, ವಾಣಿಜ್ಯ ಕೇಂದ್ರ, ವ್ಯಾಪಾರಕೇಂದ್ರ.

Empow'er (ಎಂಪವರ್) vt authorise, enable ಅಧಿಕಾರ ಕೊಡು, ಶಕ್ತಿಕೊಡು, ಅಧಿಕಾರವಹಿಸು.

Empress (ಎಮ್‌ಪ್ರೆಸ್) n. wife of an emperor; female ruler of an empire. ಮಹಾರಾಣಿ, ಚಕ್ರವರ್ತಿನಿ, ಚಕ್ರವರ್ತಿಯ ಹೆಂಡತಿ, ಸರ್ವಾಧಿಕಾರಿಣಿ, ಸಾಮ್ರಾಜ್ಞಿ.

Emprise (ಎಂಪ್ರೈಸ್) n. enterprise. ಸಾಹಸ ಕಾರ್ಯ.

Emptiness (ಎಂಪ್ಟಿನೆಸ್) n. state of being empty. ಶೂನ್ಯತೆ, ಖಾಲಿಯಾಗಿರುವಿಕೆ.



Emu

Emu (ಈಮ್ಯೂ) n. large running bird of Ausralia related to the ostrich. ಆಸ್ಟ್ರೇಲಿಯದ ಆಸ್ಟ್ರಿಚ್ ಪಕ್ಷಿಗೆ ಸಂಬಂಧಪಟ್ಟ ಓಡುವ ಒಂದು ದೊಡ್ಡ ಪಕ್ಷಿ.

Empt'y (ಎ ಪ್ಟಿ) a. containing nothing; meaningless. ಬರಿಯ, ಟೊಳ್ಳು, ಶೂನ್ಯ, ಪೊಳ್ಳು, ಖಾಲಿ, ಬರಿ

ದಾದ, ಅರ್ಥವಿಲ್ಲದ. vt. i. exhaust. ಬರಿದುಮಾಡು, ಖಾಲಿಮಾಡು, ಶೂನ್ಯವಾಗು.

Empyrean (ಎಂಪೀರಿಯನ್) adj. of the highest heaven. ಅಗ್ನಿಲೋಕದ, ದೇವಲೋಕದ.

Em'ulate (ಎಮ್ಯೂಲೇಟ್) vt. try to equal or excel; imitate, ಸ್ಪರ್ಧಿಸು, ಉತ್ಸಾಹದಿಂದ ಅನುಕರಿಸು, ಮೇಲ್ಪಂಕ್ತಿ ಅನುಸರಿಸು, ಅನುಕರಿಸು.

Emulation (ಎಮ್ಯೂಲೇಷನ್) n. excelling. ಮೀರಿಸುವುದು, ಪ್ರತಿಸ್ಪರ್ಧೆ.

Emulatory (ಎಮ್ಯೂಲೇಟರಿ) a. inclined to emulate. ಪ್ರತಿಸ್ಪರ್ಧಿಯಾದ.

Em'ulous (ಎಮ್ಯುಲಸ್) a. desirous of fame. &c., zealously imitative of. ಈರ್ಷ್ಯೆಯಿಂದ ಅನುಕರಿಸುವ, ಪ್ರಖ್ಯಾತವನ್ನು ಆಶಿಸುವ, ಸ್ಪರ್ಧಾಳು, ಕೀರ್ತಿಕಾಮಿ, ಪ್ರತಿಸ್ಪರ್ಧಕ.

Emul'sion (ಇಮಲ್‌ಶನ್) n. milky liquid with oily particles suspended in it. ಕ್ಷೀರರಸ, ಜಿಡ್ಡಿನ ಸೂಕ್ಷ್ಮ ಕಣಗಳು, ದ್ರವದ ಆಳದುದ್ದಕ್ಕೂ ತೇಲಾಡುತ್ತಿರುವುದರಿಂದ ಹಾಲಿನಂತೆ ಕಾಣುವ ದ್ರವ, ಪಾಯಸ.

Emunctory (ಇಮಂಕ್ಟರಿ) adj. pertaining to nose-blowing ಮೂಗು ಸೀದುವುದಕ್ಕೆ ಸಂಬಂಧಿಸಿದ.

En (ಎನ್)n. unit of width in printing ಮುದ್ರಣದಲ್ಲಿ ಬಳಸುವ ಅಗಲದ ಮಾನ.

Ena'bl'e (ಎನೇಬ್‌ಲ್)vt. empower, supply with means (to do.) ಅಧಿಕಾರಮಾಡು, ಬಲಪಡಿಸು, ಶಕ್ತಿಕೊಡು, ಸಮರ್ಥನೆಮಾಡು, ಅನುಕೂಲ ಒದಗಿಸು, ಅವಕಾಶ ಕಲ್ಪಿಸು, ಶಕ್ಯಗೊಳಿಸು.

Enact' (ಎನಾಕ್ಟ್)vt. ordain, decree, play (part), ಕಟ್ಟಳೆಮಾಡು. ಶಾಸನಮಾಡು, ವಿಧಿಸು, ಅಭಿನಯಿಸು, ನಾಟಕಮಾಡು, ಪಾತ್ರವಹಿಸು.

Enact'ment (ಎನಾಕ್ಟ್‌ಮೆಂಟ್) n. law enacted. ಕಾನೂನು, ಕಾಯಿದೆ, ವ್ಯವಸ್ಥೆ, ಕಟ್ಟಳೆ, ಶಾಸನ.

Enam'el (ಎನಾಮೆಲ್) n. glasslike coating on metal; any hard smooth coating. ಗಿಲಾಯಿ, ಮಿನಾಯಿ, ಗಾಜುಲೇಪ.

Enam'our (ಎನಾಮರ್) vt. inspire with love, make fond of. ಪ್ರೇಮ ಹುಟ್ಟಿಸು, ಮನಸೆಳೆ, ಮುಗ್ಧನಾಗಿರು, ಆಸಕ್ತಿ ಹುಟ್ಟಿಸು.

Enate (ಎನೇಟ್) a. protruding, growing out. ಹೊರಗೆ ಚಾಚಿಕೊಂಡಿರುವ, ಹೊರಹೊಮ್ಮುತ್ತಿರುವ.

Enbloc (ಎನ್‌ಬ್ಲಾಕ್)adv. in a lump, wholesale. ಒಟ್ಟಿಗೆ, ಸಂಪೂರ್ಣವಾಗಿ.

Encage' (ಎನ್‌ಕೇಜ್) vt. put in a cage. ಪಂಜರದಲ್ಲಿಡು, ಬಂಧಿಸು, ಬೋನಿನಲ್ಲಿ ಕೂಡು.

Encamp' (ಎನ್‌ಕಾಂಪ್) vt. i. settle in a camp; lodge in tents ಮೊಕ್ಕಾಮುಮಾಡು, ಡೇರೆಹಾಕು, ಪಾಳೆಯಬಿಡು, ಶಿಬಿರದಲ್ಲಿ ಬೀಡುಬಿಡು. n.-ment. ಶಿಬಿರ, ನಿವೇಶ.

Encase (ಎನ್‌ಕೇಸ್) vt. put into a case. ಪೆಟ್ಟಿಗೆಯಲ್ಲಿಡು.

Encapsulate (ಎನ್‌ಕಾಪ್ಸುಲೇಟ್) vt. enclose, put one within the other. ಆವರಿಸು, ಆವರಣಹಾಕು.

Encash (ಎನ್‌ಕಾಷ್) vt. convert into cash. ನಗದು ಹಣಕ್ಕೆ ಪರಿವರ್ತಿಸು.

Enceinte (ಅಜ್‌ಸಾಂಟ್)a. pregnant. ಗರ್ಭದಲ್ಲಿರಿಸಿದ. n. enclosure, pregnant woman. ಪ್ರಾಕಾರ, ಬಸುರಿ, ಗರ್ಭಿಣಿ.

Enchain (ಎನ್‌ಚೇನ್) vt. chain up; fetter. ಬಂಧಿಸು, ಬೇಡಿಹಾಕು, ಸಂಕೋಲೆಹಾಕು, ಕಟ್ಟಿಹಾಕು.

Enchainment (ಎನ್‌ಚೇಯಿನ್ಮೆಂಟ್)n. chaining up; fettering. ಕಟ್ಟಿಹಾಕುವುದು, ಬಂಧಿಸುವುದು.

Enchant'(ಎನ್‌ಚಾಂಟ್) vt. bewitch, delight ಮರುಳುಗೊಳಿಸು, ಸಂತೋಷಪಡಿಸು, ಮೋಹಗೊಳಿಸು, ಆನಂದ ಉಂಟುಮಾಡು.

Encir'cle (ಎನ್‌ಸರ್ಕಲ್)vt. surround· ಸುತ್ತುವರಿಯು, ಸುತ್ತುಗಟ್ಟು, ಆವರಿಸು, ಸುತ್ತುಬಳಸು.

Encirclement (ಎನ್‌ಸರ್ಕಲ್‌ಮೆಂಟ್) act of surrounding. ಸುತ್ತುವರಿಯುವಿಕೆ.

Enclasp (ಎನ್‌ಕ್ಲಾಸ್ಪ್) vt. hold in, embrace. ಆಲಿಂಗಿಸು.

Enclave (ಎನ್‌ಕ್ಲೇವ್) n. territory surrounded by foreign domination. ಪರರಾಜ್ಯ ಸುತ್ತುಗಟ್ಟಿರುವಪ್ರದೇಶ.

Enclose (ಎನ್‌ಕ್ಲೋಜ್) vt. surround force, shut up, hem in. ಆವರಿಸು, ಆವರಣಹಾಕು, ಸುತ್ತುಗಟ್ಟು, ಬೇಲಿಹಾಕು, ಸುತ್ತುವರಿ, ಒಳಕೊಂಡಿರು.

Enclo'sure (ಎನ್‌ಕ್ಲೋಜರ್) n. enclosing, enclosed land, thing enclosed. ಬೇಲಿ, ಆವರಣ, ಸುತ್ತುಗಟ್ಟುಳ್ಳ ಪ್ರದೇಶ, ಸೇರಿಕೆಗಳು.

Enclouded (ಎನ್‌ಕ್ಲೌಡೆಡ್) a. covered with clouds. ಮೋಡದಿಂದ ಮುಚ್ಚಿದ.

Encom'ium (ಎನ್‌ಕೋಮಿಅಮ್) n. eulogy formal or high flown praise. ಸ್ತುತಿ, ಶ್ಲಾಘನೆ, ಪ್ರಶಂಸೆ, ಮೆಚ್ಚುನುಡಿ.

Encom'pass(ಎನ್‌ಕಂಪಸ್) vt. shut in surround, encircle. ಮುಚ್ಚಿಡು, ಸುತ್ತುಗಟ್ಟು, ಬಳಸು, ಒಳಕೊಳ್ಳು, ಸುತ್ತುವರಿ.

Encore (ಎನ್ಕಾರ್) n. demand for repetition of a song in a theatre ಮತ್ತೊಮ್ಮೆ ಎಂದು ಹೇಳುವ ದರ್ಶಕನ ಕೇಳಿಕೆ.

Encount'er (ಎನ್‌ಕೌಂಟರ್) vt. meet hostilely, meet with (person, obstacle, &c.) ಸಂಧಿಸು, ಎದುರುಬೀಳು, ಎದುರಿಸು, ಪ್ರತಿಭಟಿಸು, n. hostile or casual meeting. ಜಟಾಪಟಿ, ಎದುರುಸಾಟಿ, ಹೋರಾಟ, ಕದನ, ಪ್ರತಿಭಟನೆ, ಸಾಟಿ.

Encou'rage (ಎನ್‌ಕರೇಜ್) vt.make bold, urge, promote ಧೈರ್ಯಕೊಡು ಪ್ರೋತ್ಸಾಹಿಸು, ಉತ್ತೇಜಿಸು, ಪ್ರೇರಿಸು, ಒತ್ತಾಸೆಕೊಡು, ಉತ್ತೇಜನ ಕೊಡು.

Encouragement(ಎನ್‌ಕರೇಜ್‌ಮೆಂಟ್) act of encouraging. ಉತ್ತೇಜನ, ಪ್ರೋತ್ಸಾಹನೆ.

Encradle (ಎನ್‌ಕ್ರೇಡಲ್) vt. put into a cradle. ತೊಟ್ಟಿಲಲ್ಲಿ ಮಗುವನ್ನು ಮಲಗಿಸು.

Encroach' (ಎನ್‌ಕ್ರೋಚ್)vt. intrude on other's territory, &c ಆಕ್ರಮಣಮಾಡು, ತನ್ನದಲ್ಲದಕ್ಕೆ ಕೈಹಾಕು, ಅತಿಕ್ರಮಿಸು, ಆಕ್ರಮಿಸು.

Encroachment(ಎನ್‌ಕ್ರೋಚ್‌ಮೆಂಟ್) n. act of intruding. ಅತಿಕ್ರಮಣ.

Encrust (ಎನ್‌ಕ್ರಸ್ಟ್) vt. cover with a crust. ಹೊರಪೊರೆ ಕಟ್ಟಿಸು.

Encrustment (ಎನ್‌ಕ್ರಸ್ಟ್‌ಮೆಂಟ್) n. act of covering with crust. ಪೊರೆ ಕಟ್ಟಿಸುವುದು.

Encum'ber (ಎನ್‌ಕಂಬರ್) vt. hamper, impede, burden with debt. ಭಾರಹೊರಿಸು, ಪ್ರತಿಬಂಧಿಸು, ಅಡಚಣೆ ಮಾಡು, ಆತಂಕಪಡಿಸು, ಹೊರೆಹೇರು, ಸಾಲಹೊರಿಸು.

Encumberment(ಎನ್‌ಕಂಬರ್‌ಮೆಂಟ್) n. implement, hindrance. ಅಡ್ಡಿ, ಹೊರೆ, ಭಾರ.

Encum'brance (ಎನ್‌ಕಂಬ್ರನ್ಸ್) n. burden, mortgage, &c. on property ಭಾರ, ಆಸ್ತಿಯುಮೇಲೆ ಬೇರೆಯುವರ ಹಕ್ಕು, ಹೊರೆ, ಅಡ್ಡಿ, ಅಡಚಣೆ, ಆತಂಕ, ಪ್ರತಿಬಂಧಕ.

Encyclop(a)ed'ia (ಎನ್‌ಸಾಯಕ್ಲೊಪಿಡಿಅ) n· book of information on all branches of knowledge. ವಿಶ್ವಜ್ಞಾನಕೋಶ, ವಿಶ್ವವಿದ್ಯಾನಿಧಿ, ವಿದ್ಯಾಕಲ್ಪತರು, ಜ್ಞಾನಕೋಶ.

Encyclopaedist (ಎನ್‌ಸೈಕ್ಲೊಪೀಡಿಸ್ಟ್) n. compiler of encyclopaedia. ವಿಶ್ವಕೋಶ ಲೇಖಕ.

End (ಎಂಡ್) n. limit, extremity. conclusion, destruction. death, result, object ಕೊನೆ, ಕಡೆ, ಅಂಚು, ಎಲ್ಲೆ ಮೇರೆ, ಮಿತಿ, ಮುಕ್ತಾಯ, ಸಮಾಪ್ತಿ, ಮಡಿವು. ಸಾವು, ನಾಶ, ಗುರಿ. vt. i. bring or come to an end ತೀರಿಸು, ಫಲ, ಉದ್ದೇಶ ಸಮಾಪ್ತವಾಗು, ಮುಕ್ತಾಯಮಾಡು, ಕೊನೆಗಾಣಿಸು, ನಾಶಮಾಡು, ತುದಿಮುಟ್ಟಿಸು. make both e.s. meet, make one's income cover one's expenditure. ಆದಾಯವಿದ್ದಷ್ಟೇ ವೆಚ್ಚಮಾಡು. think no end of a person, admire a person very much. ವ್ಯಕ್ತಿಯಲ್ಲಿ ಅತಿಪೂಜ್ಯಭಾವವನ್ನು ಇಡು.

Enda'nger (ಎನ್‌ಡೇಂಜರ್) vt.bring into danger. ಸಂಕಟಕ್ಕೆ ಗುರಿಮಾಡು, ಅಪಾಯಕ್ಕೊಳಪಡಿಸು.

Endear (ಎನ್‌ಡಿಯರ್) vt. render dear. ಪ್ರಿಯಪಾತ್ರವನ್ನಾಗಿ ಮಾಡು..

Endear'ment (ಎನ್‌ಡಿಅರ್‌ಮೆಂಟ್) n, act, &c showing affection. ಪ್ರೀತಿ ಅಕ್ಕರೆ, ಪ್ರೇಮ, ಪ್ರಣಯ, ಸ್ನೇಹ.

Endeav'our (ಎಂಡೆವರ್) vi. t. try, strive. ಪ್ರಯತ್ನಿಸು, ಸಾಹಸಪಡು. n. attempt, effort. ಪ್ರಯತ್ನ, ಉದ್ಯಮ.

Endecagon (ಎನ್‌ಡೆಕಾಗನ್) n. figure having eleven sides. ಏಕಾದಶ ಭುಜಾಕೃತಿ

Endem'ic (ಎಂಡೆಮಿಕ್)a. regularly found among people. ಜನರಲ್ಲಿ ಆಗಾಗ್ಗೆ ಬರುವ (ರೋಗ), ಸ್ಥಾನಿಕ(ರೋಗ).

Endermic (ಎಂಡರ್ಮಿಕ್)adj.acting on the skin. ಚರ್ಮದಮೇಲೆ ಪರಿಣಾಮ ಮಾಡುವ.

End'less (ಎಂಡ್‌ಲೆಸ್) n. unending, continual. ನಿರಂತರ, ಎಡೆಬಿಡದ, ಅಪಾರ, ಸಂತತ, ಶಾಶ್ವತ, ಅಪಾರ, ಕೊನೆಯಿಲ್ಲದ, ಅನಂತ.

Endmost (ಎನ್‌ಡ್‌ಮೋಸ್ಟ್) a. at the extreme end, farthest. ಅತಿ ದೂರವಾಗಿರುವ.

Endog'amy(ಎಂಡಾಗಮಿ) n. custom of marrying only within the tribe. ಕುಲದಲ್ಲಿಯೇ ವಿವಾಹ ಮಾಡಿಕೊಳ್ಳುವ ಪದ್ಧತಿ.

Endorse' (ಇಂಡಾರ್ಸ್) vi. write on the back of document, cheque, &c., confirm. ಹಿಂಬದಿಯಲ್ಲಿ ಬರೆ, ದೃಢಪಡಿಸು, ಷರಾ ಬರೆ, ಸಮ್ಮತಿಸು.

Endorsement(ಎಂಡಾರ್ಸ್‌ಮೆಂಟ್) n. confirmation. ಷರಾ.

Endow' (ಎಂಡೌ) vt· give a gift, invest with powers, qualities, &c· ದತ್ತಿಬಿಡು, ಆಸ್ತಿಬಿಡು, ಯುಕ್ತ, ಸಂಪನ್ನಮಾಡು, ಉಂಬಳಿಹಾಕಿಕೊಡು.

Endowment (ಎಂಡೌಮೆಂಟ್) n· act of endowing. ದತ್ತಿ, ಪುದುವಟ್ಟು.

Endue(ಎನ್‌ಡ್ಯೂ)vt. put on clothes, supply. ವಸ್ತ್ರ ಧರಿಸು, ಕೊಡು.

Endurable (ಎಂಡ್ಯೂರೆಬಲ್) n. that which can be endured· ಸಹನಯೋಗ್ಯ, ಸಹಿಸಲು ತಕ್ಕುದಾದ.

Endur'ance(ಎಂಡ್ಯೂರೆನ್ಸ್) n. power of enduring. ಸಹನೆ, ತಾಳಿಕೊಳ್ಳುವುದು, ಸಹಿಸುವುದು, ತಾಳಿಕೆ, ಶಕ್ತಿ, ತಾಳ್ಮೆ, ಸಹಿಷ್ಣುತೆ.

Endure' (ಎನ್‌ಡ್ಯೂರ್) vt. i. undergo, bear, last. ಅನುಭವಿಸು, ಸಹಿಸಿಕೊ, ತಾಳಿಕೊ, ಬಾಳಿಕೆ ಬರು, ತಡೆ, ಇರು, ಸಹನೆಮಾಡು.

Endwise (ಎಂಡ್‌ವೈಸ್) adv. i an upright position. ತುದಿಮೇಲಾಗಿ.

En'ema (ಎನಿಮಾ) n. injection of liquid, &c.,into the rectum, the syringe used ವಸ್ತಿ, ದ್ರವ ಅಥವಾ ಅನಿಲವನ್ನು ಮಲಾಶಯದೊಳಕ್ಕೆ ನುಗ್ಗಿಸುವುದು, ಪಿಚಕಾರಿ.

Ene'my (ಎನಿಮಿ) n. hostile person, opponent. ವೈರಿ, ಎದುರಾಳಿ, ಹಗೆ, ವಿರೋಧಿ, ಆಗದವನು, ಶತ್ರು.

Energet'ic(ಎನರ್ಜೆಟಿಕ್)a.forcible, operative, vigorous, full of energy. ಶಕ್ತಿಯುಳ್ಳ, ಚಟುವಟಿಕೆಯುಳ್ಳ, ಚುರುಕಾದ, ಉತ್ಸಾಹವುಳ್ಳ, ಜೋರಾದ, ಕಾರ್ಯಶಕ್ತಿಯುಳ್ಳ, ತೇಜೋವಂತ.

Energise (ಎನರ್ಜೈಜ್) vt. & i. act with energy or vigour, give energy to. ಚೇತನಗೊಳಿಸು, ಸಾಮರ್ಥ್ಯ ತುಂಬು.

Energumen (ಎನರ್‌ಗ್ಯೂಮನ್) n. one who is possessed by an evil spirit, a fanatic. ದೆವ್ವಹಿಡಿದವನು, ಧರ್ಮೋನ್ಮಾದವುಳ್ಳವನು.

En'ergy (ಎನರ್ಜಿ) n. force, vigour, activity. ಬಲ, ಉತ್ಸಾಹ, ವೀರ್ಯ, ಸಾಮರ್ಥ್ಯ, ಚೈತನ್ಯ, ಉದ್ಯಮ, ವ್ಯವಸಾಯ.

En'ervate (ಎನರ್ವೇಟ್) vt. deprive of vigour. ಬಲಹೀನಮಾಡು, ಶಕ್ತಿಗುಂದಿಸು, ಕ್ಷೀಣಗೊಳಿಸು, ನಿಶ್ಯಕ್ತಮಾಡು.

Enervation (ಎನರ್ವೇಷನ್) n. act of deprivning of vigour. ನಿಶ್ಯಕ್ತಗೊಳಿಸುವಿಕೆ, ಶಕ್ತಿ ಕುಂದಿಸುವಿಕೆ.

Enervative (ಎನರ್ವೇಟಿವ್) adj. weakening. ಶಕ್ತಿಗುಂದಿಸುವ.

Enfee'ble (ಎನ್‌ಫೀಬಲ್) vt. make feeble. ಬಲಹೀನಮಾಡು, ಶಕ್ತಿಗುಂದಿಸು, ಅಶಕ್ತಮಾಡು, ದುರ್ಬಲಪಡಿಸು.

Enfetter (ಎನ್‌ಫೆಟರ್) vt. bind in fetters. ಬೇಡಿಹಾಕು, ಸಂಕೋಲೆಹಾಕು.

Enfold (ಎನ್‌ಫೋಲ್ಡ್) vt. wrap up, fold, clasp. ಸುತ್ತು, ಆಲಿಂಗಿಸು.

Enforce' (ಎನ್‌ಫೋರ್ಸ್) vt. press, urge, compel observation of. ಬಲಾತ್ಕಾರಮಾಡು, ಒತ್ತಾಯಪಡಿಸು, ಬಲವಂತಮಾಡು, ಕಡ್ಡಾಯಪಡಿಸು, ಒತ್ತಾಯಮಾಡು.

Enforce'ment (ಎನ್‌ಫೋರ್ಸ್‌ಮೆಂಟ್) n. compulsion. ಒತ್ತಾಯ, ಬಲವಂತ, ಪ್ರವರ್ತನ, 'ಜಾರಿ'.

Enframe (ಎನ್‌ಫ್ರೇಮ್) vt. put in a frame. ಚೌಕಟ್ಟಿನಲ್ಲಿ ಸೇರಿಸು.

Enfran'chise (ಎನ್‌ಫ್ರಾಂಚೈಜ್) vt. set free, give electoral franchise to. ಬಿಡುಗಡೆಮಾಡು, ಮುಕ್ತಮಾಡು, ಸ್ವಾತಂತ್ರ್ಯಕೊಡು, ಚುನಾವಣೆಯ ಹಕ್ಕುಕೊಡು, ಸ್ವತಂತ್ರಗೊಳಿಸು.

Engage' (ಎಙ್‌ಗೇಜ್) vt. bind by contract or promise, pledge oneself, employ, occupy, bring or come into conflict. ಕರಾರುಪತ್ರ ಮಾಡು, ನಿಶ್ಚಯಮಾಡಿಕೊ, ಕೆಲಸಕ್ಕೆ ಗೊತ್ತುಮಾಡಿಕೊ, ಭರವಸೆಕೊಡು, ಮಾತುಮಾಡಿಕೊಳ್ಳು, ಉಪಯೋಗಿಸು, ಕೂಲಿಗಿಟ್ಟುಕೊ, ಯುದ್ಧಹೂಡು, ಹೋರಾಡು.

Engagement (ಎಂಗೇಜ್‌ಮೆಂಟ್) n. betrothment, occupation. ವಿವಾಹನಿಶ್ಚಯ, ಕರಾರು.

Engarland(ಎನ್‌ಗಾರ್ಲೆಂಡ್) vt. put a garland upon. ಮಾಲೆತೊಡಿಸು, ಹಾರಹಾಕು.

Engarrison(ಎನ್‌ಗಾರಿಸನ್) vt. place a garrison. ಸೇನೆಯ ಒಂದು ದಳವನ್ನು ಇಡು.

Engend'er (ಎಙ್‌ಜೆಂಡರ್) vt. give rise to. ಹುಟ್ಟಿಸು, ಉಂಟುಮಾಡು, ಆಗಿಸು, ತರು.

Engild (ಎಙ್‌ಗಿಲ್ಡ್) vt. brighten. ಹೊಳೆಯುವಂತೆ ಮಾಡು.

En'gine(ಎಙ್‌ಜಿನ್) n.complex mechanical contrivance. locomotive, means, instrument. ಯಂತ್ರ, 'ಇಂಜನ್' ಸಲಕರಣೆ, ಯಂತ್ರಸಾಧನಗಳು, ಉಪಕರಣಗಳು, ಸಾಧನೆ.

Engineer' (ಎಂಜಿನೀರ್) n. one who designs & constructs military works or works of public utility,

one skilled in mechanical engineering work. ವಾಸ್ತು ಶಿಲ್ಪಿ, ಯಂತ್ರಶಿಲ್ಪಿ, ಎಂಜಿನ್ನುಗಳನ್ನು ರಚಿಸುವವನು, 'ಇಂಜನಿಯರು', ಯಂತ್ರವಿದ್ಯೆಬಲ್ಲವ. vt. i. contrive. ಯೋಜಿಸು.

Engineering (ಎಂಜಿನೀರಿಂಗ್) n. the work of an engineer. ಯಂತ್ರವಿದ್ಯೆ, ಯಂತ್ರಶಾಸ್ತ್ರ.

Engirdle(ಎನ್‌ಗರ್ಡಲ್)vt. surround with a girdle, encircle. ಮೇಖಲೆಯಿಂದ ಸುತ್ತುಗಟ್ಟುವುದು.

Eng'lish(ಇಂಗ್ಲಿಷ್) a. of England. ಇಂಗ್ಲೆಂಡದೇಶದ the English language. ಇಂಗ್ಲೀಷ್ ಭಾಷೆ.

Engorge (ಎನ್‌ಗಾರ್ಜ್) vt. devour with greed. ಆತುರಾತುರವಾಗಿ ನುಂಗು.

Engraft' (ಎನ್‌ಗ್ರಾಫ್ಟ್) vt. insert, implant. add ಕಸಿಕಟ್ಟು, ಹೊರಗಿನಿಂದ ತಂದು ಸೇರಿಸು, ಬೇರೂರಿಸು, ಸ್ಥಾಪಿಸು, ನೆಡು, ಕಲಮಿಮಾಡು, ಕೂಡಿಸು.

Engrave' (ಎನ್‌ಗ್ರೇವ್) vt. carve, impress deeply on (memory) ಕೆತ್ತು, ಕೊರೆ, ಮನಸ್ಸಿನಲ್ಲಿ ನಾಟುವಂತೆ ಮಾಡು, ಚಿತ್ರಿಸು, ನಕಾಸೆಮಾಡು.

Engross (ಎನ್‌ಗ್ರೋಸ್) vt. write out in large letters on in legal form. monopolize, absorb. ದೊಡ್ಡ ಅಕ್ಷರಗಳನ್ನು ಬರೆ, ಗುತ್ತೆ ಹಿಡಿ, ಲೀನನಾಗು.

Engulf (ಎನ್‌ಗಲ್ಫ್) vt. swallow up (usu. in pass.) ಜಲಾವರ್ತದಿಂದ ನುಂಗಿಬಿಡು, ನೀರಿನಿಂದ ಸುತ್ತುವರಿ, ಆವರಿಸು, ಮುಳುಗಿಹೋಗು.

Enhance (ಎನ್‌ಹಾನ್ಸ್) vt. heighten, intensify, exaggerate. ಹೆಚ್ಚಿಸು, ವರ್ಧಿಸು, ಅಧಿಕಮಾಡು, ಉತ್ಪ್ರೇಕ್ಷೆಮಾಡು.

Enharden (ಎನ್‌ಹಾರ್ಡನ್ vt. make hard. ಕಠಿಣವಾಗಿ ಆಗುವಂತೆ ಮಾಡು, ಗಟ್ಟಿಗೊಳಿಸು.

Enhearten (ಎನ್‌ಹಾರ್ಟನ್) vt. encourage ಪ್ರೋತ್ಸಾಹಿಸು.

Enhydrous (ಎನ್‌ಹೈಡ್ರಸ್) adj. containing moisture. ತೇವವುಳ್ಳ.

Enig'ma (ಇನಿಗ್ಮಾ) n. riddle, puzzling person or thing. ಒಗಟು, ಸಮಸ್ಯೆ, ಗೂಢಪ್ರಶ್ನೆ, ತಿಳಿಯಲು ತೊಡಕಾದ ಮನುಷ್ಯ ಅಥವಾ ವಸ್ತು.

Enigmatical (ಎನಿಗ್ಮ್ಯಾಟಿಕಲ್) adj. pertaining to an enigma. ಒಗಟಿಗೆ ಸಂಬಂಧಿಸಿದ.

Enjoin' (ಎಂಜಾಇನ್) vi. prescribe, command. ನಿಯಮಿಸು, ಆಜ್ಞಾಪಿಸು, ಅಪ್ಪಣೆಮಾಡು, ಕ್ರಮವಿಧಿಸು, ಕಟ್ಟಳೆಮಾಡು, ಪ್ರಚೋದಿಸು, ನಿಯೋಜಿಸು.

Enjoy'(ಎಂಜಾಯ್) vt. take delight in, have use. ಆಸ್ವಾದಿಸು, ಅನುಭವಿಸು, ಸಂತೋಷಪಡು, ಆನಂದಿಸು, ಸಲಿ, ಸುಖಾನುಭವಮಾಡು, ಅನುಭೋಗಿಸು.

Enjoyable(ಎನ್‌ಜಾಯೆಬಲ್) n capable of being enjoyed. ಉಪಭೋಗ್ಯವಾದ, ರಮಣೀಯವಾದ.

Enjoyment (ಎನ್‌ಜಾಯ್‌ಮೆಂಟ್) n. happiness, source of joy. ಆನಂದ, ಉಪಭೋಗ.

Enkin'dle (ಎನ್‌ಕಿನ್ಡಲ್) vt. set on fire ಉರಿಹಚ್ಚು, ಹೊತ್ತಿಸು, ಉರಿಸು, ಕೆರಳಿಸು, ರೇಗಿಸು, ಉದ್ರೇಕಗೊಳಿಸು.

Enlace (ಎನ್‌ಲೇಸ್) vt. enfold, entwine. ಸುತ್ತು, ಹೆಣೆ.

Enlarge(ಎನ್‌ಲಾರ್ಜ್)vt. i. expand ; grow large, expatiate. ಬೆಳಸು, ದೊಡ್ಡದುಮಾಡು, ಹೆಚ್ಚಿಸು, ವಿಶಾಲಮಾಡು, ವಿಸ್ತಾರವಾಗು, ವಿಸ್ತರಿಸು.

Enlargement (ಎನ್‌ಲಾರ್ಜ್‌ಮೆಂಟ್) n. expansion, increase in size. ವಿಸ್ತರಣೆ, ಬೆಳವಣಿಗೆ, ದೊಡ್ಡದಾಗುವುದು.

Enlight'en(ಎನ್‌ಲೈಟನ್) vt. instruct, inform, shed light on. ತಿಳುವಳಿಕೆಕೊಡು. ಜ್ಞಾನೋದಯವುಂಟುಮಾಡು, ಪ್ರಚೋದಿಸು, ಬೆಳಕುಬೀಳಿಸು, ಪ್ರಕಾಶಪಡಿಸು, ಉಪದೇಶಮಾಡು.

Enlink (ಎನ್‌ಲಿಂಕ್) vt. connect, link together. ಜೋಡಿಸು, ಒಟ್ಟುಗೂಡಿಸು.

Enlist' (ಎನ್ಲಿಸ್ಟ್)vt. i. engage; be engaged, for military service; get the support of. ಸೈನಿಕವೃತ್ತಿಗೆ ಸೇರಿಸು, ಪಟ್ಟಿಯಲ್ಲಿ ಸೇರಿಸು, ದಾಖಲು ಮಾಡು, ಸಹಕಾರಪಡೆ, ಪಟ್ಟಿಯಲ್ಲಿ ಬರೆ ಕೊಳ್ಳು.

Enliv'en (ಎನ್ಲೈವನ್) vt. animate in spirit; brighten. ಬದುಕಿಸು, ಜೀವ ತುಂಬು, ಚೇತನಗೊಳಿಸು, ಚೈತನ್ಯಕೊಡು, ಕಾಂತಿಕೊಡು, ಜೀವಕಳೆಕೊಡು.

Enlock(ಎನ್ಲಾಕ್)vt. lock up. ಒಳಗೆ ಕೂಡಿ ಬೀಗಹಾಕು.

Enmesh (ಎನ್ಮೆಷ್) vt. entrap. entangle in a net. ಸಿಕ್ಕಿಸು, ಬಲೆಯಲ್ಲಿ ಬೀಳಿಸು.

En'mity (ಎನ್ಮಿಟಿ) n. hatred; hostility ಹಗೆತನ, ದ್ವೇಷ, ವೈರತ್ವ, ಶತ್ರುತ್ವ, ವಿರೋಧ.

Ennead (ಎನಿಅಡ್) n. set of nine· ಒಂಬತ್ತರ ತಂಡ.

Enneagon (ಎನ್ನಿಯಾಗನ್) n. polygon with nine sides. ನವಭುಜಾಕೃತಿ.

Ennoble (ಎನೋಬ್ಲ್) vt. make noble; dignify. ಘನವಂತನನ್ನಾಗಿ ಮಾಡು, ಉದಾತ್ತಗೊಳಿಸು.

Enn'ui (ಆನ್ವೀ) n. feeling of boredom. ಬೇಸರಿಕೆ, ಮನಸ್ಸಿಗೆ ಜುಗುಪ್ಸೆ, ನಿರುತ್ಸಾಹ, ಬೇಜಾರು, ಗ್ಲಾನಿ, ಕ್ಲಾಂತಿ, ಶ್ರಮ, ಅವಸಾದ, ದಣಿವು, ಬಳಲಿಕೆ.

Enodation (ಎನೊಡೇಶನ್) n. act of cleaning of knots. ಗಂಟುಗಳಿಲ್ಲದಂತೆ ಮಾಡುವುದು.

Enode (ಎನೋಡ್) a. knotless, without knots. ಗಂಟಿಲ್ಲದ.

Enor'mity (ಇನಾರ್ಮಿಟಿ) n. great wickedness, crime; deviation from right. ಘೋರಕಾರ್ಯ, ದಾರುಣತೆ, ಮಹಾಪಾತಕ, ದುರುಳತನ, ಅತಿಪಾಪ.

Enormous (ಇನಾರ್ಮಸ್)a. very large. ಅಪರಿಮಿತ, ಬಹುದೊಡ್ಡ, ವಿಪರೀತ, ಅತ್ಯಂತ, ಮಹಾ.

Enough' (ಇನಫ್)a. & adv. sufficient (ly). ಸಾಕಾದಷ್ಟು· n. as much or as many as necessary. ಸಂತೃಪ್ತಿ, ಯಥೇಷ್ಟತ್ವ, ಸಾಕಷ್ಟು·e. & e. more than enough. ಬೇಕಾದ್ದಕ್ಕಿಂತ ಹೆಚ್ಚು.

Enounce (ಎನೌನ್ಸ್) vt. proclaim, pronounce, enunciate. ಘೋಷಿಸು, ನಿರೂಪಿಸು, ಉಚ್ಚರಿಸು.

Enquire' (ಎನ್ಕ್ವಾಯರ್) vt. i. ask about. ಕೇಳು, ವಿಚಾರಿಸು, ವಿಚಾರಮಾಡು, ಕೇಳಿ ತಿಳಿದುಕೊ.

Enrage' (ಎನ್ರೇಜ್) vt. make furious· ಸಿಟ್ಟುಗೆಬ್ಬಿಸು, ಕೆರಳಿಸು, ರೋಷಗೊಳಿಸು.

Enrapt (ಎನ್ರಾಪ್ಟ್) a. delighted, enraptured. ಅತೀವ ಹರ್ಷಗೊಂಡ.

Enrap'ture(ಎನ್ರಾಪ್ಚರ್)vt. delight intensely. ಹೆಚ್ಚು ಸಂತೋಷಪಡಿಸು.

Enrich (ಎನ್ರಿಚ್) vt. make rich. ಐಶ್ವರ್ಯವಂತನಮಾಡು, ಹಣವಂತನನ್ನಾಗಿ ಮಾಡು.

Enrobe (ಎನ್ರೋಬ್) vt. put a robe upon. ಉಡುಪು ತೊಡಿಸು.

Enrol'(ಎನ್ರೋಲ್)vt· insert name in a list; incorporate as member; register deed; record. ಹೆಸರು ಬರೆ, ದಾಖಲುಮಾಡು, ಸದಸ್ಯನನ್ನಾಗಿ ಸೇರಿಸಿಕೊ, ಸದಸ್ಯನಾಗು, ದಸ್ತವೇಜನ್ನು ರಿಜಿಸ್ಟ್ರಮಾಡು, ಬರೆಯಿಸು, ಸಮೂದಿಸು.

Enroute (ಆನ್ರೂಟ್) adj. on the way. ಮಾರ್ಗದಲ್ಲಿ.

Ensanguined (ಎನ್ಸಾಂಗ್ವಿನ್ಡ್) adj. bloodstained. ರಕ್ತ ಕಲುಷಿತವಾದ.

Ensate (ಎನ್ಸೇಟ್) a. ensiform, sword-shaped. ಖಡ್ಗದ ಆಕಾರದ.

Ensconce (ಎನ್ಸ್ಕಾನ್ಸ್) vt. establish oneself. ನೆಲಸು.

Enshrine (ಎನ್‌ಶ್ರೈನ್) vt. enclose in shrine, cherish. ಪ್ರತಿಷ್ಠೆಮಾಡು, ಪವಿತ್ರ ಆವರಣದಲ್ಲಿ ಸ್ಥಾಪಿಸು, ಕಾಪಾಡಿಕೊಂಡುಬರು.

Enshroud' (ಇನ್‌ಶ್ರೌಡ್) vt. cover completely. ಪೂರ್ತಿಯಾಗಿ ಮುಚ್ಚು, ಮುಸುಕುಹಾಕು.

Ensiform (ಎನ್ಸಿಫಾರಮ್) adj. sword shaped. ಕತ್ತಿಯಾಕಾರದ.

En'sign (ಎನ್‌ಸೈನ್) n. badge; emblem; banner; flag. ನಿಶಾನೆ, ಪತಾಕೆ, ಬಾವುಟ, ಧ್ವಜ, ಲಾಂಛನ, ಪದಕ, ಬಿಲ್ಲೆ.


Ensign

Ensilage (ಎನ್ಸಿಲೆಜ್) n. a mode of storing green fodder in pits. ಗುಳಿಗಳಲ್ಲಿ ಮೇವನ್ನು ಕಾದಿಡುವುದು.

Enslave' (ಇನ್‌ಸ್ಲೇವ್) vt. make a slave. ಗುಲಾಮನನ್ನಾಗಿಮಾಡು, ಅಡಿಯಾಳುಮಾಡು.

Ensnare' (ಎನ್‌ಸ್ನೇರ್) vt. entrap. ಬಲೆಯಲ್ಲಿ ಹಿಡಿ, ಪಾಶದಿಂದ ಬಂಧಿಸು.

Ensober (ಎನ್‌ಸೋಬರ್) vt. make sober. ಶಮನಮಾಡು.

Ensorce (ಎನ್‌ಸಾರ್ಸ್) vt. bewitch. ಮಾಟಮಾಡು, ಮುಗ್ಧಗೊಳಿಸು.

Ensphere (ಎನ್‌ಸ್ಫಿಯರ್) vt. enclose, encircle. ಆವರಿಸು.

Ensue' (ಎನ್‌ಸ್ಯೂ) vt. t. happen later; result from. ಆಮೇಲೆ ಆಗು, ತರುವಾಯ ಸಂಭವಿಸು, ಉದ್ಭವಿಸು, ಪರಿಣಾಮವಾಗಿ ಬರು.

Ensure' (ಎನ್‌ಶೂರ್) vt. make safe or certain; secure. ನಿಶ್ಚಯಪಡಿಸು, ಖಂಡಿತಮಾಡು, ನಿಶ್ಚಿತಮಾಡು, ಭರವಸೆ ಕೊಡು, ಕಾದಿಡು, ಸುರಕ್ಷಿತಮಾಡು.

Entablature (ಎನ್‌ಟಾಬ್ಲಚ್ಯೂರ್) n. that part of a design in architecture which rests upon the capitals. ಅಲಂಕಾರ ಗಂಭಗಳ ಮೇಲ್ಭಾಗದಲ್ಲಿರುವ ಅಲಂಕರಣಯುಕ್ತವಾದ ಬೋದಿಗೆ ಮುಂತಾದುವು.


Entablature

Entail (ಎನ್‌ಟೇಲ್) vt. settle landed estate on person; impose on; necessitate ಸ್ಥಾವರ ಆಸ್ತಿಯನ್ನು ಪರಂಪರೆಯಾಗಿ ಇಡು, ಸಂಭವಿಸುವಂತೆ ಮಾಡು, ಆವಶ್ಯಕಮಾಡು.

Entang'le (ಎನ್‌ಟಾಂಗಲ್) vt. involve in difficulties; ensnare ತೊಡಕಿನಲ್ಲಿ ಸಿಕ್ಕಿಸು, ತೊಡಕುಮಾಡು, ಪೇಚಾಟದಲ್ಲಿ ಸಿಕ್ಕಿಸು, ಸಿಕ್ಕಿಸು, ಸಿಕ್ಕುಬೀಳು, ಬಲೆಯಲ್ಲಿ ಸಿಕ್ಕಿಸು, ಗ್ರಥಿಸು.

Entelechy (ಎಂಟೆಲಿಕಿ) n. realization. ಅಂತಃಶಕ್ತಿಯ ಸಿದ್ಧಿ.

Entellus (ಎಂಟೆಲಸ್) n. kind of ape found in India. ಸಿಂಗಳೀಕ.

Entente (ಎನ್ಟಾನ್ಟ್) n. friendly understanding. ರಾಜ್ಯಗಳಲ್ಲಿ ಪರಸ್ಪರ ಸಖ್ಯ.

En'ter (ಎಂಟರ್) vt. t. go or come in; insert in book, &c. ಹೋಗು, ಒಳಕ್ಕೆ ಹೋಗು, ಬರು, ತೂರಿಕೊ, ಪ್ರವೇಶಿಸು. ಹೆಸರು ಬರೆ, ದಾಖಲುಮಾಡು, ಸೇರಿಕೊ, ಸೇರಿಸಿಕೊ. e. into, engage in; sympathise with. ಕೈಕೊಳ್ಳು, ಪ್ರವೇಶಿಸು, ಸಹಾನುಭೂತಿ ತೋರು. e. upon, begin. ಆರಂಭಿಸು.

Enteralgia (ಎಂಟರಾಲ್ಜಿಯಾ) n. pain in the bowels. ಹೊಟ್ಟೆಯ ನೋವು.

Ente'ric (ಎಂಟರಿಕ್) a. of the intestines. ಕರುಳಿನ, ಆಂತ್ರದ.

Enteritis (ಎಂಟೆರೈಟಿಸ್) n. inflammation of the intestines. ಕರುಳುಗಳು ಊದುವಿಕೆ.

En'terprise (ಎಂಟರ್‌ಪ್ರೈಜ್) n. bold undertaking. ಸಾಹಸಕಾರ್ಯ, ಮಹೋದ್ಯಮ, ಅದ್ಭುತಕಾರ್ಯ, ಆಶ್ಚರ್ಯಯುತ ಕರ್ಮ.

Enterprising (ಎಂಟರ್‌ಪ್ರೈಝಿಂಗ್) a. full of enterprise. ಸಾಹಸಿ, ಧೈರ್ಯಶಾಲಿ, ಧೀರ, ಉತ್ಸಾಹಿ.

Entertain' (ಎನ್ಟರ್‌ಟೇನ್) vt. receive guest; amuse; harbour; keep in mind. ಆದರಾತಿಥ್ಯಮಾಡು, ಉಪಚಾರ ಮಾಡು, ವಿನೋದಪಡಿಸು, ಮನೋರಂಜನೆ ಮಾಡು, ಎಡೆಕೊಡು, ಮನಸ್ಸಿಗೆ ತೆಗೆದುಕೊ, ಅತಿಥ್ಯಮಾಡು, ಸತ್ಕರಿಸು, ಆಶ್ರಯಕೊಡು.

Entertain'ment (ಎಂಟರ್‌ಟೇನ್ಮೆಂಟ್) n. hospitality at table; a banquet; amusement ಸನ್ಮಾನ, ಔತಣ, ವಿನೋದ, ಆದರೋಪಚಾರ, ಸತ್ಕಾರ, ಆತಿಥ್ಯ.

Enthral' (ಎನ್‌ಥ್ರಾಲ್) vt. enslave; captivate. ಗುಲಾಮನನ್ನಾಗಿ, ದಾಸನನ್ನಾಗಿಮಾಡು, ಮೋಹಗೊಳಿಸು, ಮರುಳುಗೊಳಿಸು, ವಶಮಾಡಿಕೊಳ್ಳು.

Enthrill (ಎನ್‌ಥ್ರಿಲ್) vt. pierce. ಭೇದಿಸು.

Enthrone (ಎನ್‌ಥ್ರೋನ್) vt. place on throne. ಸಿಂಹಾಸನದಮೇಲೆ ಕೂಡಿಸು.

Enthronement (ಎನ್‌ಥ್ರೋನ್‌ಮೆಂಟ್) n. act placing on a throne. ಸಿಂಹಾಸನದಮೇಲೆ ಕೂಡಿಸುವಿಕೆ.

Enthuse (ಎಂಥ್ಯೂಸ್) vt. make enthusiastic. ಉತ್ಸಾಹ ಉತ್ಪನ್ನ ಮಾಡು.

Enthu'siasm (ಎಂಥೂಝಿಅಝ್‌ಮ್) n. intense interest; ardent zeal. ಸಂಭ್ರಮ, ಸಡಗರ, ಹುಚ್ಚು, ಉಬ್ಬಟೆ, ಉತ್ಸಾಹ, ಹುಮ್ಮಸು.

Enthu'siast (ಎಂಥೂಝಿಅಸ್ಟ್) n. person full of enthusiasm. ಅತ್ಯುತ್ಸಾಹಿ, ಶ್ರದ್ಧೋನ್ಮತ್ತ, ಭ್ರಾಂತ.

Enthusiastical (ಎನ್‌ಥ್ಯೂಜಿಆಸ್ಟಿಕಲ್) a. highly elevated, excited. ಉತ್ಸಾಹಿಕ, ಹುಮ್ಮಸ್ಸಿನಿಂದ ಕೂಡಿದ.

Entice' (ಎಂಟೈಸ್) vt. allure. ಮರುಳು ಮಾಡು, ಪುಸಲಾಯಿಸು, ಆಕರ್ಷಿಸು, ಸೆಳೆ.

Enticement (ಎನ್‌ಟೈಸ್‌ಮೆಂಟ್) n. allurement, tempting, attraction. ಪ್ರಲೋಭನ, ಪುಸಲಾಯಿಸುವಿಕೆ.

Entire' (ಇಂಟೈರ್) n. complete. ಪೂರ್ತಿ, ಪೂರ್ಣ, ಪೂರಾ, ಸಮಗ್ರ, ಸಕಲ, ಸರ್ವ, ಒಡೆದಿಲ್ಲದ, ಸಂಪೂರ್ಣ.

Entire'ly (ಇಂಟೈರ್ಲಿ) n. wholly. ಸಂಪೂರ್ಣವಾಗಿ, ಇಡಿಯಾಗಿ.

Entire'ty (ಇಂಟೈರ್ಟಿ) n. sum total. ಸಂಪೂರ್ಣತೆ. ಒಟ್ಟು, ಸಾಕಲ್ಯ, ಇಡಿ.

Enti'tle (ಇಂಟೈಟ್‌ಲ್) vt. give book ; &c the title of ; give a claim to. ಹೆಸರಿಡು, ಹಕ್ಕುಕೊಡು, ಬಿರುದುಕೊಡು, ಅಧಿಕಾರಕೊಡು, ಅರ್ಹ ಮಾಡು.

En'tity (ಎಂಟಿಟಿ) n. thing with real existence ಅಸ್ತಿತ್ವ, ಇರುವಿಕೆ, ಇರುವು, ಪದಾರ್ಥ, ವಸ್ತು, ಸತ್ವ, ಸತ್ತೆ.

Entail (ಎನ್‌ಟಾಯ್ಲ್) vt. ensnare, entangle ಸಿಕ್ಕಿಸು.

Entomb' (ಎಂಟೂಮ್) vt. place in tomb ಗೋರಿಯಲ್ಲಿಡು, ಸಮಾಧಿಯಲ್ಲಿಡು, ಸಮಾಧಿಮಾಡು, ಹೂಳು.

Entomic (ಎಂಟಾಮಿಕ್) adj. pertaining to insects. ಕೀಟ ಸಂಬಂಧದ.

Entomol'ogy (ಎಂಟೊಮಾಲೊಜಿ) n. study of insects ಕೀಟವಿಜ್ಞಾನ, ಕ್ರಿಮಿ ಶಾಸ್ತ್ರ, ಕೀಟಕಶಾಸ್ತ್ರ.

Entomoid (ಎಂಟೋಮಾಯ್ಡ್) adj. like an insect. ಕೀಟದಂತೆ.

En'trails (ಎಂಟ್ರೇಲ್ಸ್) n. (plu.) inner parts of animal body. ಕರುಳು, ಗರ್ಭ, ಒಳಭಾಗ.

Entrain (ಎಂಟ್ರೈನ್) vt. & i. put or get into a train. ರೈಲಿನಲ್ಲಿ ಇಡು, ಅಥವಾ ಕೂಡು.

Entrammel(ಎಂಟ್ರ್ಯಾಮೆಲ್)vt.entangle, obstruct. ಸಿಕ್ಕಿಸು, ಅಡ್ಡಪಡಿಸು.

Entrance' (ಎಂಟ್ರಾನ್ಸ್) vt. throw into trance, joy, &c. ಮೈಮರಸು, ಆನಂದದಲ್ಲಿ ಮುಳುಗಿಸು, ಮೋಸಗೊಳಿಸು.

En'trance(ಎಂಟ್ರನ್ಸ್)n. act of entering; right of admission; the place for entering; the door. ಪ್ರವೇಶ, ಪ್ರವೇಶಾಧಿಕಾರ, ಪ್ರವೇಶದ ಹಕ್ಕು, ಒಳಹೋಗುವ ಮಾರ್ಗ.

Entrant (ಎಂಟ್ರಂಟ್) n. one who enters. ಪ್ರವೇಶಕ

Entrap (ಎನ್‌ಟ್ರ್ಯಾಪ್) vt. ensnare, catch in a trap. ಸಿಕ್ಕಿಸು.

Entreat' (ಎಂಟ್ರೀಟ್) vt. ask earnestly; heg ಬೇಡಿಕೊಳ್ಳು, ವಿನಂತಿ ಮಾಡು. ಪ್ರಾರ್ಥಿಸು, ಮೊರೆಯಿಡು.

Entreat'y (ಎಂಟ್ರೀಟಿ) n. earnest prayer. ಪ್ರಾರ್ಥನೆ, ವಿನಂತಿ, ಬೇಡಿಕೆ, ಮೊರೆ.

Entrench(ಎನ್‌ಟ್ರೆಂಚ್) vt. surround with a trench. ಸುತ್ತಲೂ ಕಂದಕ ತೋಡು. ಭದ್ರವಾಗಿ ನಿಲ್ಲು.

Entrenchment (ಎಂಟ್ರೆಂಚ್‌ಮೆಂಟ್) trench, protection. ಕಂದಕ, ರಕ್ಷಣೆ.

Entrust' (ಎಂಟ್ರಸ್ಟ್) vt. charge with (duty, &c.); confide to (thing, secret &c.); ಒಪ್ಪಿಸಿಕೊಡು, ನಂಬಿ ಒಪ್ಪಿಸು, ವಹಿಸು, ನಿಕ್ಷೇಪಿಸು.

En'try (ಎಂಟ್ರಿ) n. act of entering, entrance; entering; item entered. ಪ್ರವೇಶ, ಪ್ರವೇಶಸ್ಥಳ, ಬಾಗಿಲು, ದ್ವಾರ, ಮಾರ್ಗ, ನಮೂದಿಸುವುದು, ದಾಖಲು.

Entwine (ಎಂಟ್ವೈನ್) vt. interweave, embrace. ಸುತ್ತಿಕೊ, ಆಲಿಂಗಿಸು.

Entwist (ಎಂಟ್ವಿಸ್ಟ್) vt. form into twist. ಹುರಿಮಾಡು.

Enubilate (ಎನ್ಯೂಬಿಲೇಟ್) vt. clear from clouds, mist, etc. ಮಂಜು ಮೋಡಗಳನ್ನು ಹೋಗಲಾಡಿಸು.

Enum'erate (ಇನ್ಯೂಮರೇಟ್) vt. count, specify. ಎಣಿಕೆ ಮಾಡು, ಎಣಿಸು, ನಮೂದಿಸು.

Enumeration (ಎನ್ಯೂಮರೇಷನ್) n. act of enumerating, counting. ಎಣಿಸುವಿಕೆ, ಗಣನೆ.

Enun'ciate (ಇನನ್‌ಸಿಏಟ್) vt. state definitely, proclaim; pronounce. ಪ್ರತಿಪಾದಿಸು, ಸ್ಪಷ್ಟವಾಗಿ ನಿರೂಪಿಸು, ಸಾರಿ ಹೇಳು, ಘೋಷಿಸು, ಉಚ್ಚರಿಸು.

Enure (ಎನ್ಯೂರ್) vi. accustom, habituate. ಅಭ್ಯಾಸಮಾಡಿಕೊ.

Envel'op (ಎನ್‌ವೆಲಪ್) vt. wrap up, cover; surround. ಮುತ್ತಿಕೊಳ್ಳು, ಸುತ್ತಿಡು, ಸುತ್ತುವರಿ, ಆವರಿಸು, ಮುಚ್ಚು, ಮುತ್ತು, ಸುತ್ತುಗಟ್ಟು.

En'velope(ಎನ್‌ವೆಲೋಪ್) n. cover of letter; wrapper. ಲಕೋಟೆ, ಹೊದಿಕೆ, ಸುತ್ತುವಪದಾರ್ಥ, ಕವರು, ಆಚ್ಛಾದನ, ಅವಗುಂಠನ.

Envelopment (ಎನ್ವಲಪ್‌ಮೆಂಟ್) n. wrapping or covering on all sides. ಹೊದಿಕೆ, ಆವರಣ, ಸುತ್ತುಗಟ್ಟುರುವಿಕೆ.

Envenom (ಎನ್‌ವೆನಂ) vt. infuse venom into; corrupt. ವಿಷಹಾಕು, ಮನವನ್ನು ಕೆಡಿಸು.

En'viable (ಎನ್ವಿಎಬಲ್) a. that is to be envied. ಇಚ್ಛಿಸತಕ್ಕ, ಅಸೂಯೆ ಹುಟ್ಟಿಸುವ, ಬಯಸತಕ್ಕ, ಅಪೇಕ್ಷಿಸತಕ್ಕ, ಮತ್ಸರವನ್ನುಂಟುಮಾಡುವ.

En'vious(ಎನ್ವಿಅಸ್)a. full of envy. ಮತ್ಸರವುಳ್ಳ, ಹೊಟ್ಟೆಕಿಚ್ಚಿನ, ಅಸೂಯೆಯುಳ್ಳ, ಈರ್ಷ್ಯೆಯಿಂದ ಕೂಡಿದ.

Enviously (ಎನ್ವಿಯಸ್ಲಿ) adv. in an envious manner. ಮತ್ಸರದಿಂದ ತುಂಬಿದ ರೀತಿಯಲ್ಲಿ, ಹೊಟ್ಟೆಕಿಚ್ಚಿನಿಂದ.

Envi'ron (ಎನ್‌ವೈರನ್) vt. surround. ಸುತ್ತಿಕೊಳ್ಳು.

Envir'onment (ಎನ್ವೈರಾನ್‌ಮೆಂಟ್) n. surrounding objects or circumstances. ಹೊರವಲಯ, ಪರಿಸ್ಥಿತಿ, ಪರಿವೇಷ್ಟನೆ, ಪ್ರದೇಶ, ಸನ್ನಿವೇಶ, ಸಂದರ್ಭ.

Envir'ons (ಎನ್ವೈರನ್ಸ್) n. (plu.) the outskirts of a city; neighbourhood. ಸುತ್ತಲಿನ ಪ್ರದೇಶ, ಹೊರವಲಯ, ಸುತ್ತುಮುತ್ತು, ಪರಿಸರ, ಉಪಗ್ರಾಮ.

Envi'sage (ಎನ್ವಿಸೇಜ್) vt. look in the face; view; contemplate. ದಿಟ್ಟಿಸಿ ನೋಡು, ಮನದಟ್ಟುಮಾಡಿಕೊ, ಆಲೋಚಿಸು, ಚಿಂತಿಸಿನೋಡು. ಊಹಿಸು, ಗ್ರಹಿಸು, ಧ್ಯಾನಿಸು.

Envisagement(ಎನ್ವಿಸೇಜ್‌ಮೆಂಟ್) n. viewing, consideration. ಊಹನೆ, ಗ್ರಹಿಸುವುದು.

En'voy (ಎನ್ವಾಯ್) n. messenger, diplomatic minister. ರಾಜದೂತ, ರಾಜಪ್ರತಿನಿಧಿ.

Envoyship (ಎನ್ವಾಯ್‌ಷಿಪ್) n. office of an envoy. ರಾಜದೂತನ ಪದವಿ.

En'vy (ಎನ್ವಿ) n. jealousy. ಹೊಟ್ಟೆ ಉರಿ, ಈರ್ಷ್ಯೆ, ಅಸೂಯೆ, ಹೊಟ್ಟೆಕಿಚ್ಚು. vt. feel envy of ಹೊಟ್ಟೆಕಿಚ್ಚುಪಡು, ಕೆರುಬು, ಅಸೂಯೆಪಡು, ಈರ್ಷ್ಯೆಪಡು.

Enwrap' (ಎನ್‌ರಾಪ್) vt. wrap, enfold. ಮುತ್ತು, ಕವಿಸು, ಹೊದಿಕೆ ಹೊಚ್ಚು, ಆಚ್ಛಾದಿಸು.

Eoan (ಈಅನ್) adj. pertaining to dawn. ಅರುಣೋದಯಕ್ಕೆ ಸಂಬಂಧಿಸಿದ.

Epact(ಈಪಾಕ್ಟ್) age of moon on Jan. 1. ಜನವರಿಯ ಮೊದಲನೆಯ ತಾರೀಖಿನ ದಿನ ಚಂದ್ರನ ವಯಸ್ಸು.

Epagoge (ಪಗೋಗ್) n. a figure of speech in which a general proposition is demonstrated by a particular. ಅರ್ಥಾಂತರನ್ಯಾಸಾಲಂಕಾರ.

Epaulet (ಎಪಾಲೆಟ್) n. ornamental shoulder-piece of military officers. ಸೇನಾಧಿಕಾರಿಗಳ ಭುಜದ ಅಲಂಕಾರ ಪಟ್ಟಿ.


Epaulet

Epenetic (ಎಪಿನೆಟಿಕ್) adj. laudatory. ಪ್ರಶಂಶೆಯ.

Ephemera (ಎಫೆಮೆರ) n. insect living only one day. ಒಂದು ದಿನ ಮಾತ್ರ ಜೀವಿಸುವ ಹುಳು, ಕ್ಷಣಭಂಗುರ.

Ephem'eral (ಇಫೆಮೆರಲ್) a. short-lived, transitory. ಅಲ್ಪಕಾಲಿಕ, ನಶ್ವರ, ಅಲ್ಪಾಯುಷಿ, ದಿನಬಾಳುವೆಯ, ಕ್ಷಣಭಂಗುರವಾದ, ಕ್ಷಣಿಕ.

Ephemeris (ಎಫಿಮೆರಿಸ್) n. an astronomical almanac. ಖಗೋಳ ಪಂಚಾಂಗ.

Ep'ic (ಎಪಿಕ್) n. poem of heroic deeds. ಮಹಾಕಾವ್ಯ, ವೀರಕಾವ್ಯ.

Epi'cure (ಎಪಿಕ್ಯೂರ್) n. one given to sensual enjoyment ಸುಖಭೋಗಿ, ಭೋಗಲಾಲಸ, ವಿಷಯಲಂಪಟ, ಉದರಪರಾಯಣ.

Epidem'ic (ಎಪಿಡೆಮಿಕ್) a. [of disease, craze, &c] prevalent for the time. ಸಾಂಕ್ರಾಮಿಕ, ಸರ್ವತ್ರ ವ್ಯಾಪಿಸಿರುವ, ವ್ಯಾಪಕ, ಸೋಂಕಿನ

Epidermis (ಎಪಿಡರ್ಮಿಸ್) n. outer layer of the skin. ಒಳಚರ್ಮ.

Epiglottis (ಎಪಿಗ್ಲಾಟಿಸ್) u. cartilege at the root of the tongue. ಉಪಜಿಹ್ವಾ.

Ep'igram(ಎಪಿಗ್ರಾಮ್) n. a short poem with witty ending. ಚಾಟುಪದ್ಯ, ನಾಡುನುಡಿ, ಚುಚ್ಚುನುಡಿ.

Epigrammatic (ಎಪಿಗ್ರಮಾಟಿಕ್) a. like an epigram, concise, pointed. ಚಾಟುಪದ್ಯಕ್ಕೆ ಸಂಬಂಧಿಸಿದ, ಸಂಕ್ಷೇಪೋಕ್ತಿಯ.

Ep'igraph (ಎಪಿಗ್ರಾಫ್) n. inscription. ಶಿಲಾಶಾಸನ, ಶಿಲಾಲೇಖ.

Epigraphic(ಎಪಿಗ್ರಾಫಿಕ್)a pertaining to an epigraph. ಶಿಲಾಶಾಸನ ಸಂಬಂಧಿ.

Epigraphy (ಎಪಿಗ್ರಫಿ) n. sceince of the study of inscriptions, inscriptions. ಶಿಲಾಶಾಸನ ಅಧ್ಯಯನ ಶಾಸ್ತ್ರ, ಶಿಲಾಲೇಖಗಳು.

Ep'ilepsy (ಎಪಿಲೆಪ್ಸಿ) n, the falling disease. ಮಲರೋಗ, ಅಪಸ್ಮಾರ. ಬೀಳುವ ರೋಗ, ಕ್ಷಿಪ್ರಸನ್ನಿ, ಮೂರ್ಛೆರೋಗ.

Ep'ilogue (ಎಪಿಲಾಗ್) n. concluding part of a book, &c.; speech or short poem delivered at the end of a play. ಉಪಸಂಹಾರ, ಭರತವಾಕ್ಯ, ಹಿನ್ನುಡಿ, ಮುಕ್ತಾಯ.

Epi'sode(ಎಪಿಸೋಡ್)n. incidental narrative or digression. ಅಡ್ಡಕಥೆ, ಉಪಕಥೆ, ಪ್ರಾಸಂಗಿಕ ಕಥೆ.

Epistaxis (ಎಪಿಸ್‌ಟಾಕ್ಸಿಸ್) n bleeding from the nose. ಮೂಗಿನಿಂದ ರಕ್ತ ಸ್ರವಿಸುವುದು.

Epis'tle (ಇಪಿಸ್‌ಲ್)n. a letter. ಪತ್ರ, ಕಾಗದ, ಪತ್ರಿಕೆ, ಓಲೆ.

Ep'itaph (ಎಪಿಟಾಫ್) n· words inscribed on tomb. ಸಮಾಧಿಯ ಮೇಲಣ ಲಿಪಿ, ಚೈತ್ಯೋಪಲಿಪಿ, ಸ್ಮರಣ ಮಂದಸ, ಸಮಾಧಿಲೇಖ, ಚರಮವಾಕ್ಯ.

Ep'ithet (ಎಪಿಥೆಟ್) n. appel'ation, abjective expressing quality or attribute ವಿಶೇಷಣ, ಉಪಾಧಿ, ಗುಣವಾಚಕ, ಸಾರ್ಥಕನಾಮ.

Epithetical (ಎಫಿಥೆಟಿಕಲ್) a. pertaining to an epithet, abounding in epithets. ಗುಣವಾಚಕ ಸಂಬಂಧಿ, ವಿಶೇಷಣಯುಕ್ತ.

Epit'ome(ಎಪಿಟೋಮಿ)n. summary; abstract. ಸಾರ, ಸಂಕ್ಷಿಪ್ತ ನಿರೂಪಣೆ, ಸಂಕ್ಷೇಪ, ಅಡಕ.

Epit'omize (ಎಪಿಟೊಮೈಜ್) vt. condense. ಸಂಕ್ಷೇಪಿಸು, ಸಂಗ್ರಹಿಸಿ ಬರೆ.

E'poch (ಈಪಾಕ್) n. beginning of an era; notable events. ಶಕದ ಆರಂಭ, ಯುಗಾರಂಭ, ಯುಗ, ವಿಶೇಷ ಘಟನೆಗಳಿಂದ ಕೂಡಿದ ಚರಿತ್ರಕಾಲ.

Epode (ಎಪೋಡ್) n. form of lyric poem. ಭಾವಗೀತೆ.

Eponym (ಎಪೊನಿಮ್) n. name of a place or people got from a person. ಒಂದು ಸ್ಥಳ ಅಥವಾ ಜನಕ್ಕೆ ತನ್ನ ಹೆಸರು ಕೊಡುವವನು.

Ep'opee (ಎಪೊಪೀ) n· epic poem. ಮಹಾಕಾವ್ಯ

Epos (ಎಪಾಸ್) n. epic poem. ಮಹಾಕಾವ್ಯ.

Eq'uable (ಈಕ್ವಬ್‌ಲ್) n. uniform, even, not easily disturbed. ಸಮಾನ, ಮಟ್ಟವಾದ, ಒಂದೇ ಸಮನಾಗಿರುವ, ಸಿಚ್ಚುಕಡಮೆಯಾಗದ, ಸಮಧಾತುವಾದ, ಹ್ಥಿಮಿತ, ನಿರ್ವಿಕಾರ, ಶಾಂತ.

Eq'ual (ಈಕ್ವಲ್) a. same in number, size, merit &c. ಸರಿಸಮ, ಸರಿಬರಿ, ಈಡಾದ, ಸಮಾನಬಲದ. e to the occasion, not perplexed, able to act. ಧೈರ್ಯಗೆಡದ, ಸಮಬಲವುಳ್ಳ.

Equal'ity (ಈಕ್ವಾಲಿಟಿ) n. being equal. ಸಮಾನತೆ, ಸಮತೆ, ಸರೀಕ, ಸಮಾನಸ್ಕಂಧ, ಸಾದೃಶ್ಯ.

Equalize (ಈಕ್ವಲೈಸ್)vt. & i. make equal. ಸಮಮಾಡು.

Equanim'ity (ಈಕ್ವಾನಿಮಿಟಿ)n. composure, calm. ಸಮಚಿತ್ತತೆ, ಸಮಭಾವ, ಮನಸ್ಥೈರ್ಯ, ಚಿತ್ತಶಾಂತಿ.

Equate (ಈಕ್ವೇಟ್) vt. treat as equivalent ಸಮವೆಂದು ಪರಿಗಣಿಸು.

Equation (ಈಕ್ವೇಶನ್) n. making equal, balancing [Math] tatement of equality ಸಂಬಂಧ. ಸಾಮ್ಯ, ಸಮೀಕರಣ, ಸರಿಸಮಮಾಡುವುದು.

Equator

Equat'or (ಇಕ್ವೇಟರ್)n. great circle of the earth equidistant from the poles. ನಿರಕ್ಷರೇಖೆ, ಭೂಮಧ್ಯರೇಖೆ, ಸಮಭಾಜಕವೃತ್ತ.

Equerry (ಎಕ್ವೆರಿ)n. officer of princes or nobles who takes care of their horse. ಶ್ರೀಮಂತನ ಅಶ್ವಪಾಲ

Eques'trian (ಇಕ್ವೆಸ್ಟ್ರಿಅನ್) a. of horse riding. ಕುದುರೆ ಸವಾರಿ ಸಂಬಂಧವಾದ, ಕುದುರೆ ಸವಾರಿಯ, ಅಶ್ವಾರೋಹಿ ವೀರರ.

Equiang'ular (ಇಕ್ವಿಆಂಗ್ಯುಲರ್) a. having equal angles. ಸಮ ಕೋಣಗಳ.

Equidis'tant (ಇಕ್ವಿಡಿಸ್ಟಂಟ್) a. at equal distance. ಸಮಾನಾಂತರದ, ಸಮದೂರದ.

Equilat'eral(ಈಕ್ವಿಲಾಟರಲ್) a. having equal sides. ಸಮಭುಜಗಳುಳ್ಳ, ಸಮಬಾಹುಗಳುಳ್ಳ.

Equilib'rium (ಈಕ್ವಿಲಿಬ್ರಿಅಮ್) n. state of balance, mental balance. ಸಮತೂಕಸ್ಥಿತಿ, ಸಮಸ್ಥಿತಿ, ಸಮತೆ, ಸಮಭಾರ, ಸಮಚಿತ್ತತ್ವ.

Equimultiple (ಈಕ್ವಿಮಲ್ಟಿಪಲ್) n. number having a common factor with another. ಸಮಾನ ಅಪವರ್ತನಿ.

Eq'uine (ಈಕ್ವೈನ್) n. of or like a horse. ಕುದುರೆಯ.

Equinoctial (ಈಕ್ವಿನಾಕ್ಷಲ್) adj. of equal day and night. ಸಮದಿನರಾತ್ರಿಗಳುಳ್ಳ

Eq'uinox (ಈಕ್ವಿನಾಕ್ಸ್) n. time at which sun crosses the equator and day & night are equal. ವಿಷುವಕಾಲ, ಹಗಲು ರಾತ್ರಿ ಸಮನಾಗಿ ಕಾಲ.

Equip (ಇಕ್ವಿಪ್) vt. supply wi requisites, dress for journe ಸನ್ನಾಹಮಾಡು, ಸಜ್ಜುಗೊಳಿಸು, ಮಾಡು, ಸಿದ್ಧಮಾಡು, ಒದಗಿಸು.

Eq'uipage (ಎಕ್ವಿಪೇಜ್) n. carria horse and attendants, req sites, outfit ಸಾಮಾನು ಸರಂಜಾಮ ಸಜ್ಜು, ಗಂಟುಮೂಟೆ, ಪರಿವಾ ಸನ್ನಾಹ.

Eq'uipoise(ಈಕ್ವಿಪಾಯಿಜ್)n. equ brium,counterbalancing weig ಸಮಭಾರ, ಸಮತೂಕ.

Equipollent (ಈಕ್ವಿಪಾಲೆಂಟ್) a equal in force. ಶಕ್ತಿ ಸಾಮರ್ಥ್ಯಗ ಸಮನಾದ.

Eq'uitable(ಎಕ್ವಿಟಬಲ್)a.fair, j ನ್ಯಾಯವಾದ, ಸಮದರ್ಶಿ, ಪಕ್ಷ ವಿಲ್ಲದ.

Eq'uity(ಎಕ್ವಿಟಿ)n. fairness, prin ples of justice, supplement ನೀತಿ, ಧರ್ಮನ್ಯಾಯ, ಧರ್ಮ, ಸಮತೆ.

Equiv'alent(ಇಕ್ವಿವಲೆಂಟ್) a. ec in value, corresponding. ನಾರ್ಥವುಳ್ಳ, ಸಮಬೆಲೆಯುಳ್ಳ, ತೂಕದ, ಸಮಾನಗುಣದ.

Equiv'ocal (ಇಕ್ವಿವೊಕಲ್) a. d cus, of double or doubtfulme ing. ಎರಡರ್ಥದ, ಸಂದಿಗ್ಧಾರ್ಥದ, ಯಾರ್ಥದ, ದ್ವಂದ್ವಾರ್ಥವುಳ್ಳ.

E'ra (ಈರಾ) n. system of chr logy, starting from partic period. ಶಕ, ಕಾಲ.

Eradicate (ಇರಾಡಿಕೇಟ್) vt. out extirpate. ಬೇರೊಂದಿಗೆ ನಿರ್ಮೂಲ ಮಾಡು, ಮೂಲೋತ್ ಮಾಡು, ತೊಡೆದುಹಾಕು, ಸಮೂ ಮಾಡು.

Eradication(ಇರಾಡಿಕೇಷನ್) n.

of eradicating total destruction. ಮೂಲೋತ್ಪಾಟನ, ಸಂಪೂರ್ಣನಾಶ.

rase′ (ಇರೇಝ್,-ಜ್) vt. rub out, obliterate ಅಳಿಸಿಬಿಡು, ತೊಡೆದುಹಾಕು, ಉಜ್ಜಿಬಿಡು, ಕೆರೆದುತೆಗೆ, ಒರಸಿಬಿಡು.

ra′sure (ಇರೇಜರ್) n. rubber. ಅಕ್ಷರ ಅಳಿಸುವ ರಬ್ಬರು.

re (ಎರ್) conj. & prep. before ; sooner than. ಮೊದಲು, ಮುಂಚೆ, ಮುನ್ನ.

rect (ಇರೆಕ್ಟ್) a. upright. ನಿಟ್ಟ, ನೆಟ್ಟಗೆನಿಂತ vt. make erect, build. ನೆಟ್ಟಗೆನಿಲ್ಲಿಸು, ಏರ್ಪಡಿಸು, ಸ್ಥಾಪಿಸು, ಎತ್ತಿನಿಲ್ಲಿಸು, ಕಟ್ಟು, ರಚಿಸು.

remite (ಎರಿಮೈಟ್) n. hermit. ವಿರಾಗಿ, ಜೋಗಿ.

Ergo (ಅರ್ಗೋ)adv. therefore. ಆದುದರಿಂದ.

Ermine (ಎರ್ಮೈನ್) n. an animal of the weasel kind valued for its fur. ಮುಂಗುಸಿಯ ಜಾತಿಗೆ ಸೇರಿದ ಒಂದು ಪ್ರಾಣಿ.



Ermine

Erne (ಅರ್ನ್) n. golden eagle. ಕಡಲ ಹದ್ದು.

Erode′ (ಇರೋಡ್) vt. gnaw away; wear out ತಿಂದುಹಾಕು, ಕ್ರಮೇಣ ಸವೆಯಿಸು. ನಾಶಮಾಡು, ತೊರೆದುಹಾಕು.

Erosive′ (ಇರೋಸಿವ್) adj. corrosive. ಸವೆಯಿಸುವ ಗುಣವುಳ್ಳ.

Erotic (ಎರಾಟಿಕ್) a of love, amatory. ಕಾಮಸಂಬಂಧವಾದ, ಶೃಂಗಾರದ ಪ್ರಣಯ ಸಂಬಂಧವಾದ, ಶೃಂಗಾರ ರಸದ.

Err (ಅರ್) vi. make mistakes, be incorrect, sin. ತಪ್ಪುಮಾಡು, ತಪ್ಪಿಹೋಗು, ತಪ್ಪಾಗಿರು, ಪಾಪಮಾಡು.

E′rrand (ಎರಂಡ್) n. short journey with a message, commission. &c. ಸಂದೇಶ ಒಯ್ಯುವುದಕ್ಕಾಗಿ ಕೈಕೊಂಡ ಸಣ್ಣ ಪ್ರವಾಸ.

Errand-boy (ಎರಂಡ್-ಬಾಯ್) n. a messenger boy. ಸಂದೇಶವಾಹಕನಾದ ಆಳು.

E′rrant (ಎರಂಟ್) a. roaming in quest of adventure, itinerant, erring. ಸಂಚರಿಸುತ್ತಿರುವ, ಅಲೆಯುತ್ತಿರುವ, ತಪ್ಪುದಾರಿಗೆ ಹೋಗುತ್ತಿರುವ, ಅಪಮಾರ್ಗಿಯಾದ, ಭ್ರಮಣಶೀಲ.

Erratic (ಎರಾಟಿಕ್) adj. irregular, uncertain. ಅನಿಶ್ಚಿತ ಚಲನೆಯು.

Errat′um (ಎರೇಟಮ್) n. error in writing or printing. ಲೇಖನ ಮುದ್ರಣಾದಿ ದೋಷ, ತಪ್ಪೋಲೆ.

Errhine(ಇರೈನ್)adj)affecting the nose. ನಾಸಿಕಾಸಂಬಂಧಿ.

Erron′eous(ಎರೋನಿಅಸ್)a. incorrect. ತಪ್ಪಾದ, ಅಶುದ್ಧ.

Erroneously (ಎರೋನಿಯಸ್ಲಿ) adv. in an incorrect way. ತಪ್ಪು ತಪ್ಪಾಗಿ, ಅಶುದ್ಧವಾಗಿ.

E′rror (ಎರರ್) n. mistake, wrong opinion, transgression. ತಪ್ಪು, ತಪ್ಪು ಅಭಿಪ್ರಾಯ, ಸರಿಯಲ್ಲದ, ದೋಷಯುಕ್ತ, ದೋಷ, ಅಶುದ್ಧ, ಪ್ರಮಾದ, ಸನ್ಮಾರ್ಗ ಚ್ಯುತಿ.

Erst′while (ಅರ್ಸ್ಟ್‌ಹ್ವೈಲ್) adv. formerly. ಮೊದಲು, ಹಿಂದೆ, ಪೂರ್ವದಲ್ಲಿ.

Eructate (ಇರಕ್ಟೇಟ್) vt. belch out. ತೇಗು.

Eructation (ಎರಕ್ಟೇಶನ್) n. belching out. ತೇಗುವಿಕೆ.

E′rudite(ಎರೂಡೈಟ್) a. learned. ವಿದ್ವಾಂಸನಾದ, ಪ್ರೌಢವಾದ ವಿದ್ವತ್ತಿನ, ಹೆಚ್ಚುಓದಿದ, ಪಾಂಡಿತ್ಯದ.

Erudi′tion(ಎರೂಡಿಶನ್)n. learning, ಪಾಂಡಿತ್ಯ, ವೈದುಷ್ಯ, ವಿದ್ವತ್ತು.

Erupt(ಇರಪ್ಟ್)vt & i burst forth, throw out. ಕಾರು, ಹೊರಸೂಸು.

Erup′tion (ಇರಪ್ಶನ್) n. outbreak (of volcano, anger. &c.), rash, pimples. ಸ್ಫೋಟನ, ಗುಳ್ಳೆ; ಸಿಡುಬು.

Eruptive (ಇರಪ್ಟಿವ್) a. pertaining to eruption. ಸ್ಫೋಟನಕ್ಕೆ ಸಂಬಂಧಿಸಿದ ಹೊರಚಿಮ್ಮುವ, ಗುಳ್ಳೆ ಏಳುವ.

Escalade (ಎಸ್ಕಲೇಡ್) n. scaling of walls with ladders. ಹತ್ತುವುದು, ಲಗ್ಗೆಹತ್ತುವುದು.

Escapade (ಎಸ್ಕಪೇಡ್) n. a runaway, adventure. ಮನಸ್ವೀನಡತೆ, ಹುಚ್ಚುಸಾಹಸ.

Escape' (ಎಸ್ಕೇಪ್) vt. i. get free, find a way out, elude. avoid. ತಪ್ಪಿಸಿಕೊಳ್ಳು, ಪಾರಾಗು, ಕಡೆಸೇರು. n. escaping; leakage. ಪಲಾಯನ, ಸೋರುವುದು, ಒಸರುವುದು, ಬಿಡುಗಡೆ, ವಿಮೋಚನೆ.

Escapement (ಎಸ್ಕೇಪ್‌ಮೆಂಟ್) n. means of escaping. ಬಿಡುಗಡೆ ದಾರಿ.

Escapement wheel (ಎಸ್ಕೇಪ್ ಮೆಂಟ್ ವ್ಹೀಲ್) n. a wheel by which a circular motion is converted into a vibrating motion. ಯಂತ್ರದಲ್ಲಿ Escapement ಚಾಲಕವನ್ನೂ ನಿಯಂತ್ರಕ wheel ವನ್ನೂ ಸಂಬಂಧಿಸುವ ಸಲಕರಣೆ.



Escarp (ಎಸ್ಕಾರ್ಪ್) vt. form into a scarp. ಇಳಿಜಾರಾಗಿ ಮಾಡು.

Eschatol'ogy (ಎಸ್ಕಟಾಲೊಜಿ) n. doctrine of death and judgment. ಮರಣಾಂತರ ಸ್ಥಿತಿಯ ತತ್ವಶಾಸ್ತ್ರ.

Escheat (ಎಸ್ಚೀಟ್) n. lapse of property to crown &c., property so lapsing ಸರಕಾರಕ್ಕೆ ಮುಟ್ಟುಗೋಲಾಗುವುದು, ಮುಟ್ಟುಗೋಲಾದ ಆಸ್ತಿ.

Eschew (ಎಸ್ ಚೂ) vt. abstain from. ವಿಸರ್ಜಿಸು, ತೊರೆ, ದೂರಮಾಡು, ತ್ಯಜಿಸು, ವರ್ಜಿಸು, ಬಿಟ್ಟುಬಿಡು.

Es'cort (ಎಸ್ಕಾರ್ಟ್) n. body of armed men as guard: person accompanying another for protection. ಪಹರೆಯವರು, ಮೈಗಾವಲು.

Es'culent (ಎಸ್ಕ್ಯುಲೆಂಟ್) a. fit for food. ತಿನ್ನುವ, ಖಾದ್ಯ, ಭಕ್ಷ್ಯ, ಭಕ್ಷಣೀಯ.

Es'cutch'eon (ಎಸ್ಕಚಾನ್) n. shield with armorial bearing. ಬಿರುದು ಬಾವಲಿಗಳುಳ್ಳ ಗುರಾಣಿ, ವಂಶಲಾಂಛನ ಕೆತ್ತಿದಗುರಾಣಿ.

Eskimo (ಎಸ್‌ಕಿಮೋ) n. people living in the northern coast of America. ಅಮೆರಿಕಾದೇಶದ ಉತ್ತರ ತೀರ ಪ್ರದೇಶದಲ್ಲಿ ವಾಸಿಸುವ ಜನರು.

Esote'ric (ಎಸೊಟೆರಿಕ್) a. meant for the initiated: private. ದೀಕ್ಷೆ ಪಡೆದವನಿಗೆ ಮಾತ್ರ ಉದ್ದೇಶಿಸಿದ, ದೀಕ್ಷೆ ಪಡೆದ, ಗೋಪ್ಯ, ರಹಸ್ಯ, ಗುಟ್ಟಾದ, ಗೂಢ.

Espalier (ಎಸ್‌ಪಾಲಿಯರ್) n. lattice work for training trees or shrubs. ಗಿಡ ಹಬ್ಬುವುದಕ್ಕೆ ಕಟ್ಟುವ ಚೌಕಟ್ಟು.

Esparto (ಎಸ್ಪಾರ್ಟೊ) n. kind of grass found in Spain. ಸ್ಪೈಯಿನಿನಲ್ಲಿ ಬೆಳೆಯುವ ಒಂದು ವಿಧದ ಹುಲ್ಲು.

Espe'cial (ಇಸ್ಪೆಶಲ್) a. chief; more than ordinary;particular. ಮುಖ್ಯ, ಪ್ರಮುಖ, ಪ್ರತ್ಯೇಕ, ವಿಶೇಷ ವೈಶಿಷ್ಟ್ಯವುಳ್ಳ.

Espe'cially (ಇಸ್ಪೆಶಲಿ) adv. chiefly, more than in other cases. ಮುಖ್ಯವಾಗಿ, ವಿಶೇಷವಾಗಿ.

Esperanto (ಎಸ್ಪೆರಾಂಟೊ) n. an artificial language designed as a medium for all people. ಒಂದು ಕಾಲ್ಪನಿಕ ಸಾರ್ವತ್ರಿಕ ಭಾಷೆ.

Espial (ಎಸ್ಪೈಅಲ್) n. act of spying. ಗೂಢಚಾರಿಕೆ.

Es'pionage (ಎಸ್ಪಿಅನೇಜ್) n. spying, use of spies. ಗುಟ್ಟು ನೋಡೋಣ, ಪಾಳತಿ ನೋಡೋಣ. ಚಾರಪ್ರಯೋಗ.

Esplanade' (ಎಸ್‌ಪ್ಲನೇಡ್) n. level space esp. one used as prome-

nade. ಕೋಟೆಗೂ ಪೇಟೆಗೂ ನಡುವಣ ಮೈದಾನ, ಸಮತಲಪ್ರದೇಶ, ಸಮಭೂಮಿ, ಕೋಟೆ ಮೈದಾನ.

Espousal (ಎಸ್‌ಪೌಸಲ್) n. bethrothal, adoption. ನಿಶ್ಚಿತಾರ್ಥ, ಅನುಮೋದನೆ.

Espouse'(ಇಸ್‌ಪಾಉಝ್,-ಪೌಜ್) vt. wed : support (cause). ಮದುವೆಯಾಗು, ಸ್ವೀಕರಿಸು, ಅಂಗೀಕರಿಸು, ವಹಿಸು, ಪರಿಗ್ರಹಿಸು, ಸಮರ್ಥಿಸು.

Espy' (ಇಸ್ಪಾಯ್) vt. catch sight of ದೂರದಿಂದ ಕಾಣು, ನೋಡು.

Essene (ಎಸೀನ್) n. member of an ancient Jewish sect. ಪ್ರಾಚೀನ ಯೆಹೂದ್ಯ ತಂಡದವ.

Esqire (ಇಸ್ಕ್ವಯರ್) n. title of courtesy. ಮಹಾರಾಜ ಶ್ರೀ, ಶ್ರೀಯುತ, ಶ್ರೀಮಾನ್, ಇತ್ಯಾದಿ ಗೌರವಾಂಕಿತಗಳು.

Ess'ay (ಎಸೇ)n. literary composition : attempt. ಪ್ರಯತ್ನ, ಪ್ರಸಂಗ, ಲಘುಲೇಖನ, ಸಣ್ಣ ಗದ್ಯಲೇಖನ ಪ್ರಬಂಧ. v. attempt, test. ಪ್ರಯತ್ನಿಸು, ಮಾಡಿನೋಡು.

Ess'ayist (ಎಸ್ ಏ ಇಸ್ಟ್) n. essay writer. ಪ್ರಬಂಧಕಾರ.

Ess'ence (ಎಸನ್ಸ್)n. an existence, indispensable quality or element; perfume. ನಿಜವಸ್ತು, ಸತ್ವ, ಮೂಲತತ್ವ, ಸಾರ, ಮೂಲಸ್ವಭಾವ, ಅವಶ್ಯಗುಣ ಅಥವಾ ಅಂಶ, ಸಾರಾಂಶ, ಸುವಾಸನೆ, ಸಾರ, ಸುಗಂಧ.

Essen'tial (ಇಸೆನ್‌ಶಲ್) a. of or constituting a thing ; essence. ಆವಶ್ಯಕ, ಸಾರಭೂತವಾದ, ಅಗತ್ಯ, ಆವಶ್ಯಕವಾದ ಅಂಶ. n. indispensable element. ಅವಶ್ಯಕ ಮೂಲತತ್ವ.

Estab'lish(ಎಸ್ಟ್ಯಾಬ್‌ಲಿಶ್) vt. set up; settle ; place beyond dispute. ಸ್ಥಾಪಿಸು, ಸ್ಥಿರಪಡಿಸು, ನೆಲೆಗೊಳಿಸು, ಊರ್ಜಿತಗೊಳಿಸು.

Estab'lishment(ಎಸ್ಟ್ಯಾಬ್ಲಿಶ್‌ಮೆಂಟ್) n. establishing ; established church ; staff ; place of business. ಸ್ಥಾಪನೆ, ಸಾರ್ವಜನಿಕಸಂಸ್ಥೆ, ವ್ಯಾಪಾರಸಂಸ್ಥೆ, ಸಿಬ್ಬಂದಿ; ಕಾರ್ಖಾನೆ.

Establishmentarian (ಎಸ್ಟ್ಯಾಬ್ಲಿಷ್-ಮೆಂಟೇರಿಯನ್) n. person following the principles of on established church. ಸ್ಥಾಪಿತ ಚರ್ಚಿನ ನಿಯಮಗಳನ್ನು ಅನುಸರಿಸುವವನು.

Estaminet (ಎಸ್ಟ್ಯಾಮಿನೇ)n.a French cafe. ಫ್ರೆಂಚ್ ಕಾಫಿಯ ಅಂಗಡಿ.

Estate (ಎಸ್ಟೇಟ್) n. landed property or movables; one's assets and liabilities. ಅಸ್ತಿ, ಭೂಮಿಕಾಣಿ, ಅಸ್ತಿಪಾಸ್ತಿಗಳು, ಇಸ್ಟೇಟು.

Esteem' (ಎಸ್ಟೀಮ್) vt. think highly of; consider. ಪ್ರಶಂಸಿಸು, ಸದಭಿಪ್ರಾಯಪಡು, ಗೌರವದಿಂದ ಕಾಣು, ಎಣಿಸು, ಪರಿಗಣಿಸು, ಗಣನೆಮಾಡು. n. favourable opinion. ಸದಭಿಪ್ರಾಯ.

Ester (ಎಸ್ಟರ್)n. an organic compound. ಒಂದು ಸಂಯುಕ್ತ ರಾಸಾಯನಿಕ ವಸ್ತು.

Estiferous(ಎಸ್ಟಿಫೆರಸ್)a. producing heat. ಉಷ್ಣವನ್ನು ಉತ್ಪನ್ನಮಾಡುವ.

Es'timable (ಎಸ್ಟಿಮಬಲ್) a. worthy of esteem. ಮಾನ್ಯ, ಪೂಜ್ಯ, ಪೂಜಾರ್ಹ.

Es'timate(ಎಸ್ಟಿಮೇಟ್) n. approximate judgment of value. ಜಮಾಖರ್ಚಿನ ಅಂದಾಜು. vt. form an estimate of. ಅಂದಾಜುಮಾಡು.

Estima'tion (ಎಸ್ಟಿಮೇಶನ್) n. judgment; opinion. ಎಣಿಕೆ, ಅಭಿಪ್ರಾಯ; ಗೌರವ, ಗಣನೆ, ಗಣ್ಯತೆ, ಮಾನ.

Estival (ಈಸ್ಟಿವಲ್) adj. pertaining to summer. ಬೇಸಿಗೆಯ.

Estop' (ಎಸ್ಟಾಪ್) vt. (law) bar; preclude. ಅಡ್ಡಿಮಾಡು.

Estopp'el (ಎಸ್ಟಾಪೆಲ್)n. the being precluded from a course by previous action of one's own. (ಹಿಂದಿನ ಕಾರಣದ ಪರಿಣಾಮವಾಗಿ ಈಗ ಸಂಭವಿಸಿರುವ) ಆತಂಕ, ಪ್ರತಿಬಂಧಕ.

Estrade (ಎಸ್ಟ್ರೇಡ್) n. a platform. ಜಗಲಿ, ವೇದಿಕೆ.

Estrange' (ಎಸ್ಟ್ರೇಂಜ್) vt. alienate person from another. ಅಗಲಿಸು; ಸ್ನೇಹಚ್ಛೇದಿಸು, ಬೇರೆಮಾಡು, ಸ್ನೇಹಭೇದಿಸು

Estrangement (ಎಸ್ಟ್ರೇಂಜ್‌ಮೆಂಟ್) n act of estranging, alienation. ಅಗಲಿಕೆ, ಬೇರೆಮಾಡುವಿಕೆ.

Es'tuary(ಎಸ್ಟ್ಯುಅರಿ)n. tidal mouth of a river. ಅಳಿವೆ, ಸಮುದ್ರ, ಕೊಲ್ಲಿ.

Estuation (ಎಸ್ಟ್ಯುಏಷನ್)n. boilng, agitation. ಕುದಿಯುವಿಕೆ.

Esurient(ಇಸ್ಯೂರಿಅಂಟ್) a. hungry, needy. ಹಸಿದ.

Et'cet'era(ಎಟ್‌ಸಿಟರಾ)n.pl phrase meaning "and so on". ಇತ್ಯಾದಿ ಮುಂತಾದ್ದು, ಮೊದಲಾದದ್ದು.

Etch (ಎಚ್)vt. i. reproduce (picture, &c.)by engraving on metal plate, &c. with acid, &c. ತಗಡಿನ ಮೇಲೆ ಆಮ್ಲಾದಿಗಳ ಸಹಾಯದಿಂದ (ಚಿತ್ರಾದಿಗಳನ್ನು) ಕೆತ್ತು.

Etching(ಎಚಿಂಗ್) n. act of engraving on metal plate, etc. ತಗಡಿನ ಮೇಲೆ ಕೆತ್ತುವಿಕೆ.

Eter'nal(ಇಟರ್ನಲ್)a that always (has existed and) will exist; constant. ಅನಂತ, ಎಂದೆಂದಿಗೂ ಇರುವ, ನಿರಂತರ, ನಿತ್ಯ, ಸನಾತನ, ಶಾಶ್ವತ.

Etern'ity (ಇಟರ್ನಿಟಿ) n. being eternal; infinite time, future life. ನಿತ್ಯತೆ, ಶಾಶ್ವತ ಯಶಸ್ಸು, ಅನಂತ ಕಾಲ, ಶಾಶ್ವತತೆ.

Eternize (ಎಟರ್ನೈಜ್) vt. make endless, immortalize. ನಿತ್ಯತೆ ಕೊಡು, ಅಮರತ್ವ ಪ್ರದಾನಿಸು.

Et'her (ಈಥರ್) n. clear sky; region above clouds, subtle fluid permeating space. ಆಕಾಶ, ಶುದ್ಧಾಕಾಶ, ಆಕಾಶದ್ರವ್ಯ.

Ethmoid (ಎತ್ಮಾಯಿಡ್)adj. resembling a sieve. ಜಂಡರಿಯಂತಿರುವ.

Ether'eal'-ial (ಇಥೀರಿಯಲ್) a. light, airy; heavenly. ಸೂಕ್ಷ್ಮ, ವಾಯುವಿನಂಥ, ಹಗುರ, ಸ್ವರ್ಗೀಯ, ದಿವ್ಯ.

Eth'ics (ಎಥಿಕ್ಸ್) n. (plu.) science of morals; moral principles. ನೀತಿಶಾಸ್ತ್ರ, ನೀತಿತತ್ವ, ಧರ್ಮಸಿದ್ಧಾಂತ. ನೀತಿಶಾಸ್ತ್ರಗ್ರಂಥ, ನೀತಿನಿಯಮಗಳು.

Ethnol'ogy (ಎಥ್ನಾಲೊಜಿ) n. the science of races. ನರಕುಲ (ವಂಶ) ವಿಜ್ಞಾನ. ethnography. ನರಕುಲ ವರ್ಣನೆ.

Etiology (ಎಟಿಯಾಲಜಿ) n. study of the causes of diseases. ರೋಗನಿದಾನಶಾಸ್ತ್ರ.

Etiquette' ಎಟಿಕೆಟ್)n.conventional rules of manners, unwritten code of professional conduct. ಸಭ್ಯಾಚಾರ, ಶಿಷ್ಟಮಾರ್ಗ, ಮಾನ, ಮರ್ಯಾದೆ, ಸದಾಚಾರ, ಸಮಾಜಮರ್ಯಾದೆ, ಸಂಪ್ರದಾಯಗಳು, ನಡೆವಳಿಕೆಗಳು.

Etna (ಎಟ್ನ) n. a kind of vessel. ಒಂದು ತೆರದ ಪಾತ್ರೆ.

Etruscan(ಇಟ್ರುಸ್ಕನ್) n of ancient Etruria. ಪ್ರಾಚೀನ ಇಟ್ರುರಿಯಾ ದೇಶದವ.

Etvi, etwee (ಎಟ್ವೀ) n. small case for needles. ಸೂಜಿ ಇಡುವ ಸಣ್ಣ ಸಂಚಿ.

Etymol'ogy (ಎಟಿಮಾಲೊಜಿ) n. derivation of words from their originals. ಶಬ್ದವ್ಯುತ್ಪತ್ತಿ, ಶಬ್ದಸಾಧನೆ, ಶಬ್ದನಿಷ್ಪತ್ತಿ, ಶಬ್ದವಿಚಾರ ಪ್ರಕರಣ.

Eucharist (ಯೂಕರಿಸ್ಟ್) n. the Lord's Supper. ಪ್ರಭು ಭೋಜನ.

Euchre' (ಯೂಕರ್) n. American card game. ಅಮೆರಿಕದ ಇಸ್ಪೀಟು ಆಟ.

Euclid (ಯೂಕ್ಲಿಡ್) n. famous mathematician of Alexandria;

his treatises on geometry. ಅಲೆಕ್ಸಾಂಡ್ರಿಯದ ಖ್ಯಾತ ಗಣಿತಜ್ಞ, ರೇಖಾಗಣಿತ.

Eudiometer (ಯೂಡಿಯಾಮೀಟರ್) n. instrument for analysing gases. ಅನಿಲ ವಿಶ್ಲೇಷಕ.



Eudiometer

Eugen'ic (ಯೂಜೆನಿಕ್) a. of the production of fine offspring. ಸುಂದರ ಸಂತಾನೋತ್ಪಾದನೆಯ, ಉತ್ತಮ ಸಂತಾನ ಪಡೆಯುವ ವಿಷಯದ.

Eugenics (ಯೂಜಿನಿಕ್ಸ್) n. science of race, culture and human development. ಸುಂದರ ಸಂತತಿಯ ಉತ್ಪಾದನೆಗೆ ಸಂಬಂಧಿಸಿದ ವಿಜ್ಞಾನ.

Eul'ogize (ಯೂಲಜೈಝ್) vt. extol ; praise highly. ಸ್ತುತಿಸು, ಸ್ತೋತ್ರಮಾಡು, ಪ್ರಶಂಸಿಸು, ಶ್ಲಾಘಿಸು, ಗುಣಗಾನಮಾಡು, ಹೊಗಳು.

Eu'logy(ಯೂಲೊಜಿ) n. a speech or writing in praise of a person ; praise. ಸ್ತುತಿ, ಹೊಗಳಿಕೆ, ಪ್ರಶಂಸೆ, ಗುಣಗಾನ.

Eun'uch (ಯೂನಕ್) n. castrated person. ನಪುಂಸಕ. ಖೋಜಾ. ಹಿಜಡ, ಶಿಖಂಡಿ, ಕೊಜ್ಜ. ಖೊಜ್ಜ, ಕಂಚುಕಿ.

Euonym (ಯುಓನಿಮ್) n. a fitting name for a thing. ಉಚಿತವಾದ ಹೆಸರು.

Eupepsy (ಯುಪೆಪ್ಸಿ) n. good digestion. ಒಳ್ಳೆಯ ಜೀರ್ಣಶಕ್ತಿ.

Euph'emism (ಯೂ ಫಿ ಮಿ ಝು ಮ್) n. substitution of mild for blunt expression. ಕಠಿಣೋಕ್ತಿಯ ಬದಲು ಮೃದುವಚನ, ನಯನುಡಿ, ಮಂಗಲ ಭಾಷಿತ.

Euphanic(ಯುಫಾನಿಕ್)a. agreeable in sound ಸುಸ್ವರಕ್ಕೆ ಸಂಬಂಧಪಟ್ಟ.

Euph'ony (ಯೂಫನಿ) n. pleasantness or smoothness of sounds. ಸುಸ್ವರ, ಮಧುರೋಚ್ಚಾರ, ಸ್ವರಲಾಲಿತ್ಯ.

Euph'uism(ಯುಫ್ಯೂಇಜಮ್)n. high flown style of writing. ಕೃತಕ ಶೈಲಿ, ಆಡಂಬರದಶೈಲಿ, ಉಚ್ಚಲೇಖನ ಪದ್ಧತಿ, ಶಬ್ದಾಡಂಬರದ ಶೈಲಿ.

Euras'ian (ಯೂ ರೇ ಶಿ ಅ ನ್) n. of mixed European and Asiatic parentage. ಯೂರೋಪಿಯನ್ ಮತ್ತು ಏಶಿಯನ್ ಸ್ತ್ರೀಪುರುಷರಿಂದಹುಟ್ಟಿದ ಮಿಶ್ರ ಸಂತಾನ, ಚಟ್ಟಿಗಾರ.

Eureka (ಯುರೀಕ) n. and interj. brilliant discovery ; I have found it ! ಸಿಕ್ಕಿತು ! ಹೊಳೆಯಿತು.

Eurhythmic (ಯುರಿತ್ಮಿಕ್) adj. in harmonious proportion. ಉಚಿತ ಪ್ರಮಾಣದ.

European (ಯೂರೋಪಿಯನ್) adj. & n. pertaining to Europe, native of Europe. ಯೂರೋಪಿನ, ಯೂರೋಪಿನವನು.

Euterpe (ಯೂಟರ್ಪಿ) n. goddess of music. ಸಂಗೀತ ದೇವತೆ.

Euthanas'ia(ಯೂಥನೇಶಿಅ)n·gentle and easy death. ಸುಖಮರಣ.

Evacuant (ಇವಾಕ್ಯುಅಂಟ್) n. a purgative medicine. ವಿರೇಚಕ ಔಷಧಿ.

Evac'uate(ಇವಾಕ್ಯುಏಟ್) vt. make empty, clear ; withdraw from. ಬರಿದುಮಾಡು, ವಿಸರ್ಜಿಸು. ತೆಗೆದುಬಿಡು, ಕಳುಹಿಸಿಬಿಡು, ಖಾಲಿಮಾಡು, ಸ್ಥಳಬಿಟ್ಟು ಹೋಗು, ಸ್ಥಳಬಿಟ್ಟುಬಿಡು.

Evacuee (ಇವಾಕ್ಯುಯಿ) n. person who leaves his country or place and due to war or disturbance. ಯುದ್ಧ ಅಥವಾ ಅಶಾಂತಿಯಿಂದ ಸ್ಥಳಾಂತರಹೊಂದಿ ಬಂದವನು.

Evade' (ಇವ್ಹೇಡ್) vt. escape from; avoid: elude ತಪ್ಪಿಸಿಕೊಳ್ಳು, ಜಾರಿಕೊಳ್ಳು, ನುಣುಚಿಕೊ. ಬಿಟ್ಟುಹೋಗು.

Evanesce (ಎವನೆಸ್) vt. vanish. ಅಂತರ್ಧಾನವಾಗು.

Evanescence(ಎವೆನೆಸೆನ್ಸ್)n. vanishing away. ಅದೃಶ್ಯವಾಗುವುದು.

Evanes'cent (ಎವನೆಸ್ಸೆಂಟ) a. quickly fading. ನಶ್ವರ, ಕ್ಷಣಿಕ, ಅದೃಶ್ಯವಾಗುವ, ಮಾಯವಾಗುವ, ಕಣ್ಮರೆಯಾಗುವ.

Evan'gel (ಇವಾನ್ಜೆಲ್)n. the Gospel ಕ್ರೈಸ್ತಸುವಾರ್ತೆ.a.-ical. ಸುವಾರ್ತೆಯ.

Evangelism (ಇವಾಂಜೆಲಿಸ್ಮ್) n. preaching of the Gospel. ಕ್ರೈಸ್ತಧರ್ಮಪ್ರಚಾರ.

Evangelist (ಇವಾಂಜೆಲಿಸ್ಟ್) n. preacher of the Gospel, missionary. ಕ್ರೈಸ್ತಮತದ ಬೋಧೆಮಾಡುವವನು.

Evanish (ಇವಾನಿಷ್) vi. vanish away. ಮಾಯವಾಗು.

Evap'orate (ಇವಾಪೊರೇಟ್) vt. i. turn into vapour, exhale moisture. ಉಗಿಯಾಗಿಹೋಗು. ಹವೆಯಾಗು, ಆವಿಯಾಗಿ ಹೋಗು, ಆರು, ಇಂಗು, ಇಮರಿಸು, ಇಂಗಿಸು.

Evaporation(ಇವಾಪೊರೇಷನ್)n. vanishing away. ಮಾಯವಾಗುವಿಕೆ.

Eva'sion (ಇವೇಶನ್) n. means of evading. shuffling excuse. ನೆವ, ಠಕ್ಕುಮಾತು, ತಪ್ಪಿಸಿಕೊಳ್ಳುವ ಉಪಾಯ, ನುಣುಚಿಕೊಳ್ಳುವ ನೆಪ, ಛದ್ಮ. ಕಪಟ.

Evas'ive (ಇವೇಝಿವ್ ಜಿವ್) a. elusive. ನುಣುಚಿಕೊಳ್ಳುವ, ಪಟ್ಟಿಗೆ ಸಿಕ್ಕದ, ವಕ್ರ, ಕುಟಿಲ, ತಪ್ಪಿಸಿಕೊಳ್ಳುವ, ಜಾರಿಕೊಳ್ಳುವ.

Eve (ಈವ್) n. time just before an event, evening. ನಿಯತಕಾಲ. ಮುಂಚಿನಕಾಲ, ಸಂಧ್ಯಾಕಾಲ, ಸಾಯಂಕಾಲ, ಸಂಜೆ. ಬೈಗು.

Evection (ಇವೆಕ್ಷನ್) n. elevation, ಉಬ್ಬಿರವಿಕೆ.

Even (ಈವನ್) n. evening. ಸಾಯಂಕಾಲ. a. level, smooth, uniform, equable, calm, divisible by 2. ಸಮವಾದ, ಮಟ್ಟವಾದ, ನಯವಾದ, ನುಣುಪಾದ, ಸರಿ, ಸಮಸಂಖ್ಯೆ, ಪ್ರಶಾಂತವಾದ. vt. make equal. ಒಂದೇಸಮ ಮಾಡು, ಸರಿಸಮವೆಂದು ಪರಿಗಣಿಸು, ಸರಿಯಾಗು, ಸಮನಾಗಿ ತಿಳಿ. adv. neither more nor less than, simply, notwithstanding ಸರಿಯಾಗಿ. ಅಷ್ಟೇ ಹೆಚ್ಚು ಕಡಿಮೆ ಇಲ್ಲದ, ಸುಮ್ಮನೆ, ಸಹಾ, ಕೂಡ.

Evenhanded (ಈವನ್ಹ್ಯಾನ್ಡೆಡ್) adj. without prejudice. ಪೂರ್ವಾಗ್ರಹವಿಲ್ಲದೆ.

Eve'ning (ಈವ್ನಿಂಗ್) n. close of day. esp. sunset to bedtime. ಸಂಧ್ಯಾಕಾಲ, ಸಂಜೆ, ಸಾಯಂಕಾಲ.

Event' (ಇವೆಂಟ್) n. occurrence of a thing. result, happening. ಆದದ್ದು, ಸಂದರ್ಭ, ಸಂಭವ, ಸಂಗತಿ, ಪರಿಣಾಮ, ನಡೆದದ್ದು ದೊಡ್ಡಸಂಗತಿ, ವಿಶೇಷಘಟನೆ, ಫಲ. at all es., in any case ಏನೇಆಗಲಿ.

Eventful (ಇವೆಂಟ್ಫುಲ್) a. full of incidents. ವಿಶೇಷ ಘಟನೆಗಳುಳ್ಳ, ವಿಖ್ಯಾತ, ಅನೇಕ ಘಟನೆಗಳುಳ್ಳ.

Eventide (ಈವನ್ಟೈಡ್) n. evening. ಸಾಯಂಕಾಲ.

Even'tual (ಇವೆಂಚುಅಲ್)a happening under certain conditions; final. ಕೆಲವುಸಂದರ್ಭಗಳಲ್ಲಿ ಪ್ರಾಪ್ತವಾಗುವ, ಒದಗುವ, ಸಂಭವಿಸುವ, ಸಂಭವಿಸಬಹುದಾದ, ಕೊನೆಯ, ಕಟ್ಟಕಡೆಯ, ಅಂತಿಮ, ಆನುಷಂಗಿಕ.

Eventual'ity (ಇವೆಂಚ್ಯುಆಲಿಟಿ)n. possible event. ಸಂಭವಿಸಬಹುದಾದ ಘಟನೆ, ಸಂಭವನೀಯ.

Eventually (ಇವೆಂಚುಎಲಿ) adv. in the final issue. ಅಂತ್ಯತಃ, ಕೊನೆಗೆ.

Eventuate (ಇವೆಂಟುಏಟ್)vi. result. ಗು, ಆಪರಿಣಮಿಸು.

Ev'er (ಎವರ್) ad. always, at any time, at all times. ಸದಾ, ಎಂದೂ,

ಎಲ್ಲಾ ಕಾಲದಲ್ಲೂ, ಸರ್ವದಾ, ಯಾವಾಗಲಾದರೂ, ಯಾವಾಗಲೂ, ಎಂದಿಗೂ, ಕದಾಪಿ. e. and anon. ಆಗಾಗ್ಗೆ, ಬಾರಿ ಬಾರಿಗೆ.

Ev'ergreen(ಎವರ್‌ಗ್ರೀನ್) a. always fresh. ಎಂದಿಗೂ ಬಾಡದ.

Everlas'ting (ಎವ್ಹರ್‌ಲಾಸ್ಟಿಂಗ್) a. lasting for ever, perpelual. ನಿತ್ಯ, ಎಂದೆಂದೂ ಇರುವ, ಯಾವಾಗಲೂ ಇರುವ, ಬಹುಕಾಲ ಬಾಳುವ, ಶಾಶ್ವತ, ಅಮರ, ಅಕ್ಷಯ.

Evermore (ಎವ್ಹರ್‌ಮೋರ್) adv. always. ಸದಾ, ಸರ್ವದಾ.

Eversion (ಎವರ್ಷನ್) n. turning inside out. ತಲೆಕೆಳಗು ಮಾಡುವುದು.

Evert (ಎವರ್ಟ್) vt. turn inside out, turn outwards. ಹೊರಪಾರ್ಶ್ವಕ್ಕೆ ತಿರುಗಿಸು.

Ev'ery (ಎವ್ಹರಿ) a. each one of all ಪ್ರತಿ, ಒಬ್ಬೊಬ್ಬ. e. bit, quite. altogether. ಪೂರ್ಣ, ಒಟ್ಟಿಗೆ. e. now and then, frequently. ಆಗಾಗ್ಗೆ.

Everybody (ಎವ್ರಿಬಾಡಿ) n. every person. ಪ್ರತಿಯೊಬ್ಬರೂ.

Everyday (ಎವ್ರಿಡೇ) a. common, usual. ಪ್ರತಿದಿನದ, ನಿತ್ಯಗಟ್ಟಳೆಯ.

Everyone (ಎವ್ರಿಒನ್) n. every person. ಪ್ರತಿಯೊಬ್ಬನೂ.

Ev'erywhere(ಎವ್ಹರಿವೇರ್)in. every place ಎಲ್ಲೆಲ್ಲಿಯೂ, ಎಲ್ಲೆಲ್ಲೂ, ಸರ್ವತ್ರ, ಎಲ್ಲೆಡೆಗಳಲ್ಲಿ.

Evict' (ಎವಿಕ್ಟ್) vt. expel by legal process. ಕಾನೂನು ಮೇರೆಗೆ ಒಕ್ಕಲು ಹೊರಗೆಹಾಕು, ಹೊರಡಿಸು, ಅಟ್ಟಿಬಿಡು, ತಳ್ಳಿಬಿಡು, ಹಿಂದಕ್ಕೆಪಡೆ, ಸ್ವಾಧೀನಪಡಿಸಿಕೊ.

Eviction (ಇವಿಕ್ಷನ್) n. expulsion. ಹೊರಡಿಸುವಿಕೆ.

Ev'idence(ಎವಿಡೆನ್ಸ್)n. indication; sign, fact available as proof. ಚಿಹ್ನೆ, ಸೂಚನೆ, ನಿದರ್ಶನ, ಗುರುತು, ಕುರುಹು, ಪ್ರಮಾಣ, ಸಾಕ್ಷ್ಯ, ಪುರಾವೆ, ರುಜುವಾತು. vt. be evidence of, indicate. ಸಾಕ್ಷ್ಯಕೊಡು, ರುಜುವಾತುಪಡಿಸು, ತೋರಿಸು, ಸೂಚಿಸು, ಪ್ರಮಾಣವಾಗಿರು, ಸಾಕ್ಷಿಯಾಗಿರು.

Ev'ident (ಎವಿಡೆಂಟ್) a. obvious, manifest. ಸ್ಪಷ್ಟ, ವ್ಯಕ್ತ, ಸ್ಫುಟ, ಪ್ರಕಾಶ, ವಿಶದ.

Eviden'tial (ಎವಿಡೆನ್‌ಶಲ್) a. relating to or furnishing evidence. ಸಾಕ್ಷ್ಯದ, ಸಾಕ್ಷ್ಯಾಧಾರದ, ರುಜುವಾತನ್ನು ಒದಗಿಸುವ.

Evidently (ಎವಿಡೆಂಟ್‌ಲೀ) adv. clearly, obviously. ಸ್ಪಷ್ಟವಾಗಿ, ಪ್ರತ್ಯಕ್ಷವಾಗಿ.

Evil (ಈವ್ಹಿಲ್) a. bad, harmful. ಕೆಟ್ಟ, ದುಷ್ಟ, ಕೆಡುಕುಮಾಡುವ, ಅರಿಷ್ಟ, ಹೊಲ್ಲ. n. evil thing, sin, harm. ಕೇಡು, ಕೆಡಕು, ಪಾಪ, ದುಷ್ಕೃತ್ಯ, ಕೆಟ್ಟದ್ದು. e. eye, malign influence. ಕೆಟ್ಟಕಣ್ಣು. (ದೃಷ್ಟಿ), ರಾವುಗಣ್ಣು, ಪಾಪಿದೃಷ್ಟಿ.

Evince(ಇವಿನ್ಸ್)vt. show, indicate. ಸ್ಪಷ್ಟೀಕರಿಸು, ತೋರಿಸು, ಸೂಚಿಸು, ವ್ಯಕ್ತಪಡಿಸು, ಪ್ರದರ್ಶಿಸು, ಪ್ರಕಾಶಗೊಳಿಸು.

Evirate (ಎವಿರೇಟ್) vt. castrate, emasculate. ಕಸಿಮಾಡು, ಬೀಜ ಒಡೆ.

Eviscerate(ಇವಿಸೆರೇಟ್) vt. disembowel. ಕರುಳುಬಗೆದು ಹಾಕು.

Eviceration (ಇವಿಸೆರೇಷನ್) n. act of disembowelling. ಕರುಳು ಬಗೆದು ಹಾಕುವಿಕೆ.

Evit'able (ಎವಿಟಬ್‌ಲ್)a. that may be avoided. ನಿವಾರ್ಯ, ಪರಿಹಾರ್ಯ.

Evocation (ಇವೊಕೇಷನ್) n. calling forth, summons. ಆವಾಹನೆ, ಕರೆ.

Evoke (ಇವೋಕ್) vt. call forth, summon. ಆವಾಹಿಸು, ಕರೆ, ಹುಟ್ಟಿಸು, ಎಬ್ಬಿಸು, ಬರು, ಆಹ್ವಾನಿಸು.

Evolu'tion (ಈವೊಲ್ಯೂಶನ್-ಎ)n. origination of species by development from earlier forms. ವಿಕಸನ, ವಿಕಾಸ, ಪರಿಣಾಮ, ಉತ್ಕ್ರಾಂತಿ, ಲೋಕವಿಕಾಸ.

Evolutional (ಎವ್ಹೊಲ್ಯೂಷನಲ್) a. pertaining to evolution. ವಿಕಾಸ ಸಂಬಂಧಿ, ಪರಿಣಾಮ ವಾದಕ್ಕೆ ಸಂಬಂಧಿಸಿದ.

Evolve' (ಇವಾಲ್ವ್) vt. i. unfold, open out, set forth in order, develop by natural process. ವಿಕಸಿತವಾಗು, ಕ್ರಮ, ಕ್ರಮವಾಗಿಬರು, ನೈಸರ್ಗಿಕವಾಗಿ ವಿಸ್ತರಿಸು.

Evolvement (ಎವಾಲ್ವ್‌ಮೆಂಟ್) n. act of evolving, development. ವಿಸ್ತಾರ, ಹರಡುವಿಕೆ.

Evolutionist (ಎವ್ಹೊಲ್ಯೂಷನಿಸ್ಟ್) n. believer in the theory of evolution. ವಿಕಾಸವಾದದಲ್ಲಿ ನಂಬಿಕೆ ಉಳ್ಳವನು.

Evulsion (ಎವಲ್ಷನ್) n. act of plucking out. ಉತ್ಪಾಟನ.

Ewe (ಯೂ) n. female sheep. ಹೆಣ್ಣು ಕುರಿ, ಮೇಸಿ.

Ew'er (ಯೂಅರ್) n. pitcher; waterjug. ಗಡಿಗೆ, ಹೂಜಿ, ಕೂಜ.


Ewer

Exacerbate (ಎಗ್ಸ್ಯಾಸರ್‌ಬೇಟ್) vt. aggravate. ಹೆಚ್ಚಿಸು.

Exacerbation (ಎಗ್ಸ್ಯಾಸರ್‌ಬೇಷನ್) n. aggravation ಹೆಚ್ಚಿಸುವಿಕೆ.

Exact' (ಎಗ್‌ಝ್ಯಾಕ್ಟ್) a. precise, accurate, strictly correct. ನಿಶ್ಚಿತ, ಸರಿಯಾದ, ನಿಷ್ಕೃಷ್ಟವಾದ, ನಿಖರವಾದ, ಖಂಡಿತವಾದ, ಯಥಾರ್ಥವಾದ ನೇರವಾದ, ತಪ್ಪಿಲ್ಲದ, ಕರಾರುವಾಕು. vt. force from, compel to pay. ಬಲಾತ್ಕಾರದಿಂದ ಪಡೆ, ಕೀಳು, ಜುಲುಮೆಯಿಂದ ಪಡೆ, ಸುಲಿಗೆಮಾಡು.

Exacting (ಎಕ್ಸ್ಯಾಕ್ಟಿಂಗ್) adj. unreasonable in demanding. ಕೇಳುವುದರಲ್ಲಿ ಮಿತಿಮೀರಿದ, ಕಷ್ಟತರವಾದ.

Exaction (ಎಕ್ಸ್ಯಾಕ್ಷನ್) n. extortion. ಬಲವಂತದಿಂದ ಸುಲಿಯುವುದು.

Exactitude (ಎಕ್ಸ್ಯಾಕ್ಟಿಟ್ಯೂಡ್) n. exactness. ನಿಷ್ಕೃಷ್ಟತೆ.

Exact'ly (ಎಗ್‌ಸ್ಯಾಕ್ಟ್ಲಿ) adv. quite so ಕೇವಲ ಹಾಗೆ, ಸರಿಯೇ, ಅದೇ, ಅಹುದು, ನಿಜವಾಗಿ ಹಾಗೆಯೇ.

Exa'ggerate (ಎಗ್‌ಸ್ಯಾಜರೇಟ್) vt. carry beyond truth, overstate. ಅತಿಶಯಮಾಡು, ಹೆಚ್ಚುಮಾಡು, ಉತ್ಪ್ರೇಕ್ಷಿಸು, ಅತಿವರ್ಣಿಸು.

Exaggeration (ಎಕ್ಸ್ಯಾಜಿರೇಷನ್) n. amplification. ಅತ್ಯುಕ್ತಿ.

Exaggerative (ಎಕ್ಸ್ಯಾಜರೇಟಿವ್) a. having tendency to overstate, amplificative. ಅತಿಶಯೋಕ್ತಿ ಪೂರ್ಣವಾದ, ಅತ್ಯುಕ್ತಿಯಿಂದ ತುಂಬಿದ.

Exalt' (ಎಗ್‌ಝಾಲ್ಟ್) vt. raise in rank, power &c. praise; extol. ಮೇಲೆತ್ತು, ಮೇಲೇರಿಸು, ಸ್ತೋತ್ರಮಾಡು, ಘನತೆಗೇರಿಸು, ಉನ್ನತಮಾಡು, ಉನ್ನತಿಗೆ ತರು, ಹೊಗಳು.

Exaltation (ಎಗ್ಸ್ಯಾಲ್ಟೇಷನ್) n. elevation. ಉತ್ಕರ್ಷ.

ard'y (ಹಾರ್ಡಿ) a. bold, robust. ಗಟ್ಟಿ ಧೈರ್ಯದ, ಕೆಚ್ಚಿನ, ಗಟ್ಟಿಮುಟ್ಟಾದ, ಧೀರ. ದೃಢಕಾಯ.

are-brained (ಹೇರ್‌ಬ್ರೇನ್ಡ್) a. rash, wild. ದುಡುಕು ಸ್ವಭಾವದ, ಹುಚ್ಚುಹುಚ್ಚಾದ.

are (ಹೇರ್) n. speedy rodent with long ears. ಮೊಲ.



Hare

Har'em (ಹೇರೆಮ್) n. women's part of Mohammadan dwelling ಅಂತಃಪುರ, ಜನಾನಾ.

Hark (ಹಾರ್ಕ್) vi. & intj. listen, hear. ಕಿವಿಗೊಡು! ಕೇಳು ಕೇಳು !

Harl (ಹಾರ್ಲ್) n. fibre of flax or hemp. ಸಣಬಿನ ಎಳೆ.

Harlequin (ಹಾರ್ಲಿಕ್ವಿನ್) n. character in pantomimes, a clown in many colours dress. ಪ್ರಹಸನಗಳಲ್ಲಿ ಬರುವ ಹಾಸ್ಯ ಪಾತ್ರ. a buffoon. ವಿದೂಷಕ, ಕೋಡಂಗಿ.



Harlequin

Harlequinade (ಹಾರ್ಲಿಕ್ವಿನೇಡ್) n. pantomime in which harlequin takes part. ಕೋಡಂಗಿಯು ಮುಖ್ಯ ಪಾತ್ರವಹಿಸಿರುವ ನಾಟಕ.

Harlot (ಹಾರ್ಲಟ್) n. prostitute. ಸೂಳೆ, ವೇಶ್ಯೆ, ಗಣಿಕೆ, ರೂಪಜೀವಿ.

Harlotry (ಹಾರ್ಲಟ್ರಿ) n. prostitution. ವೇಶ್ಯಾವೃತ್ತಿ.

Harm (ಹಾರ್ಮ್) n. & vt. damage, hurt. ಕೆಡಕುಮಾಡು, ಹಾನಿಪಡಿಸು, (ನಾ) ಕೆಡಕು, ಹಾನಿ, ಅಪಾಯ, ಹಿಂಸೆ, ಹಿಂಸೆ ಮಾಡು, ತೊಂದರೆಮಾಡು.

Harm'ful (ಹಾರ್ಮ್‌ಫುಲ್) a. injurious, hurtful. ತೊಡಕಿನ, ಹಾನಿಕರ.

Harm'less (ಹಾರ್ಮ್ಲೆಸ್) a. not injurious, innocent. ನಿರುಪದ್ರವಿ, ಸಾಧು, ನಿಷ್ಪೀಡಕ, ಭೋಳೆ.

Harmonic (ಹಾರ್ಮಾನಿಕ್) adj. concordant. ಸಮರಸವಾದ.

Harmon'ious (ಹಾರ್ಮೋನಿಅಸ್) a. in concord, free from dissent, tuneful ಏಕಮತವುಳ್ಳ, ಮಧುರಸ್ವರದ, ಸಮರಸವಾದ, ಹೊಂದಿಕೆಯಾದ, ವಿರಸವಿಲ್ಲದ, ಸುಶ್ರಾವ್ಯವಾಗಿ ಹಾಡುವ, ಏಕಲಯದ.

Harmonist (ಹಾರ್ಮೊನಿಸ್ಟ್) n. person skilled in harmony, musician. ಸ್ವರಮೇಳನ ಚತುರ, ಸಂಗೀತಗಾರ.

Harmon'ium (ಹಾರ್ಮೋನಿಅಂ) n. keyboard instrument with metal reeds. ವಾದ್ಯಪೆಟ್ಟಿಗೆ, ಸ್ವರಮಂಡಲಿಕೆ.

Harm'onize (ಹಾರ್ಮೊನೈಝ್) vt. i. bring into or be in harmony. ಏಕತಾಳಮಾಡು, ಸ್ವರಹೊಂದಿಸು, ಸ್ವರಮೇಳವಾಗುವಂತೆ ಸ್ವರಗಳನ್ನು ಸೇರಿಸು.

Harm'ony (ಹಾರ್ಮನಿ) n. agreement ; concord, melodious sound. ಐಕ್ಯ, ಏಕಮತ, ಹೊಂದಿಕೆ, ಸಾಮರಸ್ಯ, ಸ್ವರಮೇಳ, ಸ್ವರಮೈತ್ರಿ, ಏಕತಾಳ.

Harn'ess (ಹಾರ್ನೆಸ್) n. gear of draught horse, &c, [hist] defensive armour ಜೀನು, ಕುದುರೆಗಳ ಸಜ್ಜು, ಸರಂಜಾಮು, 'ಮುಸ್ತೀಬು,' ರಕ್ಷಕ ಕವಚ.

Harp (ಹಾರ್ಪ್) n. musical instrument with strings played by the fingers. ತಂತಿವಾದ್ಯ, ವೀಣೆ, ಹಾರ್ಪ್‌ವಾದ್ಯ. vt. play on harp, dwell tediously on a subject. ವೀಣೆ ಬಾರಿಸು, ಹೇಳಿದ್ದೇ ಹೇಳು. h. on the same string, repeat the same idea. ಹಾಡಿದ್ದೇಹಾಡು.



Harp

Harpoon' (ಹಾರ್ಪೂನ್) n. spear to strike wholes. ತಿಮಿಂಗಲ ಹೊಡೆಯುವ ಈಟಿಗಾಳ, ಈಟಿಯಂಥ ಕ್ಷಿಪಣಿ, ಹಗ್ಗವುಳ್ಳ ಬರ್ಚಿ, ಸಬಳ.



Harpoon

Harpy (ಹಾರ್ಪಿ) n. rapacious monster with woman's face & body and bird's wing and claws, rapacious person. ಹೆಂಗಸಿ ಮುಖ, ಶರೀರ ಮತ್ತು ಪಕ್ಷಿಯಂತೆ ರೆಕ್ಕೆ ಳುಳ್ಳ ಹಿಂಸಕವ್ಯಕ್ತಿ, ಹಿಂಸಕ.

Harridan (ಹಾ̆ರಿಡನ್) n. an o hag. ಮುದುಕಿ.

Harr'ier (ಹಾ̆ರಿಯರ್) n. a houn for hunting hare ಮೊಲವನ್ನು ಬೇ ಯಾಡುವುದಕ್ಕೆ ಉಪಯೋಗಿಸುವ ನಾಯಿ

Ha'rrow (ಹಾ̆ರೋ) n. frame wi iron teeth for breaking clod &c. ಕುಂಟೆ, ಗದ್ದೆ ಹರಗುವ ಸಲಿಕೆ v draw harrow over; distres wound[feeling,&c.] ಕುಂಟೆ(ಹಲು ಹೊಡಿ, ಮನಸ್ಸನ್ನು ಬಹಳ ನೋಯಿಸ ಸಂತಾಪಗೊಳಿಸು, ಸಂತಾಪವುಂಟುಮಾಡ

Harry (ಹಾ̆ರಿ) vt. harass. ತ್ರಾಸಕೊಡ ಪೀಡಿಸು.

Harsh (ಹಾರ್ಷ್) a. severe, unfee ing, rough. ನಿರ್ದಯ, ಒರಟಾದ ಬಿರುಸಾದ, ಕಟುಕ್ರೂರ, ನಿಷ್ಠುರ. ಕರ್ಕಶ

Hart (ಹಾರ್ಟ್) n. male deer [esp the red one] ಗಂಡುಚಿಗರಿ.

Hartal (ಹಾರ್ಟಲ್) n. closing o Indian shops as a mark of sorro or as political gesture. ಹರತಾಳ

Harv'est (ಹಾರ್ವೆಸ್ಟ್) n. season fo reaping and storing of grain &c season's yield. ಸುಗ್ಗಿ, ಕೊಯ್ಲು ಧಾನ್ಯದಬೆಳೆ, ಫಲ, ಪೈರು, ಬೆಳೆ. v. t reap & gather in. ಕಟಾಯಿಸಿ ಸಂಗ್ರಹಿಸು.

Hasp (ಹಾ̆ಸ್ಪ್) n. metal fastening for a door or box ಬಾಗಿಲು ಅಥವಾ ಪೆಟ್ಟಿಗೆಗೆ ಹಾಕುವ ಒಂದು ವಿಧ ಕೊಂಡಿಯುಳ್ಳ ಚಿಲಕ.



Hasp

Haste (ಹೇಸ್ಟ್) n. urgency of movement. hurry. ಅವಸರ, ಆತುರ, ತರಾತುರಿ, ತ್ವರೆ.

asten (ಹೇಸನ್) vt. & i. proceed or go quickly. ಅವಸರಮಾಡು, ತ್ವರೆಯಾಗಿಹೋಗು, ತ್ವರೆಪಡಿಸು, ಅವಸರಗೊಳಿಸು, ಆತುರಪಡು.

as'ty (ಹೇಸ್ಟಿ) a. hurried, rash, quick tempered. ಆತುರದ, ದುಡುಕಿನ, ಮುಂದಾಲೋಚನೆಮಾಡದ, ಮುಂಗೋಪಿ.

at(ಹಾಟ್)n. outdoor head covering. ಟೋಪಿ, ಟೊಪ್ಪಿಗೆ, ಶಿರಸ್ತ್ರಾಣ.

atch (ಹಾಚ್) vt. & i. bring or come forth from egg, form [plot.] ಮೊಟ್ಟೆಯಿಂದ ಹೊರಗೆಬರು, ಬರಿಸು, ಮರಿಮಾಡು, ಕಾವಿಗೆ ಕುಳಿತುಕೊ, (ಕೆಟ್ಟದ್ದನ್ನ)ಕಲ್ಪಿಸು, ಒಳಸಂಚುಮಾಡು, ಸಂಚುಹೂಡು.

atchery (ಹಾಚರಿ) n. place for hatching fish. ಮೀನನ್ನುಮರಿಮಾಡುವ ಸ್ಥಳ.

atch'et (ಹಾಚೆಟ್) n. short axe. ಕೈಬಾಚಿ, ಮೋಟುಕಾವಿನ ಕೊಡಲಿ.

ate(ಹೇಟ್) vt. dislike strongly, bear malice to. ದ್ವೇಷಿಸು, ತಿರಸ್ಕರಿಸು.

ate'ful (ಹೇಟ್‌ಫುಲ್) n. exciting hatred. ದ್ವೇಷಹುಟ್ಟಿಸುವ, ದ್ವೇಷ ಉಂಟುಮಾಡುವ, ಹಗೆತನ ಉಂಟುಮಾಡುವ.

at'red (ಹೇಟ್ರಿಡ್) n. active dislike, ill-will. ದ್ವೇಷ, ವಿರೋಧ, ಹಗೆತನ.

augh (ಹಾಫ್) n. piece of flat alluvial land by river. ನದಿಯ ಪಕ್ಕದಲ್ಲಿರುವ ಸಮತಲವಾದ ಒಂದು ನೆಲ.

aught'y (ಹಾಟಿ) a. proud, arrogant. ಸೊಕ್ಕಿನ, ಜಂಬದ, ಗರ್ವದ, ಪ್ರತಿಷ್ಠೆಯ, ದರ್ಪದ, ಉದ್ಧಟ.

Haul (ಹಾಲ್) vt. i. pull or drag forcibly, turn ship's course. ಬಲವಂತದಿಂದ ಎಳೆ, ಸೆಳೆ, ಹಡಗನ್ನು ಬೇರೆ ದಿಕ್ಕಿಗೆ ತಿರುಗಿಸು. n. hauling. ಹಡಗಿನ ಗತಿಯನ್ನು ತಿರುಗಿಸು, amount gained. ಎಳೆಯುವುದು, ಲಾಭ, ಸಂಪಾದನೆ, ಅರ್ಜನೆ.

Haunch (ಹಾಂಚ್) n. part of body between ribs and thigh. ಟೊಂಕ, ಸೊಂಟ, ನಡು, ಕಟಿ, ಪಿರ್ರೆಯ ಭಾಗಗಳು.

Haunt (ಹಾಂಟ್) vt. visit regularly ಎಡತಾಕು, ಸುಳಿದಾಡು. ಪದೇ ಪದೇ ಹೋಗುತ್ತಿರು, ಸಂಚಾರ ಮಾಡು, n. place of frequent resort. ಭೂತ ಸುಳಿದಾಡುವ ಸ್ಥಳ, ಆಶ್ರಯ, ಸಂಚಾರ ಸ್ಥಳ.



Hautboy

Hautboy (ಹೋಬಾಯ್) n. kind of wooden wind instrument. ಒಂದುವಿಧದ ಮರದ ಗಾಳಿವಾದ್ಯ.

Hauteur (ಆಟರ್) n. haughty manner or spirit; pride. ದುರಹಂಕಾರ, ದರ್ಪ.

Have (ಹಾವ್) vt.i. & aux. hold in possession, possess, contain, enjoy, suffer, be burdened with ಸ್ವಾಧೀನದಲ್ಲಿರು, ಹೊಂದು, ಪಡೆ, ತೆಗೆದುಕೊ, ಸುಖಪಡು, ಅನುಭವಿಸು, ಸಹಿಸು.

h. to do with, be connected with. ಸಂಬಂಧವಿಟ್ಟುಕೊಂಡಿರು. h. the face to do a thing, have the boldness. ಒಂದು ಕೆಲಸಮಾಡಲು ಧೈರ್ಯವುಳ್ಳವನಾಗಿರು.

Hav'en (ಹೇವನ್) n. harbour, refuge. ರೇವು, ಬಂದರು, ಆಶ್ರಯ, ವಿಶ್ರಾಂತಿಸ್ಥಾನ.

Hav'ersack (ಹಾವರ್‌ಸಾಕ್)n. soldier's canvas provision bag. ಹಸಿಬೆ ಚೀಲ, ಬೆನ್ನು ಚೀಲ.



Haversack

Havoc (ಹಾವಕ್) n. devastation. ಹಾವಳಿ, ನಾಶ, ಹಾಳು, ವಿಧ್ವಂಸ.

Haw (ಹಾ) n. hedge or fence. ಆವರಣ, ಬೇಲಿ.

Hawhaw (ಹಾಹಾ) interj. ha ! ha ! ಹ ಹ್ಹಾ.

Hawk (ಹಾಕ್) n. bird of prey used in falconry, rapacious pereon. ಡೇಗೆ, ಗಿಡುಗ, ಸುಲಿಗೆಕೋರ. ದರೋಡೆಕೋರ, ಮೋಸಗಾರ. vt carry about for sale. ಹೊತ್ತುಕೊಂಡು ಮಾರು, ತಿರುಗು.



Hawk

Hawk'er (ಹಾಕರ್) n. itinerant dealer. ಹೊತ್ತು ಮಾರುವವ, ಕೋರಿಶೆಟ್ಟಿ, ತಿರುಗು ವ್ಯಾಪಾರಿ.

Hawk-eyed (ಹಾಕ್ಐಡ್) adj. having keen eyesight. ತೀಕ್ಷ್ಣ ದೃಷ್ಟಿಯುಳ್ಳ.

Hawser (ಹಾಸರ್) n large rope of a ship. ಹಡಗಿನ ದೊಡ್ಡ ಹಗ್ಗ.

Hawthorn (ಹಾಥಾರ್ನ್) n. thorny shrub. ಒಂದು ಜಾತಿಯ ಮುಳ್ಳುಪೊದೆ.

Hay (ಹೇ) n. grass mown & dried. ಒಣಹುಲ್ಲು, ಒಣಗಿಸಿಟ್ಟ ಹುಲ್ಲು, ಬಜು, ಕರಡ.

Hay'stack (ಹೇಸ್ಟ್ಯಾಕ್) n. regular pile of hay. ಹುಲ್ಲಿನ ಬಣಿವೆ, ಹುಲ್ಲುಮೆದೆ.

Ha'zard (ಹ್ಯಾಜರ್ಡ್) n. danger, risk. ಕಂಟಕ, ಅಪಾಯ, ಪಣ, ನಷ್ಟ. vt risk. try one's chance ಅಪಾಯಕ್ಕೆ ಗುರಿಮಾಡು, ಧೈರ್ಯಮಾಡು.

Haze (ಹೇಜ್) n. fog, mist, mental obscurity. ಮಂಜು, ಮುಸುಕು, ಮಬ್ಬು, ಬುದ್ಧಿಮಂಕು.

Hazel (ಹೇಸ್ಲ್) n. tree of the oak family. ಓಕ್‌ಮರದ ಜಾತಿಯ ಒಂದು ಮರ.

Hazily (ಹೇಜಿಲಿ) adv, in a hazy manner, mistily. ಅಸ್ಪಷ್ಟವಾಗಿ.

Haz'y (ಹೇಝಿ) a. misty, vague. ಅಸ್ಪಷ್ಟ.

He (ಹೀ) pron. male person or animal in question. ಅವನು, ಆತ.

Head (ಹೆಡ್) n. upper part of body, ruler, chief, source of stream, division in discourse, culmination. ತಲೆ; ಶಿರಸ್ಸು, ರುಂಡ, ಅಧಿಪತಿ, ಮುಖಂಡ, ಉಗಮಸ್ಥಾನ, ಆದಿಮೂಲ, ಮುಖ್ಯಾಂಶ, ಪ್ರಧಾನ ಪ್ರಕರಣ, ಉತ್ಕಟಸ್ಥಿತಿ, ಮುಖ್ಯೋಪಾಧ್ಯಾಯ, ನದೀಮೂಲ, ಶಿಖರ. vt lead, beat the head. ನಾಯಕನಾಗಿರು, ನಡೆಸು. over h. & ears, entirely. ಸಂಪೂರ್ಣವಾಗಿ. from h. to foot, throughout the body. ನಖಶಿಖಾಂತ, ನೆತ್ತಿಯಿಂದ ಅಂಗುಷ್ಠದವರೆಗೆ. h. and shoulders, above, superior. ಉತ್ತಮತರ.

Head'ache (ಹೆಡ್ಏಕ್) n. pain in the head ತಲೆನೋವು.

Headdress (ಹೆಡ್‌ಡ್ರೆಸ್) n. covering for the head. ತಲೆಯುಡಿಗೆ.

Headmaster (ಹೆಡ್‌ಮಾಸ್ಟರ್) n. chief of the teachers in a school. ಮುಖ್ಯೋಪಾಧ್ಯಾಯ.

Head'piece (ಹೆಡ್‌ಪೀಸ್) n. helmet. ಶಿರಸ್ತ್ರಾಣ.

Head'ing (ಹೆಡಿಂಗ್) n. title, &c. at the head of article or page. ತಲೆಬರಹ, ಶೀರ್ಷಿಕೆ, ಲೇಖನಾಮ, ಶಿರೋನಾಮ.

Head'land (ಹೆಡ್‌ಲ್ಯಾಂಡ್) n. promontory. ಭೂಶಿರ, ಭೂಕಂಠ.

Headlight (ಹೆಡ್‌ಲೈಟ್) n. strong light used by motor cars or railway engines; battery light used

Headlight

by hunters. ಶಿಕಾರಿಗಳು ಉಪಯೋಗಿಸುವ ಅಥವಾ ಮೋಟಾರು, ರೈಲ್ವೇ ಇಂಜಿನ್ನುಗಳ ಹೆಚ್ಚು ಪ್ರಕಾಶದ ದೀಪ.

Head'long (ಹೆಡ್ ಲಾಂಗ್) adv. rashly, precipitately. ವಿಚಾರವಿಲ್ಲದೆ, ಹಿಂದೆಮುಂದೆ ನೋಡದೆ, ಸಾಹಸಿಕವಾಗಿ.

Headphones (ಹೆಡ್‌ಫೋನ್ಸ್) n. pl. receivers fitting to the head to listen to radio signals etc ರೇಡಿಯೋ ಸಂಕೇತವನ್ನು ಲಾಲಿಸುವುದಕ್ಕೆ ತಲೆಗೆ ಸಿಕ್ಕಿಸಿಕೊಳ್ಳುವ ಸಲಕರಣೆ.


Headphone

Headquart'ers (ಹೆಡ್‌ಕ್ವಾರ್ಟರ್ಸ್) n. centre of operations, commander-in-chief's residence. ಮುಖ್ಯಠಾಣ್ಯ, ಮುಖ್ಯ ಸೇನಾಧಿಪತಿಯ ನಿವಾಸಸ್ಥಾನ, ಕೇಂದ್ರಕಾರ್ಯಸ್ಥಾನ.

Head strong (ಹೆಡ್‌ಸ್ಟ್ರಾಂಗ್) a. self-willed. ಅತಿಹಟಮಾರಿಯಾದ, ಅವಿಧೇಯ, ತಲೆಬಿರುಸಿನ.

Head'way (ಹೆಡ್ ವೆ) n. progress. ಪ್ರಗತಿ, ಮುನ್ನಡೆ, ಅಭಿವೃದ್ಧಿ.

Headway (ಹೆಡ್ ವೇ) n. motion ahead. ಮುಂದುವರೆಯುವಿಕೆ, ಮುಂದುವರಿಯುವ ವೇಗ, ಗತಿ.

Heady (ಹೆಡಿ) adj. intoxicating. ಅಮಲನ್ನುಂಟುಮಾಡುವ.

Heal (ಹೀಲ್) vt. i. restore to health, cure, become sound. ವಾಸಿಮಾಡು, ವಾಸಿಯಾಗು, ಮಾಯು, ಗುಣಮಾಡು, ಆರು, ಉಪಶಮನವಾಗು.

Health (ಹೆಲ್ತ್) n. soundness of body & mind. ದೇಹಾರೋಗ್ಯ, ಸ್ವಸ್ಥತೆ, ಪ್ರಕೃತಿ, ಸೌಖ್ಯ, ಮನಸ್ಸ್ವಾಸ್ಥ್ಯ, ದೇಹಸ್ಥಿತಿ.

Health'y (ಹೆಲ್ತಿ) a. having or conducive to good health. ಶರೀರಕ್ಕೆ ಹಿತಕರ, ಆರೋಗ್ಯವುಳ್ಳ, ನಿರೋಗಿ, ಆರೋಗ್ಯಕರ.

Heap (ಹೀಪ್) n. a pile, accumulation. ಕುಪ್ಪೆ, ರಾಶಿ, ಕುಪ್ಪೆಹಾಕು, ಗುಡ್ಡೆ. vt pile in heap, accumulate. ರಾಶಿ ಮಾಡು, ಮೊತ್ತ ಮಾಡು, ಗುಡ್ಡೆಹಾಕು.

Hear (ಹಿಯರ್) vt. i. perceive with ear, listen or give audience to, be informed of. ಕೇಳು, ಆಲಿಸು, ಲಾಲಿಸು.

Hearing (ಹಿಯರಿಂಗ್) n. a judicial trial ಮೊಕದ್ದಮೆಯ ವಿಚಾರಣೆ.

Heark'en (ಹಾರ್ಕನ್) vt. listen to. ಕೇಳು.

Hear'say (ಹಿ ಅರ್ ಸೆ) n. gossip. ವದಂತಿ, ಸುದ್ದಿ, ಕೇಳಿಕೆಮಾತು, ಗಾಳಿವರ್ತಮಾನ.

Hearse (ಹರ್ಸ್) n. car for conveying coffin. ಶವಯಾನ, ಪ್ರೇತವಾಹನ.

Heart (ಹಾರ್ಟ್) a. organ of circulation, the seat of emotions or affections, soul, mind, courage; central or vital part essence. ರಕ್ತಕೋಶ, ಆತ್ಮ, ಹೃದಯ, ಅಂತಃಕರಣ, ಅಂತರಂಗ, ಎದೆಗಾರಿಕೆ, ಗುಂಡಿಗೆ, ತಿರುಳು, ಸಾರವತ್ತಾದ ಭಾಗ. h. & soul, most cordially. ಪೂರ್ಣ ಉತ್ಸಾಹದಿಂದ. take to h. be grieved by. ಮನಸ್ಸಿಗೆ ಹಚ್ಚಿಕೊಳ್ಳು, lose h. become discouraged. ನಿರಾಶನಾಗು. ಎದೆಯೊಡೆದುಕೊ, ಕುಗ್ಗು. take h. gain courage. ಧೈರ್ಯತಳೆ.

Heart

Heart'ache (ಹಾರ್ಟ್‌ಏಕ್) n. mental anguish. ಮಾನಸಿಕ ವ್ಯಥೆ.

Heart broken (ಹಾರ್ಟ್‌ಬ್ರೋಕನ್) a. deeply grieved. ವ್ಯಥಿತ, ದುಃಖಿತ.

Heart'felt (ಹಾರ್ಟ್‌ಫೆಲ್ಟ್) a. since. ಪ್ರಾಮಾಣಿಕ, ಹೃತ್ಪೂರ್ವಕ, ವಾಸ್ತವಿಕ, ಅಕೃತ್ರಿಮ.

Hearth' (ಹಾರ್ಥ್) n. floor of fire place. ಒಲೆ, ಅಗ್ನಿಕುಂಡ, ಬೆಂಕಿಗೂಡು, ಬೆಂಕಿಗೂಡಿನ ನೆಲ

Heart ily (ಹಾರ್ಟಿಲಿ) adv. in hearty manner. ಮನಃಪೂರ್ವಕ. ಸಂತೋಷವಾಗಿ.

Heartiness (ಹಾರ್ಟಿನೆಸ್) n. state of being genial. ಉತ್ಸಾಹ, ಸಂತಸದಿಂದಿರುವಿಕೆ.

Heart'less (ಹಾರ್ಟ್‌ಲೆಸ್) a. unfeeling. ನಿರ್ದಯ, ನಿಷ್ಕರುಣ, ಕ್ರೂರ, ಮರುಕವಿಲ್ಲದ.

Hear'ty (ಹಾರ್ಟಿ) a. vigorous, genial, sincere, (of meals) copious. ಬಲವುಳ್ಳ, ಆದರಪೂರ್ವಕ, ಅಂತಃಕರಣಪೂರ್ವಕ, ದೃಢ, ಹುರುಪಿನ ಉತ್ಸಾಹವುಳ್ಳ, ಪುಷ್ಕಳ, ಸಮೃದ್ಧಿ, ನಿಷ್ಕಪಟ, ಕಂಠಪೂರ್ತಿ, ಹೊಟ್ಟೆತುಂಬ.

Heat (ಹೀಟ್) n. hotness, inflamed state of body, anger. ಕಾವು, ಉಷ್ಣ, ತಾಪ, ಕೋಪ, ಬಿಸಿ, ಕಾಮೋದ್ರೇಕ. vt. i. make or become hot, inflame ಕಾಯಿಸು, ಬಿಸಿಮಾಡು, ಸಿಟ್ಟಿಗೇಳು, ರೇಗಿಸು, ಉದ್ರೇಕಿಸು, ಸಿಟ್ಟಿಗೆಬ್ಬಿಸು, ಬಿಸಿಯೇರು.

Heath (ಹೀತ್) n. tract of waste land. ಜಂಗಲಭೂಮಿ, ವನಭೂಮಿ, ಬಂಜರು ಭೂಮಿ,

Heathen' (ಹೀದರ್ನ್) n. not Christian. ಕ್ರೈಸ್ತನಲ್ಲದವ. ವಿಧರ್ಮಿ.

Heave (ಹೀವ್) vt. i. lift, raise, utter (sigh, groan) with effort, ಎತ್ತು, ಕಷ್ಟಪಟ್ಟು ಹೊರಸೂಸು, ಬಿಡು, ನಿಟ್ಟುಸಿರುಬಿಡು, ಉಬ್ಬಸಪಡು.

Hea'ven (ಹೆವರ್ನ್) n. the sky, abode of God; place of bliss. ಆಕಾಶ, ಸ್ವರ್ಗ, ಅಂತರಿಕ್ಷ, ಭಾನು ದೇವಲೋಕ, ದಿವ್ಯಾನಂದ ಸ್ಥಳ, ಸುಖಸ್ಥಾನ.

Heav'enly (ಹೆವನ್ಲಿ) a. of heaven, divine, of the sky. ಸ್ವರ್ಗೀಯ, ದಿವ್ಯ, ದೇವಲೋಕದ.

Hea'vily (ಹೆವಿಲಿ) adv. with ponderousness; dull, tedious, oppressive, sad. ಭಾರವಾದ. ಜಡ, ಮಂದ, ಬೇಜಾರಾಗುವ, ಕಷ್ಟದ, ದುಃಖಿದ.

Heaviness (ಹೆವಿನೆಸ್) n. weight, sorrow. ಭಾರ, ಜಡತೆ, ದುಃಖ.

Heav'y (ಹೆವಿ) a. of great weight, dull, tedious, sad, oppressive. ಭಾರವುಳ್ಳ, ಜಡ, ಮಂದ ಬುದ್ಧಿಯ, ಕಠಿಣ, ಬೇಸರ, ದುಃಖದ, ಪ್ರಯಾಸದ. n. haviness.

Heb'e (ಹೀಬಿ) n. goddess of youth. ಯೌವನ ದೇವತೆ, ತಾರುಣ್ಯದೇವಿ.

Hebeta'te (ಹೆಬಿಟೇಟ್) vt. blunt, stupefy. ಮೊಂಡಮಾಡು, ಜಡಮಾಡು.

Hebet'ude (ಹೆಬಿಟ್ಯೂಡ್) n. dullness. ಜಡತ್ವ, ಮಂದತೆ, ಹರಿತವಿಲ್ಲದ್ದು.

Hebraic (ಹೆಬ್ರೇಯಿಕ್) a. pertaining to a Jew. ಯೆಹೂದ್ಯ ಸಂಬಂಧಿ.

Habraism (ಹಿಬ್ರೇಯಿಸ್‌ಮ್) n. the conceptions of Jews. ಯೆಹೂದ್ಯರ ವಿಚಾರಗಳು.

Hebraist (ಹಿಬ್ರೇಯಿಸ್ಟ್) n. person versed in the Hebrew language ಯೆಹೂದ್ಯ ಭಾಷಾ ಪ್ರವೀಣ.

Hebrew (ಹೆಬ್ರೂ) n. a Jew, the language of the ancient Hebrews. ಯೆಹೂದ್ಯ, ಪ್ರಾಚೀನ ಯೆಹೂದ್ಯರ ಭಾಷೆ.

Hec'atomb (ಹೆಕಟೊಮ್) n. great public sacrifice (of 100 oxen). ಶತಗೋಮೇಧ, ಮಹಾಬಲಿ.

Hec'kle (ಹೆಕ್ಲ್) vt. catechize severely. ಪ್ರಶ್ನೋತ್ತರಗಳಿಂದ ಬಾಧಿಸು, ಪ್ರಶ್ನೆಹಾಕಿ ಕಾಡಿಸು.

Hec'tic (ಹೆಕ್ಟಿಕ್) a. consumptive. ಕ್ಷಯ-ರೋಗದ, ಅಸ್ಥಿಜ್ವರದ.

Hector (ಹೆಕ್ಟರ್) n. a bully, a blurter. ಹೆದರಿಸುವವನು, ಜಂಭಗಾರ.

Hedge (ಹೆಜ್) n. thicket of bushes or low trees. ಬೇಲಿ, ಆವರಣ, ಅಡಚಣೆ, ತಡೆ.

Hedgeborn (ಹೆಜ್ ಬಾರ್ನ್) a. of low birth. ಹೀನಜಾತಿಯು.

Hedgehog (ಹೆಡ್ಜ್ಹಾಗ್) n kind of wild rat. ಮುಳ್ಳು ಹಂದಿ.



Hedgehog

Hedon'ic (ಹಿಡಾನಿಕ್) a of pleasure. ಸುಖದ, ಭೋಗದ, ವಿಲಾಸದ.

Hed'on'ism (ಹೀಡನಿಝುಮ್) n. doctrine that happiness is the highest good. ಸುಖವೇ ಮುಖ್ಯ ಸಾಧನವೆಂಬ ತತ್ವ, ಸೌಖ್ಯವೇ ಮುಖ್ಯ ಪುರುಷಾರ್ಥವೆಂಬ ವಾದ.

Hedonist (ಹೆಡಾನಿಸ್ಟ್) n. one who lives a life of pleasure. ಆನಂದ ಜೀವಿ.

Heed (ಹೀಡ್) vt attend to, take notice of. ಗಮನಕೊಡು, ಲಕ್ಷ್ಯಕೊಡು, ಗಮನ n care, attention. ಎಚ್ಚರಿಕೆ ಜಾಗ್ರತೆ, ಲಕ್ಷ್ಯ.

Heedful (ಹೀಡ್ಫುಲ್) adj. attentive, watchful. ಗಮನಕೊಡುವ, ಜಾಗರೂಕ.

Heedfulness (ಹೀಡ್ಫುಲ್ನೆಸ್) n. the state of being attentive. ಜಾಗರೂಕತೆ.

Heed'less (ಹೀಡ್ಲೆಸ್) a. careless ಎಚ್ಚರಗೇಡಿಯಾದ, ಪರಿವೆಯಿಲ್ಲದ, ಲಕ್ಷ್ಯವಿಲ್ಲದ.

Heehaw (ಹೀಹಾ) vi. bray like an ass. ಕತ್ತೆಯಂತೆ ಅರಚು.

Heel (ಹೀಲ್) n. part of human foot projecting behind. ಹಿಮ್ಮಡಿ. at the h. of, closely following. ಬೆನ್ನ ಹಿಂದೆ.



Heel

Heft (ಹೆಫ್ಟ್) n handle of a tool, effort. ಭಾರ, ತೂಕ.

Heftiness (ಹೆಫ್ಟಿನೆಸ್) n. quality of being sturdy. ಬಲಿಷ್ಠತೆ.

Hefty (ಹೆಫ್ಟಿ) adj. sturdy. ಭಾರಿಯಾದ, ಬಲಿಷ್ಠನಾದ.

Hei'fer (ಹೆಫರ್) n. young cow that has not had calf. ಇನ್ನು ಕರು ಹಾಕಿಲ್ಲದ ಹಸು, ಕಡಸು, ಪಡ್ಡೆ.

Height (ಹೈಟ್) n. measure from base to top. ಎತ್ತರ, ಉನ್ನತಿ, ಔನ್ನತ್ಯ.

Heig'hten (ಹೈಟನ್) v. t. raise higher, intensify, exaggerate. ಎತ್ತರಿಸು, ಹೆಚ್ಚಿಸು, ಅತಿಶಯಮಾಡು.

Hei'nous (ಹೀನಸ್) a. atrocious. ಘೋರ, ಉಗ್ರ, ಅತ್ಯಾಚಾರದ, ಪಾತಕದ.

Heinousness (ಹೀನಸ್ನೆಸ್) n. wickedness, atrocity. ದುಷ್ಟತೆ, ನೀಚತೆ.

Heir (ಏರ್) n. inheritor. ಹಕ್ಕುದಾರ, ಬಾಧ್ಯಸ್ಥ, ವಾರಸುದಾರ, ಉತ್ತರಾಧಿಕಾರಿ.

Heiress (ಎಯರೆಸ್) n. a female heir. ವಾರಸುದಾರಳು.

Heirloom (ಏರ್ಲೂಮ್) n. furniture, movable possession which descends to the heir. ವಂಶಪಾರಂಪರ್ಯವಾಗಿ ಬಂದ ಆಸ್ತಿ.

Helianthus (ಹೀಲಿಆಂಥಸ್) n. the sunflower. ಸೂರ್ಯಕಾಂತಿ.

Helical (ಹೆಲಿಕಲ್) adj. spiral, ಸುರುಳಿಯಾಕಾರದ.

Heliosis (ಹೀಲಿಯೋಸಿಸ್) n. sunstroke. ಬಿಸಿಲ ತಾಪದ ಪೆಟ್ಟು.

Heliotrope (ಹೀಲಿಯೋಟ್ರೋಪ್) n. a kind of flower. ಸೂರ್ಯಕಮಲದ ಹೂ

Hell (ಹೆಲ್) n. abode of the damned, state of vice or misery. ಪ್ರೇತಲೋಕ, ಯಮಕುಂಡ, ನರಕ, ದುಃಖಸ್ಥಿತಿ, ದುರಭ್ಯಾಸ.

Helm (ಹೆಲ್ಮ್) n. ruddder, steering wheel. ಹಡಗಿನ ಚುಕ್ಕಾಣಿ, ಕರ್ಣ.

Helmet (ಹೆಲ್ಮೆಟ್) n. defensive head cover. ಶಿರಸ್ತ್ರಾಣ, ತಲೆಕಾಪು, ಸೀಸಕ, ಶಿರಸ್ತ್ರ.



Helmet

Helot (ಹೆಲಟ್)n. a slave of ancient Sparta. ಪುರಾತನ ಸ್ಪಾರ್ಟಾದೇಶದ ಜೀತಗಾರ.

Help (ಹೆಲ್ಪ್) vt. aid, assist, remedy, prevent, avoid. ನೆರವಾಗು, ಸಹಾಯಮಾಡು, ಬಿಡಿಸು, ತಪ್ಪಿಸು, ನಿವಾರಿಸು. h. oneself to, eat to satisfaction. ತೃಪ್ತಿಯಾಗಿ ಊಟಮಾಡು.

Helpful (ಹೆಲ್ಪ್‌ಫುಲ್) a. useful. ಉಪಯೋಗವುಳ್ಳ, ಉಪಯುಕ್ತ, ಸಹಾಯಕ.

Help'less (ಹೆಲ್ಪ್‌ಲೆಸ್) a. wanting assistance. ಸಹಾಯವಿಲ್ಲದ, ದಿಕ್ಕಿಲ್ಲದ, ಕೈಲಾಗದ, ಗತಿಯಿಲ್ಲದ.

Helpmate (ಹೆಲ್ಪ್‌ಮೇಟ್) n.a wife, a helpful companion. ಸಹಧರ್ಮಿಣಿ, ಸಹಾಯಕ

Hel'ter-skelter (ಹೆಲ್ಟರ್-ಸ್ಕೆಲ್ಟರ್) adv. in a confused hurry. ಅವಸರದಲ್ಲಿ, ಯದ್ವಾತದ್ವಾ, ದಡಬಡನೆ, ಆತುರಾತುರವಾಗಿ.

Helve (ಹೆಲ್ವ್) n. the hand of a tool. ಕಾವು; ಹಿಡಿ.

Hem (ಹೆಮ್) vt. sew edge. ಅಂಚು ಕಟ್ಟು, ಕರೆಕಟ್ಟು, ಅಂಚು ಮಡಿಸಿ ಹೊಲಿ.

Hemicpia (ಹೆಮಿಯೋಪಿಯ) n. blindness of half the field of vision. ದೃಷ್ಟಿಕ್ಷೇತ್ರ, ಅರ್ಧಭಾಗವೇ ಕಾಣುವ ಅಂಧತೆ

Hem'isphere (ಹೆಮಿಸ್ಫಿಅರ್) n half of the globe or map of it. ಗೋಲಾರ್ಧ, ಅರ್ಧಗೋಳ.

Hem'istich (ಹೆಮಿಸ್ಟಿಕ್) n. half line of a verse. ಶ್ಲೋಕದಚರಣಾರ್ಧ, ಅರ್ಧಪಾದ, ಅರ್ಧಚರಣ.

Hemlock (ಹೆಮ್‌ಲಾಕ್) n. a kind of plant. ಒಂದು ವಿಷಯುಕ್ತ ಸಸ್ಯ.

Hemp (ಹೆಂಪ್) n. plant with a fibrous bark used for cords. &c. ಸಣಬಿನ ಗಿಡ, ಪುಂಡಿನಾರು, ಕಿತ್ತಾನಾರು, (ಗಿಡದ) ನಾರು, ಸಣಬು.

Hen (ಹೆನ್)n. female of birds esp. of the domestic fowl, ಕೋಳಿ.

Hen-bane (ಹೆನ್‌ಬೇನ್) n. narcotic and poisonous drug. ಖುರಾಸಾನಿ, ಓಮದ ಗಿಡ

Hence(ಹೆನ್ಸ್)adv. from this place or time. ಇದರಿಂದ, ಈ ಕಾರಣದಿಂದ, ಆದುದರಿಂದ, ಇಲ್ಲಿಂದ, ಈಗಿನಿಂದ, ಇನ್ನು ಮೇಲೆ.

Hence'forth, - for'ward (ಹೆನ್ಸ್‌ಫೋರ್ಥ್ ಹೆನ್ಸ್‌ಫಾರ್ವರ್ಡ್)adv. from this time forth. ಇನ್ನುಮೇಲೆ, ಇನ್ನು ಮುಂದೆ.

Henchman (ಹೆಂಚ್‌ಮನ್) n. a chief attendant, page, staunch follower. ಮುಖ್ಯಸೇವಕ, ನಂಬಿಕಸ್ತನಾದ ಅನುಯಾಯಿ.

Hen'pecked (ಹೆನ್‌ಪೆಕ್ಡ್) n. governed by wife ಸ್ತ್ರೀವಶ, ಸ್ತ್ರೀವಿಧೇಯ, ಪತ್ನಿದಾಸ, ಹೆಂಡತಿಗೆ ಅಂಜುವ.

Hep'tagon (ಹೆಪ್ಟಗನ್) n. figure of seven sides. ಸಪ್ತಕೋಣ, ಸಪ್ತಭುಜ.

Herald (ಹೆರಲ್ಡ್) n. forerunner ರಾಜಘೋಷಕ, ಸೂತ, ಅಗ್ರಗಾಮಿ, ದೂತ, ರಾಜದೂತ, ಭಟ್ಟಂಗಿ,

Herb (ಹರ್ಬ್) n. plant with soft stalk used for food, medicine, &c. ಔಷಧಿ, ಸರಿ, ಗಿಡ, ಸಸ್ಯ, ನಾರು, ಬೇರು, ಗಿಡಮೂಲಿಕೆ.

Herb'age (ಹರ್ಬಿಜ್) n. herbs pasturage. ಸಸ್ಯ. ಹುಲ್ಲು, ಸೊಪ್ಪುಸದೆ, ಪಯಿರು ಪಚ್ಚೆ.

Herbivorous (ಹರ್ಬಿವೊರಸ್) a. subsisting on plants & herbs. ಶಾಕಾಹಾರಿ, ಸಸ್ಯಮೂಲಿಕೆಗಳನ್ನು ತಿಂದು ಜೀವಿಸುವ.

Herby (ಹರ್ಬಿ) a. herbous. ಮೂಲಿಕೆಗಳಿಂದ ಯುಕ್ತನಾದ.

Hercul'ean (ಹರ್ಕ್ಯೂಲಿಯನ್) a. (of task) of great difficulty. ಬಹು ದೊಡ್ಡ, ಮಹಾಪ್ರಯಾಸದ, ಬಲಿಷ್ಠನಾದ. h. task. ಭೀಮಪರಾಕ್ರಮ ಕೆಲಸ.

Herd (ಹರ್ಡ್) n. drove of cattle. ಹಿಂಡು, ಮಂದೆ, ಜನಜಂಗುಳಿ ಗೊಂದಣಿ, ಗಣ, ಸಮೂಹ.

Herds'man (ಹರ್ಡ್ಸ್‌ಮನ್) n. one who tends a herd. ದನಕಾಯುವವನು, ಗೋವಳ, ಗೊಲ್ಲ.

Here (ಹಿಯರ್)adv. in this place. ಇದರಲ್ಲಿ, ಈ ಸ್ಥಳಕ್ಕೆ, ಇಲ್ಲಿ.

Hereaf'ter (ಹಿಯರ್ಆಫ್ಟರ್) adv in the next world, in the future ಪರಲೋಕದಲ್ಲಿ, ಇನ್ನುಮುಂದೆ, ಪರದಲ್ಲಿ, ಇನ್ನುಮೇಲೆ.

Heretofore (ಹಿಅರ್‌ಟುಫೋರ್) adv. formerly. ಮೊದಲು, ಮುಂಚೆ, ಇದಕ್ಕೆ ಮುಂಚೆ, ಪೂರ್ವದಲ್ಲಿ.

Hereditable (ಹರಿಡಿಟಿಬಲ್) a. that which may be inherited. ಅನುವಂಶಿಕವಾಗಿ ಬರಬಹುದಾದ.

Hered itary (ಹಿರಿಡಿಟರಿ) a. inherited. ಅನುವಂಶಿಕ, ವಂಶಪಾರಂಪರ್ಯವಾಗಿ ಬರುವ, ಪಿತ್ರಾರ್ಜಿತ, ಪರಂಪರಾಗತ.

Hered'ity (ಹಿರಿಡಿಟಿ) a tendency of like to beget like ಅನುವಂಶಿಕತೆ, ವಂಶಾನುಗತತ್ವ, ವಂಶಪರಂಪರೆ.

Herein (ಹಿಯರಿನ್) adv. in this. ಇದರೊಳಗೆ.

Hereof (ಹಿಯರಾಫ್) adv. of this, from this. ಇದರಿಂದ, ಇದರ.

He'resy (ಹೆರೆಸಿ) n. opinion contary to accepted doctrine. ಪಾಷಂಡವಾದ, ಹೇತುವಾದ, ನಾಸ್ತಿಕತೆ.

He'retic (ಹೆರಿಟಿಕ್) n. holder of heresy. ಪಾಷಂಡಿ, ಸಂಪ್ರದಾಯ ಬಾಹಿರ, ನಾಸ್ತಿಕ.

He'ritage (ಹೆರಿಟೇಜ್) n. inherited lot. ಪಿತೃಧನ, ಪಿತ್ರಾರ್ಜಿತ, ಪಿತ್ರಾರ್ಜಿತವಾಗಿ ಬಂದದ್ದು.

Heritor (ಹೆರಿಟಾರ್) n. one who inherits, heir. ವಂಶಪಾರಂಪರ್ಯವಾಗಿ ಪಡೆಯುವವನು ವಾರಸುದಾರ.

Hermetic(ಹರ್ಮೆಟಿಕ್)adj perfectly airtight. ಗಾಳಿಸೇರದಂತೆ ಮಾಡಿರುವ.

Herm'it (ಹರ್ಮಿಟ್) n. person living in solitude, recluse. ವನವಾಸಿ, ಏಕಾಂತವಾಸಿ, ವಿರಕ್ತ, ಸಂನ್ಯಾಸಿ, ಮುನಿ.

Hermitage (ಹರ್ಮಿಟೇಜ್) n. hermit's abode. ಸಂನ್ಯಾಸಿಮಠ, ಪರ್ಣಕುಟೀರ, ಆಶ್ರಮ.

Hernia (ಹರ್ನಿಯ) n. rupture. ಅಂಡವಾಯು.

Her'o (ಹೀರೊ) n. a brave man, illustrious warrior. ವೀರ, ಶೂರ, ನಾಯಕ, ಕಲಿ, ಮಹಾಪುರುಷ.

Hero'ic(ಹಿರೋಇಕ್)a courageous, daring ಪರಾಕ್ರಮಿ, ಧೀರ, ಸಾಹಸದ, ವೀರೋಚಿತ, ಶೂರ.

Hero'ine (ಹಿರೊಇನ್) n. female hero. ಕಥಾನಾಯಕಿ, ನಾಯಿಕೆ. ವೀರನಾರಿ.

He'roism (ಹಿರೊಇಝಮ್) n. heroic conduct. ಪರಾಕ್ರಮ, ವೀರಲಕ್ಷಣ, ಕಲಿತನ, ಶೌರ್ಯ.

He'ron (ಹೆರಾನ್) n long legged wading bird. ಕೊಕ್ಕರೆ, ಉದ್ದಕಾಲಿನ ಒಂದು ನೀರು ಹಕ್ಕಿ, ನಾರಾಯಣಪಕ್ಷಿ.

Heronry (ಹೆರನ್ರಿ) n. place where herons breed. ಕೊಕ್ಕರೆಗಳು ಬೆಳೆಯುವ ಸ್ಥಳ.



Heron

Herpes (ಹರ್ಪೀಸ್) n. a disease of the skin. ಗುಳ್ಳೆಗಳೇಳುವ ಚರ್ಮರೋಗ.

Herring (ಹೆರಿಂಗ್) n. a small seafish used for food. ಹೆರಿಂಗ್ ಮೀನು.

Hesitancy(ಹೆಜಿಟನ್ಸಿ)n. hesitating. vacillation. ಅನುಮಾನ, ಸಂಶಯ.

Hesitant (ಹೆಸಿಟೆಂಟ್) adj. hesitating. ಶಂಕಾಸ್ವಭಾವದ.

Hes'itate (ಹೆಸಿ(ಜಿ)ಟೇಟ್) v. i. feel or show indecision, scruple. ಅನುಮಾನಿಸು, ಸಂದೇಹಿಸು, ಶಂಕಿಸು, ಹಿಂಜರಿ, ಹಿಂದು ಮುಂದು ನೋಡು

Hesitation (ಹೆಜಿಟೇಷನ್) n. act of hesitating, doubt. ಅನುಮಾನ, ಸಂದೇಹ.

Hesperus (ಹೆಸ್ಪೆರಸ್) n. the evening star. ಸಂಧ್ಯಾನಕ್ಷತ್ರ.

Het'erodox (ಹೆಟೆರೊಡಾಕ್ಸ್) a. not orthodox. ಅವೈದಿಕ, ಸಂಪ್ರದಾಯ ವಿರುದ್ಧ.

Heterodxy(ಹೆಟ್ರೊಡಾಕ್ಸಿ)n. holding of unorthodox opinions, heresy. ಅವೈದಿಕತೆ, ಸಂಪ್ರದಾಯ ವಿರೋಧ.

Heugh (ಹ್ಯೂ) n. ravine. ಕಣಿವೆ.

Hew (ಹ್ಯೂ) v. t. chop, cut into shape. ಕತ್ತರಿಸು, ಕಡಿದುಹಾಕು, ತರಿ, ತುಂಡುಮಾಡು, ಛೇದಿಸು.

Hex'agon (ಹೆಕ್ಸಾಗನ್) n a figure having six sides. ಷಟ್ಕೋಣ, ಷಡಾಸ್ರ, ಷಡ್ಭುಜ.

Hexahed'ron (ಹೆಕ್ಸಹೆಡ್ರನ್) n. figure having six faces, cube. ಘನಾಕೃತಿ. ಷಣ್ಮುಖಿ.

Hey'day(ಹೇಡೇ) n. bloom, prime, ಉಲ್ಲಾಸ,ನವಯೌವನಕಾಲ, ಉತ್ಸಾಹ, ಉತ್ಕರ್ಷ.

Hiatus (ಹೈಏಟಸ್) n. break in continuity. ವಿಸಂಧಿ, ಲೋಪ, ಬಿಡುವು.

Hibernal (ಹೈಬರ್ನಲ್) a.pertaining to winter, wintry. ಛಳಿಗಾಲದ, ಶೀತಕಾಲೀನ.

Hicc'up (ಹಿಕಪ್) n. spasm of respiratory organs. ಬಿಕ್ಕಳಿಕೆ, ಬಿಕ್ಕು, ಬಿಕ್ಕಲು, ಎಕಡು.

Hide (ಹೈಡ್) n. the skin of an animal. ಚಕ್ಕಳ, ತೊಗಲು, ಚರ್ಮ. v. t. i. keep[thing] out of sight, ಅಡಗಿಸು, ಮುಚ್ಚಿಡು, ಮರೆಮಾಡು, ಗುಟ್ಟಾಗಿಡು, ಅವಿತುಕೊಳ್ಳು, ಬಚ್ಚಿಡು.

Hiemal (ಹೈಮಲ್) a. pertaining to winter, wintry. ಛಳಿಗಾಲದ, ಶೀತಕಾಲಕ್ಕೆ ಸಂಬಂಧಿಸಿದ.

Hid'eous (ಹಿಡಿಅಸ್) a. repulsive, revolting. ಭಯಂಕರ, ವಿಕಾರರೂಪವುಳ್ಳ, ಭೀಕರ, ಘೋರ, ಅಸಹ್ಯಕರ.

Hi'erarch (ಹೈರಾರ್ಕ್) n. a. ruler in sacred matters. ಧರ್ಮಾಧಿಕಾರಿ, ಗುರು, ಪ್ರಧಾನಗುರು.

Hieroglyph (ಹೈರೋಗ್ಲಿಫ್)n. secret or symbolic writing, picture writing. ರಹಸ್ಯಲಿಪಿ, ಸಂಕೇತಲಿಪಿ, ಚಿತ್ರ ಲಿಪಿ.



Hieroglyph

Hig'gle (ಹಿಗಲ್) v. i. dispute about terms ಕಸಾಕಸಿಮಾಡು, ಚೌಕಶಿ ಮಾಡು, ಕೊಸರಾಡು.

High (ಹೈ) a. elevated, lofty, tall, dignified, chief, noble. ಎತ್ತರವಾದ, ಎತ್ತರದ, ಮೇಲ್ಮಟ್ಟದಲ್ಲಿರುವ, ಪ್ರಖ್ಯಾತ, ಪ್ರಬಲವಾದ, ಶ್ರೇಷ್ಠ, ಉತ್ತಮಗುಣದ, ಉನ್ನತಪದವಿಯ, ಪ್ರಧಾನ. adv. far up, aloft, ಬಹಳ ಎತ್ತರದಲ್ಲಿ. h. lands. ಮಲೆನಾಡು, ಪರ್ವತಪ್ರಾಂತ, ಗುಡ್ಡಗಾಡು.

High-flown (ಹೈಫ್ಲೋನ್) a. extravagant bombastic. ಮಿತಿಮೀರಿದ, ಅತಿಗರ್ವಿತ, ಆಡಂಬರದ.

Highhand'ed (ಹೈಹ್ಯಾಂಡೆಡ್.) a. violent, arbitrary. ಬಲೋದ್ಬಂಧದ, ಜುಲುಮಿನ, ಉದ್ದಾಮತನದ.

High'ly (ಹಾಯ್ಲಿ) adv. at a high rate, in a high degree. ಎತ್ತರವಾಗಿ, ಬಹಳವಾಗಿ, ಹೆಚ್ಚಾಗಿ, ವಿಶೇಷವಾಗಿ, ಉಚ್ಚವಾಗಿ.

Highmind'ed (ಹೈಮೈಂಡೆಡ್) a. morally elevated. ನೀತಿವಂತ,

ಮಹಾತ್ಮ, ಉದಾತ್ತಸ್ವಭಾವದ, ದೊಡ್ಡ ಮನಸ್ಸಿನ.

Highness (ಹೈನೆಸ್) n. quality of being high, title of honour given to princes etc. ಉಚ್ಚತೆ, ರಾಜರಿಗೆ ಕೊಡುವ ಉಪಾಧಿ.

High'school (ಹೈಸ್ಕೂಲ್) n. the chief public school in a town providing secondary education. ಮಾಧ್ಯಮಿಕಕ್ಕೆ ಮೀರಿದ ಪ್ರೌಢಶಿಕ್ಷಣಾಲಯು.

High'spi'rited (ಹೈ ಸ್ಪಿ ರಿ ಟೆ ಡ್) n. bold, daring. ಕೆಚ್ಚಿನ, ಧೈರ್ಯದ.

High'way (ಹ್ಯಾ ಯ್ ವೇ, ಹೈ ವೆ) n. public road, main road. ರಾಜಮಾರ್ಗ, ಹೆದ್ದಾರಿ, ಮುಖ್ಯದಾರಿ.

High'wayman (ಹ್ಯಾಯ್(ಹೈ)ವೆಮನ್) n. man who robs on high way. ಹಾದಿಬಡಕ, ದಾರಿಗಳ್ಳ, ಸುಲಿಗೆಕೋರ, ದಸ್ಯು

Hilar'ious (ಹಿಲೇರಿಅಸ್) a. gay, very merry. ಉಲ್ಲಾಸದ, ಹರ್ಷದ, ಗೆಲುವಿನ, ಖುಷಿಯಾದ, ಸಂತೋಷದ.

Hila'rity (ಹಿ ಲ್ಯಾ ರಿ ಟಿ) n. gaiety. ಉಲ್ಲಾಸ, ಆನಂದ, ಸಂತೋಷ, ಹಿಗ್ಗು.

Hill (ಹಿಲ್) n. small mountain, heap, mound. ಗುಡ್ಡ. ಬೆಟ್ಟ, ತಿಟ್ಟು, ದಿಬ್ಬ, ರಾಶಿ, ಗುಡ್ಡೆ.

Hill'ock (ಹಿಲಕ್) n. small hill ಸಣ್ಣಗುಡ್ಡ, ದಿಬ್ಬ, ಮೊರಡಿ, ದಿಣ್ಣೆ.

Hilt (ಹಿಲ್ಟ್) n. handle of a sword. ಕತ್ತಿಯ ಹಿಡಿ.


Hilt

Hind (ಹೈಂಡ್) n. female of red deer. farm worker. rustic. ಹೆಣ್ಣುಜಿಂಕೆ, ಹೊಲದ ಆಳು, ಹಳ್ಳಿಗಮಾರ, ಒರಟ, ಹರಿಣ. ಒಕ್ಕಲಿಗ.

Hind, hind'er (ಹೈಂಡ್, ಹೈಂಡರ್) a. at the back, posterior. ಹಿಂದಣ, ಹಿಂಭಾಗದ.

Hin'der (ಹಿಂಡರ್) vt. impede, prevent. ಅಡ್ಡಮಾಡು, ತಡೆಮಾಡು, ಅಡಚಣೆಮಾಡು.

Hindmost (ಹೈಂಡ್‌ಮೋಸ್ಟ್) adj. backmost. ಬಹಳಹಿಂದೆ.

Hin'drance (ಹಿಂಡ್ರನ್ಸ್) n. prevention, obstacle. ನಿವಾರಣೆ, ಅಡ್ಡಿ, ತಡೆ, ಅಡಚಣೆ.

Hinge (ಹಿಂಜ್) n. hook or joint on which a door or lid hangs. ತಿರುಗಣೆ ಕೀಲು, ಮುರಡು, vt. furnish with hinge. [fig] turn. ಕೀಲು ಹಾಕು, ಬಿಜಾಗರ ಹಾಕು, ತಿರುಗಿಸು.


Hinge

Hinny (ಹಿನಿ) n. an offspring of she-ass by a horse ಹೇಸರಕತ್ತೆ.

Hint (ಹಿಂಟ್) n covert suggestion, slight indication. ಸಂಕೇತ, ಸೂಕ್ಷ್ಮ ಸೂಚನೆ, ಸಂಜ್ಞೆ, ಇಂಗಿತ. vt. suggest covertly. ಸೂಚಿಸು, ಉಲ್ಲೇಖಿಸು.

Hin'terland (ಹಿಂಟರ್‌ಲಂಡ್) n. district behind coast or river banks ಸಮುದ್ರ ಅಥವಾ ನದೀತೀರದ ಹಿಂದಿನ ಪ್ರದೇಶ, ಹಿನ್ನಾಡು.

Hip (ಹಿಪ್) n. projection of pelvis and upper part of thigh bone. ಕುಂಡಿ, ಚಪ್ಪೆ, ಟೊಂಕ, ಸೊಂಟ, ಕಟಿ, ಪಿರ್ರೆ.

Hip-hip hurrah (ಹಿಪ್ ಹಿಪ್ ಹುರ್ರಾ) interj. an exclamation of joy. ಸಂತೋಷಸೂಚಕವಾದ ಉದ್ಗಾರ.

Hippocrass (ಹಿಪೋಕ್ರೆಸ್) n. medicinal drink of wine and spices, etc. ಮದ್ಯ, ಸಾಂಬಾರ ಪದಾರ್ಥಗಳುಳ್ಳ ಒಂದು ಔಷಧ ಪಾನೀಯ.

Hippology (ಹಿಪಾಲಜಿ) n. study of horses. ಅಶ್ವವಿದ್ಯೆ.

Hircine (ಹರ್ಸೈನ್) adj. goatlike. ಆಡನ್ನು ಹೋಲುವ.

Hippopotamus (ಹಿಪೊಪಾಟಮಸ್) n. large aquatic quadruped. ನೀರ್ಗುದುರೆ.



Hippopotamus

Hire (ಹೈರ್) n. the wages for service. ಬಾಡಿಗೆ, ಕೂಲಿ, ಮಜೂರಿ. vt· procure the use or service at price. ಬಾಡಿಗೆಕೊಡು, ಬಾಡಿಗೆಗೆತೆಗೆದುಕೊಳ್ಳು.

Hire'ling (ಹಾಯರ್ಲಿಂಗ್) n. hired servant, mercenary. ಜೀತದಾಳು, ಕೂಲಿಕಾರ, ಕೂಲಿಯಾಳು, ದುಡ್ಡಿಗೆ ದುಡಿಯುವವ.

Hirsute (ಹರ್ಸ್ಯೂಟ್) adj. hairy. rough with hair. ರೋಮಯುಕ್ತವಾದ, ಕೆದರುಕೂದಲುಳ್ಳ.

Hisk (ಹಿಸ್ಕ್) vi breathe with difficulty ಕಷ್ಟದಿಂದ ಉಸಿರುಬಿಡು.

Hispid (ಹಿಸ್ಪಿಡ್) n· rough with bristles, bristly· [illegible] ಒರಟಾದ.

Hiss (ಹಿಸ್) vt. i. express contempt; condemn by hissing ತಾತ್ಸಾರದಿಂದ ಹಿಸ್ಸೆನ್ನು, ಬುಸ್ಸೆನ್ನು· n. the sound of the letters ; expression of contempt. ಅವಹೇಳನದ ಛೀಕಾರ, ತಿರಸ್ಕಾರ.

Histo'rian (ಹಿಸ್ಟೋರಿಅನ್) n· writer of history. ಇತಿಹಾಸಕರ್ತ; ಚರಿತ್ರಕಾರ, ಇತಿಹಾಸಕಾರ.

Histo'ric (ಹಿಸ್ಟಾರಿಕ್) a. pertaining to history, famous in history. ಐತಿಹಾಸಿಕ, ಪೌರಾಣಿಕ, ಇತಿಹಾಸದ, ಇತಿಹಾಸ ಪ್ರಸಿದ್ಧ.

His'tory (ಹಿಸ್ಟರಿ) n. methodical record of public events, past events, study of these. 'eventful career· ಇತಿಹಾಸ, ವೃತ್ತಾಂತ, ಬರುವಳಿ, ಪೂರ್ವಚರಿತ್ರೆ, ಚರಿತ್ರವರ್ಣನೆ, ಪುರಾವೃತ್ತ ಚರಿತ್ರೆ.

Histrion (ಹಿಸ್ಟ್ರಿಯನ್) n. stage player. ರಂಗಸ್ಥಳದ ನಟ.

Histrion'ic (ಹಿಸ್ಟ್ರಿಯಾನಿಕ್) a. relating to the stage players ನಾಟ್ಯ ರಂಗದ, ನಟರ, ಅಭಿನಯದ, ಸೋಗಿನ.

n. (plu.) theatricals, stage language pretence. ನಾಟಕಸಂಬಂಧದಗೋಷ್ಠಿ, ನಾಟಕಪ್ರದರ್ಶನ, ಸೋಗು, ನಾಟ್ಯಕಥೆ, ಚರಿಯಾನಟನೆ, ಬೂಟಾಟಿಕೆ.

Hit (ಹಿಟ್) vt. i. touch, aim, blow; strike; reach, find, light(upon), come in contact. ತಾಕು ; ಹೊಡೆ, ಏಟುಕೊಡು, ಬಡಿ, ತಗಲು, ಗುರಿಯಿಡು, ಕಂಡುಹಿಡಿ, ಥಟ್ಟನೆತಿಳಿ. n· blow, stroke of satire, success. ಏಟು, ಹೊಡೆತ, ಪೆಟ್ಟು, ಉಚಿತೋಕ್ತಿ; ವಿಜಯ, ಗೆಲವು· h. on (upon) find, think cf. ಕಂಡುಕೊಳ್ಳು, ಮನಸ್ಸಿನಲ್ಲಿ ಹೊಳೆ.

Hitch (ಹಿಚ್) vt. i. book, catch, fasten with loop. &c. move with jerks ತೊಡಕುಹಾಕು, ಸಿಕ್ಕಿಸು, ಗಂಟುಹಾಕು, ಸಿಲುಕಿಸು, ಸಿಕ್ಕಿಸು n. jerk, impediment. ಸಿಡಿಯುವಿಕೆ, ತಡೆ, ಅಡಚಣೆ ತೊಡಕು.

Hith'er (ಹಿದರ್) adv. to this place. ಇಲ್ಲಿ, ಇಲ್ಲಿಗೆ, ಇತ್ತ, ಇತ್ತಕಡೆಗೆ, ಈಕಡೆಗೆ.

Hitherto' (ಹಿದರ್‌ಟೂ) adv. up to now ಈವರೆಗೆ, ಇಂದಿನವರೆಗೆ, ಇಲ್ಲಿಯುವರೆಗೆ.

Hitter (ಹಿಟರ್) n· one who hits wicket player who hits and scores fastly. ಹೊಡೆಯುವವನು, ಕ್ರಿಕೆಟ್ ಆಟದಲ್ಲಿ ಶೀಘ್ರವಾಗಿ ಹೊಡೆದು ರನ್ನುಗಳಿಸುವವನು.

Hive (ಹೈವ್) n. artificial home for bees, busy swarming place. ಜೇನುಹುಟ್ಟು, ಜೇನುಗೂಡು, ಸಂತೆ, ಕಟ್ಟೆ. ಜನನಿಬಿಡ ಸ್ಥಳ.



Hive

o (ಹೋ) interj. expressing surprise, admiration, etc ಆಶ್ಚರ್ಯ, ಪ್ರಶಂಸೆ, ಮುಂತಾದುವನ್ನು ಸೂಚಿಸುವ ಕೂಗು.

oar (ಹೋರ್) adj. grey haired, whi e with age. ನರೆತ ಕೂದಲಿನ.

oard (ಹೋರ್ಡ್) n stock, store. ಸಂಗ್ರಹ, ರಾಶಿ, ಶೇಖರಣೆ. v. t. i. store, treasure up. ಕೂಡಿಸು, ಸಂಗ್ರಹಿಸು, ಶೇಖರಿಸು, ಗಂಟುಮಾಡು.

oarse (ಹೋರ್ಸ್) a (of voice) roug . husky, discordant. ಬಿರಟು, ವಟಗುಟ್ಟುವ, ಧ್ವನಿಒಡೆದ, ಗಂಟಲು ಕಟ್ಟಿದ.

Hoarsely (ಹೋರ್ಸ್ಲಿ) adv. with a rough voice in a husky voice. ಒಡೆದ ಧ್ವನಿಯಿಂದ.

Hoar'y (ಹೋರಿ) a. white or grey with ag-, venerable. ನರೆತ; ಫಲಿತ, ಬೆಳ್ಳಗಾದ, ಮುಪ್ಪುಕಾಣುತ್ತಿರುವ, ಪೂಜ್ಯ, ಗೌರವಾರ್ಹ.

Hoax (ಹೋಕ್ಸ್) v. t. deceive by way of jok- ತಮಾಷೆಗಾಗಿ ಠಕ್ಕಿಸು, ಮೋಸಹೋಗುವಂತೆ ಮಾಡು, ನಂಬಿಸಿ ವಂಚಿಸು.

Hob (ಹಾಬ್) n. a rustic. ಗ್ರಾಮವಾಸಿ.

Hob'ble (ಹಾಬಲ್) v. t. i. walk lamely, limp. ಕುಂಟು, ತಡವರಿಸು, ಕುಂಟಿಕೊಂಡು ನಡೆ, ತಡವರಿಸುತ್ತಾ ಮಾತನಾಡು.

Hobbledehoy (ಹಾಬ್‌ಲ್‌ಡಿಹಾಯ್) n. an awkward youth between boyhood and manhood. ನಯನಾಜೂಕಿಲ್ಲದ ತರುಣ.

Hobby (ಹಾಬಿ) n. a favourite pursuit outside one's main occupation. ಪ್ರೀತಿಯ ಅಗ್ಗಕಸಬು, ಹವ್ಯಾಸ, ಪ್ರೀತಿಯವ್ಯಾಸಂಗ, ಲಹರಿ, ಅಭಿರುಚಿ.

Hobnob (ಹಾಬ್ ನಾಬ್) vi. drink together. ಒಬ್ಬನ ಜೊತೆಯಲ್ಲಿ ಪಾನ ಮಾಡು, ಸಲಿಗೆಯಿಂದಿರು.

Hobbyhorse (ಹಾಬಿಹಾರ್ಸ್) n. wooden horse for children. ಮಕ್ಕಳ ಆಟದ ಮರದಕುದುರೆ.



Hobbyhorse

Hob'goblin (ಹಾಬ್‌ಗಾಬ್ಲಿನ್) n. elf, bogy. ಪಿಶಾಚಿ, ಭೂತ, ಗುಮ್ಮ, ದೆವ್ವ.

Hockey (ಹಾಕಿ) n. game with ball and curved sticks 'ಹಾಕಿ' ಎಂಬ ಚೆಂಡಾಟ.

Hockey - stick (ಹಾಕಿಸ್ಟಿಕ್) n. stick used in playing hocky. ಹಾಕಿಯನ್ನಾಡುವ ದಾಂಡು.



Hockey-stick

Hocus (ಹೋಕಸ್) vt. impose upon, cheat. ಮೇಲೆಹೊರಿಸು, ಮೋಸಮಾಡು.

Hoc us-pocus (ಹೋಕಸ್-ಪೋಕಸ್) n. juggler's trick. ಕಣ್ಕಟ್ಟು, ಯಕ್ಷಿಣಿ, ಮಂತ್ರಗಾಳಿ, ಮಾಯಮಂತ್ರ, ಮೋಸ, ಮಾಟಗಾರಿಕೆ

Hod (ಹಾಡ್) n. a trough for carrying mortar. ಗಾರೆಯನ್ನು ಹೊರುವುದಕ್ಕೆ ಉಪಯೋಗಿಸುವ ತೊಟ್ಟಿ

Hoe (ಹೋ) n. instrument for digging up weeds. ಸಲಿಕೆ, ಬಾಯಿಗುದ್ದಲಿ, ಕಳೆ ಗುದ್ದಲಿ.

Hog (ಹಾಗ್) n. swine, pig. ಹಂದಿ.

Hoggish (ಹಾಗಿಷ್) adj. like a hog, filthy. ಹಂದಿಯಂತೆ ಕೊಳಕು.

Hogs'head (ಹಾಗ್ಸ್‌ಹೆಡ್) n. large cask, a mea-ure. 52½ gallons. ದೊಡ್ಡ ಪೀಪಾಯಿ, ೫೨½ ಗ್ಯಾಲನ್ನುಗಳು.

Hoiden (ಹಾಯ್ಡನ್) n. rude, bold girl, romp. ದಿಟ್ಟೆಯಾದ ಬಾಲೆ.

Hoist (ಹಾಇಸ್ಟ್) v. t. raise aloft, raise with tackle, &c. ಏರಿಸು, ಆರೋಪಿಸು, ಹಾರಿಸು.

Hoity-toity (ಹಾಇಟ್ಟಿ ಟಾಇಟ್ಟಿ) a. frolicksome, haughty. ಉಲ್ಲಾಸವುಳ್ಳ, ಅಹಂಕಾರಯುಕ್ತ.

Hold (ಹೋಲ್ಡ್) v. t. i. grasp, possess, contain, observe, celebrate, restrain, believe ಹಿಡಿ, ಹಿಡಿದುಕೊ, ಪಡೆದಿರು, ಸ್ವಾಧೀನದಲ್ಲಿಟ್ಟುಕೊಂಡಿರು, ನೆರವೇರಿಸು, ಕೂಡಿಸು, ಸಮಾವೇಶವಾಗು, ಉತ್ಸವ ನಡಸು, ಒಳಕೊಳ್ಳು, ಜಗ್ಗದಿರು, ಸೇರಿಸು, ಪ್ರತಿಪಾದಿಸು n. grasp, means of holding, place of custody, fortified place. ಹಿಡಿತ, ಹಿಡಿದುಕೊಳ್ಳುವ ಸಾಧನ, ನಿರ್ಬಂಧ, ಸೆರೆ, ಬಂಧನ, ಕೋಟೆ. h. out, resist, present. ಗಟ್ಟಿನಿಲ್ಲು, ಹಿಂಜರಿಯದಿರು, ಆಶೆತೋರಿಸು, ಕೊಡುವೆನೆನ್ನು, h. down, keep down. ತಗ್ಗಿಸು ; ಅಡಗಿಸು, h. by, support. ಬೆಂಬಲಕೊಡು. h. on to last, continue. ಮುಂದುವರಿ, ಮುಂದೆಸಾಗು. h. fast. adhere to firmly. ಬಿಗಿಯಾಗಿ ಅಂಟಿಕೊಳ್ಳು; ಗಟ್ಟಿಯಾಗಿ ಹಿಡಿದುಕೋ h. good ; be valid. ಅನ್ವಯಿಸು, ನ್ಯಾಯಸಮ್ಮತವಾಗು. h. one's own. contend successfully. ಜಯಪ್ರದವಾಗಿ ಹೋರಾಡು. h. in check, control. ಸ್ವಾಧೀನದಲ್ಲಿ ಇಡು, ಹತೋಟಿಯಲ್ಲಿಡು, lay. h. of; seize. ಹಿಡಿದುಕೊ.

Hold'ing (ಹೋಲ್ಡಿಂಗ್) n. anything held ; tenure of land. ಗೇಣಿ, ಗೇಣಿಯ ಆಸ್ತಿ, ಬಾಡಿಗೆ ಜಾಗ, ಹಿಡುವಳಿಯ ಜಮೀನು, ಹಿಡುವಳಿ.

Hole (ಹೋಲ್) n. hollow place, gap. ಕಂಡಿ, ಡೊಗರು, ಗುಂಡಿ, ಬಿಲ, ವೆಜ್ಜ, ತೂತು. h. & corner, secret. ಗುಪ್ತ, ರಹಸ್ಯ. in a h. in difficult position. ಕಷ್ಟದಲ್ಲಿ, ತೊಂದರೆಯಲ್ಲಿ.

Hol'iday (ಹಾಲಿಡೆ) n. day of cessation from work or of recreat ರಜಾದಿನ, ವಿಶ್ರಾಂತಿದಿನ, ಸೂಟಿ, ಬಿಡ

Hollow (ಹಾಲೋ) a. having a h empty, false, unreal. ಪೊಳ್ಳು, ತ ಳಿಲ್ಲದ, ಪೊಳ್ಳಾದ, ಟೊಳ್ಳಾದ, ಬರಿದ n. hollow place, hole, vall ಕಪಟದ, ಸುಳ್ಳಿನ. ಟೊಳ್ಳು, ಪೊಳ್ಳು, ತ ಹಳ್ಳ, ತಗ್ಗುಪ್ರದೇಶ, ಪೊಟರೆ, ರಂ ಕಣಿವೆ. beat h. defeat complete ಪೂರ್ಣವಾಗಿ ಸೋಲಿಸು.

Hollow-ware (ಹಾಲೊವೇರ್) trade name for such articles kettles, cauldrons, etc. ಕಡಾ ಕೊಪ್ಪರಿಗೆ, ಹಂಡೆ ಮುಂತಾದುವು ವ್ಯಾಪಾರನಾಮ.

Holly (ಹಾಲಿ) n. an ever-green shrub with thorny leaves and scarlet berries. ಮುಳ್ಳುಮುಳ್ಳಾದ ಎಲೆಗಳುಳ್ಳ, ಕೆಂಪುಕಾಯಿಗಳುಳ್ಳ ಒಂ ಜಾತಿಯ ಸಸ್ಯ.



Holly

Holm (ಹೋಮ್) n. an islet in river. ನದಿಯ ಚಿಕ್ಕ ದ್ವೀಪ.

Hol'ocaust (ಹಾಲೊಕಾಸ್ಟ್) n. who burnt offering, (fig) wholesa sacrifice or destruction. ಪೂರ್ಣಾ ಹುತಿ ಬಲಿ, ಯಜ್ಞ, ಕೊಲೆ, ಸರ್ವನಾ ಪ್ರಳಯ.

Holster (ಹೋಲ್ಸ್ಟರ್) n. leather ca for a pistol. ಪಿಸ್ತೂಲಿನ ಚರ್ಮ ಚೀಲ.

Hol'y (ಹೋಲಿ) a. belonging or de voted to god, religious ; pure i heart. ಪವಿತ್ರ, ಪೂಜ್ಯ, ಪಾವನ, ಪ ಶುದ್ಧವಾದ, ಸದ್ಧರ್ಮಶೀಲ, ಅಂತ ಶುದ್ಧಿಯುಳ್ಳ.

Hom'age (ಹಾಮೆಜ್) n. forma acknowledgment of allegianc (fig) tribute paid to person o

merit. ಸೇವೆ, ಗೌರವಾರ್ಜನ, ಕರ್ತವ್ಯ, ಮರ್ಯಾದೆ, ಸತ್ಕಾರ, ಸನ್ಮಾನ.

ome(ಹೋಮ್) n. dwelling place, native land. ಮನೆ, ಬೀಡು, ವಾಸಸ್ಥಾನ, ಗೃಹ, ತಾಯಿನಾಡು, ಜನ್ಮಭೂಮಿ, ಸ್ವಂತ ಮನೆ, ಸ್ವದೇಶ. at h. familiar ಪರಿಚಯವುಳ್ಳ ಸಲಿಗೆಯುಳ್ಳ.

ome-bred (ಹೋಮ್ ಬ್ರೆಡ್) a. domestic, native. ಮನೆಯ, ನಾಡಿನ.

ome'ly (ಹೋಮ್ಲಿ) a. plain, unpretending. ಸಾಧಾರಣ, ಸಾಮಾನ್ಯ, ಅನಾಡಂಬರದ, ನಿಗರ್ವಿ, ಸರಳ.

ome'ward(s) (ಹೋಮ್‌ವರ್ಡ್-ಜ್) a. & adv. towards home r one's native land ಮನೆಯ ಕಡೆಯ. ಗೃಹಾಭಿಮುಖವಾಗಿ, ಅಥವಾ ದೇಶದ ಕಡೆ.

omicide (ಹೋಮಿಸೈಡ್) n. killing or killer of human being. ನರಹತ್ಯೆ, ಮನುಷ್ಯ ಘಾತಕ, ನರಘಾತುಕ.

omilist (ಹೋಮಿಲಿಸ್ಟ್) n. person given to writing or preaching homilies. ಧಾರ್ಮಿಕ ಉಪದೇಶಾತ್ಮಕ ಭಾಷಣಗಳನ್ನು ಬರೆಯುವವನು ಅಥವಾ ಕೊಡುವವನು.

om'ily(ಹಾಮಿಲಿ) n. sermon, discourse. ಧಾರ್ಮಿಕ ಉಪದೇಶ, ಧರ್ಮೋಪದೇಶ ಭಾಷಣ, ಧರ್ಮಶ್ರವಣ.

ominy (ಹಾಮಿನಿ) n. maize hulled and boiled in water. ಮುಸುಕಿನ ಜೋಳದ ಅಂಬಲಿ.

omoeop'athy (ಹಾಮಿಯೋಪಥಿ) n. system of during disease by small quantities of those drugs which excite symptoms similar to those of disease. ಚಿಕಿತ್ಸಾ ವಿಶೇಷ, ಹೋಮಿಯೋಪತಿ ಚಿಕಿತ್ಸೆ, ಸದೃಶಕ್ರಿಯಾ ಚಿಕಿತ್ಸೆ.

Homologate (ಹೊಮೊಲಗೇಟ್) vt. satisfy, approve. ಒಪ್ಪು, ಸ್ವೀಕೃತಿ ಕೊಡು.

Homologous (ಹೊಮಾಲೊಗಸ್) adj. corresponding. ಅನುರೂಪವಾದ.

Homogen'eous(ಹಾಮೊಜೀನಿಅಸ್) a. of the same kind or nature. ಒಂದೇ ಬಗೆಯ, ಸಮರೂಪದ, ಸಜಾತೀಯ.

Hom'onym (ಹಾಮೊನಿಂ) n. word of same form as another but different sense, namesake ಸಮಾನ ರೂಪದ, ಆದರೆ ಭಿನ್ನಾರ್ಥವುಳ್ಳ ಪದ, ಭಿನ್ನಾರ್ಥಪದ, ನಾನಾರ್ಥ ಶಬ್ದ.

Homonymic (ಹಾಮೋನಿಮಿಕ್) adj. having the same pronunciation. ಸಮ ಉಚ್ಚಾರಣೆಯುಳ್ಳ ಪದಗಳಿಗೆ ಸಂಬಂಧಿಸಿದ.

Hone (ಹೋನ್) n. whet stone esp. for razor. ಮಸೆಗಲ್ಲು, ಸಾಣೆಕಲ್ಲು

Hon'est (ಆನೆಸ್ಟ್) a. just, frank, free from fraud. ಪ್ರಾಮಾಣಿಕತೆಯುಳ್ಳ, ನಿಷ್ಕಪಟ, ನ್ಯಾಯಪರವಾದ, ಕೃತ್ರಿಮವಲ್ಲದ, ವಂಚನೆಯಿಲ್ಲದ, ಸತ್ಯವಂತ, ಮೋಸವಿಲ್ಲದ.

Honestly (ಆನೆಸ್ಟ್ಲಿ) in an honest manner, frankly. ಪ್ರಾಮಾಣಿಕತನದಿಂದ, ಸತ್ಯವಾಗಿ.

Hon'esty (ಆನೆಸ್ಟಿ) n. integrity. ಪ್ರಾಮಾಣಿಕತನ, ಸತ್ಯಸಂಧತೆ.

Ho'ney(ಹನಿ) n. sweet fluid collected by bees from flowers, &c., sweetness ಜೇನುತುಪ್ಪ, ಮಧು, ಮಕರಂದ, ಮಾಧುರ್ಯ, ಸಿಹಿ, ಮುದ್ದು.

Ho'neycomb (ಹನಿಕೋಮ್) n. mass of waxy hexagonal cells formed by bees in which bees store their honey. ಜೇನುಹುಟ್ಟು, ಜೇನುಗೂಡು.



Honeycomb

Ho'neymoon (ಹನಿಮೂನ್) n. first month after marriage ಮಧುಮಾಸ, ಆನಂದಮಾಸ, ನಿಷೇಕಋತು.

Honorar'ium(ಆನರೇರಿಅಮ್) n. fee for services. ಪ್ರತಿಫಲದ ಹಣ, ಪಾರಿತೋಷಕ, ಗೌರವ ಸಂಭಾವನೆ.

Hon'orary (ಆನೊರರಿ) a conferred by way of honour, unpaid. ಬಹುಮಾನಾರ್ಥ, ಗೌರವಾರ್ಥಕ, ಸಂಬಳವಿಲ್ಲದ, ಬಿಟ್ಟಿ, ಅವೈತನಿಕ.

Honorific (ಆನೊರಿಫಿಕ್) a. implying respect. ಬಹುಮಾನದ, ಗೌರವಾರ್ಥದ, ಗೌರವಸೂಚಕ.

Hon'our (ಆನರ್) n. glory, high reputation, chastity, mark of respect, (plu.) distinction for proficiency in examination. ಘನತೆ, ಮನ್ನಣೆ, ಮಾನ್ಯತೆ, ಪಾತಿವ್ರತ್ಯ, ಯಶಸ್ಸು, ಘನಪಾಂಡಿತ್ಯ, ಕೀರ್ತಿ, ಗೌರವ, ಮರ್ಯಾದೆ, (ಬ ವ.) ವಿದ್ಯಾಭ್ಯಾಸದಲ್ಲಿ ಹೊಂದುವ ನೈಪುಣ್ಯದ ಗೌರವ. v. t. respect, adore, exult, accept or pay bill when due. ಸನ್ಮಾನಿಸು, ಗೌರವಿಸು, ಬಿರುದುಕೊಡು, ಹುಂಡಿಹಣ ಸಲ್ಲಿಸು. on one's own h., on the pledge of one's own words. ಮಾತಿನ ಪ್ರಮಾಣದಿಂದ.

Hon'ourable (ಆನರಬ್‌ಲ್) a. worthy of honour, good principled. ಮಾನಯೋಗ್ಯ, ಗೌರವಾರ್ಹ, ಕೀರ್ತಿತರುವ, ಪ್ರಾಮಾಣಿಕತೆಯ, ಮಾನ್ಯ, ಮಾನನೀಯ.

Hood (ಹುಡ್) n. covering for head & neck, badge worn over gown to show university degree ಶಿವಿಟೋಪಿ, ಗೊಪ್ಪೆ, ಕುಂಚಿಗೆ, ಗೊಂಗಡಿ, ಪದವೀಧರರ ನಿಲುವಂಗಿಯ ಹಿಂದುಗಡೆ ಶೋಭಾಯಮಾನವಾಗಿರುವ ಲಾಂಛನ ವಸ್ತ್ರ, ಪದವಿಸೂಚಕ ಲಾಂಛನ, "ಹುಡ್".

Hooded (ಹುಡೆಡ್) a. covered with a hood. ಮುಸುಕುಳ್ಳ, ಹೆಡೆಯುಳ್ಳ.

Hood'wink (ಹುಡ್ವಿಂಕ್) vt. deceive, humbug. ಕಣ್ಮರೆಸು, ವಂಚಿಸು, ಕಣ್ಣಿಗೆ ಮಣ್ಣೆರಚು, ಮೋಸಮಾಡು.

Hoof (ಹೂಫ್) n. horny substance on the feet of certain animals as horses &c. ಗೊರಸು, ಕೊಳಗ, ಖುರ.



Hoof

Hook (ಹುಕ್) n. bent metal, sickle. ಕೊಕ್ಕೆ, ಗಾಳ, ಕುಣಿಕೆ, ಕೊಂಡಿ, ಕುಡುಗೋಲು. v. catch with hook. ಕೊಂಡಿಯಲ್ಲಿ ಹಿಡಿ. by h. or crook some how, anyhow. ಹೇಗಾದರೂ on one's own h., on one's own responsibility. ಸ್ವಂತ ಜವಾಬ್ದಾ ಯಲ್ಲಿ.



Hooks

Hookah (ಹುಕ್ಕಾ) n. an eastern tobacco pipe with a large bowl and long tube by which the smoke is drawn through water. ಹುಕ್ಕಾ.



Hookah

Hool'igan (ಹೂಲಿಗನ್) n. one of a gang of street roughs addicte to crimes. ಬೀದಿಯ ತರುಣ, ಪುಂಡ ತಂಡದವನು, ಪುಂಡ, ಪೋಕರಿ.

Hoop (ಹೂಪ್) n. pliant strip o wood or metal formed into a ring, the cry 'hoop' ಸೀಪಾಯ ಕಟ್ಟು, ಮರ ಅಥವಾ ಕಬ್ಬಿಣದ ಬಳೆ. "ಹುಯ್" ಧ್ವನಿ, "ಹೂಪ್" ಎಂದು ಕೂಗು.

Hooping-cough (ಹೂಪಿಂಗ್‌ಕಾಫ್) n. disease with convulsive cough. ಗೋಡಿಗೆಕೆಮ್ಮು, ನಾಯಿಕೆಮ್ಮು.

Hoopoe (ಹೂಪೊ) n. beautiful bird with a crest. ಶಿಖೆಯುಳ್ಳ ಸುಂದರ ಪಕ್ಷಿ ವಿಶೇಷ.

Hoot (ಹೂಟ್) v. t. i. & n. shout in contempt, cry like an owl. ಹುಯಿಲೆಬ್ಬಿಸು, ಗುಲ್ಲುಮಾಡು. ತಿರಸ್ಕಾರದ ಕೂಗುಗಳಿಂದ ಕಾಡಿಸು, ಹೀಯಾಳಿಸು, ಗೂಬೆಯಂತೆ ಕೂಗು, ಘೂತ್ಕಾರ, (ನಾ) ಧಿಕ್ಕಾರ, ಗೂಬೆಯ ಕೂಗು, ಘೂತ್ಕಾರ ಮಾಡು.

ooter(ಹೂಟರ್)n.one who hoots, a steam whistle. ಆವಿಯ ಸಹಾಯದಿಂದ ಸಿಳ್ಳು ಹೊಡೆಯುವ ಯಂತ್ರ.

op(ಹಾಪ್)v. i. & n. leap on one leg. spring. ಕುಂಟು, ಎಗರು, ಒಂಟಿ ಕಾಲಿನಲ್ಲಿ ನೆಗೆ, ನೆಗೆದುಹಾರು, ಕುಂಟೆನಡೆ, ಕುಪ್ಪಳಿಸು.

Hope (ಹೋಪ್) v. i. & n. desire with expectation. ಆಶಿಸು, ಹಾರೈಸು, ನಿರೀಕ್ಷಿಸು, ನಂಬು,(ನಾ) ನಿರೀಕ್ಷೆ, ನಂಬಿಕೆ, ಭರವಸೆ,ಹಾರೈಕೆ.h. against, h. hoping even when the case seems hopeless ನಿರಾಶೆಯ ಸ್ಥಿತಿಯಲ್ಲಿಯೂ ಆಶಾಪೂರ್ಣನಾಗಿರು.

Hope'ful (ಹೋಪ್ ಫುಲ್)n. containing hope. ಆಶಾಜನಕ, ನಂಬಬಹುದಾದ, ಆಶಾಸ್ಪದವುಳ್ಳ.

Hopeless (ಹೋಪ್ಲೆಸ್) a. devoid of hope. ಆಶಾರಹಿತವಾದ.

Hopper(ಹಾಪರ್) n. one who hops. ನೆಗೆಯುವವನು.

Hopple (ಹಾಪ್ ಲ್) vt. tie together legs of a horse. ಕುದುರೆಯ ಕಾಲುಗಳನ್ನು ಸೇರಿಸಿ ಕಟ್ಟು.

Horary (ಹೋರರಿ) adj. hourly, occurring every hour. ಗಂಟೆಗಳ, ಪ್ರತಿ ಗಂಟೆಗೂ ಸಂಭವಿಸುವ.

Horde (ಹೋರ್ಡ್) n. wandering tribe. ತಂಡ, ಗುಂಪು, ಮಂದೆ, ಜಂಗುಳಿ.

Hori'zon(ಹೊರೈಝನ್)n. line where earth and sky appear to meet. ದಿಗಂತ, ಕ್ಷಿತಿಜ, ಅಂಬರಾಂತ, ಬಾನಂಚು.

Horizon'tal (ಹಾರಿಝಾಂಟಲ್) a. level, parallel to the horizon. ದಿಗಂತಸಮ, ಸಮತಟ್ಟಾದ, ದಿಗಂತದ, ಸಮತಲವಾಗಿರುವ, ಮಟ್ಟವಾಗಿರುವ, ಸಮಮಟ್ಟದ.

Hormone (ಹಾರ್ಮೋನ್)n. kind of chemical secretion from certain glands of the body. ಪುಷ್ಟಿಕಾರಕ ತತ್ವಗಳು.

Horn (ಹಾರ್ನ್) n. curved and pointed excrescence on head of cattle,&c., wind instrument. ಕೋಡು, ಕೊಂಬು, ಶೃಂಗ, ಕಹಳೆ.



Horns

Hornbill (ಹಾರ್ನ್‌ಬಿಲ್) n. bird with a hornlike projection on the bill. ಕೊಕ್ಕಿನ ಮೇಲೆ ಕೊಂಬಿನಂತೆ ಚಾಚು ಉಳ್ಳ ಒಂದು ಪಕ್ಷಿವಿಶೇಷ.



Hornbill

Horned (ಹಾರ್ನ್ಡ್) a. furnished with horns. ಕೊಂಬುಗಳುಳ್ಳ, ಕೋಡುಳ್ಳ.

Horn'et(ಹಾರ್ನಿಟ್) n. large species of wasp. ಕಣಜೀರಿಗೆ, ದೊಡ್ಡ ಕಣಜ, ದೊಡ್ಡ ಹಾರುಹುಳು, ಹೆದ್ದುಂಬಿ.

Hornless(ಹಾರ್ನ್ಲೆಸ್) adj. having no horns. ಶೃಂಗರಹಿತ.

Horologe (ಹಾರೊಲಾಜ್) n. timepiece or clock. ಗಡಿಯಾರ.

Horological (ಹಾರೊಲಾಜಿಕಲ್) a. pertaining to watch or clock. ಗಡಿಯಾರಕ್ಕೆ ಸಂಬಂಧಿಸಿದ.

Horology (ಹಾರೋಲಜಿ) n. science of measuring time. ಕಾಲನಿರ್ಣಯ ಶಾಸ್ತ್ರ.

Ho'roscope(ಹಾರೊಸ್ಕೋಪ್) n. position of stars at certain moment, esp. one's birth. ಜಾತಕ, ಗ್ರಹಕುಂಡಲಿ, ಜನ್ಮಪತ್ರಿಕೆ.

Hor'rible(ಹಾರಿಬ್ಲ್)a. dreadful, awful, terrific. ಭಯಂಕರ, ಘೋರ, ಭಯಹುಟ್ಟಿಸುವ, ಭೀಕರ, ಉಗ್ರ, ಭೀಷಣ.

Ho'rrid (ಹಾರಿಡ್) n. horrible, unpleasing ಭಯಾನಕ, ಘೋರ, ಭಯಂಕರ, ಭೀಕರ.

Horridly (ಹಾರಿಡ್ಲಿ) adv. in a horrid way, dreadfully. ಭೀಕರವಾಗಿ, ಭಯಾನಕ ರೀತಿಯಲ್ಲಿ.

Ho'rrify (ಹಾರಿಫೈ) vt. excite horror in, shock. ಹೆದರಿಸು, ಗಾಬರಿಪಡಿಸು, ದಿಗಿಲುಗೊಳಿಸು.

Ho'rror (ಹಾರರ್) n. terror; excessive fear. ಭಯ, ದಿಗಿಲು, ನಡುಕ, ಗಾಬರಿ, ಅತ್ಯಂತಭೀತಿ, ಧ ಧಂಕೆ, ಭೀತಿ.

Horse (ಹಾರ್ಸ್) n. solid hoofed qadruped with flowing tail and mane; (collect) cavalry ಕುದುರೆ, ಕುದುರೆಪಡೆ, ಅಶ್ವ, ಅಶ್ವಸೈನ್ಯ, ಕುದುರೆ ಪಡೆ

Horse'artillery (ಹಾರ್ಸ್ ಆರ್ಟಿಲರಿ) n. artillery of mounted gunners ಕುದುರೆಯ ಮೇಲಿನ ತೋಪುಖಾನೆ, ಕುದುರೆ ಗೋಲಂದಾಜ (ಸೈನ್ಯ)

Horse'man (ಹಾರ್ಸ್‌ಮನ್) n. a rider on horseback. ಕುದುರೆ ಸವಾರ, ರಾವುತ.

Horsemanship (ಹಾರ್ಸ್‌ಮನ್‌ಶಿಪ್) n, act of riding and managing horses ಕುದುರೆಸವಾರಿ ಮತ್ತು ಅಶ್ವಪಾಲನೆಯ ತಿಳುವಳಿಕೆ

Hort'ative (ಹಾರ್ಟೆಟಿವ್) a. of exhortation. ಬುದ್ಧಿವಾದ ಹೇಳುವ, ಉತ್ತೇಜನಕೊಡುವ, ಹುರಿದುಂಬಿಸುವ, ಪ್ರೇರಕ.

Hort'iculture (ಹಾರ್ಟಿಕಲ್ಚರ್) n. art of cultivating gardens. ಉದ್ಯಾನ ಕೃಷಿ. ತೋಟಗಾರಿಕೆ, ತೋಟದಕೃಷಿ.

Hose (ಹೋಝ್) n. stockings flexible tube to watering plants &c. ಕಾಲು ಚೀಲ, ರಬ್ಬರಿನ ನೀರು ನಳಿಗೆ.



Hose

Hoser (ಹೋಝರ್) n. dealer in hose, &c. ಕಾಲುಚೀಲ ಮಾಡುವವ, ಮಾರುವವ.

Hosiery (ಹೋಜಿಯರಿ) n. goods of a hosier, underclothing in general. ಕಾಲುಚೀಲ, ಒಳಗಿನ ಉಡುಪು ಮುಂತಾದವು.

Hospice (ಹಾಸ್ಪಿಸ್) n. home fo the sick. ವಿಶ್ರಾಂತಿಗೃಹ.

Hos'pitable (ಹಾಸ್ಪಿಟಬ್‌ಲ್) n generous, bountiful. ಅತಿಥಿ ಸತ್ಕಾ ಮಾಡುವ, ಬಂದವರನ್ನು ಆದರಿಸುವ ಉದಾರ.

Hos'pital (ಹಾಸ್ಪಿಟಲ್) n. house fo sick &c. ವೈದ್ಯಶಾಲೆ, ರುಗ್ಣಾಲಯ, ಆಸ್ಪತ್ರೆ, ದವಾಖಾನೆ.

Hospital'ity (ಹಾಸ್ಪಿಟಾಲಿಟಿ) n friendly reception of guests o strangers. ಅತಿಥಿಗಳ ಆದರ ಸತ್ಕಾರ, ಅತಿಥಿ ಸತ್ಕಾರ.

Host (ಹೋಸ್ಟ್) n. one who entertains another, landlord; army ಆತಿಥ್ಯ ಮಾಡುವವ, ಸತ್ಕಾರ ಮಾಡುವವ, ಆತಿಥೇಯ, ಮನೆ ಯಜಮಾನ, ದೊಡ್ಡ ಗುಂಪು, ಸಮೂಹ, ದಂಡು, ಸೈನ್ಯ. fem. hostess. ಆತಿಥ್ಯಕಾರಿಣಿ.

Hos'tage (ಹಾಸ್ಟೇಜ್) n. person or thing given as pledge. ಹೊಣೆ, [illegible], ಒತ್ತೆ, ಒತ್ತೆಯಾಳು, ಜಾಮೀನು, ಒತ್ತೆಯಾದವನು.

Hos'tel (ಹಾಸ್ಟೆಲ್) n. house or residence for students, &c. ವಿದ್ಯಾರ್ಥಿ ವಸತಿಗೃಹ, ವಿದ್ಯಾರ್ಥಿಭವನ, ವಿದ್ಯಾರ್ಥಿ ನಿಲಯ.

Hos'telry (ಹಾಸ್ಟಲ್ರಿ) n. an inn. ಛತ್ರ, ಭೋಜನಾಲಯ, ಊಟವಸತಿ ಮನೆ.

Hostess (ಹೋಸ್ಟೆಸ್) n. a female host ಅತಿಥಿ ಸತ್ಕಾರಮಾಡುವ ಮನೆಯ ಯಜಮಾನಿ.

Hos tile (ಹಾಸ್ಟೈಲ್) a. of an enemy, opposed ಹಗೆಯುಳ್ಳ, ವಿರುದ್ಧ, ವೈರಿ, ಪ್ರತಿಪಕ್ಷದ, ಆಗದ, ಶತ್ರುತ್ವದ.

Hostility (ಹಾಸ್ಟಿಲಿಟಿ) n enmity, warfare. ಶತ್ರುತ್ವ, ವಿರೋಧ, ಹಗೆತನ, ವೈರ, ದ್ವೇಷ, ಕಾದಾಟ.

Hostler (ಹಾಸ್ಲರ್)n. person who has the care of horses at an inn. ಛತ್ರದಲ್ಲಿ ಕುದುರೆಯನ್ನು ನೋಡಿಕೊಳ್ಳುವವನು.

Hot (ಹಾಟ್) a. very warm, fiery; ardent in temper, vehement, passionate, lustful. ಬಹಳ ಬಿಸಿಯಾದ, ಸುಡುವ, ಕೋಪದ, ಕೆರಳಿದ, ಉದ್ರೇಕಗೊಂಡ, ಕಾಮುಕನಾದ, ಸಿಟ್ಟಿನ, ಉತ್ಸಾಹವುಳ್ಳ. in h water, in trouble. ತೊಂದರೆಯಲ್ಲಿರುವ.

Hotchpot(ಹಾಚ್‌ಪಾಟ್) n. mixture of ingredients. ಕಲಸುಮೇಲೋಗರ.

Hotch'potch (ಹಾಚ್‌ಪಾಚ್) n. dish of many ingredients, medlery. ಕಲಬೆರಿಕೆ, ಕಲಸುಮೇಲೋಗರ.

Hotel (ಹೋಟೆಲ್) n. home for travellers, large inn. ಭೋಜನಶಾಲೆ, ಭೋಜನಗೃಹ, ಖಾನಾವಳಿ, ಹೋಟೆಲು.

Hotheaded (ಹಾಟ್‌ಹೆಡೆಡ್) a. of ardent passions, vehement, violent. ಬೇಗ ಉದ್ರೇಕಗೊಳ್ಳುವ, ದುಡುಕು ಸ್ವಭಾವದ.

Hottentot (ಹಾಟ್‌ನ್‌ಟಾಟ್) n. one of a native race of South Africa. ದಕ್ಷಿಣಆಫ್ರಿಕಾದಒಂದುಜಾತಿಗೆ ಸೇರಿದವನು.

Hound (ಹೌಂಡ್) a. dog used for hunting, a cur. ಬೇಟೆನಾಯಿ, ತುಚ್ಛ ಮನುಷ್ಯ, ಅಲ್ಪಮನುಷ್ಯ.

Hour(ಅವರ್) n. 60 minutes. ತಾಸು, ೧ ಗಂಟೆ,೬೦ ನಿಮಿಷಗಳಕಾಲ the small hs, the morning hours after midnight. ಬೆಳಗಿನ ಜಾವ, ಬ್ರಾಹ್ಮೀ ಮುಹೂರ್ತ.

Hourglass (ಅವರ್‌ಗ್ಲಾಸ್) n. glass for measuring time. ಕಾಲವನ್ನು ಅಳೆಯುವ ಒಂದು ಪಾತ್ರೆ.

Hourglass

Houri (ಹೌರಿ) n. a nymph. ಅಪ್ಸರೆ, ಅತ್ಯಂತ ಸುಂದರಿಯಾದವಳು.

Hour'ly (ಅವರ್ಲಿ)adv. frequently, every hour. ಮೇಲಿಂದ ಮೇಲೆ, ಪ್ರತಿ ಗಂಟೆಯಲ್ಲೂ, ಸಂತತವಾಗಿ, ಪದೇ ಪದೇ, ಗಂಟೆಗೆ ೧ ಸಲ.

House (ಹೌಸ್) n. dwelling place, family, firm. ಮನೆ, ಕುಟುಂಬ, ಸಂಸಾರ, ವ್ಯಾಪಾರ ಸಂಸ್ಥೆ, ವ್ಯಾಪಾರದ ಕಟ್ಟೆ.

Houseboat (ಹೌಸ್‌ಬೋಟ್) n. a river-boat supporting a house. ಮನೆಗೆ ಆಧಾರವಾಗಿರುವ ನದಿಯ ದೋಣಿ.

House'breaker (ಹೌಸ್‌ಬ್ರೇಕರ್) n. burglar. ಕನ್ನಗಳ್ಳ, ಹಗಲುಗಳ್ಳ.

House'hold (ಹೌಸ್‌ಹೋಲ್ಡ್) n. domestic establishment, inmates of a house. ಮನೆಯವರು, ಮನೆಯ ಸಿಬ್ಬಂದಿ, ಕುಟುಂಬ.

Householder (ಹೌಸ್‌ಹೋಲ್ಡರ್) n. chief of a household. ಮನೆಯ ಯಜಮಾನ.

House'maid(ಹೌಸ್‌ಮೇಡ್)n. maid servant in charge of room cleaning, &c. ಕೆಲಸಗಿತ್ತಿ, ಮನೆ ಕೆಲಸದವಳು.

Housesurgeon (ಹೌಸ್‌ಸರ್ಜನ್) n. resident medical officer in a hospital. ಆಸ್ಪತ್ರೆಯಲ್ಲಿಯೇ ವಾಸಿಸುವ ಡಾಕ್ಟರು.

House'wife (ಹೌಸ್‌ವೈಫ್) n. mistress of the house, case for sewing requisites. ಮನೆಯ ಗೃಹಿಣಿ, ಯಜಮಾನಿ. ಹೊಲಿಯುವ ಉಪಕರಣಗಳ ಪೆಟ್ಟಿಗೆ, ಹೊಲಿಗೆ ಪೆಟ್ಟಿಗೆ.

Hou'sing (ಹೌ ಜಿಂ ಗ್) n. horse cloth. ಕುದುರೆಯ ಹೊದಿಕೆಯ ಬಟ್ಟೆ.

Hov'el(ಹಾವೆಲ್)n. shed; outhouse; mean dwelling. ಕುಟೀರ, ಹೊರಮನೆ, ಸಣ್ಣ ಗುಡಿಸಲು, ಜೋಪಡಿ.

Hov'er(ಹಾವರ್) v. i. remain aloft flapping the wings, loiter about. ಸುಳಿದಾಡುತ್ತಿರು, ಅಡ್ಡಾಡುತ್ತಿರು, ಸುಳಿ, ಹಾರಾಡು, ಸುತ್ತುತ್ತಿರು.

How (ಹೌ) adv. in what manner. ಹೇಗೆ, ಯಾವ ರೀತಿಯಲ್ಲಿ.

Howbe'it (ಹೌ ಬೀ ಟ್) adv. notwithstanding, yet. ಆದಾಗ್ಯೂ.

Howdah (ಹೌದಾ) n. seat on an elephant's back. ಆನೆಯ ಬೆನ್ನಿನ ಮೇಲಿಡುವ ಪೀಠ, ಹೌದ.



Howdah

Howev'er (ಹೌಎವರ್) adv. in whatever manner, at all events. ಹೇಗಾದರೂ, ಹ್ಯಾಗಿದ್ದರೂ, ಎಷ್ಟಾದರೂ, ಏನೇ ಆದರೂ.

Howitzer (ಹೌಇಟ್ಸರ್) n. kind of short gun ಒಂದು ಬಗೆಯ ಸಣ್ಣ ಫಿರಂಗಿ.

Howl (ಹೌಲ್) v. i. t. yell or cry as a wolf or dog, roar ಒದರು, ಗರ್ಜಿಸು, ಅರಚಿಕೊ, ಕಿರಿಚಿಕೊ, ಬೊಬ್ಬೆಯಿಡು.

Howler (ಹೌಲರ್) n. one who howls; a glaring blunder. ಅರಚುವವನು, ಸ್ಪಷ್ಟವಾದ ತಪ್ಪು.

Hoy (ಹಾಯ್) n. a kind of small boat ಸಣ್ಣ ದೋಣಿ.

Hoyden (ಹಾಯ್ಡನ್) n. a boisterous woman ಉದ್ದಂಡಳಾದ ಹೆಂಗಸು, ಮರ್ಯಾದೆಯಿಲ್ಲದ ಸ್ತ್ರೀ.

Hub (ಹಬ್) n. projecting nave of a wheel. ಗಾಲಿಯ ಮಧ್ಯಭಾಗ, ನಾಭಿ.

Hubb'ub (ಹಬಬ್) n. din, uproar. ಕಲಹ, ಗುಲ್ಲು, ಕಲಕಲ, ಕೋಲಾಹಲ.

Hubby (ಹಬಿ) n. husband (slang). ಗಂಡ.

Hubris (ಹ್ಯೂಬ್ರಿಸ್) n. insolent pride. ಮದ, ದುರಹಂಕಾರ.

Huckle (ಹಕ್‌ಲ್) n. the hip, hunch. ಟೊಂಕ.

Hud'dle (ಹಡ್‌ಲ್) v. t. i. heap crowd put up things confusedly. ಅವ್ಯವಸ್ಥೆಯಾಗಿ ರಾಶಿಹಾಕು. ಅಡ್ಡಾದಿಡ್ಡಿಯಾಗಿ ಸೇರಿಸು, ಗುಡ್ಡೆಹಾಕು, ಸಂದಣಿಯಾಗಿರು.

Hue (ಹ್ಯೂ) n. colour, dye, outcry. ಬಣ್ಣ, ವರ್ಣ, ಛಾಯೆ, ಕೂಗಾಟ, ಗಲಭೆ, ಗಲಾಟೆ, ಬೊಬ್ಬೆ, ಗದ್ದಲ. h. & cry, clamour in pursuit of offender. ಅಪರಾಧಿಯನ್ನು ಹಿಡಿಯುವ ಗದ್ದಲ, ಗಲಾಟೆ, ಗೌಜಿ.

Huff (ಹಫ್) v. t & i. offend, bully. ಪೀಡಿಸು, ಅವಮಾನಮಾಡು.

Hug (ಹಗ್) v. t. close embrace, grip, cling to. ಅಪ್ಪಿಕೊ, ತಬ್ಬಿಕೊ, ಎದೆಗವಚಿಕೊ, ಅವುಚಿಕೊಳ್ಳು, ತಕ್ಕೈಸು, ಆಲಿಂಗಿಸು.

Huge (ಹ್ಯೂಜ್) a. enormous, very larg ಬಹುದೊಡ್ಡ, ಭಾರೀ, ಮಹಾ, ಅಗಾಧವಾದ.

Hugeness (ಹ್ಯೂಜ್‌ನೆಸ್) n. enormity, largeness. ಅಗಾಧತೆ. ಅತಿವಿಸ್ತಾರ.

Hugeous (ಹ್ಯೂಜಸ್) adj. huge, enormous. ಅತ್ಯಂತಭಾರಿ. ಬಹುದೊಡ್ಡ.

Hugg'er-mugg'er (ಹಗರ್-ಮಗರ್) secrecy, confusion ಗುಟ್ಟು. ರಹಸ್ಯ, ಗಲಾಟೆ, ಗದ್ದಲ, ಗೌಜಿ, ಅವ್ಯವಸ್ಥೆ, ಗಲಿಬಿಲಿ.

Hulk (ಹಲ್ಕ್) n. body of dismantled ship, big person or mass. ಬಿಚ್ಚಿಹಾಕಿದ ಹಡಗಿನ ಒಡಲು, ಭಾರಿ ಆಳು, ದೊಡ್ಡ ಮನುಷ್ಯ, ದೊಡ್ಡ ರಾಶಿ.

Hulking (ಹಲ್ಕಿಂಗ್) adj. bulky, clumsy. ಬಹಳ ದೊಡ್ಡದಾದ, ಒಡ್ಡೊಡ್ಡಾದ.

Hull (ಹಲ್) n frame or body of a ship, outer covering of anything. ಹಡಗಿನ ಸ್ಥೂಲಭಾಗ, ಹಡಗಿನ ಒಡಲು, ಹೊದಿಕೆ, ಮುಸುಕು, ಸಾವೆಯ ಹೊರಮೈ, ಸಿಪ್ಪೆ.

Hullabal'o (ಹಲಬಲೂ) n. an uproar. ಕೋಲಾಹಲ, ಬಬ್ಬೆ.

Hullo' (ಹಲೋ) int. of surprise, &c. ಓಹೊಹೋ! ಏನ್ರಿ! ಏನ್ರಾಯ್ರೇ!

Hum (ಹಮ್) v. i. & t sing low with closed lips, buzz ತುಟಿಮುಚ್ಚಿಕೊಂಡು ಹಾಡು, ಝೇಂಕರಿಸು, ಗುಯ್‌ಗುಂಯ್ ಮಾಡು.

Hum'an (ಹ್ಯೂಮನ್) a. pertaining to man or mankind. ಮಾನುಷ, ಮನುಷ್ಯನ, ಮಾನವೀಯ.

Humane(ಹ್ಯೂಮೇನ್)a. kind, benevolent. ಕರುಣಾಳು, ದಯಾಳು, ಕೃಪಾಳು, ದಯಾಪರ.

Humanism(ಹ್ಯೂಮನಿಜಂ)n. human nature or disposition, polite learning.

Humanist (ಹ್ಯೂಮನಿಸ್ಟ್) n. one who knows human nature.

Humanitar'ian (ಹ್ಯೂಮ್ಯಾನಿಟೇರಿಅನ್) n a philanthropist. ಪರೋಪಕಾರದ, ಲೋಕಾನುರಾಗವುಳ್ಳ.

Human'ity (ಹ್ಯೂಮ್ಯಾನಿಟಿ) n. benevolence, nature of man, the human race. ಪರೋಪಕಾರ ಮಾನವತ್ವ, ಉಪಕಾರ ಬುದ್ಧಿ, ದಯೆ, ಅನುಕಂಪ, ಮನುಷ್ಯತ್ವ.

Hum'ble(ಹಂಬಲ್) a. meek, modest, lowly. ನಮ್ರ, ನಿರಹಂಕಾರಿ, ನಯಶೀಲ, ದೀನ, ವಿನೀತ. vt. abase, lower. ಸೊಕ್ಕು ಮುರಿ, ಅಹಂಕಾರ ಬಿಡಿಸು. eat h. pie, apologise abjectly. ದೈನ್ಯದಿಂದ ಕ್ಷಮೆ ಬೇಡು.

Hum'bug(ಹಂಬಗ್)n. sham, fraud. imposter. ಮೋಸ, ವಂಚನೆ, ಆಷಾಢಭೂತಿ, ಠಕ್ಕ, ಮೋಸಗಾರ.

Hum'drum (ಹಮ್‌ಡ್ರಮ್) a. dull, common place. ಕೇವಲ ಸಾಧಾರಣ, ಸಪ್ಪೆ. ಸ್ವಾರಸ್ಯವಿಲ್ಲದ, ನೀರಸ, ಸಾಮಾನ್ಯ, ಜಡ, ಮಂದ.

Hum id (ಹ್ಯೂಮಿಡ್) a damp. ತೇವ, ಪಸೆ, ಹಸಿ, ಆರ್ದ್ರತೆ, ತೇವವುಳ್ಳ, ಒದ್ದೆಯಾದ.

Humil'iate (ಹ್ಯೂಮಿಲಿಏಟ್) v. i. humble, abase, mortify. ಗರ್ವ ತಗ್ಗಿಸು, ತೇಜೋಭಂಗಮಾಡು, ಗೌರವ ಕಳೆ, ಅಪಮಾನಮಾಡು, ತೇಜೋವಧೆ ಮಾಡು.

Humiliation(ಹ್ಯೂಮಿಲಿಏಷನ್) n. act of humbling, mortification.

Humil'ity(ಹ್ಯೂಮಿಲಿಟಿ) n. humbleness, meekness. ನಮ್ರತೆ, ವಿನಯ, ದೈನ್ಯ.

Hum'orist (ಹ್ಯೂಮರಿಸ್ಟ್) n. facetious talker, writer, &c. ರಸಿಕ, ವಿನೋದಗಾರ, ಹಾಸ್ಯಗಾರ, ನಗೆಗಾರ, ಪರಿಹಾಸಶೀಲ.

Hum'orous (ಹ್ಯೂಮರಸ್) a. witty, exciting laughter. ಹಾಸ್ಯಕರ, ಪರಿಹಾಸಶೀಲ, ವಿನೋದಶೀಲ.

Hum'our (ಹ್ಯೂಮರ್) n. disposition, wit, (med.) fluid of the body. ಹಾಸ್ಯ, ಸ್ವಭಾವ ಶೀಲ, ಮನಸ್ಥಿತಿ, ಮನೋಭಾವ, ಪ್ರವೃತ್ತಿ, (ವೈದ್ಯ) ಶರೀರದಲ್ಲಿರುವ ಧಾತು.



Hummingbird

Hummingbird (ಹಮಿಂಗ್‌ಬರ್ಡ್) a. small bird whose wings move rapidly and produce a hum while flying ಹಾರುವಾಗ ರೆಕ್ಕೆಗಳಿಂದ ಗುಯ್ ಗುಯ್ ಶಬ್ದ ಬರುವ ಪಕ್ಷಿ ವಿಶೇಷ.

Hump (ಹಂಪ್) n. protuberance p on the back. ಡುಬ್ಬ, ಗೂನು, ಹಿಣಿಲು.

Humpback (ಹಂಪ್‌ಬ್ಯಾಕ್) n. back with a hump, a hump backed person. ಗೂನು ಬೆನ್ನು, ಗೂನುಬೆನ್ನಿನ ಮನುಷ್ಯ.

Hump backed (ಹಂಪ್ ಬ್ಯಾಕ್ಡ್) a. having a hump back. ಗೂನ, ಗೂನು ಬೆನ್ನಿನ, ಕುಬ್ಜ.

Humpty-dumpty (ಹಮ್ಪ್ಟಿ ಡಮ್ಪ್ಟಿ) n. a. puny person. ಗಿಡ್ಡ ಮನುಷ್ಯ.

Hunch (ಹಂಚ್) n. hump, thick piece. ಗೂನು, ಡುಬ್ಬ, ಗಡ್ಡೆ, ಪಿಂಡ.

Hunch back (ಹಂಚ್‌ಬ್ಯಾಕ್) n. back with a hunch, a hump backed person. ಗೂನು ಬೆನ್ನು, ಗೂನುಬೆನ್ನಿನವ.

Hun'dred (ಹಂಡ್ರೆಡ್) n. ten times ten. (100. C.) ನೂರು.

Hunger (ಹಂಗರ್) n. craving for

food, strong desire for anything. ಕ್ಷುಧೆ, ಬಳಲಿಕೆ, ಹಸಿವು, ಬಯಕೆ, ಆಸೆ, ಹಂಬಲ.

Hunger-strike (ಹಂಗರ್-ಸ್ಟ್ರೈಕ್) n. prisoner's refusal to take food in order to secure release ಉಪವಾಸ ಮುಷ್ಕರ, ಅನ್ನಸತ್ಯಾಗ್ರಹ, ಸೆರೆಯಾಳು ತನ್ನ ಬಿಡುಗಡೆಗಾಗಿ ಉಪವಾಸ ಮಾಡುವುದು.

Hun'gry (ಹಂಗ್ರಿ) n. feeling hunger; eager. greedy. ಹಸಿದ, ಆಸೆಯುಳ್ಳ, ಅತ್ಯಾಸೆಯ.

Hunk (ಹಂಕ್) n. a large lump, a hunch. ದೊಡ್ಡ ತುಂಡು.

Hunks (ಹಂಕ್ಸ್) n. adviser. a niggardly person. ಜಿಪುಣ, ಕೃಪಣ.

Hunt (ಹಂಟ್) v. t. i. chase wild animals, search for. drive away. ಬೇಟೆಯಾಡು, ಶಿಕಾರಿಮಾಡು, ಹುಡುಕು, ಹುಡುಕಾಡು, ಪತ್ತೆಮಾಡು, ಅಟ್ಟಿಬಿಡು. ಹೊರಡಿಸು.

Hun'ter (ಹಂಟರ್) n. one who hunts. ವ್ಯಾಧ, ಬೇಡರವ, ಬೇಟೆಗಾರ.


Hurdle

Hur'dle (ಹರ್ಡ್ಲ್)n. movable frame with bars, &c. ತಟ್ಟಿ, ತಡಿಕೆ.

Hurdy-gurdy (ಹರ್ಡಿಗರ್ಡಿ) n. kind of stringed musical instrument ಒಂದು ಬಗೆಯ ತಂತಿಯ ವಾದ್ಯ.

Hurley (ಹರ್ಲಿ) n. a hockey stick. ಹಾಕಿಯಾಟದ ದಾಂಡು.

Hurl (ಹರ್ಲ್) v. t. throw with force. ಜೋರಾಗಿ ಎಸೆ, ಬಲವಾಗಿ ಎಸೆ, ಒಗೆ, ಬೀಸಿ ಒಗೆ, ಒಕ್ಕೋಡು.

Hurl'y-burly (ಹರ್ಲಿ-ಬರ್ಲಿ)n. commotion. ಗಲಾಟೆ, ಗಲಭೆ, ಗದ್ದಲ, ಕೋಲಾಹಲ.

Hurrah, **-ray** (ಹುರ್ರಾ, ಹುರೆ) int. cry of joy, triumph &c. ಜಯಕಾರಮಾಡು! ಶಾಭಾಷ್! ಭಲಾ! ಭಾಪುರೆ! ಉಘೇ!

Hu'rricane (ಹರಿಕೇನ್) n. violent storm. ಚಂಡಮಾರುತ, ಸುಂಟರಗಾಳಿ, ಬಿರುಗಾಳಿ.

Hu'rriedly (ಹರೀಡ್ಲಿ) adv. hastily ತೀವ್ರವಾಗಿ, ಆತುರವಾಗಿ, ಅವಸರದಿಂದ, ತರಾತುರಿಯಿಂದ.

Hurry (ಹರಿ) n. haste, eagerness. ಅವಸರ, ತ್ವರೆ, ಆತುರ, ತವಕ, ತರಾತುರಿ. vt. i hasten, cause to move with haste. ತ್ವರೆಮಾಡು, ತ್ವರೆಪಡಿಸು, ಆತುರಪಡಿಸು, ತರಾತುರಿಯಿಂದ ಹೋಗು.

Hurry-skurry (ಹರಿ-ಸ್ಕರಿ) adv. confusedly. in bustle n. confusion. ತರಾತುರಿಯಿಂದ, ಗೊಂದಲದೊಡನೆ, ಗೋಜು, ಗೊಂದಲ.

Hurt (ಹರ್ಟ್) v.t. i. harm wound, injure. ಗಾಯಮಾಡು, ನೋಯಿಸು. n. wound. injury. ಗಾಯ, ನೋವು, ಪೆಟ್ಟು, ತೊಂದರೆ.

Husband (ಹಜ್‌ಬಂಡ್) n. married man ಗಂಡ, ಪತಿ. v. t. economize ಮಿತವ್ಯಯಮಾಡು.

Hus'bandman (ಹಜ್ಬಂಡ್‌ಮನ್) n. farmer. ಬೇಸಾಯಗಾರ, ಒಕ್ಕಲಿಗ, ರೈತ.

Husbandry (ಹಜ್ಬಂಡ್ರೀ) n. the business of a farmer. ಕೃಷಿ, ಒಕ್ಕಲತನ, ಬೇಸಾಯ, ಆರಂಬ.

Hush (ಹಷ್) v. t. i. make quiet (with up), suppress. ಸದ್ದಡಗಿಸು, ಮೌನವಾಗಿರು, ಸುಮ್ಮನಿರು, ಅಡಗಿಸಿಬಿಡು. int. silence! hushaby! ಚುಪ್! ಸದ್ದು ಕೂಡದು! ಜೋ ಜೋ. h. up; suppress. ಸದ್ದಿಲ್ಲದೇ ಅಡಗಿಸು, ಬಾಯಿ ಮುಚ್ಚು.

Hush-money (ಹಶ್ಮನಿ) n. money given to avoid exposure. ಗುಟ್ಟಿನ ಲಂಚ, ಮೌನಕ್ಕೆ ಲಂಚ.

Husk (ಹಸ್ಕ್) n. covering of fruit,

seed, &c. ಹೊಟ್ಟು, ಸಿಪ್ಪೆ, ಕೊರ, ಹೊದಿಕೆ.

Hussar (ಹುಜಾರ್) n. light armed horse-soldier. ರಾವುತ, ಸೇನೆಯ ಸಿಪಾಯಿ.

Hu'stle (ಹಸಲ್) v. t. i. push, crowd: hurry. ನೂಕು, ದಬ್ಬು, ತಳ್ಳು, ತಳ್ಳಿಕೊಂಡು ಹೋಗು, ದೂಡು, ತುರುಕು, ಗಡಿಬಿಡಿಮಾಡು, ಆತುರಪಡು, ಅವಸರ ಮಾಡು.

Hut (ಹಟ್) n. small mean house. shed. ಗುಡಿಸಲು, ಗುಡಿಲು; ಜೋಪಡಿ.

Huzza (ಹೂಜಾ) n. shout of joy. ಹರ್ಷೋದ್ಗಾರ.

Hy'acinth (ಹಾಯಸಿಂಥ್) n. fragrant bulbous flower. precious stone. ಪುಷ್ಪವಿಶೇಷ, ಪದ್ಮರಾಗರತ್ನ, ಒಂದು ಪ್ರಶಸ್ತ ಶಿಲೆ.

Hyb'rid (ಹೈಬ್ರಿಡ್) n. cross breed. mongrel ಸಂಕರ ಅರ್ಧಜಾತಿ, ಬೆರಕೆ ಜಾತಿ, ಸಂಕೀರ್ಣ, ವಿಬೀಜ.

Hybridize (ಹೈಬ್ರಿಡೈಜ್) vt. procreate by hybrids. ಸಂಕರವನ್ನುಂಟುಮಾಡು.

Hydra (ಹೈಡ್ರ) n. serpent with many heads. ಗ್ರೀಕ್ ಪುರಾಣದ ಅನೇಕ ತಲೆಗಳ ಹಾವು.

Hyd'rant (ಹೈಡ್ರಂಟ್) n. water pipe with nozzle for hose. ಮೇಲಕ್ಕೆ ನೀರು ಒಯ್ಯುವ ಪೈಪು, ನೀರು ಕೊಳವೆ.


Hydrant

Hydraulic (ಹೈಡ್ರಾಲಿಕ್) a. relating to conveyance of water through pipes. ಜಲಸಾರಣ್ಯ, (ನಳಿಗೆಯಿಂದ) ಚಲಿಸುವ ನೀರಿನ ಸಂಬಂಧವಾದ n. plu (s) (ನಾ.ಬ.ವ.) ಜಲಚಲನ ಶಾಸ್ತ್ರ, ಜಲಭಾರ ಶಾಸ್ತ್ರ.

Hydric (ಹೈಡ್ರಿಕ್) adj. pertaining to hydrogen. ಜಲಜನಕಕ್ಕೆ ಸಂಬಂಧಪಟ್ಟ.

Hydro (ಹೈಡ್ರೋ) pref. for water. ಸಮಾಸ ಪದಗಳಲ್ಲಿ ಜಲದ ಅಂಶವನ್ನು ಸೂಚಿಸುವ ಉಪಸರ್ಗ.

Hydrate (ಹೈಡ್ರೇಟ್) n. compound of water with some other element. ಜಲಸಂಯುಕ್ತ ವಸ್ತು.

Hydrocele (ಹೈಡ್ರೋಸೀಲ್) n. a disease of the testes. ಅಂಡವಾಯು.

Hydrochloric (ಹೈಡ್ರೊಕ್ಲೋರಿಕ್) a. containing hydrogen and chlorine. ಜಲಜನಕ ಮತ್ತು ಕ್ಲೋರೀನ್ ಉಳ್ಳ.

Hydro-electricity (ಹೈಡ್ರೋಇಲೆಕ್ಟ್ರಿಸಿಟಿ) n. electricity got from use of the force of falling water ಜಲವಿದ್ಯುಚ್ಛಕ್ತಿ.

Hyd'rogen (ಹಾಯ್‌ಡ್ರೋಜನ್) n. light inflammable gas. ಜಲಜನಕ ವಾಯು.

Hydromal (ಹಯಡ್ರೋಮಲ್) n. mixture of water and honey. ಜೇನುತುಪ್ಪ ಮತ್ತು ನೀರಿನ ಮಿಶ್ರಣ.

Hydrom'eter (ಹೈಡ್ರಾಮಿಟರ್) n. instrument for finding densities of liquids. ದ್ರವ ವಿಶಿಷ್ಟ ಗುರುತ್ವ ಮಾಪಕ, ದ್ರವಪದಾರ್ಥಗಳ ವಿಶಿಷ್ಟ ಗುರುತ್ವ ಮಾಪಕ ಯಂತ್ರ.

Hydrop'athy (ಹೈಡ್ರೊಪತಿ) n. water cure. ಜಲಚಿಕಿತ್ಸೆ.

Hydrophob'ia (ಹೈಡ್ರೋಫೋಬಿಯ) a. an unnatural dread of water, madness due to bite of rabid dogs. ಜಲಭಯರೋಗ, ಜಲದ್ವೇಷ, ಅಲರ್ಕ, ನಾಯಿಕಡಿದ ಹುಚ್ಚು.

Hydrostatics (ಹೈಡ್ರೊಸ್ಟ್ಯಾಟಿಕ್ಸ್) n. pl. science pertaining to the behaviour of fluids especially water at rest. ಜಲಸಮಸ್ಥಿತಿ ಶಾಸ್ತ್ರ.

Hydrotic (ಹೈಡ್ರಾಟಿಕ್) adj producing phlegm. ಶ್ಲೇಷ್ಮೋತ್ಪಾದಕ.

Hydrous (ಹೈಡ್ರಸ್) adj. containing water. ನೀರುಳ್ಳ.

Hydrus (ಹೈಡ್ರಸ್) n. water snake ಜಲಸರ್ಪ.

Hyen'a, hyaen'a (ಹೈಯಿನ) n carnivorous quadruped allied to dog. ನಾಯಿ ಜಾತಿಗೆ ಸೇರಿದ ಒಂದು ಮಾಂಸಾಹಾರಿ ಚತುಷ್ಪಾದಿ, ಕತ್ತೆಕಿರುಬ.


Hyena

Hyetometer (ಹೈಟೊಮಾಟರ್) n. instrument for measuring rain. ಮಳೆಯನ್ನು ಅಳೆಯುವ ಯಂತ್ರ, ವೃಷ್ಟಿಮಾಪಕ.

Hygeia (ಹೈಜೀಯ) n. the goddess of health. ಆರೋಗ್ಯ ದೇವತೆ.

Hy'giene (ಹೈಜೀನ್) n. principle of health; sanitary science ಆರೋಗ್ಯವಿಜ್ಞಾನ. ಜೀವಪಾಲನ ಶಾಸ್ತ್ರ, ಜನಾರೋಗ್ಯ, ಆರೋಗ್ಯ ವಿದ್ಯೆ.

Hygrometer (ಹೈಗ್ರೊಮಾಟರ್) n. instrument for measuring humidity in air. ಅನಿಲದ ತೇವವನ್ನಳೆಯುವ ಸಲಕರಣೆ.

Hymen (ಹೈಮೆನ್) n. God of marriage. ವಿವಾಹ ದೇವತೆ.

Hymn (ಹಿಮ್) n sacred song of praise. ದೇವರ ಸ್ತೋತ್ರಗೀತ, ಗೀತ, ದೇವರನಾಮ, ಸ್ತೋತ್ರ, ಸ್ತುತಿ.

Hymnal (ಹಿಮ್ನಲ್) a. pertaining to a hymn. ಸ್ತೋತ್ರಕ್ಕೆ ಸಂಬಂಧಪಟ್ಟ.

Hymnist (ಹಿಮ್ನಿಸ್ಟ್) n. a reciter of hymns. ಸ್ತೋತ್ರ ಪಾಠಕ.

Hyperb'ole (ಹೈಪರ್ ಬೊಲಿ) n. rhetorical exaggeration. ಅತ್ಯುಕ್ತಿ, ಅತಿಶಯೋಕ್ತಿ, ಸತ್ಯಾತಿಕ್ರಮ.

Is'olate (ಆಯ್‌ಸೊಲೆಟ್) v. t. place apart or alone. ಬೇರೆಯಿಡು, ಪ್ರತ್ಯೇಕವಾಗಿ ಇಡು, ಬೇರ್ಪಡಿಸು.

Isolation(ಐಸೊಲೇಷನ್) n. state of being isolated. ಬೇರ್ಪಡಿಸಿರುವಿಕೆ.

Isometric (ಐಸೋಮೆಟ್ರಿಕ್) a. with equality of measure. ಒಂದೇ ಪರಿಮಾಣದ.

Isos'celes' (ಆಯ್‌ಸಾಸಿಲೀಸ್,.ಐ)a. having two sides equal. ಸಮದ್ವಿಬಾಹುಗಳುಳ್ಳ.

Is'otherm (ಐಸೊಥರ್ಮ್) n. equal mean annual temperature. ಸಮೋಷ್ಣಮಾನ, ವಾರ್ಷಿಕೋಷ್ಣಮಾನದ ಸರಾಸರಿ.

Iss'ue (ಇಸ್ಯೂ) n. outgoing, outflow, result; outcome; children; question, dispute; copies of journal, &c. issued at one time. ಹೊರ ಹೊರಡುವುದು, ಹೊರಹರಿತ, ಹರಿವು, ಫಲ, ಸಂತಾನ, ಮಕ್ಕಳು, ವಿವಾದಾಂಶ, ಒಮ್ಮೆ ಹೊರಡಿಸಿದ ಪತ್ರಿಕೆ ಮೊದಲಾದುವುಗಳ ಸಂಚಿಕೆ, ಬಹಿರ್ಗಮನ, ಪ್ರವಾಹ, ಪರಿಣಾಮ. v. i. t. go or come out; emerge; be derived; result sent forth; publish, circulate. ಪ್ರಕಟಿಸು, ಜಾಹೀರುಮಾಡು, ಪ್ರಕಟವಾಗು, ಕೊಡು, ಹೊರ ಹೊರಡು, ಫಲಿಸು, ಹೊರಕ್ಕೆ ಬರು, ಉದಿಸು, ಹೊರಬೀಳು, ಹೊರಪಡಿಸು. v'. i· disputed, disagreeing. ವಿವಾದದಲ್ಲಿರುವ, ಚರ್ಚೆಯಲ್ಲಿರುವ, ಮತಭೇದವಾಗಿರುವ. join, i. s. with, oppose, dissent. ಎದುರಿಸು, ವಿರೋಧಿಸು. join i. s. leave the matter to the decision of a law court. ನ್ಯಾಯಸ್ಥಾನದ ತೀರ್ಮಾನಕ್ಕೆ ಬಿಟ್ಟುಬಿಡು.

Ist'hmus (ಇಸ್ಥ್ಮಸ್) n. ne of land. ಭೂಕಂಠ, ಭೂಶಿರ.



Isthmus

It (ಇಟ್) pro. the thing named or in question. ಅದು, ಇದು.

Italian (ಇಟ್ಯಾಲಿಯನ್) n. & adj. pertaining to Italy, the language of Italy. ಇಟಲಿ ದೇಶಕ್ಕೆ ಸಂಬಂಧಿಸಿದ, ಇಟಲಿ ದೇಶದ ಭಾಷೆ.

Ital'ics (ಇಟ್ಯಾಲಿಕ್ಸ್) a. italic or sloping type (ಇಂಗ್ಲಿಷಿನ) ಓರೆ ಅಕ್ಷರ, ಓರೆ ಮುದ್ರಣಾಕ್ಷರ.

Ital'icize (ಇಟ್ಯಾಲಿಸೈಜ್) v. t. print in italics. ಓರೆ ಅಕ್ಷರದಲ್ಲಿ ಮುದ್ರಿಸು.

Itch (ಇಚ್) n. irritation in skin, disease with itch, desire. ಕಜ್ಜಿ, ಕಡಿತ, ತೀಟೆ, ಹಂಬಲು, ನವೆ, ತುರಿ. an itching palm, avaricious disposition. ಅತ್ಯಾಶೆಯ ಭಾವ, ಲೋಭಿತನ, ಕೃಪಣತೆ.

Itchiness (ಇಚಿನೆಸ್) n· quality of being affected with itch. ನವೆ, ಕಡಿತ.

It'em (ಐಟಮ್) n. any one of enumerated things. ಅಂಶ, ವಸ್ತು, ಲೆಕ್ಕ ಮೊದಲಾದುವುಗಳಲ್ಲಿ ಇದರ ದಾಖಲೆ, ಸಂಗತಿ, "ರಖಮು", ಬಾಬತ್ತು.

Iterance (ಇಟರೆನ್ಸ್) n. repetition. ಪುನರುಕ್ತಿ.

Iterate (ಇಟರೇಟ್) vt. repeat, state repeatedly ತಿರುಗಿ ಹೇಳು, ಮತ್ತೆ ಮತ್ತೆ ಹೇಳು, ಪುನಃಕಥನಮಾಡು, ಮರಳಿ ಹೇಳು, ಮೇಲಿಂದ ಮೇಲೆ ಹೇಳು.

Iterative (ಇಟರೆಟಿವ್) a. repeating. ತಿರುಗಿ ಹೇಳುವುದು.

Itin'erant (ಇಟಿನರನ್ಟ್) a. travelling from place to place ಸಂಚಾರ ಮಾಡುವ, ಸಂಚರಿಸುವ, ಸಂಚಾರೀ, ಭ್ರಮಣಶೀಲ, ಪರಿಭ್ರಮಿ.

Itinerary (ಇಟಿನರರಿ) n. & adj. travelling, a guide book for travellers. ಪ್ರಯಾಣಮಾಡುವ, ಪ್ರಯಾಣಿಕರಿಗೆ ಉಪಯೋಗವಾಗುವ, ಮಾರ್ಗಸೂಚಕ ಪುಸ್ತಕ.

Itin'erate (ಇಟಿನರೇಟ್) v· i. be itinerant. ಉಪದೇಶ ಮಾಡುತ್ತಾ ತಿರುಗು, ಸಂಚಾರಮಾಡು.

Itself (ಇಟ್ಸೆಲ್ಫ್) pron. emphatic form of it. ತಾನೇ, ತನ್ನಷ್ಟಕ್ಕೆ ತಾನೆ, ತಾನಾಗಿ. by i· alone, apart. ಬೇರೆಯಾಗಿ, ಒಂದೇ ಆಗಿ. in and by i. separately considered. ಪ್ರತ್ಯೇಕವಾಗಿ, ಬೇರೆಯಾಗಿ ತೆಗೆದುಕೊಂಡಾಗ.

Iv'ory (ಐವರಿ) n. white substance of the tusks of the elephants, &c. ಹಸ್ತಿದಂತ, ಆನೆಯದಂತ.


Ivy

Iv'y (ಐವಿ) n. climbing evergreen with shining leaves. ಐವಿ ಎಂಬ ಸದಾ ಹಸುರಾಗಿರುವ ಲತೆ.

I'wis,ywis (ಐವಿಸ್)adv. certainly. ನಿಜವಾಗಿ, ಖಂಡಿತವಾಗಿ.

Izard (ಇಸಾರ್ಡ್) n. a kind of antelope. ಒಂದು ಜಾತಿಯ ಜಿಂಕೆ.

J

J (ಜೆ) the tenth letter of the English alphabet. ಇಂಗ್ಲಿಷ್ ವರ್ಣಮಾಲೆಯ ೧೦ನೆಯ ಅಕ್ಷರ.

Jab (ಜಾಬ್) v. t. poke roughly; stab. ತಿವಿ, ಇರಿ. n. sudden blow. ತಿವಿತ, ಇರಿತ.

Jabb'er (ಜಾಬರ್) v. t. i. chatter volubly. ಬಡಬಡನೆಮಾತಾಡು, ಹರಟೆಬಡಿ, ಗೊಜಗುಟ್ಟು.

Jabiru (ಜಬೀರು)n. a kind of stork. ಒಂದು ಬಗೆಯ ಕೊಕ್ಕರೆ.

Jabot' (ಝಾಬೊ) n. frill on bodice. ಕುಪ್ಪಸದ ಅಂಚು, ಕರೆ.

Jacinth (ಜೇಸಿನ್ಥ್)n. a gem of reddish orange colour, hyacinth. ಕೆಂಪು ಕಿತ್ತಳೆಯ ಬಣ್ಣದ ಒಂದು ಬಗೆಯ ರತ್ನ.

Jack (ಜಾಕ್) a. machines for turning spit, lifting weights, &c., ship's flag, esp, one flown from bow, the krave in cards. ಭಾರವಾದ (ಬಜ್ಜೆಯಾದ) ಸಾಮಾನುಗಳನ್ನು ಎತ್ತುವ ಯಂತ್ರ, ಕಪ್ಪಿ, ಭಾರಗಳನ್ನು ಎತ್ತುವ ಯಂತ್ರ, ಇಸ್ಪೀಟು ಜಾಕಿ, ಗುಲಾಮು. v. t. hoist with jack. ನಾವೆಯ ಬಾವುಟ ಏರಿಸು, ಹಡಗಿನ ಬಾವುಟ. j. of all trades, one who can turn his hand to anything. ಹಲವು ವಿಷಯಗಳನ್ನು ತಿಳಿದವ.

Jack'al(ಜಕಾಲ್) n. animal of dog kind. ನರಿ, ಕುನ್ನಿ, ಬಳ್ಳು.

Jack'ass (ಜಾಕ್ ಅಸ್) n. male ass, block head. ಗಂಡುಕತ್ತೆ, ದಡ್ಡ, ಮುಟ್ಠಾಳ, ಮೂಢ.

Jack'daw (ಜಾಕ್‌ಡಾ) n. daw. ತೊಂಬ ಕಾಗೆ.

Jack'et (ಜಾಕೆಟ್) n. sleeved outer garment. ಅಂಗಿ, ಚೊಗೆ, ಕಂಚುಕ, "ಜಾಕೀಟು".

Jack'fruit' (ಜಾಕ್‌ಫ್ರೂಟ್) n. fruit of jack tree. ಹಲಸಿನ (ಮರ) ಹಣ್ಣು.

Jackplane (ಜಾಕ್ ಪ್ಲೇನ್) n. a carpenter's tool for rough planing. ಒರಟು ತೋಯಡಕ್ಕೆ ಉಪಯೋಗಿಸುವ ಹತ್ತರಿ.

Jacob (ಜೇಕಬ್) n. a rope-ladder. ಒಂದು ಹಗ್ಗದೇಣಿ.

Jacobin (ಜಾಕೊಬಿನ್) n. a kind of pigeon, a demagogue. ಒಂದು ಬಗೆಯ ಪಾರಿವಾಳ, ಪುಡಾರಿ.

Jacobite (ಜಾಕೊಬೈಟ್)n. a follower of Jams II. ದ್ವಿತೀಯ ಜೇಮ್ಸ್ ರಾಜನ ಹಿಂಬಾಲಕ.

Jaconet (ಜಾಕೊನೆಟ್) n. a kind of cotton cloth. ಒಂದು ಬಗೆಯ ಹತ್ತಿಯ ಬಟ್ಟೆ.

Jade (ಜೇಡ್) n. poor or worn out horse, quarrelsome woman. ತಟ್ಟು, ಕೀಳ ಜಾತಿಯ ಜೀರ್ಣವಾಗಿ ಹೋದ ಕುದುರೆ, ಚಾಟಕಿ, ಜಗಳಗಂಟಿ. a. jaded, tired out. ದಣಿದ, ಬಳಲಿದ.

Jag (ಜಾಗ್) n. notch, sharp projection. ಕಚ್ಚು, ನಗ್ಗು, ಸೊಕ್ಕು, ಮೊನಚಾದ ಚಾಚು

Jaggery (ಜಾಗರಿ) n. kind of coarse dark coloured sugar made in the East Indies. ಬೆಲ್ಲ.

Jaguar (ಜಾಗ್ವಾರ್) n the American tiger. ಅಮೆರಿಕದಲ್ಲಿ ಕಾಣಬರುವ ಒಂದು ಜಾತಿಯ ಚಿರತೆ.



Jaguar

Jail (ಜೇಲ್) n. prison. ಸೆರೆಮನೆ, ಜೈಲು, ಬಂದೀಖಾನೆ.

Jail'er (ಜೇಲರ್) n. keeper of a jail. ಸೆರೆಮನೆ ಅಧಿಕಾರಿ, ಜೇಲರ್.

Jal'ap (ಜಾಲಪ್) n. purgative drug. ಒಂದು ತರದ ಜುಲಾಬಿನ ಔಷಧ, ಜಾಪಾಳ, ಭೇದಿಯೌಷಧ.

Jam (ಜಾಮ್) vt. i. squeeze, cause to get wedged, block (passage), in radio make message unintelligible by operating elsewhere. ಇರುಕು, ಅಮುಕು, ಅದುಮು, ನುಗ್ಗಿಸು, ಬಲವಾಗಿ ನೂಕು, ಬಂದು ಮಾಡ ತೂರಿಸು, ಹಾದಿಕಟ್ಟು, (ರೇಡಿಯೋದಲ್ಲಿ) ಬೇರೆ ಕೇಂದ್ರ ಧ್ವನಿಯೊಂದಿಗೆ ಮಿಳಿತ ಮಾಡಿ, ಕರ್ಕಶ ಧ್ವನಿಮಾಡು. n. squeeze, stoppage, conserve of boiled fruit and sugar ಇರುಕು, ಒತ್ತಡ, ಅಡಚಾಟ, ನೂಕುನುಗ್ಗಲು, ಹಣ್ಣುಪಾಕ, ಸಂಕೀರ್ಣತೆ, ಮುರಬ್ಬಾ.

Jamb (ಜಾಮ್) n. side post, side doorway, window or fire place. ದಾರಬಂಧಕ ಕಂಭ, ತೋಳು, ಬಾಗಿಲು ಕಿಟಿಕಿಗಳ ಪಕ್ಕ ನಿಲವು, ಒಲೆಗಳ ಪಾರ್ಶ್ವ ಭಾಗ.

Jamboree (ಜಾಂಬೊರೀ) n. merry making. ಮೋಜು, ಸಂಭ್ರಮ, ಉತ್ಸವ, ಸಮಾರಂಭ.

Jang'le (ಜಾಂಗಲ್) n. harsh noise, wrangle. ಅಪಸ್ವರ, ವ್ಯಾಜ್ಯ, ಜಗಳ, ವಿವಾದ.

Jangler (ಜಾಂಗ್ಲರ್) n. a noisy fellow. ಜಗಳಗಂಟಿಗ, ಗಲಭೆಮಾಡುವವ.

Jan'itor (ಜಾನಿಟರ್) n. door-keeper. ದ್ವಾರಪಾಲಕ, ಚೋಪ್ದಾರ, ಬಾಗಿಲು ಕಾಯುವವನು.

Janty (ಜನ್ಟಿ) a airy; showy. ಸೊಗಸಿನ, ಒಲಪಿನ, ಚಪಲ, ಸರಸ.

Jan'uary (ಜಾನ್ಯುಅರಿ) n. first month of the English year. ಇಂಗ್ಲಿಷ್ ವರ್ಷದ ಮೊದಲನೆಯ ತಿಂಗಳು, ಜನವರಿ.

Jape (ಜೇಪ್) n. joke, jest. ಹಾಸ್ಯ, ತಮಾಷೆ

Jar (ಜಾರ್) v. i. t. strike discardantly, grate, wrangle ಜಗಳವಾಡು, ಕಚ್ಚಾಡು, ವಿರುದ್ಧವಾಗಿರು, ಕರಕರ ಅನ್ನು, ವಿರುದ್ಧಮಾಡು. n. jarring sound, quarrel, kinds of round vessel with or without handles ಅಪಸ್ವರ, ಜಗಳ, ಕಲಹ, ಘಟ, ಕರ್ಕಶಧ್ವನಿ, ಜಾಡಿ.

Jarg'on (ಜಾರ್ಗನ್) debased or unintelligible language, gibberish. ಅನಾಗರಿಕ ಭಾಷೆ, ಲೊಡಲೊಡ, ಅರ್ಥವಾಗದ ಗಡಿಬಿಡಿಮಾತು, ಬರ್ಬರ ಭಾಷೆ, ಗ್ರಾಮೋಕ್ತಿ.

Jarring (ಜಾರಿಂಗ್) a. discordant. ಕರ್ಕಶ.

Jarvey (ಜಾರ್ವಿ) n. coachman of a hackney carriage. ಕುದುರೆ ಗಾಡಿಯ ಚಾಲಕ.

Jas'min (e), jess'amin(e) (ಜಸ್ಮಿನ್) n. shrub with white or yellow flowers. ಮಲ್ಲಿಗೆ, ಜಾಜಿ, ಮಾಲತಿ, ಮಾಧವಿ.

Jas'per (ಜಾಸ್ಪರ್) n. red, yellow or brown opaque quartz. ಸೂರ್ಯ

ಕಾಂತ ಮಣಿ, ಚಕಮುಕಿ ಜಾತಿ ಕಲ್ಲು, (ಬೆಣಚು) ಕಲ್ಲು.

Jaun'dice (ಜಾನ್ಡಿಸ್) n. morbid state due to obstruction of bile, disordered (esp. mental) vision. ಪಾಂಡುರೋಗ, ಕಾಮಾಲೆ ರೋಗ, ಅರಿಸಿನ ಮುಂಡಿಗೆ ರೋಗ, ಅಸಹಜ ದೃಷ್ಟಿ.

Jaunt (ಜಾಂಟ್) n. pleasure excursion. ತಿರುಗಾಡುವುದು, ವಿಹಾರ, ಸಂಚಾರ.

Jauntiness (ಜಾಂಟಿನೆಸ್) n. the quality of being showy. ಪ್ರದರ್ಶನ ಪ್ರಿಯತೆ.

Jaun'ty (ಜಾಂಟಿ) a. airily self-satisfied. ಉಲ್ಲಾಸವುಳ್ಳ, ಹೆಮ್ಮೆಯ.

Jav'elin (ಜಾವ್ಲಿನ್) n. spear, dart. ಭಲ್ಲೆ, ಸಬಳ, ಹಗುರವಾದ ಎಸೆಯಾಟ, ಬರ್ಜಿ.

Jaw (ಜಾ) n. bone containing the teeth (plu.) mouth. ದವಡೆ, (ಬ. ವ.) ಬಾಯಿ, ಮುಖ, ವಕ್ತ್ರ.


Jaw-bone

Jaw-breaker (ಜಾಬ್ರೇಕರ್) n. a word difficult to pronounce. ಉಚ್ಚರಿಸಲು ಕಠಿಣವಾದ ಶಬ್ದ.

Jay (ಜೆ) n. a noisy bird of brilliant plumage, silly chatterer ಮೈನಾ ಹಕ್ಕಿ, ನೀಲಕಂಠ ಪಕ್ಷಿ, ಹರಟೆಗಾರ.

Jazz (ಜಾಸ್) n. kind of American music. ಒಂದು ಬಗೆಯ ಅಮೆರಿಕದ ಸಂಗೀತ.

Jea'lous (ಜೆಲಸ್) n. watchfully tenacious, envious of. ಸಂಶಯದ, ಪ್ರೇಮಶಂಕೆಯುಳ್ಳ, ಹೊಟ್ಟೆಕಿಚ್ಚಿನ, ಮಾತ್ಸರದ, ಈರ್ಷ್ಯೆಯುಳ್ಳ, ಅಸೂಯೆ ಪಡುವ.

Jea'lousy (ಜೆಲಸಿ) n. being jealous. ಪ್ರೇಮಶಂಕೆ, ಈರ್ಷ್ಯೆ, ಹೊಟ್ಟೆಕಿಚ್ಚು, ಅಸೂಯೆ, ಮಾತ್ಸರ.

Jean (ಜೀನ್) n. twilled cotton cloth. ಮೂಲೆ ನೆಯ್ದಿರುವ ಹತ್ತಿಯಬಟ್ಟೆ.

Jeer (ಜಿಅರ್) v.i. t. scoff at, deride, ಅಪಹಾಸ್ಯಮಾಡು, ಗೇಲಿಮಾಡು. n. scoff, taunt. ಹಾಸ್ಯ, ಗೇಲಿ, ಕೊರಚಾಟ, ತಿರಸ್ಕಾರ.

Jeering (ಜೀರಿಂಗ್) adj. mocking. ಅಪಹಾಸ್ಯಪೂರ್ಣವಾದ.

Jejune (ಜಿಜೂನ್) a. devoid of interesting matter. ನೀರಸವಾದ, ಸಾರರಹಿತವಾದ.

Jehov'ah (ಜಿಹೋವಾ) n. Hebrew name for God. ಹೀಬ್ರೂ ಭಾಷೆಯಲ್ಲಿ ದೇವರ ಹೆಸರು.

Jelly (ಜೆಲಿ) n. fruit juice boiled with sugar. ಫಲಪಾಕ, ಹಣ್ಣುಪಾಕ, ಮುರಬ್ಬಾ.

Jemmy (ಜೆಮ್ಮಿ) n. crowbar used by burglars. ಕಳ್ಳರು ಉಪಯೋಗಿಸುವ ಹಾರೆ.

Jennet (ಜೆನೆಟ್) n. small Spanish horse. ಸ್ಪೇನಿನ ಸಣ್ಣ ಕುದುರೆ.

Jenny (ಜೆನ್ನಿ) n. a machine for spinning, a locomotive crane. ನೂಲುವ ಯಂತ್ರ, ರೈಲ್ವೆ ಎಂಜಿನ್ನನ್ನು ಎತ್ತುವ ಯಂತ್ರ.

Jeo'pardize (ಜೆಪಾರ್ಡೈಜ್) v. t. endanger. ಗಂಡಾಂತರಕ್ಕೆ ಗುರಿಮಾಡು, ಅಪಾಯಕ್ಕೆ ಸಿಕ್ಕಿಸು.

Jeo'pardy (ಜೆಪರ್ಡಿ) n. danger. ಗಂಡಾಂತರ, ಪ್ರಾಣಸಂದೇಹ, ಶಂಕೆ, ವಿಪತ್ತು

Jerk (ಜರ್ಕ್) n. sharp pull: spasmodic twitch of muscle. ಸಿಡಿತ, ಥಟ್ಟನೆಯ ಎಳೆತ, ಸ್ನಾಯುಗಳ ಸೆಳವು, ಜಗ್ಗು, ಥಟ್ಟನೆ ನೂಕು, ತಿವಿತ. v. t. i. move with jerk, throw quickly. ಸಿಡಿಸು, ಎಸೆ, ತಿವಿ.

Jerry (ಜೆರಿ) n. inferior stuff. ಕೀಳ ದರ್ಜೆಯ ಪದಾರ್ಥ.

Jers'ey (ಜರ್ಸಿ) n. close woollen tunic or undervest. ಉಣ್ಣೆಯ ಗಂಜಿ ಫ್ರಾಕ್, ಅಡಕವಾದ ಅಂಗಿ.


Jersey

Jese (ಜೆಸ್) n. a short strap of silk or leather. ರೇಷ್ಮೆ ಅಥವಾ ಚರ್ಮದ ಸಣ್ಣ ಪಟ್ಟಿ.

Jess'amine (ಜಸ್ಮಿನ್) n. jasmine. ಮಲ್ಲಿಗೆ, ಜಾಜಿ, ಮಾಧವಿ, ಮಾಲತಿ, ವಾಸಂತಿ.

Jest (ಜೆಸ್ಟ್) n. joke, fun, object of derision. ನಗೆಚಾಟಿಕೆ, ಪರಿಹಾಸ್ಯ, ತಮಾಷೆ, ಕುಚೋದ್ಯ, ನಕಲಿ. v. i. joke. ಹಾಸ್ಯಮಾಡು, ತಮಾಷೆಮಾಡು.

Jes'ter (ಜೆಸ್ಟರ್) n. (esp.) professional joker of a court, &c. ಹಾಸ್ಯಗಾರ, ವಿದೂಷಕ, ನಕಲಿ, ನಗೆಗಾರ, ವಿಕಟಕವಿ.

Jestful (ಜೆಸ್ಟ್ ಫುಲ್) a. given to jesting. ಹಾಸ್ಯಶೀಲನಾದ.

Jet (ಜೆಟ್) n. hard black ignite taking brilliant polish ; stream or shoot of water, emitting jet. ಒಂದು ಬಗೆಯ ಕಲ್ಲಿದ್ದಲು, ಬುಗ್ಗೆ, ನೀರು ಹಾರುವಿಕೆ, ಕಾರಂಜಿ. v. i. throw out, send forth. ಚಿಮ್ಮು, ಉಬ್ಬಿಬರು, ಎರಚು.

Jet-black (ಜೆಟ್ ಬ್ಲ್ಯಾಕ್) a. deeply black. ಅತಿಕಪ್ಪು ಬಣ್ಣದ.

Jetsam (ಜೆಟ್ಸಮ್) n. goods thrown away to lighten a ship. ಹಡಗನ್ನು ಹಗುರಮಾಡುವುದಕ್ಕೆ ಎಸೆದ ಪದಾರ್ಥಗಳು.

Jett'y (ಜೆಟ್ಟಿ) a. black as jet. ಕಲ್ಲಿದ್ದಲ ಹಾಗೆ ಕಪ್ಪು, ಅಂಗಾರಮಯ. n. mole, landing pier. ಕಟ್ಟಿದರೇವು, ಒಡ್ಡು, ಏರಿ, ಬಂದರುಕಾಪು, ದಕ್ಕೆ.

Jew (ಜೂ) n. person of Hebrew race, (fig.) unscrupulous usurer. ಯಹೂದಿ, ಹಣಸೇರಿಸುವ ಚಿನಿವಾರ, ಸುಲಿಗೆಕೋರ.

Jew'el (ಜ್ಯೂಎಲ್) n. precious stone, ornament with jewels, precious thing. ರತ್ನ, ಒಡವೆ, ರತ್ನಾಭರಣ, ಅನರ್ಘ್ಯಮಣಿ, ಬಹುಮೂಲ್ಯವಸ್ತು.

Jew'eller (ಜೂಅಲರ್) n. dealer in jewels. ರತ್ನಗಾರ, ಸರಾಫ, ಮಾಣಿಕ್ಯಶೆಟ್ಟಿ.

Jew'el(le)ry (ಜೂಅಲ್ರಿ) n. jewels in general. ರತ್ನಖಚಿತ ಒಡವೆಗಳು, ರತ್ನಾಭರಣಗಳು, ನಗನಾಣ್ಯ, ರತ್ನಾದಿಕೋಶ.

Jewess (ಜೂಇಸ್) n. a woman of Hebrew race. ಯಹೂದ್ಯ ಹೆಂಗಸು.

Jew's harp (ಜ್ಯೂಸ್ ಹಾರ್ಪ್) n. a small musical instrument played between the teeth by striking a spring with the finger. ಚೌಕಟ್ಟನ್ನು ಹಲ್ಲುಗಳ ಮಧ್ಯ ಹಿಡಿದುಕೊಂಡು ಲೋಹದ ನಾಲಗೆಯನ್ನು ಬಡಿದು ಬಾರಿಸುವ ಒಂದು ವಾದ್ಯ ಯಂತ್ರ, ಮೋರ್ಚಿಂಗು.


Jew's harp

Jezebel (ಜೆಸೆಬೆಲ್) n. a virago. ಗಂಡುಬೀರಿ.

Jib (ಜಿಬ್) n. triangular stay-sail. ಹಡಗದ ಮುಂದಿನ ಪಟ, ಸಣ್ಣ ಹಾಯಿ.

Jig (ಜಿಗ್) n. lively dance, music for it. ಉಲ್ಲಾಸದ ಕುಣಿತ, ನರ್ತನ, ಸ್ವರವಿಶೇಷ. v. i. t. dance jig, move quickly up and down. ಉಲ್ಲಾಸ ನರ್ತನಮಾಡು, ನಾಟ್ಯಮಾಡು, ಕುಣಿದಾಡು.

Jiggle (ಜಿಗಲ್) vt. jerk lightly. ಮೆಲ್ಲಗೆ ಅಲ್ಲಾಡಿಸು.

Jigjog (ಜಿಗ್ ಜಾಗ್) n. jolting motion. ಅಲ್ಲಾಡುವಿಕೆ.

Jilt (ಜಿಲ್ಟ್) n. woman who capriciously discards love. ಪ್ರಣಯದ್ರೋಹಿ, ವಂಚಕಿ, ಮಾಟಗಾತಿ. v. t.

capriciously discard lover. ಪ್ರೇಮ ಭಂಗಮಾಡು.

Jimp (ಜಿಂಪ್) a. slender, handsome. ಕೋಮಲ, ಸುಂದರ.

Jing'le (ಜಿಂಗಲ್) n. mixed noise, repetition of same sound in words. ಝುಣಝುಣ, ಕಿಣಿಕಿಣಿಧ್ವನಿ, ಶಬ್ದಗಳಲ್ಲಿ ಏಕಾಕ್ಷರಧ್ವನಿ, ಝುಣಝುಣಿಸು, ಟಣಟಣಿಸು, ಕಣಕಣಿಸು.

Jinks (ಜಿಂಕ್ಸ್) n. riotous merry-making. ಸಂಭ್ರಮದ ಆಟಪಾಟ.

Job (ಜಾಬ್) n. piece of work, unscrupulous translation. ಬಿಡುಗೆಲಸ, ಬಿಡುಜಂಬರ, ಚಿಲ್ಲರೆ ಕೆಲಸ, ಕ್ಷುದ್ರ ಕ್ರಿಯೆ.

Jobation (ಜೊಬೇಷನ್) n. scolding. ಮಾತಿನಿಂದ ದಂಡಿಸುವುದು.

Jobbernowl (ಜಾಬರ್‌ನೋಲ್) n. a block head. ಮಡ್ಡಿ.

Jobb'ery (ಜಾಬರಿ) n. corrupt dealing. ಲಂಚದ ಕೆಲಸ.

Jock'ey (ಜಾಕಿ) n. rider in horse races. ಜೂಜಿನ ಕುದುರೆ ಸವಾರ, ಅಶ್ವಜ್ಞ. vt. cheat, trick. ವಂಚಿಸು, ಠಕ್ಕಿಸು, ಮೋಸಮಾಡು.

Jocko (ಜಾಕೊ) n. a chimpanzee. ಒಂದು ಜಾತಿಯ ಆಫ್ರಿಕದ ಕೋತಿ.

Jocose', joc'ular (ಜಾಕೋಸ್, ಜಾಕ್ಯುಲರ್) n. humorous, given to joking. ವಿನೋದದ, ಹಾಸ್ಯಕರ, ವಿನೋದಾತ್ಮಕ.

Jocoseness (ಜಾಕೋಸ್‌ನೆಸ್) n. the quality of being humorous. ಹಾಸ್ಯಪ್ರಿಯತೆ, ವಿನೋದಶೀಲತೆ.

Jocular (ಜಾಕ್ಯುಲರ್) a. sportive, humorous. ವಿನೋದಪ್ರಿಯ.

Jocund(ಜಾಕಂಡ್)a. merry, sprightly. ಆನಂದವುಳ್ಳ, ಉಲ್ಲಾಸಿ, ಗೆಲುವುಳ್ಳ, ಉಲ್ಲಾಸಶೀಲ, ಆಹ್ಲಾದಕರ.

Jog (ಜಾಗ್) vr. i. push, stimulate [memory] walk or trot at slow pace. ನೂಕು, ಸ್ವಲ್ಪ ತಳ್ಳು, ಜರುಗಿಸು, ನೆನಪುಕೊಡು, ಜ್ಞಾಪಿಸು, ಕಾಲೆಳೆದುಕೊಂಡು ಹೋಗು.

Jogger(ಜಾಗರ್)n. one who moves slowly. ನಿಧಾನವಾಗಿ ನಡೆಯುವವನು.

Jog'gle (ಜಾಗಲ್) vt. i. move to & fro in jerks. ತಾಕ್ಯಾಡು, ತಡೆದು ತಡೆದು ಚಲಿಸು. ಅಲುಗಾಡಿಸು, ಹಿಂದಕ್ಕೂ ಮುಂದಕ್ಕೂ ತೂಗಾಡು.

Jogtrot (ಜಾಗ್‌ಟ್ರಾಟ್) n. slow, regular pace. ಕ್ರಮವಾದ, ಮಂದಗತಿ.

John' Bull ಜಾನ್ ಬುಲ್)n. nickname for the English people. ಇಂಗ್ಲಿಷ್ ಜನರ ಅಡ್ಡಹೆಸರು.

Johnny (ಜಾನಿ) n. a fashionable person, a dandy. ಆಸಾಮಿ, ಸೊಗಸುಗಾರ.

Join (ಜಾಯಿನ್) v. t. i. put together, fasten, unite, take part with other. ಕೂಡಿಸು, ಜೋಡಿಸು, ಸೇರಿಸು, ಕೂಡಿಕೊಳ್ಳು, ಸೇರಿಕೊ, ಕೂಡು, ಭಾಗವಹಿಸು, ಭಾಗಿಯಾಗು.

Joinder (ಜಾಯಿನ್ಡರ್)n. a joining, union. ಕೂಡಣೆ, ಜಂಟಿ, ಸೇರುವಿಕೆ.

Join'er (ಜಾಯಿನರ್)n. esp. maker of furniture and light wood work. ಬಡಗಿ, ಸುತಾರಿ, ತಕ್ಷಕ, ರಥಕಾರ.

Joint (ಜಾಯಿಂಟ್) a. combined, shared by two or more in common. ಜೋಡಿಸಿದ, ಜತೆಯ, ಪಾಲಿನ, ಜಂಟಿ, ಅವಿಭಕ್ತ. n. point at which two things join, structure by which two bones fit thgether. ಕೀಲು, ಸಂದು, ಗಂಟು, ಗ್ರಂಥಿ, ಸಂಧಿ, ಪರ್ವ. out of joint, confusion and disorder. ಗೊಂದಲದಲ್ಲಿ, ಅವ್ಯವಸ್ಥೆಯಲ್ಲಿ.

Join'tress (ಜಾಇಂಟ್ರೆಸ್) n. widow holding jointure. ಸ್ತ್ರೀಧನಭಾಗಿನಿ

Join'ture (ಜಾಯಿನ್‌ಟ್ಯುರ್)n. estate settled on wife for her use after husband's death. ಗಂಡನ ಮರಣಾನಂತರ ಹೆಂಡತಿಗಾಗಿರುವ ಆಸ್ತಿ, ಸ್ತ್ರೀಧನ.



Joist(ಜಾಯಿಸ್ಟ್) n. the timbers to which the boards of a floor or the laths of a ceiling are Joists nailed. ಅಡ್ಡ ಜಂತೆ ಅಥವಾ ಹಲಗೆ ಹಾಕುವುದಕ್ಕಾಗಿ ಗೋಡೆಯಿಂದ ಗೋಡೆಗೆ ಹಾಕಿದ ದೂಲ

Joke(ಜೋಕ್)n. thing said or done to excite laughter. ಹಾಸ್ಯ, ವಿನೋದ, ನಕಲಿ, ತಮಾಷೆ. vt. i. make jokes, banter ಹಾಸ್ಯಮಾಡು, ಅಣಕಿಸು, ತಮಾಷೆಮಾಡು

Joll'ity (ಜಾಲಿಟಿ)n. merry making ಉಲ್ಲಾಸ. ಕುಶಾಲು, ಆನಂದ, ಉತ್ಸವ.

Joll'y (ಜಾಲಿ) a. joyful, festive, jovial ಉಲ್ಲಾಸದ, ಆನಂದವುಳ್ಳ, ವಿಲಾಸಿ, ವಿನೋದಿ.

Jollyboat(ಜಾಲಿಬೋಟ್)n. a ship's boat smaller than culter. ಹಡಗಿನ ಮೇಲಿಟ್ಟಿರುವ ಸಣ್ಣ ದೋಣಿ.

Jolt(ಜೋಲ್ಟ್) vt. i. jerk from seat, &c., move along with jerks. ಅದುರಿಸು, ಪುಟಿ, ಕುಲುಕಾಡು, ಅದುರು, ಸಂಕ್ಷೋಭಿಸು.

Jolterhead (ಜೋಲ್ಟರ್ ಹೆಡ್) n. a stupid fellow; a dunce. ಮೂರ್ಖ, ಮುಠ್ಠಾಳ

Jo'stle(ಜಾಸ್ಲ್)vi. t. push against; struggle with ತಾಕ್ಯಾಡು, ತಳ್ಳು, ನೂಕು, ಹೋರಾಡು, ಹಾಯು, ಅನ್ಯೋನ್ಯ ಸಂಮರ್ದ, ಸಂಘಾತ.

Jot (ಜಾಟ್) n. small amount. ಅಣು ಕಣ, ಲವಲೇಶ. vi. t. write briefly. ಸಂಕ್ಷಿಪ್ತವಾಗಿ ಬರೆ, ಸಂಗ್ರಹವಾಗಿ ಬರೆದುಕೊ.

Jounce (ಜಾನ್ಸ್)vt. jolt or bounce. ಕುಣಿತ, ನೆಗೆತ.

Journ'al (ಜರ್ನಲ್) n. daily record of events, &c., daily newspaper or other periodicals. ದಿನಚರಿ ಪುಸ್ತಕ, ಪಂಜಿಕೆ, ದಿನದ ಅಥವಾ ನಿಯತ ಕಾಲದ ಪತ್ರಿಕೆ, ನಿಯತಕಾಲಿಕ ಪತ್ರಿಕೆ.

Journ'alist (ಜರ್ನಲಿಸ್ಟ್) n. writer for public journal. ಪತ್ರಿಕೋದ್ಯೋಗಿ.

Journ'ey (ಜರ್ನಿ) n. travel, going to a place. ಪ್ರವಾಸ, ಪಯಣ, ಯಾತ್ರೆ, ಪರ್ಯಟನ. v. t. travel. ಪ್ರಯಾಣ ಮಾಡು.

Joust (ಜೂಸ್ಟ್) n. combat with lances between two mounted knights. ಇಬ್ಬರು ಕುದುರೆ ಸವಾರರ ಕಾಳಗ.

Jove (ಜೋವ್) n. Jupiter. ಬೃಹಸ್ಪತಿ, ಗುರುಗ್ರಹ.

Jov'ial (ಜೋವಿಅಲ್)a. merry. ಉಲ್ಲಾಸದ, ಸದಾನಂದದ.

Jovian (ಜೋವಿಯನ್) a. pertaining to Jupiter. ಬೃಹಸ್ಪತಿಗೆ ಸಂಬಂಧಿಸಿದ.

Jowl (ಜೌಲ್) n. jaw, jawbone, cheek. ದವಡೆ, ದವಡೆ ಮೂಳೆ, ಗಲ್ಲ, ಕಪೋಲ, ಕೆನ್ನೆ.

Joy(ಜಾಯ್)n. gladness, pleasure. ಆನಂದ, ಹರ್ಷ, ಸಂತೋಷ.

Joyful (ಜಾಯ್‌ಫುಲ್) a. very glad, merry, full of joy. ಹರ್ಷಿತ, ಆನಂದಪೂರ್ಣ.

Joy'ous (ಜಾಯಸ್) a. glad, gay, joyful. ಆನಂದಪರ, ಉಲ್ಲಾಸವುಳ್ಳ, ಆನಂದದಾಯಕ.

Jubate(ಜ್ಯುಬೇಟ್)a. having mane. ಅಯಾಲು ಇರುವ.

Jubilance (ಜೂಬಿಲೆನ್ಸ್) n. exultation, shouting in triumph. ಆನಂದೋದ್ಗಾರ, ಜಯ ಜಯಕಾರ.

Jub ilant(ಜ್ಯೂಬಿಲೆಂಟ್)a. exultant. ಜಯಧ್ವನಿಕಾರಿ, ಜಯಘೋಷಮಾಡುವ, ಆನಂದಭರಿತ.

Jubilate (ಜ್ಯೂಬಿಲೇಟ್) vt. rejoice. ಆನಂದವನ್ನು ಪ್ರದರ್ಶಿಸು.

Jubilation (ಜೂಬಿಲೇಷನ್) n. exultation. ಪರಮಾನಂದ, ಜಯ ಘೋಷ.

Jub'ilee (ಜೂಬಿಲಿ) n. fiftieth anniversary, public rejoicing. 50 .

ಸಂವತ್ಸರೆಸಂವರ್ಧನ, ಮಂಗಳ, ಕನಕ ಮಹೋತ್ಸವ. Silver J. (25 ವರ್ಷಗಳ) ರೌಪ್ಯ ಮಹೋತ್ಸವ, ಬೆಳ್ಳಿ ಹಬ್ಬ. Diamond J. (60 ವರ್ಷಗಳ) ರತ್ನ (ರನ್ನ) ಮಹೋತ್ಸವ.

Judge (ಜಜ್) n. officer appointed to try cases in court of justice, (of God) supreme arbiter, umpire. ಶ್ರೇಷ್ಠ ನ್ಯಾಯಾಧೀಶ, ಧರ್ಮಾಧ್ಯಕ್ಷ, ನ್ಯಾಯಾಧಿಪತಿ. vt. i. trycause, decide questions ; award. ತೀರ್ಮಾನಿಸು, ತೀರ್ಪು ಕೊಡು, ವಿಚಾರಣೆ ಮಾಡು, ಪ್ರಮಾಣಿಸು, ಬಗೆಹರಿಸು, ಇತ್ಯರ್ಥಪಡಿಸು, ನಿರ್ಣಯ ಹೇಳು.

Judge'ment-dg'ment (ಜಜ್ಮೆಂಟ್) n. sentence of a court, &c., divine displeasure ; opinion, sagacity. ತೀರ್ಪು, ಕೋರ್ಟಿನ ನಿರ್ಣಯ, ದೈವಶಿಕ್ಷೆ. ವಿವೇಕ, ಯುಕ್ತಾಯುಕ್ತ ಪರಿಜ್ಞಾನ, ಅಭಿಪ್ರಾಯ, ಮತ, ವಿವೇಚನೆ.

Judgeship (ಜಜ್‌ಶಿಪ್) n. post of a judge. ನ್ಯಾಯಾಧೀಶನ ಪದವಿ.

Jud'icature (ಜೂಡಿಕೇಚರ್) n. administration of justice, body of judges. ನ್ಯಾಯ ತೀರಿಸುವ ಅಧಿಕಾರ, ನ್ಯಾಯಸಭೆ, ನ್ಯಾಯ ನಿರ್ವಾಹ, ನ್ಯಾಯಾಧಿಪತಿಗಳ ಮಂಡಲಿ.

Judici'al (ಜುಡಿಶಲ್) a. of or by court or judge ; impartial. ನ್ಯಾಯಸ್ಥಾನದ, ನಿಷ್ಪಕ್ಷಪಾತವಾದ, ನ್ಯಾಯಾಧೀಶನ, ಪಕ್ಷಪಾತವಿಲ್ಲದ

Judici'ary (ಜುಡಿಶರಿ) n. judges of a state collectively. ನ್ಯಾಯಾಧೀಶ ಸಮೂಹ, ವಿಚಾರಕ ಸಮೂಹ, ನ್ಯಾಯಾಧಿಪತಿಗಳು.

Judici'ous (ಜುಡಿಶಸ್) a. sensible, prudent, skilful. ವಿವೇಕವುಳ್ಳ, ವಿವೇಚನೆಯುಳ್ಳ, ಚತುರ, ಮೇಧಾವಿ, ಪ್ರಾಜ್ಞ.

Jug(ಜಗ್)n. deep vessel for liquids with handle ಕಿವಿಯ ಪಾತ್ರೆ, ಕೂಜಾ.

Jugal (ಜ್ಯೂಗಲ್) a. pertaining to the cheek. ಕೆನ್ನೆಗೆ ಸಂಬಂಧಿಸಿದ.

Juggins (ಜಗಿನ್ಸ್)n. a fool. ಮೂರ್ಖ.

Jug'gle (ಜಗಲ್)v. i. t. play conjuring tricks.trick; cheat. ಮೋಡಿಮಾಡು, ಕಣ್ಕಟ್ಟು ಮಾಡು, ಮೋಸಮಾಡು.

Juggler (ಜಗ್ಲರ್) n. conjurer, cheat ಗಾರುಡಿಗಾರ, ಠಕ್ಕ, ಮಾಯಾವಿ, ಇಂದ್ರಜಾಲಿಕ, ಮೋಸಗಾರ, ತಂತ್ರಗಾರ.



Juggler

Jugg'lery (ಜಗ್ಲರಿ) n. sleight of hand. ಮೋಡಿ, ಕಣ್ಣುಕಟ್ಟು, ಇಂದ್ರಜಾಲ.

Jugular (ಜ್ಯೂಗುಲರ್) a. pertaining to the neck or throat. ಕತ್ತು ಅಥವಾ ಕಂಠಕ್ಕೆ ಸಂಬಂಧಿಸಿದ.

Juice (ಜೂಸ್) n. liquid part of vegetable or fruit. ರಸ, ಸಾರ, ದ್ರವ, ಆಸವ. j. -less. ನೀರಸ, ಸಾರಹೀನ, ಶುಷ್ಕ.

Jui'cy (ಜೂಸಿ) a. full of juice. ರಸಮಯ, ರಸಭರಿತ, ರಸಪೂರ್ಣ, ಸಾರವತ್ತಾದ.

Juj'ube (ಜೂಜೂಬ್) n. a kernal fruit. ಬೋರೆಹಣ್ಣು, ಬದರಿ, ಎಲಚಿಹಣ್ಣು.

Ju-jutsu', jiu-jitsu' (ಜುಜೂತ್ಸೂ)n. Japanese art of wrestling, &c. ಜಪಾನಿಗಳ ಮಲ್ಲವಿದ್ಯೆ, ಜಪಾನಿಕುಸ್ತಿ.

Jul'ep (ಜೂಲೆಪ್) n. sweet drink. ಪಾನಕ, ಶರಬತ್ತು.

July (ಜುಲೈ) n. seventh month of English year. ಇಂಗ್ಲಿಷ್ ವರ್ಷದ 7ನೆಯ ತಿಂಗಳು, ಜುಲೈ.

Jumbal (ಜಮ್‌ಬಾಲ್) n. a kind of thin sweet cake. ತೆಳುವಾದ ಸಿಹಿ ದೋಸೆ.

Jum'ble (ಜಂಬಲ್) v. t. i. move about in disorder, mix con-

fusedly. ಗಲಿಬಿಲಿಮಾಡು, ಸಂಕರವಾಗು, ಕಲಬೆರಕೆಮಾಡು, ಅವ್ಯವಸ್ಥೆಮಾಡು. n. muddle, confused heap. ಸಂಕರ, ಮಿಶ್ರಣ, ಸಂಕುಲತೆ.

Jumbler (ಜಂಬ್ಲರ್) n. one who jumbles things. ಗಲಿಬಿಲಿಮಾಡುವವನು.

Jumbo (ಜಂಬೊ) n. a big clumsy person. ಒಡ್ಡು ಒಡ್ಡಾದ ಮನುಷ್ಯ.

Jump (ಜಂಪ್) v. t. i leap, spring from ground, skip (book, &c.) ಹಾರು, ಕುಪ್ಪಳಿಸು, ನೆಗೆ, ಚಿಗಿ, ಎಗರು, ಹಾಳೆಹಾರಿಸಿಬಿಡು n. leap sudden rise in price. ಹಾರಿಕೆ, ನೆಗೆತ, ಎಗರು, ಕುಪ್ಪಳಿಕೆ, ಬೆಲೆಏರೋಣ j at, accept with eagerness. ಕುಣಿದಾಡುತ್ತ ಸ್ವೀಕರಿಸು. j. over the broom stick, marry in an informal way. ವಿಧಿನಿಯಮವಿಲ್ಲದೆ ಮದುವೆಯಾಗು.

Junc'tion (ಜಂಕ್ಷನ್) n. joining point, station where railway lines meet. ಸೇರಿಕೆ, ರೈಲುಮಾರ್ಗಗಳು ಕೂಡುವ ನಿಲ್ದಾಣ, ಕೂಡಲು ಸಂಧಿ, ಜಂಕ್ಷನ್.

Junc'ture (ಜಂಕ್ಚರ್) joining point: state of affairs, critical point. ಸಂಧಿಕಟ್ಟು, ಸಂಧಿಸಮಯ, ಕಷ್ಟಕಾಲ, ವೇಳೆ, ಸಮಯ.

June (ಜೂನ್) n. sixth month of the English year. ಇಂಗ್ಲಿಷ್ ವರ್ಷದ 6ನೆಯ ತಿಂಗಳು.

Jun'gle (ಜಂಗಲ್) n. land coverd with tangled vegetation· ಅರಣ್ಯ, ಕಾಡು, ಕುರುಚಲು ಕಾಡು, ಜಂಗಲಿ, ಗುಲ್ಮಾವೃತಸ್ಥಾನ.

Jun'ior (ಜೂನಿಅರ್) a· the younger, of less standing· ಕಿರಿಯ, ಚಿಕ್ಕ, ಎಳೆಯ, ಕೆಳದರ್ಜೆಯ.

Juniority (ಜೂನಿಯಾರಿಟಿ) n. the state of being junior. ಕಿರಿಯತನ, ಎಳೆತನ.

Junk (ಜಂಕ್) n. pieces of waste material, boat used by the chinese. ಪ್ರಯೋಜನವಿಲ್ಲದ ಸಣ್ಣ ವಸ್ತುಗಳು, ಚೀನೀಯರು ಉಪಯೋಗಿಸುವ ಒಂದು ವಿಧದ ದೋಣಿ.



Junk

Junket (ಜಂಕೆಟ್) n. a feast, a sweetmeat. ಹಬ್ಬದ ಊಟ, ಸಿಹಿತಿಂಡಿ.

Juno (ಜೂನೊ) n. a very beautiful woman. ಸೌಂದರ್ಯವತಿಯಾದ ಸ್ತ್ರೀ.

Junto (ಜಂಟೊ) n. a secret society of action. ಒಳಸಂಘ, ಪಂಗಡ.

Ju'piter (ಜೂಪಿಟರ್) n· (myth) king of gods, largest of planets ದೇವತೆಗಳ ಗುರು ಅಥವಾ ರಾಜ, ಬೃಹಸ್ಪತಿ, ಗುರು.

Jural (ಜೂರಲ್) adj pertaining to law. ಕಾನೂನು.

Jurid'ical (ಜುರಿಡಿಕಲ್) a. of judicial proceedings; legal. ನ್ಯಾಯಾಧಿಪತ್ಯದ, ನ್ಯಾಯ ಸಂಬಂಧವಾದ, ಕೋರ್ಟಿನ.

Jurisconsult' (ಜೂರಿಸ್‌ಕನ್ಸಲ್ಟ್) n. one learned in law· ಧರ್ಮಶಾಸ್ತ್ರ ಪಂಡಿತ, ಸ್ಮೃತಿಶಾಸ್ತ್ರಜ್ಞ, ನ್ಯಾಯಶಾಸ್ತ್ರ ಪಂಡಿತ.

Jurisdic'tion (ಜೂರಿಸ್‌ಡಿಕ್‌ಶನ್) n. administration of justice; legal authority · territory it extends over· ನ್ಯಾಯಾಧಿಕಾರ, ನ್ಯಾಯಪ್ರಭುತ್ವ, ಅಧಿಕಾರವ್ಯಾಪ್ತಿ. ಅಧಿಕಾರ ಪ್ರಾಂತ್ಯ.

Jurisdictional (ಜೂರಿಸ್‌ಡಿಕ್ಷನಲ್) a. pertaining to jurisdiction. ನ್ಯಾಯಾಧಿಕಾರಕ್ಕೆ ಸಂಬಂಧಿಸಿದ

Jurisprud'ence (ಜೂರಿಸ್‌ಪ್ರೂಡೆನ್ಸ್) n. science of or skill in law· ವ್ಯವಹಾರ ತಂತ್ರ, ಧರ್ಮಶಾಸ್ತ್ರ, ನ್ಯಾಯಧರ್ಮ, ನ್ಯಾಯಶಾಸ್ತ್ರ, ನ್ಯಾಯಕೌಶಲ.

Jurist (ಜೂರಿಸ್ಟ್) n. a person well versed in law. ನ್ಯಾಯಶಾಸ್ತ್ರ ಪಂಡಿತ.

ir'or(ಜೂರರ್)n. member of jury; one who takes oath. ಪಂಚಾಯಿತ, ಪಂಚರಲ್ಲೊಬ್ಬ.

ir'y (ಜೂರಿ) n. body of persons sworn to tender verdict in court of justice. ಪಂಚಾಯಿತರು, "ಜೂರಿ" ನ್ಯಾಯದರ್ಶಿಗಳು, ಸಭಾಸದರು.

ist(ಜಸ್ಟ್)a. upright, fair, correct, due, proper, right ಪ್ರಾಮಾಣಿಕ, ನ್ಯಾಯವಾದ, ಸಮಂಜಸವಾದ, ಯೋಗ್ಯವಾದ, ಉಚಿತ, ಸರಿಯಾದ. adv. exactly, barely, not long ago. ಸರಿಯಾಗಿ, ಕೇವಲ, ಈಗತಾನೆ, ಸ್ವಲ್ಪ ಮುಂಚೆ.

us'tice(ಜಸ್ಟಿಸ್) n. justness; fairness; judicial proceeding, judge. ನ್ಯಾಯವಾದ ನಡತೆ, ನ್ಯಾಯ, ನ್ಯಾಯವಿಚಾರಣೆ, ನ್ಯಾಯಾಧಿಪತಿ. to do one j. display one's good qualities. ದಯೆತೋರು, ನ್ಯಾಯಕೊಡು. in j. to; doing what justice demands. ನ್ಯಾಯಪ್ರಕಾರವಾಗಿ.

ustifica'tion(ಜಸ್ಟಿಫಿಕೇಶನ್) n. defence, vindication. ದೋಷ ನಿವಾರಣೆ, ಸಮರ್ಥನೆ, ಪ್ರತಿಪಾದನೆ.

us'tify (ಜಸ್ಟಿಫೈ) v. t. show the justice or truth of. clear from blame ತಪ್ಪಿಲ್ಲೆಂದು ತೋರಿಸು, ನ್ಯಾಯಪ್ರತಿಪಾದಿಸು, ನಿರ್ದೋಷಪಡಿಸು, ನ್ಯಾಯವೆಂದು ಸಮರ್ಥಿಸು, ರುಜುವಾತುಮಾಡು.

Justle (ಜಸ್ಲ್) same as jostle.

Justness (ಜಸ್ಟ್‌ನೆಸ್) n. quality of being just. ಅಪಕ್ಷಪಾತ, ನ್ಯಾಯಪರತೆ

Jut (ಜಟ್) v. i. project. ಮುಂದೆ ಚಾಚಿಕೊಂಡಿರು, ಹಾದಿರು. n. projection. ಉಬ್ಬಟೆ, ಉಬ್ಬು, ಪ್ರಬಲನ.

Jute (ಜೂಟ್) n. fibre from bark used for canvas, cord. &c. ಗೋಣಿನಾರು, ಮುಂಜನಾರು, ಕತ್ತಾಳೆನಾರು.

Juvenescence (ಜೂವಿನಸೆನ್ಸ್) n. change from infancy to youth. ಯೌವನದ ಉದಯ.

Juv'enile (ಜೂವಿನೈಲ್) a. youthful, pertaining to young persons. ಹರೆಯದ ತರುಣ, ಕುಮಾರ, ಅಲ್ಪವಯಸ್ಕ-ರ.

Jux'tapose (ಜಕ್‌ಸ್ಟಾಪೋಜ್) v. t. place side by side. ಅಕ್ಕಪಕ್ಕದಲ್ಲಿಡು, ನೆರೆಯಲ್ಲಿಡು.

Juxtaposition (ಜಕ್ಸ್ಟಪೊಝಿಶನ್)n. placing side by side contiguity ಸ್ಥಿತಿಸಾನ್ನಿಧ್ಯ, ಸಾಮೀಪ್ಯ, ಪಕ್ಕಪಕ್ಕದಲ್ಲಿಡುವುದು, ನೈಕಟ್ಯ, ಸನ್ನಿಧಿ.

Jymold (ಜಿಮೋಲ್ಡ್) a. made of double rings. ಎರಡು ಉಂಗುರಗಳುಳ್ಳ.

K

K (ಕೇ) eleventh letter of the English alphabet; (chem.) the symbol for potassium. ಇಂಗ್ಲಿಷ್ ವರ್ಣಮಾಲೆಯ ೧೧ನೆಯ ಅಕ್ಷರ, ಪೊಟಾಶಿಯಮ್ ದ್ರವ್ಯದ ಸಂಕೇತಾಕ್ಷರ.

Kaaba (ಕಾಬಾ) n. same as Caaba.

Kabala (ಕಬಾಲ) n. a same as Cabala.

Kafir, kaff'ir (ಕಾಫಿರ್) n. a. S. African native of Bantu stock, unbeliever (in Islam.) ದಕ್ಷಿಣ ಆಫ್ರಿಕದ ಬಂಟು. ಜೂಲು ಜನರು, ಇಸ್ಲಾಮ್ ಧರ್ಮದಲ್ಲಿ ಶ್ರದ್ಧೆಯಿಲ್ಲದವ.

Kago (ಕಾಗೋ)n. Japanese palanquin made of basket work. ಬಿದರಿನಿಂದ ನಿರ್ಮಿಸಿದ ಜಪಾನಿನಲ್ಲಿ ಉಪಯೋಗಿಸುವ ಪಲ್ಲಕ್ಕಿ.

Kai'ser (ಕೈಜರ್) n. emperor. ಚಕವರ್ತಿ.

Kale, kail (ಕೇಲ್) n. kind of cabbage. ಒಂದು ಜಾತಿಯ ಕೋಸುಗಡ್ಡೆ.

Kaleid'oscope (ಕೆಲೈಡೋಸ್ಕೋಪ್)n. tube in which figures are produced by reflections of pieces of coloured glass and varied by rotation of the tube. ನಾನಾವರ್ಣಗಳನ್ನು ತೋರಿಸುವ ಕನ್ನಡಿ ಕೊಳವೆ, ವಿವಿಧ ಚಿತ್ರ ದರ್ಶಕ.

Kali (ಕಾಲಿ) n. the Hindu goddess of destruction. ಕಾಳಿಕಾದೇವಿ, ದುರ್ಗೆ.

Kamptulican (ಕ್ಯಾಂಪ್ಟುಲಿಕಾನ್) n. a kind of stiff floor-cloth ಒಂದು ಬಗೆಯ ನೆಲಕ್ಕೆ ಹಾಸುವ ದಪ್ಪ ಬಟ್ಟೆ.

Kangaroo' (ಕ್ಯಾಂಗ್ರೂ) n. Australian marsupial with hind quarters strongly developed for jumping. "ಕಾಂಗರು" ಎಂಬ ಮೃಗ.



Kangaroo

Kaolin (ಕಾಯೊಲಿನ್) n. china clay. ಬಿಳಿಯ ಜೇಡಿಮಣ್ಣು.

Kapok (ಕಾಪಾಕ್) n. cotton-wool fcund in the seeds of certain trees. ಕೆಲವು ಮರದ ಬೀಜಗಳಲ್ಲಿ ದೊರಕುವ ಹತ್ತಿ.

Kea (ಕೀ) n. Alpine parrot. ಆಲ್ಪ್ಸ್ ಪರ್ವತವಾಸಿಯಾದ ಒಂದು ಜಾತಿಯ ಗಿಣಿ.

Keck (ಕೆಕ್) vi. retch. ಓಕರಿಸು.

Kedge (ಕೆಜ್) n. small anchor. ಸಣ್ಣ ಲಂಗರು.

Keel (ಕೀಲ್) n. chief timber (of iron girder) in ship's bottom. ಹಡಗಿನ ಅಡಿಭಾಗ, ಅಡಿಹಲಗೆ, ಹಡಗಿನ ಅಡಿಗಟ್ಟು. keel over; upset, capsize. ಉರುಳಿಸಿಬಿಡು, ಮಗುಚಿಹಾಕಿಬಿಡು, ಉಲಟವಾಗು, ಹೊರಳು.

Keen(ಕೀನ್)a eager, sharp, intense. ಉತ್ಸುಕ, ಹರಿತವಾದ, ಮೊನೆಯುಳ್ಳ, ಹರಿತವಾದ, ಚೂಪಾದ, ತೀಕ್ಷ್ಣವಾದ, ಉತ್ಸಾಹದಿಂದ ಕೂಡಿದ, ಚುರುಕಾದ, ತೀವ್ರವಾದ.

Keenness(ಕೀನ್‌ನೆಸ್) a. eagerness. ಕುತೂಹಲ.

Keep (ಕೀಪ್) v. t. & i. protec feed, observe, reserve, las ರಕ್ಷಿಸು, ಕಾಪಾಡು, ಗೌರವಿಸು, ಉಳ ಟ್ಟಿರು, ಇಟ್ಟುಕೊಂಡಿರು, ನಾಶವಾಗಿದ ಇರು, ಇರು. n. maintenanc ಪೋಷಣೆ. k. abreast of, not fall behind. ಹಿಂದೆ ಬೀಳದಿರು. company, have a sweet hear to court. ನಲ್ಲೆಯುಳ್ಳವನಾಗಿರು, ಪ್ರಣ ತೋರು. k. an eye to or on, watc ಕಣ್ಣಿಟ್ಟಿರು, ಕಾವಲಿರು. k. in wit him. ಸ್ನೇಹದಿಂದಿರು. k back. res rain. reserve. ಕೊಡದೆ ಇಟ್ಟುಕೊಳ್ಳು, ಅಡ್ಡಮಾಡು, ತಡೆಗಟ್ಟು. k. dow suppress. ಒತ್ತಿಡು, ತಗ್ಗಿಸು, ಅಡಗಿಸು. k. from, avoid. ಬಿಟ್ಟುಬಿಡು, ದೂ ವಾಗು. k. on, continue. ಮುಂದ ವರಿಸು. k. thing in dark, keep i secret. ರಹಸ್ಯವಾಗಿಡು, ಗೌ ವಾಗಿಡು. k. body & soul together, maintain bare existence ಕೇವಲ ಜೀವಹಿಡಿದಿರು. k. up. continue along, maintain ಮುಂದುವರಿಸು. ಉಳಿಸಿಕೊಳ್ಳು, ಕಾದ ಕೊಳ್ಳು, k. to oneself, of a reserved disposition ಒಬ್ಬರೊಂದಿಗ ಬೆರೆಯದಿರು. k. good hours, regularity of time in doing any work. ಕೆಲಸಮಾಡುವಾಗ ಹೊತ್ತು ತಪ್ಪಿಸದಿರು. ವೇಳೆಗೆ ಸರಿಯಾಗಿ ಇರು. k. one's head above water, avoid getting into debt. ಸಾಲಮಾಡದಿರು. k. the pot boiling; procure the necessities of life. ಬಾಳ್ಕೆಗೆ ಬೇಕಾದವನ್ನು ಸಂಪಾದಿಸು. k. the powder dry; keep one's energies ready for action. ಕಾಲಬಂದಾಗ ಕೆಲಸಮಾಡಲು ಸಿದ್ಧವಾಗಿರು. k. pace with; go at the same speed as. ಸರಿಜೋಡಿಯಾಗಿ ಹೋಗು, ನಡೆ. k. one's bed, be ill. ಕಾಯಿಲೆಯಾಗಿರು. k one's words; do as one promises. ಮಾತಿನಂತೆ ನಡೆದುಕೊಳ್ಳು. k. to oneself; not reveal.

ಬಹಿರಂಗಪಡಿಸದಿರು, ತನ್ನಲ್ಲಿಯೇ ಇಟ್ಟುಕೊಳ್ಳು. k. up with; not to be behind. ಹಿಂದೆ ಬೀಳದಿರು. k. up to it; act according to it. ಅದರಂತೆ ನಡೆದುಕೊ. k. up appearances, behave as if everything was right. ಎಲ್ಲವೂ ಕ್ಷೇಮವಾಗಿರುವಂತೆ ತೋರಿಸಿಕೊಳ್ಳು. k. the wolf from the door; keep away starvation. ಉಪವಾಸ ಒದಗದಂತೆ ನೋಡಿಕೊಳ್ಳು.

Keeper (ಕೀಪರ್) n. attendant; manager; owner ಕಾಯುವವ, ಉಸ್ತುವಾರಿ ನೋಡಿಕೊಳ್ಳುವವನು, ಯಜಮಾನ

Keep'ing (ಕೀಪಿಂಗ್) n. care, custody; harmony. ಪಾಲನ, ಪೋಷಣೆ, ಕಾವಲು, ಜೋಕೆ, ಸ್ವಾಧೀನ, ರಕ್ಷಣೆ, ಅನುರೂಪ್ಯ, ಸಾಮರಸ್ಯ, ಪರಸ್ಪರಹೊಂದಿಕೆ.

Keep'sake (ಕೀಪ್ ಸೇಕ್) n. thing treasured for the sake of the giver. ನೆನಪಿನ ಕುರುಹು; ಸ್ಮಾರಕ, ಸ್ಮೃತಿದಾನ, ಪ್ರೇಮದ ಕುರುಹು.

Keg (ಕೆಗ್) n. small cask or barrel. ಚಿಕ್ಕ ಪೀಪಾಯಿ, ಸಣ್ಣ ಪೀಪಾಯಿ.

Keif (ಕೀಫ್) n. drowsiness produced by intoxicants. ನಿಶೆ, ಮತ್ತು.

Ken (ಕೆನ್) vt. know. ದೂರದಿಂದ ಗುರುತಿಸು, ನೋಡು. n. range of knowledge or sight. ದೂರದ ನೋಟ, ದೃಷ್ಟಿಯ ವೈಶಾಲ್ಯ, ದೃಷ್ಟಿಯ ವ್ಯಾಪ್ತಿ.

Kenn'el (ಕೆನೆಲ್) n. dog's home, gutter. ನಾಯಿಕೊಟ್ಟಿಗೆ, ನಾಯಿಮನೆ, ಮೋರಿ, ಚರಂಡಿ.


Kennel

Kepi (ಕೆಪಿ) n. French military cap. ಫ್ರೆಂಚ್ ಸೈನಿಕ ಟೋಪಿ.

Keramic (ಕೆರಾಮಿಕ್) adj. pertaining to pottery. ಕುಂಬಾರಿಕೆಗೆ ಸಂಬಂಧಿಸಿದ.

Keratose (ಕೆರಾಟೋಸ್) a. of horn-like structure. ಕೊಂಬಿನ ಆಕಾರವುಳ್ಳ, ಶೃಂಗಾಕೃತಿಯ.

Kerb (ಕರ್ಬ್) n edge of pavement. ಕಾಲುದಾರಿಯ ಅಂಚು.

Kerch'ief (ಕರ್ಚೀಫ್) n. any loose cloth used in dress. ಕರವಸ್ತ್ರ, ಕೈಚೌಕ, ಬಟ್ಟೆ.

Kerf (ಕರ್ಫ್) n. groove made by cutting with a saw. ಗರಗಸದಿಂದ ಕುಯ್ದು ಮಾಡಿದ ವೆಜ್ಜ.

Kern (ಕರ್ನ್) n. peasant, boor, Irish foot soldier. ಒರಟು ಮನುಷ್ಯ, ಐರ್ಲೆಂಡಿನ ಪದಾತಿ.

Kern'el (ಕರ್ನೆಲ್) n. anything in a husk or shell, the substance in the shell of a nut. ತಿರುಳು, ಬೀಜ, ಕೊಬ್ಬರಿ.

Ke'rosene (ಕೆರೋಸಿನ್) n. oil from bitumen. ಚಿಮಣಿ ಎಣ್ಣೆ, ಸೀಮೆಎಣ್ಣೆ, ದೀಪದೆಣ್ಣೆ.

Kestrel (ಕೆಸ್ಟ್ರಲ್) n. kind of small hawk. ಒಂದು ಬಗೆಯ ಚಿಕ್ಕ ಶ್ಯೇನ ಪಕ್ಷಿ

Ketch (ಕೆಚ್) n. small two-masted ship. ಒಂದು ಸಣ್ಣ ಹಡಗು.

Ketch'up (ಕೆಚ್ಅಪ್) n. sauce for flavouring dishes. ಉಪ್ಪಿನಕಾಯಿ, ಚಟ್ನಿ, ತೊಕ್ಕು, ಚಟ್ಟು.

Ket'tle (ಕೆಟ್ಲ್) n. metal vessel with spout and handle for boiling. ಕೊಪ್ಪರಿಗೆ, ಕಡಾಯಿ, 'ಕೆಟಲು'.

Ket'tledrum (ಕೆಟ್ಲ್ ಡ್ರಮ್) n. a drum with parchment spread over a brass hemisphere. ನಗಾರಿ, ಭೇರಿ, ಮದ್ದಳೆ.


Kettle drum

Key (ಕೀ) n. instrument for shutting or opening a lock; solution, crib, manual. ಕೀಲಿಕೈ, ಬೀಗದಕೈ, ಚಾವಿ, ಅರ್ಥ, ಸಮಸ್ಯಭೇದನ, ಸಂಕೇತ, ಟೀಕು.

Keyboard (ಕೀಬೋರ್ಡ್) n. series of keys in a musical instrument. ಕೀಲಿ ಕೈಗಳಿರುವ ಮಣೆ.

Keyhole (ಕೀಹೋಲ್) n. aperture for receiving key. ಬೀಗದಕೈ ಹಾಕುವ ಕಂಡಿ.

Keyless (ಕೀಲೆಸ್)a. without a key ಬೀಗದಕೈಯಿಲ್ಲದ.

Key'note(ಕೀನೋಟ್) n. the key or fundamental note of a piece of music. ತಾನ, ಪ್ರಧಾನಸ್ವರ.

Keyring(ಕೀರಿಂಗ್)n.ring in which keys form a bunch. ಬೀಗದಕೈ ಗೊಂಚಲು.

Key'stone (ಕೀಸ್ಟೋನ್) n. central stone of arch, (fig.) dominant idea. ಆಣೆ ಕಲ್ಲು, ಕೇಂದ್ರತತ್ವ, ಕಮಾನಿನ ನಡುವಿನ ಕಲ್ಲು, ಮುಖ್ಯತತ್ವ.



Keystone

Khan (ಖಾನ್) n. title of the King of Afghanistan. ಅಫ್ಘಾನ್ ದೊರೆಯ ಒಂದು ಬಿರುದು, ಖಾನ.

Khedive (ಖೆಡಿವ್) n. title of the Viceroy of Egypt. ಈಜಿಪ್ಟ್ ದೇಶದ ಮಹಾಶಾಸಕನ ಉಪಾಧಿ.

Kibe(ಕೈಬ್)n ulcerated chilblain. ಚಳಿಯಿಂದ ಕೈಕಾಲು ಒಡೆಯುವುದು.

Kick(ಕಿಕ್)vi. & t. strike or move with the foot. ಒದೆ, ಒದೆಕೊಡು, ಮೆಟ್ಟು, ತುಳಿ. n. blow given with foot. recoil of gun, reacting power. ಒದೆತ, ಬಂದೂಕಿನ ಹಿಂಪೆಟ್ಟು, ತುಳಿತ, ಲತ್ತೆ, ಪ್ರತಿಕ್ರಿಯಾಶಕ್ತಿ. k. the beam, be light, fly into air. ಲಘುವಾಗಿರು, ಮೇಲಕ್ಕೆ ಹಾರು. k. up a row. cause a disturbance. ಗೊಂದಲವೆಬ್ಬಿಸು.

Kicker (ಕಿಕರ್) n. horse which kicks. ಒದೆಯುವ ಕುದುರೆ.

Kid (ಕಿಡ್) n. young goat, kid skin, leather. ಆಡಿನಮರಿ, ಆಡಿನ ಚರ್ಮ, ಆಡಿನಮರಿಯ ತೊಗಲು.

Kidd'y (ಕಿಡ್ಡಿ) n. child. ಚಿಕ್ಕ ಮಗು, ಚಿಕ್ಕ ಕೂಸು.

Kid'nap(ಕಿಡ್ನಾಪ್)v.t. steal human beings. ಮನುಷ್ಯರನ್ನು ಕದ್ದುಕೊಂಡು ಹೋಗು, ಮಕ್ಕಳನ್ನೆತ್ತಿಕೊಂಡು ಹೋಗು.

Kidney (ಕಿಡ್ನಿ) n. either of pair of glandular organs serving to excrete urine; nature; Kidneys kind. ಮೂತ್ರಜನಕಾಂಗ, ಸ್ವಭಾವ, ಪ್ರಕೃತಿ, ಬಗೆ, ತೆರ.

Kier (ಕಿಯರ್) n. vessel in which cloth is boiled for bleaching. ಬಿಳಿಯುವುದಕ್ಕೆ ಬಟ್ಟೆಗಳನ್ನು ಕುದಿಸುವ ಪಾತ್ರೆ.

Kill (ಕಿಲ್) v. t. i. put to death; slay; cause the death of; destroy, make useless, ಕೊಲ್ಲು; ಕೊಂದುಹಾಕು, ಸಾಯಿಸು, ವಧಿಸು, ಅಪಗಿಬಿಡು. k. time, waste time. ಹೊತ್ತುಕಳೆ, ಕಾಲಕಳೆ, k. two birds with one stone, gain two objects with one exertion. ಏಕಪ್ರಯತ್ನದಿಂದ ಎರಡು ಉದ್ದೇಶ ಸಾಧಿಸು.

Kill-joy (ಕಿಲ್‌ಜಾಯ್) n. gloomy person. ಸಂತೋಷ ಸಮಯದಲ್ಲಿ ಅದಕ್ಕೆ ಭಂಗ ತರುವವನು.

Kilogram (ಕಿಲೊಗ್ರಾಮ್) n. a thousand grammes. ಸಾವಿರ ಗ್ರಾಂ ತೂಕ.

Kiln (ಕಿಲ್ನ್) n a large oven, furnace. ಆವಿಗೆ, ಭಟ್ಟಿ, ಒಲೆ. brick k. ಇಟ್ಟಿಗೆಯ ಗೂಡು.

Kilt (ಕಿಲ್ಟ್) n. a highlander's skirt from waist to knees. ಸ್ಕಾಟ್ಲೆಂಡಿನವರ ಲಂಗದಂಥ ಉಡುಪು.

Kilted (ಕಿಲ್ಟೆಡ್) a. wrapped. ಸುತ್ತಲಾದ.

Kimbo (ಕಿಂಬೊ)adj. bent, arched. ಬಾಗಿದ, ಕಮಾನುಳ್ಳ.

Kin (ಕಿನ್) n. persons of the same family, relatives. ಬಂಧು ಬಳಗದವರು, ನಂಟರು, ಒಂದೇ ಮನೆತನ, ವಂಶದವರು.

Kinchin (ಕಿನ್‌ಚಿನ್) n. child. ಶಿಶು.

Kind (ಕೈಂಡ್) n. race of animals, &c. class, sort. ಜಾತಿ, ಪ್ರಕಾರ, ಕುಲ, ತರಗತಿ, ತೆರ, ಬಗೆ. a. benevolent, gentle, friendly, considerate. ದಯಾಪರ, ಕರುಣೆಯುಳ್ಳ, ವಿಚಾರಪರ, ಸುಹೃದಯ, ಉಪಕಾರಿ; ಕಾರುಣಿಕ.

Kindergarten (ಕಿಂಡರ್‌ಗಾರ್ಟನ್) n. school for educating young children by object lessons, games, &c. ಶಿಶುವಿಹಾರ, ಬಾಲೋದ್ಯಾನ.

Kindle (ಕಿಂಡಲ್) v.t.i. set fire to, light, inspire, become kindled, glow: ಬೆಂಕಿಹಚ್ಚು, ಉರಿಸು, ಉರಿಹೊತ್ತಿಸು, ಹೊತ್ತಿಕೊ, ಉದ್ರೇಕಿಸು, ಆವೇಶಗೊಳಿಸು, (ಮನೋವೃತ್ತಿ) ಜಾಗೃತಗೊಳಿಸು.

Kindliness (ಕೈಂಡ್ಲಿನೆಸ್) n. affectionate disposition. ದಯೆ, ಸೌಶೀಲ್ಯ.

Kind'ly (ಕೈಂಡ್ಲಿ) a. kind, sympathetic. ಕರುಣೆಯುಳ್ಳ, ದಯಾಳು, ಸಹಾನುಭೂತಿಯುಳ್ಳ.

Kindness (ಕೈಂಡ್‌ನೆಸ್) n. goodness, sympathy. ಸೌಜನ್ಯ, ದಯಾಳುತ್ವ, ಸೌಶೀಲ್ಯ.

Kin'dred (ಕಿಂಡ್ರೆಡ್) n. blood relationship, relatives. ಬಂಧುಬಳಗದವರು, ಸಗೋತ್ರ, ಬಂಧುವರ್ಗ, ನಂಟರು, ರಕ್ತಸಂಬಂಧ, ನಂಟತನ, ಬಳಗ.

Kine (ಕೈನ್) n. pl. of cow, cow ಶಬ್ದದ ಬಹುವಚನ.

Kinema (ಕಿನೀಮ) n. cinema. ಚಲಚ್ಚಿತ್ರ.

Kinematograph (ಕಿನಿಮಟೊಗ್ರಾಫ್) n. cinema. ಚಲಚ್ಚಿತ್ರ.

King (ಕಿಂಗ್) n. monarch. ಅರಸು, ರಾಜ, ದೊರೆ. fem queer ರಾಣಿ.

King'craft (ಕಿಂಗ್‌ಕ್ರಾಫ್ಟ್) n. able exercise of royalty. ರಾಜನೀತಿ, ರಾಜ್ಯನೀತಿ, ರಾಜತಂತ್ರ.

King'dom (ಕಿಂಗ್‌ಡಮ್) n. state or territory ruled by king. ರಾಜ್ಯ, ರಾಜನಾಳುವ ದೇಶ.

King'fisher (ಕಿಂಗ್‌ಫಿಶರ್) n. a bird with brilliant plumage diving for fish. ಮಿಂಚುಳ್ಳಿ, ಜಾಲಗಾರ ಹಕ್ಕಿ.



King'fisher

King's evil, n. scrofula. ಗಂಡಮಾಲೆ.

Kingless (ಕಿಂಗ್ಲೆಸ್) a. devoid of king. ರಾಜನಿಲ್ಲದ, ನೃಪಹೀನವಾದ.

Kinglike (ಕಿಂಗ್ ಲೈಕ್) a. like a king, royal. ರಾಜನಂತೆ, ನೃಪತುಲ್ಯ.

Kink (ಕಿಂಕ್) n. twist in a rope. ಹಗ್ಗದಲ್ಲಿರುವ ತಿರುಚು.

Kins'folk-man, - woman (ಕಿನ್ಸ್‌ಫೋಕ್, ಕಿನ್ಸ್‌ಮನ್, ಕಿನ್ಸ್‌ವುಮನ್) n. blood relation(s). ಬಂಧುಗಳು; ನೆಂಟರು, ಸಗೋತ್ರರು, ರಕ್ತಸಂಬಂಧಿಗಳು.

Kin'ship (ಕಿನ್‌ಶಿಪ್) n. relationship. ಬಂಧುತ್ವ, ನೆಂಟು, ಸಂಬಂಧ, ರಕ್ತಸಂಬಂಧ.

Kiss (ಕಿಸ್) v. t. touch with lips as sign of affection; reverence, &c. ಚುಂಬಿಸು, ಮುತ್ತಿಡು, ಮುದ್ದಾಡು, ಮುತ್ತುಕೊಡು. n. caress given with lips. ಮುತ್ತು; ಉಮ್ಮ, ಚುಂಬನ, ಮುದ್ದು.

Kit (ಕಿಟ್) n. wooden tub, personal equipment, outfit. ಸಜ್ಜುಬಾನೆ, ಮರದ ತೊಟ್ಟಿ, ಸಿಪಾಯಿಯ ಸಾಮಾನು, ಪ್ರಯಾಣಕ್ಕೆ ಅಣಿಗೊಳಿಸಿದ ಗಂಟುಮೂಟೆ.

Kit-cat (ಕಿಟ್ ಕ್ಯಾಟ್) n. portrait less than half length but including hands ಅರ್ಧಕ್ಕಿಂತ ಚಿಕ್ಕದಿರುವ ಪ್ರತಿಮೆ, ಭಾವಚಿತ್ರ.

Kitch'en (ಕಿ ಚನ್) n. room where food is cooked. ಅಡಿಗೆಮನೆ; ಪಾಕ ಶಾಲೆ.

Kitchener (ಕಿ ಚ ನ ರ್) n. range of cooking utensils. ಅಡಿಗೆಯ ಒಲೆಗಳ ಪಂಕ್ತಿ.

Kite (ಕೈಟ್) n. bird of prey of falcon family, rapacious person child s toy flown in wind. ಹದ್ದು, ಆಸೆಬುರಕ ಮನುಷ್ಯ, ದಗಾಕೋರ, ಸುಲಿಗೆಕೋರ, ಪತಂಗ, ಗಾಳಿಯಪಟ.


Kite

Kith (ಕಿತ್) n. acquaintance. ಪರಿಚಯದವರು, ಗುರುತಿನವರು, ಪರಿಚಿತರು, ನಂಟರಿಷ್ಟರು.

Kitt'en (ಕಿ ಟನ್) n young of cat, playtul girl. ಬೆಕ್ಕಿನ ಮರಿ, ಮೋಜುಗಾರ ಹುಡುಗಿ.

Kittle (ಕಿಟ್ಲ್) adj. difficult to pacify. ಸಮಾಧಾನ ಪಡಿಸಲು ಕಷ್ಟವಾದ ತೊಂದರೆಯ.

Kitty (ಕಿ ಟ್ಟಿ) n· pet name for a kitten. ಬೆಕ್ಕಿನಮರಿ.

Kloof (ಕ್ಲೂಫ್) n· ravine, narrow valley. ವಕ್ರವಾದ ಕಣಿವೆ.

Knack (ನ್ಯಾಕ್) n. acquired dexterity. tact; habit. ಜಾಣತನ, ಕಾರ್ಯಕೌಶಲ, ಕಸಬಿನಯುಕ್ತಿ; ಅಭ್ಯಾಸ.

Knacker (ನ್ಯಾಕರ್) n·one who buys old horses for slaughter, ವಧಿಸುವುದಕ್ಕೆ ಮುದಿಕುದುರೆಗಳನ್ನು ಕೊಳ್ಳುವವನು.

Knag (ನ್ಯಾ ಗ್) n. knot in wood. ರೆಂಬೆಯ ಬುಡ, ಮರದ ಗಂಟು.

Knagginess (ನ್ಯಾಗಿನೆಸ್) n. the state of being knaggy. ಗಂಟುಗಂಟಾಗಿರುವುದು.

Knap (ನ್ಯಾಪ್) v· t. break (flints.) with hammer, break, snap. ಸುತ್ತಿಗೆಯಿಂದ ಕಲ್ಲು ಪುಡಿಮಾಡು, ಜಲ್ಲಿಯೊಡೆ.

Knapper (ನ್ಯಾಪರ್) n, stone breaker. ಕಲ್ಲು ಒಡೆದು ಜಲ್ಲಿ ತಯಾರಿಸುವವನು.

Knap'sack (ನ್ಯಾಪ್‌ಸ್ಯಾಕ್) n. a case (usually of canvas) for necessaries borne on the back by soldiers & travellers. ಹಸಿಬೆ ಚೀಲ, ಸಾಮಾನು ಚೀಲ, ಬೆನ್ನುಚೀಲ, ಹೆಗಲ ಸಂಚಿ.

Knarl (ನಾರ್ಲ್) n. knot in wood. ಮರದ ಗಂಟು.

Knave (ನೇವ್) n. villian, a false deceitful fellow. ಕಳ್ಳ, ಠಕ್ಕುಗಾರ, ಮೋಸಗಾರ, ದಗಾಕೋರ.

Knavish (ನೇವಿಷ್) adj. dishonest. ಅಪ್ರಾಮಾಣಿಕ, ಮೋಸದಿಂದ ಕೂಡಿದ.

Knead (ನೀಡ್) vt. work up into dough or paste, massage· ಹಿಚುಕು, ಹಿಸುಕಿ ನೀವು, ಹಿಸುಕು, ನಾದು.

Kneading (ನೀ ಡಿಂ ಗ್) n. act of working into a dough. ಹಿಸಕೆ, ನಾದಿಸಿ ಹಿಟ್ಟುಮಾಡುವಿಕೆ.

Knee (ನೀ) n. joint between thigh and shin bones. ಮೊಣ ಕಾ ಲು, ಮಂಡಿ, ಮೊಣವು.

Kneel (ನೀ ಲ್) vi. fall or rest on the knees esp.in reverence· ಮೊಣಕಾಲೂರು, ಮಂಡಿ ಮೇಲೆ ನಿಲ್ಲು, ನಮಿಸು.

Knell (ನೆಲ್) n. sound of a bell esp. at funeral or after a death, doom. ಮರಣಸೂಚಕ ಘಂಟೆ, ಅಂತ್ಯಶಿಕ್ಷೆ.

Knickery (ನಿ ಕ ರಿ) n. trivialness· ತುಚ್ಛತೆ, ಅಲ್ಪತೆ.

Knife (ನೈಫ್) n. an instrument for cutting ಕತ್ತಿ, ಚೂರಿ, ಅಲಗು, ಚಾಕು. war to the k. a deadly strife. ಘೋರಯುದ್ಧ.


Knives

Knight (ನೈ ಟ್) n. a champion,

title of honour, a piece in chess ಶ್ರೀಮಂತವೀರ, ಸರದಾರ, 'ಸರ್' ಎಂಬ ಪದವಿಯುಳ್ಳ ಬಿರುದು, ಚದುರಂಗದ ಆಟದ ಕುದುರೆ. v. t. create a knight. 'ಸರ್' ಬಿರುದು ಕೊಡು.

Knighthood (ನೈಟ್‌ಹುಡ್) n. dignity of a knight. 'ಸರ್' ಬಿರುದುಧಾರಿಯ ಪದವಿ.

Knit (ನಿಟ್) vt. i. form (texture, garment) of inter-looping yarn or thread, wrinkle (brow), make or become compact, unite together. ನೇಯು, ಗಂಟುಹಾಕು, ಉದ್ದ ಸೂಜಿಗಳಿಂದ ಹೆಣೆ, ಕೂಡಿಸು, ಒಂದುಗೂಡಿಸು.


Knitting

Knob (ನಾಬ್) n. rounded protuberance, ಬುಗುಟೆ, ಗಂಟು, ಗುಂಡು, ಗುಬಟು.

Knobbiness (ನಾಬಿನೆಸ್) n. state of being knobby. ಗಂಟುಗಳಿಂದ ತುಂಬಿರುವುದು.

Knobble (ನಾಬ್ಲ್) n. small knob. ಸಣ್ಣ ಗುಂಡು.

Knobby (ನಾಬಿ) a. knotty, full of knots. ಗಂಟುಗಳಿಂದ ತುಂಬಿದ.

Knock (ನಾಕ್) v. t, i. strike esp. with hard blow, collide with or be driven against. ತಟ್ಟು, ಬಲವಾಗಿ ಹೊಡೆ, ಟೊಣೆ, ಢಕ್ಕೆಬಡಿ, ಎದುರು ಹಾಯು, ಢಿಕ್ಕಿ ಹೊಡಿ. n. blow, strike. ಪೆಟ್ಟು, ಬಡಿತ, ಏಟು, ಹೊಡೆತ. k. under, submit completely. ಸಂಪೂರ್ಣ ಸ್ವಾಧೀನವಾಗು. k. down, fell by blow. ಕೆಡವು, ಹೊಡೆದುಹಾಕು k. up (a) awake by tapping at the door. ಬಾಗಿಲು ಹೊಡೆದು ಎಬ್ಬಿಸು. (b) exnaust, tire. ಬಳಲು, ಆಯಾಸಗೊಳ್ಳು. k. off, cease work, dispatch (business). ಕೆಲಸ ನಿಲ್ಲಿಸು, ಮುಗಿಸು. k. about, wander. ಅಲೆದಾಡು. k. on the head, stun, kill or make impossible. ಮಟ್ಟು, ಮೊಟಗು, ಕೊಲ್ಲು, ಅಸಾಧ್ಯಗೊಳಿಸು.

Knoll (ನೋಲ್) n. small bill, mound. ದಿಣ್ಣೆ, ತಿಟ್ಟು, ಮೊರಡಿ, ತೆವರು, ಸಣ್ಣ ಗುಡ್ಡೆ.

Knop (ನಾಪ್) n. bud of a flower. ಹೂವಿನ ಮೊಗ್ಗು.

Knot (ನಾಟ್) n. twisting; a tie; tangled mass; cluster; difficuly. ಗಂಟು; ಕಷ್ಟ, ಸಮಸ್ಯೆ, ತೊಡಕು, ಅಡಚಣೆ. v. t. & i. tie knot in[string &c.],entangle. ಗಂಟುಹಾಕು, ತೊಡರಿಸು, ಸಿಕ್ಕುಮಾಡು.


Knots

Knottiness (ನಾಟಿನೆಸ್) n. the quality of being knotty. ಗಂಟುಗಂಟಾಗಿರುವಿಕೆ.

Knott'y (ನಾಟಿ) a. full of knots, puzzling. ಗಂಟುಗಳಿಂದ ತುಂಬಿದ, ಗಂಟು ಗಂಟಾದ, ಸಿಕ್ಕುಳ್ಳ, ತೊಂದರೆಯ, ಬಗೆಹರಿಯದ, ಜಟಿಲ, ಬಿಡಿಸುವುದಕ್ಕಾಗದ.

Know (ನೊ) v. t, & i. be aware of; perceive with certainty, be acquainted with; recognize. ಅರಿ; ತಿಳಿ, ಖಾತ್ರಿಮಾಡಿಕೊಳ್ಳು; ತಿಳಿದಿರು, ಗುರುತಿಸು. k. no bounds, be unlimited. ಅಮಿತವಾಗು. not to k. B. from a bull's foot, utterly ignorant. ಏನೂ ತಿಳಿಯದವನಾಗಿರು.

Knowable (ನೋಯಬಲ್) a. that which may be known. ತಿಳಿಯಲು ಯೋಗ್ಯವಾದ.

Know'ingly (ನೋಯಿಂಗ್ಲಿ) adv. consciously. ತಿಳಿದೂತಿಳಿದು, ಬುದ್ಧಿಪೂರ್ವಕವಾಗಿ.

Knowingness (ನೋಯಿಂಗ್‌ನೆಸ್) n. the quality of being known. ತಿಳಿದಿರುವಿಕೆ.

Knowl'edge (ನಾಲೆಜ್)n. knowing, what one knows, all that is or may be known. ಅರಿವು, ತಿಳಿವಳಿಕೆ, ತಿಳಿವು, ವ್ಯವಹಾರಜ್ಞಾನ, ಜ್ಞಾನ.

Knuckle (ನಕಲ್) n. projecting joint of the fingers. ಬೆರಳಿನ ಗಣಿಕೆ, ಗಿಣ್ಣು.

Knurl(ನರಲ್)n. knot, ridge. ಗಂಟು, ಗುಂಡು.

Koala (ಕೊಅಲಾ) n. a small marsupial bear found in Australia. ಆಸ್ಟ್ರೇಲಿಯಾ ದೇಶದಲ್ಲಿ ದೊರಕುವ ಸಣ್ಣ ಕರಡಿ.


Koala

Kodak (ಕೊಡಕ್) n. kind of photographic camera. ಒಂದು ತೆರದ ಛಾಯಾಗ್ರಾಹಿ.

Koodoo (ಕೂಡೂ) n. kind of African antelope. ಆಫ್ರಿಕದ ಜಿಂಕೆಯ ಒಂದು ಜಾತಿ.

Kor'an (ಕೊರಾನ್) n. the sacred book of Muslims. ಮುಸಲ್ಮಾನರ ಪವಿತ್ರ ಗ್ರಂಥ.

Kraal (ಕ್ರಾಲ್) n. enclosure for castle or sheep. ದನಗಳ ಕೊಟ್ಟಿಗೆ.

Krem'lin (ಕ್ರೆಮ್‌ಲಿನ್) n. Russian citadel esp. imperial palace at Moscow. ರಷ್ಯಾದೇಶದಕೋಟೆ, ಮಾಸ್ಕೋ ಪಟ್ಟಣದಲ್ಲಿರುವ ಅರಮನೆ.

Kud'os (ಕೂಡಸ್) n. fame. ಕೀರ್ತಿ; ಯಶಸ್ಸು.

Ky'mograph (ಕೈಮೊಗ್ರಾಫ್) n. instrument recording curves of pressure pulsation, sound waves, &c. ವಾಯುವಿನ ಒತ್ತಡ, ಶಬ್ದದ ಅಲೆ, ನಾಡಿಯ ತುಡಿತ ಮೊದಲಾದುವನ್ನು ರೇಖಾಚಿತ್ರದಿಂದ ಗುರ್ತಿಸುವ ಯಂತ್ರ, ಸಲಕರಣೆ, ಗತಿ ನಿರ್ದೇಶಕ ಯಂತ್ರ.

L

L (ಎಲ್) twelfth letter of the English alphabet, Roman numeral 500, Chem. symbol for lithium ಇಂಗ್ಲಿಷ್ ವರ್ಣಮಾಲೆಯಲ್ಲಿ ೧೨ನೆಯ ಅಕ್ಷರ, ರೋಮನ್ ಸಂಖ್ಯೆ ೫೦, ಲಿಥಿಯುಮ್ ದ್ರವ್ಯದ ಸಂಕೇತಾಕ್ಷರ.

La (ಲಾ) int. lo! see! ah! indeed! ಅಗೋ! ನೋಡು! ಆಹಾ! ನಿಜವಾಗಿ! n. [Mus] in solmisation of the syllable used for the sixth note of the scale. ಸಂಗೀತ ಸರಳೆಯಲ್ಲಿ ಧೈವತ, ಧ.

Labefaction (ಲಾ̆ಬಿಫಾ̆ಕ್ಷನ್) n. weakening, ruin. ಕುಸಿದು ಬೀಳುವುದು, ನಾಶ.

Lab'el (ಲೇಬ್‌ಲ್) n. small slip of writing affixed to anything to denote its contents ownership &c. ಮೇಲ್ವಿಳಾಸದ ಗುರುತಿಗಾಗಿ ಹಚ್ಚುವ ಚೀಟಿ



Label

Lab'ial (ಲೇಬಿಅಲ್) a. of the lips, pronounced with lips. ತುಟಿಯ, ತುಟಿಗಳ, ಓಷ್ಠ್ಯ.

Labiate (ಲೇಬಿಯಟ್) adj. divided into two liplike parts. ತುಟಿಯ ಆಕಾರದ, ಎರಡು ಭಾಗಗಳುಳ್ಳ.

Labile (ಲೇಬಿಲ್) adj. liable to change. ಪರಿವರ್ತನಶೀಲ, ಅಶಾಶ್ವತ.

Lab'oratory(ಲ̆ಬೊರೇಟರಿ) n. place used for scientific experiments or for manufacture of chemicals. ವೈಜ್ಞಾನಿಕ ಪ್ರಯೋಗಶಾಲೆ, ರಾಸಾಯನಿಕ ಕಾರ್ಯಾಲಯ, ಪ್ರಯೋಗಶಾಲೆ.

Labor'ious (ಲೆಬೋರಿಅಸ್) a. hard-working, toilsome; (of style) laboured. ಪ್ರಯಾಸದ, ಕಷ್ಟದ, ದಣಿವಿನ, ಕ್ಲೇಶಕರ, ತಿಣುಕಿಬರೆದ.

Laboriously (ಲೆಬೋರಿಯಸ್ಲಿ) adv. in a laborious manner. ಪ್ರಯಾಸದ, ಕಷ್ಟದರೀತಿಯಲ್ಲಿ.

Lab'our (ಲೇಬರ್) n. exertion of body or mind, task, pains of childbirth, labourers. ದುಡಿತ, ದುಡಿಮೆ, ಕಾರ್ಯ, ಜೀತ, ಹೆರಿಗೆಯುಬೇನೆ, ಕಾರ್ಮಿಕರು, ಕೆಲಸ, ಪ್ರಸವವೇದನೆ, ಶ್ರಮಜೀವಿಗಳು.

Lab'ourer (ಲೇಬರರ್) n. (esp.) man doing unskilled work. ಕೂಲಿಕಾರ, ಜೀತಗಾರ, ಕಾರ್ಮಿಕ, ಶ್ರಮಜೀವಿ, ಗೇಯುವವ.

Labourite (ಲೇಬರೈಟ್) n. adherent or member of the labour party. ಕೂಲಿಗಾರ ಪಕ್ಷದವನು, ಆ ಪಕ್ಷದ ಸದಸ್ಯ.

Labernum (ಲಬರ್ನಮ್) n. small shrub with yellow flowers. ಹಳದಿ ಬಣ್ಣದ ಹೂಬಿಡುವ ಒಂದು ಗಿಡ.

Lab'yrinth (ಲಾಬಿರಿಂಥ್) n. a place full of inextricable windings, maze, tangled affairs. ಚಕ್ರವ್ಯೂಹ, ಗಹನಸ್ಥಾನ, ತೊಡಕಿನ ಪರಿಸ್ಥಿತಿ, ತೊಡಕಾದ ರಚನೆ.

Labyrinthine (ಲಾಬಿರಿಂಥೈನ್) a. winding, intricate, perplexing. ತೊಡಕಿನ, ಚಕ್ರವ್ಯೂಹದ.

Lac (ಲಾಕ್) n. term used in India for 100,000. a dark-red transparent resin. ಲಕ್ಷ,೧೦೦, ೦೦೦;ಅರಗು.

Lace (ಲೇಸ್) n. ornamental fabric of linen. "ಗೋಟು", ಲಾಡಿ, ಕಲಾಬತ್ತು, ಜರತಾರಿ.

Lacerable (ಲಾಸಿರೆಬಲ್) a. that which may be torn or lacerated ಚೂರುಚೂರಾಗಿ ಮಾಡಲು ಅರ್ಹವಾದ.

La'cerate (ಲಾಸರೇಟ್) v. t. tear, rend, wound feelings, &c. ಹರಿದುಹಾಕು, ಸಿಗಿದುಹಾಕು, ಗೀರು, ಸಂಕಟಪಡಿಸು.

Lacet (ಲೇಸೆಟ್) n. work made of lace. ಲೇಸಿನಿಂದ ಮಾಡಿದ ಕೆಲಸ.

Laciniate (ಲಾಸಿನಿಯಟ್) adj. cut to pieces, slashed. ಚೂರುಚೂರಾಗಿ ಮಾಡಿದ.

Lack (ಲಾಕ್) n. want, destitution. ನ್ಯೂನತೆ, ಕೊರತೆ, ಅಭಾವ. v. t i. be in need, be without. ಕೊರತೆಯಿರು, ಇಲ್ಲದಿರು, ಅವಶ್ಯಕವಾಗು. l a day, alas the day. ಅಯ್ಯಯ್ಯೋ !

Lack'ey (ಲಾಕಿ) n. footman. ಆಳು; ಊಳಿಗದವ. v.t. wait upon. ಊಳಿಗ ಮಾಡು, ಆಳಾಗಿ ವರ್ತಿಸು.

Lacon'ic. (ಲಕಾನಿಕ್) a. concise, pithy. ಸಂಕ್ಷೇಪಮಾತಿನ, ಮಿತಾಕ್ಷರಿ, ಸಂಕ್ಷೇಪವಾದ, ಸಂಗ್ರಹವಾಗಿ ಹೇಳುವ.

Laconicism (ಲಕಾನಿಸಿಜಮ್) n. concise speech, short pithy saying. ಸಂಕ್ಷೇಪದಮಾತು; ಸಂಕ್ಷಿಪ್ತೋಕ್ತಿ, ಮಿತಭಾಷಣ.

Lacquer (ಲಾಕರ್) n. gold-coloured varnish. ಹೊಂಬಣ್ಣದ ಗಚ್ಚು ಎಣ್ಣೆ.

Lacta'tion (ಲಾಕ್ಟೇಶನ್) n sucking. secreting of milk. ಸ್ತನ್ಯಪಾನ, ಮೊಲೆಯುಣಿಸುವಿಕೆ, ಸ್ತನ್ಯಸಂಚಾರ, ಮೊಲೆಹಾಲು ಕೊಡುವುದು.

Lacteal (ಲಾಕ್ಟಿಯಲ್) adj. pertaining to milk. ಹಾಲಿನ, ಕ್ಷೀರಸಂಬಂಧವಾದ.

Lactiferous (ಲಾಕ್ಟಿಫೆರಸ್) adj. yielding milk. ಹಾಲುಕೊಡುವ.

Lactometer (ಲಾಕ್ಟೋಮೀಟರ್) n. an instrument for testing the purity of milk. ಹಾಲಿನ ಸಾಂದ್ರತೆಯನ್ನು ಅಳೆಯುವ ಯಂತ್ರ.

Lad (ಲ್ಯಾಡ್) n. boy, young fellow. ಹುಡುಗ, ಮಾಣಿ, ಹೈದ, ತರುಣ, ನರೆಯುದವ.

Ladd'er (ಲ್ಯಾಡರ್) n. frame made with steps placed between two upright poles, (fig.) means of rising. ಏಣಿ, ಉತ್ಕರ್ಷಸಾಧನ, ನಿಚ್ಚಣಿಗೆ.

Lade (ಲೇಡ್) v. t. load. ಹೊರಿಸು, ಸಾಮಾನು ಹೇರು, ತುಂಬು

Lading(ಲೇಡಿಂಗ್)n. load of cargo, freight. ಭಾರ, ಹೊರೆ, ಸಾಮಾನು ಸರಂಜಾಮುಗಳ ಬಾಡಿಗೆ.

La'dle (ಲೇಡಲ್) n.a large spoon. ಸೌಟು, ಸಟ್ಟುಗ, ಅಗಪೆ, ಉದ್ಧರಣೆ, ದರ್ವಿ.



Laddle

Lad'y (ಲೇಡಿ) n. woman of good birth or breeding. ಸಭ್ಯ ಸ್ತ್ರೀ, ಕುಲೀನೆ, ಕುಲಾಂಗನೆ, ಆರ್ಯೆ.

Lady-bug ಲೇಡಿ-ಬಗ್) n. genus of little beetles usually brilliant red or yellow in colour. ಅಚ್ಚಕೆಂಪು ಅಥವಾ ಹಳದಿಬಣ್ಣದ ಜೀರುಂಡೆ ಜಾತಿಯ ಒಂದು ಕೀಟ.



Lady-bug

Lag (ಲ್ಯಾಗ್) v. i. t. go too slow, fall behind. ಮೆಲ್ಲಗೆನಡೆ, ಹಿಂದೆಬೀಳು, ಬಹುನಿಧಾನವಾಗಿ ಹೋಗು.

Laggan (ಲ್ಯಾಗನ್)n. goods or wreckage lying on the sea-bed. ಸಮುದ್ರ ತಳದ ಮೇಲೆ ಬಿದ್ದಿರುವ. ಸಾಮಾನು.

Lagg'ard (ಲ್ಯಾಗರ್ಡ್)n. person who lags behind. ಹಿಂದೆ ಬೀಳುವವ, ಆಲಸಿಗ.

Lagoon'(ಲಗೂನ್)n. shallow pond into which the sea flows. ಖಾರಿ; ಸಮುದ್ರ ನೀರಿನಿಂದಾದ ಸರೋವರ.

Lair(ಲೆಅರ್)n. beast's lying place. ಕಾಡುಮೃಗದ ವಾಸಸ್ಥಾನ, ಕಾಡುಮೃಗಗಳ ಹಕ್ಕೆ, ಗುಹೆ.

Laird (ಲೇಅರ್ಡ್) n. Scotch land owner ಸ್ಕಾಟ್ಲಂಡ್ ದೇಶದ ಜಮೀನುದಾರ.

La'ity(ಲೇಇಟಿ)n. laymen. ಗೃಹಸ್ಥರು, ಸಾಮಾನ್ಯರು; ಕಸಬುದಾರರಲ್ಲದವರು.

Lake (ಲೇಕ್) n. large body of water surrounded by land. ದೊಡ್ಡ ಕೆರೆ, ಸುತ್ತಲೂ ಭೂಮಿಯಿರುವ ಕೊಳ, ಸರೋವರ, ತಟಾಕ, ವಿಶಾಲವಾದ ನೀರಿನ ಹರವು.

Lakh (ಲ್ಯಾಖ್)n. hundred thousand. ಲಕ್ಷ, ೧೦೦,೦೦೦; 1,00,000.

La'ma (ಲಾಮ) n. Buddhist priest. ಬೌದ್ಧ ಗುರು.

Lamasery (ಲಾಮಸರಿ)n. monastery of a Lama, Tibetan Monastery. ಬೌದ್ಧ ಭಿಕ್ಷುಗಳ ಮಠ.

Lamb (ಲ್ಯಾಮ್) n yonng sheep, innocent child, helpless person. ಕುರಿಮರಿ, ಪರಮಸಾಧು, ಸಜ್ಜನ.



Lamb

Lambent (ಲ್ಯಾಂಬೆಂಟ್) a. of flame, &c., playing about a surface, gently brilllant. ಹಗುರವಾಗಿ ಆಡುತ್ತಿರುವ, ಚಲಿಸುವ, ಮಿಡುಕುವ, ಸೌಮ್ಯ ಪ್ರಕಾಶದ, ಮೃದುಕಾಂತಿಯ, ಅಲ್ಪಪ್ರಕಾಶವುಳ್ಳ.

Lambkin (ಲ್ಯಾಂಬ್ಕಿನ್) n. small lamb. ಕುರಿಮರಿ.

Lambency(ಲ್ಯಾಂಬೆನ್ಸಿ)n. fickleness. ಚಾಂಚಲ್ಯ.

Lambrequin (ಲ್ಯಾಂಬ್ರಿಕ್ವಿನ್) n.short piece of drapery over door or window. ಗವಾಕ್ಷಾವರಣ, ಪರದೆ.

Lame(ಲೇಮ್)a. crippled by injury or defect; limping or unable to walk. ಕುಂಟ; ಹೆಳವ. l. excuse, unsatisfactory reason. ಕುಂಟು ನೆಪ; ಇಷ್ಟದಕಾರಣ.

Lamella (ಲಾಮೆಲ್ಲಾ) n. thin layer of a bone. ಮೂಳೆಯ ತೆಳುವಾದ ಪದರ.

Lament'(ಲಾಮೆಂಟ್)n. passionate expression of grief; elegy. ಗೋಳಾಟ, ಶೋಕ; ಶೋಕಗೀತೆ, ರೋದನ, ಅಳು. v. i. & t. express, feel grief for. ಗೋಳಾಡು, ಅಳು, ದುಃಖಪಡು, ಪ್ರಲಾಪಿಸು, ಶೋಕಿಸು. n.-ation. (ಲಾಮೆಂಟೇಶನ್) show of grief. ಶೋಕಪ್ರದರ್ಶನ.

Lam'entable(ಲಾಮೆಂಟಬ್ಲ್)a. deplorable; regrettable. ಶೋಚನೀಯ, ದುಃಖದಾಯಕ.

Lamentation(ಲಾಮೆಂಟೇಷನ್)n. bewailing. ವಿಲಾಪ, ಅಳು, ರೋದನ.

Lamina (ಲಾಮಿನ) n. thin plate of bone or metal, etc. ತೆಳುಹಲಗೆ.

Laminate (ಲಾಮಿನೇಟ್) vt. fold in thin plates. ತೆಳು ತಗಡಾಗಿಮಾಡು.

Lamination (ಲಾಮಿನೇಷನ್) n. the state of being converted into thin layers. ಪದರಪದರವಾಗಿ ಮಾರ್ಪಡುವಿಕೆ.

Lamp (ಲಾಂಪ್) n. vessel with oil & wick for giving light; (fig.) source of spiritual light. ದೀಪ, ಸೊಡರು, ಆಧ್ಯಾತ್ಮಿಕ ಪ್ರಕಾಶದ ಉಗಮ, ದೀವಿಗೆ, ಅಧ್ಯಾತ್ಮಜ್ಯೋತಿ.

Lampaes (ಲಾಂಪೀಸ್) n. kind of floral silk. ಒಂದು ಬಗೆಯ ಚೀನದ ರೇಶ್ಮೆ

Lamp'black (ಲಾಂಪ್ ಬ್ಲಾಕ್) n. black substance formed by the smoke of lamp. ಕಾಡಿಗೆ, ಕಜ್ಜಳ; ಮಸಿ, ದೀಪದ ಕಪ್ಪು.

Lampoon' (ಲಾಂಪೂನ್) n. piece of virulent satire; low censure. ವಿಡಂಬಲೇಖನ, ನಿಂದಾಲೇಖನ, ಕುವಾದ, ಅವಗೀತ.

Lamprey (ಲಾಂಪ್ರಿ)n. eel-like fish. ಹಾವುಮೀನು.

Lanary (ಲಾನರಿ)n. place of storing wool. ಉಣ್ಣೆಯನ್ನು ಸಂಗ್ರಹಿಸುವ ಗಡಂಗು.

Lanate (ಲೇನೆಟ್) a. covered with wool. ಉಣ್ಣೆಯಿಂದ ಮುಚ್ಚಿದ.

Lance(ಲಾನ್ಸ್)n. horseman's long-spear. ಭಲ್ಲೆ, ಈಟಿ, ಬರ್ಚಿ, ಕುಂತ.

La'ncer (ಲಾನ್ಸರ್) n. soldier of cavalry regiment armed with lances. ಭಲ್ಲೆಯುವ, ಭಲ್ಲೆಯುಕಾರ, ಸಬಳಿಗ.

Lances

Lanceolate (ಲಾನ್ಸಿಯೊಲೇಟ್) a. shaped like a spear-head. ಭಲ್ಲೆಯ ಆಕಾರದ, ಕುಂತಾಕೃತಿಯ.

La'ncet (ಲಾನ್ಸೆಟ್) n. pointed and two-edged surgical instrument. ಶಸ್ತ್ರ, ಸಲಾಕಿ; ವೇಧನಿ, ಈಟಿಶಸ್ತ್ರ.

Land (ಲಾಂಡ್) n. soil part of earth's surface. ನೆಲ, ಭೂಮಿ, ಪ್ರದೇಶ; ಭೂಭಾಗ, ಜಮೀನು, ದೇಶನಾಡು, ಹೊಲಗದ್ದೆ v. t & i disembark, go or put ashore. ಕೆಳಗೆ ಇಳಿ; ಇಳಿಸು, ದಡಮುಟ್ಟು, ದಡಸೇರು.

Landau (ಲಾಂಡೂ) n. carriage with a top which can be opened. ಬಿಚ್ಚಿ ಮಡಿಸಬಹುದಾದ ಮೇಲ್ಭಾಗವುಳ್ಳ ಒಂದು ತೆರದ ವಾಹನ.


Landau

Land'holder (ಲಾಂಡ್ ಹೋಲ್ಡರ್) n.

proprietor or (usu.) tenant of land. ಹಿಡುವಳಿದಾರ, ವರ್ಗದಾರ, ಜಮೀನುದಾರ.

Lan'ding (ಲಾಂಡಿಂಗ್) n. place of disembarkation ; platform at head of stairs ಹಡಗಿನಿಂದ ಇಳಿಯುವ ಸ್ಥಳ, ಬಂದರು, ಇಳಿಯುವ ಸ್ಥಳ.

Land'lady (ಲಾಂಡ್ ಲೇಡಿ) n. a woman who has property in land or houses, the mistress of an inn. ಮನೆ ಯಜಮಾನಿ; ಹೋಟಲ ಯಜಮಾನಿ, ಊಟದಂಗಡಿಯಿಟ್ಟಿರುವವಳು

Landless (ಲಾಂಡ್‌ಲೆಸ್) a. destitute of land. ಭೂಮಿಯಿ-ಲ್ಲದ, ನೆಲವಿಲ್ಲದ.

Land'lord (ಲಾಂಡ್ ಲಾರ್ಡ್) n. owner of land or houses; keeper of an inn. ಧಣಿ, ಜಮೀನುದಾರ, ಭೋಜನದಂಗಡಿ ಯಜಮಾನ, ಹೋಟಲ (ಖಾನಾವಳಿ) ಒಡೆಯ.

Land'mark (ಲಾಂಡ್ ಮಾರ್ಕ್) n. boundary mark ; conspicuous object ; notable event ಬಾಂದು ಕಲ್ಲು, ಪ್ರಸಿದ್ಧ ವಸ್ತು, ಮಹತ್ವದ ವಿಷಯ, ಎಲ್ಲೆ ಗುರುತು, ಹೆಗ್ಗುರುತು.

Land'scape (ಲಾಂಡ್ ಸ್ಕೇಪ್) n. piece of inland scenery. ರಮ್ಯ ನೋಟ, ದೃಷ್ಟಿಪಥ ಪ್ರದೇಶ, ಒಳಪ್ರದೇಶ, ಭೂದೃಶ್ಯ.

Landward (ಲಾಂಡ್‌ವರ್ಡ್) adv. towards the land. ನೆಲದಕಡೆಗೆ.

Lane' (ಲೇನ್) n. narrow street, passage. ಸಂಧಿ, ಬೀದಿ, ಕಿರುದಾರಿ, ಗಲ್ಲಿ, ಕೇರಿ, ಓಣಿ.

Lang'uage (ಲಾಂಗ್ವೇಜ್) n. speech ; form of speech used by a people, style, expression. ಮಾತು, ಭಾಷೆ, ಭಾಷಾಪದ್ಧತಿ, ನುಡಿ, ಭಾಷಾಶೈಲಿ.

Lang'uid (ಲಾಂಗ್ವಿಡ್) a. slack or feeble, exhausted, sluggish, spiritless. ಬಾಡಿದ, ಬಳಲಿದ, ಚುರುಕಿಲ್ಲದ, ಜಡ, ಮಂದ, ಕಳೆಯಿಲ್ಲದ, ನಿಸ್ತೇಜ, ಮಂಕುಕವಿದ, ಉತ್ಸಾಹವಿಲ್ಲದ, ನಿಶ್ಶಕ್ತ.

Languidness (ಲಾಂಗ್ವಿಡ್‌ನೆಸ್) n. spiritlessness. ಬಳಲಿಕೆ, ಶೈಥಿಲ್ಯ.

Lang'uish (ಲಾಂಗ್ವಿಶ್) v. t. lose or lack vitality, lose intensity, droop, pine for. ಬಾಡು, ಕ್ಷೀಣಿಸು, ಕ್ಷಯಿಸು, ಕೃಶಿಸು, ಬೆಂಡಾಗು, ಸೊರಗು, ಕುಗ್ಗಿ ಹೋಗು.

Languishment (ಲಾಂಗ್ವಿಷ್‌ಮೆಂಟ್) n. the state of languishing. ಬಾಡುವ ಸ್ಥಿತಿ, ಮ್ಲಾನತೆ.

Lang'uor (ಲಾಂಗ್ವರ್) n. faintness, soft or tender mood. ನಿತ್ರಾಣ, ದೌರ್ಬಲ್ಯ, ಸುಸ್ತು, ದಣಿವು, ಆಯಾಸ, ಬಳಲಿಕೆ, ಬವಳಿ, ಆಲಸ್ಯ, ಮೃದುಭಾವ.

Laniary (ಲಾನಿಯರಿ) adj. tearing. ಸೀಳಲು ಅನುಕೂಲವಾದ.

Laniferous (ಲೇನಿಫೆರಸ್) adj. wool-producing. ತುಪ್ಪಟ ಕೊಡುವ.

Lank (ಲಾಂಕ್) a. lean and tall, long. ಸೊರಗಿದ, ಬಡಕಲಾದ, ಕುಗ್ಗಿಹೋದ, ಸಣಕಲಾಗಿರುವ, ತೆಳ್ಳಗೆ, ಇರುವ, ಉದ್ದವಾಗಿರುವ.

Lankiness (ಲಾಂಕಿನೆಸ್) n. state of being lean and lanky. ದುರ್ಬಲತೆ, ಕೃಶತ್ವ.

Lan'tern (ಲಾಂಟರ್ನ್) n. a case for a light to be used out of doors. ಕಂದೀಲು, ಲಾಂದ್ರ, " ಲಾಟನು ".



Lantern

Lap (ಲಾಪ್) n. tail or skirt of coat, thighs of sitting person. ಕೋಟಿನ

ಹಿಂದಿನಭಾಗ, ತೊಡೆ ; ಅಂಕ, ಮಡಿಲು, ಉಡಿ. v. t. i. drink by scooping with the tongue. ಲೊಚಲೊಚಕುಡಿ.

Lap-dog (ಲಾಪ್-ಡಾಗ್) n. small pet dog. ಒಂದು ಜಾತಿಯ ಚಿಕ್ಕನಾಯಿ.

Lap'idary (ಲಾಪಿಡರಿ) n. engraver of gems. ಮಣಿಕಾರ, ವಜ್ರಸಾಣೆಯುವ, ಸಾಣೆಹಿಡಿಯುವವನು.

Lapidate (ಲಾಪಿಡೇಟ್) vt. stone to death. ಕಲ್ಲುಹೊಡೆದು ಕೊಲ್ಲು.

Lapidify (ಲಾ ಪಿ ಡಿ ಫೈ) vt. prepare stone, make stone. ಕಲ್ಲಾಗಿಮಾಡು.

Lap'is Lazuli (ಲಾ ಪಿ ಸ್ ಲಾ ಜು ಲೈ) n. bright blue pigments, a rich blue silicate. ನೀಲ, ವೈಢೂರ್ಯ.

Lappet (ಲಾಪೆಟ್) n. loose part of a garment. ಉಡುಪಿನ ಚಿಕ್ಕಮಡಿಕೆ.

Lapse (ಲಾಪ್ಸ್) n. slip of memory &c.,mistake, elapsing. ಸ್ಮೃತಿಭ್ರಂಶ, ಸಣ್ಣ ತಪ್ಪು, ಜಾರುವಿಕೆ ; ಜ್ಞಾಪಕ ತಪ್ಪಿಹೋಗುವುದು, ಕೈತಪ್ಪು, ಕಳೆದುಹೋಗುವುದು, ಗತಿಸುವುದು. v. i. become void. elapse. ರದ್ದಾಗು, ಗತಿಸು, ಜಾರಿಹೋಗು, ಇಳಿದುಹೋಗು, ಕಳೆದುಹೋಗು.

Lapsus (ಲಾ ಪ್ಸ ಸ್) n. slip of the tongue. ಬಾಯಿತಪ್ಪು, ವಾಕ್ಸ್ಖಲನ.

Lap'wing (ಲಾಪ್‌ವಿಂಗ್) n. pewit. ಕೋಯಷ್ಟಿಕ, ಟಿಟ್ಟಿಭಪಕ್ಷಿ, ಚಾನಾಡಿ.

Lar (ಲಾರ್) n. household deity of the Romans. ರೋಮನ್ನರ ಗೃಹದೇವತೆ.

Larb'oard (ಲಾ ರ್ಬೋ ರ್ಡ್) n. left hand-side of a ship : port. ಹಡಗಿನ ಎಡಭಾಗ, ಮುಗ್ಗಲು, ರೇವು, ಬಂದರು.

Larcener (ಲಾರ್ಸೆನರ್) n. one who steals, thief. ಚೋರ.

Lar'ceny (ಲಾರ್ಸೆನಿ) n. thief. ಕಳವು, ಚೌರ್ಯ.

Larch (ಲಾರ್ಚ್) n. kind of tree which yields turpentine. ಕರ್ಪೂರದೆಣ್ಣೆ ಕೊಡುವ ಒಂದು ಮರ.

Lard (ಲಾರ್ಡ್) n. pig fat prepared, for cooking, &c. ಹಂದೀಕೊಬ್ಬು.

Lard'er (ಲಾರ್ಡರ್) n. room or cupboard for meat ಮಾಂಸ ಪಾಕವಿಡುವ ಕೋಣೆ, ಮಾಂಸದ ಕಪಾಟು.

Large (ಲಾರ್ಜ್) a. of considerable or relatively great magnitude or wide range, comprehensive ; liberal, generous. ವಿಶಾಲವಾದ, ವ್ಯಾಪಕವಾದ, ಪ್ರಶಸ್ತ, ದಾನಶೀಲ, ಧಾರಾಳವಾದ, ದೊಡ್ಡ, ಉದಾರ. at l. free. ಸ್ವತಂತ್ರ, ಅಡ್ಡಿ ಆತಂಕಗಳಿಲ್ಲದ.

Lar'gess (ಲಾ ರ್ಜೆ ಸ್) n. money or gifts scattered on occasions of rejoicing. ಮಹೋತ್ಸವದಾನ, ಉಡುಗೊರೆ, ಉದಾರದಾನ, ಭೂರಿ.



Lark

Lark (ಲಾರ್ಕ್) n. small singing bird, frolic prank. ಭಾರದ್ವಾಜಪಕ್ಷಿ, ಟಿಟ್ಟಿಭ, ಚಂಗಾಟ.

Larum (ಲಾರಂ) n. alarm. ಎಚ್ಚರಿಕೆ.

Larv'a (ಲಾರ್ವ್) n. insect in caterpillar stage. ತತ್ತಿಯಿಂದ ಹೊರಗೆ ಬಂದ ಕೀಟ, ಮರಿಹುಳು.



Larva

Laryngeal (ಲಾರಿಂಜಿಯಲ್) a. pertaining to the larynx. ಕಂಠನಾಳ ಸಂಬಂಧಿ.

La'rynx (ಲಾರಿಂಕ್ಸ್) n. cavity in throat holding vocal cards. ಕಂಠನಾಳ.

Lasciv'ious (ಲಸ್ಸಿವಿಅಸ್) a. lustful. ಕಾಮುಕನಾದ, ವಿಷಯಲಂಪಟನಾದ, ಸ್ತ್ರೀಲೋಲ.

Lash (ಲಾಶ್) v. i. & t. beat with throng, &c. urge as with whip, tie tightly. ಚಾಟಿಸು, ಜೋರಾಗಿ ಹೊಡೆ, ಅಪ್ಪಳಿಸು, ಬಿಡೆ, ಬಡಿ, ಚುರುಕುಮಾತಾಡು, ಬಿಗಿಯಾಗಿ ಕಟ್ಟು. n. stroke given with throng. &c., flexible part of whip. ಚಾವಟಿಯ ಏಟು, ಹೊಡೆತ, ಬಾರು, ಚಡಿಯೇಟು, ಕೊರಡೆ, ಚಬುಕು.

Lashing (ಲಾ ಷಿ ಂ ಗ್) n. chastisement, beating. ಹೊಡೆಯುವಿಕೆ, ಶಿಕ್ಷೆಮಾಡುವಿಕೆ.

Lasque (ಲಾಸ್ಕ್) n. diamond not well formed. ಹಲಗೆ ವಜ್ರ.

Lass', lass'ie (ಲಾಸ್, ಲಾಸಿ) n. girl. ಹುಡುಗಿ, ಹೆಣ್ಣು, ನಲ್ಲೆ, ಬಾಲೆ, ಕನ್ನಿಕೆ.

Lass'itude (ಲಾಸಿಟ್ಯೂಡ್) n. languor, disinclination to exert oneself. ದಣಿವು, ಆಯಾಸ, ಆಲಸ್ಯ, ನಿರುತ್ಸಾಹ.

Lasso (ಲಾಸೊ) n. noose for catching cattle. ದನ ಹಿಡಿಯುವ ಜೀರುಗುಣಿಕೆ.

Last (ಲಾಸ್ಟ್) a. after all others, coming at the end, most recent: utmost ಕಡೆಯ, ಕೊನೆಯ, ಅಂತ್ಯದ, ಅತ್ಯಂತ ಈಚಿನ, ಕಟ್ಟಕಡೆಯ, ಚರಮ. v. i. continue; endure, remain unexhausted or adequate or alive. ಮುಂದುವರಿ, ತಾಳು, ನಡೆ, ಸಾಗು, ಉಳಿದಿರು, ಜೀವದಿಂದಿರು, ಬಾಳಿಕೆ ಬರು, ಸಾಕಾಗು. breathe one's l., die. ಸಾಯು.

Last'ing (ಲಾಸ್ಟಿಂಗ್) a. permanent; durable. ಬಾಳುವ, ತಡೆಯುವ, ಬಾಳಿಕೆ ಬರುವ, ಶಾಶ್ವತ, ತಡೆದು ನಿಲ್ಲುವ.

Las'tly (ಲಾಸ್ಟ್ಲಿ) adv. finally. ಕಡೆಗೆ, ಕೊನೆಯದಾಗಿ, ಅಂತ್ಯದಾಗಿ.

Latch (ಲಾಚ್) n. small piece of wood or iron to fasten a door. ಅಗಳಿ, ಕೀಲು, ಕೊಂಡಿ, ತಡೆ, ಒಡೆಗೊಂಡು.



Latch

Latchet (ಲಾಚೆಟ್) n. shoe fastene ಬೂಟ್ಸನ್ನು ಕಟ್ಟಲು ಉಪಯೋಗಿಸು ತೊಗಲುಪಟ್ಟಿ.

Late (ಲೇಟ್) n. after the righ time: backward, that occurre lately now dead. ಹೊತ್ತು ಮೀರಿದ ತಡವಾದ, ಗತ, ಸಂದ. ಈಗ ಬದುಕಿಲ್ಲದ ಮಾಜಿ, ದಿವಂಗತ, ಕೀರ್ತಿಶೇಷ, ಇತ್ತೀಚಿನ.

Late'ly (ಲೇಟ್ಲಿ) adv. recently. ಇತ್ತಲಾಗಿ, ಈಚೀಚೆಗೆ, ಇತ್ತೀಚೆಗೆ, ಈಗೀಗ.

Latency (ಲೇಟೆನ್ಸಿ) n. state of bein latent. ಅಗೋಚರತೆ, ಗುಪ್ತತೆ.

Lat'ent (ಲೇಟೆಂಟ್) a. concealed dormant. ಅಗೋಚರ, ಗುಪ್ತ, ಹುದುಗಿರುವ, ಸುಪ್ತ.

Lat'eral (ಲಾಟರಲ್) a. belongin to the side. ಪಾರ್ಶ್ವದ. ಅಡ್ಡಮಗುಲಿನ, ಅಂತರ್ಗತನಾಗಿರುವ, ಪಕ್ಕದ, ಪಕ್ಕ ಕಡೆಗಿರುವ.

Lathe (ಲೇಥ್) n. a machine fo turning and shaping articles o wood, metal &c. ಕಡತದ ಯಂತ್ರ. ಚಕ್ರ, ಚರಕಿಯಂತ್ರ.

Lath'er (ಲಾದರ್) n. froth of soap & water. ನೊರೆ, ಬುರುಗು, ಸಾಬೂನ ನೊರೆ.

Latin (ಲಾಟಿನ್) pertaining to ol Romans. old Roman language. ಪುರಾತನ ರೋಮನ್ ಜನರಿಗೆ ಸಂಬಂಧಿಸಿದ.

Lat'itude (ಲಾಟಿಟ್ಯೂಡ್) n. scope, full extent freedom from restriction, angular distance; N. or S. of the equator. ಅಗಲ, ಪೂರ್ಣ ವಿಸ್ತಾರ, ವ್ಯಾಪ್ತಿ, ಉದಾರ ಭಾವನೆ, ಸಂಕುಚಿತಭಾವನೆ ಇಲ್ಲದಿರುವುದು, ಸ್ವಾತಂತ್ರ್ಯ, ವಿಷುವದ್ವೃತ್ತದಿಂದ ಅಂತರ, ಅಕ್ಷಾಂಶ.

Latrine(ಲೆಟ್ರೀನ್) n. place for evacuation of bowels or bladder. ಪಾಯುಖಾನೆ, ಕಕ್ಕಸ್ಸು, ಮೂತ್ರಿ.

Latt'er (ಲಾಟರ್) a. recent, mentioned later of the two. ಈಚಿನ, ಕಡೆಯ, ಕೊನೆಯ, ಎರಡನೆಯ.

Latterly(ಲಾಟರ್‌ಲೀ) adv lately in time; not long past. ಕಡೆಗೆ, ಇಚ್ಚೀಚೆಗೆ.

Latt'ice (ಲಾಟಿಸ್) n. a network of crossed bars. ಜಾಲಂದ್ರ, ಜಾಲಕ, ಮುಘೆ, ಮಘೆ, ಕಂಡಿಗಳುಳ್ಳ ಅಡ್ಡಪಟ್ಟಿಗಳ ಚೌಕಟ್ಟು, ಕಿಂಡೀಕಿಟಕಿ, ಗವಾಕ್ಷಜಾಲ.


Lattice

Laud (ಲಾಡ್) v t. praise; extol. ಸ್ತೋತ್ರಮಾಡು, ಕೊಂಡಾಡು, ಶ್ಲಾಘಿಸು, ಹೊಗಳು. n. (poet) praise, song of praise. ದೇವರ ಸ್ತೋತ್ರ.

Laudability (ಲಾಡೆಬಿಲಿಟಿ) n. the quality of being laudable. ಪ್ರಶಂಸನೀಯತೆ.

Laud'able(ಲಾಡೆಬ್‌ಲ್)a commendable. ಸ್ತುತ್ಯ, ಹೊಗಳತಕ್ಕ, ಮೆಚ್ಚತಕ್ಕ.

Laudably(ಲಾಡೆಬ್ಲಿ)adv in a laudable manner. ಸ್ತುತ್ಯರೀತಿಯಲ್ಲಿ.

Laud'anum(ಲಾಡನಂ) n. alcoholic tincture of opium. ಅಫೀಮಿನ ಸತ್ವ.

Lauda'tion (ಲಾಡೇಶನ್) n. praising, a panegyric. ಹೊಗಳಿಕೆ, ಶಾಭಾಸುಗಿರಿ, ಶ್ಲಾಘನೆ.

Laudator (ಲಾಡೇಟರ್) n a person who praises. ಪ್ರಶಂಸಕ, ಹೊಗಳುಭಟ್ಟ.

Laugh' (ಲಾಫ್) v. i & t. make the sound usual in expressing amusement, exultaion and scorn, utter with a laugh. ನಗು, ಕಿರಿಚು, ಹಾಸ್ಯಕ್ಕೆ ಗುರಿಮಾಡು.

Laugh'able(ಲಾಫೆಬ್‌ಲ್) a. exciting laughter: amusing. ಹಾಸ್ಯಜನಕ, ನಗಿಸುವ, ಮನೋರಂಜಕ, ತಮಾಷೆಯ, ನಗುಬರಿಸುವ.

Laugh'ing-stock (ಲಾಫಿಂಗ್‌ಸ್ಟಾಕ್)n. object of general derision. ನಗೆಗೇಡಿ, ಹಾಸ್ಯಕ್ಕೆ ಪಾತ್ರ, ಹಾಸ್ಯಕ್ಕೆ ಗುರಿಯಾದವನು.

Laugh'ter (ಲಾಫ್ಟರ್) n. laughing. ನಗೆ, ನಗು, ಹಾಸ್ಯ, ನಗೆಚಾಟಿಕೆ.

Launch(ಲಾಂಚ್) v. t. i. hurl, send forth, start on a course; set vessel or boat. ಬಲವಾಗಿ ಎಸೆ, ಒಗೆ, ಪ್ರಯೋಗಿಸು, ಪ್ರವೇಶಿಸು, ಮುನ್ನುಗ್ಗು, ನಾವೆ ನೀರಿಗಿಳಿಸು. n. large boat. ದೊಡ್ಡ ದೋಣಿ.

Launderer(ಲಾಂಡರರ್)n.a washerman. ಅಗಸ, ಮಡಿವಾಳ.

Laun'dress(ಲಾಂಡ್ರೆಸ್) n. washerwoman ಅಗಸಗಿತ್ತಿ, ಮಡಿವಾಳಗಿತ್ತಿ.

Laun'dry (ಲಾಂಡ್ರಿ) n. place where clothes are washed & dressed. ವಸ್ತ್ರ ಒಗೆಯುವ ಸ್ಥಳ, ಚಲುವೆ ಮನೆ, ಧೋಬಿಖಾನೆ.

Laur'eate (ಲಾರಿಎಟ್) a. crowned with laurel. ಲತಾಲಂಕೃತ. poet l. ರಾಜಕವಿ, ಆಸ್ಥಾನಕವಿ.

Lavabo (ಲವಾಬೋ) n. washing of hands before religious rights. ಧಾರ್ಮಿಕ ಸಂಸ್ಕಾರಗಳ ಮೊದಲು ಕೈತೊಳೆದುಕೊಳ್ಳುವಿಕೆ.

Lau'rel (ಲಾರೆಲ್) n. glossy leaved shrub, (sing. or plu.) wreath of some as emblem of honour or fame. ಲಾರೆಲ್‌ಗಿಡ(ಇದರ ಎಲೆ ಪರಿಮಳವುಳ್ಳದ್ದು), ಜಯಕಂಕಣ.

La'va(ಲಾವಾ)n. the melted matter

discharged from a volcano. ಶಿಲಾರಸ, ಅಗ್ನಿಪ್ರವಾಹ, ಶಿಲಾಪ್ರವಾಹ.

Lavation (ಲವೇಷನ್) n. washing of hands. ಕೈತೊಳೆಯುವಿಕೆ.

Lav'atory (ಲಾವಟೊರಿ) n. a place for washing hands and face. ತೊಳಕೊಳ್ಳುವ ಸ್ಥಳ, ಬಚ್ಚಲು ಮನೆ.

Lave (ಲೇವ್) v. t. bathe, wash. ಸ್ನಾನಮಾಡು, ತೊಳೆ.

Lav'ender (ಲಾವೆನ್ಡರ್) n. fragrant flowered shrub. ಸುವಾಸನೆಯ ವನಸ್ಪತಿ

Laver (ಲೇವರ್) n vessel used for ablution. ಪ್ರಕ್ಷಾಲನಾಪಾತ್ರೆ.

Lav'ish (ಲಾವಿಶ್) a. profuse, prodigal, extravagant. ಹೆಚ್ಚುಕೊಡುವ, ಧಾರಾಳವಾಗಿ ಕೊಡುವ, ವಿಪುಲ, ಪುಷ್ಕಳ, ಅಪರಿಮಿತ, ಮುಕ್ತಹಸ್ತ, ದುಂದುಗಾರಿಕೆಯ. v t. bestow or spend lavishly. ಅತಿವ್ಯಯಮಾಡು, ದುಂದುಗಾರಿಕೆಮಾಡು.

Law (ಲಾ) n. statute, the science of law, established usage. ಕಾಯಿದೆ, ಕಾನೂನು, ನಿಬಂಧನೆ, ನಿಯಮ, ಶಾಸನ, ವ್ಯವಹಾರ, ಧರ್ಮಶಾಸ್ತ್ರ, ಕಟ್ಟಳೆ.

Law'ful (ಲಾಫುಲ್) a allowed by law, rightful. ಶಾಸ್ತ್ರೋಕ್ತ, ನ್ಯಾಯವುಳ್ಳ, ನ್ಯಾಯಸಮ್ಮತವಾದ.

Lawk (ಲಾಕ್) int. denoting surprise. ವಿಸ್ಮಯವನ್ನು ಸೂಚಿಸುವ ಉದ್ಗಾರ.

Law'less (ಲಾಲೆಸ್) a. having no law, disobedient to law. unbridled ಅನ್ಯಾಯದ, ಪುಂಡಾಟದ, ನ್ಯಾಯವನ್ನು ಲಕ್ಷಿಸದ, ಧರ್ಮಬಾಹಿರ, ಅಧರ್ಮಿ.

Lawn (ಲಾನ್) n. a space of ground covered with grass. ಹುಲ್ಲಿನ ಜಾಗ, ಹುಲ್ಲುಗಾವಲು, ಪಚ್ಚೆ ನೆಲ, ಹುಲ್ಲು ಮೈದಾನ, ಹಚ್ಚನೆಯ ಬಯಲು.

Lawn-mower (ಲಾನ್-ಮೋಅರ್) n. machine for mowing lawn. ಹುಲ್ಲು ಕತ್ತರಿಸುವ ಯಂತ್ರ.



Lawn-mower

Lawn-tennis (ಲಾನ್‌ಟೆನಿಸ್) n. game played with a ball and rackets on a lawn. ಹುಲ್ಲುಗಾವಲಿನ ಮೇಲೆ ಆಡುವ ಟೆನಿಸ್ ಆಟ.

Lawny (ಲಾನಿ) covered with lawn. ಹುಲ್ಲು ಬೆಳೆದಿರುವ.

Law'yer (ಲಾಯರ್) n. person pursuing law as a profession. ವಕೀಲ, ನ್ಯಾಯವಾದಿ, ನ್ಯಾಯಶಾಸ್ತ್ರ ಪಂಡಿತ, 'ಲಾಯರ್'.

Lax (ಲಾಕ್ಸ್) a. negligent, loose; flabby, vague ಅಲಕ್ಷ್ಯದ, ಅಸಡ್ಡೆಯ, ಅಳ್ಳಕವಾದ, ಸಡಿಲವಾದ, ಬಿಗಿಯಿಲ್ಲದ, ಸಂದಿಗ್ಧ.

Laxation (ಲಾಕ್ಸೇಷನ್) n. state of being slackened. ಶಿಥಿಲತೆ, ಸಡಿಲವಾಗುವಿಕೆ.

Lax'ative (ಲಾಕ್ಸೆಟಿವ್) a having the power of loosening bowels. ವಿರೇಚಕ, ಸಾರಕ, ಭೇದಿಯೌಷಧ.

Laxity (ಲಾಕ್ಸಿಟಿ) n. looseness. ಸಡಿಲತೆ

Lay (ಲೆ) n minstrel's song, ballad. ಕೃತಿ ಪಂಚಿಕೆ, ಗೀತೆ. ಪದ್ಯ, ಹಾಡು a. unprofessional, amateur ಲೌಕಿಕ, ಪರಿಶ್ರಮವಿಲ್ಲದವ. v. t. deposit on surface, impose, enjoin, bury, calm, allay, wager. produce (eggs) ಇಡು, ಮಡಗು, ಹೊರಿಸು, ಒರಗಿಸಿಡು, ನಿಯಮಿಸು, ಹೂಳು, ಶಾಂತಮಾಡು, ಬಾಜಿಕಟ್ಟು, ಪಣವೊಡ್ಡು, ಮೊಟ್ಟೆಇಡು. l. by, save. ಉಳಿಸಿಡು. ತೆಗೆದಿಡು, ಕೂಡಿಡು. l. down the law, speak with authority. ಅಧಿಕಾರಯುಕ್ತವಾಗಿ ಮಾತಾಡು. l. hands on, seize by violence. ಜುಲುಮಿನಿಂದ ಹಿಡಿದುಕೊಳ್ಳು l. hands together, consult. ಸಮಾಲೋಚಿಸು. l. into, store. ಸಂಗ್ರಹಿಸಿಡು, ಕೂಡಿಡು. l. open, reveal, discover. ಬಿಚ್ಚಿತೋರಿಸು,

ಬಹಿರಂಗವಾಗಿ ಹೇಳು, ಕಂಡುಹಿಡಿ. l. out, expend. ವೆಚ್ಚಮಾಡು. l. to the heart ponder deeply on ದೀರ್ಘವಾಗಿ ಚಿಂತಿಸು, ದೊಡ್ಡ ಚಿಂತೆಗೆ ಗುರಿಯಾಗು. l. up. store or treasure. ಕೂಡಿಡು, ಗಳಿಸಿಡು, ದುಡಿದಿಡು. l. on the shelf, lay aside as no longer useful. ನಿಷ್ಪ್ರಯೋಜಕವೆಂದು ಮೂಲೆಗಿಡು, ತಿರಸ್ಕರಿಸು. l. waste, destroy, devastate. ನೆಲಸಮ ಮಾಡು, ಹಾಳುಮಾಡು. l. oneself out, exert oneself, endeavour earnestly. ಪರಿಶ್ರಮ ಪಡು, ಉತ್ಸಾಹದಿಂದ ಪ್ರಯತ್ನಿಸು. l. stress on, attach importance to. ಪ್ರಾಮುಖ್ಯತೆಕೊಡು, ಮಹತ್ವಕೊಡು. l. under, subject to. ಒಳಪಡಿಸು, ವಶಪಡಿಸು. l low, bury. ಹೂಳು. l. violent hands on, murder. ಕೊಲೆ ಮಾಡು. l. by the heels, render powerless. ನಿಸ್ಸತ್ವಗೊಳಿಸು. be laid up, be unwell. ಕಾಯಿಲೆ ಆಗಿರು.

ay'er (ಲೇಯುರ್) n. person, &c. that lays, a thickness of matter laid over a surface. ಇಡುವವನು, ಸಾಲು, ಪದರು, ವಿಸ್ತರಣ, ಸ್ತರ, ವರಿಸೆ.

ayering (ಲೇಯುರಿಂಗ್) n. propagation of plants by layers ಗಿಡದ ರೆಂಬೆ ಹೂತು ಸಸ್ಯವೃದ್ಧಿ ಮಾಡುವ ವಿಧಾನ.


Layering

ay-figure (ಲೇ-ಫಿಗರ್) n. wooden figure or frame unreal character. ಮರದ ಚೌಕಟ್ಟು, ಕೃತ್ರಿಮಪಾತ್ರ.

ay'man (ಲೇಮನ್) n a non professional man. ಅನಭಿಜ್ಞ ಮನುಷ್ಯ, ಕಸಬುದಾರನಲ್ಲದವ.

az'ar (ಲೇಜರ್) n. beggar with leprosy. ಕುಷ್ಠರೋಗಿ.

azarett'o (ಲಾಝರೆಟ್ಟೊ) n. hospital for lepers. ಕುಷ್ಠರೋಗಿಗಳ ಆಸ್ಪತ್ರೆ.

Lazarus (ಲಾಜರಸ್) n. a beggar. ಭಿಕ್ಷುಕ.

Laziness (ಲೇಜಿನೆಸ್) n. indolence, aversion to work. ಆಲಸ್ಯ, ಮೈಗಳ್ಳತನ, ಸೋಮಾರಿತನ.

Laz'y (ಲೇಝಿ) a. averse to work, indolent. ಸೋಮಾರಿ, ಮೈಗಳ್ಳನಾದ, ದುಡಿಯಲು ಮನಸ್ಸಿಲ್ಲದ, ಆಲಸ್ಯದ, ಮಂದದ.

Lea (ಲೀ) n. a meadow ಹುಲ್ಲಿನಭಾಗ, ಹುಲ್ಲುಗಾವಲು, ಹುಲ್ಲು ಮೈದಾನ.

Leach (ಲೀಚ್) v t. to make a liquid perclate through something. ಒಂದು ಪದಾರ್ಥದ ಮೂಲಕ ದ್ರವ ಸೋರುವಂತೆ ಮಾಡು.

Lead (ಲೀಡ್) v. t. & i. go before, guide, experience a life of specified kind. ಕರೆದುಕೊಂಡು ಹೋಗು, ದಾರಿ ತೋರಿಸು, ಮುಂದೆ ಹೋಗು, ಮಾರ್ಗದರ್ಶನಮಾಡು. ನಡೆಸು, ಕಾಲಕ್ಷೇಪಮಾಡು. n guidance, leader's place. ಮಾರ್ಗದರ್ಶನ, ಅಗ್ರಸ್ಥಾನ, ನಾಯಕತ್ವ, ಮುಂದಾಳುತನ l astray. mislead, seduce. ಮರುಳುಗೊಳಿಸು, ಕೆಡಿಸು, ಭ್ರಷ್ಟಗೊಳಿಸು. ದುರ್ಮಾರ್ಗಕ್ಕೆಳೆ. l. one, a pretty dance, cause one unnecessary trouble. ಅನವಶ್ಯಕವಾಗಿ ತೊಂದರೆಗೊಳಿಸು. l. off, begin ಆರಂಭಿಸು. l. to the altar; marry (used only of a woman). ಮದುವೆಯಾಗು. a. leading question, a question which suggests the answer to it. ಉತ್ತರವನ್ನು ಸೂಚಿಸುವ ಪ್ರಶ್ನೆ.

Lead (ಲೆಡ್) n. a heavy soft gray metal. ಸೀಸ.

Leaden (ಲೆಡನ್) a. made of lead, heavy, dull ಸೀಸದಿಂದ ನಿರ್ಮಿತವಾದ, ಭಾರವಾದ, ಮಂದವಾದ.

Lead'er (ಲೀಡರ್) n. a chief, leading article in newspaper. ಮುಂದಾಳು, ಧುರೀಣ, ನಾಯಕ, ಮುಖ್ಯಸ್ಥ, ಪ್ರಧಾನಲೇಖನ.

Leaderette' (ಲೀಡರೆಟ್) n. short editorial article. ಚಿಕ್ಕದಾಗಿರುವ ಸಂಪಾದಕೀಯ ಲೇಖನ, ಉಪಸಂಪಾದಕೀಯ.

Lead'ing (ಲೀಡಿಂಗ್) a. chief, of most importance, giving guidance. ಮುಖ್ಯ, ಮಹತ್ವದ, ಪ್ರಮುಖವಾದ, ಮಾರ್ಗದರ್ಶಕ, ಅಗ್ರದ, ಪುರೋಗಾಮಿ.

Leaf (ಲೀಫ್) n. part of foliage, sheet of paper of which each side is a page. ಎಲೆ, ಸೊಪ್ಪು, ಪಾನು, ಹಾಳೆ, ಪತ್ರ.

Leaf'age (ಲೀಫೇಜ್) n. foliage. ಎಲೆಗಳು, ಎಸಳುಗಳು, ಪರ್ಣ ಚಿತ್ರಾಲಂಕಾರ.

Leafiness (ಲೀಫಿನೆಸ್) n. state of being leafy. ಎಲೆಗಳಾಗಿರುವ ಸ್ಥಿತಿ, ಪರ್ಣರೂಪಸ್ಥಿತಿ.

Leafless (ಲೀಫ್‌ಲೆಸ್) a. devoid of leaves. ಪತ್ರರಹಿತವಾದ, ಎಲೆಯಿಲ್ಲದ, ನಿಷ್ಪತ್ರ.

Leaf'let (ಲೀಫ್‌ಲೆಟ್) n. printed paper single or folded for distribution. ಚಿಕ್ಕ ಪ್ರಕಟನಾ ಪತ್ರ, ಹಸ್ತಪತ್ರಿಕೆ.

Leafy (ಲೀಫಿ) a. full of leaves. ಎಲೆಗಳುಳ್ಳ.

League (ಲೀಗ್) n. varying measure of distance, usu. about 3 miles, union for mutual advantage ಹರದಾರಿ, ಸಂಘ, ಒಕ್ಕೂಟ, ಮಂಡಲಿ.

Leak (ಲೀಕ್) n. hole or passage through which liquid,&c. makes its way out. ಒಡಕು, ತೂತು, ಬಿರುಕು, ಸೋರುಗಂಡಿ. vt. pass or let through. ಸೋರು, ಒಸರು, ಮೆಲ್ಲಗೆ ಹೊರಬೀಳು.

Leak'age (ಲೀಕೇಜ್) n. what leaks out or in. ಒಸರುವುದು, ಸೋರಿ ಹೋದದ್ದು, ಕಣ್ಣಿಗೆ ಕಾಣದ ನಷ್ಟ.

Leaky (ಲೀಕಿ) a. having leaks. ಸೋರುವ, ಒಡಕುಳ್ಳ.

Leal (ಲೀಲ್) a. loyal, hones
ಪ್ರಾಮಾಣಿಕ, ಭಕ್ತಿಯುಳ್ಳ, ನಂಬಿಕೆ
ಸ್ವಾಮಿಭಕ್ತಿಯುಳ್ಳ.

Lean (ಲೀನ್) a. thin, not fatty. ಸೊ
ಗಿದ, ತೆಳುವಾದ, ಬತ್ತಿದ, ಸಣಕಲಾದ. ಕೊ
ಲ್ಲದ. vt. i. be in or put in slopi
position, be partial to. ಬಾ
ಬಗ್ಗಿಸು, ಒರಗಿಸು, ಒರಗಿರು, ಒರ
ವಾಲು, ಅವಲಂಬಿಸು, ಆನಿಸು, ಪಕ್ಷಪ
ಮಾಡು.

Lean'ing (ಲೀನಿಂಗ್) n. tendency
inclination. ಬಾಗು, ಪ್ರವಣತೆ, ಪ
ದರಿಕೆ, ಒಲವು.

Leanness (ಲೀನ್‌ನೆಸ್) n. thinne
ಕೃಶತೆ.

Lean-witted (ಲೀನ್.ವಿಟೆಡ್) a. ha
ing very little common-sen
ಮಂದಮತಿ.

Leap (ಲೀಪ್) v. & t. jump. ಹಾ
ನೆಗೆ. n. ಜಿಗಿತ, ಹಾರಿಕೆ, ನೆಗೆತ, ಎಗ
ಧುಮುಕು. l. in the dark, do a ris
thing without knowing t
results ಮುಂದಿನ ಫಲವರಿಯದೆ ಕೆಲಸ
ಕೈಹಾಕು. by l. s. & bounds, by
series of sudden & rapid adva
ces. ಅಕಸ್ಮಾತ್ತಾಗಿಯೂ ಶೀಘ್ರವಾಗಿ
ಅಭಿವರ್ಧಿಸುತ್ತ.

Leapingly (ಲೀಪಿಂಗ್ಲಿ) adv. by leap
ಹಾರುತ್ತ, ನೆಗೆಯುತ್ತ, ಜಿಗಿಯುತ್ತ.

Leap-year (ಲೀಪ್‌ಇಅರ್) n. wi
29th Feb. as intercalary da
ಫೆಬ್ರವರಿ ತಿಂಗಳಲ್ಲಿ ೨೯ ದಿನಗಳಿರು
ವರ್ಷ.

Learn (ಲರ್ನ್) v. t. & i. acqui
knowledge, find out. ಕಲಿ, ನಿಪು
ಣನಾಗು, ಜ್ಞಾನಸಂಪಾದಿಸು, ವಿಚಾರವ
ತಿಳಿ, ತಿಳಿದುಕೊಳ್ಳು.

Learnable (ಲರ್ನಬಲ್) a. som
thing that can be learnt. ಕ
ಯಲು ಸಾಧ್ಯವಾದ.

Learn'ed(ಲರ್ನೆಡ್)a. deeply read, erudite. ವಿದ್ಯಾವಂತನಾದ, ಪಾಂಡಿತ್ಯ ಪಡೆದ, ಬಲ್ಲ, ವಿದ್ವಾಂಸನಾದ.

Learn'ing (ಲರ್ನಿಂಗ್) n. knowledge, scholarship. ವಿದ್ಯೆ, ಜ್ಞಾನ, ವಿದ್ವತ್ತು.

Lease(ಲೀಸ್)n. contract by which land of tenement is conveyed for a term by its owner [the leasor] to a tenant [the lessee,] usually for a rent. ಗುತ್ತಿಗೆ ಕರಾರು, ಗೇಣಿ ಚೀಟಿ, ಗುತ್ತಿಗೆ, ಗೇಣಿ, ಭೋಗ್ಯ, ಭೋಗ್ಯಪತ್ರ, ಖಾತೆ, ಕೌಲು.

Lease-holder (ಲೀಸ್‌ಹೋಲ್ಡರ್) n. a tenant under a lease. ಪಟ್ಟೇದಾರ, ಗೇಣಿದಾರ.

Leash (ಲೀಶ್)a. thong for holding dogs. ನಾಯಿಗಳ ಕೊರಳಪಟ್ಟಿ.

Least (ಲೀಸ್ಟ್) a. smallest. ಅತ್ಯಂತ ಸಣ್ಣ, ಸ್ವಲ್ಪ, ಅತ್ಯಲ್ಪ, ಚಿಕ್ಕ, ಕನಿಷ್ಠ adv. in the least degree. ಕನಿಷ್ಠಪಕ್ಷದಲ್ಲಿ, ಲೇಶಮಾತ್ರ at l. at any rate. ಕನಿಷ್ಠ ಪಕ್ಷದಲ್ಲಿ, ಎಷ್ಟುಮಟ್ಟಿಗಾದರೂ. the l. said the soonest mended, it is prudent to speak little. ಮಾತು ಕಡಿಮೆ ಮಾಡುವುದು ಜಾಣತನ, ಮೌನದಿಂದ ಕಲಹವಿಲ್ಲ.

Leat(ಲೀಟ್)n. water course which drives a mill. ಜಲಯಂತ್ರಕ್ಕೆ ನೀರು ಸಾಗಿಸುವ ಕಾಲುವೆ.

Lea'ther (ಲೆದರ್)n.prepared skin of an animal. ತೊಗಲು, ಚಕ್ಕಳ, ಹದ ಮಾಡಿದ ಚರ್ಮ.

Leather-back(ಲೆದರ್‌ಬ್ಯಾಕ್)n. kind of turtle. ಒಂದು ಬಗೆಯ ಆಮೆ.

Leathern (ಲೆದರ್ನ್) a made of leather. ಚರ್ಮದಿಂದ ಮಾಡಿದ.

Leatheroid (ಲೆದರಾಯ್ಡ್) n. artificial leather. ಕೃತಕ ಚರ್ಮ.

Leathery (ಲೆದರಿ) a. resembling leather. ಚರ್ಮವನ್ನು ಹೋಲುವ, ಗಟ್ಟಿಮುಟ್ಟಾದ.

Leave(ಲೀವ್)n.permission, liberty granted,licence,formal parting. ಅಪ್ಪಣೆ, ಅನುಮತಿ, ರಜೆ, ಬೀಳ್ಕೊಳ್ಳೋಣ. v. t. & i. let remain, bequeath, abstain from, go away [from]; abandon. ಇರಗೊಳಿಸು, ಉಳಿಸಿಡು, ತೊರೆದುಬಿಡು, ವರ್ಜಿಸು, ಬಿಟ್ಟುಬಿಡು, ಬಿಟ್ಟು ಹೋಗು, ಅಧೀನಕ್ಕೊಪ್ಪಿಸು, ತ್ಯಜಿಸು. l. one in the dark, keep one entirely ignorant. ಅಜ್ಞಾನದಲ್ಲಿಡು, ಕತ್ತಲಲ್ಲಿ ಕೈಬಿಡು. l. off. discontinue, abandon. ನಿಲ್ಲಿಸು, ಬಿಟ್ಟುಬಿಡು. l one in the cold; neglect. ಉದಾಸೀನ ಮಾಡು, ಅಲಕ್ಷಿಸು. l. one in the lurch, desert one in difficulty ಕಷ್ಟದಲ್ಲಿ ಕೈಬಿಡು. l. out, omit. ಬಿಟ್ಟುಬಿಡು. l to oneself, not interfere with. ಗೊಡವೆಗೆ ಹೋಗದಿರು, ಗೊಡವೆ ಬಿಟ್ಟುಬಿಡು. l. no stone unturned; do everything that can he done to achieve an object. (ಕೈಗೊಂಡ ಕಾರ್ಯಕ್ಕೆ) ಸರ್ವ ಪ್ರಯತ್ನ ಮಾಡು.

Lea'ven (ಲೀವನ್) a. mass of sour dough for making other dough light. ಅಂಬಿಲ, ಹುಳಿ ಹಿಡಿದ ಹಿಟ್ಟು, ಹೆಪ್ಪು, ಕಿಣ್ವ.

Leav'ings(ಲೀವಿಂಗ್ಸ್) n. plu. what some one has left, as useless, &c. ಉಚ್ಛಿಷ್ಟ, ಎಂಜಲು, ಉಳಿತ, ಶೇಷ.

Lecher (ಲೆಚರ್) n. fornicator. ಪಟಿಂಗ, ಕಾಮುಕ, ವ್ಯಭಿಚಾರಿ.

Lecherous (ಲೆಚರಸ್) a. lustful. ಕಾಮುಕನಾದ.

Lechery(ಲೆಚರಿ) n lust, lewdness. ಕಾಮುಕತೆ, ಲಂಪಟತೆ.

Lectern(ಲೆಕ್ಟರನ್) n. desk used for reading in church. ಚರ್ಚಿನ ವಾಚನ ಪೀಠ.

Lec'ture (ಲೆಕ್ಚರ್) n. discourse, recital; piece of admonition. ಉಪನ್ಯಾಸ, ಪಾಠಪ್ರವಚನ, ಬುದ್ಧಿವಾದ, ಭಾಷಣ, ವಾಗ್ದಂಡನೆ.

Ledge (ಲೆಜ್)n. projection on the side of a mountain, ridge of rocks. ಬೆಟ್ಟದ ಪಾರ್ಶ್ವದಲ್ಲಿ ಚಾಚಿಕೊಂಡಿರುವಿಕೆ, ಶಿಲಾಫಲಕ.

Ledg'er (ಲೆಡ್ಜರ್) n. debtor and creditor account book. ಲೇವಾದೇವಿಗಳನ್ನು ಬರೆದಿಡುವ ವ್ಯಾಪಾರದ ಲೆಕ್ಕ ಪುಸ್ತಕ, ಖಾತೆ, ಖತಾವಣಿ.

Lee(ಲೀ)n. shelter given by neighbouring object, side away from the wind. ಆಶ್ರಯ, ಮರೆ, ಮರೆಯಿರುವ ಕಡೆ, ‹‹ಪವರ್ಗ" ಗಾಳಿಗೆ ಅಡ್ಡವಾದ ದಿಕ್ಕು.

Lee'ward (ಲ್ಯೂಅರ್ಡ್) a. & adv. on or towards the side turned from the wind. ಗಾಳಿಗಡ್ಡವಾದ, ವಾತಾನುಲೋಮ.

Leech (ಲೀಚ್) n. physician, blood sucking worm. ವೈದ್ಯ, ಚಿಕಿತ್ಸಕ, ಪರರಿಂದ ಆದಾಯ ಹೀರುವವನು, ಜಿಗಣೆ, ಜಿಗಳೆ, ಜಲೂಕೆ.


Leech

Lees (ಲೀಝ್)n. -plu. sediment of wine, &c., worst part after best is gone. ಮಡ್ಡಿ, ಮಷ್ಟು, ಕಳಪೆ, ಕಸ, ಕಸರು.

Leeward (ಲೀವರ್ಡ್) adv. in the direction in which the wind blows. ಗಾಳಿ ಬೀಸುವ ದಿಕ್ಕಿನಲ್ಲಿ.

Left (ಲೆಫ್ಟ್) a. being on the left side. ಎಡಗಡೆಯ, ಎಡ, ಎಡಪಕ್ಕದ, ಎಡಗಡೆಯಲ್ಲಿರುವ, ವಾಮ. l. handed compliment, sneering remark. ಕಪಟಶ್ಲಾಘನೆ.

Leg (ಲೆಗ್) n. one of the limbs on which person or animal walks or stands. ಕಾಲು, ಆಧಾರ. on one's last ls. about to be ruined. ಅಸರೆ, ಅಂತ್ಯಾವಸ್ಥೆಯಲ್ಲಿ, ಹಾಳಾಗುವ ಅವಸೆಯಲ್ಲಿ.


Leg

Leg'acy (ಲೆಗಸಿ) n. a bequest by will. ಮೃತ್ಯುಪತ್ರದಿಂದ ಬರೆದುಕೊಟ್ಟ ಆಸ್ತಿ, ಮೃತ್ಯುಪತ್ರದತ್ತ, ಮೃತ್ಯುಲೇಖದಾನ, ಪೂರ್ವಾರ್ಜಿತ ಆಸ್ತಿ.

Leg'al (ಲೀಗಲ್) a. of or based on law, lawful ನ್ಯಾಯವಾದ, ನ್ಯಾಯಶಾಸ್ತ್ರದ, ಕಾನೂನಿಗೊಳಪಡುವ, ಶಾಸನಸಮ್ಮತವಾದ.

Legal'ity(ಲೀಗ್ಯಾಲಿಟಿ)n. lawfulness. ನ್ಯಾಯ, ನೀತಿ, ನ್ಯಾಯಪರತೆ.

Leg'alize (ಲೀಗಲೈಝ್) v. t. make lawful ಕಾಯಿದೆಯಿಂದ ಸ್ಥಾಪಿಸು, ಶಾಸ್ತ್ರಸಮ್ಮತಮಾಡು, ವ್ಯವಸ್ಥಿತಗೊಳಿಸು.

Legatee (ಲೆಗಟೀ) n. recipient of legacy. ಮೃತ್ಯುಪತ್ರದತ್ತವಾದ ಆಸ್ತಿ ಪಡೆದವನು.

Lega'tion (ಲಿಗೇಷನ್) n. body of deputies. ರಾಯಭಾರ, ದೌತ್ಯ, ದೂತಕ್ರಿಯೆ.

Le'gend (ಲೆಜೆಂಡ್) n traditional story, myth. ದಂತಕಥೆ, ಆಖ್ಯಾಯಿಕೆ, ಇತಿಹಾಸ, ಪುರಾಣಕಥೆ.

Le'gendary (ಲೆಜಂಡರಿ) a. famous or existing only in legend. ಕಲ್ಪಿತ, ಪುರಾಣೋಕ್ತ, ಐತಿಹ್ಯಗಳ.

Le'gerdemain' (ಲೆಜರ್ಡಿಮೇನ್) n. sleight of hand, juggling; sophistry. ಕೈಚಳಕ, ಕಣ್ಕಟ್ಟು, ತಂತ್ರಗಳು.

ಮೋಸ, ಠಕ್ಕು, ಕುತರ್ಕ, ಇಂದ್ರಜಾಲ, ಕೈ ಚಮತ್ಕಾರದ ಆಟ, ಕುಹಕ.



Legging

Leggings (ಲೆಗಿಂಗ್ಸ್) n. outer and extra gaiter-like coverings for the legs. ಒಂದು ವಿಧದ ಕಾಲು ಕಾಪು.

Leghorn (ಲೆಗ್ಹಾರ್ನ್) n. kind of domestic fowl. ಒಂದು ಜಾತಿಯ ಸಾಕಿದ ಕೋಳಿ

Legibility (ಲೆಜಿಬಿಲಿಟಿ) n. the quality of being legible. ಸುಪಾಠ್ಯತೆ, ಲೇಖನಸ್ಪಷ್ಟತೆ.

Le'gible(ಲೆಜಿಬ್ಲ್) a. easily read. ಓದಲಾಗುವ, ಸ್ಪಷ್ಟವಾದ, ಸ್ಫುಟವಾದ, ವಾಚನೀಯ.

Le'gion (ಲೀಜನ್) n. division of army, great number. ದಂಡು, ಸೈನ್ಯ ದಳ, ಅಪಾರಜನ, ದೊಡ್ಡ ಸಂಖ್ಯೆ. their name is l., they are countless. ಅಸಂಖ್ಯಾತವಾಗಿವೆ.

Le'gislate (ಲೆಜಿಸ್ಲೇಟ್) v. i. make laws. ಶಾಸನಮಾಡು, ಕಾನೂನುಮಾಡು, ವ್ಯವಸ್ಥೆ ವಿಧಿಸು.

Legislation (ಲೆಜಿಸ್ಲೇಷನ್) n. the enacting of laws. ವ್ಯವಸ್ಥೆಮಾಡುವಿಕೆ, ಕಾನೂನು ವಿಧಿಸುವಿಕೆ.

Legislator (ಲೆಜಿಸ್ಲೇಟರ್) n. law-giver, member of legislative body. ಶಾಸನಕಾರ, ಶಾಸನಸಭೆಯ ಸದಸ್ಯ.

Le'gislature (ಲೆಜಿಸ್ಲೇಚರ್) n. legislative body of a state. ನ್ಯಾಯವಿಧಾಯಕ ಸಭೆ, ಕಾಯಿದೆಮಂಡಲ, ಶಾಸನಸಭೆ.

egist (ಲೀಜಿಸ್ಟ್) n. person versed in law. ನ್ಯಾಯಶಾಸ್ತ್ರಪಾರಂಗತ.

egit'imacy (ಲಿಜಿಟಿಮಸಿ) n. being legitimate. ನ್ಯಾಯತೆ, ಔರಸತ್ವ.

egit'imate(ಲಿಜಿಟಿಮೇಟ್)a. lawful; regular, properly; lawfully begotten. ನ್ಯಾಯವಾದ, ನ್ಯಾಯಸಮ್ಮತವಾದ, ಕ್ರಮಬದ್ಧವಾದ, ಧರ್ಮಸಮ್ಮತವಾದ, ವಿವಾಹದಿಂದ ಹುಟ್ಟಿದ, ಔರಸ, ಧರ್ಮಪತ್ನಿಯಿಂದ ಹುಟ್ಟಿದ.

Legum (ಲಿಗಮ್) a. of laws. ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ.

Legumen (ಲಿಗೂಮೆನ್) n. edible part of a fruit. ಹಣ್ಣಿನ ತಿನ್ನಬಹುದಾದ ಭಾಗ.

Leister (ಲೀಸ್ಟರ್) n. kind of long spear. ಒಂದು ಬಗೆಯ ಉದ್ದವಾದ ಈಟಿ.

Leis'ure (ಲೆಝುರ್) n. spare time; freedom from pressing business. ಬಿಡುವು, ಅವಕಾಶ, ಪುರಸತ್ತು, ವಿರಾಮಕಾಲ.

Leman (ಲೀಮನ್) n. lover, sweetheart. ಪ್ರೇಮಿ, ಪ್ರೇಮಿಕೆ.

Lemma(ಲೆಮ) n. an assumed proposition. ಸ್ವೀಕೃತ ಪ್ರತಿಜ್ಞೆ, ಕುರಿತುಕೊಂಡ ಸಿದ್ಧಾಂತ.

Lem'on (ಲೆಮನ್) n. pale yellow acid fruit. ನಿಂಬೆಹಣ್ಣು, ಲಿಂಬೆ, ಗಜನಿಂಬೆ.

Lemonade (ಲೆಮನೇಡ್) n. drink made from lemon juice. ನಿಂಬೆಹಣ್ಣಿನ ಪಾನಕ.

Lend (ಲೆಂಡ್) v. t. grant temporary use of (thing); let out at interest or for hire. bestowed or contributed. ಕೈಗಡಕೊಡು, ಎರವಲು ಕೊಡು, ಕಡಕೊಡು, ಬಡ್ಡಿಗೆಕೊಡು, ಸಾಲಕೊಡು. l. a hand, to help. ಸಹಾಯಮಾಡು l. countenance, give support. ಬೆಂಬಲಕೊಡು, ಸಮರ್ಥಿಸು.

Lender (ಲೆಂಡರ್)n·one who lends. ಸಾಲಕೊಡುವವನು, ಸಾಹುಕಾರ.

Lending (ಲೆಂಡಿಂಗ್) n. act of giving on loan. ಸಾಲ, ಋಣ.

Length (ಲೆಂಗ್ತ್) n. measurement from end to end in space or time. ಉದ್ದ, ಲಾಂಬಿ, ನೀಳ, ವಿಸ್ತಾರ (ಕಾಲದ) ವ್ಯಾಪ್ತಿ, ಹೊತ್ತು. at l. last,

after a long time. ಕೊನೆಗೆ, ಬಹಳ ಹೊತ್ತಾದ ಮೇಲೆ. at full l. stretched out to the full extent. ಪೂರ್ಣ ಉದ್ದವಾಗಿ.

Lengthways (ಲೆಂಗ್ತ್‌ವೇಸ್) adv. in the direction of the length. ಉದ್ದುದ್ದವಾಗಿ.

Length'wise (ಲೆಂಗ್ತ್‌ವೈಜ್) adv in the direction of the length. ಉದ್ದವಾಗಿ, ಉದ್ದಕ್ಕೆ.

Leng thy (ಲೆಂಗ್ಥಿ) a of great length, rather long. ಉದ್ದವಾದ, ವಿಸ್ತಾರವಾದ, ಅತಿದೀರ್ಘವಾದ.

Lenience, len'ity (ಲೀನ್ಯೆನ್ಸ್, ಲೀನಿಟಿ) n. mildness, clemency. ಸೌಮ್ಯತೆ, ಸಹನೆ, ಸೈರಣೆ, ದಯೆ, ಕನಿಕರ, ಕೃಪೆ, ಕ್ಷಮೆ.

Len'ient (ಲೀನ್ಯೆಂಟ್) a. not severe. ದಯಾಪರ, ಮೃದುಸ್ವಭಾವದ, ಕನಿಕರದ, ಸಹನೆಯುಳ್ಳ, ದಾಕ್ಷಿಣ್ಯಪರ.

Lenitive (ಲೆನಿಟಿವ್) adj. soothing. ನೋವನ್ನು ಶಮನಮಾಡುವ.

Lenity (ಲೆನಿಟಿ) n softness, mercy. ದಯಾಳುತನ.

Leno (ಲೀನೊ) n kind of cotton gauze used for window curtains ಕಿಟಕಿಯ ಪರದೆಗಾಗಿ ಉಪಯೋಗಿಸುವ ಹತ್ತಿಯ ಜಾಲ.

Lens (ಲೆನ್ಸ್) n piece of glass sphercially convex on one or both sides ; used in spectacles, &c. ದುರ್ಬೀನು ಮುಂತಾದ ಯಂತ್ರಗಳ ಕನ್ನಡಿ, ಎರಡು ಭಾಗಗಳಲ್ಲಿ ಮಧ್ಯೆ ಉಬ್ಬುಳ್ಳ ಕನ್ನಡಿ.

Len'til (ಲೆಂಟಿಲ್) n. edible seed. ಮಸೂರ ಬೀಜ, ಮಸೂರ, ಅವರೆ, ಚನ್ನಂಗಿ.

Lentoid (ಲೆನ್ಟಾಯಿಡ್) a. of the shape of a lens. ಮಸೂರದ ಆಕಾರದ.

Le'o (ಲೀಯೋ) n. sign of zodiac. ಸಿಂಹ.

Leonine (ಲಿಯೊನೈನ್) a. of or like a lion. ಸಿಂಹದಂತೆ, ಸಿಂಹ ಸಮಾನ.

Leo'pard (ಲೆಪರ್ಡ್) n. large carnivorous beast with dark spotted fawn coat: panther. ಚಿರತೆ, ಚಿಮಾರ್, ಸಿವಂಗಿ.


Leopard

Lep'er (ಲೆಪರ್) n. person with leprosy. ಕುಷ್ಠರೋಗಿ, ಕುಷ್ಠ.

Lepid (ಲೆಪಿಡ್) adj. pleasant. ಮನೋಹರವಾದ.

Lep rosy (ಲೆಪ್ರಸಿ) n. an endemic chronic constitutional disease. ಕುಷ್ಠರೋಗ, [illegible], ಮಹಾರೋಗ.

Le'sion (ಲೀಜನ್) n. hurting, wound. ಕ್ಷತಿ, ಗಾಯ, ವ್ರಣ, ಹುಣ್ಣು.

Less (ಲೆಸ್) a. of lower rank, degree or quantity, fewer. ಚಿಕ್ಕ. ಕಿರಿಯ, ಸಣ್ಣ, ಕಡಮೆಯ, ಕೆಳದರ್ಜೆಯ, ರಹಿತ, ಇಲ್ಲದ, ಕಮ್ಮಿ. adv to a less degree ಕಮ್ಮಿಯಾಗಿ, ಕಡಮೆಯಾಗಿ, ಕೊಂಚವಾಗಿ

Lessee' (ಲೆಸ್ಸೀ) n. one to whom lease is made. ಗೇಣಿದಾರ, ಸಾಗುವಳಿದಾರ, ಗುತ್ತಿಗೆದಾರ, ಭೋಗ್ಯದಾರ.

Less'en (ಲೆಸ್ನ್) v. t. & i. diminish. ಕಡಮೆಮಾಡು, ಕಡಿಮೆ ಆಗು.

Less'on (ಲೆಸನ್) n. thing to be learnt by pupil, a warning experience, example. ಪಾಠ, ಬುದ್ಧಿವಾದ. ಶಿಕ್ಷಣ, ಮಾರ್ಗದರ್ಶನ, ಎಚ್ಚರಿಕೆ ಕೊಡುವ ಘಟನೆ, ಉದಾಹರಣೆ.

Less'or (ಲೆಸರ್) n person that grants a lease ಜಮೀನು ಬಾಡಿಗೆಗೆ ಕೊಡುವವ, ಹಿಡುವಳಿದಾರ, ಗುತ್ತಿಗೆಗೆ ಕೊಡುವವ.

Lest (ಲೆಸ್ಟ್) conj in order that; for fear that. ಆಗದಿರಲೆಂದು, ಆಗದ ಹಾಗೆ, ಆಗದಂತೆ, ಯಾರಿಗೆ ಗೊತ್ತು—[illegible].

Let (ಲೆಟ್) v. t. & i. allow or enable or cause to, grant use of for rent or hire, cause or allow to escape. ಬಿಟ್ಟುಬಿಡು, ಅಸ್ಪದಕೊಡು, ಅನುಜ್ಞಾಪಿಸು, ಬಾಡಿಗೆಗೆಕೊಡು, ಕೊಡಿಸು. l. off, excuse, set free. ಕ್ಷಮಿಸು, ಬಿಡುಗಡೆಮಾಡು, ಬಿಟ್ಟುಬಿಡು. l. in, allow to enter ಒಳಕ್ಕೆಬಿಡು. l. out, disclose. ಗುಟ್ಟುಬಿಡು. l. be, no matter. ಚಿಂತೆಯಿಲ್ಲ, ಪರವಾಯಿಲ್ಲ! ಅಗಲಿ! l. alone, leave unmolested. ಗೊಡವೆಗೆ ಹೋಗದಿರು. l. into- make acquainted with (said of something kept secret). ಗುಟ್ಟು ತಿಳಿಸು. l. bygones be bygones, not rake up old sores. ಹಳೆಯ ಗಾಯವನ್ನು ಕೆದರಬೇಡ, ಹಿಂದಿನ ಹಗೆತನವನ್ನು ಬಿಡು. l. the cat out of the bag, give away the ecret. ಗುಟ್ಟು ಹೊರಗೆಡಹು. l. the grass not grow under one's feet, do the allotedtask with the utmost speed. ವಹಿಸಿದ ಕೆಲಸವನ್ನು ತೀವ್ರವಾಗಿಮಾಡು.

eth'al (ಲೀಥಲ್) a. deadly, fatal. ಪ್ರಾಣನಾಶಕ, ಮರಣಕಾರಕ, ಮಾರಕ, ಸಾವನ್ನುಂಟುಮಾಡುವ.

ethargic (ಲೆಥಾರ್ಜಿಕ್) a. dull, apathetic. ಜಡ, ನಿರುತ್ಸಾಹಿ, ಮಡ್ಡಿ.

eth'argy (ಲೆಥರ್ಜಿ) n. hopeless dullness or morbid drowsiness. ನಿದ್ರಾಲಸ್ಯ, ತಾಮಸ, ಜಡತೆ, ಆಲಸ್ಯ, ಸುಸ್ತು; ನಿರುತ್ಸಾಹ, ರೋಗದಮಂಪರ, ಚಟುವಟಿಕೆಯಿಲ್ಲದಿರುವುದು.

ethe (ಲೀಥಿ) n. river of forgetfulness, oblivion. ವೈತರಣೀ ನದಿ, ಮರೆವು.

ett'er (ಲೆಟರ್) n. written message; literal meaning; a printing type, written character, plu. learning. ಪತ್ರ; ಕಾಗದ, ಓಲೆ, ಅಕ್ಷರ, [illegible], ವರ್ಣ, ಲಿಪಿ,(ಬ. ವ.) ಕಲಿಕೆ, ಪಾಂಡಿತ್ಯ. to the l. exactly. ಸರಿಯಾಗಿ, ಕರಾರುವಾಕ್ಕಾಗಿ.

Lett'ered (ಲೆಟರ್ಡ್) a. well read. ವಿದ್ಯಾವಂತನಾದ, ಪಾಂಡಿತ್ಯಪಡೆದ, ಅಕ್ಷರಜ್ಞನಾದ, ಪಂಡಿತರ.

Lettuce (ಲೆಟಸ್) n. kind of vegetable. ಒಂದು ಜಾತಿಯ ತರಕಾರಿಯ ಸೊಪ್ಪು.

Leucoderma (ಲ್ಯೂಕೊಡರ್ಮಾ) n. whiteness of skin. ಚರ್ಮದ ಶ್ವೇತತೆ.

Leucoma (ಲ್ಯೂಕೋಮ) n. a disease of the eye. ಕಣ್ಣಿನ ಒಂದು ರೋಗ.

Leucorrhoea (ಲ್ಯೂಕಾರಿಯಾ) n. the whites. ಶ್ವೇತಪ್ರದರವೆಂಬ ಸ್ತ್ರೀಯರ ರೋಗ.

Levant (ಲಿವಾಂಟ್) v. i. abscond without paying one's debts. ಸಾಲ ತೀರಿಸದೆ ಓಡಿಹೋಗು; ತಲೆತಪ್ಪಿಸಿಕೊಂಡು ಹೋಗು.

Lev'ee (ಲೆವಿ) n. morning assembly received by a sovereign. ಪ್ರಾತಃಸಭೆ, ಬೆಳಗಿನ ದರಬಾರು, ಅತಿಥಿ ಗೋಷ್ಠಿ, ಸುಪ್ರಭಾತ ಸ್ವಾಗತ.

Lev'el (ಲೆವಲ್) n. a horizontal plane; a social or intellectual equality; flat country. ಮಟ್ಟಗೋಲು; ಮಟ್ಟ; ಸಾಮಾಜಿಕ ಅಥವಾ ಬೌದ್ಧಿಕ ಸಮಾನತೆ, ಸಮತಲ ಪ್ರದೇಶ. a. even, flat, plan. ಸಮಾಂತರ, ಸಮತಲವಾದ, ಒಂದೇ ಮಟ್ಟದ, ಒಂದೇಸಮನಾದ. v. t. & i. make even or uniform, abolish, take aim at. ಒಂದೇ ಸಮಮಾಡು, ನೆಲಸಮಮಾಡು, ಮಟ್ಟಮಾಡು, ವ್ಯತ್ಯಾಸಗಳನ್ನು ತೊಡೆದು ಹಾಕು, ಗುರಿಯಿಡು.

Lev'er (ಲೀವರ್) n. a bar used as mechanical aid to raise a weight, tool used in raising. ಸನ್ನೆ, ಸನ್ನೆಕೋಲು; [illegible].



Lever

Lev'eret (ಲಿವರೆಟ್) n. young hare. ಮೊಲದಮರಿ.

Levi'athan (ಲಿವೈಅಥನ್) n. sea monster, huge ship. ತಿಮಿಂಗಿಲ, ಸಮುದ್ರದ ಪೆಡಂಭೂತ, ಬಹು ದೊಡ್ಡ ಹಡಗು.

Lev'igate (ಲೆವಿಗೇಟ್) v. t. rub down into powder or paste. ಪುಡಿ ಮಾಡು, ನುಣ್ಣಗೆ ಅರೆ.

Levitate (ಲೆವಿಟೇಟ್) vi. float in the air. ಗಾಳಿಯಲ್ಲಿ ತೇಲಾಡು.

Lev'ity (ಲೆವಿಟಿ) n. lightness, unreasonable jocularity. frivolity. ಹಗುರ, ಲಾಘವ, ತೂಕವಿಲ್ಲದಿರುವುದು, ಸಮಯೋಚಿತವಲ್ಲದ ಹಾಸ್ಯ, ಚಾಂಚಲ್ಯ, ಕ್ಷುಲ್ಲಕತನ.

Lev'y (ಲೆವಿ) v. t. raise or impose compulsorily (ಕರ ಮೊದಲಾದ್ದನ್ನು) ವಿಧಿಸು, ಕಂದಾಯ, ತೆರಿಗೆ ಹಾಕು, ತೆರಿಗೆ ಸುಂಕ ವಸೂಲುಮಾಡು.

Lewd(ಲ್ಯೂಡ್)a. lustful, indecent. ಕಾಮುಕ, ಅಶ್ಲೀಲ, ಅಯೋಗ್ಯ, ತುಚ್ಛ, ವ್ಯಭಿಚಾರದ.

Lexical (ಲೆಕ್ಸಿಕಲ್) a. pertaining to the words in a language. ಭಾಷೆಯ ಶಬ್ದಕ್ಕೆ ಸಂಬಂಧಿಸಿದ.

Lexicog'rapher (ಲೆಕ್ಸಿಕಾಗ್ರಫರ್) n. maker of dictionaries. ನಿಘಂಟುಕಾರ; ಕೋಶಕಾರ.

Lexigraphy (ಲೆಕ್ಸಿಗ್ರಾಫಿ) n. system of writing in which each symbol represents a word. ಪ್ರತಿಶಬ್ದಕ್ಕೂ ಒಂದು ವಿಶೇಷ ಚಿಹ್ನೆಯನ್ನು ಉಪಯೋಗಿಸುವ ಒಂದು ಲೇಖನ ಪ್ರಣಾಳಿ.

Lex'icon (ಲೆಕ್ಸಿಕಾನ್) n. dictionary. ನಿಘಂಟು, ಶಬ್ದಕೋಶ, ಶಬ್ದಸಂಗ್ರಹ

Liabil'ity (ಲೈಯಬಿಲಿಟಿ) n. being liable (ulu) debts. ಹೊರೆ, ಜವಾಬ್ದಾರಿ, ಹೊಣೆಗಾರಿಕೆ, ಉತ್ತರದಾಯಿತ್ವ, (ಬ ವ) ಸಾಲ ಸೋಲು.

Li'able (ಲೈಯೆಬಲ್) a. subject to, answerable for, exposed to. ಹೊಣೆಯಾದ, ಜವಾಬ್ದಾರನಾದ, ಈಡಾದ, ಮಾಡಲು ಬದ್ಧನಾದ, ಒಳಗಾದ, ಗುರಿಯಾದ, ಉತ್ತರದಾಯಿ, ಅರ್ಹ, ಯೋಗ್ಯ.

Liason (ಲಿಏಸನ್) n. illicit connection between a man and woman, connection. ಸ್ತ್ರೀ ಪುರುಷರ ಅನುಚಿತ ಪ್ರಣಯಸಂಬಂಧ.

Liar (ಲೈಅರ್) n. a person who utters falsehood. ಸುಳ್ಳುಗಾರ; ಸುಳ್ಳ, ಹುಸಿಗ; ಅಸತ್ಯವಾದಿ, ಸುಳ್ಳುಹೇಳುವನು.

Liba'tion (ಲೈಬೇಷನ್) n. drink offering. ಉದಕ ತರ್ಪಣೆ, ಮದ್ಯಸಮರ್ಪಣೆ, ಮದ್ಯತರ್ಪಣ.

Libel (ಲೈಬೆಲ್) vt. to misrepresent maliciously. ಮತ್ಸರದಿಂದ ಮಾನಹಾನಿ ಮಾಡು.

Lib'ellous (ಲೈಬೆಲಸ್) a. defamatory. ನಿಂದೆಯ; ಮಾನನಷ್ಟಕರವಾದ, ಹಾನಿಕರ; ಕಳಂಕಕರ.

Lib'eral(ಲಿಬರಲ್)a. open-handed, generous, noble minded, candid; free extensive, of the Liberal Party. ಯಥೇಷ್ಟ, ಹೇರಳ, ಪುಷ್ಕಳ, ಮುಕ್ತಹಸ್ತ, ಉದಾರ ಮನಸ್ಸಿನ; ಪ್ರಗತಿಪರನಾದ, 'ಲಿಬರಲ್' ಎಂಬ ಪಂಗಡದ.

Liberalism (ಲಿಬರಲಿಜಮ್)n. principles of the Liberal Party. ಸ್ವತಂತ್ರವಿಚಾರಗಳ ತತ್ವ.

Liberality (ಲಿಬರಾಲಿಟಿ) a. generosity, candour, impartiality. ದಾನಶೀಲತೆ; ಉದಾರತ್ವ, ಔದಾರ್ಯ, ನಿಷ್ಪಕ್ಷಪಾತತೆ.

Lib'erate (ಲಿಬರೇಟ್) v. t. set at liberty, free. ಬಂಧವಿಮೋಚನೆ ಮಾಡು, ಮುಕ್ತಗೊಳಿಸು, ವಿಸರ್ಜಿಸು.

Liberation (ಲಿಬರೇಷನ್) n. act of liberating. ಬಂಧಮುಕ್ತಿ, ವಿಮೋಚನೆ.

Lib'ertine (ಲಿಬರ್ಟಿನ್) n licentious man, a rake. ಪಟಿಂಗ, ಕಾಮುಕ; ಸ್ವೈರಿ, ವ್ಯಭಿಚಾರಿ, ಸ್ವೇಚ್ಛಾಚಾರಿ, ವಿಷಯಲಂಪಟ.

Libertinism (ಲಿಬರ್ಟಿನಿಸ್ಮ್)

n. debauchery, lewdness. ಸ್ವೇಚ್ಛಾಚಾರ, ವ್ಯಭಿಚಾರ, ಕಾಮುಕತೆ.

Lib'erty (ಲಿಬರ್ಟಿ) n. freedom, right of power to do as one pleases. ಸ್ವಾತಂತ್ರ್ಯ, ಬಿಡುಗಡೆ, ಮನಸ್ಸಿಗೆ ತೋರಿದನ್ನು ಮಾಡುವಂತಿರುವ ಹಕ್ಕು ಅಥವಾ ಅಧಿಕಾರ, ಅನಿರ್ಬಂಧತೆ. take liberties with, treat very familiarly. ಅತಿ ಸಲಿಗೆಯಾಗಿರು.

Libid'inous (ಲಿಬಿಡಿನಸ್) a. lustful. ಕಾಮಾತುರ, ಕಾಮಾಸಕ್ತ, ಕಾಮುಕನಾದ, ವಿಷಯಲಂಪಟನಾದ.

Lib'ra (ಲೀಬ್ರಾ) n the balance, 7th sign of zodiac. ತಕ್ಕಡಿ, ತುಲಾರಾಶಿ.

Librar'ian (ಲೈಬ್ರೆರಿಯನ್) n. custodian of library. ಪುಸ್ತಕಾಲಯದ ಅಧಿಕಾರಿ.

Librarianship (ಲೈಬ್ರರಿಯನ್‌ಷಿಪ್) n. the office of a librarian. ಪುಸ್ತಕಾಲಯಾಧಿಕಾರಿಯ ಪದವಿ.

Lib'rary (ಲೈಬ್‌ಬ್ರರಿ) n. collection of book or place in which it is kept. ಪುಸ್ತಕ ಸಂಗ್ರಹ, ಪುಸ್ತಕಾಲಯ, ಸಾರ್ವಜನಿಕ ಪುಸ್ತಕ ಭಂಡಾರ.

Librate (ಲೈಬ್ರೇಟ್) vi. oscillate, shake. ಓಲಾಡು, ಆಂದೋಲನವಾಗು.

Libration (ಲೈಬ್ರೇಷನ್) n. shaking, oscillatory motion. ಕಂಪನ, ಆಂದೋಲನ.

Libretto (ಲಿಬ್ರೆಟೊ) n. song book of an opera. ಸಂಗೀತರೂಪಕದ ಪಾಠ ಪುಸ್ತಕ.

Licence (ಲೈಸನ್ಸ್) n. permission to do something otherwise prohibited, excessive liberty of action. ಅನುಮತಿ, ಅಪ್ಪಣೆ, ಸನ್ನದು, ಅನುಜ್ಞೆ, ಅಧಿಕಾರಪತ್ರ, ಅಪ್ಪಣೆ ಚೀಟಿ, ಸ್ವಚ್ಛಂದವೃತ್ತಿ, ನಿರಂಕುಶತೆ. v.t. license.

Licencee (ಲೈಸೆನ್ಸೀ) n. holder of a licence. ಅನುಮತಿಪಡೆದವನು, ಲೈಸೆನ್ಸ್‌ದಾರ.

n'tiate (ಲೈಸೆನ್‌ಶಿಏಟ್) n. holder of a certificate from a collegiate or examining body. ಸನದು ಉಳ್ಳವನು; ಸನದುವಾಲಾ, ದತ್ತಾಧಿಕಾರಿ, ವಿಶ್ವವಿದ್ಯಾನಿಲಯದ ಅಥವಾ ಪರೀಕ್ಷಾಮಂಡಲಿಯ ಪ್ರವೀಣತಾಪತ್ರಪಡೆದವನು.

Licen'tious (ಲಾಯ್‌ಸನ್‌ಶಸ್) a. immoral in sexual relations. ವ್ಯಭಿಚಾರಿ, ಕಾಮುಕ, ವಿಷಯಲಂಪಟವಾದ.

Lich (ಲಿಚ್) n. dead body. ಶವ, ಹೆಣ.

Lic'hen (ಲಾಯ್‌ಕೆನ್) n. kind of flowers forming a crust on stones, tree trunks; &c. ಕಲ್ಲುಹೂವು, ಹಾವಸೆಗೆ, ಪಾಚಿ, ಬೂಸನೆಗೆ, ಬೂಸಲು, ಶಿಲಾವಲ್ಕ.

Lick (ಲಿಕ್) v. t. take in by the tongue; passing tongue over. ನೆಕ್ಕು, ನಂಜಿಕೊ, ಚಾಡಿಕಿಕೊ.

Lick'erish (ಲಿಕೆರಿಶ್) n. fond of dainty fare, greedily lecherous. ಆಶೆಬುರುಕ; ತಿನಗುಳಿ; ಅತ್ಯಾಶೆಯ, ಭಕ್ಷ್ಯಪ್ರಿಯನಾದ, ಗೀಳು ಹಿಡಿದ, ಭೋಗಾಸಕ್ತ.

Lid (ಲಿಡ್) n, cover fitting an aperture. ಮುಚ್ಚಳ, ಮುಚ್ಚಿಗೆ, ಕಣ್ಣುರೆಪ್ಪೆ, ಎವೆ.

Lidless (ಲಿಡ್‌ಲೆಸ್) a. without cover. ಮುಚ್ಚಳವಿಲ್ಲದ.

Lie (ಲಾಯ್, ಲೈ) n. intentional false statement. ಸುಳ್ಳು, ಸಟೆ; ಹುಸಿ, ಅನೃತ, ಅಸತ್ಯ. v. i. tell lie, be a rest on something, be comprised. ಸುಳ್ಳುಹೇಳು, ಸಟೆಯಾಡು, ಮೋಸಪಡಿಸು, ಹುಸಿಹೇಳು, ವಂಚಿಸು, ಮಲಗಿರು, ಪವಡಿಸು, ಬಿದ್ದಿರು, ಅಂತರ್ಭೂತನಾಗು. l. over, be deferred, postponed. ಮುಂದಕ್ಕೆ ತಳ್ಳು, ಮುಂದಿನ ವಾಯಿದೆಗೆ ಹಾಕು. l at one's door, be imputable to. ಆರೋಪಣಾರ್ಹನಾಗಿರು,

ಹೊರಿಸತಕ್ಕದ್ದಾಗಿರು. l. in, wait for ; conceal oneself. ಹೊಂಚಿಕೊಳ್ಳು, ಹೊಂಚಿನೋಡು.

Lief (ಲೀಫ್) adv. willingly. ಸಂತೋಷದಿಂದ, ಉತ್ಸಾಹಪೂರ್ವಕ, ಪ್ರೀತಿಯಿಂದ.

Liege(ಲೀಜ್)a. entitled to receive allegiance. ಪ್ರಭುವಾದ. n. one's liege, lord, vassal or subject. ಧಣಿ, ಆಳುವ ಮಹಾಸ್ವಾಮಿ, ಸ್ವಾಮಿನಿಷ್ಠೆ ಇರಬೇಕಾದ ಒಡೆಯ, ಪ್ರಭು, ರೈತ.

Li'en (ಲೀಅನ್) n. right to hold another's property till debt on it is paid. ಭೋಗ್ಯಾದಿ ಹಕ್ಕು.

Lieu (ಲ್ಯೂ) n. instead, place. ಸ್ಥಳ. in lieu; instead. ಸ್ಥಳದಲ್ಲಿ. —ರ ಸ್ಥಾನದಲ್ಲಿ, — ಗೆ ಬದಲಾಗಿ.

Lieuten'ant (ಲೆಫ್ಟಿನೆಂಟ್) n. deputy or subordinate commander, a navy or army officer. ಸೇನಾಧಿಕಾರಿ, ಸೇನಾನಿ, ಉಪನಾಯಕ.

Life (ಲೈಫ್) n. vitality, spirit. manner of living, time between birth and death ಜಿವ , ಚೇತನ, ಉಸಿರು, ಬಾಳು, ಬದುಕು, ಜೀವಮಾನ, ಜೀವನ, ಜೀವಂತಸ್ಥಿತಿ, ಪ್ರಾಣ.

Life-belt (ಲೈಫ್ ಬೆಲ್ಟ್) n. a belt constructed to float the body on water. ನೀರಿನಲ್ಲಿ ತೇಲುವುದಕ್ಕೆ ಉಪಯೋಗಿಸುವ ಪಟ್ಟಿ.

Life-boat (ಲೈಫ್-ಬೋಟ್) n. a boat for saving shipwrecked persons. ಮುಳುಗುವ ಹಡಗಿನಿಂದ ಜನರನ್ನು ರಕ್ಷಿಸಲು ಉಪಯೋಗಿಸುವ ಚಿಕ್ಕದೋಣಿ.



Life-boat

Life'less (ಲೈಫ್‌ಲೆಸ್)a. dead without vigour, insipid. ಗತಪ್ರಾಣದ, ಮೃತ, ನಿರ್ಜೀವ, ನಿಸ್ಸತ್ವದ.

Life'like (ಲೈಫ್‌ಲೈಕ್) a. realistic or vivid. ಜೀವಕಳೆಯುಳ್ಳ, ಜೀವಂತ ಮನುಷ್ಯನ ಹಾಗಿರುವ, ಮೂರ್ತಿಮತ್ತಾದ, ಜೀವಿಯಂತಿರುವ.

Lift (ಲಿಫ್ಟ್) v. t. i. raise to the higher level, take up, hoist. ಎತ್ತು, ಮೇಲಕ್ಕೆತ್ತು, ಎತ್ತರಿಸು, ಮೇಲೇರಿಸು, ಉಚ್ಛ್ರಾಯಕ್ಕೆ ತರು; ಉದ್ಧರಿಸು. n. lifting, apparatus for raising and lowering people, &c., from floor to floor ನೆಗವು, ಎತ್ತುವುದು, ಜನರನ್ನು ಒಂದಂತಸ್ತಿನಿಂದ ಇನ್ನೊಂದಂತಸ್ತಿಗೆ ಎತ್ತಿಳಿಸುವ ಯಂತ್ರ, ಎತ್ತುಯಂತ್ರ, "ಲಿಫ್ಟ್".

Lifter (ಲಿಫ್ಟರ್) n. he who or that lifts a thing. ಪದಾರ್ಥವನ್ನು ಎತ್ತುವ ಯಂತ್ರ, ಭಾರ ಎತ್ತುವವನು.

Lig'ament (ಲಿಗಮೆಂಟ್) n. tough fibrous tissue binding bones together. ಅಸ್ಥಿಬಂಧಕ, ಕಟ್ಟು,ಬಂಧನ, ಅಸ್ಥಿರಜ್ಜು.

Ligamentary (ಲಿಗಮೆಂಟರಿ) a. binding. ಅಸ್ಥಿಬಂಧಕ.

Ligate (ಲೈಗೇಟ್) vt. to tie up a bleeding artery. ರಕ್ತ ಸೋರುತ್ತಿರುವ ಧಮನಿಯನ್ನು ಕಟ್ಟು.

Ligation (ಲಿಗೇಶನ್) n. the act of binding. ಕಟ್ಟುವಿಕೆ, ಬಂಧನ.

Lig'ature (ಲಿಗಚರ್) n. a tie or bandage. ಬಂಧನ, ಕಟ್ಟು, ಪಟ್ಟಿ ಕಟ್ಟುವುದು.

Light (ಲೈಟ್) n that by which we see ; a burning candle ; brightness of eyes or aspect, mental or spiritual illumination. ಪ್ರಕಾಶ, ಜ್ಯೋತಿ, ದೀಪ, ಬೆಳಕು, ಪ್ರಭೆ, ಕಾಂತಿ, ಕಣ್ಣಿನತೇಜಸ್ಸು, ಜ್ಞಾನೋದಯ, ಆತ್ಮಪ್ರಕಾಶ. v. t. & i. kindle, ignite, begin burning, show the way with light. ದೀಪಹಚ್ಚು, ಹೊತ್ತಿಸು, ಉರಿಹೊತ್ತು, ಉರಿಯಲು ಆರಂಭಿಸು, ದೀಪಹಿಡಿದು ದಾರಿತೋರಿಸು, ಪ್ರಜ್ವಲಿತವಾಗು. a. bright, pale, not deep, heavy, nimble ; easy to wield

or digest or do; trivial. ಪ್ರಕಾಶಮಯ, ಬಿಳುಪೇರಿದ, ಲಘುವಾದ, ಅಲ್ಪ, ಹಗುರವಾದ, ಭಾರವಲ್ಲದ, ಕ್ಷುಲ್ಲಕ. see the l. be born. ಜನಿಸು, ಹುಟ್ಟು. stand in one's own l., hinder one's own good or success. ಲಾಭಕ್ಕೆ ಅಡ್ಡ ಬರು, ಜಯಕ್ಕೆ, ಲಾಭಕ್ಕೆ ವಿಘ್ನವಾಗು. make l. of. treat as unimportant. ಕ್ಷುಲ್ಲಕವಾಗಿ ತಿಳಿ, ಅಲ್ಪವೆಂದು ಉದಾಸೀನಮಾಡು. bring to l. disclose. ಗುಟ್ಟು ಹೊರಗೆಡಹು. come to l. become known. ಪ್ರಕಟವಾಗು. set l. by. undervalue; despise. ಅಲ್ಪವಾಗಿ ತಿಳಿ, ತಿರಸ್ಕರಿಸು. l fingered person, one given to pilfering. ಕಳವಿನ ಅಭ್ಯಾಸವುಳ್ಳವ, ಎತ್ತಿ ಹಾಕುವ ಚಾಳಿಯುಳ್ಳವ.

Lighten(ಲೈಟನ್) vt. reduce weight, mitigate. shed light upon. ಹಗುರಗೊಳಿಸು, ಕಡಿಮೆಮಾಡು, ಪ್ರಕಾಶಗೊಳಿಸು

Lighter (ಲೈಟರ್) n. a contrivance used to get a flame for lighting cigarettes. ಸಿಗರೇಟ್ ಹಚ್ಚಲು ಉಪಯೋಗಿಸುವ ಸಲಕರಣೆ.


Lighter

Light'hear'ted (ಲೈಟ್‌ಹಾರ್ಟೆಡ್) n. cheerful, merry. ಸಂತೋಷವುಳ್ಳ, ಉಲ್ಲಾಸವುಳ್ಳ.

Light house(ಲೈಟ್‌ಹೌಸ್)n. structure with beacon light for guiding or warning ship. ದೀಪಗೃಹ, ಬೆಳಕು ಗೂಡು, ದೀಪದಮನೆ, ಸಮುದ್ರದ ಬೆಳಕು ಮನೆ.

Lightness (ಲೈಟ್ ನೆಸ್) n. want of heaviness, quality of being light. ಲಘುತ್ವ, ಹಗುರತನ.

Light'ning (ಲೈಟ್ ನಿಂಗ್) n. discharging of electricity from cloud to cloud. ಮಿಂಚು, ವಿದ್ಯುತ್ತು, ವಿದ್ಯುತ್ಪಾತ.

Lig'neous (ಲಿಗ್ನಿಅಸ್) a. wooden, woody. ಕಟ್ಟಿಗೆಯ, ದಾರುಮಯ.

Ligniform (ಲಿಗ್ನಿಫಾರಮ್) a. like wood. ಕಟ್ಟಿಗೆಯ ಹಾಗೆ ಇರುವ, ದಾರು ಸದೃಶವಾದ.

Like (ಲೈಕ್) n. similar; resembling. ಸಮಾನ, ಅಂತಹ, ಅದೇ ಬಗೆಯ, ಸದೃಶ; ಹೋಲುವ. prep. in the same degree as, ಅಂತೆ; ಹಾಗೆ. adv. in the same manner. ಅದೇ ರೀತಿಯಲ್ಲಿ. n. counterpart, equal, like thing or persons, plu. likings. ಸಾಮ್ಯ, ಪ್ರತಿರೂಪ, ಸಾರೂಪ್ಯ, ಹೋಲಿಕೆ; (ಬ. ವ.) ಅಭಿರುಚಿ. v. t. find agreeable or satisfactory, feel attracted by. ಪ್ರೀತಿಸು, ಬಯಸು, ಒಗ್ಗಿರು, ಮೆಚ್ಚು, ಇಷ್ಟಪಡು.

Likeable (ಲೈಕಬಲ್) a. loveable, amiable, agreeable. ಮೆಚ್ಚಬಹುದಾದ, ಇಷ್ಟಪಡಬಹುದಾದ.

Like'lihood (ಲ್ಯಾಕ್ಲಿಹುಡ್-ಲೈ) n. probability. ಆದೀತೆಂಬ ಭರವಸೆ, ಸಂಭವ.

Like'ly (ಲೈಕ್ಲಿ) a. probable, credible, having reason to expect. ಆಗಬಹುದಾದ, ಸಂಭವನೀಯ, ನಿರೀಕ್ಷಿತ

Liken (ಲೈಕನ್) vt. compare, find similarity in, to make alike. ಹೋಲಿಸು, ಸದೃಶವಾಗಿಮಾಡು.

Like'ness (ಲೈಕ್ ನೆಸ್) n. resemblance, portrait. effigy. ಹೋಲಿಕೆ, ಸಾದೃಶ್ಯ, ಎಣೆ, ಸಾಮ್ಯ, ಪ್ರತಿಬಿಂಬ, ಆಕಾರ.

Like'wise (ಲೈಕ್‌ವೈಜ್) adv. & conj, similarly. also; moreover. ಹಾಗೆಯೇ, ಅಂತೆಯೇ, ತದ್ವತ್, ಅದೂ ಅಲ್ಲದೆ. ಇನ್ನೂ ಸಹ.

Lik'ing (ಲೈಕಿಂಗ್) n. inclination, satisfaction. ಇಷ್ಟ, ಮಮತೆ, ಪ್ರೇಮ, ಮೆಚ್ಚಿಕೆ, ಪ್ರೀತಿ, ಅಭಿರುಚಿ.

Lilac (ಲೈಲಕ್) n. plant with fragrant flowers (pale violet colour)

ಸುವಾಸನೆಯುಳ್ಳ ಊದಾಬಣ್ಣದ ಹೂವು ಬಿಡುವ ಗಿಡ,

Liliaceous (ಲಿಲಿಯೇಶಿಯಸ್) a. of the form or like a lily. ಲಿಲಿಯಾಕಾರದ, ಲಿಲಿಯಂತಿರುವ.

Lilipu'tian (ಲಿಲಿಪ್ಯೂಶನ್) a. & n. pigmy, dwarf, too short. ಗಿಡ್ಡ (ಮನುಷ್ಯ), ಕುಳ್ಳ, ವಾಮನ, ಪುಟ್ಟ ಮನುಷ್ಯ.

Lilt (ಲಿಲ್ಟ್) vi. sing melediously. ಮಧುರವಾಗಿ ಹಾಡು.


Lily

Lil'y (ಲಿಲಿ) n. bulbous plant with showy flower. ಕುಮುದ, ನೈದಿಲೆ, ಲಿಲಿ.

Limation (ಲಿಮೇಷನ್) n. act of polishing. ಹೊಳಪುಂಟು ಮಾಡುವುದು.

Limb (ಲಿಮ್ಬ್) n. leg, arm or wing: main branch of tree. ಕೈಕಾಲು, ರೆಕ್ಕೆ, ಅವಯವ, ರೆಂಬೆ, ಟೊಂಗೆ, ಕೊಂಬೆ. v. t. disable, pull to pieces ಕೈಕಾಲು ಕಡಿದುಬಿಡು, ಧ್ವಂಸಗೊಳಿಸು, ತುಂಡು ತುಂಡುಮಾಡು.

Limbate (ಲಿಂಬೇಟ್) adj. having distinct coloured borders. ಸ್ಪಷ್ಟವಾದ, ಬಣ್ಣಬಣ್ಣದ ಅಂಚುಗಳುಳ್ಳ.

Lim'ber (ಲಿಂಬರ್) a. flexible, lithe, agile. ಮೆತ್ತನ್ನ, ಮೃದು, ಬಳುಕುವ, ಬಗ್ಗಿಸಲಾಗುವ, ನಮ್ರ.

Lime (ಲೈಮ್) n. white caustic substance got by burning kinds of rock. ಸುಣ್ಣ. l. kiln. ಸುಣ್ಣದ ಭಟ್ಟಿ.

Limelight (ಲೈಂಲೈಟ್) n. kind of strong light. ಪ್ರಖರಪ್ರಕಾಶ, ಪ್ರಸಿದ್ಧಿ.

Limerick (ಲಿಮರಿಕ್) n·a meaningless verse. ಒಂದು ವಿಧದ ನಿರರ್ಥಕ ಹಾಸ್ಯಪದ್ಯ.

Lim'it (ಲಿಮಿಟ್) n. boundary, restriction. ಎಲ್ಲೆ, ಗಡಿ, ಸರಹದ್ದು, ಕೊನೆ, ಮೇರೆ, (ಪರಿ) ಮಿತಿ, ಅವಧಿ. v. t. set limits to, serve as limits to. ಮಿತಿ ಕಲ್ಪಿಸು, ಹದ್ದಿನಲ್ಲಿಡು, ಮಿತಗೊಳಿಸು, ತಡೆಹಾಕು, ಮೇರೆಮಾಡು, ಎಲ್ಲೆ ಇಡು.

Limita'tion (ಲಿಮಿಟೇಶನ್) n. limiting, limited condition. ಸೀಮಾಬಂಧನ, ವ್ಯವಹಾರಾವಧಿ, ಮಾಯಿದೆ, ನಿಬಂಧನೆ, ಕಾಲಾವಧಿ.

Limn (ಲಿಮ್) vt. portray, depict. ರಚಿಸು, ನಿರೂಪಿಸು.

Limous (ಲೈಮಸ್) adj. muddy, slimy. ಕೆಸರಿನಿಂದ ಕೂಡಿದ, ಮಣ್ಣಾದ.

Limp (ಲಿಂಪ್) v. i· halt, walk lamely· ಕುಂಟು, ಕುಂಟುತ್ತ ನಡೆ. ನಿಲ್ಲು. a. flexible, weak. ಮಿದು, ಸಡಿಲಾದ, ಬಳುಕುವ, ಶಕ್ತಿಯಿಲ್ಲದ, ಬಗ್ಗುವ, ದುರ್ಬಲ, ನಿರ್ಬಲ.

Limper (ಲಿಂಪರ್) n· a person who walks lamely. ಕುಂಟಿಕೊಂಡು ನಡೆಯುವವನು.

Lim pid (ಲಿಂಪಿಡ್) a. transparently clear. ಸ್ವಚ್ಛ, ತಿಳಿಯಾದ, ನಿರ್ಮಲ.

Limpkin (ಲಿಂಪ್‌ಕಿನ್) n. kind of crane. ಒಂದುಬಗೆಯ ಸಾರಸ ಪಕ್ಷಿ.

Linament (ಲಿನಮೆಂಟ್) n. a lint for a wound. ಘಾಯವನ್ನು ಕಟ್ಟುವ ಪಟ್ಟಿ.

Linch'pin (ಲಿಂಚ್‌ಪಿನ್) n. pin passed through axle-end to keep wheel on. ಬಂಡಿ ಚಕ್ರದ ಕೀಲು, ಗಾಲಿಯ ಕೀಲು, ಕಡಾಣಿ ಕೀಲುಗೂಟ.


Linchpin

Lin'den (ಲಿಂಡೆನ್) n· lime tree. ನಿಂಬೇಗಿಡ.

Line (ಲೈನ್) n. a piece of cord, long narrow mark, row of persons or things, lineage; track or course or direction; verse.

ಹುರಿ, ಹಗ್ಗ, ಗೆರೆ, ಸಾಲು, ರೇಖೆ, ಪಂಕ್ತಿ, ಶ್ರೇಣಿ, ಪರಂಪರೆ, ಸಂತತಿ, ಪೀಳಿಗೆ ದಿಕ್ಕು, ಪಥ, ದಾರಿ, ಪದ್ಯದ ಒಂದು ಪಾದ, ಚರಣ. v. t. and i. make with lines, place along by the side of for guarding, put, lining into, serve as lining of. ಗೆರೆ ಎಳೆ; ಗೆರೆಗಳಿಂದ ತುಂಬು, ಸಾಲಾಗಿ ಹರಡು, ಅಸ್ತರಿ ಹಾಕು. hard lines; harsh treatment; unfortunate lot ಕ್ರೂರವರ್ತನೆ, ದೌರ್ಭಾಗ್ಯ, ದುರದೃಷ್ಟ.

Lin′eage (ಲಿನಿಎಜ್) n. descent, pedigree. ವಂಶಪರಂಪರೆ, ಮನೆತನ, ಸಂತತಿ, ಪೀಳಿಗೆ.

Lin′eal (ಲಿನಿಅಲ್) a. belonging to a line. ಆನುವಂಶಿಕ, ಪರಂಪರೆಯ, ನೇರವಾದ ಸಂತತಿಯ, ಕುಲಕ್ರಮಾನುಗತ.

Lin′eament (ಲಿನಿಅಮೆಂಟ್) n. (usu. plu.) distinctive feature(s). ಮುಖಲಕ್ಷಣ, ಮುಖಮುದ್ರೆ, ವಿಶಿಷ್ಟಲಕ್ಷಣ, ಮುಖಭಾವ.

Linear (ಲೀನಿಯರ್) a. pertaining to lines, narrow. ರೇಖೆಗೆ ಸಂಬಂಧಿಸಿದ.

Lin′en (ಲಿನನ್) n. cloth made of lint or flax. ನಾರುಬಟ್ಟೆ, ನಾರುಮಡಿ, ನಾರೆಗಸೆಯ ಬಟ್ಟೆ.

Lin′endraper (ಲಿನನ್‌ಡ್ರೇಪರ್) n. one who deals in linen, calico, &c. ನಾರುಬಟ್ಟೆಯೇ ಮೊದಲಾದವುಗಳ ವ್ಯಾಪಾರಿ.

Lin′er (ಲೈನರ್) n. ship of a line of passenger ships. ಪ್ರವಾಸದ ನಾವೆ.

Ling′er (ಲಿಂಗರ್) v. t. be slow to depart, seem long, stay about, dally, be protracted. ತಡಮಾಡು, ಕಾಲಹರಣಮಾಡು, ಹಿಂದೆ ಹಿಂದೆ ನಿಲ್ಲು, ಬಹುಕಾಲ ಎಳೆಯುತ್ತಿರು, ಬಳಸಾಡು, ಅಲೆದಾಡು, ಉದ್ದ ಮಾಡು.

Lingo (ಲಿಂಗೋ) n. contempt for everything foreign. ವಿದೇಶ ಭಾಷೆ ಭಾವನೆಗಳ ವಿಚಾರದಲ್ಲಿ ತಿರಸ್ಕಾರ ಭಾವನೆ.

Ling′ual (ಲಿಂಗ್ವಲ್) a. of the tongue, of speech. ನಾಲಿಗೆಗೆ ಸಂಬಂಧಪಟ್ಟ ಮಾತಿನ, ನಾಲಗೆಯ, ಭಾಷೆಯ.

Ling′uist (ಲಿಂಗ್ವಿಸ್ಟ್) n. one skilled in languages. ಬಹುಭಾಷಾ ಭಿಜ, ಬಹುಭಾಷಾ ಪಂಡಿತ.

Linguistics (ಲಿಂಗ್ವಿಸ್ಟಿಕ್ಸ್) n. the science of language. ಭಾಷಾ ಶಾಸ್ತ್ರ.

Lin′iment (ಲಿನಿಮೆಂಟ್) n. a kind of thin ointment. ಮುಲಾಮು, ಉಜ್ಜುತೈಲ, ಲೇಪನತೈಲ, ಮರ್ದನೌಷಧ.

Lin′ing (ಲೈನಿಂಗ್) n. cover of inner surface of garment, &c. ಒಳಅರಿವೆ, ಅಸ್ತ್ರಿ, ಅಂತರಾಚ್ಛಾದನ.

Link (ಲಿಂಕ್) n. one loop or ring of a chain of knitted work, &c., member of series. ಕೊಂಡಿ, ಸರಪಣಿಯ ಒಂದು ಉಂಗುರ, ಕಣಿಕೆ, ಸಂಬಂಧಕ, ಬಂಧನ, ಕೀಲು. v. t. & i. connect, join together, clasp or intertwine. ಪರಸ್ಪರ ಕೂಡಿಸು, ಸಂಬಂಧಿಸು, ಗಂಟು ಹಾಕು, ಜಂಟಿಸು, ಜೋಡಿಸು, ಸೇರಿಸು.



Link

Link-boy (ಲಿಂಕ್ ಬಾಯ್) n. boy who carries a torch. ದೀವಟಿಗೆಯನ್ನು ಒಯ್ಯುವ ಬಾಲಕ.

Linnet (ಲಿನೆಟ್) n. a kind of song bird. ಒಂದು ಬಗೆಯ ಹಾಡುವ ಹಕ್ಕಿ.

Lin′otype (ಲೈನೋಟೈಪ್) n. machine producing stereotyped lines of type. ತನ್ನಷ್ಟಕ್ಕೆತಾನೆ ಮುದ್ರಾಕ್ಷರಗಳ ಪಂಕ್ತಿಗಳನ್ನು ಸೇರಿಸುವ ಯಂತ್ರ.

Lin′seed (ಲಿನ್ಸೀಡ್) n. seed of flax. ಅಗಸೇಬೀಜ.

Lin′stock (ಲಿನ್‌ಸ್ಟಾಕ್) n. staff holding match for firing cannon. ತೋಪುಹಾರಿಸಲು ಬೆಂಕಿ ಹಿಡಿಯುವ ಸಲಾಕಿ.

Lint (ಲಿಂಟ್) n. soft lint for dress-

ing wounds. ಗಾಯಕ್ಕೆ ಇಡುವ ಮೆದು ಬಟ್ಟೆ, ಗಾಯದ ಮೆತುಬಟ್ಟೆ.

Lin'tel (ಲಿಂಟೆಲ್) n. the piece of timber or stone over doorway. ದಾರವಂದದ ಪಟ್ಟಿ, ಬಾಗಿಲ ಮೇಲಿನ ಚೌಕಟ್ಟು.

Li'on (ಲೈನ್) n. a fierce quadruped of immense strength, a man of unusual courage, sign of zodiac. ಸಿಂಹ. ಮೃಗೇಂದ್ರ, ಸಿಂಹರಾಶಿ, ಧೈರ್ಯಶಾಲಿ. the l's. share, disproportionately large share. ನ್ಯಾಯವಾದುದಕ್ಕಿಂತ ಅಧಿಕಭಾಗ.


Lion

Lionet (ಲೈಒನೆಟ್) n. a small lion, ಮರಿಸಿಂಹ.

Lionize (ಲೈಯೊನೈಜ್) vt. treat as an object of curiosity. ವಿಚಿತ್ರ ವಸ್ತುವಾಗಿ ಪರಿಗಣಿಸು.

Lip (ಲಿಪ್) n either edge of the mouth; brim of vessel. ತುಟಿ, ಅರುಗು, ಅವುಡು, ಅಂಚು.

Lipper (ಲಿಪರ್) n. a ripple. ಸಮುದ್ರದಲ್ಲಿ ಏಳುವ ಲಘುತರಂಗ, ಸಣ್ಣ ಅಲೆ.

Liquate (ಲಿಕ್ವೇಟ್) vt. purify by melting. ಶಾಖದಿಂದ ಕರಗಿಸಿ ಶುದ್ಧ ಮಾಡು.

Liquefaction (ಲಿಕ್ವಿಫ್ಯಾಕ್ಷನ್) n. act of melting. ಕರಗುವಿಕೆ, ವಿಲೀನೀಕರಣ.

Liq'uefy (ಲಿಕ್ವಿಫೈಯರ್) vt. & i. make or become liquid ಕರಗು, ದ್ರವೀಕರಿಸು, ದ್ರವವಾಗು, ಕರಗಿಸು.

Liquescent (ಲಿಕ್ವೆಸೆಂಟ್) adj. apt to become liquid. ದ್ರವವಾಗುವ, ಕರಗುತ್ತಿರುವ.

Liqueur (ಲಿಕ್ಯೂಯರ್) n. sweetened and flavoured alcoholic liquor. ಸಿಹಿಯಾದ, ಸುಗಂಧಿತವಾದ ಮದ್ಯ.

Liq''uid (ಲಿಕ್ವಿಡ್) a fluid, soft, smooth. ದ್ರವ್ಯ, ದ್ರವ (ವಸ್ತು), ದ್ರವ ರೂಪದ, ತಿಳಿ, ನುಣುಪಾದ, ಹರಿಯುವ, ನೀರಾದ.

Liq'uidate (ಲಿಕ್ವಿಡೇಟ್) vt. & i. clear or settle account, wind up the affairs of (a company. &c.) ಸಾಲ ತೀರಿಸು, ಋಣ ಸಂದಾಯುಮಾಡು, ಸಾಲ ತೀರಿಸಿಬಿಡು.

Liquida'tion (ಲಿಕ್ವಿಡೇಶನ್) n. settling and adjusting debts. ಋಣ ಸಂದಾಯ, ಸಾಲ ಸಲ್ಲೀಣ.

Liq'uor (ಲಿಕರ್) n. strong drink, anything liquid. ಮದ್ಯ, ಪಾನ, ಸುರೆ, ದ್ರವಾಂಶ, ರಸ.

Liquorice (ಲಿಕ್ವರಿಸ್) n. kind of perennial plant. ಒಂದು ಔಷಧಿಯ ಮೂಲಿಕೆ.

Liquorish (ಲಿಕ್ವರಿಶ್) a. fond of drink. ಮದಿರಾಪ್ರಿಯ.

Lisp (ಲಿಸ್ಪ್) v. i. & t. speak with the tongue imperfectly. ಎಬಡಿಸು, ತೊದಲು, ತೊದಲು ಮಾತಾಡು, ತೊದಲುತ್ತ ಹೇಳು.

Liss'om (ಲಿಸ್ಸಮ್) a. lithe, agile. ಚಪಲದ, ಚಟುವಟಿಕೆಯ, ಬಳುಕುವ.

List (ಲಿಸ್ಟ್) n. tilting ground, roll or catalogue or inventory. ಅಖಾಡ. ಮಲ್ಲರಂಗ, ರಂಗಸ್ಥಳ, ಹೆಸರುಗಳ ಪಟ್ಟಿ. v. t and i. place in catalogue; be pleasing to, be inclined to do, lean over to one side. ಪಟ್ಟಿ ಮಾಡು, ಪಟ್ಟಿಗೆ ಸೇರಿಸು, ಅಪೇಕ್ಷಿಸು, ಮನಸ್ಸಿನಲ್ಲಿಡು. ಇಚ್ಛೆಪಡು, ಮನಸ್ಸಿಗೆ ತೋರು, ಒಂದು ಪಕ್ಕಕ್ಕೆ ವಾಲು, ಹೊರಳು.

Li'sten (ಲಿಸ್ಸನ್) v. i. give ear to, follow advice ಲಾಲಿಸು, ಕಿವಿಗೊಟ್ಟು ಕೇಳು, ಆಲಿಸು, ಕಿವಿಗೊಡು. ಆಲೈಸು.

Listerine (ಲಿಸ್ಟರೀನ್) n. kind of antiseptic solution. ಪೂತಿನಾಶಕ, ದ್ರಾವಣದ ಒಂದು ಬಗೆ.

List'less (ಲಿಸ್ಟ್‌ಲೆಸ್) a uninterested, languid. ಉತ್ಸಾಹಶೂನ್ಯ, ಉದಾಸೀನಭಾವದ, ನಿರಾಸಕ್ತಿಯ, ಅಸಕ್ತಿಯ, ಹುರುಪಿಲ್ಲದ.

Lit'any (ಲಿಟನಿ) n. form of prayer ಶಾಂತಿ, ಪ್ರಾರ್ಥನೆ; ಜಪಾದಿಗಳು.

Lit'eracy (ಲಿಟರಸಿ) n. ability to read and write. ಓದುಬರಹ ಅರಿತಿರುವುದು, ಸಾಕ್ಷರತೆ, ಅಕ್ಷರಜ್ಞಾನ.

Lit'eral (ಲಿಟರಲ್) n. closely following exact words. ಅಕ್ಷರಾರ್ಥ; ಅಕ್ಷರಶಃ; ವಾಚ್ಯಾರ್ಥ, ಮೂಲಪಾಠಾನುಸಾರವಾದ.

Literally (ಲಿಟರಲಿ) adv. in a literal manner. ಅಕ್ಷರಶಃ, ವಾಸ್ತವವಾಗಿ.

Lit'erary (ಲಿಟರರಿ) a. skilled in learning. ವಿದ್ಯಾತತ್ಪರ, ವಿದ್ಯಾವಿಷಯಕ, ಸಾಹಿತ್ಯದ.

Lit'erate (ಲಿಟರೇಟ್) a. able to read and write. ಓದಿ ಬರೆಯಲಿಕ್ಕೆ ಬರುವ; ಓದುಬರಹದ; ಅಕ್ಷರಸ್ಥ.

Lit'erature (ಲಿಟರೇಚರ್) n books and written composition valued for form and style, the realm of letters. ಉತ್ತಮ ಲೇಖನಗಳು, ಗ್ರಂಥಗಳು, ಸಾಹಿತ್ಯ, ಸಾಹಿತ್ಯ ಸಂಪತ್ತು.

Litharge (ಲಿಥಾರ್ಜ್) n. peroxide of lead. ಮುರದಾರಸಿಂಗಿ.

Lithe (ಲಾಯಿದ್) a. easily bent, supple, pliant. ಬಾಗುವ, ಬಳುಕುವ, ಮೃದು, ನಮ್ರ.

Lithic (ಲಿಥಿಕ್) adj. pertaining to stone. ಕಲ್ಲಿನ.

Lithium (ಲಿಥಿಯಮ್) n. a metallic element. ಒಂದು ಲೋಹಧಾತು.

Lithog'raphy (ಲಿಥಾಗ್ರಫಿ) n. art of writing or engraving on stone and printing therefrom. ಕಲ್ಲು ಛಾಪೆಯ ವಿದ್ಯೆ, ಶಿಲಾಮುದ್ರಣ, ಕಲ್ಲಚ್ಚು.

Lithotomy (ಲಿಥಾಟಮಿ) n. operation for removing stone from bladder. ಮೂತ್ರಾಶಯದಿಂದ ಸಣ್ಣ ಕಲ್ಲನ್ನು ತೆಗೆಯುವುದಕ್ಕೆ ಮಾಡಿದ ಶಸ್ತ್ರಚಿಕಿತ್ಸೆ.

Lit'igant (ಲಿಟಿಗಂಟ್) a. engaged in law suit. ವಾದಿಸುವ, ವ್ಯಾಜ್ಯಮಾಡುವ, ಕಕ್ಷಿಗಾರ.

Lit'igate (ಲಿಟಿಗೇಟ್) v. t. & i. go to law, contest law. ವ್ಯಾಜ್ಯಮಾಡು, ವಿವಾದಮಾಡು, ವ್ಯವಹಾರ ಹೂಡು, ದಾವಾ ಹಾಕು.

Litigation (ಲಿಟಿಗೇಷನ್) n. a judicial contest ಮೊಕದ್ದಮೆಹೂಡುವುದು, ವ್ಯವಹಾರ ಮಾಡುವುದು.

Litmus (ಲಿಟ್‌ಮಸ್) n. a colouring matter used as a chemical test. ರಾಸಾಯನಿಕ ಪರೀಕ್ಷೆಗೆ ಉಪಯೋಗಿಸುವ ಪದಾರ್ಥ.

Litre (ಲೀಟರ್) n. a measure of capacity. ಘನಅಳತೆಯ ಮಾನ.

Litter (ಲಿಟರ್) n. carrying couch used as carriage, the young brought forth at birth. ಡೋಲಿ, ಅಂದಳ, ಮೇನ, ಶಿಬಿಕೆ, ಮರಿಗಳು.

Lit'tle (ಲಿಟ್‌ಲ್) a. not great or big; small in quantity, short in stature or distance or time, unimportant ಚಿಕ್ಕ, ತುಸು, ಸಣ್ಣ, ಕೊಂಚ, ದೊಡ್ಡದಲ್ಲದ, ಕಿರಿಯ, ಸ್ವಲ್ಪ, ಮಹತ್ತಲ್ಲದ, ಅತ್ಯಲ್ಪ. n. or pro. only small amount. ಅಲ್ಪಾಂಶ. adv. to a small extent only, not at all. ಅಲ್ಪವಾಗಿ, ಏನೂ ಇಲ್ಲದ.

Liturgical (ಲಿಟರ್ಜಿಕಲ್) a. pertaining to liturgy, connected with ritual. ಕರ್ಮಕಾಂಡಕ್ಕೆ ಸಂಬಂಧಿಸಿದ.

Lit'urgy (ಲಿಟರ್ಜಿ) n. regular ritual of church ಕ್ರೈಸ್ತ ಪೂಜಾಪದ್ಧತಿ, ಪ್ರಾರ್ಥನಾವಿಧಿ, ಸಾರ್ವಜನಿಕ ಪೂಜಾವಿಧಾನ.

Live (ಲಿವ್) v. i. & t. have life, be or continue alive, pass or spend; dwell. ಬದುಕಿರು, ಬಾಳು, ಜೀವದಿಂದ

ವಾಸಮಾಡು, ಜೀವಿಸು, ಜೀವನಮಾಡು, ಆಯುಷ್ಯಕಳೆ. a. (ಲೈವ್) alive, active, ಜೀವಂತ, ಶಕ್ತಿಯುಳ್ಳ, ಶಕ್ತಿಪೂರ್ಣ. l. by one's wits, eke out one's living by fraud or trickery, have no settled means of livelihood. ಗೊತ್ತಾದ ಆದಾಯವಿಲ್ಲದೆ ಮೋಸದಿಂದ ಜೀವನ ನಡೆಸು, ಬುದ್ಧಿಕೌಶಲ್ಯದಿಂದ ಜೀವಿಸು. l. from hand to mouth, live in an improvident condition. ದರಿದ್ರರೀತಿಯಲ್ಲಿ ಜೀವಿಸು, ಅಲ್ಲಿ ತಂದು ಆಗ ಉಣ್ಣು.

Liv'elihood (ಲೈವ್‌ಲಿಹುಡ್) n means of living, support ಹೊಟ್ಟೆಪಾಡು, ಜೀವನೋಪಾಯ, ಜೀವನಾಧಾರ.

Liveliness (ಲೈವ್ಲಿನೆಸ್) n. quality of being lively, cheerfulness. ಉತ್ಸಾಹ, ಆನಂದ.

Live'long (ಲೈವ್‌ಲಾಂಗ್) a. brisk, active, gay. ಜೀವಂತ, ಚಟುವಟಿಕೆಯುಳ್ಳ, ಉತ್ಸಾಹವುಳ್ಳ.

Liven (ಲೈವನ್) vt. brighten, cheer up. ಪ್ರಸನ್ನಗೊಳಿಸು, ಉತ್ಸಾಹ ತುಂಬು.

Liv'er (ಲಿವರ್) n. largest gland in the body which secretes bile. ಕಾಲಿಕ, ಪಿತ್ತಜನಕಾಂಗ, ಪಿತ್ತಾಶಯ, ಯಕೃತ್ತು.

Liv'ery(ಲಿವರಿ)n. the dress or uniform worn by servants ಚಾಕರಿಯವರ ಪೋಷಾಕು, ಬಟ್ಟೆ, ಉಡುಪು.

Li'vid (ಲಿವಿಡ್) a. of bluish leaden colour ಸೀಸದ ಬಣ್ಣದ, ಕಂದಾದ, ನೀಲಿಗಟ್ಟಿದ.

Liv'ing (ಲಿವಿಂಗ್) n. livelihood; a benefice. ಹೊಟ್ಟೆಪಾಡು, ಜೀವನೋಪಾಯ, ಬದುಕು. a now alive, life like, exact ಸಮಕಾಲಿಕ. ಜೀವಂತ. ಜೀವಿಸಿರುವ, ಜೀವಕಳೆಯುಳ್ಳ, ತದ್ರೂಪವಾದ.

Lo (ಲೊ) int. look! behold! ಅಗೋ! ನೋಡು ! ಅದೋ ! ಗಮನಿಸು.

Liz'ard (ಲಿಝರ್ಡ್) n. four-legged reptile. ಹಲ್ಲಿ, ಗವುಳಿಜಾತಿ.



Lizard

Llama (ಲಾಮ) n. a South American an [illegible] ಣ ಅಮೆರಿಕದಲ್ಲಿರುವ ಒಂದು ಪ್ರಾಣಿ.



Llama

Loach (ಲೋಚ್) n. small edible fish. ಒಂದು ಜಾತಿಯ(ಆಹಾರವಾಗಿ ಉಪಯೋಗಿಸುವ) ಮೀನು.

Load (ಲೋಡ್) n. what is carried, burden ; weight ಹೊರೆ, ಹೇರು, ಹೆಸರಿನಮೊತ್ತ, ಭಾರ, ವಜೆ, ಭಾರವಾದ ವಸ್ತು v. t. lade or burden heap on, charge(gun, &c.) ಹೇರು, ಭಾರಹಾಕು, ತುಂಬು, ಮದ್ದುಗುಂಡುತುಂಬು, ಬಂದೂಕು ಚಾರುಮಾಡು.

Loading (ಲೋಡಿಂಗ್) n. cargo, burden. ಭಾರ, ಹೊರೆ.

Loadstar (ಲೋಡ್‌ಸ್ಟಾರ್) n. the pole star ಧ್ರುವ ನಕ್ಷತ್ರ.

Load'stone (ಲೋಡ್‌ಸ್ಟೋನ್)n. magnet. ಲೋಹಕಾಂತ, ಸೂಜಿಗಲ್ಲು, ಲೋಹ ಚುಂಬಕ.

Loaf (ಲೋಫ್) n. piece of bread. ರೊಟ್ಟಿ. v. i. pass time idly. ವ್ಯರ್ಥ ವೇಳೆಕಳೆ, ಹೊತ್ತುಗಳೆ, ವ್ಯರ್ಥಕಾಲಹರಣ ಮಾಡು, ಸೋಮಾರಿಯಾಗಿ ಕಾಲಕಳೆ, ಅಲೆದಾಡು.

Loaf'er (ಲೋಫರ್) n. low idler. ತಿರುಕ, ವ್ಯಗಳ, ಸೋಮಾರಿ, ಪೋಲಿ, ಅಲೆಮಾರಿ.

Loam(ಲೋಮ್)n.rich soil of clay sand and decayed vegetable matter. ಜಿಗುಟುಮಣ್ಣು, ಕೆಸರುಮಣ್ಣು, ಜೇಡಿಮಣ್ಣು.

Loan (ಲೋನ್) n. thing lent, sum lent for interest. ಕೈಗಡ, ಕಡ, ಸಾಲ, ಎರವಲು, ಸಾಲಕೊಟ್ಟದ್ದು.

Loath', loth (ಲೋಥ್) a. unwilling, disliking. ಮನಸ್ಸಿಲ್ಲದ, ಖುಷಿಯಿಲ್ಲದ, ಇಷ್ಟವಿಲ್ಲದ.

Loathe (ಲೋತ್) vt. regard with disgust. ಹೇಸು, ರೋಸು, ಅಸಹ್ಯಪಡು, ಜುಗುಪ್ಸೆಪಡು.

Loathing (ಲೋಥಿಂಗ್) n extreme disgust. ಅತೀವ ಅಸಹ್ಯಕರವಾದ ಭಾವನೆ, ರೋಸಿಗೆ.

Loath'some (ಲೋಥ್‌ಸಂ) a. detestable, disgusting. ಅಸಹ್ಯ, ಹೇಸಿಕೆಯ, ಅಸಹ್ಯ ಹುಟ್ಟುವ.

Lob (ಲಾಬ್) vi. & t. to move clumsily, to bowl; underhand. ಒಡ್ಡೊಡ್ಡಾಗಿ ನಡೆ, ಕೆಳಗೈನಿಂದ ಕ್ರಿಕೆಟ್ ಆಟದಲ್ಲಿ ಚೆಂಡು ಎಸೆ.

Lobate (ಲೊಬೇಟ್) a. pertaining to a lobe ಪಟಲಕ್ಕೆ ಸಂಬಂಧಿಸಿದ.

Lobb'y (ಲಾಬಿ) n porch, entrance hall; anti room or corridor. ಸಭಾಮಂಟಪದ ದ್ವಾರಭಾಗ, ಮುಖಮಂಟಪ, ಪಡಸಾಲೆ, ವಂಕ, ಮೊಗಸಾಲೆ, ನಡುವೆ.

Lobbyist (ಲಾಬಿಯಿಸ್ಟ್) n. member of a lobby "ಲಾಬಿ" ಯ ಸಭಾಸದ.

Lobe (ಲೋಬ್) n. lower pendulous part of outer ear. ಕಿವಿಯ ಹಾಲೆ, ಪಾಲಿ, ಪಟಲ.

Lobelia (ಲೋಬೀಲಿಯ) n. kind of flower plant. ಹೂಬಿಡುವ ಒಂದು ಸಸ್ಯ ಜಾತಿ.

Lob'ster (ಲಾಬ್‌ಸ್ಟರ್) n. a shell fish. ಒಂದು ತರದ ಉದ್ದ ಬಾಲವುಳ್ಳ ಮೀನು, ಸಮುದ್ರನಳ್ಳಿ.



Lobster

Loc'al (ಲೋಕಲ್) n. peculiar to some place. ಸ್ಥಳೀಕ, ಸ್ಥಳದ, ಸ್ಥಳೀಯ, ಸ್ಥಾನಿಕ.

Local'ity (ಲೊಕಾಲಿಟಿ) n. thing's position, site on scene of something ಜಾಗ, ಇರುವ ಸ್ಥಳ, ನೆಲೆ, ಸ್ಥಾನ.

Locate' (ಲೊಕೇಟ್) vt. &i. state locality of, discover exact place of establish in a place. ಸ್ಥಳ ನೇಮಿಸು : ಸರಿಯಾದ ಸ್ಥಾನ ಕಂಡುಹಿಡಿ, ಒಂದು ಸ್ಥಳದಲ್ಲಿ ಸ್ಥಾಪಿಸು, ಸ್ಥಳವನ್ನು ಹೇಳು, ನೆಲೆಗೊತ್ತುಮಾಡು.

Loc'ative (ಲೊಕೇಟಿವ್) a. (gram) denoting place where. ಸ್ಥಳದರ್ಶಕ ಸ್ಥಳನಿರ್ದೇಶಕ n. locative. ಸಪ್ತಮೀ ವಿಭಕ್ತಿ, ಅಧಿಕರಣ.

Loch (ಲಾಕ್) n. Scotch lake or arm of the sea. ಸರೋವರ, ಸಮುದ್ರಶಾಖೆ, ಖಾರಿ.

Lock (ಲಾಕ್) n. a tuft of hair or wool, (plu) the hair; fastening for a door, &c. mechanism by which gun is fired. ಜುಟ್ಟು, ಕೇಶಗುಚ್ಛ, ಕುರುಳು, ಬೀಗ, ಕೀಲಿ, ಬಂದೂಕಿನ ಕುದುರೆ, ಚಾಪು. vt. & i. fasten with a lock. ಬೀಗ ಹಾಕು, ಬಿಗಿ.

Lockage (ಲಾಕೆಜ್) n. the system of locks used for locking a canal. ಕಾಲುವೆಯನ್ನು ಮುಚ್ಚುವುದಕ್ಕೆ ಉಪಯೋಗಿಸುವ ಬೀಗಗಳು.

Locker (ಲಾಕರ್) n. a drawer. ಪೆಟಾರಿ, ಭದ್ರಕಪಾಟ.

Lock-out (ಲಾಕ್ ಔಟ್) n. exclusion of workmen by an employer in a dispute as to wages, &c. ಸಂಬಳದ ಜಗಳಕ್ಕಾಗಿ ಕೆಲಸಗಾರರನ್ನು ಕೆಲಸದಿಂದ ತೆಗೆಯೋಣ, ಕೂಲಿಗಾರರಿಗೆ ಬಹಿಷ್ಕಾರ.

Locksmith (ಲಾಕ್-ಸ್ಮಿತ್) n. a blacksmith who manufactures locks. ಬೀಗಗಳನ್ನು ತಯಾರಿಸುವ ಕಮ್ಮಾರ.

Lock-up (ಲಾಕ್-ಅಪ್) n. room, &c

for detention of prisoners. ಕೈದಿ ಕೋಣೆ, ಬಂಧನ ಗೃಹ.

Lock'et (ಲಾಕೆಟ್) a. small gold or silver case for portrait, &c. ಕರಡಿಗೆ, ತಾಯಿತ; ಪದಕ, ಕುಡುಪ.

Locomotion (ಲೋಕೊಮೋಷನ್) n. power for motion from place to place. ಸ್ಥಾನಾಂತರ ಚಲಿಸುವುದು, ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವಿಕೆ.

Loc'omotive (ಲೋಕೊಮೋಟಿವ್) a. moving from place to place. ಸಂಚಾರದ, ಚಲನವುಳ್ಳ, ಗತಿಯುಳ್ಳ. n. a railway engine. ರೈಲು ಇಂಜಿನ್ನು, ಹೊಗೆಬಂಡಿ.

Loculus (ಲಾಕ್ಯುಲಸ್) n. a small separate capacity. ಪ್ರತ್ಯೇಕವಾದ ಒಂದು ಕೋಷ್ಠಕ.

Locus(ಲೋಕಸ್) n. a line or curve formed by points satisfying certain conditions. ಬಿಂದುಪಥ.

Loc'ust(ಲೋಕಸ್ಟ್)n. insect highly destructive to vegetation. ಮಿಡತೆ, ಶಲಭ, ಪತಂಗ.

Loc'ution (ಲೊಕ್ಯೂಷನ್) n. form of speaking, phrase, idiom. ನುಡಿ, ವಚನ, ಮಾತಿನ ರೀತಿ, ಭಾಷಣ ಶೈಲಿ, ವಾಕ್ಸಂಪ್ರದಾಯ.

Locutory (ಲೊಕ್ಯುಟರಿ) n. place of conversation. ವಾರ್ತಾಲಾಪಸ್ಥಾನ.

Lode (ಲೋಡ್) n. watercourse. ಜಲಮಾರ್ಗ.

Lodestar (ಲೋಡ್ ಸ್ಟಾರ್) n. the polestar, guiding principle or object ಧ್ರುವನಕ್ಷತ್ರ, ಮಾರ್ಗದರ್ಶಕ ವಸ್ತು, ಧ್ಯೇಯ, ಗುರಿ ಅಥವಾ ತತ್ವ.

Lodge (ಲಾಡ್ಜ್)v.t. & i. to harbour, to provide with habitation. ಇರಲು ಸ್ಥಳಕೊಡು.

Lodger' (ಲಾಡ್ಜರ್)n. place where members of a society, &c., meet, small house,hut, a retreat ಸಭಾಸದರು ಸೇರುವ ಸ್ಥಳ, ಸಣ್ಣ ಮನೆ, ಕುಟೀರ, ಗುಡಿಸಲು, ಆಶ್ರಯ. v.t. & i. fix in; settle, place. ಬಿಡಾರ ಇಳಿಸು, ಇಳಕೊಳ್ಳು, ತಂಗು, ವಾಸವಾಗಿರು.

Lodging (ಲಾಜಿಂಗ್) n. temporary habitation. ಬಿಡಾರ, ವಾಸಸ್ಥಳ, ನಿವಾಸ ವಸತಿಗೃಹ.

Loft(ಲಾಫ್ಟ್) n. upper room directly covered by a roof. ಉಪ್ಪರಿಗೆ, ಅಟ್ಟ ಮಹಡಿ, ಮೇಲಂತಸ್ತು.

Loft'ly (ಲಾಫ್ಟಿಲಿ)adv. in an exalted way. ಆಡಂಬರದಿಂದ, ಗರ್ವದೊಡನೆ

Loftiness (ಲಾಫ್ಟಿನೆಸ್) n. state o being lofty. ಗರ್ವ, ಆಡಂಬರ.

Lof ty (ಲಾಫ್ಟಿ) a. high in position haughty, high flown. ಎತ್ತರ ಉಚ್ಚ, ದುರಹಂಕಾರದ, ಪ್ರತಿಷ್ಠೆಯ ಅಹಂಭಾವದ, ಆಡಂಬರದ.

Log (ಲಾಗ್) n. unhewn piece c felled tree; apparatus for gauging ship's speed. ಮರದ ಕೊರಡು, ಕೆತ್ತಿ ಸಮಮಾಡದೆ ಬಿದ್ದಿರುವ ಮರ. ದಿಮ್ಮಿ, ತೊಲೆ, ಹಡಗಿನ ವೇಗಮಾಪಕ.



Logs

Logarithm (ಲಾಗರಿಥಮ್) simpl fied way of arithmetical calcu lation. ಘಾತಪ್ರಮಾಪಕ, ಲಘುಗಣ

Log'book (ಲಾಗ್‌ಬುಕ್) n. the of cial record of a ship's wa ಹಡಗಿನ ದಿನಚರಿ (ವರದಿ) ಪುಸ್ತಕ.

Logg'erhead (ಲಾಗರ್ ಹೆಡ್) blockhead, a dunce. ಶತಮೂರ್ಖ ದಡ್ಡ, ಹೆಡ್ಡ. be at loggerheads, engaged in a dispute. ಕಕ್ಷಿಯಲ್ಲಿ ಹೊಡೆದಾಡು, ಜಗಳವಾಡು.

Lo'gic (ಲಾಜಿಕ್) n. science of re soning, power of convincin ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ವಾದಸರಣಿ, ವಾ ಸಾಮರ್ಥ್ಯ, ಯುಕ್ತಿವಾದ.

gi'cian (ಲಾಜಿಶನ್) n one skilled n logic. ತರ್ಕಶಾಸ್ತ್ರಿ, ನೈಯಾಯಿಕ, ತಾರ್ಕಿಕ.

gistics (ಲಾಜಿಸ್ಟಿಕ್ಸ್) n. act of stationing or moving troops. ಸೇನಾ ಸಂಚಾಲನ ಶಾಸ್ತ್ರ.

gom'achy (ಲಗಾಮಕಿ) n. dispute about words. ವಾಗ್ಯುದ್ಧ, ವಾಕ್ಕಲಹ, ಬರಿಯುಪದಗಳ ವಿಷಯವಾದ ಜಗಳ.

gwood (ಲಾಗ್‌ವುಡ್) n. kind of wood ಮರದಕೊರಡು.

gistic (ಲೊಜಿಸ್ಟಿಕ್) n. art of movement and stationing of armies ಸೇನೆಯನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಕಲೆ.

gomachy (ಲಾಗೊಮೆಕಿ) n. controversy about words. ವಾಗ್ವಾದ, ಶಬ್ದ ಸಂಬಂಧವಾದ ವಿವಾದ.

gomania (ಲಾಗೋಮೇನಿಯ) n. impaired faculty of speech. ವಾಕ್‌ಶಕ್ತಿಯು ಕೆಡುವಿಕೆ.

in (ಲಾಇನ್) n. plu. the back part between the hip bone and the ribs. ಸೊಂಟ, ಟೊಂಕ, ನಡುಕಟ್ಟಿನ ಪ್ರದೇಶ.

it'er (ಲಾಯಿಟರ್) v. i. linger on the way. wander about, be dilatory. ಅಡ್ಡಾಡು. ಅಲೆದಾಡು, ಅಲ್ಲಲ್ಲೇ ಸುತ್ತುತ್ತಿರು, ಅಲೆದಾಟದಲ್ಲಿ ಕಾಲಕಳೆ, ವಿಳಂಬಿಸು.

itering (ಲಾಯಿಟರಿಂಗ್) a. idling, laughing. ಆಲಸ್ಯದಿಂದ ಇಲ್ಲಿ ಅಲ್ಲಿ ತಿರುಗುವಿಕೆ, ವಿಳಂಬ.

ll (ಲಾಲ್) v. i. & t. lie lazily about; thrust out (the tongue.) ಆಲಸ್ಯದಿಂದ ಒರಗಿಕೊಂಡಿರುವ, ನಾಲಿಗೆಯನ್ನು ಜೋಲುಬಿಡು.

llingly (ಲಾಲಿಂಗ್‌ಲೀ) a. in a restful and lazy mood ವಿಶ್ರಮಿಸಿಕೊಳ್ಳುವ, ಸೋಮಾರಿತನದ ರೀತಿಯಲ್ಲಿ.

llop (ಲಾಲಪ್) vi. stir in a lounging way. ತೂಗಾಡುತ್ತ ನಡೆ.

Lone, lone'ly (ಲೋನ್, ಲೋನ್‌ಲಿ) a. alone; solitary, retired. ಒಂಟಿಗ, ಏಕಾಂಗಿಯಾದ, ಒಬ್ಬೊಂಟಿಗನಾದ, ಏಕಾಂತ, ವಿಶ್ರಾಂತ, ನಿರ್ಜನ.

Loneliness (ಲೋನ್ಲಿನೆಸ್) n. state of being lonely or isolated. ನಿರ್ಜನತೆ, ಏಕಾಂತತೆ.

Long (ಲಾಂಗ್) a. extended. not short, tedious, far reaching. ಉದ್ದವಾದ, ನಿಡಿದಾದ, ದೀರ್ಘವಾದ v. i. desire earnestly. ಬಯಸು, ಆತುರಪಡು, ಹಂಬಲಿಸು, ಹಾರೈಸು. go to one's l. home, die. ಸಾಯು. in the l. run; eventually. before all is over. ಕೊನೆಗೆ. ಎಲ್ಲಾ ಮುಗಿಯುವದಕ್ಕೆ ಮುಂಚೆ, ಕಾಲ ಕಳೆಯುದಂತೆ. the l. & the short of it. the total upshot. ಮುಖ್ಯಸಾರಾಂಶ. draw or pull the l. bow; exaggerate ಅತಿಶಯೋಕ್ತಿ ಮಾಡು, ಅತಿಯಾಗಿ ವರ್ಣಿಸು.

Longeval (ಲಾಂಜೀವಲ್) a. long-lived. ದೀರ್ಘಕಾಲ ಬದುಕುವ.

Longev'ity (ಲಾಂಜೆವಿಟಿ) n. long life. ದೀರ್ಘಾಯುಷ್ಯ.

Longevous (ಲಾಂಗಿವಸ್) a. living long. ಚಿರಜೀವಿ, ಅಧಿಕಕಾಲದವರೆಗೆ ಜೀವಿಸುವ.

Long'ing (ಲಾಂಗಿಂಗ್) n. vehement desire. ಅತ್ಯಾಸೆ, ಹಂಬಲ, ಬಯಕೆ, ಹೆಬ್ಬಯಕೆ.

Longish (ಲಾಂಗಿಷ್) a. somewhat long. ದೀರ್ಘವಾದ.

Lon'gitude (ಲಾಂಜಿಟ್ಯೂಡ್) n. angular distance East or West from the meridian. ರೇಖಾಂಶ, ಉದ್ದ.



Longitude

Loo (ಲೂ) n. kind of card game. ಒಂದು ತೆರದ ಇಸ್ಪೀಟಾಟ.

Loob'y (ಲೂಬಿ) n silly fellow. ಹೆಡ್ಡ, ಮುಟ್ಠಾಳ, ಸೋಮಾರಿ.

Month (ಮಂತ್) n. one of the 12 divisions of a year. ತಿಂಗಳು, ಮಾಸ.

Monticule (ಮಾಂಟಿಕ್ಯೂಲ್) n. billock ಚಿಕ್ಕ ಗುಡ್ಡ.

Mon'ument (ಮಾನ್ಯುಮೆಂಟ್) n. memorial. ಕೀರ್ತಿಸ್ತಂಭ, ಸ್ಮಾರಕ ಚಿಹ್ನೆ.

Monumen'tal (ಮಾನ್ಯುಮೆಂಟಲ್) a. memorial; vast, stupendous. ಸ್ಮಾರಕದ; ಭವ್ಯ, ದೊಡ್ಡ, ಅದ್ಭುತವಾದ

Moo (ಮೂ) vt. to make cry like a cow or ox. ಹಸು ಅಥವಾ ಎತ್ತಿನಂತೆ 'ಮೂ' ಅನ್ನು.

Mood (ಮೂಡ್) n. dispositon, inflection of verb. ಮನಸ್ಸಿನ ಸ್ಥಿತಿ, ಮನೋಭಾವ ಗುಣ, (ವ್ಯಾಕರಣ) ಕ್ರಿಯಾರೂಪ, ಧಾತುರೂಪ.

Moody (ಮೂಡಿ) a gloomy, sullen. ಮಂಕುಕವಿದ, ಚಿಂತಾಕುಲ.

Moon (ಮೂನ್) n. satellite revolving round earth in a lunar month. ಚಂದ್ರ. m. light, m. shine ಬೆಳದಿಂಗಳು, ಚಂದ್ರಪ್ರಕಾಶ.

Moonling (ಮೂನ್‌ಲಿಂಗ್) n. simpleton, fool. ದಡ್ಡ.

Moon'stone (ಮೂನ್‌ಸ್ಟೋನ್) n. pearly feldspar. ಚಂದ್ರಕಾಂತಮಣಿ.

Moonstruck (ಮೂನ್‌ಸ್ಟ್ರಕ್) n. lunatic ಭ್ರಮಿಷ್ಟ. ಬುದ್ಧಿವಿಕಲ್ಪವಾದ, ಹುಚ್ಚುಹಿಡಿದ, ಭ್ರಾಂತ, ವಿಕ್ಷಿಪ್ತಬುದ್ಧಿ.

Moor (ಮೂರ್) n. waste land, heath. ಗೋಮಾಳ, ಬಂಜರು ಭೂಮಿ; ಕುರುಚಲು ಬೆಳೆದಿರುವ ಬಯಲು. v. t. fasten a ship by cable and anchor. ಲಂಗರಹಾಕು, ದೋಣಿ ಕಟ್ಟಿಹಾಕು.

Moor'ing (ಮೂರಿಂಗ್) n. usu. plu. anchored chains, &c. to which boat, &c., is moored. ಲಂಗರು ಕಲ್ಲು

Moose (ಮೂಸ್) n. American elk. ಅಮೆರಿಕದ ಕಡವೆ.



Moose

Moot (ಮೂಟ್) n. meeting esp. of legislative or judicial kind. ನ್ಯಾಯವಿಧಾಯಕಸಭೆ, ಲೋಕಸಭೆ. v. t. raise (a question) for discussion. ಚರ್ಚೆಗೆ ತರು, ತರ್ಕಿಸು, ವಿಚಾರಿಸು. m. point, point which is still open for discussion. ಇತ್ಯರ್ಥವಾಗದ ವಿಷಯ.

Moot'case, -point (ಮೂಟ್‌ಕೇಸ್, -ಪಾಇಂಟ್) n. matter on which opinions differ. ವಾದಗ್ರಸ್ತ ವಿಷಯ, ಚರ್ಚಾತ್ಮಕ ವಿಷಯ.

Mop (ಮಾಪ್) n. a bunch of rags, &c., fixed to stick for use in cleaning. ಕಸಬರಿಗೆ, ಪೊರಕೆ, ಧೂಳು ತೊಡೆಪ, ಬರ್ಲು.



Mop

Mope (ಮೋಪ್) vt. be dull or stupid. ಬೇಸರಗೊಳ್ಳು, ಮಂಕು ಹಿಡಿದಿರು, ಜುಗುಪ್ಸೆಯಿಂದ ಕೂಡಿರು.

Moraine' (ಮೊರೇನ್) n. rocks & debris brought down by glacier. ಬರ್ಫದ ನದಿಯಲ್ಲಿ ಬರುವ ಕಸ, ಕೊಳೆ, ಮುರುಕಲು ಗುಪ್ಪೆ.

Mo'ral (ಮಾರಲ್) n. concerned with right & wrong conduct,

practising virtue. ನೈತಿಕ ನಡತೆಯು, ನೀತಿತತ್ತ್ವದ, ನೀತಿವಂತನಾದ, ನೀತಿಯು.

Morale' (ಮೊರೇಲ್)n mental stamina. ಮನಃಸ್ಥಿತಿ, ನೀತಿಸಾರ, ನೈತಿಕ ಸ್ಥಿತಿ.

Moralist(ಮಾರಲಿಸ್ಟ್) n. one versed in ethics. ನೀತಿಜ್ಞ, ನೀತಿಬೋಧಕ.

Moral'ity (ಮೊರಾಲಿಟಿ) n. ethics, moral virtue. ನೀತಿಶಾಸ್ತ್ರ, ಧರ್ಮಶಾಸ್ತ್ರ, ನೀತಿ ಪದ್ಧತಿ, ನೀತಿನಿಯಮಗಳು, ಸದಾಚಾರ, ನೀತಿಧರ್ಮ

Moralize(ಮಾರಲೈಸ್)vt.to explain moral duties. ನೀತಿವಿಚಾರಮಾಡು, ನೀತಿಯನ್ನುಪದೇಶಿಸು.

Morass'(ಮೊರಾಸ್)n.marsh,slough. ಕೆಸರುಭೂಮಿ, ಜವುಗು ಪ್ರದೇಶ, ಉಸುಬು ನೆಲ, ಜೊಳ್ಳು, ಜಾಬಿಲು.

Moratorium (ಮಾರಟೋರಿಯಂ) n. legal authorisation to debtors to postpone payment. ಸಾಲಗಾರನು ಸಾಲ ತೀರಿಸಲು ಕಾನೂನಿನ ಮೇರೆಗೆ ಕೊಟ್ಟ ಅಧಿಕಾರ.

Morb'id(ಮಾರ್ಬಿಡ್)a. not natural and healthy ; diseased ಜಾಡ್ಯದ, ಅನಾರೋಗ್ಯದ, ಗೀಳು ಹಿಡಿದ, ರೋಗ ಸ್ವಭಾವದ.

Morbidity (ಮಾರ್ಬಿಡಿಟಿ) n. morbidness, prevalence of disease. ಅಸ್ವಾಭಾವಿಕತೆ, ರೋಗವ್ಯಾಪನೆ.

Morbific (ಮಾರ್ಬಿಫಿಕ್) a. unsound, diseased ವ್ಯಾಧಿಕಾರಕ, ರೋಗಜನಕ.

Morbose (ಮಾರ್ಬೋಸ್) a. unsound. ಅಸ್ವಸ್ಥ.

Mordant (ಮಾರ್ಡಂಟ್) a. biting, caustic. ಚುಚ್ಚುವ, ಮರ್ಮಭೇದಿ.

Mordicant(ಮಾರ್ಡಿಕೆಂಟ್)a. biting, caustic. ಖಾರವಾದ, ಚುಚ್ಚುವ.

More(ಮೋರ್)a. & pron. a greater or additional quantity or number (of). ಹೆಚ್ಚಾದ, ಹೆಚ್ಚಿನ, ಇನ್ನೂ, ಅಧಿಕ. adv. to a greater extent. ಹೆಚ್ಚು, ಹೆಚ್ಚಾಗಿ.

Moreov'er (ಮೋರೋವರ್) adv and further, besides, also ಇನ್ನೂ ಮತ್ತೂ, ಮೇಲಾಗಿ, ಅದೂ ಅಲ್ಲದೆ.

Morgue (ಮಾರ್ಗ್) n. haughty temper. ಗರ್ವದ, ಜಿಗುಪ್ಸೆಯ ಪ್ರವೃತ್ತಿ

Mo'ribund (ಮಾರಿಬಂಡ್) a. dying about to die. ಸಾಯಲಿಕ್ಕಾದ, ಮೃ ಪ್ರಾಯ, ಸಾಯುತ್ತಿರುವ, ಮರಣಾವಸ್ಥೆಯಲ್ಲಿರುವ.

Morion (ಮೊರಿಅನ್) n. a steel ca ಉಕ್ಕಿನ ಟೋಪಿ.

Morn(ಮಾರ್ನ್)n. (poet.) mornin ಪ್ರಾತಃಕಾಲ, ಬೆಳಿಗ್ಗೆ, ಮುಂಜಾನೆ, ಅ ಣೋದಯ.

Morn'ing (ಮಾರ್ನಿಂಗ್) a. first pa of day. ಮುಂಜಾವು, ಉಷಃಕಾಲ, ಪ್ರಾ ಕಾಲ, ಬೆಳಿಗ್ಗೆ.

Morocco (ಮೊರಾಕೊ) n. leath prepared from goatskin. ಹದ ಡಿದ ಆಡಿನ ಚರ್ಮ, ಮೊರಾಕೊ ಚರ್ಮ.

Morose' (ಮರೋಸ್) a. of so temper, sullen. ಕರ್ಕಶ, ಚಿಂತಾಕ್ರಾಂ ವಿಷಣ್ಣ, ಉತ್ಸಾಹರಹಿತ, ಬೇಸರಹಿಡಿ ವಕ್ರಸ್ವಭಾವದ.

Morpheus (ಮಾರ್ಫ್ಯೂಸ್) n. God sleep and dreams. ನಿದ್ರಾ ಮ ಸ್ವಪ್ನದೇವತೆ.

Morph ine (ಮಾರ್ಫಿನ್) n narc principle of opium. ಅಫೀಮಿನ ನಿದ್ರೌಷಧ.

Mo'rrow (ಮಾರೊ) n. day t follows a day or event. ಮರು ಮಾರನೆಯದಿನ.

Mors'el (ಮಾರ್ಸೆಲ್) n. a bi mouthful, a small piece food. ತುತ್ತು, ಬಾಯಿ ತುಂಬು ಗ್ರಾಸ, ಕವಳ, ತುಣುಕು, ಆಹಾ ತುಂಡು.

Mort'al (ಮಾರ್ಟಲ್)a. liable to deadly, fatal. ಸಾಯುವ, ಮ ಕೊಲ್ಲುವ, ಮರ್ತ್ಯ, ಪ್ರಾಣನಾಶಕ human being, creature must die. ಮನುಷ್ಯ, ಮರ್ತ್ಯ, ನಶ್ವರ ಪ್ರಾಣಿ.

Mortal'ity(ಮೊರ್ಟಾಲಿಟಿ)n. subjection to death ; human nature ; death to many. ಮರ್ತ್ಯತೆ, ಮನುಷ್ಯ ಸ್ವಭಾವ, ಮೃತಪಟ್ಟವರ ಸಂಖ್ಯೆ.

Mort'ar (ಮಾರ್ಟರ್) n. vessel in which drugs,food, &c., are pounded with a pestle, mixture of lime water, &c., used in building short cannon. ಒರಳು, ಕಲ್ಪತ್ತು, ಗಾರೆ, ಸಣ್ಣ ಫಿರಂಗಿ.

Mortg'age (ಮಾರ್ಗೆಜ್) n. conveyance of property as security for debt until money is repaid. ಆಧಾರ ಭೋಗ್ಯ, ಈಡು, ಅಡವು. v. t. make over by mortgage, pledge. ಭೋಗ್ಯ ಮಾಡು, ಅಡವಿಡು, ಆಧಾರಮಾಡು.

Mortgagee' (ಮಾರ್ಗಜೀ) n. person to whom mortgage is given. ಅಡವು ಅಥವಾ ಒತ್ತೆ ಇಟ್ಟುಕೊಂಡವ, ಆಧಾರ ಅಥವಾ ಭೋಗ್ಯ ಮಾಡಿಕೊಂಡವ.

Mortg'ager(ಮಾರ್ಗಜರ್) n. person who mortgages. ಒತ್ತೆಹಾಕುವವ, ಆಧಾರಮಾಡಿಕೊಟ್ಟವನು, ಈಡುಮಾಡುವವ, ಗಿರಿವಿದಾರ.

Mort'ify(ಮಾರ್ಟಿಫೈ)v.t. & i. humiliate, chagrin, be affected with gangrene, chasten (flesh, &c) by repression. ಗರ್ವಮುರಿ, ಮನಸ್ಸು ನೋಯಿಸು, ತೇಜೋವಧೆಮಾಡು, ಚೈತನ್ಯ ನಷ್ಟಮಾಡು, ದೇಹದಂಡನೆಮಾಡು, ಕೊಳೆಯಿಸು, ದಮನಮಾಡು, ಕೊಳೆತು ಸತ್ತು ಹೋಗು.

Mortise (ಮಾರ್ಟಸ್) n. hole in a frame work to receive the tenon. ವೆಜ್ಜ, ಕೂರು ಸೇರಿಸುವುದಕ್ಕೆ ಮಾಡಿದ ವೆಜ್ಜ.

Mort'uary(ಮಾರ್ಟ್ಯೂಅರಿ)n. a burial place, deadhouse. ಗೋರಿ ಸ್ಥಳ, ಸ್ಮಶಾನ, ಸಂಸ್ಕಾರಕ್ಕೆ ಮುಂಚೆ ಹೆಣವನ್ನಿಡುವ ಸ್ಥಳ.

Mosque (ಮಾಸ್ಕ್) n. Mohammedan place of worship. ಮಶೀದಿ, ದರಗ, ಮುಸ್ಲಿಮರ ಆರಾಧನ ಮಂದಿರ.



Mosque

Mosqui'to (ಮಸ್ಕಿಟೊ) n. kinds of gnats. ಸೊಳ್ಳೆ, ಚಿಗಟ, ಚುಕ್ಯಾಡಿ, ನೊರಜು.

Moss (ಮಾಸ್) n. bog, lichen. ಪಾಚಿ, ಶೈವಾಲ, ಹಾವಸೆ.

Most (ಮೋಸ್ಟ್)a. greatest number or quantity of. ಹೆಚ್ಚಾದ, ಅತ್ಯಂತ ಹೆಚ್ಚುವ, ಅಧಿಕ ಸಂಖ್ಯೆಯು, ಬಹು.

Most'ly (ಮೋಸ್ಟ್ಲಿ) adv. for the most part. ಹೆಚ್ಚಾಗಿ, ಅತ್ಯಧಿಕವಾಗಿ, ಬಹಳವಾಗಿ, ಬಹಳಮಾಡಿ, ಬಹುಮಟ್ಟಿಗೆ.

Mot (ಮಾಟ್) n. witty saying. ಚತುರತೆಯಿಂದ ಕೂಡಿದ ಉಕ್ತಿ.

Mote(ಮೋಟ್)n. particles of dust. ಧೂಳುಕಣ, ಅಣು, ರೇಣು.

Moth (ಮಾಥ್) n. winged insect akin to butterfly. ಪತಂಗ, ಶಲಭ, ದೀಪದ ಹುಳು.



Moth

Mo'ther(ಮದರ್)n.female parent, old woman. ತಾಯಿ, ಅಮ್ಮ, ಅವ್ವ, ಮಾತೆ, ಜನನಿ.

Motherhood (ಮದರ್ಹುಡ್) n. state of being a mother. ಮಾತೃತ್ವ, ತಾಯ್ತನ.

Mother-in-law(ಮದರ್-ಇನ್-ಲಾ)n. the mother of one's husband or wife. ಅತ್ತೆ, ಶ್ವಶ್ರು.

Motherland(ಮದರ್ಲ್ಯಾಂಡ್) n. the land of one's origin. ಮಾತೃಭೂಮಿ, ತಾಯಿನಾಡು.

Motherless (ಮದರ್ಲೆಸ್) a. without a mother. ಮಾತೃವಿಹೀನ.

Mother-tongue (ಮದರ್-ಟಂಗ್) n. one's native language. ಹುಟ್ಟುನುಡಿ, ತಾಯಿನುಡಿ, ಮಾತೃಭಾಷೆ. m. wit, common sense. ಬುದ್ಧಿಕೌಶಲ್ಯ, ಬುದ್ಧಿವಂತಿಕೆ.

Motherwit (ಮದರ್‌ವಿಟ್) n. common sense. ಸಹಜಜ್ಞಾನ.

Motif (ಮೋಟಿಫ್) n. predominating idea ಪ್ರಧಾನ ಆಶ್ರಯ, ಮುಖ್ಯ ಉದ್ದೇಶ.

Mo'tion (ಮೋಶನ್) n. moving, a gesture; proposal ಚಲನೆ, ಸ್ಥಳ ಬದಲಾವಣೆ, ಚಲನೆಯ ರೀತಿ, ಅಲುಗಾಟ, ಸೂಚನೆ, ಮನವಿ v. t. make sign ಸನ್ನೆಮಾಡು, ಸಂಜ್ಞೆ ಮಾಡು.

Mot'ive (ಮೋಟಿವ್) n. reason, inducement. ಕಾರಣ, ಅಂತರ್ಹೇತು, ಪ್ರೇರಣೆ, ಪ್ರಚೋದನೆ, ಉದ್ದೇಶ.

Motley (ಮಾಟ್ಲಿ) a. variegated in colour, composed of various parts, &c. ಚಿತ್ರವಿಚಿತ್ರ, ವಿವಿಧ ವರ್ಣದ, ನಾನಾ ತೆರದ, ನಾನಾ ಜಾತಿಯ.

Motor (ಮೋಟರ್) n. mechanical source of power, prime mover. ಚಲನೆಕೊಡುವಂಥದು, ಚಾಲಕ.


Motor-car

Mot'or-car (ಮೋಟಾರ್ ಕಾರ್) n. a car impelled by a motor. ಮೋಟರು ಗಾಡಿ, ಮೋಟಾರು ಬಂಡಿ.

Mottle (ಮಾಟ್‌ಲ್) n. an irregularly spotted surface. ಭಿನ್ನಭಿನ್ನ ಬಣ್ಣಗಳ ಕಲೆಗಳುಳ್ಳ ವಿನ್ಯಾಸ.

Mott'o (ಮಾಟೊ) n. anything chosen for inscription or quotation. ಆದರ್ಶವಾಕ್ಯ, ಆದರ್ಶ ಸೂತ್ರ, ಸೂಕ್ತಿ, ಧ್ಯೇಯ, ಮಂತ್ರ, ವಚನ.

Moujik (ಮೂಜಿಕ್) n. Russian peasant. ರಷ್ಯಾ ದೇಶದ ರೈತ.

Mould (ಮೋಲ್ಡ್) n. a pattern, form, soft earth; matrix in which metal is cast. ಮಾದರಿ, ಆಕಾರ, ರೂಪ, ಮೂರ್ತಿ, ಬೇಸಾಯದ ನೆಲದ ಮೇಲ್ಮಣ್ಣು, ಎರಕದ ಅಚ್ಚು. v. t. form or shape according to a pattern. ನಮೂನೆಯಂತೆ ರೂಪಿಸು, ಆಕಾರ ಕೊಡು, ಅಚ್ಚೊತ್ತು.

Moulder (ಮೋಲ್ಡರ್) vi. rot. ಮುಗ್ಗು ಹಿಡಿದುಹೋಗು, ಕೊಳೆ.

Moult (ಮೋಲ್ಟ್) v. t. & i. shed feathers, &c. ಗರಿ ಉದುರಿಸು, ಗರಿ ಕಳೆ.

Mound (ಮೌಂಡ್) n. heap or bank of earth. ದಿಬ್ಬ, ದಿಣ್ಣೆ, ಸಣ್ಣ ಗುಡ್ಡ, ಕಟ್ಟು, ಮೇಡು.

Mount (ಮೌಂಟ್) n. hill mountain, card, &c. on which photograph, &c., is mounted. ಪರ್ವತ, ಬೆಟ್ಟ, ಒಂದು ಚಿತ್ರದ ಸುತ್ತಲಿರುವ ಅಂಚು, ಗುಡ್ಡ, ಚಿತ್ರ ಹಚ್ಚುವ ರಟ್ಟು. v. i. & t. ascend, go upwards, climb on to. ಹತ್ತು, ಏರು, ಹತ್ತಿಹೋಗು, ಏರಿಹೋಗು. m. guard, do the duty of sentinel. ಕಾವಲುಗಾರನಾಗಿರು.

Moun'tain (ಮೌಂಟೆನ್) n. very high hill. ಪರ್ವತ, ಬೆಟ್ಟ, ಮಲೆ, ಘಟ್ಟ.

Mountaineer (ಮೌಂಟೆನೀರ್) n. an inhabitant of a mountain. ಪರ್ವತ ನಿವಾಸಿ, ಪರ್ವತ ಹತ್ತುವುದರಲ್ಲಿ ನಿಪುಣ.

Moun'tainous (ಮೌಂಟೆನೆಸ್) a huge, full of mountains. ಪರ್ವತಮಯ, ಪರ್ವತಸಮಾನ, ಪರ್ವತೀಯ, ಬಹುದೊಡ್ಡ, ಬೆಟ್ಟದಾಕಾರದ.

Moun'tebank (ಮೌಂಟಿಬ್ಯಾಂಕ್) n. a quack doctor who boasts of his skill, charlatan. ಅರಲೆಕಾಯಿ ಪಂಡಿತ, ಸಂಚಾರ ಠಕ್ಕು ವೈದ್ಯ, ಢೋಂಗಿ ಮನುಷ್ಯ, ಠಕ್ಕ, ಬೂಟಾಟಿಗ.

Mounted (ಮೌಂಟೆಡ್) adj. on horseback, set on a mount. ಅಶ್ವಾರೂಢನಾದ, ನೆಲೆಗೊಳಿಸಲಾದ.

Mourn (ಮೋರ್ನ್) v. i. & t. grieve for, be sorrowful. ಮರುಗು, ಗೋಳಾಡು, ಶೋಕಿಸು, ದುಃಖಿಸು, ವ್ಯಥೆಪಡು.

Mouse (ಮೌಸ್) n. a little rodent-animal. ಇಲಿ, ಮೂಷಕ.


Mouse

Mouser (ಮೌಸರ್) n. one who makes an industrious search. ಶ್ರಮಪಟ್ಟು ಹುಡುಕುವವನು.

Mousetrap (ಮೌಸ್‌ಟ್ರಾಪ್) n. appliance for catching mice. ಇಲಿಯ ಬೋನು.


Moustache

Moustache' (ಮುಸ್ಟಾಷ್) n. hair of the upper lip. ಮೀಸೆ.

Mouth (ಮೌತ್) n. the cavity of the head used in eating and speaking, outfall of river. ಬಾಯಿ, ನದೀಮುಖ, ದ್ವಾರ.

Mouth organ (ಮೌತ್ ಆರ್ಗನ್) n. a harmonica. ಬಾಯಿಂದ ಬಾರಿಸುವ ವಾದ್ಯ ವಿಶೇಷ, ರಾಗ ಮಾಲಿಕೆ.


Mouth organ

Mouth-piece (ಮೌತ್‌ಪೀಸ್) n. person who speaks for others. ಇತರರಿಗಾಗಿ ಮಾತಾಡುವವ, ಮತ್ತೊಬ್ಬನಿಗಾಗಿ ಮಾತನಾಡುವವನು.

Movable (ಮೂವೆಬ್‌ಲ್) a. capable of being moved. ಚಲಿಸಲಾಗುವ, ಚಲ.

Mov'ables (ಮೂವೆಬ್‌ಲ್ಸ್) n. pl. personal properties, wares, &c. ಚರಸ್ವತ್ತು, ಜಿಂದಗಿ, ಮಾಲಮತ್ತೆ.

Move (ಮೂವ್) v. t. & i. put in motion, excite, change place, recommend, propose as a resolution, excite, change place; recommend, propose as a resolution. ಚಲಿಸು, ಅಳ್ಳಾಡು, ಸಂಚರಿಸು, ಪ್ರಯಾಣಮಾಡು, ಸ್ಥಳ ಬದಲಾವಣೆ ಹೊಂದು, ಕದಲು, ಸ್ಥಳಬಿಡು, ಮನಕರಗಿಸು, ಕಾರ್ಯ ಪ್ರವೃತ್ತನಾಗುವಂತೆ ಮಾಡು, ನಿರ್ಣಯ ಸೂಚಿಸು, ಸಲಹೆ ಮಾಡು. n. (fig.) step or proceeding. ಹೆಜ್ಜೆ, ಚಲನೆ, ಸ್ಥಳಾಂತರ. m. heaven and earth, try every means within one's reach. ಸರ್ವ ಪ್ರಯತ್ನಮಾಡು.

Move'ment (ಮೂವ್‌ಮೆಂಟ್) n. moving, combined endeavour. ಚಲನೆ, ಅಲುಗಾಟ, ಚಳವಳಿ, ಕಾರ್ಯ ಪರಂಪರೆ.

Movie (ಮೂವಿ) n. a motion picture. ಚಲನಚಿತ್ರ.

Mov'ietone (ಮೂವಿಟೋನ್) n. combination of cinematograph and gramaphone. ಮಾತಾಡುವ ಚಲನ ಚಿತ್ರ, ಟಾಕ್ ಚಲನಚಿತ್ರ.

Mow (ಮೌ) n. stack of hay or corn. ಬಣವೆ, ಹುಲ್ಲು ಮೆದೆ, ಧಾನ್ಯದ ರಾಶಿ, ಕಣ, ಒಟ್ಟಿಲು.

Mow (ಮೊ) v. t. & i. cut grass, &c. with scythe or machine. ಕುಡುಗೋಲಿನಿಂದ ಅಥವಾ ಯಂತ್ರದಿಂದ ಹುಲ್ಲು ಕೊಯ್ಯು, ಕೊಯ್ಲು ಮಾಡು, ಕಟಾವು ಮಾಡು, ತರಿದು ಹಾಕು, ಸವರಿಹಾಕು.

Much (ಮಚ್) a. a great amount of. ಬಹಳ, ಶಾನೆ, ಅಧಿಕ, ಹೇರಳ, ಹೆಚ್ಚಾದ, ಹೆಚ್ಚು ಮೊತ್ತದ. adv. to a great degree. ಬಹಳವಾಗಿ, ಬಹುಮಟ್ಟಿಗೆ. pron a great deal. ಬಹುಭಾಗ.

Mucilage (ಮ್ಯೂಸಿಲೆಜ್) n. solution in water of gummy matter. ಗೋಂದಿನ ದ್ರಾವಣ.

Mucid (ಮ್ಯೂಸಿಡ್) a. musty, slimy. ಕೊಳೆತ.

Muck (ಮಕ್) n. moist dung, dirt. ಗೊಬ್ಬರ, ಕಸ.

Mu'cus (ಮ್ಯೂಕಸ್) n. thick fluid secreted by mucous membrane. ಶ್ಲೇಷ್ಮ, ಆಮ, ಲೋಳೆಯ ಪದಾರ್ಥ, ಸಿಂಬಳ.

Mud (ಮಡ್) n. mixture of earth with water. ಹಸಿಮಣ್ಣು, ಕೆಸರುಮಣ್ಣು, ರಾಡಿ, ಪಂಕ, ಬುರುದೆ. a. muddy. ಕೆಸರಿನ, ಮಣ್ಣಿನ.

Mud'dle (ಮಡಲ್) v. t. & i. bewilder, bungle, mix up. ತಬ್ಬಿಬ್ಬುಮಾಡು, ದಿಗ್ಭ್ರಮೆ ಹಿಡಿಸು, ಅವ್ಯವಸ್ಥೆಮಾಡಿಸು, ಗಲಿಬಿಲಿಮಾಡು, ಅಕ್ರಮಪಡಿಸು.

Mudguard (ಮಡ್‌ಗಾರ್ಡ್) n. fender for protection from slashing mud ಬೈಸಿಕಲ್ ಮೊದಲಾದುವುಗಳ ಚಕ್ರಕ್ಕೆ ಸಿಕ್ಕಿಸಿರುವ ತಡೆಪಟ್ಟಿ.

Muff (ಮಫ್) n. cover of fur, &c. carried by women for keeping hands warm. ಹೆಂಗಸಿನ ಕೈಚೀಲ, ಕೈಹೊದಿಕೆ.



Muff

Muff'in (ಮಫಿನ್) n kind of tea cake eaten hot with butter. ದೋಸೆ, ಹಪ್ಪಳ, ಇಡಲಿ, ಹುಯ್ಗಡಬು.

Muf'fle (ಮಫ಼ಲ್) vt. wrap up for warmth, deaden sound by wrapping up. ಮುಸುಕುಹಾಕು, ಬೆಚ್ಚಗಿಡುವುದಕ್ಕಾಗಿ ಹೊದೆದುಕೊ, ಮುಸುಕುಗಟ್ಟು, ದನಿಗುಂದಿಸು, ಬಾಯಿಕಟ್ಟು.

Muff'ler (ಮಫ್ಲರ್) n. neck wrap. ಕುತ್ತಿಗೆ ಮುಸುಕು, ಕಂಠವಸ್ತ್ರ, ಕೊರಳ ಸುತ್ತು. ಮಫ್ಲರು.

Mug (ಮಗ್) n. drinking cup. ಕುಡಿಯುವ ಪಾತ್ರೆ, ಥಾಲಿ, ಪಾಟ, ಪಂಚಪಾತ್ರೆ.



Mug

Muggins (ಮಗಿನ್ಸ್) n. simpleton. ದಡ್ಡ.

Mulatt'o (ಮ್ಯುಲಾಟೊ) n. person of mixed negro and white blood. ಯುರೋಪ್ಯನಿಗೂ ನೀಗ್ರೊನಿಗೂ ಹುಟ್ಟಿದ ಸಂತಾನ, ಕರಿ_ಬಿಳಿ ಜಾತಿಯವರ ಸಂಯೋಗದಿಂದ ಹುಟ್ಟಿದವ.

Mul'berry (ಮಲ್‌ಬೆರಿ) n. a dark red oval compound fruit. ಹಿಪ್ಪನೇರಳೆಹಣ್ಣು, ಉಪ್ಪುನೇರಳೆ.

Mulct (ಮಲ್ಕ್ಟ್) n. a fine. ತಪ್ಪಿತಕ್ಕಾಗಿ ವಿಧಿಸಿದ ದಂಡ, ಜುಲ್ಮಾನೆ, ಶಿಕ್ಷೆ

Mule (ಮ್ಯೂಲ್) n. offspring of mare by he-ass; any hybrid. ಹೇಸರಕತ್ತೆ, ಮಿಶ್ರಜಾತಿ ಪ್ರಾಣಿ, ಬೆರಕೆ ಜಾತಿಯ ಪ್ರಾಣಿ.



Mule

Muleteer (ಮ್ಯೂಲಿಟಿಯರ್) n. mule driver. ಹೇಸರಕತ್ತೆಯನ್ನು ಓಡಿಸುವವನು.

Mulish (ಮ್ಯೂಲಿಷ್) a. like a mule, stubborn. ಹೇಸರಕತ್ತೆಯ ಸ್ವಭಾವದ, ಮೊಂಡಾದ.

Mull (ಮಲ್) v. t. beat and spice (wine, beer), make a mess of. ಮಸಾಲೆಹಾಕಿ ಕಾಯಿಸು, ಅವ್ಯವಸ್ಥೆಮಾಡು, ಗಲಿಬಿಲಿಮಾಡು.

Muller (ಮಲರ್) n. flat bottomed grinding stone. ಅರೆಯುವ ಕಲ್ಲು.

Mullock (ಮಲಕ್) n. refuse, dirt. ಕಸ, ಕಶ್ಮಲ.

Multifar'ious (ಮಲ್ಟಿಫೇರಿಯಸ್) a. of many kinds. ಬಗೆಬಗೆಯ, ನಾನಾಬಗೆಯ, ಬಹುಪ್ರಕಾರದ, ವಿವಿಧ.

Multiform (ಮಲ್ಟಿಫಾರ್ಮ್) n. of many forms. ಚಿತ್ರವಿಚಿತ್ರ, ಅನೇಕರೂಪಗಳ, ಬಹುರೂಪಿ, ಬಹುವಿಧದ.

Multinom'ial(ಮಲ್ಟಿನೋಮಿಅಲ್) a. & n. (expression) of more than two terms. ಅನೇಕ ಪದಗಳುಳ್ಳ (ರಾಶಿ) ಬಹುವಿಧರಾಶಿ.

Multiparous (ಮಲ್ಟಿಪರಸ್) a. producing morethan one offspring, at one delivery. ಒಂದು ಸಲಕ್ಕೆ ಹಲವು ಮರಿಗಳನ್ನು ಹಾಕುವ.

Mul'tiple (ಮಲ್ಟಿಪ್ಲ್) n. quantity exacty divisible by another. ಸಾಮಾನ್ಯ ಭಾಜ್ಯಸಂಖ್ಯೆ, ಅಪವರ್ತ್ಯ, ಅಪವರ್ತನ.

Multiplicand' (ಮಲ್ಟಿಪ್ಲಿಕೆಂಡ್) n. quantity to be multiplied. ಗುಣ್ಯ, ಗುಣಿಸಬೇಕಾದಸಂಖ್ಯೆ, ಗುಣ್ಯಾಂಕ.

Multiplica'tion (ಮಲ್ಟಿಪ್ಲಿಕೇಶನ್) n. multiplying or increasing in number, ಗುಣಾಕಾರ, ಹೆಚ್ಚಿಸೋಣ.

Multiplicity (ಮಲ್ಟಿಪ್ಲಿಸಿಟಿ) n· a great number, the state of being multiplied. ಬಾಹುಲ್ಯ, ಆಧಿಕ್ಯ, ಅನೇಕತ್ವ, ವೈವಿಧ್ಯ.

Multiplier (ಮಲ್ಟಿಪ್ಲೈಯರ್) n. the number which shows how many times another is to be multiplied. ಗುಣಕ.

Mul'tiply (ಮಲ್ಟಿಪ್ಲೈ) v. t. & i. increase in numbers, subject to multiplication. ಹೆಚ್ಚಿಸು, ಗುಣಿಸು, ಗುಣಾಕಾರಮಾಡು.

Mul'titude (ಮಲ್ಟಿಟ್ಯೂಡ್) n·crowd of people, great number ಗುಂಪು, ಜನಸ್ತೋಮ, ಜನಸಮೂಹ, ಬಹುಸಂಖ್ಯೆ.

Mul'titudinous (ಮಲ್ಟಿಟ್ಯೂಡಿನಸ್) a. consisting a great number. ಹೆಚ್ಚು ಸಂಖ್ಯೆಯುಳ್ಳ, ಸಮೂಹವುಳ್ಳ.

Multio'cular (ಮಲ್ಟಾಕ್ಯುಲರ್) a. of many eyes. ಅನಂತ ನೇತ್ರಗಳ.

Mum (ಮಮ್) int. be silent. ಗಪ್ ಚಿಪ್, ಸುಮ್ಮನಿರು. a. silent. ಮೌನ, ಸ್ತಬ್ಧ.

Mumble (ಮಂಬ್ಲ್) vi. and t· speak; chew food like a toothless person. ಅಸ್ಪಷ್ಟವಾಗಿ ಮಾತನಾಡು, ದಂತಹೀನನಂತೆ ಮಾತಾಡು ಅಥವಾ ಅಗಿ·

Mumbo-jumbo (ಮಂಬೊ-ಜಂಬೊ) n. hocus · pocus, rigmarole. ಮಾಯಮಂತ್ರ, ಮಾಟ, ಅರ್ಥವಿಲ್ಲದ ಮಾತು.

Mumm (ಮಮ್) vt. mask, make diversion with a mask on. ಮುಖವಾಡ ಹಾಕಿಕೊ, ಮುಖಮುಚ್ಚಿಕೊ.

Mumm'er (ಮಮರ್) n. actor in dumb show. ಮೂಕನಾಟಕ ನಟ, ಮುಖವಾಡ ಕಟ್ಟಿಕೊಂಡು ಆಡುವ ಹಾಸ್ಯಗಾರ.

Mumm'ery (ಮಮರಿ) n. buffoonery, ridiculous ceremonial; ತಮಾಷೆ, ಮೂಕನಟರ ನಾಟಕ, ಅರ್ಥವಿಲ್ಲದ ಪೂಜಾವಿಧಾನ, ತಂತ್ರಪೂಜೆ.

Mummify(ಮಮಿಫೈ)vt. to embalm and dry a corpse. ಹೆಣಕ್ಕೆ ಸುಗಂಧದ್ರವ್ಯ ಹಚ್ಚು.

Mumm'y (ಮಮಿ) n. embalmed corpse· ಸುಗಂಧದ್ರವ್ಯ ತುಂಬಿದ ಹೆಣ, ರಕ್ಷಿತ ಶವ.

Mump (ಮಂಪ್) vi. utter indistinctly, be silent. ಅಸ್ಪಷ್ಟವಾಗಿ ಮಾತನಾಡು, ಸುಮ್ಮನಿರು.

Mumpish (ಮಂಪಿಷ್) a. dull· ಮಂಕಾಗಿ.

Mumps (ಮಂಪ್ಸ್) n. (plu.) contagious disease with swollen neck and face. ಮಂಗನಬಾವು, ಗದ್ದಕಟ್ಟು; ಕೆನ್ನೆಬೀಗು, ಕೆಪ್ಪಟರಾಯ.

Munch (ಮಂಚ್) v. t. & i. chew steadily. ಅಗಿದು ತಿನ್ನು, ಜಗಿ, ಕುರುಕು.

Mun'dane (ಮಂಡೇನ್) a· worldly, earthly ಐಹಿಕ, ಸಾಂಸಾರಿಕ, ಲೌಕಿಕ, ಈ ಪ್ರಪಂಚದ.

Mungo (ಮಂಗೊ) n. re-processed wool of fine quality. ಮತ್ತೊಮ್ಮೆ ಕಾರ್ಯವಿಧಾನಕ್ಕೆ ಒಳಪಡಿಸಿದ ಒಳ್ಳೆಯ ಉಣ್ಣೆ.

Muni'cipal (ಮುನಿಸಿಪಲ್) a. of or carried on by municipality. ಪಟ್ಟಣದ, ಪೌರ ಸಭೆಯ, ಸ್ಥಳೀಯ ಆಡಳಿತದ, ನಾಗರಿಕ.

Municipal'ity (ಮುನಿಸಿಪಾಲಿಟಿ) n. town or city with local self-government. ಪೌರಶಾಸನದ ನಗರ, ಸ್ಥಳೀಯ ಆಡಳಿತಾಧಿಕಾರವುಳ್ಳ ಪಟ್ಟಣ, ನಗರ, ಪೌರಸಂಸ್ಥೆ, ಮುನಿಸಿಪಾಲಿಟಿ, ಪೌರ ಸಭೆ.

Munif'icent (ಮುನಿಫಿಸೆಂಟ್) a. splendidly generous. ಅತ್ಯಂತ ಉದಾರ, ಮಹಾತ್ಯಾಗಿ, ದಾನಶೂರ, ತ್ಯಾಗಶೀಲ.

Munif'icence (ಮುನಿಫಿಸೆನ್ಸ್) n. bountifulness. ಔದಾರ್ಯ, ಕೊಡುಗೈ.

Muniment (ಮ್ಯೂನಿಮೆಂಟ್) n. document of rights ಹಕ್ಕುಬಾಧ್ಯತೆಗಳ ಪತ್ರ.

Muni'tion (ಮ್ಯೂನಿಶನ್) n. military stores. ಮದ್ದು, ಗುಂಡು ಮುಂತಾದ ಯುದ್ಧಸಾಮಗ್ರಿ, ರಸ್ತು.

Mur'al (ಮ್ಯೂರಲ್) a. of or on a wall. ಗೋಡೆಯ ಮೇಲಿನ, ಪ್ರಾಕಾರ ಸಂಬಂಧದ.

Murd'er (ಮರ್ಡರ್) n. intentional homicide. "ಖೂನಿ", ಕೊಲೆ, ಹತ್ಯೆ. vt. kill (human being) unlawfully ; spoil by bad execution. ಖೂನಿಮಾಡು, ಕೊಲೆಮಾಡು, ಕುಲಗೆಡಿಸು, ಹಾಳುಮಾಡು, ನಾಶಮಾಡು. n.-er. ಕೊಲೆಗಾರ.

Murderous (ಮರ್ಡರಸ್) n, cruel, savage, pertaining to murder. ಕ್ರೂರ, ಬರ್ಬರ, ಹತ್ಯೆಗೆ ಸಂಬಂಧಿಸಿದ.

Murey (ಮ್ಯೂರ್) vt. confine, shut up in prison. ಬಂಧಿಸು, ಸೆರೆಯಲ್ಲಿಡು.

Murk'y (ಮರ್ಕಿ) a. dark, gloomy. ಕತ್ತಲೆಯ, ಮಬ್ಬಾದ, ಮಂಕಾದ, ಕತ್ತಲೆಗವಿದ, ಮಸಕಾದ.

Murm'ur (ಮರ್ಮರ್) n. complaint; low indistinct sound. ಗೊಣಗಾಟ, ಗುಜುಗುಜುಮಾತು, ಮರ್ಮರಧ್ವನಿ, ಅಸ್ಪಷ್ಟಧ್ವನಿ, ಮೆಲುನುಡಿ. vt. utter in a low voice. ಗೊಣಗುಟ್ಟು, ಗೊಣಗು.

Murrain (ಮರಿನ್) n. a cattle disease ಒಂದು ಬಗೆಯ ಪಶು ರೋಗ, ದನಗಳ ಒಂದು ಅಂಟು ಜಾಡ್ಯ.

Murrey (ಮರ್ರೀ) n. purple red colour. ನೇರಳೆಬಣ್ಣ ಮಿಶ್ರಿತ ಕೆಂಪು.

Muscadine (ಮಸ್ಕಡೈನ್) n. kind of grape. ಒಂದು ವಿಧದ ದ್ರಾಕ್ಷಿ.

Muscatel (ಮಸ್ಕೇಟೆಲ್) n. a sweet amber-coloured wine. ಸಿಹಿಯಾದ ಅಂಬರ್ ಬಣ್ಣದ ಮದ್ಯ.

Mu'scle (ಮಸ್‌ಲ್) n. fleshy fibre. ಮಾಂಸಖಂಡ, ಮಾಂಸಪೇಶಿ, ಸ್ನಾಯು.

Muscology (ಮಸ್ಕಾಲಜಿ) n. study of mosses. ಶೈವಲ ಸಂಬಂಧೀ ವಿಜ್ಞಾನ.

Mus'cular (ಮಸ್ಕ್ಯುಲರ್) a. brawny, strong. ಬಲಿಷ್ಠ, ಕಸುವುಳ್ಳ, ದೃಢಾಂಗ, ಮಾಂಸ ಪುಷ್ಟಿಯುಳ್ಳ.

Muse (ಮ್ಯೂಜ್) vi. ponder, meditate ಮನನಮಾಡು, ಧ್ಯಾನಿಸು, ಮನಸ್ಸಿನಲ್ಲೇ ಚಿಂತಿಸು. n. the muses, nine sister goddesses to whom inspiration in learning & art was attributed, the muse; poet's inspiration or genius. ವಿದ್ಯಾದಿ ಕಲಾದೇವತೆಗಳು, ವಾಗ್ದೇವಿ, ಕವಿಯ ಪ್ರೇರಣಾದೇವತೆ, ಕವಿಯ ಸ್ಫೂರ್ತಿ; ಪ್ರತಿಭೆ, ಕಾವ್ಯಸ್ಫೂರ್ತಿ.

Muse'um (ಮ್ಯೂಜಿಯಮ್) n. building in which objects illustrating art or science are kept for show ವಿವಿಧವಸ್ತು ಪ್ರದರ್ಶನಾಲಯ, ವಿವಿಧ ವಸ್ತು ಸಂಗ್ರಹಶಾಲೆ.

Mush (ಮಷ್) n. soft pulp. ಮೃದುವಾದ ಹಿಟ್ಟು.

Mush'room (ಮಶ್‌ರೂಮ್) n. kinds of edible fungus, upstart person or thing ಅಣಬೆ, ನಾಯಿಕೊಡೆ, ಬೂದಿ ನೋಟದ ಹಿಟ್ಟಪ್ಪ.

Mushy (ಮುಷಿ) a. pulpy. ಮೃದುವಾದ ಹಿಟ್ಟಿನಂತೆ.

Mu'sic (ಮ್ಯೂಝಿಕ್) n. art of expressing or stirring emotion by harmonious combination of sounds; melody. ಗಾಯನ, ಸಂಗೀತ, ಹಾಡುಗಾರಿಕೆ, ಗಾನ; ಸ್ವರಮಾಧುರ್ಯ, ಕಲೆ, ಸ್ವರಮಿಲನ, ಇಂಪಾದಧ್ವನಿ;

Mu'sical (ಮ್ಯೂಝಿಕಲ್) a. fond of or skilled in music, sweetsounding. ಗಾನಪ್ರೇಮಿ, ಸಂಗೀತಪ್ರಿಯ, ಕುಶಲ, ಸುಶ್ರಾವ್ಯವಾದ, ಸುಸ್ವರದ.

Musicale (ಮ್ಯೂಝಿಕೇಲ್) n. party in which music is the chief entertainment ಸಂಗೀತವೇ ಪ್ರಧಾನವಾಗಿಯುಳ್ಳ ಸಂತೋಷಕೂಟ.

Musician (ಮ್ಯೂಝಿಷನ್) n. one who sings. ಗಾಯಕ, ಹಾಡುಗಾರ, ಗವಾಯಿ, ಸಂಗೀತಗಾರ, ಸಂಗೀತಜ್ಞ.

Musing (ಮ್ಯೂಸಿಂಗ್) n. meditation. ಧ್ಯಾನಾಸಕ್ತತೆ.

Musk (ಮಸ್ಕ್) n. substance sercreted by male musk deer. ಕಸ್ತೂರಿ.

Musk'deer (ಮಸ್ಕ್‌ಡಿಅರ್) n. small hornless ruminant of central Asia. ಕಸ್ತೂರಿ ಮೃಗ.

Mus'ket (ಮಸ್ಕೆಟ್) n. infantryman's gun, esp. of unrifled types. ತುಪಾಕಿ, ಬಂದೂಕು, ಕೋವಿ.

Mus'ketry (ಮಸ್ಕೆಟ್ರಿ) n. rifle firing instruction. ತುಬಾಕಿ ಹೊಡೆಯುವ ವಿದ್ಯೆ, ಬಂದೂಕನ್ನು ಪ್ರಯೋಗಿಸುವ ವಿದ್ಯೆ, ಬಂದೂಕು ಹಾರಿಸುವುದರಲ್ಲಿ ಶಿಕ್ಷಣ.



Musk-ox

Musk ox (ಮಸ್ಕ್‌ಆಕ್ಸ್) n. a ruminant of arctic America with long hairs and exhaling strong musky smell. ಕಸ್ತೂರಿ ವೃಷಭ.



Musk-rat

Musk-rat (ಮಸ್ಕ್‌-ರ‍್ಯಾಟ್) n. an invaluable rodent valued for its fur. ಮೂಗಿಲಿ, ಕಸ್ತೂರಿಇಲಿ.

Mus'lin (ಮಸ್ಲಿನ್) n. cotton gauze for dresses, curtains, &c. ಮುಕಮಲ್ಲು, ಮುಸ್ಲಿನ್ ಬಟ್ಟೆ.

Muss (ಮಸ್) n disorder, confusion. ಅವ್ಯವಸ್ಥೆ.

Must (ಮಸ್ಟ್) n. grape juice before or buring fermentation, new wine. ಹೊಸ ದ್ರಾಕ್ಷಾರಸ, ಹೊಸ ಮದ್ಯ.

Must (ಮಸ್ಟ್) a (of male elephant or camel), affected by dangerous periodical excitement. ಮದವೇರಿದ ಆನೆ ಅಥವಾ ಒಂಟೆ, ಮದವೇರಿದ ಗಂಡಾನೆ ಅಥವಾ ಗಂಡೊಂಟೆ. v. aux. be certain to...ಲೇ ಬೇಕು.

Mustang (ಮಸ್ಟ್ಯಾಂಗ್) n. wild horse of America. ಅಮೆರಿಕದ ಕಾಡುಕುದುರೆ.

Mus'tard (ಮಸ್ಟರ್ಡ್) n. the ground seeds of some plants. ಸಾಸಿವೆ, ಸರ್ಷಪ.

Mustard gas (ಮಸ್ಟರ್ಡ್‌ಗಾಸ್) n. a poisonous military gas which blisters the skin. ಬಲವಾದ ಉರಿತವನ್ನುಂಟುಮಾಡುವ ವಿಷಾನಿಲ.

Muster (ಮಸ್ಟರ್) v. t. & i. hold muster of; bring or come together collect. ಜನರನ್ನು ಕೂಡಿಸು, ಸೇರಿಸು; ಜಮಾಯಿಸು, ಒಟ್ಟುಗೂಡು; ಸಂಗ್ರಹಿಸು. n. assembling of troops. ದಂಡಿನವರ ಹಾಜರಿ, ಸೈನ್ಯ ಸಂಗ್ರಹ.

Mus'ter-roll (ಮಸ್ಟರ್-ರೋಲ್) n. official list, esp. of officers and men. ದಂಡಿನವರ ಹಾಜರಿಪಟ್ಟಿ; ಸೈನಿಕರ ಹಾಜರಿ ಪಟ್ಟಿ.

Musty(ಮಸ್ಟಿ)a. mouldy, of bad smell. ಕೊಳೆತ, ದುರ್ಗಂಧಯುಕ್ತವಾದ.

Mu'table(ಮ್ಯೂಟಬಲ್) a. liable to change, fickle. ಮಾರ್ಪಡುವ, ಅಸ್ಥಿರ, ಚಂಚಲ.

Muta'tion (ಮ್ಯೂಟೇಷನ್) n. change that befalls something. ಮಾರ್ಪಾಟು, ವ್ಯತ್ಯಾಸ, ಬದಲಾವಣೆ, ವಿಕಾರ, ವಿಕೃತಿ.

Mute (ಮ್ಯೂಟ್) a. silent, without speech, dumb, soundless. ನಿಶ್ಶಬ್ದವಾದ, ಮೌನದಿಂದಿರುವ, ಸೊಲ್ಲಿಲ್ಲದ, ಮಾತಿನಲ್ಲಿ ವ್ಯಕ್ತಗೊಳಿಸದ, ಮೂಕ, ಸದ್ದಿಲ್ಲದ. vi. void dung (as birds) (ಪಕ್ಷಿಗಳಂತೆ) ಅಚ್ಚಿಕ್ಕು, ಹಿಕ್ಕೆಹಾಕು, ಹಿಕ್ಕೆಇಡು.

Mu'tilate(ಮ್ಯೂಟಿಲೇಟ್) v. maim. cut off ಊನಮಾಡು, ಅಂಗಹೀನಮಾಡು, ಅಂಗವನ್ನು ಕತ್ತರಿಸಿಹಾಕು, ವಿಕಲಾಂಗನಾಗಿಮಾಡು.

Mutineer(ಮ್ಯೂಟಿನೀರ್)n.partaker in mutiny. ಬಂಡಾಯಗಾರ ; ದಂಗೆಕೋರ.

Mu'tinous (ಮ್ಯೂಟಿನಸ್) a. seditious, rebellious. ದಂಗೆಯೇಳುವ; ರಾಜದ್ರೋಹದ, ಬಂಡುಕೋರ.

Mu'tiny(ಮ್ಯೂಟಿನಿ)n. insurrection; revolt. ದಂಗೆ, ಸೈನ್ಯದ್ರೋಹ, ಬಂಡಾಯ.

Mutism (ಮ್ಯೂಟಿಸಂ) n. dumbness, silence. ಮೌನ, ಮೂಕತನ.

Mutt (ಮಟ್)n. a dog of unknown breed, a dull witted person. ತಳಿಗೊತ್ತಿಲ್ಲದ ನಾಯಿ, ಬೆಪ್ಪನಾದ ವ್ಯಕ್ತಿ.

Mutt'er (ಮಟರ್) v. t. & i. speak in low voice, murmur. ಗೊಣಗೊಣ ಅನ್ನು, ಗೊಣಗು, ಗುಸುಗುಸುಮಾತಾಡು; ಪಿಸುಮಾತಾಡು, ಗುಟ್ಟಾಗಿ ಹೇಳು.

Mutt'on (ಮಟನ್) n. sheep's meat, ಕುರಿಮಾಂಸ, ಬಾಡು.

Mu'tual (ಮ್ಯೂಚ್ಯುಅಲ್) n. a reciprocal. ಪರಸ್ಪರ, ಅನ್ಯೋನ್ಯ.

Muzhik(ಮೂಜಿಕ್) n. peasant in Czarist Russia. ಜಾರ್ ಚಕ್ರವರ್ತಿಯ ಕಾಲದ ರಷ್ಯಾದೇಶದ ರೈತ.

Muz'zle(ಮಝ್.ಜ್. ಲ್) n. beast's nose and mouth, open end of gun barrel, cage., &c put on animal's muzzle, ಪ್ರಾಣಿಯ ಮೂಗು ಮತ್ತು ಬಾಯಿಕೂಡಿದ ಮೂತಿ; ಮುಸುಡಿ, ಬಾಯಿ, ಬಂದೂಕಿನ ಬಾಯಿ, ಮುಖ ಬಂಧನ, ಬಾಯಿ ಕುಕ್ಕೆ; ಬಾಯಿಕಲ್ಲಿ.

My (ಮೈ) pron. belonging to me, ನನ್ನ.

My'ope(ಮಾಯೋಪ್)n.short sighted person. ಸಮೀಪ ದೃಷ್ಟಿಯುವನು, ದೃಷ್ಟಿಹೀನ ಮನುಷ್ಯ.

Myo'pia, my'opy (ಮೈ ಒ ಪಿ ಯ,-ಮೈಒಪಿ) n. shortness of sight, ಹ್ರಸ್ವದೃಷ್ಟಿ, ಲಘುದೃಷ್ಟಿತ್ವ, ಅದೀರ್ಘದೃಷ್ಟಿ.

My riad(ಮಿರಿಅಡ್)n.vast number. ಅಸಂಖ್ಯಾತ, ಕೋಟ್ಯಾನುಕೋಟಿ.

Myrmi don (ಮರ್ಮಿಡಾನ್)n. member of person's retinue or following ಹೀನಸೇವಕ, ಅನುಯಾಯಿ, ಕಿಂಕರ.

Myrobalan (ಮೈರಾಬಲನ್)n. palm-like fruit. ಅಳಲೆಯಕಾಯಿ.

Myrrh (ಮರ್) n. gum resin used in perfumes, medicine, &c. ರಕ್ತಬೋಳ, ಗಂಧರಸ, ಗೋಪರಸ, ಗೋಲ ರಸ.

Myrtle (ಮರ್ಟ್ಲ್) n. kind of evergreen shrub. ನಿತ್ಯ ಹಸುರಾದ ಒಂದುವಿಧದ ಸಸ್ಯ.



Myrtle

Myster'ious (ಮಿಸ್ಟೀರಿಅಸ್) a. full of, wrapt in or affecting mystery: ಗಹನ, ಗೂಢವಾದ, ರಹಸ್ಯಗರ್ಭಿತವಾದ, ಗುಹ್ಯ, ಗುಪ್ತ, ದುರ್ಬೋಧ.

Mystery (ಮಿಸ್ಟರಿ) n. revealed religious truth, esp., one beyond human intelligence, symbolic rite, miracle play, secrecy, obscurity. ಗೂಢತತ್ವ, ಗುಪ್ತವಿದ್ಯೆ; ಧಾರ್ಮಿಕಸತ್ಯ; ಮತಪ್ರಕ್ರಿಯೆ; ಗುಟ್ಟು, ರಹಸ್ಯ.

Mys'tic (ಮಿಸ್ಟಿಕ್) a. spiritually symbolic, esoteric, of hidden meaning. ಸಂಕೇತಗರ್ಭಿತ, ಆಧ್ಯಾತ್ಮಿಕವಾಗಿ ರೂಪಕಾರ್ಥವುಳ್ಳ; ರಹಸ್ಯಾರ್ಥವುಳ್ಳ, ಗೂಢ.

Mysticism (ಮಿಸ್ಟಿಸಿಸ್‌ಮ್) n. profession of spiritual things. ಆಧ್ಯಾತ್ಮಯೋಗ, ರಹಸ್ಯವಾದ.

Mys'tify (ಮಿಸ್ಟಿಫೈ) v. t. hoax, bewilder, ಮಂಕುಮಾಡು, ಗಹನಗೊಳಿಸು, ಕಣ್ಣಿಗೆ ಮಣ್ಣೆರಚು, ದಿಗ್ಭ್ರಮೆಗೊಳಿಸು;

Myth (ಮಿಥ್) n, fable, legend. ಕಟ್ಟುಕಥೆ, ಪುರಾಣಕಥೆ, ಶುದ್ಧಕಾಲ್ಪನಿಕಕಥೆ, ದಂತಕಥೆ.

Mythical (ಮಿಥಿಕಲ್) a. fabulous. ಪುರಾಣ ಸಂಬಂಧಿ.

Mythol'ogist (ಮ್ಯಥಾಲಜಿಸ್ಟ್) n. one versed in mythology. ಪುರಾಣಶಾಸ್ತ್ರಜ್ಞ.

Mytholo'gy (ಮಿಥಾಲೊಜಿ) n. science of fables; collection of myths. ದಂತಕಥೆಗಳ ಶಾಸ್ತ್ರ, ಪುರಾಣ ಸಾಹಿತ್ಯ, ದೇವತಾಖ್ಯಾನ.

Mythus (ಮೈಥಸ್) n. fictious story containing supernatural agency ಕಾಲ್ಪನಿಕ ವಸ್ತು, ವ್ಯಕ್ತಿಗಳ ಕಥೆ.

N

N (ಎನ್) fourteenth letter and eleventh consonant of the English alphabet; (chem.) symbol for nitrogen, (math.) an indefinite number. ಇಂಗ್ಲಿಷ್ ವರ್ಣಮಾಲೆಯ ೧೪ನೇಯ ಅಕ್ಷರ, ಹನ್ನೊಂದನೆಯ ವ್ಯಂಜನ ನೈಟ್ರೋಜನ್ ದ್ರವ್ಯದ ಸಂಕೇತಾಕ್ಷರ (ಗಣಿತ) ಅಗಣಿತ ಸಂಖ್ಯಾಸೂಚಕ ಸಂಕೇತ.

Na (ನಾ) a. Scottish form of no. ಅಲ್ಲ.

Nab (ನಾಬ್) vt. (sl.) catch suddenly. ಸರ್ರನೆ ಹಿಡಿ.

Nabob (ನಬಾಬ್) n. official of Moghul Empire. ಮೊಗಲಸಾಮ್ರಾಜ್ಯದ ಅಧಿಕಾರಿ.

Nacelle (ನಾಸೆಲ್) n. body of an airship. ವಿಮಾನದ ಶರೀರಭಾಗ.

Na'cre (ನೇಕರ್) n. mother of pearl. ಮುತ್ತಿನ ಶಿಂಪು, ಮುತ್ತಿನಚಿಪ್ಪು.

Na'dir (ನೇಡರ್) n. point opposite to zenith: lowest point of any thing. ಅಧೋಬಿಂದು, ಅಧೋಭಾಗ, ಅತ್ಯಂತ ಕೆಳಗಿನ ಪ್ರದೇಶ.

Nag (ನಾಗ್) n. small horse. ಟಾಕಣ, ತಟ್ಟು, ಸಣ್ಣ ಸವಾರಿಯ ಕುದುರೆ. v. t. find fault with constantly. ಪದೇ ಪದೇ ತಪ್ಪುಹಿಡಿದುಜರೆ, ಮೂದಲಿಸುತ್ತಿರು, ಕಾಡಿಸು, ಕ್ಲೇಶಿಸು, ಪೀಡಿಸು.

Nai'ad (ನೇಯಡ್) n. water nymph. ಜಲದೇವತೆ, ಅಪ್ಸರೆ.

Naiant (ನೈಯಂಟ್) n. heraldic design representing swimming fishes. ಈಜುವ ಮೀನುಗಳನ್ನೊಳಗೊಂಡ ವಂಶ ಲಾಂಛನ.

Nail (ನೆಇಲ್) n. horny growth covering outer tip of fingers; claw, spike of metal. ಉಗುರು, ಮೊನೆಯುಗುರು, ಆಣಿ, ನಖ, ಮೊಳೆ. hit the n. in the heap; discover the real remedy for anything. ಸರಿಯಾದ ಮದ್ದು ಕಂಡುಹಿಡಿ. n. to the counter, expose (lie, &c.) ಗುಟ್ಟುಬಿಚ್ಚು, ಹೊರಹಾಕು.



Nail

Naive' (ನೇಈವ್) a. unaffected simple. ಸಾದಾ, ಸರಳವಾದ, ಅಕೃತ್ರಿಮ, ನಿಷ್ಕಪಟ.

Naiv'ete, naivety (ನಾಈವ್‌ಟೆ_ನಾಈವಿಟಿ) n. natural simplicity. ಸಾಧುತ್ವ. ಸರಳಸ್ವಭಾವ, ಋಜುತೆ, ಸೌಜನ್ಯ.

Nak'ed (ನೇಕೆಡ್) a. unclothed; nude, plain. ಬೆತ್ತಲೆಯ, ಬಟ್ಟೆ ತೊಟ್ಟಿಲ್ಲದ, ಬೋಳಾದ, ಮುಚ್ಚುಮರೆಯಿಲ್ಲದ, ನಗ್ನ, ಬರಿಯ, ಸರಳ.

Namby-pamby (ನಾಂಬಿ ಪಾಂಬಿ) a. week, insipid, effeminata. ಅಶಕ್ತ, ಸಾರಹೀನ, ಸ್ತ್ರೈಣ.

Name (ನೇಮ್) n. title, repute. ಹೆಸರು, ನಾಮಧೇಯ, ಕೀರ್ತಿ, ಅಭಿದಾನ, ಪ್ರಖ್ಯಾತಿ. v. t. give a name to, nominate, specify. ಹೆಸರಿಡು, ನೇಮಿಸು, ಹೆಸರುಕೊಡು, ನಾಮಕರಣ ಮಾಡು, ಹೆಸರು ಸೂಚಿಸು, ಹೆಸರು ಗೊತ್ತಾಗಿ ಹೇಳು.

Name'ly (ನೇಮ್ಲಿ) adv. that is to say, viz. ಅಂದರೆ, ಅರ್ಥಾತ್, ಎಂದರೆ.

Name-plate (ನೇಮ್‌ಪ್ಲೇಟ್) n. a plate on which one's name is inscribed. ಹೆಸರು ಹಲಗೆ



Name-plate

Name'sake (ನೇಮ್‌ಸೇಕ್) n. person with same name as another. ಒಂದೇ ಹೆಸರಿನ, ಏಕನಾಮದ, ಅದೇ ಹೆಸರಿನವನು.

Nankeen (ನಾನ್‌ಕೀನ್) n. kind of cotton cloth. ಒಂದು ತೆರದ ಹತ್ತಿಯ ಬಟ್ಟೆ.

Nanny (ನಾನಿ) n. female goat. ಹೆಣ್ಣುಮೇಕೆ.

Nap (ನಾಪ್) n. a short sleep, esp. by day. ಒಂದು ಜೊಂಪು, ಅರೆನಿದ್ರೆ, ಅಲ್ಪನಿದ್ರೆ, ನಸುನಿದ್ದೆ.

Nape (ನೇಪ್) n. back of the neck. ಹೆಡಕು, ಹೆಗ್ಗತ್ತು, ಕತ್ತಿನ ಹಿಂಭಾಗ.

Napery (ನೇಪರಿ) n. linen for domesticuse. ಮನೆಯ ಉಪಯೋಗದ ಬಟ್ಟೆ.

Naphtha (ನಾಫ್ಥ) n. inflammable oil distilled from coal, &c. ಕಲ್ಲೆಣ್ಣೆ.

Naphthalene (ನಾಫ್ಥಲೀನ್) n. inflammable substance got by distilling coal-tar. ಟಾರ್‌ಎಣ್ಣೆಯನ್ನು ಭಟ್ಟಿ ಇಳಿಸುವ ಪ್ರಕ್ರಿಯೆಯಲ್ಲಿ ದೊರಕುವ ಒಂದು ಶ್ವೇತ ಸ್ಫಟಿಕ ಪದಾರ್ಥ.

Nap'kin (ನಾಪ್‌ಕಿನ್) n. sanitary towel, handkerchief. ಸಣ್ಣ ಟುವಾಲು, ಕೈಚೌಕ, ಕರವಸ್ತ್ರ, ಕೈವಸ್ತ್ರ, ಸಣ್ಣ ಚೌಕ.

Narcosis (ನಾರ್ಕೋಸಿಸ್) n. state of unconsciousness. ಮೂರ್ಛಾವಸ್ಥೆ.

Narcot'ic (ನಾರ್ಕೋಟಿಕ್) a. inducing drowsiness, sleep or insensibility. ಮಾದಕ, ನಿದ್ದೆಬರಿಸುವ, ನಿದ್ರಾಜನಕ, ಮತ್ತುಕಾರಕ. n. such drug. ಅಮಲು ದ್ರವ್ಯ.

Nard (ನಾರ್ಡ್) n. aromatic balsam. ಜಟಾಮಾಂಸಿ.

Nares (ನೇರೀಸ್) n. pl. the nostrils ಮೂಗಿನ ಹೊಳ್ಳೆಗಳು.

Nariform (ನೆರಿಫಾರಮ್) adj. like nostrils. ಮೂಗಿನ ಹೊಳ್ಳೆಯಂತೆ.

Narrate' (ನರೇಟ್) vt. tell, relate in the form of story. ಹೇಳು, ವಿವರಿಸು, ಕಥನಮಾಡು.

Na'rrative (ನಾರಟಿವ್) n. spoken or written recital of connected events. ಕಥೆ, ವೃತ್ತಾಂತ, ಆಖ್ಯಾನ; ಆಖ್ಯಾಯಿಕೆ, ಕಥನ.

Na'rrow (ನಾರೋ) a not wide, close; illiberal. ಅಗಲವಿಲ್ಲದ, ಅಗಲ ಕಡಮೆಯಾದ, ಕಿರಿದಾದ, ಇಕ್ಕಟ್ಟಾದ, ಸಂಕುಚಿತ, ಸಣ್ಣ ಮನಸ್ಸಿನ, ಅಲ್ಪ

ಬುದ್ಧಿಯ. n. house or home, the grave. ಗೋರಿ, ಸಮಾಧಿ.

Na'rrowly(ನಾರೋಲಿ)adv. closely, vigilantly ಕಟ್ಟುನಿಟ್ಟಾಗಿ, ಸೂಕ್ಷ್ಮವಾಗಿ, ಸೂಕ್ಷ್ಮದೃಷ್ಟಿಯಿಂದ, ಜಾಗರೂಕತೆಯಿಂದ.

No'rrow-minded (ನಾರೊಮೈಂಡೆಡ್) a. of narrow mind. ಅಲ್ಪಬುದ್ಧಿಯ, ಸಂಕುಚಿತ ಮನಸ್ಸಿನ, ದೃಷ್ಟಿವೈಶಾಲ್ಯವಿಲ್ಲದ.

Na'sal (ನೇಜ(ಜ)ಲ್)a. of the nose. ಮೂಗಿನ, ನಾಸಿಕದ. n. a nasal letter. ಅನುನಾಸಿಕ.

Nas'cent(ನೇಸ್ಸೆಂಟ್) a. in process of birth, not mature. ಹುಟ್ಟುತ್ತಲಿರುವ, ಇನ್ನೂ ಬಲಿತಿಲ್ಲದ, ಅಂಕುರಿಸುವ, ಬೆಳೆಯುವ, ಅಪಕ್ವವಾದ

Nasiform (ನೇಸಿಫಾರಮ್)adj. of the shape of nose. ಮೂಗಿನಾಕಾರದ.

Nasturitium (ನಸ್ಟರ್ಷಮ್) n. a hardy, decorative flowering plant. ಛಳಿತಡೆಯುವ ಅಲಂಕಾರವಾದ ಹೂಬಿಡುವ ಸಸ್ಯಜಾತಿ.



Nasturitium

Nas'ty (ನಾಸ್ಟಿ) a. dirty, filthy, obsence; unpleasant, nauseous. ಹೇಸಿಕೆಯಾದ, ಕೊಳಕಾದ. ಅಶ್ಲೀಲ, ಹೊಲಸಾದ, ಬಂಡು, ಹೊಲಸು.

Na'tal (ನೇಟಲ್)n. of birth ಜನನದ, ಹುಟ್ಟಿನ, ಜನ್ಮದ, ಜಾಯಮಾನದ.

Natal'ity (ನೆಟ್ಯಾಲಿಟಿ) n. birth rate ಜನನ, ಹುಟ್ಟಿನ ದರ. ಸಂಖ್ಯಾಪರಿಮಾಣ.

Natation (ನಟೇಷನ್) n. the act of swimming. ಈಜುವುದು.

Natatorium (ನಟಟೋರಿಯಮ್) n. an artificial swimming pool. ಕೃತಕ ಈಜುವ ಕೊಳ.

Nates (ನೇಟೀಸ್) n. buttocks. ಪಿರ್ರೆಗಳು.

Na'tion (ನೇಶನ್) n. people of the same country or government; race. ಜನಾಂಗ, ಪ್ರಜೆ, ಜನತೆ, ವಂಶ.

Na'tional(ನಾಶನಲ್)a. of a or the nation, public, general. ಜನತೆಯ, ದೇಶೀಯ, ರಾಷ್ಟ್ರೀಯ, ಸಾರ್ವಜನಿಕ.

Na'tionalism(ನಾಶನಲಿಝ(ಜ)ಮ್)n patriotic feeling of, efforts on behalf of one's country. ದೇಶಪ್ರೇಮ, ರಾಷ್ಟ್ರೀಯತೆ, ದೇಶಭಕ್ತಿ, ರಾಷ್ಟ್ರೀಯ ಭಾವನೆ.

National'ity(ನಾಶನಲಿಟಿ)n. national existence, membership of a nation ರಾಷ್ಟ್ರೀಯತೆ. ಜನಾಂಗ ಲಕ್ಷಣ, ರಾಷ್ಟ್ರದ ಘಟಕತ್ವ, ಜನಾಂಗತ್ವ.

Na'tive(ನೇಟಿವ್)n. inborn, innate, derived from one's country. ಸ್ವಾಭಾವಿಕವಾದ, ಸ್ಥಳೀಯ, ಹುಟ್ಟಿನಿಂದ ಬಂದ, ದೇಶೀಯ, ಸಹಜವಾಗಿ ನೆಲಸಿರುವ.

Nativ'ity(ನೇಟಿವಿಟಿ)n. birth, horoscope ಹುಟ್ಟು, ಜನನ, ಉತ್ಪತ್ತಿ, ಸಂಭವ, ಜಾತಕ.

Natte (ನಾಟ್) n. an ornament of which the design is an interlacement. ಹೆಣಿಗೆಯ ರಚನೆಯುಳ್ಳ ಒಂದುಬಗೆಯ ಆಭರಣ.

Natty (ನಾಟಿ) adj. trim, tidy. ಠೀಕಾದ, ನಾಜೂಕಾದ.

Na'tural (ನ್ಯಾಚುರಲ್) a. produced by nature, unaffected. ಸ್ವಭಾವಸಿದ್ಧ, ನೈಸರ್ಗಿಕ, ನೈಜ, ಪ್ರಾಕೃತಿಕ, ಹುಟ್ಟುಗುಣವಾದ, ಕೃತಕವಲ್ಲದ. n. history, study of nature, esp. of animal life. ಪ್ರಕೃತಿ ಅಥವಾ ಪ್ರಾಣಿವಿಜ್ಞಾನ n. philosophy, physics. ಭೌತಶಾಸ್ತ್ರ. n. science, study of material phenomena. ಭೌತಿಕ ವಿಜ್ಞಾನ, ಪದಾರ್ಥ ವಿಜ್ಞಾನ.

Na'turalize (ನಾ̆ಚುರಲೈಜ್) v. t' invest with citizen's right ಪರಕೀಯರಿಗೆ ಪ್ರಜಾ ಹಕ್ಕುಗಳನ್ನು ಕೊಡು, ಪಳಗಿಸು, ಬಳಕೆಗೆ ತರು.

Na'turally (ನಾ̆ಚುರಲಿ) adv. according to nature, without affectation. ಸಹಜವಾಗಿ, ಸ್ವಾಭಾವಿಕವಾಗಿ, ಸ್ವಭಾವತ.

Na'ture (ನೇಚರ್) n. thing's essential qualities, being's innate character, kind, sort, class; physical power causing phenomena of material world, universe. ಸ್ವಭಾವ, ಸಹಜಗುಣ. ಹುಟ್ಟುಗುಣ, ಸ್ವರೂಪ ಲಕ್ಷಣ, ಬಗೆ, ತೆರೆ, ನಿಸರ್ಗ, ಪ್ರಕೃತಿ, ಸೃಷ್ಟಿ.

Nautch (ನಾಚ್) n. Indian dance. ನೃತ್ಯ.

Naught (ನಾಟ್) n. nothing. ಶೂನ್ಯ, ನಿಷ್ಪ್ರಯೋಜಕ. set at n., disregard. ಅಲಕ್ಷಿಸು, ಲೆಕ್ಕಿಸದಿರು.

Naugh'ty (ನಾಟಿ) a. mischievous, badly behaved. ಕೀಟಲೆಯ, ಹಠಮಾರಿತನದ. ಅಸಭ್ಯ, ಅಶ್ಲೀಲ, ದುಷ್ಟ, ತುಂಟ, ಉರಿಕೋಚ.

Naus'ea (ನಾಶಿಯ) n. loathing. inclination to vomit. ಉಬ್ಬಳಿಕೆ, ಪಿತ್ತೋದ್ರೇಕ, ಹೊಟ್ಟೆ ತೊಳಸಿ ಓಕರಿಕೆ ಬರುವಂತಿರುವುದು.

Naus'eate (ನಾಶಿಏಟ್) vt. & i. disgust, loathe, feel nausea. ಓಕರಿಕೆ ಬರು, ಅಸಹ್ಯವಾಗು, ಹೇಸಿಕೆಯಾಗು, ಉಬ್ಬಳಿಸು, ಕಾರಿಸು.

Nauseous (ನಾಷಿಯಸ್) a. exciting nausea. ಓಕರಿಕೆ ಬರಿಸುವ.

Nautical (ನಾಟಿಕಲ್) a. of sailors or navigation. ಹಡಗಿನ, ನಾವಿಕರ, ಸಮುದ್ರಯಾನದ, ಕಡಲಸಂಬಂಧವಾದ.

Na'val (ನೇವಲ್) a. of the navy, pertaining to ship. ನಾವೆಯ, ಹಡಗಿನ, ನೌಕಾ ಸೈನ್ಯದ.

Nave (ನೇವ್) n· middle body of a church, hub or centre of wheel· ಚರ್ಚಿನ ಮಧ್ಯಭಾಗ, ಚಕ್ರದ ಮಧ್ಯಭಾಗ, ಗುಂಬ, ಚಕ್ರನಾಭಿ, ಪಿಂಡಿಕೆ.

Na'vel (ನೇವಲ್) n. pit on belly left by severing umblical card. ನಾಭಿ, ಹೊಕ್ಕಳು.

Navicular (ನಾವಿಕ್ಯುಲರ್) adj. of the shape of a boat. ದೋಣಿಯ ಆಕೃತಿಯ.

Nav'igable (ನಾ̆ವಿಗೆಬ್‌ಲ್) a. passable for ships. ಹಡಗು ಹೋಗಬಹುದಾದ, ಹಡಗಿನ ಸಂಚಾರಕ್ಕೆ ಯೋಗ್ಯವಾದ.

Nav'igate (ನಾ̆ವಿಗೇಟ್) v. t. & i. steer ship voyage, sail· ಹಡಗು ನಡಸು, ಸಮುದ್ರಯಾನ ಮಾಡು, ಹಡಗಿನಲ್ಲಿ ಸಂಚರಿಸು, ನಾವೆಯಲ್ಲಿ ಹೋಗು.

Navvy (ನಾವಿ) n. a labourer as in ship' yards, railways, roads etc. ಹಡಗುಗಳಲ್ಲಿ ಅಥವಾ ರೈಲು, ರಸ್ತೆ ಮುಂತಾದುವುಗಳ ನಿರ್ಮಾಣದಲ್ಲಿ ಕೆಲಸ ಮಾಡುವ ಕೂಲಿಯಾಳು.

Na'vy (ನೇವಿ) n. fleet officer and men of the navy. ಯುದ್ಧದ ಹಡಗು, ನೌಕಾಬಲ, ಹಡಗುಪಡೆ, ನೌಕಾಧಿಕಾರಿಗಳು.

Nawab (ನವಾಬ್) n. Muslim ruler in India. ನವಾಬ.

Nay (ನೇ) n. denial. ನಿರಾಕರಣೆ (particle) no or rather; and even, why. ಇಲ್ಲ, ಅಥವಾ ಅದಲ್ಲದೇ, ಅಷ್ಟೇಕೆ, ಅಲ್ಲದೆ. ಮತ್ತು.

Naze' (ನೇಝ್) n· headland. ಭೂಶಿರ.

Nazi (ನಾಜಿ) n. one belonging to Hitler's National Socialist Party of Germany. ಹಿಟ್ಲರನ ರಾಷ್ಟ್ರೀಯ ಸಮಾಜವಾದೀ ಪಕ್ಷಕ್ಕೆ ಸೇರಿದ ಸದಸ್ಯ.

Neap (ನೀಪ್) a. low (tide). ಬತ್ತಿದ ಭರತ ಅಥವಾ ಉಬ್ಬರ.

Near (ನಿಯರ್) a. nigh, closely related, close or close to. ಹತ್ತಿರದ, ಸಮೀಪದ, ನೆರೆಯ, ಪಕ್ಕದ, ಬಳಿಯ,

ದೂರವಲ್ಲದ. v. t. & i. approach. ಸಮೀಪಿಸು, ಆಸನ್ನವಾಗು, ಹತ್ತಿರಕ್ಕೆ ಬರು.

Near'ly (ನಿಯರ್ಲಿ) adv. almost, closely. ಸ್ವಲ್ಪ ಕಡಿಮೆ, ಹತ್ತಹತ್ತಿರ, ಪ್ರಾಯಶಃ, ಬಹುಮಟ್ಟಿಗೆ, ಸೂಕ್ಷ್ಮವಾಗಿ.

Neat (ನೀಟ್) n. cattle, ox, cow. ಜಾನುವಾರು, ಎತ್ತು, ದನ. a. tidy, nicely arranged, cleverly phrased; deft; dexterous ವ್ಯವಸ್ಥಿತ, ಅಂದವಾದ, ನಾಜೂಕಾದ, ಒಪ್ಪವಾದ, ಓರಣವಾದ, ನೀಟಾದ, ಅಚ್ಚುಕಟ್ಟಾದ, ನಿಪುಣ.

Neb (ನೆಬ್) n. (sc.) beak; nose, tip ಪಕ್ಷಿಯ ಚಂಚು, ಮೂತಿ, ಮೂಗು, ಹಕ್ಕಿಯ ಕೊಕ್ಕು, ತುದಿ, ಕೊನೆ.

Neb'ula (ನೆಬ್ಯೂಲಾ) n. luminous patch in sky made by distant star cluster or gaseous matter ಧೂಮ್ರಮಯ. ನಕ್ಷತ್ರಸಮೂಹ, ಜ್ಯೋತಿಃಪಟಲ, ನೀಹಾರಿಕ.



Nebula

Nebular (ನೆಬ್ಯುಲರ್) a. cloudlike; hazy; indistinct, vague, formless. ಮೇಘದಂತಿರುವ, ಅಸ್ಪಷ್ಟ, ಆಕಾರವಿಲ್ಲದ, ನೀಹಾರಿಕಾಮಯ.

Ne'cessary (ನೆಸೆಸರಿ) a. unavoidable, indispensable. ಅಗತ್ಯವಾದ, ಅನಿವಾರ್ಯವಾದ, ಅವಶ್ಯಕವಾದ, ಬೇಕಾದ, ಅಪರಿಹಾರ್ಯ.

Ne'cess'itate (ನೆಸೆಸಿಟೇಟ್) v. t. compel, render unavoidable. ನಿರ್ಬಂಧಿಸು, ಬಲಾತ್ಕರಿಸು, ಅನಿವಾರ್ಯ ಮಾಡು, ಒತ್ತಾಯಮಾಡು.

Necess'ity (ನೆಸೆಸಿಟಿ) n. great need; indispensable thing, strait, poverty. ಅಗತ್ಯವಾದದ್ದು, ಅವಶ್ಯಕತೆ, ಅನಿವಾರ್ಯತೆ, ದಾರಿದ್ರ್ಯ, ಕಷ್ಟದೆಶೆ, ಬಡತನ.

Neck (ನೆಕ್) n. the part of body between head & shoulders. ಕುತ್ತಿಗೆ, ಗೋಣು, ಕತ್ತು, ಕಂಧರ, ಕೊರಳು. n. & crop completely. ಸಂಪೂರ್ಣವಾಗಿ. n. & heels, headlong. ಹಿಂದುಮುಂದಾಲೋಚಿಸದೆ. break the n. of anything. accomplish the stiffest part of it. ಕಷ್ಟದ ಭಾಗವನ್ನು ನೆರವೇರಿಸು. n. or nothing. braving of all dangers. ಎಲ್ಲ ಅಪಾಯಗಳನ್ನೂ ಎದುರಿಸೋಣ.

Neck'lace (ನೆಕ್‌ಲೇಸ್) n. ornament round neck ಹಾರ, ಕಂಠಹಾರ, ರತ್ನಹಾರ, ಮಾಲೆ

Neck'tie (ನೆಕ್‌ಟೈ) n. band of silk, &c. tying shirt collar. ಕೊರಳಪಟ್ಟಿ, ಕಂಠವಸ್ತ್ರ, ಗ್ರೀವಾಸ್ತ್ರ, ಕಂಠಬಂಧ.

Necktie

Necrolatry (ನೆಕ್ರಾಲಟ್ರಿ) n. worship of the dead. ಪ್ರೇತಪೂಜೆ.

Nec'romancy (ನೆಕ್ರೊಮಾನ್ಸಿ) n. magic. ಯಕ್ಷಿಣಿ, ಪಿಶಾಚವಿದ್ಯೆ, ಪ್ರೇತಸಿದ್ಧಿ, ಇಂದ್ರಜಾಲ, ಕಣ್ಕಟ್ಟು.

Necropolis (ನಿಕ್ರಾಪಲಿಸ್) n. cemetery. ಸ್ಮಶಾನ, ರುದ್ರಭೂಮಿ, ಗೋರಿಸ್ಥಳ.

Nec'tar (ನೆಕ್ಟರ್) n. sweet beverage. ಅಮೃತ, ಮಕರಂದ, ಅಮೃತಪಾನ, ಪೀಯೂಷ, ಮಧು.

Neddy (ನೆಡಿ) n. donkey. ಕತ್ತೆ.

Need (ನೀಡ್) n. want, necessity, difficulty, destitution, poverty. ಅಗತ್ಯ, ಅನುಪತ್ಯ, ಅವಶ್ಯಕತೆ ಪರದು, ಆಪತ್ಕಾಲ, ಕಷ್ಟಕಾಲ, ಕೊರತೆ, ವಿಷಮಸ್ಥಿತಿ. vt. want. ಬೇಕಾಗು, ಅಪೇಕ್ಷಿಸು.

Need'ful (ನೀಡ್‌ಫುಲ್) a. requisite. ಅಗತ್ಯಬೇಕಾದ, ಅವಶ್ಯಕವಾದ, ಜರೂರಿನ, ಗರಜಿನ.

Need'less (ನೀಡ್ಲೆಸ್) a. uncalled for; unnecessary. ಅಗತ್ಯವಿಲ್ಲದ, ಬೇಕಿಲ್ಲದ, ಅನವಶ್ಯಕವಾದ.

Needs (ನೀಡ್ಸ್) adv. of necessity. ಅಗತ್ಯವಾಗಿ, ಅವಶ್ಯಕವಾಗಿ.

Need'y(ನೀಡಿ)a. very poor. ಕಡುಬಡವ, ಕಂಗಾಲ, ನಿರ್ಗತಿಕ.

Nee'dle(ನೀಡಲ್)n. pointed headless pin, pierce with eye for thread, &c. ಸೂಜಿ, ಸೂಚಿ.

Nefar'ious(ನಿಫೇರಿಅಸ್) a. wicked. ಅತಿದುಷ್ಟ, ಅತಿಘೋರ, ಅತಿನಿಂದ್ಯ, ಪಾಪಿಷ್ಟ.

Nega'tion (ನೆಗೇಶನ್) n. denial. ನಕಾರ. ಇಲ್ಲವೆನ್ನುವುದು, ನಿಷೇಧ, ಅಭಾವ, ನಿರಾಕರಣೆ, ಪ್ರತಿಷೇಧ.

Neg'ative (ನೆಗಟಿವ್) a. implying denial or refusal. ನಕಾರಾತ್ಮಕ. ಅಭಾವಸೂಚಕ, ನಿರಾಕರಣಾರ್ಥಕ, ನಿಷೇಧಸ್ವರೂಪದ, ಅಸ್ವೀಕಾರಾರ್ಥಕ.

Negativism(ನೆಗಟಿವಿಸಮ್) n. scepticism agnosticism. ನಿಷೇಧವಾದ, ನಿರಾಕರಣವಾದ.

Neglect'(ನೆಗ್ಲೆಕ್ಟ್) vt. slight, omit to do ಅಲಕ್ಷ್ಯಮಾಡು ಲಕ್ಷ್ಯಮಾಡದಿರು, ಉಪೇಕ್ಷೆಮಾಡು, ಮರೆತುಬಿಡು. n. slighting omission ತಾತ್ಸಾರ, ಉಪೇಕ್ಷೆ, ಉದಾಸೀನವಾಗಿರು, ಅಸಡ್ಡೆ, ಅಲಕ್ಷ್ಯ, ಉದಾಸೀನತೆ, ಲೋಪ.

Neg'ligence(ನೆಗ್ಲಿಜನ್ಸ್) n. want of proper care habitual omission. ಅನಾದರಣೆ, ಅಲಕ್ಷ್ಯತೆ, ಉಪೇಕ್ಷೆ, ಅಸಡ್ಡೆ, ದುರ್ಲಕ್ಷ್ಯ.

Neg'ligent, negligible (ನೆಗ್ಲಿಜಂಟ್, ನೆಗ್ಲಿಜಿಬ್‌ಲ್) a. that need not be taken account of. ಉಪೇಕ್ಷಿಸಬಹುದಾದ. ನಿರ್ಲಕ್ಷಿಸಬಹುದಾದ, ಬಿಟ್ಟುಬಿಡಬಹುದಾದ, ಗಣನಾರ್ಹವಲ್ಲದ.

Nego'tiable (ನೆಗೋಶಬಲ್) v. capable of being negotiated ಬೇರೆಯವರಿಗೆ ಕೊಡಲಾಗುವಂಥ, ಸಲ್ಲುವ, ವ್ಯವಹಾರಕ.

Nego'tiate (ನಿಗೋಶಿಏಟ್) vt. & i. confer with a view to finding terms of agreement; get or give money, value for (bill, cheque); deal successfully with. ಕರಾರಿನ ಮಾತುಕತೆ ನಡೆಸು, ಸಂಧಾನ ನಡೆಸು, (ಹುಂಡಿ ಮೊದಲಾದ್ದನ್ನು) ವಟಾಯಿಸು, ಮುರಿಸು, ಬೆಲೆಪಡೆ, ಕೊಡು.

Negress (ನೀಗ್ರೆಸ್) n. a woman of the black-skinned Negro race. ನೀಗ್ರೊ ಜನಾಂಗದ ಹೆಂಗಸು.

Ne'gro(ನೀಗ್ರೊ) n. member of the black African race. ಸಿದ್ಧಿ ಹಬಸಿ. ನೀಗ್ರೊ ಜಾತಿಯವಳು.

Negroid (ನಿಗ್ರಾಯ್ಡ್)a. resembling the negro. ನೀಗ್ರೋವಿನಂತಿರುವ.

Negus (ನೀಗಸ್)n. kind of fermented drink. ಬಿಸಿಯಾದ ದ್ರಾಕ್ಷಾಮದ್ಯ.

Neigh(ನೇ) n the cry of a horse. ಹೇಷಾರವ, ಕುದುರೆಯ ಕೆನೆತ.

Neigh'bour (ನೇಬರ್) n. dweller next door. ನೆರೆಯವ, ಮಗ್ಗಲಮನೆಯವ.

Neigh'bourhood (ನೇಬರ್‌ಹುಡ್)n. vicinity; adjoining district. ನೆರೆಹೊರೆ, ಅಕ್ಕಪಕ್ಕ. ಹತ್ತಿರಹತ್ತಿರದ, ಪ್ರಾಂತ್ಯ, ಸಾಮೀಪ್ಯ.

Neigh'bouring (ನೇಬರಿಂಗ್) a adjoining ಹತ್ತಿರದ, ಸಮೀಪದ, ಸನ್ನಿಹಿತ, ನೆರೆಹೊರೆಯ, ಪಕ್ಕದ.

Neigh'bourly (ನೇಬರ್ಲಿ) adv. like or becoming a neighbour ಸ್ನೇಹಾಚಾರದ, ನೆರೆಹೊರೆಯ, ಸ್ನೇಹದ, ಉಪಕಾರಶೀಲ.

Neither (ನೀದರ್) not either. ಅದೂ ಇಲ್ಲ, ಇದೂ ಇಲ್ಲ; ಎರಡರಲ್ಲಿ ಒಂದೂ ಅಲ್ಲ.

Nem'esis (ನೆಮಿಸಿಸ್) n. retributive justice. ದುಷ್ಕೃತ್ಯಫಲ, ತಕ್ಕಶಾಸ್ತಿ, ಪಾತಕಕ್ಕೆ ತಕ್ಕ ಪ್ರಾಯಶ್ಚಿತ್ತ, ಪ್ರತೀಕಾರನ್ಯಾಯ.

Neocracy (ನೀಯೊಕ್ರಸಿ) n. government by new men. ನವೀನ ಮನುಷ್ಯರಿಂದ ರಾಜ್ಯಭಾರ.

Neologism (ನಿಯಾಲೊಜಿಸಮ್) n. a new word or expression. ಹೊಸರಚನೆಯ ಪ್ರಯೋಗ, ನವಪದ ನಿರ್ಮಾಣ.

Neology (ನಿಯಾಲೊಜಿ) n. system of new words. ಹೊಸಪದರಚನಾ ಪದ್ಧತಿ

Neophron (ನಿಯೊಫ್ರಾನ್) n. white Egyptian vulture. ಈಜಿಪ್ಟ್ ದೇಶದ ಬಿಳಿಯ ಹದ್ದು.

Ne'ophyte (ನೀಯೊಫೈಟ್) n. new convert; novice. ಹೊಸದಾಗಿ ಮತಕ್ಕೆ ಸೇರಿದವನು, ನವಶಿಷ್ಯ, ಅನಭ್ಯಸ್ತ, ಅಪರಿಚಿತ, ಹೊಸಬ

Ne'phew (ನೆ ಫ್ ಯೂ) n. son of a brother or sister. ಸಹೋದರನ ಅಥವಾ ಸಹೋದರಿಯ ಮಗ, ಸೋದರಳಿಯ.

Nephology (ನೆಫಾಲಜಿ) n. science of cloud study. ಮೇಘಶಾಸ್ತ್ರ.

Nep'otism (ನೆಪೊಟಿಜ಼್ಮ್) n. favouritism to relations. ಕುಲಪಕ್ಷಪಾತ.

Nep'tune (ನೆ ಪ್ ಚೂ ನ್) n. god of the sea, the sea; a plant ಸಮುದ್ರ ದೇವತೆ, ಸಮುದ್ರ, „ನೆಪ್ಚೂನ್" ಗ್ರಹ. a. son of n. a sailor. ನಾವಿಕ, ಖಲಾಸಿ.

Ner'eid (ನೀರಿಇಡ್) n. sea nymph. ಸಮುದ್ರದೇವತೆ, ಜಲದೇವಿ, ಅಪ್ಸರೆ.

Neronian (ನಿರೋನಿಯನ್) a. resembling the Roman emperor Nero. ರೋಮನ್ ಚಕ್ರವರ್ತಿ ನೀರೋನಿನಂತಿರುವ.

Nerve (ನರ್ವ್) n. sinew, tendon, presence of mind; bodily strength. courage ನರ, ಪೇಶೀರಜ್ಜು, ಸ್ನಸೆ, ತಂತುಮಯ, ಅಂಗಾಂಶ, ಶಕ್ತಿ, ವೀರ್ಯ, ಕಸುವು, ಮನೋದಾರ್ಢ್ಯ, ಧೈರ್ಯ.

Nerv'eless (ನರ್ವ್‌ಲೆಸ್) a. wanting in vigour, (of style) diffuse. ಬಲವಿಲ್ಲದ, ಜಡ, ಚೈತನ್ಯವಿಲ್ಲದ, ನಿರ್ವೀರ್ಯ, ಶಿಥಿಲ, ಸಡಿಲವಾದ, ಶಬ್ದಪ್ರಚಾರದ, ನಿಸ್ಸಾರ.

Nervine (ನರ್ವೈನ್) adj. pertaining to medicine which relieves nerve disorders. ನರಶಾಮಕ, ನರಶಕ್ತಿವರ್ಧಕ.

Ner'vous (ನರ್ವಸ್) n. easily agitated; vigorous, of the nerves, full of nerves. ಥಟ್ಟನೆ ಕೆರಳುವ, ದುರ್ಬಲ, ಪುಕ್ಕ, ಧೈರ್ಯಹೀನ, ಕಟ್ಟುಮಸ್ತಾದ, ಸತ್ತ್ವವುಳ್ಳ ನರಗಳ, ನರಪೂರ್ಣವಾದ.

Nervy (ನರ್ವಿ) a. daring, audacious. ಧೈರ್ಯಶಾಲಿಯಾದ, ಧಾರ್ಷ್ಟ್ಯವುಳ್ಳ.

Nescience (ನೆಷೆನ್ಸ್) n. ignorance. ಅಜ್ಞಾನ, ಅವಿದ್ಯೆ, ಅಜ್ಞತೆ, ಅರಿವು ಇಲ್ಲದಿರುವುದು.

Nest (ನೆಸ್ಟ್) n. bird's lair. ಹಕ್ಕಿಯ ಗೂಡು, ನಿವಾಸ, ಇಕ್ಕೆ, ನೀಡ. to feather one's n., provide for one's future. ತನ್ನ ಭವಿಷ್ಯಹಿತಕ್ಕಾಗಿ ಕೂಡಿಡು.

Nestle (ನೆ ಸ್ ಲ್) v. i. & t. settle oneself; lie close. ನೆಲೆಯಾಗು, ಗೂಡುಕಟ್ಟು, ಪ್ರೀತಿಯಿಂದ ಅಪ್ಪಿಕೊ, ತಬ್ಬಿಕೊಂಡಿರು, ಲಾಲನೆಮಾಡು, ಪಕ್ಕದಲ್ಲಿರು.

Ne'stling (ನೆಸ್‌ಲಿಂಗ್) n. bird newly hatched. ಗೂಡಿನಲ್ಲಿರುವ ಚಿಕ್ಕಮರಿ, ಗೂಡಿನ ಮರಿ.

Nestor (ನೆಸ್ಟರ್) n. senior and wise man in an assembly. ಜ್ಞಾನವೃದ್ಧನಾದ ಹಿರಿಯ.

Net (ನೆಟ್) n. texture with meshes; snare ಹುರಿ, ಹಗ್ಗಗಳಿಂದ ಮಾಡಿದ ಬಲೆ, ಜಾಲ, ಕಣ್ಣಿ a. clear of reductions. ನಿವ್ವಳ, ನಿಕ್ಕಿ, ಐನು, v. t & i. catch with net; form into network. ಬಲೆಗಳನ್ನು ಕಟ್ಟು, ಬಲೆಯಿಂದ ಹಿಡಿ, ಬಲೆ ಬೀಸು, ಬಲೆಹೆಣೆ.

Neth'er (ನೆದರ್) a. lower. ಕೆಳಗಣ, ಕೆಳಗಿನ.

Nett (ನೆಟ್) adj. without discount, clear of all deductions. ತರಗನ್ನು ಕಳೆದು.

Net'tle (ನೆಟ್ಲ್) n. a plant covered with stinging hairs on leaves. ತುರುಚಿಗಿಡ, ಆನೆಗಜ್ಜಿಗಿಡ. v.t. irritate, provoke. ಕೆರಳಿಸು, ಕಾಡು, ರೇಗಿಸು.

Net'work (ನೆಟ್‌ವರ್ಕ್) n. material formed like net. ಹೆಣಿಗೆ, ಜಾಲಬಂಧ, ಬಲೆಗೆಲಸ, ಜಾಲ.

Neural'gia (ನೂರಲ್‌ಜಿಆ) n. neural pain, esp in face and head. ವಾತಶೂಲ, ನರಗಳ ವೇದನೆ, ನರಶೂಲೆ.

Neuritis (ನ್ಯೂರಿಟಿಸ್) n. inflammation of a nerve. ನರಗಳ ಉರಿಯೂತ.

Neurosis (ನ್ಯೂರೊಸಿಸ್) n. nervous disorder. ನರಗಳ ಅಸ್ವಸ್ಥತೆ.

Neurology (ನ್ಯೂರಾಲೊಜಿ) n. study of the nerves. ನರರೋಗಶಾಸ್ತ್ರ.

Neut'er (ನ್ಯೂಟರ್) a. (gram.) neither masculine nor feminine (of verd) intransitive, neutral. ನಪುಂಸಕ (ಲಿಂಗ), ಅಕರ್ಮಕ (ಕ್ರಿಯಾಪದ), ಯಾವಪಕ್ಷಕ್ಕೂ ಸೇರದ, ತಟಸ್ಥ.

Neut'ral (ನ್ಯೂಟ್ರಲ್) a. taking neither side. impartial. ತಟಸ್ಥ, (ನಿಷ್ಪಕ್ಷಪಾತಿ)

Neut'ralize (ನ್ಯೂಟ್ರಲೈಝ್) v. t. counterbalance; made inffective. ಸಮಗೊಳಿಸು, ಗುಣನಾಶಮಾಡು, ನಿಸ್ಸತ್ವಗೊಳಿಸು, ಸಮತೂಕಮಾಡು.

Neutron (ನ್ಯೂಟ್ರಾನ್) n. a mass produced by the union of a proton and electron. ಧನ ಮತ್ತು ಋಣ ವಿದ್ಯುದಂಶಗಳು ಸೇರಿ ಉಂಟಾದ ವಿದ್ಯುತ್ಕಣ

Nev'er (ನೆವರ್) adv. not ever, at no time. ಎಂದೂ ಇಲ್ಲ, ಯಾವಾಗಲೂ, ಎಂದಿಗೂ ಇಲ್ಲ.

Nev'ertheless (ನೆವರ್ದಲೆಸ್) adj. & conj. notwithstanding, yet. ಆದಾಗ್ಯೂ, ಹಾಗಿದ್ದರೂ, ತಥಾಪಿ, ಪರಂತು, ಪುನಃ.

Newel (ನ್ಯೂಎಲ್) n. pillar supporting rails of a staircase. ಸುತ್ತುಮೆಟ್ಟಿಲು, ಹಂತದ ಮಧ್ಯಗಂಬ.

New (ನ್ಯೂ) a. fresh, recent. ನವೀನ, ಹೊಸದಾದ, ಈಚಿನ, ನವ, ನೂತನ, ಆಧುನಿಕ.

Newfang'led (ನ್ಯೂಫಂಗಲ್ಡ್) a. different from the old fashioned, novel. ಹೊಸತರದ, ನವೀನ, ಆಧುನಿಕ, ಹೊಸಕಲ್ಪನೆಯ, ನವ್ಯತಾ ಅಭಿಮಾ ಪ್ರಿಯ.

New'ly (ನ್ಯೂಲಿ) adv. recently ಹೊಸದಾಗಿ, ಈಚೆಗೆ, ಈಗತಾನೆ.

News (ನ್ಯೂಜ್) n (plu.) tidings fresh events reported. ವಾ ತೆ ಹೊಸ ವರ್ತಮಾನ, ಹೊಸ ವಿಷಯ, ಹೊ ಸುದ್ದಿ, ಸಮಾಚಾರ.

News-paper (ನ್ಯೂಜ್ ಪೇಪರ್) n periodical containing news ವರ್ತಮಾನ ಪತ್ರಿಕೆ, ವಾರ್ತಾಪತ್ರ, ವೃ ಪತ್ರಿಕೆ.

Newsy (ನ್ಯೂಸಿ) a. full of news ಸಮಾಚಾರಭರಿತವಾದ.

Newt (ನ್ಯೂಟ್) n. small lizardlil amphibian. ಹಲ್ಲಿಯಂತಿರುವ ಒಂ ಜೀವಿ.

Next (ನೆಕ್ಸ್ಟ್) a. nearest, immedi tely following or preceding ಹ ರದ, ಮಾರನೆಯ, ನೆರೆಯ, ಪಕ್ಕ ಮುಂದಿನ, ಆಮೇಲಿನ, ಅನಂತರದ. ad immediately after ಮುಂ ಅನಂತರ, ತರುವಾಯ, ಆಮೇಲೆ. n. nothing, almost nothing. ಶೂ n. door to, very close to. ಬಹ ಹತ್ತಿರ, ಸಮೀಪವಾಗಿ.

Nexus (ನೆಕ್ಸಸ್) n. bond, connection. ಸೇರಿಕೆ, ಸಂಬಂಧ.

Nib (ನಿಬ್) n. a point as of pen, beak; &c. ಲೇಖನಿಯ ಮೊನೆ, ಬರೆಯುವ ಮುಳ್ಳು, ಟಾಕಿನ ತುದಿ, ಚುಂಚು, ಕೊಕ್ಕು.

Nibs

Nib'ble (ನಿಬಲ್) v. t. & i. bite small bits, dally with. ಕೊ ಕೊಂಚವಾಗಿ ತಿನ್ನು, ಕಚ್ಚಿತಿನ್ನು, ಸ ಸ್ವಲ್ಪವಾಗಿ ಕಡಿದು ತಿನ್ನು, ಸರಸವಾ ನಂಜಿತಿನ್ನು, ರಮಿಸು.

Nice (ನೈಸ್) a. subtle, fine, agre able; kind; considerate. ಸೂ ದೃಷ್ಟಿಯ. ಸೊಗಸಿನ, ಸೂಕ್ಷ್ಮಭೇದ ನಾಜೂಕಿನ, ಹಿತಕರವಾದ, ಅಂದವಾ

ಕೋಮಲ, ರುಚಿಕರ, ದಯಾಳು, ದಯಾಪರ, ವಿವೇಚನಪರ.

Nicety (ನೈಸಿಟಿ) n. precision, minute, distinction, unimportant detail. ಸೂಕ್ಷ್ಮತೆ, ಕೌಶಲ್ಯ, ಲಾಲಿತ್ಯ, ರಮ್ಯತೆ. to a n. with extreme accuracy. ಸ್ವಲ್ಪವೂ ವ್ಯತ್ಯಾಸ ಕಾಣದಷ್ಟು, ಸರಿಯಾಗಿ.



Niche

Niche (ನಿಚ್) n. recess in a wall. ಮಾಡ, ಗೂಡು, ನಿಕೇತನ.

Nick (ನಿಕ್) n. notch, critical or opportune moment. ಕಚ್ಚು, ಗಾಡಿ, ಗೊತ್ತಾದ ಕಾಲಕ್ಕೆ, ತಕ್ಕವೇಳೆ. in the n. of time, just at the right moment. ಸರಿಯಾದ ಹೊತ್ತಿಗೆ.

Nick'el (ನಿಕಲ್) n. a greyish white metal. ತವರದಂಥ ಒಂದು ಲೋಹ, ನಿಕ್ಕಲ್ ಧಾತು.

Nicknacks (ನಿಕ್‌ನಾಕ್ಸ್) n. pl. trifles, small wares. ಥಳಕಿನ ಪದಾರ್ಥಗಳು, ಸಣ್ಣ ಪುಟ್ಟ ವಸ್ತುಗಳು.

Nick'name (ನಿಕ್‌ನೇಮ್) n. a name given in contempt or sportive familiarity. ಅಡ್ಡಹೆಸರು, ಸಂಜ್ಞೆ, ಉಪನಾಮ, ಉಪಾಧಿ.

Nicotine (ನಿಕೊಟೀನ್) n. a poisonous substance found in tobacco. ಹೊಗೆಸೊಪ್ಪಿನಲ್ಲಿ ಇರುವ ಒಂದು ವಿಧದ ವಿಷಪದಾರ್ಥ.

Nictate (ನಿಕ್ಟೇಟ್) vi. wink. ಕಣ್ಣು ಮಿಟುಕಿಸು.

Nictation (ನಿಕ್ಟೇಷನ್) n. winking. ಕಣ್ಣು ಮಿಟುಕಿಸುವಿಕೆ.

Niddle-noddle (ನಿಡ್ಲ್-ನಾಡ್ಲ್) adj. quivering, nodding. ಕಂಪಿಸುವ, ಅದುರುವ.

Niece (ನೀಸ್) n. the daughter of a brother or sister. ಸೋದರ ಅಥವಾ ಸೋದರಿಯ ಮಗಳು.

Nigg'ard ನಿಗರ್ಡ್) n. miser. ಕೃಪಣ, ಜಿಪುಣ, ಲೋಭಿ.

Nigg'ardly (ನಿಗರ್ಡ್ಲಿ) a. miserly. ಲೋಭಿಯು, ಕೃಪಣನ.

Nigg'er (ನಿಗರ್) n. negro. ಕರಿ ಮನುಷ್ಯ, ಹಬಸಿ, ಸಿದ್ಧಿಜನ, ನೀಗ್ರೊ.

Niggle (ನಿಗಲ್) vi. spend time in trifles. ಮುಖ್ಯವಲ್ಲದ ವಿಷಯಗಳ ಮೇಲೆ ಅನಾವಶ್ಯಕವಾಗಿ ಕಾಲಕಳೆ.

Nigh (ನ್ಯಾ) adv. pre. near. ಹತ್ತಿರ.

Night (ನೈಟ್) n. time from sunset to sunrise; the dark. ರಾತ್ರಿ, ಇರುಳು, ಕತ್ತಲೆ.

Night'fall (ನೈಟ್‌ಫಾಲ್) n. beginning of night · end of daylight. ಸಾಯಂಕಾಲ, ಪ್ರದೋಷಕಾಲ, ಮುಂಗತ್ತಲೆ

Night'ingale (ನೈಟಿಂಗೇಲ್) n. small bird noted for its song at night. ಬುಲ್‌ಬುಲ್ ಹಕ್ಕಿ.

Night'mare (ನೈಟ್‌ಮೇರ್) n. dreadful dream; any haunting fear. ದುಃಸ್ವಪ್ನ, ಸ್ವಪ್ನಪಿಶಾಚಿ, ಭಯಂಕರ ಸ್ವಪ್ನ, ಭೀತಿ.

Nigres'cent (ನಿಗ್ರೆಸ್ಸೆಂಟ್) a. blackish. ಕರಿಯ, ನಸುಕಪ್ಪಾದ.

Nihilism (ನಿಹಿಲಿಸಮ್) n. nothingness, denial of all existence. ನಾಸ್ತಿತ್ವ, ಶೂನ್ಯವಾದ.

Nill (ನಿಲ್) n nothing. ಶೂನ್ಯ, ಸೊನ್ನೆ, ಏನೂ ಇಲ್ಲದಿರುವುದು, ನಾಸ್ತಿ.

Nimble (ನಿಂಬಲ್) a. agile, quick, clever. ಚಪಲ, ಚುರುಕು ಗತಿಯುಳ್ಳ, ವೇಗವುಳ್ಳ, ಸೂಕ್ಷ್ಮಗ್ರಾಹಿ, ಚತುರ.

Nimrod (ನಿಮ್‌ರಾಡ್) n. a hunter, a sportsman. ಬೇಟೆಗಾರ.

Ninc'ompoop (ನಿನ್‌ಕಂಪೂಪ್) n. feeble person, simpleton. ಅಶಕ್ತ ಮನುಷ್ಯ, ಪೆದ್ದ, ಬೆಪ್ಪ.

Nine (ನೈನ್) a. & n. one more than eight. ಒಂಬತ್ತು. a n. days wonder, incident of absorbing but brief

interest. ಅಲ್ಪಕಾಲದ ವೈಭವ. to the nines to perfection. ಪೂರ್ಣವಾಗಿ.

Nine'fold (ನೈನ್‌ಫೋಲ್ಡ್) a. & adv. nine times repeated. ಒಂಭತ್ತು ಪಟ್ಟು, ಒಂಭತ್ತರಷ್ಟು, ಒಂಭತ್ತು ಮಡಿ.

Nine-pins (ನೈನ್ ಪಿನ್ಸ್) n. a game in which a ball is bowled at nine upright pins. ಒಂಬತ್ತು ನಿಂತಿರುವ ಗೂಟಗಳ ಕಡೆಗೆ ಚೆಂಡು ಎಸೆದು ಅವುಗಳನ್ನು ಉರುಳಿಸುವ ಒಂದು ಆಟ.


Nine pins

Nine'teen (ನೈನ್‌ಟೀನ್) a. & n. nine and ten. ಹತ್ತೊಂಭತ್ತು, ೧೯.

Nine'ty (ನೈನ್‌ಟಿ) a. & n. nine times ten. ತೊಂಭತ್ತು, ೯೦.

inny (ನಿನಿ) n. a fool, a man of weak mind. ಪೆದ್ದ, ದುರ್ಬಲಮನದವನು.

Nip (ನಿಪ್) v. i. & t. check the growth of, sqeeze sharply; pinch. ಕಡಿ, ಕತ್ತರಿಸು, ಕಚ್ಚು. ಹಿಂಡು, ಚಿವುಟಿಹಾಕು, ಬೆಳವಣಿಗೆಯನ್ನು ತಡೆ, ಚಿವುಟು. n. pinch sharp squeeze. ಚಿವುಟುವಿಕೆ, ಚಿಮುಟಿಗೆ. n. in the bud, kill in the initial stage. ಪ್ರಾರಂಭದಲ್ಲಿಯೇ ನಾಶಗೊಳಿಸು.

Nipp'er (ನಿಪರ್) n. plu. forceps for gripping tool ಚಿಕ್ಕ ಚಿಮುಟಿಗೆ, ಚಿಮುಟಿ, ಚಿಮುಟ ಕತ್ತರಿ.

Nipper

Nip'ple (ನಿಪ್ಲ್) n. point of mammal's breast; teat of baby's bottle. ಮೊಲೆತೊಟ್ಟು, ಮೊಲೆಯತುದಿ, ಹಾಲು ಬುದ್ದಿಯ ಮೊಲೆತೊಟ್ಟು, ಸ್ತನಾಗ್ರ.

Nit (ನಿಟ್) n. the egg of a louse or other small insect. ಹೇನಿನ ಮೊಟ್ಟೆ, ಸೀರು.

Nicrate (ನೈಟ್ರೇಟ್) n. salt of nitric acid. ನೈಟ್ರೇಟು.

Ni'tre (ನೈಟರ್) n. potassium nitrate or saltpetre. ಕಡಿಯುಪ್ಪು, ಯವಕ್ಷಾರ, ಪೆಟ್ಲುಪ್ಪು, ಸುರಾಕ್ಷಾರ.

Nit'rogen (ನೈಟ್ರೋಜೆನ್) n an atmospheric gas. ಯವಕ್ಷಾರಜನಕ ವಾಯು, ಸಸಾರಜನಕ, ಸಾರಜನಕ.

Niveous (ನಿವಿಯಸ್) a. that which resembles snow. ಮಂಜುಗಡ್ಡೆಯನ್ನು ಹೋಲುವ.

Nix (ನಿಕ್ಸ್) a. water spirit. ಜಲದೇವತೆ.

No (ನೋ) a. not any. ಏನೂಇಲ್ಲದ adv. not, not at all ಅಲ್ಲ, ಖಂಡಿತ ಅಲ್ಲ, ಆಗುವುದಿಲ್ಲ, ಯಾವುದೂ ಇಲ್ಲದ no go, of no use. ಪ್ರಯೋಜನವಿಲ್ಲದ. no end, a great deal. ಬಹಳ.

Nob (ನಾಬ್) n. head. ಮಂಡೆ. ತಲೆ. vt. hit on the head. ತಲೆಮೇಲೆ ಹೊಡಿ.

Nobble (ನಾಬ್ಲ್) vt. secure by dishonest means. ಅನ್ಯಾಯಮಾರ್ಗದಿಂದ ಹೊಂದು.

Nobil'ity (ನೊಬಿಲಿಟಿ) n. person of title. commanding excellence. ಬಿರುದಾಂಕಿತ, ಉದಾತ್ತಗುಣ, ಶ್ರೀಮಂತ ಪದವಿ, ಗೌರವದ ಅಂತಸ್ತು, ಔದಾರ್ಯ, ಘನತೆ.

No'ble (ನೋಬ್ಲ್) a. illustrious by rank; title of birth, of lofty character, generous; dignified. ಶ್ರೀಮಂತ, ಕೀರ್ತಿವಂತ, ಉದಾತ್ತ ಧ್ಯೇಯಗಳ, ಉತ್ತಮಶೀಲ ಸ್ವಭಾವದ, ಕುಲೀನ, ರಾಜಮಾನ್ಯ, ಉದಾರ, ಆಢ್ಯ.

Nobleman (ನೋಬಲ್‌ಮನ್) n. peer, titled person ಕುಲೀನ, ಶ್ರೀಮಂತ ವರ್ಗಕ್ಕೆ ಸೇರಿದವ.

Noblesse (ನೊಬ್ಲೆಸ್) n persons of noble rank. ಶ್ರೀಮಂತವರ್ಗದವರು.

No'body (ನೋಬಾಡಿ) n no person: person of no importance. ಯಾವನೂ ಅಲ್ಲ, ಒಬ್ಬನೂ ಅಲ್ಲ, ಅನಾಮಧೇಯ.

o'bleness (ನೋಬಲ್‌ನೆಸ್) n. dignity, splendour. ಗಾಂಭೀರ್ಯ, ವೈಭವ.

ock (ನಾಕ್) vt. set an arrow on the string of a bow. ಬಿಲ್ಲಿಗೆ ಬಾಣವನ್ನು ಹೂಡು.

octurn'al (ನಾಕ್ಟರ್ನಲ್) a. of night. ರಾತ್ರಿಯ, ಇರುಳಿನ, ರಾತ್ರಿ ನಡೆಯುವ.

od (ನಾಡ್) v. t. & i. incline head slightly and quickly, be drowsy. ತಲೆದೂಗು, ತೂಕಡಿಸು, ತಲೆ ಅಲುಗಿಸು, ಮಂಪರದಿಂದಿರು.

ode (ನೋಡ್) n. nob on root or branch; hard tumour on joint; central point of system. ಕೊಂಬೆಯ ಮೇಲಿನ ಅಥವಾ ಬೇರಿನ ಗಂಟು, ಉಬ್ಬು, ಗಿಣ್ಣು, ಅಸ್ಥಿಗುಲ್ಮ, ಸಂಧಿಸ್ಥಾನ, ಸಂಪಾತ, ಛೇದಬಿಂದು.

Nodose (ನೋಡೋಸ್) a. complicated, intricate. ಜಟಿಲ, ಗಂಟುಗಂಟಾದ.

Nodule (ನಾಡ್ಯೂಲ್) n. small knot. ಚಿಕ್ಕ ಗ್ರಂಥಿ.

Nodus (ನೋಡಸ್) n. complication. ಕ್ಲಿಷ್ಟತೆ.

Noel (ನೋಯೆಲ್) n. a christmas carol. ಕ್ರಿಸ್ಮಸ್ ಹಬ್ಬದ ಹಾಡು.

Nog (ನಾಗ್) n. block of wood. ಮರದ ತುಂಡು.

Noggin (ನಾಗಿನ್) small mug or pot. ಚಿಕ್ಕ ಪಾತ್ರೆ.

Noise (ನಾಯಿಜ್) n. clamour, din; any sound. ಸಪ್ಪಳ, ಸದ್ದು, ಬೊಬ್ಬೆ, ಶಬ್ದ, ಗಟ್ಟಿಯಾದ ಕೂಗಾಟ, ಕೋಲಾಹಲ.

Noiseless (ನಾಯಿಸ್‌ಲೆಸ್) adj. having no noise. ನಿಶ್ಶಬ್ದವಾಗಿ, ಮೌನವಾಗಿ.

Noisily (ನಾಯ್ಸಿಲಿ) adv. in a noisy way. ಬಹಳ ಶಬ್ದಮಾಡುತ್ತ, ಗಲಭೆ ಮಾಡುತ್ತ.

Nois'ome (ನಾಯಿಸಮ್) a. noxious; disgusting. ದುರ್ಗಂಧವುಳ್ಳ, ಕೇಡುಮಾಡುವ, ಅಪಾಯಕರ, ಅಹಿತವಾದ, ಕೆಟ್ಟ ನಾತದ, ಅಸಹ್ಯಕರ.

Noisy (ನಾಯ್ಸಿ) a. loud sounding, clamorous, self-assertive. ಗದ್ದಲಮಾಡುವ, ಆರ್ಭಟದ, ಆಡಂಬರದ, ಗವುಜಿನ, ಸ್ವಪ್ರತಿಷ್ಠೆಯ.

Nom'ad (ನೋಮಡ್) a. roaming from pasture to pasture. ಪಶುಪಾಲನೆಗಾಗಿ ಸಂಚಾರಮಾಡುವ, ಚರಪಶುಪಾಲ ಕುಲದ.

Nomadic (ನೊಮಾಡಿಕ್) adj. wandering, roaming about. ಭ್ರಮಣಶೀಲ.

Nom'deplume (ನಾಮ್‌ಡಿಪ್ಲೂಮ್) n. pen-name. ಲೇಖಕನು ಧರಿಸಿದ ಹೆಸರು.

No'menclature (ನೊಮೆಂಕ್ಲೇಚರ್) n. system of names or naming; terminology. ನಾಮಕರಣ ವ್ಯವಸ್ಥೆ, ಸಾಂಕೇತಿಕ ಶಬ್ದ, ಪಾರಿಭಾಷಿಕಕೋಶ, ಪರಿಭಾಷೆ.

Nom'inal (ನಾಮಿನಲ್) a. existing in name or word only. ಹೆಸರಿನ, ನಾಮಮಾತ್ರದ, ಹೆಸರಿಗೆ ಮಾತ್ರವಿರುವ, ಶಾಬ್ದಿಕ.

Nomi'nate (ನಾಮಿನೇಟ್) v. t. appoint or propose for election to office. ಚುನಾವಣೆಗೆ ಹೆಸರು ಸೂಚಿಸು, ನೇಮಿಸು.

Nominee' (ನಾಮಿನೀ) n. one who is nominated. ನಿಯುಕ್ತ, ನೇಮಿಸಲ್ಪಟ್ಟಿರುವ, ನಾಮಕರಣವಾದವನು.

Nom'inative (ನಾಮಿನೇಟಿವ್) n. nominative case. ಪ್ರಥಮಾವಿಭಕ್ತಿ, ಕರ್ತೃಪದ.

Non'age (ನಾನೇಜ್) n. being under age. ಅಪ್ರಾಪ್ತವಯಸ್ಸು, ಎಳೆಪ್ರಾಯ, ಬಾಲ್ಯಾವಸ್ಥೆ.

Nonagon (ನಾನಗನ್) n. a polygon having nine angles. ನವಭುಜಾಕೃತಿ.

Nonary (ನಾನರಿ) n. group of nine. ಒಂಭತ್ತರ ಸಮೂಹ.

Non-conduc'tor (ನಾನ್‌ಕಂಡಕ್ಟರ್) n. substance that does not transmit heat or electricity. ಅವಾಹಕ, ಉಷ್ಣ-ವಿದ್ಯುತ್ ಬಂಧಕ.

Nonce (ನಾನ್ಸ್) n. (in phr.) for the nonce, for the occasion only. ಪ್ರಸ್ತುತಕಾಲ, ತಾತ್ಕಾಲಿಕ, ಪ್ರಕೃತ ಸಂದರ್ಭ. for the v. t. reduce to a non-plus. ತಬ್ಬಿಬ್ಬುಮಾಡು, ಭ್ರಮೆಗೊಳಿಸು, ದಿಗ್ಭ್ರಮೆಗೊಳಿಸು.

Non'sense (ನಾನ್‌ಸೆನ್ಸ್) n. absurd or meaningless words or ideas, foolish conduct. ಅರ್ಥವಿಲ್ಲದ ಮಾತು, ಹುಚ್ಚುಮಾತು, ಅಸಂಬದ್ಧದ ಮಾತು, ಮೂರ್ಖತನ.

Non'suit (ನಾನ್‌ಸೂಟ್) n. stoppage of suit by judge as unsustainable ರದ್ದಾದ ದಾವೆ, ದಾವಾ ರದ್ದು.

No'odle (ನೂಡಲ್) n. simpleton. ಪೆದ್ದ, ದಡ್ಡ, ಗುಗ್ಗು.

Nook (ನುಕ್) n. seclude corner. ಮೂಲೆ, ಗೊಂದಿ, ತಾಕು.

Noon (ನೂನ್) n. midday. ಮಧ್ಯಾಹ್ನ, ನಡುಹಗಲು, ಮಟ್ಟಮಧ್ಯಾಹ್ನ.

Noon-day (ನೂನ್ ಡೇ) n. midday, twelve o'clock. ಮಧ್ಯಾಹ್ನ, ಹನ್ನೆರಡು ಗಂಟೆಯ ಸಮಯ.



Noose (ನೂಝ್) n. cord with running loop at the end; snare. ಸರಿಗುಣಿಕೆ, Noose ಉರುಳು, ಬಲೆ, ಬಂಧನ, ಕುಣಿಕೆ.

Nor (ನಾರ್) adv. & conj. neither. ಇಲ್ಲದ, ಅಲ್ಲದ, ಮತ್ತು ಅಲ್ಲ, (ಎರಡರಲ್ಲಿ) ಯಾವುದೂ ಅಲ್ಲ.

Norm (ನಾರ್ಮ್) n. recognized type. ಮಾದರಿ, ಕ್ಲೃಪ್ತಪ್ರಮಾಣ, ಆದರ್ಶ.

Nor'mal (ನಾರ್ಮಲ್) a. regular; ordinary. ನೇಮಪ್ರಕಾರದ, ಕ್ರಮಬದ್ಧವಾದ, ರೂಢಿಯ, ಸಾಮಾನ್ಯ.

Normalcy (ನಾರ್ಮಲ್ಸಿ) n. average condition. ಮೊಟ್ಟಮೊದಲಿನ ಸ್ಥಿತಿ, ಯಥಾಸ್ಥಿತಿ.

Normality (ನಾರ್ಮಾಲಿಟಿ) n. normal state. ಸಾಮಾನ್ಯಸ್ಥಿತಿ.

Norse (ನಾರ್ಸ್) n. Norwegian language. ನಾರ್ವೆದೇಶದ ಭಾಷೆ.

North' (ನಾರ್ತ್) point opposite to south. ಉತ್ತರ ದಿಕ್ಕು, ಬಡಗು.

North'-east (ನಾರ್ತ್-ಈಸ್ಟ್) n. point between north and east. ಈಶಾನ್ಯ ದಿಕ್ಕು, ಬಡಗು ಮೂಡಲ ಮೂಲೆ.

North'erly (ನಾರ್ದರ್ಲಿ) a. & adv. towards or from north. ಉತ್ತರ ದಿಕ್ಕಿನ, ಬಡಗಣ, ಉತ್ತರದ ಕಡೆಗೆ.

North'ern (ನಾರ್ದರ್ನ್) a. pertaining to the north. ಉತ್ತರ ದಿಕ್ಕಿನ, ಉತ್ತರದ.

North-west (ನಾರ್ತ್-ವೆಸ್ಟ್) n. point between north and west. ವಾಯುವ್ಯ (ದಿಕ್ಕು.)

Norwegian (ನಾರ್ವೀಜನ್) n. & a. native of Norway; belonging to Norway. ನಾರ್ವೇದೇಶದ ನಿವಾಸಿ, ನಾರ್ವೆದೇಶಕ್ಕೆ ಸಂಬಂಧಿಸಿದ.

Nose (ನೋಜ್) n. organ of smell. ಮೂಗು, ನಾಸಿಕ. under one's n. in one's immediate proximity. ಎದುರಿನಲ್ಲಿ, ಸಮಕ್ಷಮದಲ್ಲಿ. turn up one's nose at; show contempt for. ತಾತ್ಸಾರದಿಂದ ಕಾಣು, ಮೂಗುಮುರಿ. measure noses, meet. ಭೇಟಿಯಾಗು, ಎದುರುಗೊಳ್ಳು. lead by the n. influence a person to follow blindly. ತಾನು ಹೇಳಿದಂತೆ ಕೇಳುವಹಾಗೆ ಮಾಡು.

Nostril (ನಾಸ್ಟ್ರಿಲ್) n. opening in nose. ಮೂಗಿನ ಸೊಳ್ಳೆ, ಹೊಳ್ಳೆ.

Nos'trum (ನಾಸ್ಟ್ರಂ) n. quack remedy patent medicine, pet scheme ಬೂಟಾಟಿಕೆಯ ಮದ್ದು, ಪ್ರಿಯಕರ ಯೋಜನೆ.

Nosy (ನೋಸಿ) a. inquisitive. ಕುತೂಹಲಿಯಾದ.

Not (ನಾಟ್) adv. expressing denial. ಇಲ್ಲ, ಅಲ್ಲ n. fit to hold a candle; quite inferior to. ಕೀಳುದರ್ಜೆಯ. n. a bit of it; not at all. ತಿಲಮಾತ್ರವೂ ಅಲ್ಲದ, ಆವಲ್ಲದ ಅಲ್ಲ.

Notability (ನೋಟಬಿಲಿಟಿ) n. worthiness of notice, prominent person ಗಮನಾರ್ಹತೆ, ಪ್ರಖ್ಯಾತವ್ಯಕ್ತಿ, ಪ್ರಸಿದ್ಧಪುರುಷ.

No'table (ನೋಟಬಲ್) a. worthy, remarkable. ಪ್ರಸಿದ್ಧ, ಪ್ರಖ್ಯಾತ, ಪ್ರಮುಖ, ಗಮನಾರ್ಹವಾದ.

Notary (ನೋಟರಿ) n. person authorised to draw up deeds, &c. ಪತ್ರ ಮೊದಲಾದವನ್ನು ತಯಾರಿಸಿ ಅವಕ್ಕೆ ರುಜು (ಸಹಿ) ಹಾಕುವ ವಕೀಲ.

Notation (ನೋಟೇಶನ್) n. representing of numbers quantities, &c. by symbols. ಸಂಖ್ಯಾಲೇಖನ, ಅಂಕಕರಣ, ಪದ್ಧತಿ, ಅಂಕನ.

Notch (ನಾಚ್) n. V shaped indentation, cut, nick. ಕತ್ತರಿ ಆಕಾರದ ನೆಚ್ಚು, ಕಚ್ಚು, ಕೊಯ್ತು, ಕಡಿತ.



Relay' (ರಿಲೆ) n. set of fresh horses or gang of men to replace tired ones. ಹೊಸ ಕುದುರೆಗಳು, ಅಥವಾ ಆಳುಗಳ ತಂಡ. v. t. lay again, receive and pass on a wireless programme. ಮತ್ತೆ ಇಡು, ಆಕಾಶವಾಣಿ ಸಂದೇಶವನ್ನು ಪ್ರತಿಧ್ವನಿಸು, ಪುನಃಪ್ರಸಾರಮಾಡು.

Release' (ರಿಲೀಸ್) v. t. set free, remit, make over to another ; exhibit (cinema film) for first time. ಬಿಟ್ಟುಬಿಡು, ಬಿಡುಗಡೆಮಾಡು, ವಿಮೋಚನೆಮಾಡು, ಬೇರೆಯವರ ಸ್ವಾಧೀನಮಾಡು, ಸಿನಿಮಾ ಫಿಲ್ಮನ್ನು ಮೊದಲುಬಾರಿ ಪ್ರದರ್ಶಿಸು. n. liberation, written discharge, receipt. ನಿಸ್ತಾರ; ಉದ್ಧಾರ, ವಿಮೋಚನೆ, ಬಿಡುಗಡೆಯ ಚೀಟಿ, ಖುಲಾಸೆ ಪತ್ರ; ರಸೀದಿ.

Rel'egate (ರೆಲಿಗೇಟ್) vt. exile, consign to inferior position or execution. ಗಡೀಪಾರುಮಾಡು; ಕಡಿಮೆ ದರ್ಜೆಗೆ ತರು, ನಿರ್ಣಯದ ಅಧಿಕಾರ ಒಪ್ಪಿಸು.

Relent' (ರಿಲೆಂಟ್) v. i. slacken, give way to compassion. ಸೌಮ್ಯವಾಗು, ಮರುಕತೋರು, ದಯೆತಾಳು, ಮೃದುಚಿತ್ತನಾಗು.

Relent'less(ರಿಲೆಂಟ್‌ಲೆಸ್)a. merciless. ನಿರ್ದಯ, ನಿಷ್ಕರುಣ, ಕ್ರೂರ, ನಿಷ್ಠುರ.

Rel'evant (ರೆಲೆವಂಟ್) n. pertinent to. ಪ್ರಸಂಗೋಚಿತ, ಸಂಗತವಾದ, ಸಮಂಜಸವಾದ.

Reli'able (ರಿಲಯಬಲ್) a. trustworthy. ಭರವಸೆ ಇಡತಕ್ಕ, ನಂಬಲರ್ಹ, ನೆಚ್ಚಬಹುದಾದ.

Reli'ance (ರಿಲಯನ್ಸ್) n. trust; confidence. ಭರವಸೆ, ನೆಚ್ಚಿಕೆ, ನಂಬಿಕೆ, ಅವಲಂಬನೆ.

Relic (ರೆಲಿಕ್) n. moments, souvenir, (plu.)any old ruins. ಸ್ಮೃತಿ; ಸ್ಮಾರಕ ವಸ್ತು, ಅವಶಿಷ್ಟ, ಭಗ್ನಾವಶೇಷಗಳು.

Rel'ict (ರೆಲಿಕ್ಟ್) n. widow. ವಿಧವೆ, ವಿತಂತು.

Relief' (ರಿಲೀಫ್) n. alleviation or end of pain, aid, help. ದುಃಖಪರಿಹಾರ, ಉಪಶಮನ, ಆಪತ್ಕಾಲದ ಸಹಾಯ, ಮದತು.

Relieve'(ರಿಲೀವ್) vt.give relief to, bring into relief. ವಿಶ್ರಾಂತಿಕೊಡು, ನೆಮ್ಮದಿಕೊಡು, ದುಃಖಪರಿಹರಿಸು.

Reli'gion (ರಿಲಿಜನ್) n. system of faith & worship,monastic state ಧರ್ಮ, ಭಕ್ತಿ, ಮತ, ದೈವನಿಷ್ಠೆ, ಮತಶ್ರದ್ಧೆ, ಧರ್ಮರಾಜ್ಯ.

Religious(ರಿಲಿಜಸ್)a. pious, godly, devout. ಧರ್ಮನಿಷ್ಠ, ಮತಶ್ರದ್ಧೆಯುಳ್ಳ, ಭಕ್ತಿಪರ.

Reliquary (ರೆಲಿಕ್ವರಿ) n. receptacle for relics. ಅವಶೇಷಗಳನ್ನಿಡುವ ಪಾತ್ರೆ.

Relinq'uish (ರಿಲಿಂಕ್ವಿಶ್)vt. aban-

don, resign, surrender. ಬಿಟ್ಟುಬಿಡು, ಹಕ್ಕುಬಿಟ್ಟುಕೊಡು, ತೊರೆ, ತ್ಯಜಿಸು.

Rel'ish (ರೆಲಿಶ್) n. agreeable taste zest, appetizer. ರುಚಿ, ಸ್ವಾದ, ವಿಶಿಷ್ಟರುಚಿ, ವ್ಯಂಜನಾದಿ. vt. & i. serve as relish to, be pleased with. ರುಚಿಸು, ರುಚಿಕೊಡು, ಪ್ರೀತಿಸು, ಆನಂದಪಡೆ, ಅಭಿನಂದಿಸು.

Reluctance (ರಿಲಕ್ಟನ್ಸ್) n. unwillingness. ಅನಿಚ್ಛೆ, ಬೇಕಿಲ್ಲದಿರುವುದು, ಒಲ್ಲದಿರುವಿಕೆ, ಅರುಚಿ.

Reluc'tant (ರಿಲಕ್ಟಂಟ್) a. unwilling. ಮನಸ್ಸಿಲ್ಲದ, ಒಲವಿಲ್ಲದ, ಅಸಂತುಷ್ಟ, ವಿಮುಖ.

Relume (ರಿಲ್ಯೂಮ್) vt. rekindle light. ದೀಪವನ್ನು ಮತ್ತೆ ಹತ್ತಿಸು.

Rely' (ರಿಲೈ) vt. put one's trust in, depend with confidence on. ವಿಶ್ವಾಸವಿಡು, ಅವಲಂಬಿಸಿರು, ಶ್ರದ್ಧೆಯಿಡು.

Remain (ರಿಮೇನ್) v.i. be left over, abide; stay behind, last. ಮಿಗು, ಉಳಿಯು, ಹಿಂದೆ ಉಳಿ, ಬದುಕಿರು, ವಾಸಿಸು, ಅಸ್ತಿತ್ವದಲ್ಲಿರು, ಉಳಿದಿರು. n. plu. relics of antiquity. dead body. ಅವಶಿಷ್ಟಗಳು. ಹೆಣ, ಕಳೇಬರ.

Remainder (ರಿಮೇಂಡರ್) n. residue, anything left. ಶೇಷ, ಉಳಿಕೆ, ಉಳುಗಡೆ.

Remand (ರಿಮಾಂಡ್) vt. send back (prisoner) into custody, recommittal. ಮುಂದಿನ ವಿಚಾರಣೆಗೆ ಆಸ್ಪದವಾಗಲು ಕೈದಿಯನ್ನು ಮತ್ತೆ ಬಂಧನದಲ್ಲಿಡು.

Remanant (ರೆಮನೆಂಟ್) a. remaining, residual. ಉಳಿದಿರುವ, ಶೇಷನಿಂತಿರುವ.

Remanet (ರೆಮನೆಟ್) n. residue, remaining part. ಉಳಿಕೆ, ಉಳಿದ ಭಾಗ.

Remark' (ರಿಮಾರ್ಕ್) vt. & i. take notice of, say by way of comment. ಲಕ್ಷಿಸು, ಗಮನಿಸು, ಹೇಳಿಕೆ, ಟೀಕಿಸು, 'ಷರಾ ಬರೆ' n. noticing comment. a thing said. ಗಮನ, ಲಕ್ಷ್ಯ, ಟೀಕೆ, ಅಭಿಪ್ರಾಯ, ಲಿಖಿತ, ಲೇಖ.

Remarkable (ರಿಮಾರ್ಕಬಲ್) a. deserving notice, exceptional, striking. ಗಮನಾರ್ಹವಾದ, ಅಸಾಮಾನ್ಯ, ಅಪೂರ್ವ, ವಿಖ್ಯಾತ, ಅಸಾಧಾರಣವಾದ.

Rem'edy (ರೆಮಿಡಿ) n. cure for disease or evil, redress. ರೋಗಪರಿಹಾರಕ, ಪರಿಹಾರ, ಮದ್ದು, ಸರಿಮಾಡು, ಚಿಕಿತ್ಸೆಮಾಡು, ಪರಿಹಾರಮಾಡು, ಗುಣಪಡಿಸು.

Remember (ರಿಮೆಂಬರ್) vt. keep in mind, convey greeting from, put in mind of. ನೆನಪಿನಲ್ಲಿಡು, ಜ್ಞಾಪಕದಲ್ಲಿಟ್ಟುಕೊ, ನೆನೆ, ನಮಸ್ಕಾರಗಳನ್ನು ತಿಳಿಸು, ಸ್ಮರಿಸು, ಅನುಬೋಧಿಸು.

Remembrance (ರಿಮೆಂಬ್ರನ್ಸ್) n. memory, recollection, keepsake. ನೆನಪು, ಜ್ಞಾಪಕ, ಜ್ಞಾಪಿಸಿಕೊಳ್ಳುವುದು, ಸ್ಮರಣೆ, ಸ್ಮೃತಿ, ಸ್ಮಾರಕ.

Remind (ರಿಮ್ಯಾಂಡ್) vt. put in mind of; cause to remember. ನೆನಪುಕೊಡು, ನೆನಪುಹುಟ್ಟಿಸು, ಜ್ಞಾಪಿಸು, ಜ್ಞಾಪಕಕ್ಕೆ ತರು.

Reminder' (ರಿಮೈಂಡರ್) n. one who or that which reminds. ನೆನಪುಹುಟ್ಟಿಸುವವ; ಜ್ಞಾಪಿಸುವ ವಸ್ತು ಅಥವಾ ಪತ್ರ, ಉದ್ಬೋಧಕ, ಅನುಬೋಧಕ.

Reminis'cence' (ರೆಮಿನಿಸ್ಸೆನ್ಸ್) n. recalling to mind. ನೆನಪು, ಸ್ಮೃತಿ ಸ್ಮರಣೆ, ನೆನಪಿನಲ್ಲಿರುವ ಸಂಗತಿ.

Reminis'cent (ರೆಮಿನಿಸ್ಸೆಂಟ್) a. recalling the past, reminding one of. ಹಿಂದಿನದನ್ನು ಜ್ಞಾಪಿಸುವ, ಜ್ಞಾಪಕಕ್ಕೆ ತರುವ.

Remiss' (ರಿಮಿಸ್) a. negligent, lacking energy. ಉದಾಸೀನ, ಅಲಕ್ಷ್ಯದ, ಅಸಡ್ಡೆಯ. ಅಜಾಗರೂಕತೆಯ.

Remission (ರಿಮಿಶನ್) n. release

forgiveness, pardon. ಬಿಡುಗಡೆ, ಕ್ಷಮಾಪಣೆ, ಮಾಫ್‌ಮಾಡುವುದು, ವಿಮೋಚನೆ, ಮುಕ್ತಿ, ಉದ್ಧಾರ.

Remit' (ರೆಮಿಟ್) v. t. & i. pardon ; refer (matter) to some authority, send money. ಕ್ಷಮಿಸು, ಮನ್ನಿಸು, ಮಾಫ್‌ಮಾಡು, ಕಡಮೆಮಾಡು, ಕೆಳ ನ್ಯಾಯಸ್ಥಾನಕ್ಕೆ ಕಳುಹು, ಹಣ ಕಳುಹಿಸಿಕೊಡು.

Remitt'ance (ರೆಮಿಟನ್ಸ್) n. money sent to person. ಕಳುಹಿಸುವ ಹಣ, ರವಾನೆ.

Remitt'ent (ರಿಮಿಟೆಂಟ್) a. & n. (fever)that abates at intervals. ನಡುನಡುವೆ ಬಿಟ್ಟುಬರುವ (ಜ್ವರ).

Rem nant (ರೆಮ್ನಂಟ್) n. remainder, fragment. ತುಣುಕು, ಉಳಿಕೆ ವಸ್ತು, ಉಳಿಕೆ, ಶೇಷ.

Remon'strate (ರಿಮಾನ್‌ಸ್ಟ್ರೇಟ್) vt. & i. make protest, urge in remonstrance. ಎದುರಾಡು; ಆಕ್ಷೇಪಿಸು, ಎಚ್ಚರಿಸು, ಬುದ್ಧಿಹೇಳು. n.-remonstrance.

Remorse (ರಿಮೋರ್ಸ್) n. bitter repentance; compunction. ತೀಕ್ಷ್ಣ ಪರಿತಾಪ, ಮರುಕ, ಪಶ್ಚಾತ್ತಾಪ.

Remote' (ರಿಮೋಟ್) a. far away in place or time, not nearly related. ಬಹುದೂರದ, ದೂರಸಂಬಂಧದ, ದೂರವರ್ತಿ.

Remo'vable(ರಿಮೂವಬ್‌ಲ್) a. that may be removed. ತೆಗೆದುಹಾಕಬಹುದಾದ, ವಜಾಮಾಡಲಾಗುವ.

Remo'val (ರಿಮೂವಲ್) n. dismissal from a post, change of place. ಉದ್ಯೋಗದಿಂದ ವಜಾಮಾಡುವುದು, ಸ್ಥಳಾಂತರ.

Remove (ರಿಮೂವ್) vt. & i. convey to another place, dismiss, change one's residence. ಸ್ಥಳಾಂತರಿಸು, ತೆಗೆದುಹಾಕು, ವಜಾಮಾಡು, ಅಗಲಿಸು, ಬದಲಾಯಿಸು.

Remun'erate (ರಿಮೂನರೇಟ್) v. t. pay for service rendered. ಸಂಭಾವನೆಕೊಡು, ಬಹುಮಾನಕೊಡು, ಸಲ್ಲಿಸಿದ ಸೇವೆಗೆ ಪ್ರತಿಫಲಕೊಡು.

Remunera'tion (ರಿಮೂನರೇಶನ್) n. what is received as pay. ಸಂಭಾವನೆ, ಪ್ರತಿಫಲ, ವೇತನ; ಪಾರಿತೋಷಕ, ಬಹುಮಾನ.

Remun'erative (ರಿಮೂನರೇಟಿವ್) a. profitable, lucrative. ಲಾಭದಾಯಕ, ಪ್ರತಿಫಲದಾಯಕ.

Renaiss'ance (ರಿನೈಸೆನ್ಸ್) n. revival of arts and letters. ಕಲೆ ಮತ್ತು ಸಾಹಿತ್ಯದ ಪುನರುಜ್ಜೀವನ.

Renas'cence (ರಿನೆಸೆನ್ಸ್) n. a new-birth, renaissance, ಹೊಸ ಹುಟ್ಟು, ಪುನರ್ಜನ್ಮ, ನವಚೇತನ.

Renascent (ರಿನಾಸೆಂಟ್) a. spring up anew. ಪುನರ್ಜನ್ಮವಾಗುತ್ತಿರುವ.

Rencoun'ter, rencon'tre (ರೆನ್‌ಕೌಂಟರ್) n. encounter; duel, casual meeting. ಜಗಳ, ಜಟಾಪಟಿ, ಅನಿರೀಕ್ಷಿತ ಹೋರಾಟ, ಭೇಟಿ.

Rend (ರೆಂಡ್) v. t. i. tear. split; deliver. ಹರಿದುಹಾಕು, ಕಿತ್ತುಹಾಕು, ಸೀಳು. ಭಾಗಿಸು, ಕೊಡು.

Rend'er (ರೆಂಡರ್) vt. return; deliver up, execute, translate. ಹಿಂದಕ್ಕೆ ಕೊಡು, ಒಪ್ಪಿಸಿಬಿಡು, ಸಮರ್ಪಿಸು, ನಡೆಸು, ಭಾಷಾಂತರಮಾಡು.

Ren'dering (ರೆಂಡರಿಂಗ್) n. translation. ಭಾಷಾಂತರ, ಅನುವಾದ, ತರ್ಜುಮೆ.

Ren'dezvous(ರಾಂಡಿವೂ)n. appointed place of meeting ; meeting by appointment. ಸಾಂಕೇತಿಕ ಸ್ಥಳ; ಗೊತ್ತುಪಡಿಸಿದ ಭೇಟಿ, ಸಮಾಗಮಸ್ಥಾನ.

Rendition (ರೆಂಡಿಷನ್) n. surrender to the charge of another. ಮತ್ತೊಬ್ಬರ ವಶಕ್ಕೆ ಒಪ್ಪಿಸಿಕೊಡು.

Ren'egade (ರೆನಿಗೇಡ್) n. apostate,

deserter of party or principles. ಧರ್ಮಾಂತರಮಾಡಿದವ, ಸ್ವಧರ್ಮಪರಿತ್ಯಾಗಿ, ಸ್ವಮತಭ್ರಷ್ಟ.

Renew (ರಿನ್ಯೂ) vt. & i. make new or as good as new, patch. fill up, replace. ಹೊಸದುಮಾಡು, ಹೊಸದಾಗಿ ಕಾಣುವಂತೆ ಮಾಡು, ತೇಪೆಹಾಕು. ಮತ್ತೆ ತುಂಬು, ಹೊಸದು ಹಾಕು. n. renewal (also see under Renovate.)

Rennet (ರೆನೆಟ್) n. kinds of apple. ಒಂದು ಬಗೆಯ ಸೇಬು.

Renounce (ರಿನೌನ್ಸ್) v. t. surrender, give up, repudiate, forsake ವರ್ಜಿಸು, ಪರಿತ್ಯಜಿಸು, ನಿರಾಕರಿಸು, ತಿರಸ್ಕರಿಸು, ಬಿಟ್ಟುಬಿಡು.

Ren'ovate (ರೆನೊವೇಟ್) vt. restore to good condition or vigour, repair. ಮತ್ತೆ ಹೊಸದುಮಾಡು, ಒಳ್ಳೆಯ ಸ್ಥಿತಿಗೆತರು, ರಿಪೇರಿಮಾಡು. n. renovation.

Renown (ರಿನೌನ್) n. fame, high distinction. ಹೆಸರುವಾಸಿ, ಪ್ರಖ್ಯಾತಿ, ಪ್ರಸಿದ್ಧಿ, ಖ್ಯಾತಿ.

Rent' (ರೆಂಟ್) n. periodical payment for use of land, house; room, a gap, cleft, fissure. ಕಂದಾಯ; ಬಾಡಿಗೆ, ಗೇಣಿ, ಬಿರುಕು, ಕಂಡಿ, ಸೀಳು. vt. & i. lend or hire for rent. ಬಾಡಿಗೆಗೆ ಅಥವಾ ಗೇಣಿಗೆ ಕೊಡು ಅಥವಾ ತೆಗೆದುಕೊ.

Rent'al (ರೆಂಟಲ್) n. sum payable as rent. ಬಾಡಿಗೆ ಹಣ, ಕರ, ರಾಜಸ್ವ.

Renter (ರೆಂಟರ್) vt. sew together the edges of cloth without folding, ಬಟ್ಟೆಯ ಅಂಚುಗಳನ್ನು ಮಡಿಸದೆ ಹೊಲಿ.

Rentfree (ರೆಂಟ್‌ಫ್ರೀ) n. land given without rent, anything given witout rent. ಬಾಡಿಗೆಯಿಲ್ಲದ, ಕಂದಾಯವಿಲ್ಲದ.

Renuncia'tion (ರಿನನ್ಸಿಏಶನ್) n. renouncing self-denial, giving up of things. ಸನ್ಯಾಸ, ವೈರಾಗ್ಯ, ತ್ಯಾಗ, ಪರಿತ್ಯಾಗ.

Rep, repp (ರೆಪ್) n. kind of fine cotton cloth. ಒಂದು ಬಗೆಯ ಹತ್ತಿಯ ಬಟ್ಟೆ.

Repair (ರಿಪೇರ್) v. t. restore to good condition; mend. ಸರಿಮಾಡು, ಜೀರ್ಣೋದ್ಧಾರಮಾಡು, ದುರಸ್ತುಮಾಡು. n. mending. restoration to working condition. ಸರಿಪಡಿಸೋಣ, ದುರಸ್ತು, ರಿಪೇರಿ.

Rep'arable (ರಿಪೇರೆಬ್ಲ್) n. (of loss) that can be made good. (ನಷ್ಟ) ಭರ್ತಿಮಾಡಬಹುದಾದ, ಪರಿಹಾರ್ಯ.

Repara'tion (ರೆಪರೇಶನ್) n. recompense for injury, compensation, amend. ಪರಿಹಾರ, ನಷ್ಟಭರ್ತಿ, ಹಾನಿಪೂರಣ.

Repartee' (ರೆಪರ್ಟಿ) n; witty reply. ವಿನೋದ ಪ್ರತ್ಯುತ್ತರ, ಹಾಸ್ಯದ ಪ್ರತ್ಯುಕ್ತಿ.

Repast (ರಿಪಾಸ್ಟ್) n. meal, esp.one of specified quality. ಊಟ, ಭೋಜನ, ಅನ್ನ, ಅಶನ.

Repat'riate (ರಿಪೇಟ್ರಿಏಟ್) v. t. restore to one's country. ಪುನಃ ಸ್ವದೇಶಕ್ಕೆ ಹಿಂದಿರುಗಿಸು, ಮರಳಿಸು.

Repay (ರಿಪೆ) vt. & i. pay back; recompense, ತಿರುಗಿಸಿಕೊಡು, ಹಣವನ್ನು ಹಿಂದಕ್ಕೆ ಕೊಡು, ವಾಪಸುಮಾಡು, ಪ್ರತಿಯಾಗಿ ಕೊಡು, ಪ್ರತ್ಯರ್ಪಿಸು. n. repayment.

Repeal' (ರಿಪೀಲ್) v. t. annul; revoke. ರದ್ದುಮಾಡು, ಹಿಂದಕ್ಕೆತೆಗೆದುಕೊ, ತೊಡೆದುಹಾಕು.

Repeat (ರಿಪೀಟ್) v. t. & i. say or do over again, recite. ಪುನರುಚ್ಚರಿಸು, ಪುನಃಹೇಳು, ಬಾಯಿಪಾಠ ಒಪ್ಪಿಸು, ಉರುಹಾಕು.

Repeat'edly (ರಿಪೀಟೆಡ್ಲಿ) adv, several times. ಬಾರಿಬಾರಿಗೂ, ಪುನಃಪುನಃ, ಪದೇಪದೇ, ಆಗಾಗ್ಗೆ.

Repel (ರಿಪೆಲ್) vt. drive back, repulse, ward off. ಹಿಂದಕ್ಕೆ ಅಟ್ಟು, ಹಿಮ್ಮೆಟ್ಟಿಸು, ನಿವಾರಿಸು.

Repent' (ರಿಪೆಂಟ್) vt. & i. feel regret about something. ಪಶ್ಚಾತ್ತಾಪಪಡು, ವ್ಯಸನಪಡು, ಮರುಗು.

Repen'tance (ರಿಪೆನ್ಟೆನ್ಸ್) n. sorrow, penitence: ಪಶ್ಚಾತ್ತಾಪ, ವಿಷಾದ, ದುಃಖ, ಅನುತಾಪ.

Repercussion (ರಿಪರ್‌ಕರ್ಷ) n. act of driving back, reverberation, ಪ್ರತಿಧ್ವನಿ, ಪ್ರತಿಘಾತ.

Repertory(ರೆಪರ್ಟರಿ)n· store house ಭಂಡಾರ, ನಿಧಿ.

Repeti'tion (ರೆಪಿಟಿರ್ಶ) n. act of repeating· ತಿರುಗಿಮಾಡುವುದು, ಪುನರುಕ್ತಿ, ಪುನರಾವೃತ್ತಿ.

Repine' (ರಿಪೈನ್) vt. fret, be discontented. ಅಸಮಾಧಾನಪಡು, ಕೊರಗು, ಚಡಪಡಿಸು, ಸಿಡಿಮಿಡಿಗೊಳ್ಳು.

Replace' (ರಿಪ್ಲೇಸ್) v. t. place back; take place of. ಮುಂಚಿನ ಸ್ಥಳದಲ್ಲಿಡು, ಬದಲಾಗಿಬರು, ತರು, ಭರ್ತಿಮಾಡು, ಪ್ರತಿನಿಧಿ ಕೊಡು.

Replenish (ರಿಪ್ಲೆನಿಶ್) v. t. fill up again. ಮತ್ತೆ ತುಂಬು, ಭರ್ತಿಮಾಡು.

Replete (ರಿಪ್ಲೀಟ್)a. full, abounding ತುಂಬಿದ, ಭರಿತ, ಚೆನ್ನಾಗಿ ತುಂಬಿಟ್ಟಿರುವ, ಪರಿಪೂರಿತ, ಮಯ.

Replica (ರೆಪ್ಲಿಕ) n. duplicate of a picture or piece of sculpture by the artist himself. ಮೂಲ ಕಲೆಗಾರನೇ ನಿರ್ಮಿಸಿದ ಮೂಲಚಿತ್ರ.

Reply' (ರಿಪ್ಲೈ) v. t. & i. answer, respond. ಉತ್ತರಕೊಡು, ಜವಾಬುಕೊಡು. n response. ಉತ್ತರ, ಜವಾಬು, ಪ್ರತಿವಚನ, ಪ್ರತಿವಾದ.

Report (ರಿಪೋರ್ಟ್) v. t. & i. give account of, tell as news, make official or formal statement, inform against. ವರದಿಮಾಡು, ಸುದ್ದಿ ತಿಳಿಸು, ಅಧಿಕಾರಯುಕ್ತವಾದ ಸುದ್ದಿ ಪ್ರಕಟಿಸು, ದೂರು ಹೇಳು. n. common talk, rumour, repute, formal official statement. sound of explosion. ಸುದ್ದಿ, ಗಾಳಿವರ್ತಮಾನ, ಹೆಸರು, ಖ್ಯಾತಿ, ವಿಚಾರಣೆಮಾಡಿದಮೇಲೆ ಕೊಟ್ಟ ವರದಿ, ಸಿಡಿತದ ಸದ್ದು, ಶಬ್ದ.

Report'er (ರಿಪೋರ್ಟರ್) n. one who reports esp. for a newspaper. ಸುದ್ದಿಗಾರ, ವರದಿಗಾರ, ಬಾತ್ಮಿದಾರ.

Repose' (ರಿಪೋಜ್) vt. & i. place (trust, &c.) in, give rest to, be lying or laid, ವಿಶ್ರಾಂತಿಗಾಗಿ ಇಡು, ನಂಬಿಕೆ ಇಡು, ವಿಶ್ರಾಂತಿಕೊಡು, ಒರಗಿಸು, ಮಲಗು. n. rest. sleep, quiet, rest of mind. ವಿಶ್ರಾಂತಿ, ಆರಾಮು, ನಿದ್ರೆ, ಶಾಂತತೆ, ವಿರಾಮ.

Repos'itory (ರಿಪಾಜಿಟರಿ) n. a place where things are stored. ಭಂಡಾರ, ಕೋಠಿ, ಉಗ್ರಾಣ, ಆಗಾರ, ಆಶ್ರಯ, ಆಧಾರ.

Reprehend (ರೆಪ್ರಿಹೆಂಡ್)vt. rebuke, censure. ದೂರು, ತೆಗಳು, ಆಕ್ಷೇಪಿಸು, ಸಿಟ್ಟುಮಾಡು.

Reprehen'sible (ರೆಪ್ರಿಹೆನ್ಸಿಬ್ಲ್) a. blameworthy. ದೂಷಣೀಯ, ಖಂಡನಾರ್ಹ.

Reprehen'sion (ರೆಪ್ರಿಹೆನ್‌ಶನ್) n. blame; censure. ನಿಂದೆ, ಆಕ್ಷೇಪಣೆ, ದೂಷಣೆ.

Represent' (ರೆಪ್ರೆಸೆಂಟ್)v. t. depict as; play (character), stand for ತಿಳಿಯಹೇಳು, ತೋರಿಸು, ಚಿತ್ರಿಸು, ಪ್ರತಿನಿಧಿಯಾಗಿರು, ಪರವಾಗಿ ನಿಲ್ಲು.

Representa'tion (ರೆಪ್ರೆಸೆಂಟೇಶನ್) n. esp. a calling of attention to something; image; picture. ಪ್ರದರ್ಶನ ವರ್ಣನೆ, ನಿರೂಪಣೆ, ಚಿತ್ರ, ಬಿಂಬ.

Representative (ರಿಪ್ರಿಸೆಂಟೇಟಿವ್) n. specimen, deputy. ಮಾದರಿ, ಆದರ್ಶಭೂತ, ಪ್ರತಿನಿಧಿ, ಪ್ರತಿಪುರುಷ, ಕಾರ್ಯಭಾರಿ.

Repress (ರಿಪ್ರೆಸ್) vt. quell, suppress. ಜಗಿಹಿಡಿ, ದಮನಮಾಡು, ತಡೆಗಟ್ಟು, ಅದುಮು, ನಿಗ್ರಹಿಸು. n. repression.

Reprieve' (ರಿಪ್ರೀವ್) vt. suspend the execution of criminal. ಶಿಕ್ಷೆ ತಡಮಾಡು, ಗಲ್ಲಿಗೇರಿಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸು, ವಿಳಂಬಮಾಡು.

Rep'rimand (ರೆಪ್ರಿಮಾಂಡ್) n. official reproof. ಗದರಿಕೆ, ಖಂಡನೆ, ಆಕ್ಷೇಪಣೆ, ತಾಕೀದು. vt chide ವಾಗ್ದಂಡನೆ ಮಾಡು, ಖಂಡನೆಮಾಡು, ಛೀಮಾರಿಮಾಡು.

Reprint (ರೀಪ್ರಿಂಟ್) vt. print again print a new impression of. ಪುನಃ ಛಾಪಿಸು, ಎರಡನೇ ಆವೃತ್ತಿ ಮುದ್ರಿಸು.

Repris'al (ರಿಪ್ರೈಸಲ್) n. retaliation. ಪ್ರತಿಪೀಡೆ, ಪ್ರತ್ಯಪಹರಣ.

Reproach' (ರಿಪ್ರೋಚ್) vt. upbraid, scold. ದೂರು, ನಿಂದಿಸು, ತೆಗಳು, ಖಂಡಿಸು, ಬೈಯು.

Rep'robate (ರೆಪ್ರೊಬೇಟ್) vt. disapprove, censure ಅಸಮ್ಮತಿತೋರು, ಖಂಡಿಸು, ವಾಗ್ದಂಡನೆಮಾಡು a hardened in sin ಪರಮ ಪಾಪಾತ್ಮ, ಅಧಮ n. profligate. ಪರಮಪಾಪಿ. n. reprobation. ಅತಿದುಷ್ಟತೆ.

Reproduce (ರಿಪ್ರೊಡ್ಯೂಸ್) vt. & i. produce again a copy of ಪುನರುತ್ಪತ್ತಿಸು, ಹುಟ್ಟಿಸು, ರೂಪಿಸು, ಇದ್ದಂತೆ ಹೇಳು.

Reproduc'tion (ರಿಪ್ರೊಡಕ್ಷನ್) n. esp. act of reproducing. generation, a copy. ಪ್ರಜೋತ್ಪಾದನೆ, ಅನುಕರಣ, ನಕಲು, ಪ್ರತಿ.

Reproof (ರಿಪ್ರೂಫ್) n. rebuke, censure. ಆಕ್ಷೇಪಣೆ, ಗದರಿಕೆ, ವಾಗ್ದಂಡನೆ.

Reprove' (ರಿಪ್ರೂವ್) vt. rebuke blame. ದೂರಿ ಮಾತಾಡು, ಆಕ್ಷೇ
ತೆಗಳು, ದೂಷಿಸು.

Reptant (ರೆಪ್ಟಂಟ್) a. creepin
ನೆಲದಮೇಲೆ ಹಬ್ಬುವ.

Rep'tile (ರೆಪ್ಟೈಲ್) n. crawli
animal. ಹರಿದಾಡುವ ಜಂತು,

Repub'lic (ರಿಪಬ್ಲಿಕ್) n. comm
wealth of people. ಪ್ರಜಾಧಿಪ
ಪ್ರಜಾಪ್ರಭುತ್ವ.

Repub'lican (ರಿಪಬ್ಲಿಕನ್) n. agre
able to the principles of repu
lic. ಪ್ರಜಾಪ್ರಭುತ್ವದ. n. democr
ಪ್ರಜಾಧಿಪತ್ಯವಾದಿ, ಪ್ರಜಾಪ್ರಭುತ್ವವಾ

Repud'iate (ರಿಪ್ಯೂಡಿಏಟ್) vt. &
disown, disavow, deny. ಬಿ
ಬಿಡು, ಪರಿತ್ಯಾಗಮಾಡು, ನಿರಾಕರಿಸು, ಒ
ಕೊಳ್ಳದಿರು, ತನ್ನದಲ್ಲವೆನ್ನು, ತೊರೆ, ತ್ಯ
ಜಿಸು.

Repugn (ರಿಪ್ಯೂನ್) vt. & i. of
opposition, strive against.
ರಿಸು, ವಿರೋಧಿಸು.

Repugnance (ರಿಪಗ್ನನ್ಸ್) n. av
sion. ವಿರೋಧ, ಅಪ್ರಿಯತೆ, ದ್ವೇ
ವಿರಕ್ತಿ, ಅನಿಚ್ಛೆ.

Repug'nant (ರಿಪಗ್ನಂಟ್) a. adv
se; distasteful hostile. ವಿರು
ಅಸಹ್ಯವಾದ, ಅಪ್ರಿಯವಾದ, ಪ್ರತಿಕೂ
ವಿಪರೀತ, ವಿಮುಖ.

Repullulate (ರಿಪುಲ್ಯುಲೇಟ್)
shoot out again. ಮತ್ತೆ ಅಂಕುರಿ

Repulse' (ರಿಪಲ್ಸ್) vt. drive ba
rebuff; reject ಹಿಂದಕ್ಕೋಡಿಸು,
ಸ್ಕರಿಸು, ಹಿಮ್ಮೆಟ್ಟಿಸು, ಅಲ್ಲಗಳೆ, ನಿ
ರಿಸು, ಭಂಜಿಸು.

Repul'sion (ರಿಪಲ್ಷನ್) n. aversi
ವಿರೋಧ, ಅಸಹನೆ, ನಿರಾಕರಣೆ,
ಘಾತ.

Repul'sive (ರಿಪಲ್ಸಿವ್) a. loa
some. ಅಸಹ್ಯಕರ, ಹೇಸಿಕೆಯ, ಹ
ಬರಗೊಡಿಸದ, ಹೊಲಸು, ಅಪ್ರಿಯ.

Rep'utable (ರೆಪ್ಯೂಟಬ್ಲ್) a. of good repute. ಪ್ರಖ್ಯಾತ, ಹೆಸರುವಾಸಿಯಾದ.

Reputation (ರೆಪ್ಯೂಟೇಶನ್) n. character in public opinion. ಸತ್ಕೀರ್ತಿ, ಪ್ರಸಿದ್ಧಿ, ಯಶಸ್ಸು, ಖ್ಯಾತಿ, ಪ್ರತಿಷ್ಠೆ, ಗೌರವ.

Repute' (ರೆಪ್ಯೂಟ್) n. reputation. ಕೀರ್ತಿ, ಪ್ರಖ್ಯಾತಿ.

Request (ರಿಕ್ವೆಸ್ಟ್) n. petition, prayer, desire; demand. ಕೋರಿಕೆ, ಬಿನ್ನಹ, ಬೇಡಿಕೆ, ಪ್ರಾರ್ಥನೆ. vt. entreat, ask for earnestly. ಪ್ರಾರ್ಥಿಸು, ಬೇಡಿಕೊ, ಕೋರು, ಯಾಚಿಸು.

Req'uiem (ರೆಕ್ವಿಎಮ್) n. mass for the dead. ಶೋಕಗೀತೆ, ಚರಮಶ್ಲೋಕ, ಪ್ರೇತಶಾಂತಿ ಮಂತ್ರ.

Require (ರಿಕ್ವಾಯರ್) vt. ask for, demand, order, need ಬೇಡು, ಅಪೇಕ್ಷಿಸು, ಕೋರು, ವಿಜ್ಞಾಪಿಸು, ಅವಶ್ಯಕವಾಗಿರು.

Require'ment (ರಿಕ್ವಾಯರ್‌ಮೆಂಟ್) n. thing needed. ಅಗತ್ಯ, ಅವಶ್ಯಕ ವಸ್ತು, ಬೇಕಾದದ್ದು.

Req'uisite (ರಿಕ್ವಿಜಿಟ್) a. needed. ಅವಶ್ಯಬೇಕಾದ, ಅಗತ್ಯಬೇಕಾಗಿರುವ.

Requisition (ರಿಕ್ವಿಜಿಶನ್) n. a written request or invitation. ಕೆಲಸ ಮಾಡಲು ವಿನಂತಿ, ಕೋರಿಕೆ.

Requite' (ರಿಕ್ವೈಟ್) vt. repay, retaliate. ಪ್ರತಿಫಲವಾಗಿ ಕೊಡು, ಮರಳಿಸು, ಪ್ರತೀಕಾರಮಾಡು, ಪ್ರತಿಯಾಗಿಕೊಡು.

Rescind' (ರಿಸಿಂಡ್) vt. annul, repeal. ರದ್ದುಮಾಡು, ವಜಾಮಾಡು, ವಾಪಸು ತೆಗೆದುಕೊ.

Res'cript (ರೀಸ್ಕ್ರಿಪ್ಟ್) n. edict or decree. ರಾಜಾಜ್ಞೆ, ಶಾಸನ, ಘೋಷಣೆ, ಹುಕುಂ.

Res'cue (ರೆಸ್ಕ್ಯೂ) vt. deliver, liberate. ಬಿಡಿಸು, ಕಾಪಾಡು, ತಪ್ಪಿಸು, ರಕ್ಷಿಸು n. deliverance, release. ರಕ್ಷಣೆ; ಉದ್ಧಾರ, ಬಿಡುಗಡೆ.

Research' (ರಿಸರ್ಚ್) n. a careful search, scrutiny. ಪರಿಶೋಧನೆ, ಸಂಶೋಧನೆ, ಅನ್ವೇಷಣೆ.

Resect (ರಿಸೆಕ್ಟ್) vt. cut down. ಹೆರೆದುಹಾಕು.

Resemble (ರಿಸೆಂಬ್ಲ್) vt. be similar to, have the likeness of. ಅನುರೂಪವಾಗಿರು, ಅಂತೆ ಇರು, ಹೋಲು. n. resemblance.

Resent (ರಿಸೆಂಟ್) v. t. show or feel indignation at. ರೇಗು, ತೀವ್ರ ಅಸಮಾಧಾನಪಡು, ಕೋಪಿಸಿಕೊ, ರೋಷಗೊಳ್ಳು.

Reserva'tion (ರಿಸರ್ವೇಶನ್) n. reserve, express or tacit limitation. ಕಾಪಾಡಿರುವುದು, ಮೀಸಲಾಗಿಡುವುದು ಪರಿಮಿತಿ, ಉಪಾಧಿ, ಗಾಂಭೀರ್ಯ, ಅಪವಾದ, ವ್ಯಾವೃತ್ತಿ.

Reserve (ರಿಸರ್ವ್) vt. keep back; retain possession. ಇಟ್ಟುಕೊಳ್ಳು, ಕಾಯ್ದಿಡು, ಮೀಸಲಾಗಿಡು, ವಶದಲ್ಲಿಟ್ಟುಕೊಳ್ಳು. n. something reserved for wild animals, troops held in reserve. ಮುಂದಿನ ಪ್ರಯೋಜನಕ್ಕಾಗಿ ಕಾದಿಟ್ಟ ಅರಣ್ಯ, ಕಾದಿಟ್ಟ ಹಣ, ಕಾದಿಟ್ಟ ಕಾಡು, ಕಾಯ್ದಿಟ್ಟಿರುವ ಸೈನ್ಯ.

Reserved (ರಿಸರ್ವ್ಡ್) a. reticent, uncommunicative. ಹೆಚ್ಚಾಗಿ ಮಾತನಾಡದ, ಸಂಕೋಚದ, ಸಲಿಗೆ ಕೊಡದ, ಮನೋಭಾವ ತಿಳಿಸದ.

Reserv'edly (ರಿಝರ್ವ್ಡ್ಲಿ) adv. guardedly, without openness. ಜಾಗರೂಕನಾಗಿ, ಸಂಕೋಚದಿಂದ, ಸಾವಧಾನವಾಗಿ.

Res'ervoir (ರೆಝರ್ವಾಯರ್) n. a place where anything is kept in store, large cistern. ಕುಂಡ, ಕೊಳ, ಕೆರೆ, ಕಲ್ಯಾಣಿ, ದ್ರವಕೋಶ, ಜಲಾಶಯ, ಭಂಡಾರ.

Reset (ರೀಸೆಟ್) vt. & i. receive stolen goods, set again. ಕಳ್ಳತನದ

ಮೂಲನ್ನು ಸ್ವೀಕರಿಸು, ರತ್ನ ಮುಂತಾದುವನ್ನು ಮತ್ತೆ ಕೇವಣಿಸು.

Resid'e (ರಿಸೈಡ್) vt. dwell permanently, live. ಇರು, ವಾಸವಾಗಿರು, ವಾಸಿಸು, ನೆಲಸಿರು.

Residence (ರೆಸಿಡೆನ್ಸ್) n. dwelling place, abode. ವಾಸಸ್ಥಾನ, ನಿವಾಸ, ಮನೆ ವಾಸ, ವಸತಿ.

Residency (ರೆಸಿಡೆನ್ಸಿ) n. residency of British political agent, residence. ಆಶ್ರಿತ ರಾಜ್ಯಗಳಲ್ಲಿ ಬ್ರಿಟಿಷ್ ಸರ್ಕಾರದ ಪ್ರತಿನಿಧಿಯ ವಾಸಸ್ಥಾನ, ಭವನ, ವಾಸಸ್ಥಾನ, ಮನೆ.

Resi'dent (ರೆಸಿಡೆನ್ಟ್) n. permanent inhabitant, British political agent. ವಾಸವಾಗಿರುತ್ತಿರುವ, ಸ್ಥಳದಲ್ಲೇ ವಾಸಿಸುವ, ಬ್ರಿಟಿಷ್ ರಾಜಪ್ರತಿನಿಧಿ, "ರೆಸಿಡೆಂಟ್".

Residential (ರೆಸಿಡೆನ್ಷಲ್) a pertaining to residence. ವಾಸಕ್ಕೆ ಸಂಬಂಧಿಸಿದ.

Residual (ರೆಸಿಡ್ಯುಅಲ್) a. left after a part has been taken away. ಕಳೆದುಳಿದ, ಮಿಕ್ಕಿರುವ.

Resi'due (ರೆಸಿಡ್ಯೂ) n the remainder ಉಳಿದದ್ದು, ಉಳಿಕೆ, ಶಿಲ್ಕು, ಶೇಷ.

Residuum (ರೆಸಿಡ್ಯುಅಂ) n. residue. ಉಳಿದದ್ದು, ಶೇಷ.

Resign (ರಿಸೈನ್) vt. & i. relinquish, reconcile (oneself) to. ಬಿಟ್ಟುಕೊಡು, ತ್ಯಜಿಸು, ರಾಜೀನಾಮೆಕೊಡು, ಸಮಾಧಾನಹೊಂದು, ನಿವೃತ್ತನಾಗು.

Resignation (ರೆಸಿಗ್ನೇಷನ್) n. the act of giving up, patience. ಬಿಟ್ಟುಕೊಡುವುದು, ರಾಜೀನಾಮೆ, ತಾಳ್ಮೆ, ಸಮಾಧಾನ.

Res'in (ರೆಜಿನ್) n. adhesive substance exuding from some plants. ಮರದ ಅಂಟು, ಅಂಟು ಪದಾರ್ಥ, ಗುಗ್ಗುಳ, ರಾಳ.

Resipiscence (ರೆಸಿಪಿಸೆನ್ಸ್) n. acceptance of one's error. ತನ್ನ ತಪ್ಪು ತನಗೆ ಅರಿವಾಗುವುದು.

Resist' (ರಿಜಿಸ್ಟ್) vt. & i. oppose, make opposition. ಅಡ್ಡಿಮಾಡು, ತಡೆಗಟ್ಟು, ವಿರೋಧಿಸು, ಹೋರಾಡು, ಪ್ರತಿಭಟಿಸು, ಪ್ರತ್ಯಾಘಾತಮಾಡು.

Resist'ance (ರೆಜಿಸ್ಟೆನ್ಸ್) n. opposition; stopping effect. ಎದುರಿಸುವಿಕೆ. ಪ್ರತಿಭಟನೆ, ವಿರೋಧಶಕ್ತಿ, ಪ್ರತಿರೋಧಶಕ್ತಿ, ಪ್ರತ್ಯಾಘಾತ.

Res'olute (ರೆಜೊಲ್ಯೂಟ್) a. determined, firm of purpose. ದೃಢನಿಶ್ಚಯದ, ದೃಢಸಂಕಲ್ಪದ, ಧೀರ, ಸಂಕಲಸಿದ್ಧ.

Resolu'tion (ರೆಜೊಲೂಷನ್) n. fixed determination, steadiness, thing resolved on, expression of opinion of meeting. ಸಂಕಲ್ಪ, ತೀರ್ಮಾನ, ದೃಢಮನೋಭಾವ, ದೃಢನಿರ್ಧಾರ, ಠರಾವು, ನಿರ್ಣಯ.

Resolve' (ರಿಜಾಲ್ವ್) vt. & i. break up into parts, solve, settle, decide upon, pass; vote by resolution ಕರಗಿಸು, ವಿಘಟಿಸು, ವಿಶ್ಲೇಷಿಸು, ನಿರ್ಧರಿಸು, ಕರಗು, ನಿಶ್ಚಯಮಾಡು. ಬಹುಮತದಿಂದ ನಿರ್ಣಯಿಸು, ಠರಾವುಮಾಡು.

Resonance (ರೆಸೊನೆನ್ಸ್) n. echo. ಪ್ರತಿಧ್ವನಿ, ಪ್ರತಿಕಂಪನ.

Res'onant (ರೆಜೊನಂಟ್) a. echoing, resounding, vibrating. ಪ್ರತಿಧ್ವನಿತನಾಗುವ, ಮಾರ್ದನಿ ಬರುತ್ತಿರುವ, ಪ್ರತಿನಾದಿತ, ಅನುನಾದದ.

Resonator (ರೆಸೊನೇಟರ್) n. instrument for giving resonance to sounds. ಅನುನಾದಕ, ಅನುರಣನ ಕೊಡುವ ಸಲಕರಣೆ.

Resorb (ರಿಸಾರ್ಬ್) vt. absorb again ಹೀರಿಬಿಡು.

Resort' (ರಿಸಾರ್ಟ್) vt. (with to) adopt as expedient or method.

go to (person) for aid or advice, frequent. ಉಪಾಯ ಯೋಚಿಸು, ಸಹಾಯಕ್ಕಾಗಿ ಹೋಗು, ಆಶ್ರಯಿಸು, ಅವಲಂಬಿಸು, ಪದೇ ಪದೇ ಹೋಗು. n. recourse, place much frequented, a haunt. ಆಶ್ರಯಸ್ಥಾನ, ಜನರು ಹೋಗಿಬರುವ ಸ್ಥಳ, ಪ್ರವಾಸಸ್ಥಳ, ಸುಳಿದಾಟ.

Resound (ರಿಸಾವುಂಡ್) vi. echo, (of fame &c.) be much talked of. ಪ್ರತಿಧ್ವನಿತವಾಗು, ಪ್ರತಿಧ್ವನಿಕೊಡು, ಕೀರ್ತಿಕೊಂಡಾಡು.

Resource' (ರಿಸೊಅರ್ಸ್) n. plu. means supplying a want; stock that can be drawn on; expedient. ಆಶ್ರಯ, ಸಾಧನೋಪಾಯ, ಬೇಕಾದ್ದನ್ನು ಒದಗಿಸುವ ಸಾಧನ, ಬುದ್ಧಿ ಚುರುಕು, ಆಧಾರ, ಆಕಾರ.

Respect' (ರಿಸ್ಪೆಕ್ಟ್) n. regard, esteem (plu.) attention conveying message sent or regard to; reference or relation to. ಸನ್ಮಾನ, ಮರ್ಯಾದೆ, ಗೌರವ, (ಬ. ವ.) ನಮಸ್ಕಾರ, ವಂದನೆ, ಅಂಶ, ಸಂಬಂಧ. v. t. regard with deference; treat with consideration. ಸನ್ಮಾನಿಸು, ಗೌರವಿಸು, ಮನ್ನಣೆ ತೋರು, ಮಾನ್ಯ ಮಾಡು.

Respectable (ರಿಸ್ಪೆಕ್ಟೆಬಲ್) a. worthy of respect: of some amount, size or merit. ಆದರಣೀಯ, ಗಣ್ಯ, ಗೌರವಾರ್ಹ, ಮಾನ್ಯ, ದೊಡ್ಡ, ಸುಪ್ರತಿಷ್ಠ, ಪೂಜ್ಯ.

Respect'ful (ರಿಸ್ಪೆಕ್ಟ್‌ಫುಲ್) a. full of respect. ವಿನಯಶೀಲ, ಆದರಶೀಲ.

Respective (ರಿಸ್ಪೆಕ್ಟಿವ್) a. proper to each, individual. ಅವರವರ, ನಮ್ಮನಮ್ಮ, ನಿಮ್ಮನಿಮ್ಮ, ಅವರವರ, ಅನುಕ್ರಮವಾದ, ವೈಯಕ್ತಿಕ, ಸಾಪೇಕ್ಷ, ಅನ್ಯೋನ್ಯ.

Resperse (ರಿಸ್ಪರ್ಸ್) vt. sprinkle. ಚುಮುಕಿಸು.

Respira'tion (ರಿಸ್ಪಿರೇಶನ್) n. breathing. ಉಸಿರಾಟ, ಶ್ವಾಸೋಚ್ಛ್ವಾಸ ಕ್ರಿಯೆ.

Respire (ರಿಸ್ಪಾಯರ್) vt. & i. breathe, take breath. ಶ್ವಾಸಬಿಡು, ಉಸಿರಾಡು.

Res'pite (ರಿಸ್ಪೈಟ್) n. temporary cessation of anything, pause; interval of rest, (law) temporary suspension of the execution of the criminal. ಕಾಲಾವಕಾಶ, ವ್ಯವಧಾನ, ಬಿಡುವು, ವಿರಾಮ, ಗಲ್ಲು ಶಿಕ್ಷೆ ನಿಲ್ಲಿಸುವುದು.

Resplen'dent (ರೆಸ್‌ಪ್ಲೆಂಡೆಂಟ್) a. very splendid, brilliant. ಹೊಳೆಯುವ, ಪ್ರಕಾಶಮಾನವಾದ, ಉಜ್ವಲ, ಅತಿತೇಜಸ್ವಿ.

Respond' (ರೆಸ್ಪಾಂಡ್) vi. answer; show sensitiveness to (action. stimulus) by change, &c. ಜವಾಬು ಕೊಡು, ಪ್ರತ್ಯುತ್ತರ ಕೊಡು, ಪ್ರತಿಕ್ರಿಯೆ ತೋರು, ಹೊಂದಿಕೆಯಾಗು.

Respon'dent (ರೆಸ್ಪಾಂಡೆಂಟ್) n. defendant in a law suit. ಪ್ರತಿವಾದಿ.

Response' (ರೆಸ್ಪಾನ್ಸ್) n. answer given in word or act, feeling or movement elicited by stimulus. ಜವಾಬು, ಪ್ರತಿಕ್ರಿಯೆ, ಪ್ರತ್ಯುತ್ತರ, ಪ್ರತಿವಾದ, ಚಲನೆ.

Responsibility (ರೆಸ್ಪಾನ್ಸಿಬಿಲಿಟಿ) n. being responsible, trust, charge. ಹೊಣೆ, ಜವಾಬ್ದಾರಿ, ಉತ್ತರವಾದಿತ್ವ.

Respon'sible (ರೆಸ್ಪಾನ್ಸಿಬಲ್) a. answerable, of good credit or position, trustworthy. ಹೊಣೆಯುಳ್ಳ, ಜವಾಬ್ದಾರನಾದ, ಗೌರವಾರ್ಹ, ಉತ್ತರವಾದಿಯಾದ.

Rest (ರೆಸ್ಟ್) v. i. & t. be still, lie in sleep or death, give relief, rely on, repose, trust in. ವಿಶ್ರಮಿಸಿಕೊ, ದಣಿವಾರಿಸಿಕೊ, ನಿಶ್ಚಲವಾಗಿರು, ನಿದ್ರೆಮಾಡುತ್ತಿರು, [illegible], ಆಧಾರಪ

ಸೋಲಿ ನಿಂತಿರು, ನೆಚ್ಚಿರು, ವಿಶ್ರಾಂತನಾಗಿರು, ಅವಲಂಬಿಸಿರು. n. repose, sleep, resting, support, what remains, the other. ವಿಶ್ರಾಂತಿ, ನಿದ್ದೆ, ವಿರಾಮ, ಆರಾಮ, ಆಸಿಕೆ, ಊರೆ, ಉಳಿದವರು, ಮಿಕ್ಕವರು r. with. depend on (upon.) ಕಡೆಗಿಡು, ಅವಲಂಬಿಸಿರು. r. on one's oars, see oar.

Restate (ರಿಸ್ಟೇಟ್) vt. state again. ಮತ್ತೆ ಪುನಃ ಹೇಳು.

Restatement (ರಿಸ್ಟೇಟ್‌ಮೆಂಟ್) n. making a statement a second time. ತಿರುಗಿ ಹೇಳಿಕೊಡು.

Restaurant (ರೆಸ್ಟಾರೆಂಟ್) n. place where refreshments can be had. ಉಪಾಹಾರಗೃಹ, ಫಲಾಹಾರ ಮಂದಿರ, ಭೋಜನ ಮಂದಿರ.

Restiform (ರೆಸ್ಟಿಫಾರ್ಮ್) a. formed like a rope. ಹಗ್ಗದ ಆಕಾರದ.

Restitution (ರೆಸ್ಟಿಟ್ಯೂಷನ್) n. reparation, restoring of property, &c. to its owner. ಹಿಂದಕ್ಕೆ ಕೊಡುವುದು. ಪುನಃ ವಶಮಾಡುವುದು, ಪ್ರತಿದಾನ, ನಷ್ಟ ಪರಿಹಾರ ಕೊಡುವುದು.

Res'tive (ರೆಸ್ಟಿವ್) a. (of horse) jibbing, refractory, (of person) fretful or obstinate. ಅಗಡಿನ, ಮೊಂಡಾಟದ, ತುಂಟ, ಮೊಂಡುಬಿರ, ಹಟಮಾರಿ.

Restless (ರೆಸ್ಟ್‌ಲೆಸ್) a. fidgety, nervous, impatient. ಅಸ್ಥಿರ, ಅಶಾಂತ, ಚಂಚಲ.

Restoration (ರೆಸ್ಟೊರೇಷನ್) n. recovery, act of restoring. ಕ್ಷೇಮಲಾಭ, ಯಥಾಸ್ಥಾಪನೆ, ತಿರುಗಿಕೊಡುವುದು, ಪುನಃಸ್ಥಾಪನೆ.

Restorative (ರೆಸ್ಟೊರೇಟಿವ್) n. medicine which restores strength and health. ಮೊದಲಿನ ಶಕ್ತಿಯನ್ನು ಆರೋಗ್ಯವನ್ನು ಕೊಡುವ ಆಹಾರ, ಔಷಧಿ.

Restore' (ರೆಸ್ಟೋರ್) v. t. give back, make restitution of, replace, re-establish. ಹಿಂದಕ್ಕೆ ಕೊಡು, ಪುನಃ ವಶಕ್ಕೆ ಕೊಡು, ವಾಪಸುಮಾಡು, ಗುಣಪಡಿಸು.

Restrain' (ರಿಸ್ಟ್ರೇನ್) v. t. check; hold back, confine. ಅಂಕೆಯಲ್ಲಿಡು, ನಿಗ್ರಹಿಸು, ನಿರೋಧಿಸು, ಎಲ್ಲೆಯಲ್ಲಿಡು, ತಡೆ.

Restrainer (ರಿಸ್ಟ್ರೇನರ್) n. something that checks. ನಿರ್ಬಂಧಕ.

Restraint (ರಿಸ್ಟ್ರೇನ್ಟ್) n. check, confinement, self-control. ಅಂಕೆ, ಹತೋಟಿ, ನಿರ್ಬಂಧ, ಆತ್ಮಸಂಯಮ, ಅಡ್ಡಿ, ತಡೆ.

Restrict' (ರಿಸ್ಟ್ರಿಕ್ಟ್) v. t limit, confine bound ಮಿತಿಗೊಳಿಸು, ನಿರ್ಬಂಧಿಸು, ಅಳವಡಿಸು, ಆಟೋಪದಲ್ಲಿಡು, ಕಟ್ಟುಪಡಿಸು.

Restric'tion (ರಿಸ್ಟ್ರಿಕ್ಷನ್) n. something that limits action ನಿಯಮ, ಕಟ್ಟು, ನಿರ್ಬಂಧ, ಇಯತ್ತೆ, ಅವಧಿ.

Result' (ರಿಝುಲ್ಟ್) v. i following as a consequence; and in specified way. ಫಲಿಸು, ಉದ್ಭವಿಸು, ಸಿದ್ಧಿಸು. n. consequence; issue, product of calculation. ಪರಿಣಾಮ, ಫಲಿತಾಂಶ, ಪರ್ಯವಸಾನ.

Resultant (ರಿಸಲ್ಟೆಂಟ್) a. following a result. ಪರಿಣಾಮ ಸ್ವರೂಪವಾದ.

Resume (ರಿಜ್ಯೂಮ್) vt. & i. take again or back, begin again. ಹಿಂದಕ್ಕೆ ತೆಗೆದುಕೊ, ಮತ್ತೆ ಪ್ರಾರಂಭಿಸು.

Resumption (ರಿಸಂಪ್ಷನ್) n. the act of resuming, recommencing. ಹಿಂದಕ್ಕೆ ತೆಗೆದುಕೊಳ್ಳುವಿಕೆ, ಪುನಃ ಪ್ರಾರಂಭ.

Resurge (ರಿಸರ್ಜ್) vi. rise again, revive. ಪುನರುತ್ಥಾನವಾಗು.

Resurgent (ರಿಸರ್ಜೆಂಟ್) a. rising again from death. ಪುನರುಜ್ಜೀವಿತ.

Resurrec'tion (ರಿಸರೆಕ್ಷನ್) n. the coming to life at the last day, revival from disease, &c. ಸತ್ತು ತಿರುಗಿ ಏಳೋಣ, ಪುನರುಜ್ಜೀವನ.

Resus'citate (ರಿಸಸ್ಸಿಟೇಟ್) vt. & i. revive; awake and come to life again. ತಿರುಗಿ ಬದುಕಿಸು, ಪುನರುಜ್ಜೀವನಗೊಳ್ಳು, ಪುನಃ ಚೇತಸಂಯುತನಾಗು. n. resuscitation.

Ret (ರೆಟ್) vt. soak, steep. ನೆನೆಸು, ತೊಯ್ಯುವಂತೆಮಾಡು.

Retail (ರಿಟೇಲ್) n. sale of goods in small quantities. ಚಿಲ್ಲರೆ ವ್ಯಾಪಾರ. adv. by retail. ಚಿಲ್ಲರೆಯಾಗಿ. v. t. & i. (ರಿಟೇಲ್) sell in small quantites. ಚಿಲ್ಲರೆ ವ್ಯಾಪಾರ ಮಾಡು.

Retain' (ರಿಟೇನ್) vt. keep possession of, keep in mind or in pay. ಇಟ್ಟುಕೊ, ನಿಲ್ಲಿಸಿಕೊ, ಮನಸ್ಸಿನಲ್ಲಿಡು.

Retake (ರಿಟೇಕ್) v. recapture, take again. ತಿರುಗಿಪಡೆ, ಮತ್ತೊಮ್ಮೆ ಹೊಂದು.

Retali'a'te (ರಿಟ್ಯಾಲಿಏಟ್) vi. & t. return like. ಪ್ರತೀಕಾರಮಾಡು, ಸೇಡು ತೀರಿಸಿಕೊ.

Retalia'tion (ರಿಟ್ಯಾಲಿಏಶನ್) n. act of retaliating, retribution. ಪ್ರತಿಹಿಂಸೆ, ಪ್ರತೀಕಾರ, ಸೇಡುತೀರಿಸಿಕೊಳ್ಳೋಣ.

Retard' (ರಿಟಾರ್ಡ್) v. t. make slow, delay, deter. ನಿಧಾನಗೊಳಿಸು, ವಿಳಂಬಮಾಡು, ತಡೆಮಾಡು.

Retch (ರೆಚ್) v. i. vomit. ವಾಂತಿಮಾಡು, ವಾಕರಿಸು.

Reten'tion (ರಿಟೆನ್ಶನ್) n. retaining. ಧಾರಣಶಕ್ತಿ, ಸ್ತಂಭನ ನಿರೋಧ.

Reten'tive (ರಿಟೆಂಟಿವ್) a having power to retain. ಹಿಡಿಕೊಳ್ಳುವ, ಸ್ತಂಭಕ, ಧಾರಣಕ್ಷಮ, ಬಂಧಕ.

Ret'icense (ರಿಟಿಸೆನ್ಸ್) n. reserve in speech. ಸುಮ್ಮನಿರುವುದು, ಮೌನ.

Reticent (ರೆಟಿಸೆಂಟ್) a. reserved, uncommunicative. ಸುಮ್ಮನಿರುವ, ಮೌನವಾದ.

Ret'icule (ರಿಟಿಕ್ಯೂಲ್) n. lady's netted or other bag. ಹೆಂಗಸರ ಸಣ್ಣ ಚೀಲ, ಸಣ್ಣ ಹಸಿಬೆ ಚೀಲ.

Retiform (ರೆಟಿಫಾರ್ಮ್) a. of the form of a net. ಬಲೆಯಾಕಾರದ.

Ret'inue (ರೆಟಿನ್ಯೂ) n. a person's suite of attendants. ಪರಿವಾರ, ಸೇವಕರ ತಂಡ.

Retire' (ರಿಟ್ಯಾರ್) v. i. & t. draw back, retreat, withdraw from society, go to bed ಹಿಂದಕ್ಕೆ ಹೋಗು, ಹಿಂಜರಿ, ಹಿಮ್ಮೆಟ್ಟು, ನಿವೃತ್ತನಾಗು, ವಿಶ್ರಾಂತಿ ಹೊಂದು, ಮಲಗುವುದಕ್ಕೆ ಹೋಗು.

Retire'ment (ರಿಟಾಯರ್ಮೆಂಟ್) n. solitude, state of having retired from service. ಏಕಾಂತವಾಸ, ಚಾಕರಿಯಿಂದ ನಿವೃತ್ತಿ, ವಿರಕ್ತವೃತ್ತಿ, ಸನ್ಯಾಸ.

Retort' (ರಿಟಾರ್ಟ್) v t. & i. make countercharge. ಮುಯ್ಯಿಗೆ ಮುಯ್ಯಿ ತೀರಿಸು, ಮಾರುತ್ತರಕೊಡು. n. a ready and sharp reply; thing done in retaliation. ಮಾರ್ನುಡಿ, ಎದುರುತ್ತರ, ಮುಯ್ಯಿನುಡಿ.

Retort (ರಿಟಾರ್ಟ್) n. glass vessel for distillation. ಬಟ್ಟಿಯಿಳಿಸುವ ಪಾತ್ರೆ.



Retort

Retouch (ರಿಟಚ್) vt. revise, improve by touching ಪುನಃ ಸ್ಪರ್ಶಿಸು, ಚಿತ್ರವನ್ನು ಸೂಕ್ಷ್ಮರೇಖೆಗಳಿಂದ ಸುಧಾರಿಸು.

Retract' (ರಿಟ್ರಾಕ್ಟ್) vt. & i. withdraw promise, &c. ಮಾತು ಹೊರಳಿಸು, ಹಿಂತೆಗೆ, ಹಿಂದೆಳೆದುಕೊ, ಮುದುರಿಕೊ.

Retraction (ರಿಟ್ರಾಕ್ಷನ್) n. the act of withdrawing, renouncement. ವಾಪಸ್ಸು ತೆಗೆದುಕೊಳ್ಳುವಿಕೆ, ತ್ಯಾಗ.

Retreat' (ರಿಟ್ರೀಟ್) v. i. go back, retire ಹಿಮ್ಮೆಟ್ಟು, ಹಿಂದಕ್ಕೆ ಹೋಗು, ಹಿಂದಕ್ಕೆ ಸರಿ. n. retiring, private place; shelter, military signal for retiring. ಹಿಮ್ಮೆಟ್ಟುವಿಕೆ, ಆಶ್ರಯ ಸ್ಥಾನ, ಹಿಮ್ಮೆಟ್ಟುವ ಸಂಕೇತ, (ಸೈನ್ಯ).

Retrench (ರಿಟ್ರೆಂಚ್)vi. & t. diminish, curtail ವೆಚ್ಚ ಕಡಿಮೆಮಾಡು, ತಗ್ಗಿಸು, ಖೋತಮಾಡು.

Retrench'ment(ರಿಟ್ರೆಂಚ್‌ಮೆಂಟ್)n. reduction. cutting off. ಖರ್ಚು ಖೋತಾಮಾಡುವುದು, ಮಿತಮಾಡುವುದು.

Retrial(ರಿಟ್ರೈಯಲ್)n. trial again, a second trial. ಮತ್ತೊಮ್ಮೆ ಪರೀಕ್ಷಣ, ಪುನಃ ಪ್ರಯತ್ನ.

Retribution (ರಿಟ್ರಿಬ್ಯೂಷನ್)n. recompense esp. for all deeds. ಪ್ರತಿಫಲ, ಪ್ರತೀಕಾರ, ಪಾಪಫಲ, ಮುಯ್ಯಿಗೆ ಮುಯ್ಯಿ.

Retrieval (ರಿಟ್ರೀವಲ್) n. recovery; restoration ಸರಿಮಾಡುವುದು, ಜೀರ್ಣೋದ್ಧಾರ, ಪರಿಹಾರ.

Retrieve' (ರಿಟ್ರೀವ್) vt. & i. recover, repair. ಪುನಃ ಪಡಕೊಳ್ಳು, ಸರಿಮಾಡು, ತಿರುಗಿಹೊಂದು, ತಿದ್ದು, ಜೀರ್ಣೋದ್ಧರಿಸು.

Retriever (ರಿಟ್ರೀವರ್) n. one who retrieves, a breed of dog which is trained to locate and bring game which is shot. ಪುನಃ ಪಡಕೊಳ್ಳುವವನು, ಬೇಟೆಯಾಡಿದ ಪ್ರಾಣಿಯನ್ನು ಹಿಡಿದು ತರುವ ಬೇಟೆಯ ನಾಯಿ.

Retroact (ರಿಟ್ರೋಆಕ್ಟ್) vi. act in opposition. ಪ್ರತಿವರ್ತಿಸು, ಪ್ರತಿಯಾಗಿ ಕಾರ್ಯಾಚರಣೆಮಾಡು.

Retrocede (ರಿಟ್ರೋಸೀಡ್) vi. go back, retire. ಹಿಂದಕ್ಕೆ ಹೋಗು, ಹಿಂಜರಿ.

Retrocession(ರೆಟ್ರೊಸೆಶನ್)n. ceding back of ceded territory. ಪ್ರದೇಶಗಳನ್ನು ಹಿಂದಕ್ಕೆ ಕೊಡೋಣ, ಪ್ರತಿದಾನ, ಪರಾವರ್ತನೆ.

Retroflexed (ರೆಟ್ರೋಫ್ಲೆಕ್ಸ್ಡ್) a. turned backwards. ಹಿಂದಕ್ಕೆ ತಿರುಗಿದ.

Ret'rograde(ರೆಟ್ರೋಗ್ರೇಡ್)a. going backward, contrary. ಹಿಂದಕ್ಕೆ ತೆರಳುವ, ಹಿಂಚಲನೆ ತೋರುವ, ವಕ್ರಗತಿಯ.

Retrogr'ession (ರಿಟ್ರೊಗ್ರೆಶನ್) n. going backward. ಹಿಂದಕ್ಕೆ ಹೋಗುವಿಕೆ, ಅವನತಿ, ವಿಪರೀತಗತಿ.

Retroject (ರಿಟ್ರೋಜೆಕ್ಟ್) vt. cast back. ಹಿಂದಕ್ಕೆ ಚಿಮ್ಮು.

Ret'rospect (ರೆಟ್ರಾಸ್ಪೆಕ್ಟ್) n. what one looks back upon ಹಿನ್ನೋಟ, ಸಿಂಹಾವಲೋಕನ, ಪೂರ್ವಾನುದರ್ಶನ.

Retrospec'tive (ರೆಟ್ರಾಸ್ಪೆಕ್ಟಿವ್) a. applicable to what has already happened. ಗತವಾದದಕ್ಕೆ ಸಂಬಂಧಿಸಿದ, ಪೂರ್ವವ್ಯಾಪ್ತಿಯುಳ್ಳ.

Retroversion (ರಿಟ್ರೋವರ್ಷನ್) n. turning or falling backward. ಹಿಂತಿರುಗುವಿಕೆ.

Retrovert (ರೆಟ್ರೋವರ್ಟ್) vt. turn backwards. ಹಿಂದಕ್ಕೆ ತಿರುಗು.

Return (ರಿಟರ್ನ್) vt. & i. come or go back; revert, give back; elect as member for a constituency. ಮರಳು, ತಿರುಗಿಬರು, ಹಿಂದಿರುಗು, ತಿರುಗಿಕೊಡು, ಮತದಿಂದ (ಓಟಿನಿಂದ) ಆರಿಸು. n. returning, what is returned, official report. ಪುನರಾಗಮನ, ಹಿಂದಿರುಗುವಿಕೆ, ಪ್ರತ್ಯರ್ಪಣೆ, ಪ್ರತಿಫಲ, ಲಭ್ಯ, ಸರ್ಕಾರಿಲೆಕ್ಕ, ಮಾಹಿತಿಪತ್ರಿಕೆ.

Reun'ion(ರಿಯೂನಿಯನ್)n. renewal of unity. ಮತ್ತೆ ಕಲೆಯೋಣ, ಪುನರ್ಮಿಲನ.

Reunite (ರೀಯುನೈಟ್) vt. & i. join again. ಮತ್ತೆ ಸೇರು, ತಿರುಗಿ ಸೇರಿಸು.

Revamp (ರಿವಾಂಪ್) vt. change, reconstruct. ಪರಿವರ್ತಿಸು, ಪುನರ್ರಚಿಸು.

Reveal′ (ರಿವೀಲ್) vt. disclose; make known by supernatural means. ಪ್ರಕಾಶಪಡಿಸು, ಪ್ರಕಟಣೆಮಾಡು, ಸಾಕ್ಷಾತ್ಕಾರದಿಂದ ತಿಳಿಸು.

Rev′el (ರೆವೆಲ್) vt. feast in a riotous manner, take delight in. ಕ್ರೀಡಾಲೋಲನಾಗಿರು, ಲೋಲಾಪ್ತಿಯಿಂದಿರು, ಆನಂದಪಡು.

Revela′tion (ರೆವಿಲೇಷನ್) n. striking disclosure, communication from God to men. ವೇದದ ಅಪೌರುಷೇಯತ್ವ, ಆಕಾಶವಾಣಿ, ಶ್ರುತಿ, ಅಂತರ್ಜ್ಞಾನ.

Rev′elry (ರೆವಲ್ರಿ) n noisy festivity. ದುಂದುಗಾರಿಕೆ, ಮೆರೆದಾಡುವಿಕೆ, ಮದ್ಯಾಮೋದ.

Revenant (ರೆವೆನೆಂಟ್) n. ghost, apparition, phantom. ಭೂತ, ಪ್ರೇತ, ದೆವ್ವ.

Revenge′ (ರಿವೆಂಜ್) vt. take vengeance. ದ್ವೇಷಸಾಧಿಸಿಕೊ, ಹಗೆ ತೀರಿಸಿಕೊ, ಪ್ರತೀಕಾರಮಾಡು. n. injury inflicted in return; the passion for retaliation. ಪ್ರತಿಹಿಂಸೆ, ಸೇಡು, ವೈರಸಾಧನೆ.

Revenge′ful (ರಿವೆಂಜ್‌ಫುಲ್) a. vindictive, malicious. ಪ್ರತೀಕಾರದ, ಮರ್ಮಸಾಧಕ, ವೈರಸಾಧನೆಯ.

Reve′nue (ರೆವಿನ್ಯೂ) n. annual income, esp. that of a state. ಹುಟ್ಟುವಳಿ, ಆದಾಯ, ತೀರ್ವೆ, ಮಹಸೂಲು, ಉತ್ಪತ್ತಿ.

Reverb′erate (ರಿವರ್ಬರೇಟ್) v. & i. echo, resound. ಪ್ರತಿಧ್ವನಿಸಿಕೊಡು, ಅನುಗರ್ಜಿಸು, ಪ್ರತಿಫಲಿಸು.

Reverbera tion (ರಿವರ್ಬರೇಶನ್) n. the reflection of sound. ಪ್ರತಿಧ್ವನಿ, ಪ್ರತಿಕ್ರಿಯೆ, ಪ್ರತಿನಾದ.

Revere′ (ರಿವಿಯರ್) vt. venerate, regard with respectful awe. ಸನ್ಮಾನದಿಂದ ಕಾಣು, ಆದರಿಸು, ಪೂಜಿಸು.

Rev′erence (ರೆವರೆನ್ಸ್) n. deep respect. ಸನ್ಮಾನ, ಪೂಜ್ಯಭಾವನೆ, ಭಯಭಕ್ತಿ.

Rev′erend (ರೆವರೆಂಡ್) a. worthy of reverence; title of the clergy. ಪೂಜ್ಯ, ಸಮ್ಮಾನ್ಯ, ಬ್ರಹ್ಮಶ್ರೀ.

Reverential (ರೆವರೆನ್ಷಲ್) a. expressing reverence. ಪೂಜ್ಯತೆಯನ್ನು ಸೂಚಿಸುವ.

Rev erie (ರೇವರೀ) n. musing, day dream. ಮನೋರಾಜ್ಯ, ಕಲ್ಪನಾತರಂಗ, ದಿವಾಸ್ವಪ್ನ, ಧ್ಯಾನ, ಚಿಂತನೆ, ಭಾವನೆ.

Rever′sal (ರಿವರ್ಸಲ್) n. reversing of, being reversed, ರದ್ದುಪಡಿಸುವುದು, ಪರಾವರ್ತನೆ, ಹಿಂದಿರುಗಿ ಬರುವಿಕೆ.

Reverse′ (ರಿವರ್ಸ್) a. contrary, inverted; upside down. ವಿರುದ್ಧವಾದ, ವ್ಯತಿರಿಕ್ತವಾದ, ಪ್ರತಿಲೋಮವಾದ, ತಲೆಕೆಳಗಾದ, ವಿಪರೀತ. vt. invert, transpose, revoke, annul. ಕವುಚಿಹಾಕು, ತಿರುಗಿಸು, ವಿಪರ್ಯಸ್ತಮಾಡು, ತಲೆಕೆಳಗಾಗಿ ಮಾಡು.

Reversible (ರಿವರ್ಸಿಬಲ್) a. capable of being turned backward. ವಿಪರ್ಯಸ್ತಗೊಳಿಸಲು ಶಕ್ಯವಾದ, ತಲೆಕೆಳಗಾಗಿ ಮಾಡಬಹುದಾದ.

Rever′sion (ರಿವರ್ಶನ್) n. reverting passing of an estate back to granter. ಪೂರ್ವಸ್ಥಿತಿಗೆ ಮರಳುವುದು, ಉತ್ತರಾಧಿಕಾರಿಗೆ ಹಿಂದಕ್ಕೆ ಕೊಡುವುದು.

Revert′ (ರಿವರ್ಟ್) vt. return to former state, reverse. ಪೂರ್ವಸ್ಥಿತಿಗೆ ಹಿಂದಿರುಗು, ಪೂರ್ವಪ್ರಸಂಗ, ಪ್ರಸ್ತಾಪಿಸು, ಮರಳುವುದರಿಂದ ಲಭಿಸು.

Review′ (ರಿವ್ಯೂ) n. revision, survey, inspection, retrospect, critique of book, &c. periodical in books, events &c, are reviewed. ಪುನರ್ವಿಮರ್ಶೆ, ಪುನರವಲೋಕನ, ಪರೀಕ್ಷಣ, ತಪಾಸಣೆ, ವಿಮರ್ಶೆ, ವಿಮರ್ಶಕ, ಪತ್ರಿಕೆ. vt. & i. survey,-look back on ; write review of (book). ಪರೀಕ್ಷಿಸು, ವಿಮರ್ಶಿಸು, ಪರಿಶೀಲಿಸು,

Review'er (ರಿವ್ಯೂಅರ್) n. writer of review. ವಿಮರ್ಶಕ, ಗ್ರಂಥಪರೀಕ್ಷಕ.

Revile (ರಿವೈಲ್) vt. abuse: rail at, calumniate. ದೂಷಿಸು, ಬಯ್ಯು, ನಿಂದನೆಮಾಡು.

Revilement (ರಿವೈಲ್‌ಮೆಂಟ್) n. abuse, calumny. ದೂಷಣೆ, ನಿಂದೆ.

Revisa'l (ರಿವೈಸಲ್) n. revision. ಪರಿಷ್ಕರಣ.

Revise' (ರಿವೈಝ್) vt. examine and amend faults in. ಪರಿಷ್ಕರಿಸು, ಪರಿಶೋಧಿಸು, ತಿದ್ದು.

Revi'sion(ರಿವಿಝನ್) n. revising, revised edition of form. ಪರೀಕ್ಷಿಸಿ ತಿದ್ದುವಿಕೆ, ಪರಿಷ್ಕರಣ, ತಿದ್ದಿದ ರೂಪ.

Revisory(ರಿವೈಸರಿ)a having power to revise, effecting revision. ಪರಿಷ್ಕರಣೆಗೆ ಸಂಬಂಧಪಟ್ಟ, ತಿದ್ದುಪಾಟಿನ.

Revi'val(ರಿವೈವಲ್) n reviving or being revived, reawakening of fervour ಪುನರುಜ್ಜೀವನ, ಪುನರ್ಜಾಗೃತಿ.

Revive' (ರಿವೈವ್) vt. & i. come or bring back to life. ಬದುಕಿಸು, ಚೇತನತರು, ಚೇತರಿಸಿಕೊಳ್ಳು, ತಿರುಗಿ ಬಲಕೊಡು, ಎಚ್ಚರಗೊಳಿಸು, ಪುನಃ ಚಟುವಟಿಕೆಯುಂಟುಮಾಡು.

Reviv'ify(ರಿವಿವಿಫಾಯ್)vt. enliven; reanimate. ತಿರುಗಿ ಚೇತನ ಬರುವಂತೆ ಮಾಡು, ಮತ್ತೆ ಜೀವಕಳೆ ತುಂಬು.

Revocable (ರೆವೊಕಬ್‌ಲ್) a. that may be revoked. ರದ್ದುಗೊಳಿಸಬಹುದಾದ.

Revoca'tion (ರೆವೊಕೇಶನ್) n. act of revoking. ಹಿಂದಕ್ಕೆ ತಿರುಗಿಸುವಿಕೆ, ನಿವರ್ತನ, ರದ್ದಿಯಾತಿ.

Revoke' (ರಿವೋಕ್) vt.&i. rescind, withdraw ; cancel. ರದ್ದುಮಾಡು, ಹೊಡೆದುಹಾಕು, ಹಿಂತೆಗೆದುಕೊ, ನಿರಸಗೊಳಿಸು.

Revolt' (ರಿವೋಲ್ಟ್) vt. & i. rise in rebellion, feel repulsion, affect with disgust. ದಂಗೆ ಏಳು, ತಿರುಗಿಬೀಳು, ಉರಟಾಯಿಸು, ಅಸಹ್ಯಪಡಿಸು. resurrection, rebellious mood, sense of loathing. ದಂಗೆ, ಬಂಡಾಯ, ಪಿತೂರಿ, ಅಸಹ್ಯತೆ, ದ್ವೇಷ.

Revolting (ರಿವೋಲ್ಟಿಂಗ್) a.disgusting, shocking. ಜುಗುಪ್ಸೆ ಉಂಟುಮಾಡುವ.

Revolu'tion(ರೆವಲೂಶನ್)n.revolving or rotation, fundamental change, forcible substitution of new government or ruler for the old. ಪ್ರದಕ್ಷಿಣೆ, ಪರಿಭ್ರಮಣ, ಸುತ್ತುವಿಕೆ, ಘೂರ್ಣನೆ, ಮೂಲಬದಲಾವಣೆ, ದಂಗೆ, ರಾಜವಿಪ್ಲವ, ಕ್ರಾಂತಿ.

Revolu'tionary (ರೆವಲ್ಯೂಶನರಿ) a. involving of real change. ಕ್ರಾಂತಿಕಾರಕ, ವಿಪ್ಲವಕಾರಿ. ಪರಿಭ್ರಮಣಶೀಲ.

Revolutionist (ರೆವಲ್ಯೂಷನಿಸ್ಟ್) n. a person favouring or engaged in a revolution. ವಿಪ್ಲವವಾದಿ, ವಿಪ್ಲವಕಾರಿ.

Revolu'tionize (ರೆವಲ್ಯೂಶನಾಇಜ್) vt completely reconstruct. ಪಲ್ಲಟವನ್ನುಂಟುಮಾಡು, ಕ್ರಾಂತಿಯನ್ನುಂಟುಮಾಡು.

Revolve (ರಿವಾಲ್ವ್) vt. & i. move round a centre, turn around. ತಿರುಗು, ಪ್ರದಕ್ಷಿಣೆಮಾಡು, ಸುತ್ತು, ಪರಿಭ್ರಮಿಸು, ಚಕ್ರಾಕಾರವಾಗಿ ಉರುಳು.

Revolver' (ರಿವಾಲ್ವರ್) n. pistol. ಪಿಸ್ತೂಲು, ಕೈಕೋವಿ.

Revolving-chair (ರಿವಾಲ್ವಿಂಗ್-ಛೇರ್) n. a chair which turns round. ತಿರುಗುವ ಕುರ್ಚಿ.



Revolving chair

Revue (ರೆವ್ಯೂ) n. a musical variety show of songs, dances, etc. ಸಂಗೀತ, ನೃತ್ಯ ಮುಂತಾದುವು ಸೇರಿದ ವಿವಿಧಕಾರ್ಯಕ್ರಮ.

Reward' (ರಿವಾರ್ಡ್) n· recompense, remuneration, requital for good or evil. ಬಹುಮಾನ, ಪ್ರತಿಫಲ, ಇನಾಮು, ಸಂಭಾವನೆ. vt. give or serve as reward. ಬಹುಮಾನಕೊಡು, ಪ್ರತಿಫಲಕೊಡು.

Reynard (ರೆನರ್ಡ್) n. the fox. ನರಿ.

Rhabdomancy (ರಾಬ್ಡೊಮಾನ್ಸಿ) n· divination by the help of a rod or wand. ಭೂಮಿಯ ಒಳಗಿರುವ ನೀರು ಅಥವಾ ಅದುರನ್ನು ಊಹೆಗೋಲನ್ನು ಉಪಯೋಗಿಸಿ ಕಂಡುಹಿಡಿಯುವುದು.

Rhapsodical (ರಾಪ್ಸೊಡಿಕಲ್) a, pertaining to a rhapsody, highly emotional or ecstatic. ಆವೇಶಯುಕ್ತ, ಶಬ್ದಾಡಂಬರದಿಂದ ಕೂಡಿದ.

Rhap'sody (ರಾಪ್ಸೋಡಿ) n. enthusiastic high flown utterance or composition. ಉತ್ಸಾಹಪೂರ್ಣ, ಶಬ್ದಾಡಂಬರದ ಭಾಷಣ ಅಥವಾ ಲೇಖನ.

Rhet'oric (ರೆಟೋರಿಕ್) n. art of speaking or writing effectively inflated language· ಭಾಷಣ ನೈಪುಣ್ಯ, ಅಲಂಕಾರ ಭಾಷೆ, ಸಾಹಿತ್ಯಶಾಸ್ತ್ರ, ಅಲಂಕಾರ(ಶಾಸ್ತ್ರ).

Rheto'rical (ರೆಟಾರಿಕಲ್) n. of the nature of a hetorics, oratorial. ಅಲಂಕಾರಿಕ, ವಾಕ್ಚಾತುರ್ಯಯುಕ್ತ

Rhetorician (ರೆಟಾರಿಶಿಯನ್) n. public speaker, orator, teacher of rhetoric· ವಾಗ್ಮಿ, ಅಲಂಕಾರಿಕ, ಲಾಕ್ಷಣಿಕ.

Rheum (ರೂಮ್) a. the mucous discharge from the lungs or nostrils or eyes. ಕಣ್ಣೀರು, ಜೊಲ್ಲು ಮುಂತಾದ ಸ್ರಾವಗಳು, ಸಿಂಬಳ.

Rheumat'ic (ರೂಮಾಟಿಕ್) a. subject t rheumatism. ಸಂಧಿವಾತದ, ವಾಯುಗ್ರಸ್ತ, ವಾಯುಹಿಡಿದ, ವಾತುಲ, ವಾತೋಪಹತ.

Rheumatism (ರೂಮಟಿಸಮ್) n. disease marked by inflammation and pain in the joints. ಸಂಧಿವಾತ.

Rhinal (ರೈನಲ್) a pertaining to nose ಮೂಗಿಗೆ ಸಂಬಂಧಿಸಿದ.

Rhine wine (ರೈನ್ ವೈನ್) n.a white wine originally produced in the Rhine valley of Germany. ಜರ್ಮನಿಯ ರೈನ್‌ನದಿಯ ಕಣಿವೆಯಲ್ಲಿ ಮೊದಲು ತಯಾರುಮಾಡಿದ ಒಂದು ವಿಧದ ಮದ್ಯ.

Rhino'ceros (ರೈನಾಸೆರಸ್) n. large animal with horn on nose ಖಡ್ಗಮೃಗ, ಗೇಂಡಾಮೃಗ, ಗಂಡಕ.



Rhinoceros

Rhom'b, rhom'bus (ರಾಮ್, ರಾಂಬಸ್) nn. equilateral but not right angled parallelogram, ತುಲ್ಯಚತುರ್ಭುಜ, ವಜ್ರಾಕೃತಿ.

Rhyme, rime (ರೈಮ್) n. identity between terminal sounds of words or verses. ಅಂತ್ಯಪ್ರಾಸ ಯಮಕಪದ.

Rhy'thm (ರಿದ ಮ್) n. measured flow of words in verse or prose, movement with regular succession. ತರಂಗಗತಿ, ಧಾಟಿ, ಛಂದೋಬದ್ಧತೆ.

Rial (ರೈಯಲ್) n. Persian unit of money. ಪರ್ಷಿಯಾ ದೇಶದ ನಾಣ್ಯ ವಿಶೇಷ.

Rialto (ರೈಯಾಲ್ಟೊ) n. in Venice, a bridge over the grand canal, a business centre. ವೆನಿಸ್ ನಗರದ ಗ್ರಾಂಡ್ ಕೆನಾಲ್ ಎಂಬ ನಾಲೆಯ ಮೇಲಿನ ಸೇತುವೆ, ವ್ಯಾಪಾರ ಕೇಂದ್ರ.

Rib (ರಿಬ್) n. one of the curved bones round the upper part of the body, arch supporting vault, rod of umbrella frame. ಪಕ್ಕೆಲುಬು, ಮಗ್ಗುಲಿನ ಎಲುಬು, ಬೆನ್ನು ಪಟ್ಟಿ, ಅಡ್ಡ ಮರ, ಸಲಾಕಿ, ಕೊಡೆಕಡ್ಡಿ.


Rib

Rib'ald (ರಿಬಲ್ಡ್) a. mean, indecent. ಅವಾಚ್ಯ ಬಂಡು. n. ribald person. ಭಂಡ, ಲುಚ್ಚಾ, ಹೊಲಸು ಭಾಷೆ ಮಾತಾಡುವವನು.

Ribaldry (ರಿಬಲ್ಡ್ರಿ) n. obscene language, indecency ಅಶ್ಲೀಲ ಭಾಷೆ, ಹೊಲಸುಮಾತು, ಅಸಭ್ಯ ವ್ಯವಹಾರ.

Ribb'on, rib'and (ರಿಬನ್, ರಿಬಂಡ್) n. silk material woven into narrow band. ರೇಷ್ಮೆಯ ಪಟ್ಟಿ, ಅಲಂಕಾರ ಪಟ್ಟಿ.

Rice (ರೈಸ್) n. pearl white seed or an oriental plant used as food. ಅಕ್ಕಿ, ತಂಡುಲ, ಓದನ. ಅನ್ನ.

Rice-paper (ರೈಸ್‌ಪೇಪರ್) n. a thin delicate paper. ತೆಳ್ಳನೆಯ ಮೃದುವಾದ ಕಾಗದ.

Rich (ರಿಚ್) a. wealty, fertile; valuable, splendid, costly, highly amusing, abundant. ಧನಿಕ, ಶ್ರೀಮಂತ, ಬಲ್ಲಿದ, ಫಲವತ್ತಾದ, ಸಾರವುಳ್ಳ, ಬೆಲೆಯುಳ್ಳ, ಶ್ರೇಷ್ಠ, ಮನೋರಂಜಕ, ವಿಪುಲ, ಹೇರಳ, ಸಮೃದ್ಧ, ಸಂಪನ್ನ.

Rich'es (ರಿಚಸ್) n. wealth. ಹಣ, ಸಿರಿತನ, ಸಂಪತ್ತು, ಐಶ್ವರ್ಯ, ವೈಭವ.

Rich'ly (ರಿಚ್ಲಿ) adv. fully. ಪೂರ್ಣವಾಗಿ, ನಿಸ್ಸಂದೇಹವಾಗಿ.

Rick (ರಿಕ್) n. stalk or pile of grain or hay. ಹುಲ್ಲುಮೆದೆ.

Rick'ets (ರಿಕೆಟ್ಸ್) n. children's disease with softening of bones, bow legs, &c. ಮುಡುದೋಷ, ಕುಟಿಲವಾತ, ಬಾಲಗ್ರಹ, ಮೆದುಮೂಳೆ ರೋಗ.

Rick'ety (ರಿಕೆಟಿ) n. shaky, insecure, feeble. ನಲುಗಿದ, ಬಾಲಗ್ರಹದ, ಮುಡುದೋಷದ.

Rickshaw (ರಿಕ್ ಷಾ) n. A two-wheled carriage drawn by man used in Eastren countries. ಪಾಶ್ಚಾತ್ಯ ದೇಶದಲ್ಲಿ ಉಪಯೋಗಿಸುವ ಮನುಷ್ಯನು ಎಳೆಯುವ ದ್ವಿಚಕ್ರಯಾದ ವಾಹನ ವಿಶೇಷ.


Rickshaw

Rid (ರಿಡ್) vt. free, clear away, abolish. ತೊಲಗಿಸು, ಬಿಡಿಸು, ತಪ್ಪಿಸು, ಇಲ್ಲದಂತೆ ಮಾಡು, ಬಿಡುಗಡೆಮಾಡು.

Riddance (ರಿಡೆನ್ಸ್) n. act of ridding. ತೊಲಗುವಿಕೆ, ನಿವೃತ್ತಿ.

Rid'dle (ರಿಡ್‌ಲ್) n. puzzle, coarse, sieve. ಒಗಟು. ಸಮಸ್ಯೆ, ಜರಡೆ.

Ride (ರೈಡ್) vi. & t. sit on and be carried by horse, &c. go on a conveyance, lie at anchor, float buoyantly; oppress ಸವಾರಿಮಾಡು, ವಾಹನದಲ್ಲಿ ಹೋಗು, ಹತ್ತಿಹೋಗು, ತೇಲು, ಜುಲುಮು ಮಾಡು, ಉಪದ್ರವ ಕೊಡು. n. journey in public conveyance. ವಾಹನ ಪ್ರಯಾಣ. r rough shod over, treat harshly. ಕ್ರೂರವಾಗಿ ನಡೆ, ನಿರ್ದಯದಿಂದ ವರ್ತಿಸು.

Rider (ರೈಡರ್) n. one who rides, a horseman, an amendment to a legislative measure. ಸವಾರಿಗಾರ, ಅಶ್ವಸವಾರ, ಕಾನೂನಿನ ತಿದ್ದುಪಡಿಯ ಸೂಚಕ.

Ridge (ರಿಡ್ಜ್) n. line of junction in which two sloping surfaces meet; long narrow hill top. mountain range. ಏಣು, ಬದು, ಕಟ್ಟೆ, ಸಾಲಾಗಿರುವ ಗುಡ್ಡಗಳ ಸಾಲು, ಪರ್ವತ ಶ್ರೇಣಿ.

Ridge-pole (ರಿಡ್ಜ್‌ಪೋಲ್) n. the timber forming the ridge of a roof into which the rafters are fastened. ಛಾವಣಿಯ ಅಡ್ಡಸರಗಳನ್ನು ಮೇಲೆ ಕೂರಿಸಲು ಹಾಕುವ ಮುಖಸರ

Rid'icule (ರಿಡಿಕ್ಯೂಲ್) vt. laugh at, deride. ಪರಿಹಾಸ್ಯಮಾಡು, ಗೇಲಿಮಾಡು.

Ridiculous (ರಿಡಿಕ್ಯೂಲಸ್) a. deserving to be laughed. ಹಾಸ್ಯಾಸ್ಪದ, ನಗೆಗೀಡಾದ

Riding (ರೈಡಿಂಗ್) n. one of the three great divisions of Yorkshire. ಯಾರ್ಕ್‌ಷೈರಿನ ಮೂರು ವಿಭಾಗಗಳಲ್ಲಿ ಒಂದು.

Rifacimento (ರಿಫಾಸಿಮೆಂಟೊ) n. act of recasting of a literary work. ಸಾಹಿತ್ಯದ ಕೃತಿಗೆ ಹೊಸರೂಪಕೊಡುವುದು.

Rife (ರ್ಯಾಫ್) pred. a prevailing; abundant, plentiful. ವಾಡಿಕೆಯಾದ, ಪ್ರಚಲಿತ, ಪುಷ್ಕಳ, ಬಹುಳ.

Riff-raff (ರಿಫ್‌ರಾಫ್) n. refuse, the rabble: mob. ಕೀಳುಜನ, ಕಾಕಪೋಕರು, ಕೆಟ್ಟಜನ, ಅಧಮರು.

Ri'fle (ರೈಫಲ್) n. a musket with grooved barrel. ಕೋವಿ, ಬಂದೂಕ.

Rifle (ರೈಫಲ್) vt. & i. plunder, search and rob. ಸುಲಿಗೆಮಾಡು, ಸೂರೆಮಾಡು, ಶೋಧಿಸಿ ಕೊಳ್ಳೆಹೊಡೆ.

Rift (ರಿಫ್ಟ್) n. fissure. opening. ಒಡಕು, ಬಿರುಕು, ಸೀಳು, ಛಿದ್ರ. r. in the lute, difference of opinion; cleavage. ಭಿನ್ನಾಭಿಪ್ರಾಯ, ಒಡಕು.

Rig (ರಿಗ್) vt. provide ship with rigging, set up hastily or as makeshift. ಹಡಗಿಗೆ ಹಗ್ಗ ಕೊಡೆ ಮರ ಮುಂತಾದುವನ್ನೊದಗಿಸು, ಉಡಿಗೆ ತೊಡಿಗೆ ಒದಗಿಸು, ಅಣಿಮಾಡು.

Rigadoon (ರಿಗಾಡೂನ್) n. gay brisk dance performed by one couple. ಇಬ್ಬರಿಂದ ಮಾಡಿದ ಉಲ್ಲಾಸಯುಕ್ತವಾದ ನೃತ್ಯ.

Rigg'ing (ರಿಗಿಂಗ್) n. ship's spares, ropes, &c. ಹಡಗಿನ ಹಗ್ಗಹುರಿಗಳು, ಹಡಗಿನ ಸಜಾವಣೆ.

Right (ರೈಟ್) n. straight, correct, true, on or to the right hand, in good condition, not mistaken. ಋಜು, ನೇರ, ಯೋಗ್ಯ, ಯುಕ್ತ, ಉಚಿತ, ನ್ಯಾಯವಾದ, ಕ್ರಮವಾದ, ಬಲಭಾಗದ, ಸುಸ್ಥಿತಿಯಲ್ಲಿರುವ. vt. & i. make reparation. correct. ಕ್ರಮಪಡಿಸು, ಸರಿಪಡಿಸು. n. what is just fair treatment, justification (plu.) right claim. true state. ನ್ಯಾಯ, ಕ್ರಮಬದ್ಧತೆ ಔಚಿತ್ಯ ಅಧಿಕಾರ, ಬಾಧ್ಯತೆ, ಹಕ್ಕು adv. straight, exactly, properly, to right hand. ಕ್ರಮವಾಗಿ, ಯುಕ್ತವಾಗಿ, ನ್ಯಾಯವಾಗಿ, ಬಲಗಡೆಗೆ. r. & left, on all sides. ಎರಡೂ ಕಡೆಗಳಲ್ಲಿ, ಸರ್ವತ್ರ.

Right'eous (ರೈಚಸ್) a virtuous; upright, honest. ಪುಣ್ಯಶೀಲ, ನಿಷ್ಕಪಟ, ಪ್ರಾಮಾಣಿಕ. n. righteousness. ಋಜುತೆ.

Right'ful (ರೈಟ್‌ಫುಲ್) a having a claim. ಯುಕ್ತವಾದ, ನ್ಯಾಯವಾದ.

Right-hand (ರೈಟ್‌ಹ್ಯಾಂಡ್) a. situated on the right hand, leading to the right, most dependable. ಬಲಗಡೆ ಇರುವ, ಅತ್ಯಂತ ವಿಶ್ವಾಸನೀಯ.

Rightist (ರೈಟಿಸ್ಟ್) n. a political conservative, a reactionary. ರಾಜನೀತಿಯಲ್ಲಿ ದಕ್ಷಿಣಪಂಥದವನು, ಪ್ರಗತಿವಿರೋಧಿ.

Right'ly (ರೈಟ್ಲಿ) a. justly; properly. ಸತ್ಯವಾಗಿ, ಯುಕ್ತವಾಗಿ, ನ್ಯಾಯವಾಗಿ, ನೇರವಾಗಿ, ಯಥಾಯೋಗ್ಯವಾಗಿ.

Ri'gid (ರಿಜಿಡ್) a. not easily bent. stiff; harsh. ಗಡಸು, ಬಾಗದ, ಕಠಿಣ, ನಿಷ್ಠೆಯ, ಖಡಕಾದ.

Rigid'ity (ರಿಜಿಡಿಟಿ) n. inflexibility, harshness. ನಿಷ್ಠೆ, ಬಿರುಸು, ಕಾಠಿಣ್ಯ, ತೀವ್ರತೆ, ಉಗ್ರತೆ, ಬಿತ್ತರ.

Rigmarole (ರಿಗ್‌ಮರೋಲ್) n. meaningless talk. ವ್ಯರ್ಥ ಪ್ರಲಾಪ, ಕಾಡುಹರಟೆ

Rigor (ರೈಗರ್) n. sudden chill and shivering appearing before certain fevers. ಕೆಲವು ಬಗೆಯ ಜ್ವರಗಳಿಗೆ ಮೊದಲು ಉಂಟಾಗುವ ಶೀತಕಂಪ.

Rig'orous (ರಿಗರಸ್) a. harsh, very severe. ಕಠಿಣ, ಕಠೋರ, ಉಗ್ರ.

Rigour (ರಿಗರ್) n. harshness, strictness. ಉಗ್ರತೆ, ತೀವ್ರತೆ.

Rill (ರಿಲ್) n. tiny stream. ಸಣ್ಣ ಹೊಳೆ, ತೊರೆ, ಝರಿ.

Rim (ರಿಮ್) n. raised edge; brim. ಅಂಚು, ಕಟ್ಟು, ವಲಯ.



Rim

Rime (ರೈಮ್) n. hoar-frost. ಹಿಮ, ಇಬ್ಬನಿ, ಮಂಜು, ತುಷಾರ.

Rimose (ರೈಮೋಸ್) a. full of fissures ಬಿರುಕುಗಳುಳ್ಳ.

Rind (ರೈಂಡ್) n. bark; peel. ಸಿಪ್ಪೆ, ತೊಗಟೆ, ತೋಟೆ, ಪದರ.

Rinderpest (ರಿಂಡರ್‌ಪೆಸ್ಟ್) n. a disease of oxen. ದನಕ್ಕೆ ಬರುವ ಒಂದು ರೋಗ.

Ring (ರಿಂಗ್) n. circlet of gold, &c. enclosure for circus riding, &c. ringing sound, resonance. ಉಂಗುರ, ಮುದ್ರಿಕೆ, ವಲಯ, ಸುತ್ತು, ಸುರುಳಿ, ವರ್ತುಳ, ರಂಗಸ್ಥಳ, ಝಣತ್ಕಾರ, ಅನುರಣನ, ಮೊಳಗುವಿಕೆ. vt. & i. encircle; sound, resound. ಸುತ್ತುಗಟ್ಟು, ನಾದಮಾಡು, ಘಲ್ಲೆನ್ನು, ಪ್ರತಿಧ್ವನಿಸು.

Ring'leader (ರಿಂಗ್‌ಲೀಡರ್) n. instigator in mutiny; riot, &c. ಮುಖಂಡ, ಮುಖ್ಯ ಒಳಸಂಚುಗಾರ.

Ring'let (ರಿಂಗ್ಲೆಟ್) n. curly lock of hair, small ring. ಸುರುಳಿಗುರುಳು, ಉಂಗುರ ಗೂದಲು, ಸಣ್ಣ ಉಂಗುರ.

Ringmail (ರಿಂಗ್‌ಮೇಲ್) n. an armour in which small rings are sewn on leather. ಚರ್ಮದ ಮೇಲೆ ಸಣ್ಣ ಉಂಗುರಗಳನ್ನು ಹೊಲಿದು ಮಾಡಿರುವ ಒಂದು ವಿಧದ ರಕ್ಷಾಕವಚ.

Ringmaster (ರಿಂಗ್‌ಮಾಸ್ಟರ್) n. person who introduces and directs the performance of a circus. ಸರ್ಕಸ್ಸಿನ ಸಕಲ ವಿಪಾರ್ಡುಗಳನ್ನೂ ನಿರ್ವಹಿಸುವ ಸಂಚಾಲಕ.

Ring'worm (ರಿಂಗ್‌ವರ್ಮ್) n. skin disease in circular patches. ಗಜಕರ್ಣ, ಹುಳುಕಡ್ಡಿ, ದದ್ದು.

Rink (ರಿಂಕ್) n. sheet of ice used for skating. ಜಾರುವ ಆಟಕ್ಕೆ ಉಪಯೋಗಿಸಲಾಗುವ ಮಂಜುಗೆಡ್ಡೆಯ ಮೈದಾನ.

Rinse (ರಿನ್ಸ್) vt. wash lightly; cleanse by water ತೊಳೆ, ಗಲಬರಿಸು, ಪ್ರಕ್ಷಾಲಿಸು, ಬಾಯಿ ಮುಕ್ಕಳಿಸು.

Ri'ot (ರೈಅಟ್) n. tumult, disturbance of the peace by a crowd. ದೊಂಬಿ, ಗೊಂದಲ, ಅವ್ಯವಸ್ಥೆ, ಗಲಾಟೆ.

vt. make a riot, revel. ಗೊಂದಲ ಮಾಡು, ದಂಗೆಯೇಳು, ಭೋಗಲಂಪಟನಾಗು. run riot be lawless in conduct. ನಡತೆಯಲ್ಲಿ ಅವಿಧೇಯನಾಗಿರು.

Riotous (ರೈಅಟಸ್) a. tumultous, revelling. ಗೊಂದಲದಿಂದ ಕೂಡಿದ, ಕೋಲಾಹಲಕರ.

Rip(ರಿಪ್)vt. &i. cut or tear, split. ಕತ್ತರಿಸು, ಸಿಗಿ, ಉದ್ದಕ್ಕೆ ಸೀಳು.

Riparian (ರೈಪೇರಿಯನ್) a. pertaining to the bank of a river. ನದೀತೀರಕ್ಕೆ ಸಂಬಂಧಿಸಿದ.

Ripe (ರೈಪ್) a. ready to be used, mature. ಹಣ್ಣಾದ, ಕಟಾವಿಗೆ ಸಿದ್ಧವಾದ, ಕಳಿತ, ಪಕ್ವವಾದ, ಮಾಗಿದ, ಬಲಿತ.

Ripen (ರೈಪನ್) vt. & i. mature; make or grow ripe. ಪಕ್ವ ಸ್ಥಿತಿಗೆ ಬರು, ಬಲಿ, ಹಣ್ಣಾಗು.

Rip'ple (ರಿಪ್ ಲ್) n. ruffling of water's surface, small waves. ತರಂಗರವ, ಸಣ್ಣ ಅಲೆ, ತೆರೆ, ತರಂಗ.

Rise (ರೈಜ್) vt. get up from lying &c. get out of bed, make revolt, ascend, soar, come to surface; have origin, flow from. ಮೇಲಕ್ಕೆ ಏಳು, ಉದಯಿಸು, ಮೂಡು, ಆರೋಹಣ ಮಾಡು, ಉಗಮವಾಗು, ಏರು, ಮೇಲೆ ಹಾರಾಡು, ಉದ್ಭವಿಸು, ಉತ್ಪನ್ನವಾಗು, ಹುಟ್ಟು. n. upward incline; social advancement, increase, origin. ಉದಯ, ಏಳ್ಗೆ, ಅಭಿವೃದ್ಧಿ, ಉತ್ಕರ್ಷ, ಉನ್ನತಿ. r. to the occasion, put forth unusual energy and produce surprising results. ವಿಶೇಷ ಪರಿಶ್ರಮದಿಂದ ಕಾರ್ಯ ಸಿದ್ಧಿ ಹೊಂದು. r. to felt, stand. ನಿಲ್ಲು.

Risible (ರಿಸಿಬ್‌ಲ್) a. having the faculty of laughing, ridiculous. ನಗುವ ಸ್ವಭಾವವುಳ್ಳ, ಪರಿಹಾಸ್ಯದ.

Ris'ing (ರೈಜಿಂಗ್) n esp. insurrection, boil or pimple. ದಂಗೆ, ಕ್ರಾಂತಿ ಗುಳ್ಳೆ, ಮೊಡವೆ.

Risk (ರಿಸ್ಕ್) n. chance of bad sequence. ಕೇಡು, ಅಪಾಯ, ಗಂಡಾಂತರ. vt. expose to chance of injury or loss, venture. ಅಪಾಯಕ್ಕೆ ಅಥವಾ ನಷ್ಟಕ್ಕೆ ಈಡಾಗು, ಗಂಡಾಂತರಕ್ಕೆ ಗುರಿಯಾಗು, ಅಥವಾ ಗುರಿಮಾಡು.

Ris'ky (ರಿಸ್ಕ) a. full of risk. ಅಪಾಯಕರ, ಗಂಡಾಂತರದ, ಸಾಹಸದ.

Risorial(ರಿಸೋರಿಯಲ್)a. concerning laughter. ನನಗೆ ಸಂಬಂಧಿಸಿದ.

Rissole (ರಿಸೋಲ್) n. fried cake of meat mixed with crumbs of bread. ಬ್ರೆಡ್ಡಿನ ಚೂರುಗಳನ್ನು ಮಿಶ್ರಮಾಡಿದ ಮಾಂಸದ ಚೂರುಗಳಿಂದ ತಯಾರಿಸಿದ ದೋಸೆ.

Rite (ರೈಟ್) n. a religious or solemn ceremony, observance. ಸಂಸ್ಕಾರ, ಅನುಷ್ಠಾನ, ಶಾಸ್ತ್ರೋಕ್ತ ಕರ್ಮ.

Rit'ual (ರಿಚ್ಯುಅಲ್) n. prescribed order for performing religious service ಸಂಸ್ಕಾರ, ಮತಪ್ರಕ್ರಿಯೆ, ಸಂಸ್ಕಾರ ಪದ್ಧತಿ.

Ritualist(ರಿಚುಅಲಿಸ್ಟ್) n. one skilled in ritual. ಮಂತ್ರಕ್ರಿಯಾವಿಧಿಗಳಲ್ಲಿ ಪಾರಂಗತ.

Rivage (ರಿವೇಜ್) n. a bank or coast. ನದಿ ಅಥವಾ ಸಮುದ್ರದ ತೀರ.

Riv'al (ರೈವಲ್) n. person or thing that competes with another. ಪ್ರತಿದ್ವಂದ್ವಿ, ಸ್ಪರ್ಧಿ. vt. vie with, be comparable to. ಸ್ಪರ್ಧಿಸು.

Riv'alry (ರೈವಲ್ರಿ) n. competition, emulation. ಪ್ರತಿಯೋಗಿತೆ, ಪ್ರತಿದ್ವಂದ್ವ, ಪೈಪೋಟಿ, ಸಂಘರ್ಷ, ವಿರೋಧ.

Rive (ರೈವ್) vt. & i. tear or rend. ಸೀಳಿಹಾಕು, ಬಗೆದುಹಾಕು.

Rivel (ರಿವೆಲ್)vt. & i. to wrinkle. ಸುಕ್ಕು ಸುಕ್ಕಾಗಿ ಆಗು, ಸಿಂಡರಿಸು.

Riv'er (ರಿವರ್) n. large running stream of water. ನದಿ, ಹೊಳೆ, ತೊರೆ.

Riverain (ರಿವರೇನ್) a. & n. pertaining to a river, habitation mear a river. ನದಿಯ, ನದಿಗೆ ಸಂಬಂಧಿಸಿದ, ನದಿಯ ತೀರವರ್ತೀ ಪ್ರದೇಶ.

Riv'et (ರಿವಿಟ್) n. bolt used in fastening together platers of metal &c. ಕಟಮೊಳೆ, ರಿವೆಟ್‌ಮೊಳೆ. vt. clinch, fasten with a rivet, fix one's eyes &c. on, engross. ಗಟ್ಟಿಮಾಡು, ಜಿಗಿಮಾಡು, ಭದ್ರಪಡಿಸು, ನೆಟ್ಟ ದೃಷ್ಟಿಯಿಂದ ನೋಡು.

Riv'ulet (ರಿವ್ಯುಲೆಟ್) n. small stream. ಹಳ್ಳ, ತೊರೆ, ಸಣ್ಣ ಹೊಳೆ, ತೊಡು, ಝರಿ.

Roach (ರೋಚ್) n. kind of fresh water fish. ಸಿಹಿನೀರಿನಲ್ಲಿ ದೊರಕುವ ಒಂದು ಬಗೆಯ ಮೀನು.

Road (ರೋಡ್) n. way prepared to travel on, route. ಮಾರ್ಗ, ರಸ್ತೆ, ದಾರಿ, ಹಾದಿ, ಬೀದಿ.

Roadbook(ರೋಡ್‌ಬುಕ್) n. traveller's guide book ಪ್ರಯಾಣಿಕರಿಗಾಗಿ ತಯಾರಿಸಿರುವ ರಸ್ತೆಗಳ ಕೈಪಿಡಿ.

Road-hog (ರೋಡ್ ಹಾಗ್) n. dangerously driving motorist. ಅತ್ಯಂತ ಅಪಾಯಕರವಾಗಿ ಮೋಟಾರನ್ನು ಓಡಿಸುವವ.

Roadmetal (ರೋಡ್ ಮೆಟಲ್) n. broken stones used for macadamising. ರಸ್ತೆಗೆ ಹಾಕುವ ಜಲ್ಲಿ ಕಲ್ಲು.

Roadstead (ರೋಡ್‌ಸ್ಟೆಡ್) n. place where ships lie at anchor. ಹಡಗುಗಳು ನಿಲ್ಲುವ ಸ್ಥಳ.

Roadway (ರೋಡ್ ವೇ) n. high way. ರಾಜಮಾರ್ಗ, ದೊಡ್ಡ ರಸ್ತೆ.

Roam (ರೋಮ್) vt. & i. ramble, wander about. ಅಡ್ಡಾಡು, ತಿರುಗು, ಅಲೆ.

Roar (ರೋಅರ್)n. loud deep hoarse sound as of lion. ಗರ್ಜನೆ, ಮೊರೆತ, ಅಬ್ಬರ. vi. & t. emit roar. ಗರ್ಜಿಸು, ಮೊರೆ, ಆರ್ಭಟಿಸು, ಘೋರ್ಗರೆ.

Roast (ರೋಸ್ಟ್) vi. & i. cook or heat by exposure to open fire or sun (sl.) banter. ಸುಡು, ಕರಿ, ಹುರಿ, ಬೈಯು. n. roast meat. ಕರಿದ ಬಾಡು.

Rob(ರಾಬ್)vt. & i. plunder; steal, deprive of. ಸುಲಕೊ, ದರೋಡೆ ಮಾಡು, ಕಸಿದುಕೊ, ಕಿತ್ತುಕೊ.

Robber (ರಾಬರ್) n. plunderer, thief. ಸುಲಿಗೆಗಾರ, ಕಳ್ಳ.

Robb'ery (ರಾಬರಿ) n. plundering, theft. ಕಳ್ಳತನ, ದರೋಡೆ.

Robe (ರೋಬ್) n. long loose garment. ಊದ್ದಂಗಿ, ನಿಲುವಂಗಿ, ಗೌನು.

Robin (ರಾಬಿನ್) n. kind of European bird. ಒಂದು ಜಾತಿಯ ಯೂರೋಪಿನಲ್ಲಿ ಸಿಕ್ಕುವ ಹಕ್ಕಿ.


Robin

Robot (ರೋಬಾಟ್) n. automaton. ಯಾಂತ್ರಿಕ ಮನುಷ್ಯ.

Robust (ರೋಬಸ್ಟ್) a. of strong health and physique, ದೃಢಗಾತ್ರ, ಪುಷ್ಟ, ಬಲವುಳ್ಳ.

Robustness (ರೋಬಸ್ಟ್‌ನೆಸ್) n. quality of being robust. ದೇಹದೃಢತೆ, ಬಲವುಳ್ಳ ಶಾರೀರಿಕ ಸ್ಥಿತಿ.

Rock (ರಾಕ್) n large mass of stone. ದೊಡ್ಡ ಕಲ್ಲು, ಶಿಲೆ, ಬಂಡೆ. vt. & i. oscillate; move to and fro in cradle or in the arms. ತೂಗು, ಆಡಿಸು. ಓಲಾಡು, ಉರುಟಾಡು, ಅಲ್ಲಾಡು, ಅಲ್ಲಾಡಿಸು.

ock'et (ರಾಕೆಟ್) n. an artificial



Rocket

firework, a cylindrical piece propelled by ignition. ಆಕಾಶಬಾಣ, ರಾಕೆಟ್ಟು.

ocking-horse(ರಾಕಿಂಗ್-ಹಾರ್ಸ್)n. wooden horse mounted on rockers. ತೂಗು ಕುದುರೆ.

od (ರಾಡ್) n. a slender straight round stick or metal bar, wand, switch, cane or birch for flogging. ಕಡ್ಡಿ, ಕೋಲು, ಕಂಬಿ, ದಂಡ. a. r. in pickle, a scolding in store. ಮುಂದೆ ಕೇಳಬೇಕಾಗಿರುವ ಬೈಗಳು, ದೂರು.

od'ent (ರೋಡೆಂಟ್) n. animal of the order rodentia of gnawers including rats, etc. ಬಾಚಿಹಲ್ಲು ಇರುವ ದಂಶಕವರ್ಗದ ಪ್ರಾಣಿ.

odomont (ರೋಡೋಮಾಂಟ್) n. & a. vain-boaster, vainly boasting. ವೃಥಾಜಂಭ ಹೊಡೆಯುವವ, ವ್ಯರ್ಥವಾಗಿ ಜಂಭ ಹೊಡೆಯುವ ಸ್ವಭಾವದ.

oe (ರೋ) n. a species of deer, the female of the hart, mass of eggs in female fish. ಜಿಂಕೆ, ಹೆಣ್ಣು ಜಿಂಕೆ, ಮೀನಿನ ಅಂಡಗಳು.

ogation (ರೊಗೇಷನ್) n. supplication. ಪ್ರಾರ್ಥನೆ.

ogatory (ರೊಗೇಟರಿ) a. relating to investigation. ಅನುಸಂಧಾನಕ್ಕೆ ಸಂಬಂಧಿಸಿದ.

ogue (ರೋಗ್) n. rascal, swindler, knave. ಠಕ್ಕ, ಲುಚ್ಚ, ದಗಾಕೋರ, ಪಟಿಂಗ.

oguery (ರೋಗರಿ)n. mischievousness, cheating, knavery. ಮೋಸ, ದೌಷ್ಟ್ಯ, ಠಕ್ಕು.

Roguish (ರೋಗಿಷ್) a. pertaining to a rogue, knavish. ಠಕ್ಕನಿಗೆ ಸಂಬಂಧಿಸಿದ.

Roister (ರಾಯಿಸ್ಟರ್) vi. revel in a noisy manner, to create an uproar. ಹೆಂಡಕುಡಿದು ಗಲಭೆ ಎಬ್ಬಿಸು, ಗಲಾಟೆಮಾಡು.

Roistering(ರಾಯಿಸ್ಟರಿಂಗ್) n. blustering action. ಉಪದ್ರವ, ಗಲಭೆ.

Role (ರೋಲ್) n. actor's part, one's task or function. ಪಾತ್ರ, ಒಬ್ಬನು ಕೈಕೊಂಡ ವಿಶೇಷ ಕೆಲಸ ಅಥವಾ ಕರ್ತವ್ಯ.

Roll (ರೋಲ್) n. thing rolled; register, list, rolling motion. ಕಾಗದದ ಉರುಳೆ, ಸುರುಳಿ, ಪಟ್ಟಿ. vt. & i. move by turning on axis; sway or rock from a roller, ಉರುಳು, ಹೊರಳು, ತೂಗು, ಪ್ರತಿಧ್ವನಿಸು. ದಿಂಡುರುಳಿಸು. a. rolling stone, person who never sticks to anything. ಯಾವ ಸ್ಥಳದಲ್ಲೂ ನೆಲೆಯಾಗಿ ನಿಲ್ಲದವನು.

Roll'call (ರೋಲ್ ಕಾಲ್) n. calling over a list of persons. ಹಾಜರಿ ಪಟ್ಟಿ.

Rolledgold (ರೋಲ್ಡ್‌ಗೋಲ್ಡ್) n. thin gold film covered over a metal. ಚಿನ್ನದ ಮುಲಾಮು ಮಾಡಿದ ಲೋಹ.

Roll'er (ರೋಲರ್) n. cylinder used alone as part of machine. ಉರುಳು, ಉರುಳು ಗುಂಡು, ಗುಂಡುಕಲ್ಲು, ಲಟ್ಟಣಿಗೆ.



Roller

Rollick (ರಾಲಿಕ್) vi. move in a

jovial way. ನಲಿದಾಡು, ಸಂತೋಷದಿಂದಿರು.

Roman (ರೋಮನ್) n. citizen of the City of Rome, a kind of type. ರೋಮ್ ನಗರದ ನಿವಾಸಿ, ಒಂದು ವಿಧದ ಅಚ್ಚುಮೊಳೆ.

Romance′ (ರೋಮಾನ್ಸ್) n. any fictitious & wonderful tale. ಕಾದಂಬರಿ, ಕಲ್ಪಿತಕಥೆ, ಕಲ್ಪನೆ.

Romantic (ರೊಮಾನ್ಟಿಕ್) a. fantastic, fanciful. ಸಾಹಸಿಕ, ಅದ್ಭುತ, ಕಾಲ್ಪನಿಕ, ವಿಚಿತ್ರ, ಭಾವನಾಸ್ವಾತಂತ್ರ್ಯದ.

Romp (ರಾಂಪ್) vt. play together boisterously. ಒಟ್ಟಿಗೆ ಗಲಾಟೆ ಮಾಡುತ್ತ ಆಟವಾಡು.

Romper (ರಾಂಪರ್) n. an overall for a child. ಮಕ್ಕಳಿಗೆ ತೊಡಿಸುವ ಒಂದು ತೊಡಿಗೆ.

Rood (ರೂಡ್) n. crucifix, quarter of an acre. ಕ್ರಿಸ್ತನ ಶಿಲುಬೆಯರೂಪ, (ಕಾಲು) ಎಕರೆ.

Roof (ರೂಫ್) n. upper covering of a house or vehicle, vault of the mouth. ಮೇಲು ಛಾವಣಿ, ಮಾಡ, ಮಾಳಿಗೆ, ಗಾಡಿಯ ಕಮಾನು, ಹೊದ್ದಿಗೆ, ಅಂಗಳ, ತಾಲು. vt. cover with roof. ಚಪ್ಪರಹಾಕು, ಕಟ್ಟು, ಮಾಡು, ಹೊದಿಸು.

Roofing (ರೂಫಿಂಗ್) n. roof. ಛಾವಣಿ.

Roof-tree (ರೂಫ್-ಟ್ರೀ) n. beam at the angle of a roof. ಛಾವಣಿಯ ಕೋಣಕ್ಕೆ ಸೇರುವ ಜಂತಿ.

Rook (ರೂಕ್) vt. cheat, swindle. ವಂಚಿಸು, ಠಕ್ಕಿಸು, ಮೋಸಮಾಡಿ ದುಡ್ಡುಸೆಳೆ. n. black bird of crow tribe; cheat ಒಂದು ಜಾತಿಯ ಕಾಗೆ; ಠಕ್ಕ, ಮೋಸಗಾರ.

Rook′ery (ರೂಕರಿ) n. colony of rooks, crowded cluster of mean houses. ಕಾಗೆಗಳ ವಸತಿಸ್ಥಾನ, ಕಿ ದಿರುವ ಗುಡಿಸಲ ಗುಂಪು, ಕೊಂಪೆ.

Room (ರೂಮ್) n. chamber, a lity to accommodate conten opportunity, scope(plu.) apa ments or lodgings. ಎಡೆ, ಸ್ಥ ಕೋಣೆ, ಕೊಠಡಿ; ಅವಕಾಶ, ಸ ಆಸ್ಪದ, ವಾಸಸ್ಥಾನ. r. & to spa ample room. ಬೇಕಾದಷ್ಟು (ಹೆಚ ಸ್ಥಳ.

Startling (ಸ್ಟಾರ್ಟ್ಲಿಂಗ್) a. alarming. ಗಾಬರಿ ಪಡಿಸುವ.

Starve(ಸ್ಟಾರ್ವ್)vi. t. die or suffer acutely from lack of food, without or with short of food ಹೊಟ್ಟೆಗಿಲ್ಲದೆ ಬಳಲು, ಹೊಟ್ಟೆಗೆ ಕೊಡದ ಕೊಲ್ಲು.

Starv'ation (ಸ್ಟಾರ್ವೇಶನ್) n. ac of starving. ಉಪವಾಸ ಸಾಯುವುದು

State (ಸ್ಟೇಟ್) n. existing condition of something, rank ceremonial pomp. a civil community having its own government and laws. ಸ್ಥಿತಿ, ಅವಸ್ಥೆ, ಪದವಿ ವೈಭವ, ಆಡಂಬರ, ರಾಜ್ಯ, ರಾಷ್ಟ್ರ. vt. express in words, in detail o formally. ಹೇಳು, ವಿವರಿಸು, ನಿವೇದ ಮಾಡು.

Statecraft (ಸ್ಟೇಟ್‌ಕ್ರಾಫ್ಟ್)n. art c conducting affairs of a state statesmanship. ರಾಜ್ಯತಂತ್ರ.

State'ly (ಸ್ಟೇಟ್ಲಿ) a. majestic imposing; elevated. ಭವ್ಯ, ಗಂಭೀ ವೈಭವಪೂರ್ಣ, ಉನ್ನತ.

State'ment (ಸ್ಟೇಟ್‌ಮೆಂಟ್) n. presentation of a fact or problem ಹೇಳಿಕೆ, ವಾಙ್ಮೂಲ, ಉಕ್ತಿ, ಕಥನ ವಚನ.

State-room (ಸ್ಟೇಟ್-ರೂಮ್) r reserved apartment in a cabi ಹಡಗಿನಲ್ಲಿ ಗೊತ್ತುಪಡಿಸಿದ ಕೋಣೆ.

States'man (ಸ್ಟೇಟ್ಸ್‌ಮನ್) n sagacious, far-sighted practica politician. ರಾಜನೀತಿನಿಪುಣ.

Stat'ics(ಸ್ಟ್ಯಾಟಿಕ್ಸ್)n. (plu.) branc of physics concerned wit bodies at rest and forces i equilibrium. ಪದಾರ್ಥ ಗುರು ವಿಜ್ಞಾನ.

Sta'tion (ಸ್ಟೇಶನ್) n. situatio office, rank, stopping place f railway trains. ಜಾಗ, ಸ್ಥಾನ, ಠಾ ಪದವಿ, ದರ್ಜೆ, ಅವಲೋಕಸ್ಥಾನ, ರಕ್ಷ ಸ್ಥಾನ, ಗಾಡಿಗಳ ನಿಲ್ದಾಣ, “ರೈಲ್ವೆಸ್ಟೇಷ

ta'tionary (ಸ್ಟೇಷನರಿ) a. still, not in motion, not progressive. ಅಚಲ, ಸ್ಥಿರ.

ta'tioner (ಸ್ಟೇಷನರ್) n dealer in stationery. ಲೇಖನ, ಸಾಹಿತ್ಯಗಳನ್ನು ಮಾರುವವ.

tationery (ಸ್ಟೇಷನರಿ) n. writing materials and connected goods. ಲೇಖನ ಸಾಮಗ್ರಿ.

tatistical (ಸ್ಟಟಿಸ್ಟಿಕಲ್) a. pertaining to statistics. ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ.

tatis'tics (ಸ್ಟಟಿಸ್ಟಿಕ್ಸ್) n.plu. numerical facts systematically collected on a subject, science of statistics ದೇಶದ ಅವಸ್ಥಾ ವಿಶೇಷಗಳ ಅಂಕೆಸಂಖ್ಯೆಗಳು, ಅಂಕವಿಜ್ಞಾನ.

tatuary (ಸ್ಟ್ಯಾಚ್ಯುಎರಿ) n. one who carves, statues. ಪ್ರತಿಮೆಗಳನ್ನು ನಿರ್ಮಿಸುವ ಶಿಲ್ಪಿ.

tat'ue (ಸ್ಟ್ಯಾಚ್ಯು) n. sculptured figure of person or animal. ವಿಗ್ರಹ, ಪುತ್ಥಳಿ, ಮೂರ್ತಿ.



Statue

atuesque (ಸ್ಟ್ಯಾಚ್ಯುಎಸ್ಕ್) a. having the form of a statue. ಪ್ರತಿಮೆಯ ಆಕಾರದ.

at'ure (ಸ್ಟೇಚ್ಯರ್) n. bodily height. ಶರೀರದ ಉದ್ದ, ನಿಲುವಿಕೆ, ಉದ್ದಳತೆ.

at'us (ಸ್ಟೇಟಸ್) n. position held by a person or community, one's rank. ಸ್ಥಿತಿ, ಪದವಿ, ದರ್ಜೆ, ನೆಲೆ.

Stat'ute (ಸ್ಟಟ್ಯೂಟ್) n. a legislative enactment. ಕಾಯಿದೆ, ಕಾನೂನು, ನಿಬಂಧನೆ, ಕಟ್ಟಳೆ, ವಿಧಿ.

Stat'utory (ಸ್ಟಟ್ಯುಟರಿ) a. enacted by a statute, ಕಾನೂನಿನಿಂದ (ಕಾಯಿದೆಯಿಂದ) ಸ್ಥಾಪಿಸಿದ.

Staunch, stanch (ಸ್ಟಾಂಚ್) a. constant to obligations or purpose, untiring service or loyalty ದೃಢ, ಧೀರ, ನಿಶ್ಚಲ, ಸತತ.

Stave (ಸ್ಟೇವ್) v.t.(with in) break hole in (cask or boat) ಪೀಪಾಯಿ, ಅಥವಾ ದೋಣಿಯಲ್ಲಿ ತೂತುಕೊರೆ. s. off, prevent, ತಡೆಗಟ್ಟು.

Stay (ಸ್ಟೆ) n. prop, support. check, sojourn, stamina.(plu.) corset. ಆಧಾರ, ಆನಿಕೆ, ತಡೆಯುವಿಕೆ, ವಿಳಂಬ, ವಸ್ತಿ, ವಾಸ್ತವ್ಯ; ಸಹನಶಕ್ತಿ, ಬಾಳಿಕೆ, ರವಕೆ, ಕುಪ್ಪಸ. vt. i. check, dwell, wait, show capacity for prolonged effort. ನಿಲ್ಲಿಸು, ಇರು, ನಿಲ್ಲು, ವಸ್ತಿಮಾಡು, ತಾಳು, ಕಾಯು, ಶಕ್ತಿತೋರು, ಬಾಳಿಕೆ ಬರು.

Stead (ಸ್ಟೆಡ್) n. place, room. ಸ್ಥಳ, ಸ್ಥಾನ.

Stead'fast (ಸ್ಟೆಡ್‌ಫಾಸ್ಟ್) a. firm, constant. ಸ್ಥಿರ, ಗಟ್ಟಿ, ದೃಢ, ನಿಶ್ಚಲ.

Steady' (ಸ್ಟೆಡಿ) a. fixed, stable, constant. ಸ್ಥಿರ, ನಿಶ್ಚಲ, ಏಕಪ್ರಕಾರವಾದ.

Steak (ಸ್ಟೀಕ್) n. slice of meat, ಮಾಂಸದ ತುಂಡು.

Steal (ಸ್ಟೀಲ್) vt. i. secretly carry off or appropriate, come or go noiselessly or unnoticed. ಕದಿಯು, ಕಣ್ಣುತಪ್ಪಿಸಿಹೋಗು, ಗೊತ್ತಾಗದಂತೆ ಬರು, ಕಳ್ಳತನಮಾಡು.

Stealth (ಸ್ಟೆಲ್ತ್) n. evasion of notice ಕಳವು, ಛಪಾವಣೆ.

Steam (ಸ್ಟೀಮ್) n. the gas into which boiling water turns, any vapour or exhalation, ಹಬೆ, ಆವಿ,

ಉಗಿ, ಬಾಷ್ಪ. vt. i. send off steam, go; be driven by steam ಹಬೆಬಿಡು, ಉಗೆ (ಹಬೆ) ಯಿಂದ ನಡೆ.

Steam'er (ಸ್ಟೀಮರ್) n. steamship or steam driven boat, ಹೊಗೆ ಹಡಗು, ಅವಿಬೋಟು.

Steed (ಸ್ಟೀಡ್) n. a horse. ಕುದುರೆ, ಅಶ್ವ.

Steel (ಸ್ಟೀಲ್) n. kinds of alloy of iron with carbon or other elements, ಉಕ್ಕು, ಆಯಸ, ಸಾರಲೋಹ.

Steep (ಸ್ಟೀಪ್) vt. soak in liquid, imbue, ನೆನೆಹಾಕು, ನೆನಸು. ತೋಯಿಸು. a. greatly inclined, hard to climb up. ಪ್ರಪಾತ, ಏರಿ, ಹತ್ತಲು ಕಷ್ಟವಾದ, ಕಡಿದಾದ.

St'eeple (ಸ್ಟೀಪಲ್) n. a tower or a church or building ending in point. ಗೋಪುರ, ಶಿಖರ.



Steeple

Stpeele-chase (ಸ್ಟೀಪ್ಲ್-ಚೇಸ್) n. horse-race across country and over obstacles, ಹಳ್ಳಗಳು, ಬೇಲಿಗಳು ಮುಂತಾದುವನ್ನು ದಾಟಿ ಆಗುವ ಕುದುರೆ ಪಂಥ.

Steer (ಸ್ಟೀರ್) n. a young ox, ಹೋರಿ vt. i. manage rudder or guiding apparatus, direct the course ಚುಕ್ಕಾಣಿಯಿಂದ ಹಡಗು ನಡೆಸು, ದಾರಿಗೆ ತಿರುಗಿಸು.

Steers'man (ಸ್ಟೀರ್ಸ್‌ಮನ್) n. one who steers. ಚುಕ್ಕಾಣಿದಾರ, ನಾವಾಡಿಗ, ಕರ್ಣಧಾರ.

Stell'ar (ಸ್ಟೆಲರ್) a. of stars. ನಕ್ಷತ್ರಗಳ.

Stellate (ಸ್ಟೆಲೆಟ್) a. resembling a star. ನಕ್ಷತ್ರಾಕಾರದ.

Stem (ಸ್ಟೆಮ್) n. the main bo of a plant, stock of a famil prow of a ship, ಕಾಂಡ, ಅಡಿಮ ಬಡ್ಡೆ, ವಂಶ, ಶಾಖೆ, ಸಂತತಿ, ಹಡ ಮುಂಭಾಗ. vt. make headw against, resist the force ತರುಬು, ಎದುರಿಸು, ತಡೆಗಟ್ಟು, ಅ ಗಟ್ಟು.

Stench (ಸ್ಟೆಂಚ್) n. strong b odour or smell ದುರ್ಗಂಧ ನಾ ಗವುಲು, ಗಬ್ಬುವಾಸನೆ.

Sten'cil (ಸ್ಟೆನ್ಸಿಲ್) n. thin plate metal,&c punched with patt ಅಚ್ಚು ಹಾಕಿರುವ ತಗಡು.

Stenographer (ಸ್ಟೆನಾಗ್ರಫರ್) one who is skilled in shortha ಲಘುಲೇಖಕ.

Stenog'raphy (ಸ್ಟೆನಾಗ್ರಫಿ) n. sh hand ಸಂಕ್ಷಿಪ್ತಲಿಪಿ, ಲಘುಲೇಖನ ಕ

Stentorian (ಸ್ಟೆಂಟೋರಿಯನ್) extremely loud. ಬಹಳ ಗಟ್ಟಿಯ ಧ್ವನಿಯುಳ್ಳ.

Step (ಸ್ಟೆಪ್) vt. i. set aside foot ಹೆಜ್ಜೆ ಇಡು. n. pace, st gait, degree, (pl.) proceed ನಡಿಗೆ, ಹೆಜ್ಜೆ, ಮೆಟ್ಟಿಲು, ಪಾವಟಿಗೆ. (ಬ. ಮುಂದೆಸಾಗುವುದು. s. into the sh of, succeed ಸ್ಥಾನಕ್ಕೆ ಬರು, ಸ್ಥಾನಕ್ಕೆ s child, one's wite' or husba child by previous marriage ಕೂಸು, ಮಲಮಗು. s mother on parents later wife. ಮಲತಾ ವಿಮಾತೆ.

Step-ladder (ಸ್ಟೆಪ್‌ಲ್ಯಾಡರ್) n. a ladder with steps as shown in the picture. ಮೆಟ್ಟಲುಗಳಿರುವ ಏಣಿ.



Step-ladder

Steppe (ಸ್ಟೆಪ್) n level, tree less plain. ಮರಗಳಿಲ್ಲದ ವಿಶಾಲಬೈಲು, ಚಪ್ಪಟೆಯಾದ ಮೈದಾನ, ತಪ್ಪಲು.

Stepping-stone (ಸ್ಟೆಪಿಂಗ್-ಸ್ಟೋನ್) n. stone on which one may place the foot in crossing, (fig) means to an end. ಮೆಟ್ಟುಗಲ್ಲು, ಸಾಧನ.

Ster'eotyped (ಸ್ಟೀರಿಓಟೈಪ್ಡ್) a. conventional, unvarying. ರೂಢಿಬದ್ಧ, ಬದಲಾಗದ, ಸ್ಥಿರ.

Ste'rile (ಸ್ಟೆರಾಇಲ್) a. barren. unproductive, not bearing seed, ಬಂಜೆ, ಗೊಡ್ಡು, ಬರಡು.

Sterility (ಸ್ಟೆರಿಲಿಟಿ) n. barrenness. ಬಂಜೆತನ.

Sterl'ing (ಸ್ಟರ್ಲಿಂಗ್) a. of the standard British value sound, genuine, of solid worth, ಇಂಗ್ಲಿಷ್ ನಾಣ್ಯದ, ಉತ್ತಮತರಹ, ಚೊಕ್ಕ, ಊಚು.

Stern (ಸ್ಟರ್ನ್) a. austere, harsh, steadfast. ನಿಷ್ಠುರ, ಕಡಾಕಡಿ, ಕಠಿಣ; ಗಂಟು ಮೋರೆಯ.

Steth'oscope (ಸ್ಟೆತೊಸ್ಕೋಪ್) n. instrument making patient's heart action and other internal sounds audible to user. ಎದೆಯ ಒಳಗಿನ ಬಡಿತವನ್ನು ಪರೀಕ್ಷಿಸುವ ಕೊಳವೆ.



Steth'oscope

Stew (ಸ್ಟ್ಯೂ) vt. & i. boil slowly in a closed vessel, to be cooked slowlv. ಮುಚ್ಚಿದ ಪಾತ್ರೆಯಲ್ಲಿ ನಿಧಾನವಾಗಿ ಬೇಯಿಸು.

Stew'ard (ಸ್ಟ್ಯುಅರ್ಡ್) n. one who manages the domestic concerns of a family or institution. ಪಾರುಪತ್ಯಗಾರ, ಉಗ್ರಾಣಿ; ಕೊಟ್ವಾರ, ಕಾರಭಾರಿ.

Stick (ಸ್ಟಿಕ್) vt. i fix in, cause to adhere, hold to, remain, adhere closely. ಸಿಕ್ಕಿಸು, ಅಮರು, ಒರಕೊಳ್ಳು, ಅಂಟಿಸು; ಮೆತ್ತಿಕೊಳ್ಳು, ಅಂಟಿಕೊಳ್ಳು, ಹಿಡಿ, ಪಟ್ಟಾಗಿರು, ಗಟ್ಟಿಯಾಗಿ ಅಂಟಿಕೊಳ್ಳು. n. thin wooden rod shaped pieces. ಬೆತ್ತ, ಕೋಲು, ಬಡಿಗೆ. s. at nothing. be unscrupulous. ಮೋಸಮಾಡು, ಮಾತಿಗೆ ತಪ್ಪು.

Stick'y (ಸ್ಟಿಕಿ) a. adhesive; glutinous. ಜಿಗಟಾದ, ಅಂಟುಳ್ಳ.

Stiff (ಸ್ಟಿಫ್) a rigid, difficult. ಬಿರುಸು, ಮರಗಟ್ಟಿದ, ಕಠಿಣವಾದ, ಬಿಗಿಯಾದ.

Stiff-necked (ಸ್ಟಿಫ್-ನೆಕ್ಡ್) a. stubborn, obstinate. ಮೊಂಡಾದ, ಅಹಂಕಾರಿಯಾದ.

Stifle (ಸ್ಟೈಫ್ಲ್) vt. i. suffocate, smother, extinguish. ಉಸಿರು ಕಟ್ಟಿಸು, ಉಸಿರುಕಟ್ಟಿ ಸಾಯಿ, ಸೊಲ್ಲಡಗಿಸು, ಆರಿಸು, ನಂದಿಸು, ನಂದು.

Stig'ma (ಸ್ಟಿಗ್ಮಾ) n. moral spot or stain or brand. ಅಪಕೀರ್ತಿ, ಕಳಂಕ, ಮಚ್ಚೆ, ಕಲೆ, ನಿಂದೆ.

Stig'matize (ಸ್ಟಿಗ್ಮಟೈಜ್) vt. brand with a stigma. ಕಳಂಕಹಚ್ಚು, ಹೆಸರು ಕೆಡಿಸು.

Stile (ಸ್ಟೈಲ್) n. steps to aid getting over a wall ಗೋಡೆಯನ್ನು ದಾಟುವುದಕ್ಕೆ ಕಟ್ಟಿರುವ ಮೆಟ್ಟಿಲುಗಳು.



Stile

Stilett'o (ಸ್ಟಿಲೆಟೊ) n. small dagger. ಕಠಾರಿ.

Still (ಸ್ಟಿಲ್) a. motionless, hushed, silent. ಸ್ತಬ್ಧ, ಅಚಲ, ಶಾಂತ, ಸ್ಥಗಿತ. vt. quiet, calm; lull to rest. ಶಾಂತಗೊಳಿಸು, ಸುಮ್ಮನಿರಿಸು. adv.

nevertheless, for all that. ಇನ್ನೂ, ಆದಾಗ್ಯೂ. n. hushed state, apparatus for distilling spirits, &c. ಬಟ್ಟಿ ಇಳಿಸುವ ಪಾತ್ರೆ, ಸ್ತಬ್ಧತೆ, ಶಾಂತಿ.


Stilt

Still'born (ಸ್ಟಿಲ್‌ಬಾರ್ನ್) a born dead ಗರ್ಭದಲ್ಲಿ ಸತ್ತ, ಇಳಿದ ಗರ್ಭದ.

Stilt (ಸ್ಟಿಲ್ಟ್) n. a piece of wood with a rest for the foot used in sport (ಆಟದ) ಮರಗಾಲು, ಪಾದಯುಷ್ಟಿ.

Stil'ted (ಸ್ಟಿಲ್ಟೆಡ್) a. high flown or bombastic. ವಾಗಾಡಂಬರದ.

Stim'ulant (ಸ್ಟಿಮ್ಯುಲಂಟ್) a. increasing vital action. ಉತ್ತೇಜಕ, ಚೇತನಾಪ್ರದ, ಉದ್ದೀಪಕ. n. a stimulant drug or food. ಉದ್ದೀಪಕ ಔಷಧ.

Stim'ulate (ಸ್ಟಿಮ್ಯುಲೇಟ್) vt apply stimulus to, spur to action or increased vigour. ಉತ್ತೇಜನಕೊಡು, ಉದ್ದೀಪಿಸು, ಚೇತನಕೊಡು, ಬಲಪಡಿಸು.

Stimu'lus (ಸ್ಟಿಮ್ಯುಲಸ್) n. rousing influence, thing that evokes activity in tissues. ಉತ್ತೇಜನಜನ್ಯ, ಉತ್ತೇಜಕ ಪದಾರ್ಥ.

Sting (ಸ್ಟಿಂಗ್) n. tubular point with which poison is injected by bee, &c. wound, any acute bodily or mental pain, pungency. ಕೊಂಡಿ, ಮುಳ್ಳು, ಗಾಯ, ವೇದನೆ. ಸುಡುಸುಡಿ, ತೀಕ್ಷ್ಣತೆ. vt. i. puncture with sting, cause sharp pain to, wound the feelings of, be pungent ಕೊಂಡಿಯಿಂದ ಚುಚ್ಚು, ಕುಟುಕು, ಕಡಿ, ನೋವುಂಟುಮಾಡು, ಮನಸ್ಸು ನೋಯಿಸು, ತೀಕ್ಷ್ಣವಾಗಿರು.

Stin'gy (ಸ್ಟಿಂಜಿ) a. meanly averse to spending, niggardly. ಜಿಪುಣ, ಜೀನ.

Stink (ಸ್ಟಿಂಕ್) vi. have foul or nasty smell. ನಾರು, ದುರ್ವಾಸನೆ ಉಂಟಾಗಿರು. n. foul or nasty smell. ದುರ್ವಾಸನೆ, ದುರ್ಗಂಧ.

Stint (ಸ್ಟಿಂಟ್) vt. supply on a niggardly scale. ಕೈಹಿಡಿದುಕೊಡು, ಮಿತಮಾಡು. n. limit, restraint, task ಮಿತಿ, ಮಟ್ಟು, ತಡೆತ, ಗೊತ್ತಿನ ಕೆಲಸ.

Stip'end (ಸ್ಟೈಪೆಂಡ್) n. settled pay. ವಿದ್ಯಾರ್ಥಿ ವೇತನ, ಮಿತಿಸಂಬಳ.

Stipend'iary (ಸ್ಟೈಪೆಂಡಿಅರಿ) a. receiving stipend ಸಂಬಳ ಪಡೆಯುವ, ವಿದ್ಯಾರ್ಥಿ ವೇತನ ಹೊಂದುವ.

Stipple (ಸ್ಟಿಪ್‌ಲ್) vt. engrave by means of dots. ಚುಕ್ಕಿಗಳಿಂದ ಕೆತ್ತನೆ ಕೆಲಸ ಮಾಡು.

Stip'ulate (ಸ್ಟಿಪ್ಯುಲೇಟ್) vt. i. state to be part of one's terms ಗೊತ್ತುಮಾಡು, ಗಡುಕಟ್ಟು, ಕರಾರುಮಾಡು.

Stipulation (ಸ್ಟಿಪ್ಯುಲೇಶನ್) n. condition, agreement. ಕರಾರು, ಶರತ್ತು, ನಿಯಮ.

Stir (ಸ್ಟರ್) vt. i. set or keep moving, excite rouse, touch the feeling of. ಕಲಕು, ಕೆದರು, ಕದಡು, ಎಬ್ಬಿಸು, ಏಳು, ಕದಲು, ಹುರಿದುಂಬಿಸು. n rustle commotion agitation ಗುಲ್ಲು, ಗಡಿಬಿಡಿ, ಕೋಲಾಹಲ, ವಿಪ್ಲವ, ತುಮುಲ.

Sti'rrup (ಸ್ಟಿರಪ್) n. rider's foot rest. ರಿಕಾಬು, ರಿಕೇಪು, ಪಾದಧಾರಿಕೆ.

Stitch (ಸ್ಟಿಚ್) n. single pass of needle acute pain in side ಹೊಲಿಗೆ, ತಿಬ್ಬಿ, ಟಾಕು, ಪಾರ್ಶ್ವಶೂಲೆ. vt i sew or unite, practise stitching. ಟಾಕೇಹಾಕು, ಹೊಲಿ.

Stith'y (ಸ್ಟಿದಿ) n. anvil, forge ಅಡಿಗಲ್ಲು, ಪಟ್ಟಡೆ, ಕೋವೆ, ಕಮ್ಮಾ ಶಾಲೆ.

Stiver (ಸ್ಟೈವರ್) n. old Dutch coin. ಹಳೆಯ ಡಚ್ ನಾಣ್ಯ.

Stoa (ಸ್ಟೋಅ) n. porch or portico. ಕಟ್ಟಡದ ಮುಂಭಾಗದಲ್ಲಿ ಕಟ್ಟುವ ಮಂಟಪ.

Stock (ಸ್ಟಾಕ್) n. stump or butt or trunk; family or breed of definite qualities, thegoodsor equipment for carrying on a business; money contributed by way of loan to form the capital of a company, (plu. hist.) timber frame in which offender's ankles were held. ಬುಡ, ಕೊರಡು, ವಂಶ, ಮನೆತನ, ಜಾತಿ. ವ್ಯಾಪಾರ, ಸರಕು, ಮಾಲು, ಬಂಡವಾಳ, ಮೂಲಧನ, (ಬ. ವ) ಕೋಳ. vt. equip with what is needful keep (goods) in stock. ಆವಶ್ಯಕ ವಸ್ತುಗಳನ್ನು ಒದಗಿಸು, ಶೇಖರಿಸಿಡು. take s. of, watch minutely. ಸೂಕ್ಷ್ಮವಾಗಿ ಪರೀಕ್ಷಿಸು take s. in, regard with trust. ನಂಬಿಕೆ ಇಡು.


Stocks

Stockade' (ಸ್ಟಾಕೇಡ್) n. fence formed of stakes fixed in the ground. ಕಟ್ಟಿಗೆಬೇಲಿ, ಮುಂಡಿಗೆಕೋಟೆ.

Stockbroker (ಸ್ಟಾಕ್ ಬ್ರೋಕರ್) n. broker who buys and sells stocks or shares for others. ಬಂಡವಾಳ, ಪಾಲುಗಾರಿಕೆ. ಇವುಗಳ ಸಂಬಂಧವಾಗಿ ದಳ್ಳಾಳಿ ವ್ಯಾಪಾರ ಮಾಡುವವ.

Stock'ing (ಸ್ಟಾಕಿಂಗ್) n. (pin.) knitted or woven covering for foot and leg. ಕಾಲುಚೀಲ.

Stodge (ಸ್ಟಾಡ್ಜ್) n. a jumbled mass. ಮುದ್ದೆ

Stoic (ಸ್ಟೋಇಕ್) n. one indifferent to pleasure or pain. ವಿರಕ್ತ, ಉದಾಸಿ, ನಿಸ್ಪೃಹ.

Stol'id (ಸ್ಟಾಲಿಡ್) a. dull, stupid, foolish. ದಡ್ಡ, ಮುಟ್ಠಾಳ, ಮೂರ್ಖ.

Sto'mach (ಸ್ಟಮಕ್) n. cavity into which food passes for digestion, appetite, inclination, courage for. ಹೊಟ್ಟೆ, ಅನ್ನಾಶಯ, ಹಸಿವೆ, ಇಚ್ಛೆ, ಧೈರ್ಯ.

Stone (ಸ್ಟೋನ್) n. a piece of rock of any shape and of no great size, weight of 14 lbs. ಕಲ್ಲು, ೧೪ ಪೌಂಡು ತೂಕ. vt. pelt with stones. ಕಲ್ಲು ಎಸೆ, ಒಗಿ. s. blind, completely blind. ಸಂಪೂರ್ಣ ಕುರುಡು. s. throwing, finding fault with one's neighbours. ನೆರೆಹೊರೆಯವರ ತಪ್ಪು ಹುಡುಕು. a stone's throw, a short distance. ಸ್ವಲ್ಪದೂರ, (ನೂರು ಗಜದೂರ).

Ston'y (ಸ್ಟೋನಿ) a. abounding in stones, hard, unfeeling. ಕಲ್ಲಿನ, ಕಠಿಣ, ಹೃದಯವಿಲ್ಲದ.

Stool (ಸ್ಟೂಲ್) n. seat without a back, evacuation of bowels. ಅಡ್ಡ ಮಣೆ, ಮುಕ್ಕಾಲು ಮಣೆ, ಮಲಶೋಧನೆ, ಶೌಚ.


Stool

Stoop (ಸ್ಟೂಪ್) vi. t. bend down, yield. ಬೊಗ್ಗು, ಬಗ್ಗು, ಎರಗು, ಬಾಗು.

Stop (ಸ್ಟಾಪ್) vt.i. stuff up, prevent passage of, cease for action or speech, halt or pause. ಮುಚ್ಚು, ಅಟಕಾಯಿಸು, ತರುಬು, ನಿಲ್ಲಿಸು, ನಿಲ್ಲು, ಇರು. n. a pause, cessation, mark indicating a pause ನಿಲುಗಡೆ, ನಿಲ್ಲುವಿಕೆ, ವಿರಾಮಚಿಹ್ನೆ s. short, stop suddenly. ಅಕಸ್ಮಾತ್ತಾಗಿ ನಿಂತು ಹೋಗು.

Stop-cock (ಸ್ಟಾಪ್ ಕಾಕ್) n. tap to regulate the supply of water, gas, etc. ನೀರು, ಗ್ಯಾಸ್ ಇವನ್ನು

ಹತೋಟಿಯಲ್ಲಿಡಲು ಉಪಯೋಗಿಸುವ ಬಿರಡೆ.

Stopp'age (ಸ್ಟಾಪೇಜ್) n. blocked stage, a cessation. ತಡೆ, ಗತಿ ನಿರೋಧ, ಬಂದು, ನಿಲ್ಲಿಸುವಿಕೆ.

Stopp'er (ಸ್ಟಾಪರ್) n. plug for closing bottle. ಬೆಣೆ, ಬಿರಟೆ, ಬೂಚು, ಮುಚ್ಚುಗೆ, ಮುಚ್ಚಳ.

Stopple (ಸ್ಟಾಪ್‌ಲ್) n. plug. ಬಿರಡೆ.

Store (ಸ್ಟೋರ್) n. abundance, warehouse or storing place. ವಿಪುಲತೆ, ಸಮೃದ್ಧಿ, ಅಂಗಡಿ, ಮಳಿಗೆ, ಭಂಡಾರ, ಕೊಟ್ಟಾರ, ಬಂಡಶಾಲೆ, ಮಂಡಿ. vt. equip or furnish plentifully with, lay up for future use, deposit or keep in warehouse. ಸಂಗ್ರಹಿಸಿಡು, ಭಂಡಾರದಲ್ಲಿಡು, ಕೂಡಿಡು set s. by or on, think highly of. ಅಮೂಲ್ಯವಾಗಿ ತಿಳಿ. in store, waiting. ಮುಂದೆ ಬರಲಿರು.

Stork (ಸ್ಟಾರ್ಕ್) n. tall, stately, white wading bird. ಬಕಪಕ್ಷಿ, ಕೊಕ್ಕರೆ.

Storm (ಸ್ಟಾರ್ಮ್) n. violent disturbance of the atmosphere, commotion in human relations, assault by troops of fortified place ಬಿರುಗಾಳಿ, ಹೆಗ್ಗಾಳಿ, ಕಳವಳ, ಹಲ್ಲಾಮಾಡುವುದು. vt. i. take by storm, talk violently, entrage. ಹಲ್ಲಾಮಾಡು, ಆವೇಶದಿಂದ ಮಾತಾಡು, ರೇಗು, ಸಿಟ್ಟಿನಲ್ಲಿರು.

Storm'y (ಸ್ಟಾರ್ಮಿ) a. boisterous, subject to storms. ಸಿಟ್ಟಿನ, ಉಗ್ರ, ಬಿರುಗಾಳಿ ಬೀಸುವ, ಪ್ರಚಂಡವಾತದ.

Stor'ey, stor'y (ಸ್ಟೋರಿ) n. any of the parts one above the other into which a house is divided. ಅಟ್ಟ, ಮಜಲು, ಮಹಡಿ, ಉಪ್ಪರಿಗೆ, ಮಾಳಿಗೆ.

Stor'y (ಸ್ಟೋರಿ) n. legends or traditions, piece of narrative or tale. ಇತಿಹಾಸ, ಚರಿತ್ರೆ, ಕಥೆ, ವೃತ್ತಾಂತ.

Stout (ಸ್ಟೌಟ್) a. undaunted, resolute, large, corpulent. ಧೈರ್ಯವುಳ್ಳ, ಸಿಕ್ಕಲ, ದಪ್ಪ, ಪ್ರಬಲ, ತೋರ.

Stove (ಸ್ಟೋವ್) n. closed apparatus with fire for warming a room, cooking, &c. ಅಗ್ಗಿಷ್ಟಿಕೆ, ಒಲೆ.



Stove

Stow (ಸ್ಟೋ) vt. pack closely or compactly. ತುಂಬಿಸು, ಗಟ್ಟಿಯಾಗಿ ಕಟ್ಟು.

Straddle (ಸ್ಟ್ರಾಡ್‌ಲ್) vi. & t. spread legs wide, sit astride. ಕಿಸುಗಾಲು ಹಾಕು, ಹಾಗೆ ಕೂತುಕೊ.

Strag'gle (ಸ್ಟ್ರಾಗಲ್) vt. lack compactness, stray or lag behind. ಚದುರಿರು, ಸಡಿಲವಾಗಿರು, ಅಲೆದಾಡು, ತೊಳಲು.

Straight (ಸ್ಟ್ರೇಟ್) a. not curved, direct. ನೇರ, ಸರಾಗ, ನೀಟು, ಸರಳ, ನೆಟ್ಟಗೆ. adv. immediately. ತಕ್ಷಣ, ಕೂಡಲೆ.

Straight'forward (ಸ್ಟ್ರೇಟ್‌ಫಾರ್ವರ್ಡ್) a honest, open. ಸರಳ, ನಿಷ್ಕಪಟಿ, ಪ್ರಾಮಾಣಿಕ.

Straight'way (ಸ್ಟ್ರೇಟ್‌ವೇ) adv. immediately. ಕೂಡಲೇ, ಒಡನೆ, ತಕ್ಷಣ.

Strain (ಸ್ಟ್ರೇನ್) vt. i. stretch lightly. injure by over exertion, wrest from true meaning. pass liquid through strainer. ಬಿಗಿಯಾಗಿ ಚಾಚು, ತಿಣಕು, ಮಲಕು, ಮುಕ್ಕರಿಸು, ಹೆಚ್ಚುಶ್ರಮದಿಂದನೋವಾಗದಂತೆ ಮಾಡು, ಧಾವತಿಪಡು, ಅರ್ಥಹೇಳಲುಪ್ರಯಾಸಪಡು, ಸೋಸು, ಗಾಳಿಸು. n. severe demand

upon person or thing : (plu·) music or verse of specified tendency (sing.) tone or tendency in speech or writing, ಪ್ರಯಾಸ, ಪ್ರಯತ್ನ, ಪೀಡನೆ, (ಬ.ವ.) ಗೀತ, ಹಾಡು, ಧಾಟಿ, ಅಂದ.

Strain'er (ಸ್ಟ್ರೇನರ್) n· filter for liquids, ಜಾಳನೆ, ಜಲ್ಲಡೆ, ಸಾರಣಿಗೆ, ಜರಡಿ.

Strait (ಸ್ಟ್ರೇಟ್) n. (plu.)difficulty, narrow channel connecting two seas or large bodies of water, ಸಂಕಟ, ಪೇಚು, ಪೇಚಾಟ,ಜಲಸಂಧಿ a. narrow, strict. ಇಕ್ಕಟ್ಟಾದ, ಕಡಕ, ಕಷ್ಟ.

Strand (ಸ್ಟ್ರ್ಯಾಂಡ್)n. the beach of the sea or of a lake ದಡ, ದಂಡೆ, ತೀರ. vt. i. run aground ದಂಡೆಗೆ ತಗಲು. (pp. stranded) fig. in difficulties. ಕಷ್ಟಕ್ಕೆ ಒಳಗಾದ.

Strange(ಸ್ಟ್ರೇಂಜ್) a. foreign, unfamiliar or not known to; surprising, eccentric, ಅಪರಿಚಿತ, ಆಶ್ಚರ್ಯಕಾರಕ, ಪರದೇಶದ, ವಿಚಿತ್ರ, ವಿಲಕ್ಷಣ.

Stranger (ಸ್ಟ್ರೇಂಜರ್) a. person strange to someone or to something, ಗುರುತಿಲ್ಲದವ, ಪರಕೀಯ, ಅತಿಥಿ.

Strang'le (ಸ್ಟ್ರ್ಯಾಂಗ್ಲ್) vt. kill by squeezing the windpipe. ಕುತ್ತಿಗೆ ಹಿಸುಕಿ ಕೊಲ್ಲು,ಕೊರಳು ಹಿಚುಕು.

Strangulate (ಸ್ಟ್ರ್ಯಾಂಗ್ಯುಲೇಟ್) vt choke the life out, ಒತ್ತಿ ರಕ್ತ ಚಲನೆಯನ್ನು ನಿಲ್ಲಿಸು, ಉಸಿರುಗಟ್ಟಿಸು.

Strap (ಸ್ಟ್ರ್ಯಾಪ್)n. strip of cloth or leather, a razor strap. ತೊಗಲಿನ ಬಾರು, ಮಿಣಿ, ಮಸೆದೊಗಲು, ಚರ್ಮ ಪಟ್ಟಿ

Strapper (ಸ್ಟ್ರ್ಯಾಪರ್) n. a kind of groom or attendant on horses, ಕುದುರೆಯನ್ನು ನೋಡಿಕೊಳ್ಳುವುದಕ್ಕೆ ನೇಮಿಸಿರುವ ಆಳು.

Strat'agem (ಸ್ಟ್ರ್ಯಾಟಜಮ್) n. an artifice esp. in war, a clever plan, ಶತ್ರುಗಳನ್ನು ವಂಚಿಸುವ ಯುಕ್ತಿ, ಸಂಚು.

Strat'egy (ಸ್ಟ್ರಟಜಿ) n. the art of war. ಯುದ್ಧವಿದ್ಯೆ, ಯುದ್ಧಕೌಶಲ್ಯ.

Strate'gic (ಸ್ಟ್ರಟೀಜಿಕ್) a. of or serving the ends of strategy. ಯುದ್ಧಕೌಶಲ್ಯದ, ಯುಕ್ತಿಯ, ವ್ಯೂಹರಚನೆಯ.

Strategically (ಸ್ಟ್ರಟಜಿಕ್‌ಲೀ) a. pertaining to strategy. ಯುದ್ಧಕೌಶಲ್ಯಕ್ಕೆ ಸಂಬಂಧಿಸಿದ.

Stra'tum(ಸ್ಟ್ರೇಟಮ್)n.(plu strata) layer as of earth or rock, bed, (ಕಲ್ಲಿನ) ಪದರು, ಪರೆ, ಪಟಲ, ಹಾಸುಗೆ.

Straw (ಸ್ಟ್ರಾ) n. dry cut stalks of grain ಕಡ್ಡಿ, ಒಣಹುಲ್ಲು, ಬಯಿ, the last s.that which finally causes a cgtastrophe. ಕೊನೆ, ಅಪಾಯಕರ ವಸ್ತು, not to care a s. be indifferent, ಅಲಕ್ಷಿಸು.

Stray (ಸ್ಟ್ರೇ) vi. wander aimlessly, go astray from, ಅಲೆದಾಡು, ಹಾದಿಬಿಟ್ಟುಹೋಗು a. strayed,sporadic. isolated. ತೊಂಡ, ಪೋಲಿ,ಅಪರೂಪದ, ಆಗಾಗ್ಗೆ ಕಾಣಬರುವ, ವಿರಳ, ವಿಚಲಿತ, ಮಾರ್ಗಭ್ರಷ್ಟ.

Streak (ಸ್ಟ್ರೀಕ್) n. irregular line or band, ಗೆರೆ, ರೇಖೆ, ಎಳೆ, ಪಟ್ಟೆ, ವಿದ್ಯುಲ್ಲೇಖ.

Stream (ಸ್ಟ್ರೀಮ್) n· body of running water, current, moving mass, crowd. ನೀರಿನ ಪ್ರವಾಹ, ಹೊಯಿಲು, ಹೊಳೆ, ಚಲಿಸುವ ಜನರ ಗುಂಪು, ಸಾಲು. v. i· flow out. ಹರಿಯು, ಪ್ರವಹಿಸು.

Stream'er (ಸ್ಟ್ರೀಮರ್) n. pennon. ಧ್ವಜ, ನಿಶಾನೆ, ಬಾವುಟ, ಪತಾಕೆ, ಕೇತು ವಸನ.

Streamlet (ಸ್ಟ್ರೀಮ್‌ಲೆಟ್) n. small stream. ಸಣ್ಣ ಹೊಳೆ.

Street (ಸ್ಟ್ರೀಟ್)n. town or village road lined with houses. ಬೀದಿ, ಓಣಿ, ಕೇರಿ, ಗಲ್ಲಿ.

Strength(ಸ್ಟ್ರೆಂಗ್ತ್)n. being strong, force, vigour, number of persons present, ಬಲ, ಸಾಮರ್ಥ್ಯ, ಕಸುವು, ತ್ರಾಣ, ಶಕ್ತಿ, ಹಾಜರಿರುವ, ಸಿಕ್ಕ್ಯವ, ಜನರ ಸಂಖ್ಯೆ on the s. of, relving on... -ರ ಭರವಸೆಯಿಂದ ... -ರ ಆಧಾರದ ಮೇಲೆ.

Sreng'then(ಸ್ಟ್ರೆಂಗ್ತನ್)vt.i. add to the strength or number of; grow stronger. ಬಲಪಡು, ಧೈರ್ಯಕೊಡು, ಪ್ರಬಲವಾಗು.

Stren'uous(ಸ್ಟ್ರೆನ್ಯೂಅಸ್)a. making or requiring great exertions. ಸಾಹಸದ, ಪರಿಶ್ರಮದ, ಕಷ್ಟವಾದ, ಅವಿರತ.

Stress (ಸ್ಟ್ರೆಸ್) n. pressure or tention or compulsion, emphasis. accent. ಒತ್ತು, ಇರುಕು, ಜೋರು, ಬಲಾತ್ಕಾರ, ಭಾರ, ಮಹತ್ವ, ಸ್ವರಾಘಾತ.

Stretch(ಸ್ಟ್ರೆಚ್) vt.i. expand, draw out, reach on ; strain ಪಸರಿಸು, ದೊಡ್ಡದುಮಾಡು, ಎಳೆ, ಚಾಚು, ನೀಡು, ಹಿಗ್ಗು, ಕೈಲಾದಷ್ಟು ಪ್ರಯತ್ನಮಾಡು, ಅತಿಶಯೋಕ್ತಿಮಾಡು. n. act of stretching, expanse or tract. ನೀಡುವಿಕೆ, ಬಲ, ಪ್ರಯತ್ನ, ವಿಶಾಲ, ವಿಸ್ತಾರ.

Stretcher (ಸ್ಟ್ರೆಚರ್)n. device consisting of an oblong frame covered with canvas used for carrying sick or injured persons. ಅಶಕ್ತರನ್ನೂ, ರೋಗಿಗಳನ್ನೂ ಸಾಗಿಸಲು ಇರುವ ಕೈಮಂಚ.

Stretcher

Strew(ಸ್ಟ್ರೂ) vt scatter over surface. ಹರವು, ಚೆಲ್ಲು, ಬೀರು, ಎರಚು.

Strict(ಸ್ಟ್ರಿಕ್ಟ್)a. rigid, severe; hard. ಬಹುಖಂಡಿತ, ಕಡಕ, ಬಿಗಿ, ಗಡಸು, ಕಠಿಣ.

Stric'ture (ಸ್ಟ್ರಿಕ್ಚರ್) n. comment of a critical or censorious kind ಆರೋಪಣೆ, ಖಂಡನೆ.

Stride(ಸ್ಟ್ರೈಡ್)vi. walk with long steps, bestride. ಕಿಸಗಾಲುಹಾಕು, ಮಾರುಗಾಲು ಹಾಕು, ದಾಟುಗಾಲಿನಲ್ಲಿ ನಿಲ್ಲು. n. long walking step. ದಾಟುಗಾಲು, ಟಾಂಗು, ಜಂಗೆ, ಮಾರುನಡಿಗೆ.

Strident (ಸ್ಟ್ರೈಡೆಂಟ್) a. harsh. ಕರ್ಕಶ.

Strife(ಸ್ಟ್ರೈಫ್) n. quarrels, hostilities. ಜಗಳ, ಕಡಿದಾಟ, ಕಚ್ಚಾಟ, ಕಲಹ.

Strike (ಸ್ಟ್ರೈಕ್) v. t. hit; deliver blows, dash, coin, agree on (bargain) enter the mind; ignite (match) by rubbing,(of clock) sound the time;(of hour &c.) ; (of workman) go on strike, take rout. ಹೊಡೆ, ತದಕು, ಹಳಚು, "ನಾಣ್ಯ" ಮುದ್ರಿಸು, ಕರಾರು ಮಾಡು ಹಚಿಸು, ಮನಸ್ಸಿನಲ್ಲಿ ಹೊಳೆಯು, ಕಡಿ, ಕೆರೆ, (ಗಡಿಯಾರ) ಗಂಟೆಹೊಡಿ, ಮುಷ್ಕರದಿಂದ ಕೆಲಸಬಿಡು, ಸಂಪುಮಾಡು, ಬೇರುಹಿಡಿ. n. ceasing from work and demanding higher wages. ಕೆಲಸಗಾರರ ಮುಷ್ಕರ ಕೆಲಸ ನಿಲ್ಲಿಸುವಿಕೆ, ಸಂಪು, s. a bargain. conclude a bargain. ಲಾಭದವ್ಯಾಪಾರಮಾಡು. s. one's tent; depart. ಪ್ರಯಾಣ ಹೊರಡು, ಸ್ಥಳಬಿಡು, s. off, remove print. (ಹೆಸರು) ಹೊಡಿ, ಕಡಿ, ತರಿ, ತೆಗೆದುಹಾಕು; (ಮುದ್ರಿಸು) ಛಾಪಿಸು, s. up. cause to sound, begin. ಬಾರಿಸಲಾರಂಭಿಸು, ಪ್ರಾರಂಭಿಸು. s.

dumb, astonish beyond measure. ಮುಗ್ಧಗೊಳಿಸು, ಅತ್ಯಾಶ್ಚರ್ಯಗೊಳಿಸು. s. home. deal an effective blow. ಗುರಿಗೆ ಸರಿಯಾಗಿ ಹೊಡಿ. s. work, stop doing work. ಕೆಲಸ ನಿಲ್ಲಿಸು. s. while the iron is hot, do not miss a favourable opportunity. ಕಾವಿರುವಾಗಲೆ ಬಡಿ, ಗಾಳಿ ಬಂದಾಗ ತೂರಿಕೊ, ಸಮಯ ಬಂದಾಗ ಕಾರ್ಯಸಾಧಿಸಿಕೊ.

Strik'er(ಸ್ಟ್ರೈಕರ್) n.(esp.) workman on strike. ಮುಷ್ಕರಗಾರ.

String (ಸ್ಟ್ರಿಂಗ್) n. thick thread, pieces of wire or gut, a series of thing filed. ಹುರಿ, ನಾರು, ದಾರ, ತಂತಿ, ಸರ, ಮಾಲೆ. vt. i. thread on a strings provide with strings. ಪೋಣಿಸು, ದಾರಹಾಕು, ತಂತಿಹಾಕು.

Stringed (ಸ್ಟ್ರಿಂಗ್ಡ್) a. having strings(of musical instrument) ತಂತಿಗಳುಳ್ಳ, ದಾರವುಳ್ಳ.

Stringed instrument (ಸ್ಟ್ರಿಂಗ್ಡ್ ಇನ್ಸ್ಟ್ರುಮೆಂಟ್) n. a musical instrument having strings. ತಂತಿ ವಾದ್ಯ.



Stringed instrument

Strin'gent (ಸ್ಟ್ರಿಂಜೆಂಟ್) a. strict; binding; precise. ಖಂಡಿತ, ಬಿಗಿ, ತೀವ್ರ, ಕಠಿಣ, ಕಡಕ, ತೀಕ್ಷ್ಣ, ಅಶಿಥಿಲ.

Stringy (ಸ್ಟ್ರಿಂಗಿ) a. consisting of strings, fibrous. ಹುರಿಯುಳ್ಳ, ನಾರಾದ.

Strip (ಸ್ಟ್ರಿಪ್) vt. i. remove clothes covering from, deprive of covering or belongings. ಪೋಷಾಕುತೆಗೆ. ಬೆತ್ತಲೆಮಾಡು, ಸುಲಿದುಕೊಳ್ಳು, ಕಸಗೊಳ್ಳು.

Stripe (ಸ್ಟ್ರೈಪ್) n. streak, line of different colours; stroke with lash &c. ಗೆರೆ, ಪಟ್ಟೆ ಛಡಿ ಪೆಟ್ಟು, ಬಾಸುಂಡೆ.

Strip'ling(ಸ್ಟ್ರಿಪ್ಲಿಂಗ್) n. youth one yet growing. ಬೆಳೆಯುತ್ತಿರುವ, ಹರೆಯದವ, ತರುಣ; ಹೈದ, ಶಿಶು, ಬಾಲ, ಅರ್ಭಕ.

Stripper (ಸ್ಟ್ರಿಪರ್) n. one who strips. ಸುಲಿಯುವವ, ಕಸಗೊಳ್ಳುವವ.

Strive (ಸ್ಟ್ರೈವ್) vi. try hard, struggle, contend against. ವಿಶೇಷ ಪ್ರಯತ್ನ ಮಾಡು, ಬಹಳದುಡಿ, ಹೆಣಗು, ಹೋರಾಡು, ಪ್ರವರ್ತಿಸು.

Stroke (ಸ್ಟ್ರೋಕ್) n. blow, dash; touch, masterly effort, turn of luck, the sound of a clock's bell, sweep of the pen, ಪೆಟ್ಟು, ದೆಬ್ಬೆ, ಹೊಡೆತ, ಹೊಯಿಲು, ಪ್ರಯತ್ನ; ಆಕಸ್ಮಿಕ, ಭಾಗ್ಯೋದಯ, ಗಡಿಯಾರದ ಗಂಟೆ ಶಬ್ದ, ಲೇಖನಿಯ ಗೀಟು. vt. pass hand gently along ಪ್ರೀತಿಯಿಂದ ಕೈದಡವು. ನೀವು, ನಿವರು, ನೇವರಿಸು.

Stroll (ಸ್ಟ್ರೋಲ್) vi. ramble. rove. ಅಡ್ಡಾಡು, ವಿಹಾರಮಾಡು, ತಿರುಗಾಡು. n. short leisurely walk, ಅಡ್ಡಾಟ, ವಿಹಾರ.

Strolier (ಸ್ಟ್ರೋಲರ್) n. a vagrant. ಅಲೆದಾಡುವವನು.

Strong (ಸ್ಟ್ರಾಂಗ್) a. having power of resistance tough, firm, healthy. ತ್ರಾಣವುಳ್ಳ, ಬಲವುಳ್ಳ, ಕಸುವಿನ.

Strong'hold (ಸ್ಟ್ರಾಂಗ್‌ಹೋಲ್ಡ್) n. fortress or citadel. ಕೋಟೆ, ದುರ್ಗ, ಕಿಲ್ಲೆ.

Strong-room (ಸ್ಟ್ರಾಂಗ್-ರೂಮ್) n. room in which valuables are kept. ಕಳ್ಳರು ಭೇದಿಸಲು ಅಸಾಧ್ಯವಾದ ಕೊಠಡಿ.

Strap' (ಸ್ಟ್ರಾಪ್) n. a strip of leather for sharpening razor. ಮಸೆಯುವ ಬಾರು, ಚರ್ಮಪಟ್ಟಿಕೆ, ಮಸೆವೊಗಲು.

Struc'ture (ಸ್ಟ್ರಕ್ಚರ್) n. form, frame, a building or any complex whole. ರಚನೆ, ಕಟ್ಟಣ, ಕಟ್ಟಡ, ನಿರ್ಮಾಣ.

Strug'gle (ಸ್ಟ್ರಗಲ್) vi. make one's way with difficulties, make great effort under difficulties. ಒದ್ದಾಡು, ಹೋರಾಡು, ಪೇಚಾಡು. n. violent effort, strain; hard contest. ಒದ್ದಾಟ, ಹೋರಾಟ, ಪ್ರಯಾಸ.

Strum'pet (ಸ್ಟ್ರಂಪೆಟ್) n. prostitute. ಸೂಳೆ, ಅಡಬೆ, ವೇಶ್ಯೆ, ವಾರಾಂಗನೆ.

Strut (ಸ್ಟ್ರಟ್) vi. walk in stiff pompous way. ಸೆಟಗೊಂಡು ನಡೆ.

Stub (ಸ್ಟಬ್) n. stump of a tree, the remaining part of anything. ಕಡಿದ ಮರದ ಮೋಟು, ಯಾವುದಾದರೂ ಪದಾರ್ಥದ ಉಳಿಕೆ.


Stubs

Stubb'orn (ಸ್ಟಬರ್ನ್) a. obstinate, not docile. ಮೊಂಡ, ಚಂಡಿಕೋರ, ದುರಾಗ್ರಹವುಳ್ಳ, ಬಗ್ಗದ, ಅವಿಧೇಯ, ದುರ್ದಮ.

Stubby (ಸ್ಟಬಿ) a. short and thick. ಚಿಕ್ಕ ಮತ್ತು ದಪ್ಪವಾದ.

Stud (ಸ್ಟಡ್) n. button, nail, horses kept for breeding. ಗುಬ್ಬಿ, ಗುಂಡಿ, ಜೋಡುಮುಳೆ, ಬೀಜದಕುದುರೆಗಳು. vt. set with or as with studs ಚಿಂದು ಮೊಳೆಹೊಡೆ, ಜಡಿತಗೊಳಿಸು.

Stu'dent (ಸ್ಟ್ಯೂಡೆಂಟ್) n. person undergoing instruction. ವಿದ್ಯಾರ್ಥಿ, ಅಭ್ಯಾಸಿ, ಜಿಜ್ಞಾಸು, ಶಿಷ್ಯ, ಛಾತ್ರ.

Stud'ied (ಸ್ಟಡೀಡ್) a. deliberate or intentional. ಬೇಕೆಂತ ಮಾಡಿದ, ಹೇತುಪುರಸ್ಸರವಾದ, ಸುನಿಶ್ಚಿತ, ಪೂರ್ವನಿರ್ಣಿತ.

Stud'io (ಸ್ಟ್ಯೂಡಿಯೊ) n. artist's workroom. ಚಿತ್ರಕಾರನ ಕಾರ್ಯಾಲಯ, ಶಿಲ್ಪಶಾಲೆ.

Studio-light (ಸ್ಟ್ಯೂಡಿಯೊ ಲೈಟ್) n. A very bright reflector light used in a studio. ಸ್ಟ್ಯೂಡಿಯೋದಲ್ಲಿ ಉಪಯೋಗಿಸುವ ದೀಪ.


Studio-light

Stu'dious (ಸ್ಟ್ಯೂಡಿಅಸ್) a. given to study, attentive to, careful of. ಅಭ್ಯಾಸಶೀಲ, ಸ್ವಾಧ್ಯಾಯಮಗ್ನ, ತತ್ಪರ, ಜಾಗರೂಕ.

Study (ಸ್ಟಡಿ) application to books, pursuit of knowledge, room for study. ವಿದ್ಯಾರ್ಜನೆ, ವಿದ್ಯಾಭ್ಯಾಸ, ಅಧ್ಯಯನ, ಅಭ್ಯಾಸದ ಕೋಣೆ, [illegible]. vt. i. understanding (subject, &c.) ಅಭ್ಯಾಸಮಾಡು, ಕಲಿ, ಪರಿಶೀಲಿಸು

Stuff (ಸ್ಟಫ್) n. materials. substance or things of inferior quality, woollen fabric. ವಸ್ತು, ಹುರುಳು, ಸತ್ವ, ಚಿಲ್ಲರೆ ಜೀನಸು, ಉಣ್ಣೆಯ ಬಟ್ಟೆ. v. i. pack tightly or cram into. ಒತ್ತಿ ತುಂಬು, ಗಿಡಿ, ತುಂಬಿಸು, ತುಂಬು, ತುರುಕು.

Stul'tify (ಸ್ಟಲ್ಟಿಫೈ) vt. make or prove foolish, undo the work or effect of. ಹುಚ್ಚುಹಿಡಿಸು. ಮೂರ್ಖತನವನ್ನು ಪ್ರದರ್ಶಿಸು, ನಿರರ್ಥಕ ಮಾಡು.

Stum'ble (ಸ್ಟಂಬಲ್) vi. t. slip in walking, be checked in speech, light upon by chance. ಎಡವು, ಮುಗ್ಗರಿಸು, ಕಾಲುತಪ್ಪು, ತೊದಲು, ತತ್ತರಿಸು, ತಪ್ಪುಮಾಡು, ಅಕಸ್ಮಾತ್ತಾಗಿ ಕಾಣು.

um'bling block (ಸ್ಟಂಬ್ಲಿಂಗ್ ಬ್ಲಾಕ್) n. circumstance causing difficulty. ಅಡಚಣೆ, ಎಡರುಗಲ್ಲು, ಎಡತಡೆ.

ump (ಸ್ಟಂಪ್) n. art of a tree limb left after the rest is cut off, remnant of something, one of the sticks of a wicket. (ಮರದ) ಮೋಟು, ಕುತ್ತಿ, ಕೊರಡು, ಉಳಿದ ಭಾಗ, ಕ್ರಿಕೆಟ್ ಆಟದಲ್ಲಿ ಸಣ್ಣ ಕೋಲು, 'ಸ್ಟಂಪು'.



Stumps

un (ಸ್ಟನ್) vt. knock senseless, overwhelm or stupefy by shock. ಪೆಟ್ಟಿನಿಂದ ಸ್ಮೃತಿತಪ್ಪಿಸು, ಮರಗಟ್ಟಿಸು.

unt (ಸ್ಟಂಟ್) check growth. ಬೆಳವಣಿಗೆ ಕುಗ್ಗಿಸು, ಕೊರಟು. n sepcial effort or display. ವಿಶೇಷಪ್ರಯತ್ನ, ಸಾಹಸಕೃತ್ಯ.

unted (ಸ್ಟಂಟೆಡ್) a. hindered in growth, dwarfish in growth ಕುಂಠಿತವಾದ, ಬೆಳವಣಿಗೆಯುಳ್ಳ.

up'efy (ಸ್ಟುಪಿಫೈ) vt. dull the wits or senses of. ಬುದ್ಧಿಮಂಕು ಮಾಡು, ಜಡಮಾಡು, ಮೋಹಗೊಳಿಸು.

upen'dous (ಸ್ಟುಪೆಂಡಸ್) a. amazing, of vast size or importance. ಆಶ್ಚರ್ಯಕರ, ಬಹುದೊಡ್ಡ, ವಿಶಾಲ, ಭವ್ಯ.

upid (ಸ್ಟುಪಿಡ್) a. unintelligent. ದಡ್ಡ, ಮಡ್ಡ, ಪೆದ್ದ, ಮೂಢ, ಮೂರ್ಖ, ಮಂದ.

uper (ಸ್ಟುಪರ್) n. dazed or torpid state, utter amazement. ಮಬ್ಬು, ಮೋಹಾಲಸ್ಯ, ಮೂರ್ಛೆ, ಅತ್ಯಾಶ್ಚರ್ಯ.

urd'y (ಸ್ಟರ್ಡಿ) a. hardy, strong, of independent character. ಮೈಕಟ್ಟಿನ, ಬಲಿಷ್ಠ, ಧಾಂಡಿಗ, ಒರಟು, ದುರಾಗ್ರಹಿ.

Stutter (ಸ್ಟಟರ್) vi. stammer. ಉಗ್ಗು, ತೊದಲು.

Sty (ಸ್ಟೈ) n. enclosure for pig, filthy room or dwelling, tumour on eyelid. ಹಂದಿಗೂಡು, ದೊಡ್ಡಿ, ಕೊಳಕುಮನೆ, ಹೊಲಸುಸ್ಥಳ, ಕಣ್ಣುಬಟ್ಟೆ, ಕಣ್ಣುಕುರು.

Style (ಸ್ಟೈಲ್) n. pen or pencil, manner of writing, speaking, &c. shape or make or appearance of garment or vehicle or the like. ಲೇಖಣಿ, ಲೇಖನಶೈಲಿ, ಭಾಷಣ ಶೈಲಿ, ವಾಗ್ಧೋರಣೆ, ವೈಖರಿ, ರೀತಿ, ವಿಧ.

Sty'lish (ಸ್ಟೈಲಿಷ್) a. in the prevailing fashion, well appointed ಈಗಿನ ಪದ್ಧತಿಯ, ಸೊಗಸಿನ, ಬೆಡಗಿನ, ಖ್ಯಾತಿಯ.

Stylist (ಸ್ಟೈಲಿಸ್ಟ್) n. master of style. ಉತ್ತಮ ಶೈಲಿಗಾರ.

Stylus (ಸ್ಟೈಲಸ್) n. pointed instrument. ಚೂಪಾದ ಸಲಕರಣೆ.

Subclass' (ಸಬ್‌ಕ್ಲಾಸ್) n. subdivision of a class. ಒಂದು ವರ್ಗದೊಳಗಿನ ಒಳ (ಪೋಟ) ಭಾಗ.

Subcon'scious (ಸಬ್‌ಕಾನ್‌ಶಿಅಸ್) a. partially or imperfectly conscious. ಅರ್ಧಹುಷಾರಿ, ಅರ್ಧಸ್ಮೃತಿಯ.

Sub-contract (ಸಬ್‌ಕಾಂಟ್ರಾಕ್ಟ್) n. contract under a previous contractor. ಒಳಕರಾರು, ಪೋಟಕರಾರು.

Subdivide' (ಸಬ್‌ಡಿವೈಡ್) vt. i. divide further. ಪುನಃ ಭಾಗಮಾಡು, ಮತ್ತೆ ಭಾಗವಾಗು, ಉಪಶಾಖೆಮಾಡು.

Subdivi'sion (ಸಬ್ಡಿವಿಜನ್) n. one of the parts resulting. ಉಪಭಾಗ, ಪೋಟವಿಭಾಗ, ಉಪಶಾಖೆ, ಉಪಾಂಗ.

Subdue' (ಸಬ್‌ಡ್ಯೂ) vt. conquer, tame, soften. ಗೆಲ್ಲು, ನಿಗ್ರಹಿಸು, ವಶಪಡಿಸಿಕೊಳ್ಳು, ಮೃದುಮಾಡು.

Subjacent (ಸಬ್ಜೆಸೇಂಟ್) a. situated below. ಕೆಳಗಿನ, ಕೀಳಾದ, ಅಧೋವರ್ತಿ.

Sub'ject (ಸಬ್ಜೆಕ್ಟ್) a. being under the authority of, liable or prone to. ಅಧೀನವಾಗಿರುವ, ಪರತಂತ್ರದ, ಆಸ್ಪದವುಳ್ಳ. n. person subject to political rule, object or the matter handled; topic, theme, &c. ರೈತಪ್ರಜೆ, ಕರ್ತೃ, ವಿಷಯ.

Subject' (ಸಬ್ಜೆಕ್ಟ್) vt. subdue. expose, render liable, submit to. ಜಯಿಸು, ವಶಪಡಿಸಿಕೊಳ್ಳು, ವಶವಾಗು.

Subjec'tive (ಸಬ್ಜೆಕ್ಟಿವ್) a. relating to the subject as opposed to the object. (pop.) imaginary; of one's own. ಕರ್ತೃಸಂಬಂಧವುಳ್ಳ ಮಾನಸಿಕ, ಕಾಲ್ಪನಿಕ, ಸ್ವಂತ, ಸತ್ವಪ್ರಭಾವದ.

Subjoin' (ಸಬ್‌ಜಾಯಿನ್) vt. add to the end. ಕೊನೆಗೆ ಸೇರಿಸು, ಅನುಬಂಧಿಸು

Sub'jugate (ಸಬ್ಜುಗೇಟ್) vt. bring into subjection. ಜಯಿಸು, ಗೆಲ್ಲು, ವಶಪಡಿಸಿಕೊಳ್ಳು; ನಿಗ್ರಹಿಸು, ಪರಾಜಯಗೊಳಿಸು.

Subjunc'tive-mood (ಸಬ್‌ಜಂಕ್ಟಿವ್-ಮೂಡ್) n. a. (gram) mood expressing doubt. ಸಂಶಯಾರ್ಥಕ ರೂಪ, ಪಕ್ಷಾರ್ಥಕರೂಪ.

Sublet' (ಸಬ್ಲೆಟ್) vt. let to another person. ಒಳವಕ್ಕಲಿಗೆ ಕೊಡು, ಒಳಗೇಣಿಗೆ ಕೊಡು.

Sublime' (ಸಬ್ಲೈಮ್) a. exalted, surpassing, grand, noble. ಉದಾತ್ತ, ಗಂಭೀರ, ಶ್ರೇಷ್ಠ, ಘನ, ಭವ್ಯ.

Sublim'ity (ಸಬ್ಲಿಮಿಟಿ) n. being sublime. ಘನತೆ, ಗಾಂಭೀರ್ಯ, ಗೌರವ.

Sub'marine (ಸಬ್‌ಮರೀನ್) a under or in the sea. ಸಮುದ್ರದೊಳಗಿನ, ಸಮುದ್ರತಳದ. n. submersible boat.



Submarine

ಸಮುದ್ರದೊಳಗೆ ಮುಳುಗಿ ಸಂಚರಿಸುವ ಹಡಗು.

Submerge' (ಸಬ್‌ಮರ್ಜ್) vt. i. contain below the surface, sink. ಜಲಮಯವಾಗು, ಮುಳುಗು, ಮುಳುಗಿಸು.

Submission (ಸಬ್‌ಮಿಶನ್) n. submitting. ವಶವಾಗುವಿಕೆ, ಅಧೀನತೆ.

Submissi've (ಸಬ್‌ಮಿಸಿವ್) a. unresisting. meek. ವಿರೋಧಮಾಡದ, ನಮ್ರ, ದೀನ, ವಿನಯವುಳ್ಳ.

Sub'mit' (ಸಬ್‌ಮಿಟ್) vt. accept without resistance, give way, yield, present for consideration. ತಲೆಬಾಗಿಸು, ಶರಣಾಗತನಾಗು, ಒಳಪಡು, ಅಧೀನನಾಗು, ಒಳಪಡಿಸು, ಮಂಡಿಸು.

Subord'inate (ಸಬಾರ್ಡಿನೇಟ್) n. lower in graded rank. ಕೆಳಗಿನ, ಗೌಣ; ಅಮುಖ್ಯ. n. person or king under another. ಕೆಳಗಿನ ಉದ್ಯೋಗಸ್ಥ, ಅಧೀನರಾಜ.

Subordi'nation (ಸಬಾರ್ಡಿನೇಶನ್) n. subordinate state. ಕೈಕೆಳಗಿರುವಿಕೆ, ಅಧೀನತೆ, ತಾಬೇದಾರಿ, ಪರವಶತೆ.

Suborn (ಸಬಾರ್ನ್) vt. bribe to commit perjury ಸುಳ್ಳುಸಾಕ್ಷ್ಯ ಹೇಳುವುದಕ್ಕೆ ಲಂಚಕೊಡು.

Subscribe' (ಸಬ್‌ಸ್ಕ್ರೈಬ್) vt. i. sign, express adhesion to, contribute to fund or object. ಸಹಿಮಾಡು, ರುಜು, (ದಸ್ಕತ್ತು) ಹಾಕು, ಒಪ್ಪು, ಚಂದಾಕೊಡು.

ubscri'ber (ಸಬ್‌ಸ್ಕ್ರೈಬರ್) n. one who subscribes. ಒಪ್ಪಿತ ಹಾಕಿದವ, ಚಂದಾದಾರ, ವರ್ಗಣೀದಾರ.

ubscript (ಸಬ್‌ಸ್ಕ್ರಿಪ್ಟ್) a. underwritten, written below something. ಕೆಳಗೆ ಬರೆದ.

ubscrip'tion (ಸಬ್‌ಸ್ಕ್ರಿಪ್ಷನ್) n. subscribing; share or sum subscribed. ಕೈಬರಹ, ವರ್ಗಣಿ, ಚಂದಾ, ವಂತಿಗೆ.

ub'sequent(ಸಬ್‌ಸಿಕ್ವೆಂಟ್)a. coming after, posterior to. ತರುವಾಯ ಬಂದ, ಅನಂತರದ.

ubserve'(ಸಬ್‌ಸರ್ವ್)vt. serve as means towards. ಉಪಯುಕ್ತವಾಗು, ಸಹಾಯಮಾಡು, ಅನುಗುಣವಾಗಿರು.

ubserv'ient (ಸಬ್ಸರ್ವಿಎಂಟ್) a. conducive as means to. ಉಪಯುಕ್ತ, ಸಹಾಯಕ, ಅನುಗುಣವಾದ.

ubside' (ಸಬ್‌ಸೈಡ್) vt. abate, die away. fall silent. ತಗ್ಗು, ಹಿಂಗು, ಕಡಿಮೆಯಾಗು, ನಿರ್ಮೂಲವಾಗು, ಶಾಂತವಾಗು.

ubsid'iary (ಸಬ್ಸಿಡಿಅರಿ) a. aiding, supplementary to. ಸಹಾಯಕರ, ಉಪಕಾರಕ, ಅನುಕೂಲ, ಸಹಕಾರಿ.

ub'sidy(ಸಬ್ಸಿಡಿ)n. money granted to meet urgent necessities. ಹಣದ ಸಹಾಯ, ಸಹಾಯಧನ.

ubsist' (ಸಬ್ಸಿಸ್ಟ್)vt. i. exist, support life, and substance for. ಅಸ್ತಿತ್ವದಲ್ಲಿರು, ಇರು, ಬದುಕು, ಹೊಟ್ಟೆ ಹೊರೆಕೊಳ್ಳು.

ubsist'ence(ಸಬ್ಸಿಸ್ಟೆನ್ಸ್) n. subsisting. what one lives on or by. ಇರುವಿಕೆ, ಜೀವನ, ಜೀವನಾಧಾರ, ಹೊಟ್ಟೆ ಪಾಡು.

ubsoil (ಸಬ್‌ಸಾಯಿಲ್) n. stratum of earth below the surface soil. ಭೂಮಿಯ ಮೇಲ್ಮೈ ಮಣ್ಣಿನ ಕೆಳಗಿರುವ ಮಣ್ಣಿನ ಪದರ.

Substance (ಸಬ್‌ಸ್ಟನ್ಸ್) n. the essential part, gift; purport; matter, reality; solidity. ಮಹತ್ವದ ಭಾಗ, ತಾತ್ಪರ್ಯ, ಪದಾರ್ಥ, ವಸ್ತುಸಾರ, ಸತ್ವ.

Substan'tial (ಸಬ್‌ಸ್ಟಾನ್‌ಶಲ್) a. real, solid, not inconsiderable. ಸತ್ವವುಳ್ಳ, ಗಟ್ಟಿ, ನಿಜವಾದ, ಖರೆ, ವಾಸ್ತವ, ತುಂಬಿದ.

Substan'tiate (ಸಬ್‌ಸ್ಟಾನ್‌ಶಿಏಟ್)vi. prove or confirm. ಸತ್ವದಿಂದ ಸ್ಥಾಪಿಸು, ಪ್ರಮಾಣಗಳಿಂದ ಸಿದ್ಧಪಡಿಸು.

Sub'stantive (ಸಬ್‌ಸ್ಟಾಂಟಿವ್) n. (gram); a noun. ನಾಮಪದ. a. expressing existence, real. ನಿಜವಾದ ಅಸ್ತಿತ್ವ ಸೂಚಿಸುವ.

Sub'stitute(ಸಬ್‌ಸ್ಟಿಟ್ಯೂಟ್) n. person or thing performing some function instead of another. ಬದಲಿಯುವ, ಪ್ರತಿನಿಧಿ. vt. put in exchange (for.) ಬದಲಿ ಇಡು, ಬದಲಿಸು.

Substitution (ಸಬ್‌ಸ್ಟಿಟ್ಯೂಷನ್) n. act of substituting. ಬದಲಿಸುವುದು, ಆದೇಶಿಸುವುದು.

Substrat'um (ಸಬ್‌ಸ್ಟ್ರೇಟಮ್) n. lower layer, basis. ಕೆಳಗಿನ ಪರೆ, ಪದರು, ಆಧಾರ, ತಳಹದಿ, ಅಧಿಷ್ಠಾನ.

Subten'ant(ಸಬ್‌ಟೆನೆಂಟ್)n. tenant holding of a tenant. ಒಳವಕ್ಕಲು, ಪೋಟಿಲಾವಣಿ ಹಿಡಿದವನು.

Subtend'(ಸಬ್‌ಟೆಂಡ್) vt. (of line) be opposite (angle) arc. ಎದುರಾಗಿರು, ವಿರುದ್ಧವಾಗಿರು.

Sub'terfuge (ಸಬ್‌ಟರ್‌ಫ್ಯೂಜ್) a. evasion; esp. in argument or excuse. ನೆವ, ಯುಕ್ತಿ, ತಂತ್ರ.

Subterran'ean (ಸಬ್ಟರೇನಿಅನ್) a. underground. ಭೂಮಿಯ ಕೆಳಗಿರುವ, ಭೂಗರ್ಭದ.

Sub'tle (ಸಟ್ ಲ್) a. acute, cunning, artful, piercing ತಿಳಿಯಲು ಕಷ್ಟವಾದ, ಮಾರ್ಮಿಕ, ಗೂಢ, ಸೂಕ್ಷ್ಮ, ವ್ಯಾಪಕ.

Subt'lety (ಸಬ್‌ಟ್‌ಲ್‌ಟಿ) a. subtleness, fine distinction. ಗೂಢತೆ, ಸೂಕ್ಷ್ಮತ್ವ.

Subtract' (ಸಬ್‌ಟ್ರ್ಯಾಕ್ಟ್)vt. deduct from. ಕಳೆ, ವಜಾಮಾಡು.

Subtra'ction(ಸಬ್‌ಟ್ರ್ಯಾಕ್ಶನ್) n. esp. subtracting process. ವಜಾಬಾಕಿ, ಕಳೆಯುವಿಕೆ, ವ್ಯವಕಲನ.

Sub'urb (ಸಬರ್ಬ್)n. outlying district of city. ಉಪನಗರ, ಶಾಖಾನಗರ.

Suburban (ಸಬರ್‌ಬನ್) a. pertaining to the suburbs. ನಗರದ ಹೊರವಲಯಕ್ಕೆ ಸಂಬಂಧಿಸಿದ.

Subven'tion(ಸಬ್‌ವೆನ್‌ಶನ್) n. grant of money. ದ್ರವ್ಯಸಹಾಯ, ಸಹಾಯಧನ.

Subversion(ಸಬ್‌ವರ್ಶನ್)n. act of over throwing ನಾಶಮಾಡುವಿಕೆ, ತಲೆಕೆಳಗು ಮಾಡುವಿಕೆ.

Subvert'(ಸಬ್‌ವರ್ಟ್)vt. ruin, overthrow of (religion) &c ನಾಶಮಾಡು, ಬೋರ್ಲುಹಾಕು, ಮಗುಚು, ಲಯಗೊಳಿಸು.

Succeed(ಸಕ್ಸೀಡ್)vt. i. come next after & take the place, inherit, attain one's purpose. ಹಿಂದಿನಿಂದ ಪದವಿಗೆಬರು, ಉತ್ತರಾಧಿಕಾರಿಯಾಗು, ಸಿದ್ಧಿಹೊಂದು, ಜಂಟಿಸು, ಕೈಗೂಡಿಸಿಕೊಳ್ಳು.

Success'(ಸಕ್ಸೆಸ್) n. attainment of one's object. prosperity, person or thing that turns out well. ಯಶಸ್ಸು, ಜಯ, ಸಿದ್ಧಿ, ಏಳಿಗೆ, ಅಭಿವೃದ್ಧಿ, ಕೀರ್ತಿವಂತ.

Successful (ಸಕ್ಸೆಸ್‌ಫುಲ್) a. attaining success. ವಿಜಯಿಯಾದ, ಸಫಲವಾದ.

Succe'ssion(ಸಕ್ಸೆಶನ್) n. series o things in succession, lineage race, rotation; right of succeeding. ಅನುಕ್ರಮ, ಪರಂಪರೆ, ಪರ್ಯಾಯ ಬಾಧ್ಯಸ್ತಿಕೆ, ಹಕ್ಕುದಾರಿ, ಉತ್ತರಾ ಕಾರ.

Success'ive(ಸಕ್ಸೆಸಿವ್)a. followin in order, running ಅನುಕ್ರಮದಿಂ ಬರುವ, ಕ್ರಮಾಗತ, ಅನುಪೂರ್ವ.

Success'or (ಸಕ್ಸೆಸರ್) n. one wh succeeds another. ಉತ್ತರಪದಸ್ಥ ಉತ್ತರಾಧಿಕಾರಿ.

Succinct' (ಸಕ್ಸಿಂಕ್ಟ್) a. terse, concise. ಸಂಕ್ಷಿಪ್ತ, ಸಂಕಲಿತ.

Succ'our (ಸಕರ್) n. aid given a the time of need. ಸಹಾಯ, ನೆರವ

Succ'ulent (ಸಕ್ಯುಲೆಂಟ್) a. juicy thick and fleshy. ರಸಾಲ, ರ ತುಂಬಿದ, ರಸವತ್ತಾದ.

Succumb(ಸಕಮ್)vi be vanqushied, give way to, die ವಶವಾಗು ಬಲಿಯಾಗು, ಸಾಯು, ಅಹುತಿಯಾಗು.

Such (ಸಚ್) a. of the kind or degree indicated. ಅಂಥ, ಇಂಥ.

Suck (ಸಕ್) vt. i. draw (liquid into the mouth, imbue or gai (knowledge.) ಹೀರು, ಚೀಪು, ಜ್ಞಾನರ್ಜನೆಮಾಡು.

Suc'kle (ಸಕ್‌ಲ್) vt. feed (young from breast or under. ಮೊಲೆಕೊಡು ಮೊಲೆಯುಣ್ಣಿಸು, ಸ್ತನ್ಯಪಾನಮಾಡಿಸು.

Suck'ling(ಸಕ್‌ಲಿಂಗ್)n. unweane child. ಮೊಲೆಕೂಸು, ಹಸುಗೂಸು, ಮರಿ.

Suc'tion (ಸಕ್‌ಶನ್) n. sucking removal of atmospheric pressure from any interior space ಹೀರಿಕೊಳ್ಳೋಣ, ಒಳಗಿನ ಗಾಳಿಯನ್ನು ಸೆಳೆದುಕೊಳ್ಳೋಣ.

Suctorial (ಸಕ್ಟೋರಿಯಲ್)a. adapted for sucking, living by sucking. ಹೀರುವ ಸ್ವಭಾವದ, ಶೋಷಕವಾದ.

dd'en(ಸಡನ್)a. occurring unexpectedly, abrupt, hurried. ಅಕಸ್ಮಾತ್ತಾದ, ಅಚಿಂತಿತ, ಅತರ್ಕಿತ, ಶೀಘ್ರ.

doriferous (ಸ್ಯೂಡೋರಿಫರಸ್) a. producing sweat. ಬೆವರು ಬರಿಸುವ.

dorif'ic (ಸ್ಯೂಡೋರಿಫಿಕ್) a. promoting sweat. ಬೆವರು ಬರಿಸುವ.

ds (ಸಡ್ಸ್) n. pl. soap froth. ಸೋಪಿನ ಬುರುಗು, ನೊರೆ.

e (ಸೂ)vt. i. prosecute in court, make petition to. ಫಿರ್ಯಾದುಮಾಡು, ವ್ಯವಹರಿಸು, ಪ್ರಾರ್ಥಿಸು, ಅರ್ಜಿಹಾಕು.

ff'er(ಸಫರ್)vt. i. undergo pain; endure; sustain loss. ಅನುಭವಿಸು, ಸಹಿಸು, ತಾಳು, ಪಾಡುಪಡು, ನಷ್ಟಹೊಂದು.

ff'erence (ಸಫರೆನ್ಸ್) n. tacit consent, endurance. ಮೌನದ ಸಮ್ಮತಿ, ತಾಳ್ಮೆ, ಸಹನೆ, ಸಹಿಷ್ಣುತೆ.

ff'ering (ಸಫರಿಂಗ್) n. what one has to endure. ದುಃಖ, ವ್ಯಥೆ, ಪಡಿಪಾಟು, ಕಷ್ಟಾನುಭವ, ತಾಪ, ವೇದನೆ.

ffice' (ಸಫೈಸ್) vi. t. be enough, meet needs of. ಸಾಲು, ಸಾಕಾಗು, ಅವಶ್ಯವಾದದ್ದನ್ನು ಒದಗಿಸು, ತೃಪ್ತಿಪಡಿಸು.

fficient (ಸಫಿಶಿಎಂಟ್) a. enough of. ಸಾಕಾದಷ್ಟು, ಬೇಕಾದಷ್ಟು, ತಕ್ಕಷ್ಟು.

ffi'x (ಸಫಿಕ್ಸ್) n. particle placed after the root of a word. ಅಂತ್ಯಪ್ರತ್ಯಯ.

ff'ocate(ಸಫೋಕೇಟ್) vt. i. kill by stopping respiration, gasp or breath ಉಸಿರುಗಟ್ಟಿಸಿ ಕೊಲ್ಲು, ನೇಕು, ಉಸಿರುಗಟ್ಟು, ಶ್ವಾಸರೋಧಿಸು, ಸ್ತಂಭನವಾಗು.

ff'rage (ಸಫ್ರೇಜ್) n. a vote; right to vote. ಮತ, ಓಟು, ಓಟಿನ ಅಧಿಕಾರ.

Suffuse' (ಸಫ್ಯೂಜ್) vt. (of tears, blush, hue &c.) spread as from within over the surface of. ಹಬ್ಬಿಸು, ತುಂಬಿಸು, ಉಕ್ಕಿಸು, ವ್ಯಾಪಿಸು.

Su'gar (ಶುಗರ್) n. kinds of sweet crystalline substance, flattery. ಸಕ್ಕರೆ, ಮುಖಸ್ತುತಿ.

Sugar-candy (ಶುಗರ್-ಕಾಂಡಿ)n. crystallised sugar. ಕಲ್ಲುಸಕ್ಕರೆ, ಕಲ್ಕಂಡ.

Sugarcane (ಶುಗರ್ ಕೇನ್) n. grass yielding sugar. ಕಬ್ಬು.



Sugarcane

Sugary (ಷುಗರಿ) a. like sugar, sweet, flattering. ಸಿಹಿಯಾದ, ಮುಖಸ್ತುತಿಯಿಂದ ಕೂಡಿದ.

Suggest' (ಸಜೆಸ್ಟ್) vt. give a hint or inkling of, propose for acceptance. ಸೂಚಿಸು, ತಿಳಿಸು, ಪ್ರಸ್ತಾಪಿಸು.

Sugges'tion(ಸಜೆಸ್ಚನ್) n. suggesting intimation. ಸೂಚಿಸೋಣ, ಸೂಚನೆ.

Sui'cide (ಸೂಯಿಸ್ಯಾಡ್) n. self murder, self-murderer. ಆತ್ಮಹತ್ಯೆ, ಆತ್ಮಘಾತಕಿ.

Suit (ಸೂಟ್) n. petition seeking of woman's hand, prosecution, set of clothes. ವಿನಂತಿ, ಬಿನ್ನಹ, ಅರ್ಜಿ, ದಾವೆ, ವ್ಯಾಜ್ಯ, ಕನ್ಯಾರ್ಥಿತ್ವ, ಉಡುಪುಗಳ ಜೋಡಿ. vt. i. to fit or be fitted to become, agree with, be convenient. ಜತೆಸೇರಿಸು, ಹೊಂದಿಸು, ಒಗ್ಗು, ಮೆಚ್ಚಿಸು, ಹೊಂದಿಕೆಯಾಗು, ಅನುಕೂಲವಾಗು.

Suit'case (ಸೂಟ್ ಕೇಸ್) n. travelling bag ಪ್ರವಾಸದ ಚೀಲ.



Suitcase

Suit'able (ಸೂಟಿಬಲ್) a. suited to or for, fitting. ತಕ್ಕ, ಒಪ್ಪುವ, ಸರಿಯಾದ

Suite (ಸ್ವೀಟ್) n. retinue, set of rooms, furniture, &c. ಪರಿವಾರ, ಸಾಲುಕೋಣೆಗಳು, ಕುರ್ಚಿ ಮೇಜು, ಮೊದಲಾದವುಗಳ ಜೋಡಿ.

Sulcate (ಸಲ್ಕೇಟ್) a. grooved, furrowed. ಗೆರೆಗಳುಳ್ಳ, ಹಳ್ಳಗಳುಳ್ಳ.

Sulcus(ಸಲ್ಕಸ್) a. furrow, groove. ಗಾಡಿ, ಹಳ್ಳ, ಗೆರೆ.

Sulk (ಸಲ್ಕ್) vi. be sulky. ಸಿಟಗೊಳ್ಳು

Sulky (ಸಲ್ಕಿ)a. silent from resentment or ill temper. ದುರ್ಮುಖದ, ಮುಸುಗುಟ್ಟುವ, ಸಿಡುಕಿನ, ರೂಕ್ಷ, ಉದ್ವಿಗ್ನ.

Sull'en(ಸಲನ್)a. passively resentful. ill-humoured. ಖಿನ್ನ, ಮುನಿದ, ಉರಿಮೊಗದ, ಅಂತಃಕುಪಿತ, ಉದಾಸೀನ.

Sull'y (ಸಲಿ) vt. soil, tarnish, discredit. ಮಲಿನಮಾಡು, ಮಾಗು, ಕಳಂಕಿಸು, ದೋಷಹೊರಿಸು, ದೂಷಿಸು.

Sul'phur (ಸಲ್ಫರ್) n. pale yellow non-metallic element. ಗಂಧಕ.

Sul'try (ಸಲ್ಟ್ರಿ) a. hot and close. ಧಗೆಯು, ಸೆಕೆಯು, ಪ್ರಖರ, ಅತ್ಯುಷ್ಣ, ನಿವಾರ್ತ.

Sum (ಸಮ್) n. total amount. summary an arithmetical problem. ಒಟ್ಟಿಲು, ಒಟ್ಟು, ಬೇರಿಜು, ಸಾರಾಂಶ; ರಕಮು, ಲೆಕ್ಕ. vt. i. collect into one total; (with up) set out arguments on both sides. ಒಟ್ಟುಗೂಡಿಸು, ಉಪಸಂಹಾರಮಾಡು. s. and substance, briefly. ಸಂಕ್ಷೇಪವಾಗಿ.

Sum marize (ಸಮರೈಝ್) vt. make or be a summary of. ಸಾರಾಂಶಹೇಳು ಸಂಕ್ಷಿಪ್ತಗೊಳಿಸು.

Summ'ary (ಸಮರಿ) a. done with dispatch, short, brief. ಸಂಕ್ಷಿಪ್ತ, ಅವಸರದ. n. brief account, resume, epitome. ಸಾರಾಂಶ, ಸಂಕ್ಷೇಪ.

Summation (ಸಮೇಷನ್) n. addition. ಸಂಕಲನ, ಕೂಡುವುದು.

Summ'er (ಸಮರ್) n. second or hot season. ಗ್ರೀಷ್ಮಋತು, ಬೇಸಿಗೆ.

Summ'ersalt (ಸಮರ್‌ಸಾಲ್ಟ್) n. somersault. ಲಾಗ, ಪಲ್ಟಿ.

Summ'it (ಸಮಿಟ್) n. highest point, top. ತುದಿ, ಶಿಖರ, ಚೂಡ, ಶಿಖೆ, ಅಗ್ರ.

Summ'on (ಸಮನ್) vt. send for. bid (esp. witness of defendent) appear, muster up courage. ಕ ಯಿಸು, ಬರಹೇಳು, ಹಾಜರಿರಲು ಆಜ್ಞಾಪಿಸು, ಧೈರ್ಯ ತಂದುಕೊ.

Summ'ons (ಸಮನ್ಸ್)a. authoritative call to attend or do something. ಸರಕಾರದ ಆಜ್ಞಾಪತ್ರಿಕೆ, ದಾಯುಸ.

Sump (ಸಂಪ್) n. reservior of water for use in salt works. ಉಪ್ಪಿನ ಗಣಿಯಲ್ಲಿ ಉಪಯೋಗಿಸುವ ನೀರಿಗಾಗಿ ನಿರ್ಮಿಸಿರುವ ಕುಳಿ.

Sumptuary (ಸಂಪ್ಟ್ಯುಅರಿ) a. relating to expenses. ವ್ಯಯಕ್ಕೆ ಸಂಬಂಧಿಸಿದ.

Sum'ptuous (ಸಮ್ಪ್ಚುಅಸ್) a. costly, rich. ಆಡಂಬರದ, ಬಹು ಖರ್ಚಿನ.

Sun (ಸನ್) n. the heavenly body that the earth travels round and receives light and warmth

from, sun's light and warmth, sun's light. ಸೂರ್ಯ, ಬಿಸಿಲು under the s., earth. ಭೂಲೋಕದಲ್ಲಿ.

unday (ಸಂಡೆ) n. first day of the week. ಆದಿತ್ಯವಾರ, ರವಿವಾರ, ಭಾನುವಾರ.

un'burn (ಸನ್‌ಬರ್ನ್) n. scorching by the sun, tanning by the rays of the sun. ಬಿಸಿಲಿಗೆ ಮೈ ಚರ್ಮವು ಕಂದು ತಿರುಗುವುದು.

un'der (ಸಂಡರ್) vt. separate. ಬೇರೆಬೇರೆಮಾಡು, ವಿಂಗಡಿಸು.

un-dial (ಸನ್‌ಡಯಲ್) n. A device baving a pointer needle the shadow of which on a dial shows the time of the day. ಮುಳ್ಳಿನ ನೆರಳಿನಿಂದ ದಿನದ ಸಮಯವನ್ನು ಸೂಚಿಸುವ ಒಂದು ಬಗೆಯ ಯಂತ್ರ.


Sun-dial

un-flower (ಸನ್-ಫ್ಲವರ್) n a tall plant having large bright yellow colour. ಸೂರ್ಯಕಾಂತಿ ಗಿಡ, ಅದರ ಹೂವು.


Sunflower

undry (ಸಂಡ್ರಿ) a. several, diverse. ಅನೇಕ, ಬಗೆಬಗೆಯ, ವಿವಿಧ, ನಾನಾವಿಧ.

unn'y (ಸನಿ) a. bright with or as sunlight. ಬಿಸಿಲು ಕಾಯುವ, ಪ್ರಕಾಶಮಾನವಾದ, ಆನಂದಸೂಸುವ.

un'rise (ಸನ್‌ರೈಜ್) n. rise of the sun ಸೂರ್ಯೋದಯ, ಬೆಳಗು.

un'set (ಸಂಸೆಟ್) a. moment of sun's setting. ಸೂರ್ಯಾಸ್ತ, ದಿನಾಂತ, ಬೈಗು.

up (ಸಪ್) vt. to take supper. ರಾತ್ರಿ ಊಟಮಾಡು.

Superabundance (ಸೂಪರ್ ಅಬನ್ಡನ್ಸ್) n. excessive abundance. ಅತೀವ ಸಮೃದ್ಧಿ.

Superann'uate (ಸೂಪರ್‌ಆನ್ಯುಏಟ್) vt. dismiss or discard as too old, send into retirement with a pension. ವೃದ್ಧಾಪ್ಯದ ಮೂಲಕ ನಿವೃತ್ತಿಗೊಳಿಸು, ಪಿಂಚಿನ್ನಕೊಡು.

Superb' (ಸೂಪರ್ಬ್) a. exalted, grand, stately. ಶೋಭೆಯುಳ್ಳ, ಉತ್ತಮ, ಉತ್ಕೃಷ್ಟ, ದಿವ್ಯ, ಭವ್ಯ.

Supercil'ious (ಸೂಪರ್‌ಸಿಲ್ಯಸ್) a. proud, haughty. ಸೊಕ್ಕಿನ, ಗರ್ವದ, ದರ್ಪದ.

Supereroga'tion (ಸೂಪರೆರೋಗೇಶನ್) n. anything superfluous, uncalled for. ಕರ್ತವ್ಯಕ್ಕಿಂತ ಹೆಚ್ಚು ಮಾಡಿದ್ದು, ನಿಯಮಾತಿರಿಕ್ತವಾದದ್ದು.

Su'perfi'cial (ಸೂಪರ್‌ಫಿಶಿಅಲ್) a. of or on the surface only; shallow. ಮೇಲಿನ, ಪೊಳ್ಳು, ಹುರುಳಿಲ್ಲದ, ಬಾಹ್ಯ, ಬಹಿಸ್ಥ.

Su'perfine (ಸೂಪರ್‌ಫೈನ್) a. finer than ordinary,of extra quality. ಅತ್ಯುತ್ತಮ, ಉತ್ಕೃಷ್ಟ, ಅತಿನಯವಾದ.

Superflu'ity (ಸೂಪರ್‌ಫ್ಲೂಇಟಿ) n. superfluous amount; what is over. ಆಧಿಕ್ಯ, ಬೇಕಾದ್ದಕ್ಕಿಂತ ಹೆಚ್ಚು.

Superfluous (ಸೂಪರ್‌ಫ್ಲುಅಸ್) a. not needed, more than enough. ಅನಾವಶ್ಯಕ, ಬೇಕಿಲ್ಲದ, ಬೇಕಾದ್ದಕ್ಕಿಂತ ಹೆಚ್ಚಾದ.

Superhu'man (ಸೂಪರ್‌ಹ್ಯೂಮನ್) a. more than human. ದಿವ್ಯ, ಅಮಾನುಷ.

Superincum'bent (ಸೂಪರ್‌ಇನ್‌ಕಂಬೆಂಟ್) n lying above. ಮೇಲೆ ಬಿದ್ದಿರುವ, ಮೇಲೆ ಇರುವ, ಉಪಸ್ಥಿತ.

Superintend' (ಸೂಪರ್‌ಇಂಟೆಂಡ್) vt. i. arrange and oversee the working of. ಮೇಲ್ವಿಚಾರಣೆಮಾಡು.

Superintend'ent(ಸೂಪರಿನ್ಟೆಂಡೆಂಟ್) n. official manager. ಮೇಲ್ವಿಚಾರಕ.

Super'ior (ಸುಪೀರಿಅರ್) a. & n. higher in place, upper, better in some respect. ಮೇಲಿನ, ವರಿಷ್ಠ, ಶ್ರೇಷ್ಠ.

Superio'rity(ಸುಪೀರಿಆರಿಟಿ)n. being high in place, pre eminence. ಮೇಲಿನ ಪದವಿ, ಪ್ರಾಧಾನ್ಯ, ಶ್ರೇಷ್ಠತೆ, ಆಧಿಕ್ಯ.

Superl'ative (ಸೂಪರ್‌ಲಿಟಿವ್)a. of the highest degree. ಪರಾಕಾಷ್ಠೆಯ, ಅತ್ಯುತ್ತಮ, ಶ್ರೇಷ್ಠ, ಸರ್ವೋತ್ಕೃಷ್ಟ, ಪರಮ.

Superlunar (ಸೂಪರ್‌ಲೂನಾರ್) a. being above the moon. ಚಂದ್ರನಿಗಿಂತ ಮೇಲಿರುವ.

Supermundane (ಸೂಪರ್‌ಮಂಡೇನ್) a. being above the world or mundane affairs. ಲೋಕೋತ್ತರದ. ಪ್ರಾಪಂಚಿಕಕ್ಕೆ ಮೀರಿದ.

Supernal(ಸೂಪರ್‌ನಲ್) a. relating to things above, celestial. ಆಕಾಶದ, ದಿವ್ಯವಾದ.

Superna'tural (ಸೂಪರ್‌ನ್ಯಾಚುರಲ್) a. due to some agency above the forces of nature. ಅಲೌಕಿಕ, ಅದ್ಭುತ.

Superscrip'tion (ಸೂಪರ್‌ಸ್ಕ್ರಿಪ್ಷನ್) n. inscription over something. ಮೇಲಣ ಬರಹ, ಮೇಲ್ವಿಳಾಸ.

Supersede' (ಸೂಪರ್‌ಸೀಡ್) vt. appoint in the place of. ಸ್ಥಾನಚ್ಯುತಿಪಡಿಸು, ಎರಡನೆಯವನ ಸ್ಥಾನದಲ್ಲಿಡು.

Supersti'tion (ಸೂಪರ್‌ಸ್ಟಿಷನ್) n. credulity regarding the supernatural. misdirected reverence. ಅತಿ ವಿಶ್ವಾಸ, ಮೂಢಭಕ್ತಿ, ಮಿಥ್ಯಾಧರ್ಮ.

Supersti'tious (ಸೂಪರ್‌ಸ್ಟಿಷಸ್) n. marked by superstition. ಮೂಢಭಕ್ತಿಯ, ಅಂಧವಿಶ್ವಾಸದ.

Supervise' (ಸೂಪರ್‌ವೈಝ್) vt oversee, direct the carrying or the work of. ಮೇಲ್ವಿಚಾರಣೆಮಾಡು

Supervis'ion (ಸೂಪರ್‌ವಿಝನ್) n inspecting. ಮೇಲ್ವಿಚಾರಣೆ.

Supine (ಸೂಪೈನ್) a. lying facin upwards, quiescent, indolen ಅಂಗಾತನಾಗಿ ಮಲಗಿದ, ಉದಾಸೀ ಸೋಮಾರಿ.

Supp'er (ಸಪ್ಪರ್)n. a meal take at the close of the day. ರಾತ್ರಿ ಊಟ.

Supplant'(ಸಪ್ಲಾಂಟ್) vt. oust es by craft. ಯುಕ್ತಿಯಿಂದ ಸ್ಥಾನಭ್ರ ಮಾಡು, ಉಪಾಯವಾಗಿ ನಿವೃತ್ತಿಪಡಿಸ

Sup'ple (ಸಪಲ್) a. easily ben flexible, adroit. ಮೃದುವಾದ, ಸುಲ ವಾಗಿ ಮಣಿಯುವ, ಕೌಶಲ್ಯದ.

Supplement (ಸಪ್ಲಿಮೆಂಟ್)n. thi added to supply deficiencie ಪರಿಶಿಷ್ಟ, ಪುರವಣಿ. vt. make add tion to. ಹೆಚ್ಚಿಗೆ ಸೇರಿಸು.

Suppliance (ಸಪ್ಲೈಯನ್ಸ್) n. a of entreating. ದೈನ್ಯದಿಂದ ಬೇ ವುದು.

Supp'liant(ಸಪ್ಲೈಅನ್ಟ್)n supplic ing, asking earnestly. ದೀನ, ನ ಸೆರಗೊಡ್ಡಿ ಬೇಡಿಕೊಳ್ಳುವ, ಪ್ರಾರ್ಥಿ

Supp'licant (ಸಪ್ಲಿಕೆಂಟ್) n. o who supplicates. ಬೇಡುವವನು.

Supp'licate (ಸಪ್ಲಿಕೇಟ್) vt. ma humble petition to or for ಬೇ ಕೊಳ್ಳು, ಬಿನ್ನೈಸು, ಪ್ರಾರ್ಥಿಸ ಯಾಚಿಸು.

Supplication(ಸಪ್ಲಿಕೇಷನ್) a. hu ble petition. ಯಾಚನೆ, ಪ್ರಾರ್ಥ ಬಿನ್ನಹ.

upply(ಸಪ್ಲೈ)vt.furnish, provide. ಒದಗಿಸು, ಪೂರೈಸಿಕೊಡು, ತುಂಬಿಸು. n. (plu.) necessaries. ಪುರವಣೆ, ಸರಬರಾಯಿ, ಸಂಗ್ರಹ, ಬೇಕಾದವಸ್ತು.

upport (ಸಪೋರ್ಟ್)vt. give strength to, encourage, supply with necessaries. ಉತ್ತೇಜನಕೊಡು, ಸಂರಕ್ಷಣೆಮಾಡು, ಸಹಾಯಮಾಡು. n. supporting person or thing that supports. ಆಧಾರ, ಆಶ್ರಯ, ಸಂರಕ್ಷಣೆ, ಆಶ್ರಯದಾತ, ಊರುಗೋಲು, ಆನಿಕೆ.

uppose' (ಸಪೋಜ್) vt. assume in default of knowledge. ಕಲ್ಪಿಸು, ಊಹಿಸು, ಯೋಚಿಸು, ಅನುಮಾನಿಸು.

upposi'tion(ಸಪೋಜಿಶನ್) n. thing supposed, supposing. ಊಹೆ, ಭಾವನೆ, ಕಲ್ಪನೆ, ತರ್ಕ, ಅನುಮಾನ.

uppress'(ಸಪ್ರೆಸ್) vt. put an end to, keep in; conceal. ಒತ್ತಿಡು, ಅಡಗಿಸು, ಅಣಗಿಸು, ಮುಚ್ಚಿಡು.

uprema'cy(ಸೂಪ್ರಿಮಸಿ)n. highest authority or power. ಪ್ರಾಧಾನ್ಯ, ಶ್ರೇಷ್ಠತ್ವ, ಪ್ರಾಬಲ್ಯ.

upr'eme (ಸುಪ್ರೀಮ್) a. highest, greatest, chief. ಪರಮಶ್ರೇಷ್ಠ, ಅತಿಮುಖ್ಯ, ಅತಿಮಹತ್ವದ, ಪ್ರಧಾನ.

ur'charge (ಸರ್‌ಚಾರ್ಜ್) n. extra load or charge. ಹೆಚ್ಚಿನಭಾರ, ಅಧಿಕಲೆಕ್ಕ, ಹೆಚ್ಚಿನಭಾರ, ಪೂರ್ಣಗರ್ಭ.

ur'cingle (ಸರ್‌ಸಿಂಗಲ್) n. band round a horse's body. ಕುದುರೆಗೆ ಬಿಗಿಯುವಪಟ್ಟಿ, ತಂಗುಬಾರು.

urcoat (ಸರ್ಕೋಟ್) n. outer garment. ತೋಳು ನಡುವಂಗಿ.

urd (ಸರ್ಡ್) n. non sonant consonant sound. ಕರ್ಕಶ ವ್ಯಂಜನ ವರ್ಣ.

ure (ಶೂರ್) a. convinced of; reliable, unfailing, faithful. ಮನಗಂಡ, ನಿಶ್ಚಿತ, ಖಂಡಿತ, ಧ್ರುವ, ಪ್ರಾಮಾಣಿಕ.

Surely(ಶೂರ್ಲಿ)adv.with certainty. ನಿಜವಾಗಿ, ನಿಶ್ಚಯವಾಗಿ, ಖಾತ್ರಿಯಾಗಿ.

Sure'ty (ಶೂರಿಟಿ)n. security, bail. ಭದ್ರತೆ, ಕೈಗಂಟು, ಹೊಣೆಗಾರ, ಜಾಮೀನು.

Surf (ಸರ್ಫ್)n.foram of sea breaking on shore or reets. ದಡಕ್ಕೆ ಅಥವಾ ಬಂಡೆಗೆ ಹೊಡೆಯುವ ಸಮುದ್ರದ ತೆರೆ.

Surface(ಸರ್ಫೇಸ್) n. exterior part of anything. ಮೇಲ್ಮೈ, ಬಾಹ್ಯರೂಪ.

Surf'eit (ಸರ್ಫೀಟ್) n. excess in eating and drinking. ಅತಿಭೋಜನ; ಹೊಟ್ಟೆಬಾಕತನ, ಆಧಿಕ್ಯ.

Surge (ಸರ್ಜ್) vt. move in or as in waves. ಮೇಲಕ್ಕೆ ಅಲೆಅಲೆಯಾಗೇಳು. n surging motion; waves. ದೊಡ್ಡ ಅಲೆ, ತರಂಗಜಾಲ, ಕಲ್ಲೋಲಾಕುಲ ಜಲ.

Sur'geon(ಸರ್ಜನ್) n. person skilled in surgery. ಶಸ್ತ್ರವೈದ್ಯ, ಶಲ್ಯತಂತ್ರವೇತ್ತ.

Surgery (ಸರ್ಜರಿ) n. surgeon's rooms, treatment by manual operation. ಶಸ್ತ್ರಚಿಕಿತ್ಸಾಲಯ, ಶಸ್ತ್ರವೈದ್ಯ, ಶಲ್ಯ, ಶಲ್ಯತಂತ್ರ, ಶಸ್ತ್ರವಿದ್ಯೆ.

Surgical (ಸರ್ಜಿಕಲ್) a. pertaining to surgery ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ.

Surgy(ಸರ್ಜಿ) a. full of surges. ತರಂಗಯುಕ್ತವಾದ.

Sur'ly (ಸರ್ಲಿ) a. morose, uncivil. ಸಿಡುಕುಮೋರೆಯ, ಸೇರಿಕೆಯಿಲ್ಲದ, ವಕ್ರ.

Surmise(ಸರ್ಮೈಜ್) n. suspicion of existence or nature of something. ಕಲ್ಪನೆ, ತರ್ಕ, ಊಹನೆ, ಶಂಕೆ.

Surmount (ಸರ್ಮೌಂಟ್) vt. over come or get the better of. ನಿವಾರಿಸು, ಪಾರಾಗು, ಜಯಿಸು.

Surn'ame (ಸರ್‌ನೇಮ್) n. family name. ಅಡ್ಡಹೆಸರು, ಮೇಲಹೆಸರು, ಉಪನಾಮ.

Surpass (ಸರ್ ಪಾಸ್) vt. outdo, excel. ಹಿಂದುಳಿಸು, ಮೀರಿಸು, ಅತಿಶಯಿಸು.

Surplice (ಸರ್ಪ್ಲಿಸ್) n. loose garment worn by the clergy. ಕ್ರೈಸ್ತ ಪಾದ್ರಿಗಳು ತೊಡುವ ಸಡಿಲವಾದ ಉಡುಪು.



Surplice

Surp'lus (ಸರ್ಪ್ಲಸ್) n. amount left over when requirements have been met. ಉಳಿತಾಯ, ಮಿಗತೆ.

Surprisal (ಸರ್ಪ್ರೈಸಲ್) n. act of surprising. ಆಶ್ಚರ್ಯಪಡಿಸುವಿಕೆ.

Surprise (ಸರ್ಪ್ರಾಯಿಝ್,-ಜ್) n. catching of person unprepared, emotion excited by anything sudden. ತಿಳಿಯದೆ ಬರುವುದು, ಬೆರಗು, ಆಶ್ಚರ್ಯ, ವಿಸ್ಮಯ. vt. come upon unawares, astonish. ತಿಳಿಯದೆ ಬರು, ಅನಿರೀಕ್ಷಿತವಾಗಿಬರು, ವಿಸ್ಮಯಪಡಿಸು.

Surpris'ing (ಸರ್ಪ್ರಾಯ್ಜಿಂಗ್) a. wonderful, unexpected. ಆಶ್ಚರ್ಯಕರ, ಅನಿರೀಕ್ಷಿತ.

Surren'der (ಸರೆಂಡರ್) vt. i. relinquish position of, give oneself up. ಒಪ್ಪಿಸಿಕೊಡು, ಒಪ್ಪಿಸಿಬಿಡು, ಸ್ವಾಧೀನವಾಗು

Surrepti'tious (ಸರೆಪ್ಟಿಶಸ್) a done by stealth or fraud. ಕಳ್ಳತನದಿಂದ ಮಾಡಿದ, ಮೋಸದ, ಕಪಟದ.

Surround' (ಸರೌಂಡ್) vt encompass, environ. ಸುತ್ತುಗಟ್ಟು, ಸುತ್ತಿಕೊಳ್ಳು, ಬಳಸು, ಆವರಿಸು.

Surround'ings (ಸರೌಂಡಿಂಗ್ಸ್) n. (plu.) all that environs one. ಸುತ್ತುಮುತ್ತಣ ಪ್ರದೇಶ, ಪರಿಸ್ಥಿತಿ.

Surtax (ಸರ್ಟ್ಯಾಕ್ಸ್) n. extra tax. ಹೆಚ್ಚಿನ ತೆರಿಗೆ.

Surveill'ance (ಸರ್ ವೈಲನ್ಸ್) n. watch kept on suspected person &c. ನಜರು, ದೇಖರೇಖು, ಕಣ್ಗಾವಲು.

Survey (ಸರ್ವೆ) vt. view attentively, measure land. ನೋಡು, ಭೂಮಿ ಅಳೆಯು. n. general view land measuring. ನೋಟ, ನಿರೀಕ್ಷಣೆ, ಅಳತೆ, ಮೋಜಣಿ.

Survey'or (ಸರ್ವೆ ಅರ್) n. official inspector of, person who surveys land professionally. ನೋಡುವವ, ಮೋಜಣಿದಾರ, ಪೈಮಾಶಿದಾರ.

Suviv'al (ಸರ್ವೈವಲ್) n. living after, relic of the past. ಬದುಕಿರುವುದು, ಅಳಿಯದೆ ಉಳಿದಿರುವುದು, ಅವಶೇಷ.

Survive (ಸರ್ವೈವ್) vt. outline, be still alive or existent. ಒಬ್ಬನ ತರುವಾಯ ಜೀವಂತನಾಗಿರು, ಬದುಕಿರು.

Surviv'or (ಸರ್ವೈವರ್) n. one who outlives another ಸಾಯದೆ ಉಳಿದವ

Suscep'tible (ಸಸೆಪ್ಟಿಬಲ್) a. impressionable, touchy, admitting of ಪರಿಣಾಮಕಾರಕ, ಚಿತ್ತವೇಧಕ, ಮೃದು ನಮ್ರ, ಸೇರಿಕೊಳ್ಳುವ, ಗಮನೀಯ, ಗ್ರಾಹಕ.

Suspect (ಸಸ್ಪೆಕ್ಟ್) vt. imagine without proof, doubt about mistrust. ಸಂಶಯಗೊಳ್ಳು, ಶಂಕಿಸು, ನಂಬದಿರು.

Suspend (ಸಸ್ಪೆಂಡ್) vt. hang up delay, put off, deprive of one for time. ತೂಗುಹಾಕು, ತೂಗಿಸು, ನೇತಾಡಿಸು, ನೇಲಿಸು, ಮುಂದಕ್ಕೆ ಹಾಕು, ಅಮಾನತುಮಾಡು, ಕೆಲಸದಿಂದ ತೆಗೆದುಹಾಕು

Suspense' (ಸಸ್ಪೆನ್ಸ್) n. undetermined state. ಅನಿಶ್ಚಿತಸ್ಥಿತಿ, ಸಂದೇಹ, ಅಮಾನತು.

Suspension (ಸಸ್ಪೆನ್ಷನ್) n act of hanging to something above ತೂಗಾಡುವಿಕೆ, ನೇತಾಡುವಿಕೆ.

Suspension-bridge (ಸಸ್ಪೆನ್‌ಷನ್-ಬ್ರಿಡ್ಜ್) n. a bridge held up by cables which are supported at both ends. ಕೆಳಗೆ ಆಧಾರವಿಲ್ಲದೆ ಎರಡು ಕೊನೆಗಳಲ್ಲಿಯೂ ಸ್ತಂಭಕ್ಕೆ ತಂತಿ ಬಿಗಿದು ನಿರ್ಮಿಸಿದ ಸೇತುವೆ, ತೂಗುಸೇತುವೆ.



Suspension-bridge

Suspi'cion (ಸಸ್ಪಿಶನ್) n. mistrust. ಸಂದೇಹ, ಗುಮಾನಿ, ಶಂಕೆ, ಅನುಮಾನ.

Suspicious (ಸಸ್ಪಿಶಸ್) a. distrustful. ಅಪನಂಬಿಕೆಯ, ಸಂದೇಹದ, ಅನುಮಾನದ.

Sustain (ಸಸ್ಟೇನ್) vt. enable to last out, undergo, suffer (loss, &c.) keep up. ಆಧಾರವಾಗಿರು, ಬೆಂಬಲವಾಗಿರು, ಸಂರಕ್ಷಣೆಮಾಡು, ತಾಳು, ಸಹಿಸು, ನಡೆಸು.

Sus'tenance (ಸಸ್ಟೆನೆನ್ಸ್) n. nourishing quality, food (lit or fig.) (ಪೋಷಣಶಕ್ತಿ;) ಅನ್ನಾಧಾರ, ಸಂರಕ್ಷಣೆ.

Sutile (ಸೂಟೈಲ್) a. done by stitching. ಹೊಲಿಗೆಯಿಂದ ಮಾಡಿದ.

Su'ture (ಸ್ಯೂಚರ್) n stitching up of wound. ಗಾಯದ ಹೊಲಿಗೆ.

Suz'erain (ಸ್ಯೂ ಝು (ಜಿ) ರೇನ್) n. feudal lord. ಚಕ್ರಾಧಿಪತಿ, ಮಂಡಲೇಶ್ವರ.

Swab (ಸ್ವಾಬ್) n. mop for cleaning floors, etc. ನೆಲವನ್ನು ಶುದ್ಧಮಾಡುವ ತೊಡಪ.

Swa'ddle (ಸ್ವಾಡಲ್) vt. wrap up tight and warm (ಕೂಸಿಗೆ) ಬೆಚ್ಚಗೆ ಬಟ್ಟೆ ಸುತ್ತು, ಬೆಚ್ಚಗೆ ಬಟ್ಟೆಹೊದಿಸು.

Swagg'er (ಸ್ವ್ಯಾಗರ್) vi. talk boastfully. ಜಂಬಕೊಚ್ಚು; ಜಟ್ಟಿಕೊಚ್ಚು.

Swain (ಸ್ವೇನ್) n. young rustic. ಹರೇಹದ ಹಳ್ಳಿಗ, ಹಳ್ಳಿಯ ತರುಣ.

Swa'llow (ಸ್ವಾಲೋ) vt. i. make or let pass down one's throat, engulfaccept credulously. ನುಂಗು, ಕಬಳಿಸು, ತಿನ್ನು, ಇಲ್ಲದಂತೆ ಮಾಡು, ತಿಳಿಯದೆ ನಂಬು.

Swamp (ಸ್ವಾಂಪ್) n piece of wet spongy ground, marsh. ಜವುಳು ನೆಲ, ಜವುಗು, ಕೆಸರಿನ ನೆಲ, ಅನೂಪಭೂಮಿ.

Swan (ಸ್ವಾನ್) n. large, long necked white water bird. ರಾಜಹಂಸ; ಮರಾಳ.



Swan

Swank (ಸ್ವ್ಯಾಂಕ್) (sl.) n. showing off. ದೊಡ್ಡಸ್ತಿಕೆ ತೋರಿಸಿಕೊಳ್ಳೋಣ, ಬೆಡಗು, ಒಯ್ಯಾರ. vi. behave with swank. ಬೆಡಗುತೋರು, ವಿಜೃಂಭಿಸು.

Swannery (ಸ್ವಾನರಿ) n. place where swans are bred and reared. ಹಂಸಗಳನ್ನು ಬೆಳೆಸುವ ಸ್ಥಳ.

Swap (ಸ್ವಾಪ್) vt. exchange, barter. ವಿನಿಮಯಮಾಡು, ಅದಲುಬದಲು ಮಾಡು, ಬದಲಾಯಿಸು.

Sward (ಸ್ವಾರ್ಡ್) n. grassy surface of land, turf. ಹುಲ್ಲುಗಾವಲು.

Swarm (ಸ್ವಾರ್ಮ್) n. large number of insects, &c. moving about cluster of bees. ಹಿಂಡು, ಗುಂಪು, ಜಂಗುಳಿ, ಭ್ರಮರಸಮುದಾಯ. vi. move in or form a swarm. ಗುಂಪುಗೂಡು, ಹಿಂಡುಹಿಂಡಾಗಿ ಅಲೆ.

Swar'thy (ಸ್ವಾರ್ದಿ) a. dark-hued, sun burnt. ಕಪ್ಪಾದ, ಬಿಸಿಲಲ್ಲಿ ಬೆಂದ.

Swash (ಸ್ವಾಷ್) vi. splash or dash as water. ನೀರಿನಂತೆ ಫಳಾರನೆ ಅಪ್ಪಳಿಸು.

Swastika (ಸ್ವಾಸ್ತಿಕ) n. an ancient sign of good luck. ಸ್ವಸ್ತಿಕ ಚಿಹ್ನೆ.



Swastika

Swathe (ಸ್ವೇದ್) vt. enclose limb of person in bandages or wraps. ಪಟ್ಟಿಕಟ್ಟು, ಪಟ್ಟಿಸುತ್ತು.

Sway (ಸ್ವೇ) vt. i. waver, have influence over, rule over. ಜೋಲಾಡು, ಅಧಿಕರಿಸು, ಆಳು. n swaying motion, rule, government. ಜೋಲಾಡುವ ಗತಿ; ಆಳಿಕೆ, ಅಧಿಕಾರ; ಪ್ರಭುತ್ವ, ಶಾಸನ.

